ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಭಾಗ–34

ಅನುಶಾಸನಪರ್ವ

ಪ್ರಕಾಶಕರು:

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೩೪

ಅನುಶಾಸನಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಅನುಶಾಸನಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಅನುಶಾಸನಪರ್ವ - ಭಾಗ ೩ಳ

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-88813-38-9

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	X + 556 = 566
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 500/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಶ್ರೀ ಸುಬ್ಬಣ್ಣ, ಬೆಂಗಳೂರು
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಮುದ್ರಕರು	-	**ಪವನ್ ಪ್ರಿಂಟರ್ಸ್**, ಚಾಮರಾಜಪೇಟೆ, ಬೆಂಗಳೂರು ಮೊ : 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮುನೀನ್ನುಮಃ

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ- ೩೪

ಅನುಶಾಸನ ಪರ್ವ

ಪುಟ ಸಂ.

201. ಉಮಾ-ಮಹೇಶ್ವರ ಸಂವಾದ. ವರ್ಣವಿಭಾಗಾದಿ ನಿಮಿತ್ತ ಕಥನ 1

202. ಉಮಾ-ಮಹೇಶ್ವರ ಸಂವಾದ. ಮನುಷ್ಯರ ತ್ರೈವಿಧ್ಯ ನಿಮಿತ್ತ ಕಥನ 11

203. ಉಮಾ-ಮಹೇಶ್ವರ ಸಂವಾದ. ಮನುಷ್ಯರ ವೈವಿಧ್ಯಕ್ಕೆ ನಿಮಿತ್ತ ಕಥನ 20

204. ಉಮಾ-ಮಹೇಶ್ವರ ಸಂವಾದ. ಮನುಷ್ಯರ ರೋಗಗಳಿಗೆ ನಿಮಿತ್ತ ಕಥನ 27

205. ಉಮಾ-ಮಹೇಶ್ವರ ಸಂವಾದ. ಮನುಷ್ಯರೋಗಗಳಿಗೆ ನಿಮಿತ್ತ ಕಥನ 38

206. ಉಮಾ-ಮಹೇಶ್ವರ ಸಂವಾದ. ಮನುಷ್ಯರ ದುಸ್ಥಿತಿಗೆ ಕಾರಣ ಕಥನ 46

207. ಉಮಾ-ಮಹೇಶ್ವರ ಸಂವಾದ. ಚಂಡಾಲಾದಿ ಯೋನಿ ಪ್ರಾಪ್ತಿ ನಿಮಿತ್ತದ ಮತ್ತು ಕರ್ಮಫಲಭೋಗ ಪ್ರಕಾರದ ಕಥನ 54

208. ಉಮಾ-ಮಹೇಶ್ವರ ಸಂವಾದ. ಕರ್ಮಫಲಭೋಗದಲ್ಲಿ ಮನುಷ್ಯರಿಗೂ ದೇವಾದಿಗಳಿಗೂ ಇರುವ ಅಂತರ ಕಥನ 71

209. ಉಮಾ-ಮಹೇಶ್ವರ ಸಂವಾದ. ಕರ್ಮಫಲಭೋಗದಲ್ಲಿ ಗ್ರಹಗಳ ತಟಸ್ಥತ್ವ ಮತ್ತು ಅಲ್ಪಾಯುಷ್ಟ್ವಾದಿಗಳಿಗೆ ನಿಮಿತ್ತ ಕಥನ 74

210. ಉಮಾ-ಮಹೇಶ್ವರ ಸಂವಾದ. ಪುಂಸ್ತ್ವ ಸ್ತ್ರೀತ್ವಾದಿ ಕಥನ 83

211. ಉಮಾ-ಮಹೇಶ್ವರ ಸಂವಾದ. ಹಿಂಸೆ ಮಾಡಿದರೂ ಪಾಪಲೇಪದ ಕಥನ 89

212. ಉಮಾ-ಮಹೇಶ್ವರ ಸಂವಾದ. ನಾಸ್ತಿಕವಾದ ನಿರಾಕರಣೆ 96

213. ಉಮಾ- ಮಹೇಶ್ವರಸಂವಾದ ದೈವ ಪೌರುಷ ವೇದನದಿಂದ ಕಾರ್ಯಸಿದ್ಧಿ ಕಥನ 105

214. ಉಮಾ-ಮಹೇಶ್ವರ ಸಂವಾದ. ನರಕ ಮಾರ್ಗಗಳ ವರ್ಣನೆ 112

215. ಉಮಾ-ಮಹೇಶ್ವರಸಂವಾದ. ವಿವಿಧನರಕ ವರ್ಣನೆ 121

216. ಉಮಾ-ಮಹೇಶ್ವರ ಸಂವಾದ. ಅಶುಭ ಕರ್ಮಗಳ ವಿಸ್ತೃತ ಕಥನ 131

217. ಉಮಾ-ಮಹೇಶ್ವರ ಸಂವಾದ. ಸುಕೃತವಿಭಾಗ ಕಥನ 142

218. ಉಮಾ-ಮಹೇಶ್ವರ ಸಂವಾದ. ಮಾಂಸಭಕ್ಷಣ,
ಬ್ರಹ್ಮಚರ್ಯ-ಉಪವಾಸಾದಿ ಫಲ ಕಥನ 151

219. ಉಮಾ-ಮಹೇಶ್ವರ ಸಂವಾದ. ಸೋಪಕರಣ ಸುಕೃತ ಕಥನ 166

220. ಉಮಾ-ಮಹೇಶ್ವರ ಸಂವಾದ. ವಿವಿಧ ದಾನಫಲಗಳ ಕಥನ 174

221. ಉಮಾ-ಮಹೇಶ್ವರ ಸಂವಾದ. ತಿಲಾದಿ ದಾನವಿಧಿ 190

222. ಉಮಾ-ಮಹೇಶ್ವರ ಸಂವಾದ. ಲೌಕಿಕ-ವೈದಿಕ ಯಜ್ಞಫಲ ಕಥನ 197

223. ಉಮಾ-ಮಹೇಶ್ವರ ಸಂವಾದ. ಶ್ರಾದ್ಧವಿಧಿ 203

224. ಉಮಾ-ಮಹೇಶ್ವರ ಸಂವಾದ. ಧರ್ಮಫಲ ಕಾಲ ಕಥನ 214

225. ಉಮಾ-ಮಹೇಶ್ವರ ಸಂವಾದ.
ಶುಭಕರ್ಮ ಪ್ರಾಪ್ಯವಾದ ಭೋಗಗಳ ವರ್ಣನೆ 220

226. ಉಮಾ-ಮಹೇಶ್ವರ ಸಂವಾದ. ಮಾನುಷರಾಗಿದ್ದಾಗಲಿ ಮುಂದಿನ
ಶುಭಾಶುಭ ಗತಿಯ ಸೂಚನೆಯ ಕಥನ 227

227. ಉಮಾ-ಮಹೇಶ್ವರ ಸಂವಾದ. ಪ್ರಾಣತ್ಯಾಗವಿಧಿ 233

228. ಉಮಾ-ಮಹೇಶ್ವರ ಸಂವಾದ. ಮೋಕ್ಷಧರ್ಮದ ಶ್ರೇಷ್ಠತ್ವ ಕಥನ 240

229. ಉಮಾ-ಮಹೇಶ್ವರ ಸಂವಾದ. ವೈರಾಗ್ಯಕ್ಕೆ ನಿಮಿತ್ತವಾದ
ಸಂಸಾರ ಅಸಾರತ್ವ ಕಥನ 249

230. ಉಮಾ-ಮಹೇಶ್ವರ ಸಂವಾದ. ಜ್ಞಾನೋಪದೇಶ 265

231. ಉಮಾ-ಮಹೇಶ್ವರ ಸಂವಾದ. ಯೋಗವಿಧಿ ಕಥನ 278

232. ಉಮಾ-ಮಹೇಶ್ವರ ಸಂವಾದ. ಪಾಶುಪತಯೋಗ ಕಥನ 289

233. ಉಮಾ-ಮಹೇಶ್ವರ ಸಂವಾದ.
ಉಮಾದೇವಿಗೆ ಸ್ತ್ರೀಧರ್ಮವನ್ನು ಹೇಳುವಂತೆ ಶಿವನ ಒತ್ತಾಯ 297

234. ಪಾರ್ವತಿಯಿಂದ ಪಾತಿವ್ರತ್ಯಧರ್ಮ ಕಥನ 304

235. ಪಾರ್ವತಿಯಿಂದ ಪಾತಿವ್ರತ್ಯಧರ್ಮ ಕಥನ 310

236. ಉಮಾ ಮಹೇಶ್ವರ ಸಂವಾದ. ಪಾರ್ವತಿಯಿಂದ ಸ್ತ್ರೀಯರಿಗೆ ಶ್ರೇಷ್ಠಪತಿ ಲಾಭಕ್ಕೆ ನಿಮಿತ್ತ ಕಥನ 324

237. ಸ್ತ್ರೀರ ಅನೇಕ ದುಃಖಗಳಿಗೆ ನಿಮಿತ್ತ ಕಥನ 328

238. ಸರ್ವಪಾಪ ಪರಿಹಾರೋಪಾಯದ ಮತ್ತು ಜ್ಞಾನಪ್ರಾಪ್ತಿಯ ಉಪಾಯದ ಕಥನ 356

239. ವಿಷ್ಣುಸಹಸ್ರನಾಮಸ್ತೋತ್ರ 359

240. ಬ್ರಾಹ್ಮಣ ಪ್ರಶಂಸೆ 434

241. ಕಾರ್ತವೀರ್ಯಾರ್ಜುನ ಮತ್ತು ವಾಯುವಿನ ಸಂವಾದ 439

242. ವಾಯುದೇವನ ಉಪದೇಶ 445

243. ವಾಯುವಿನಿಂದ ಉಚಥ್ಯ ಮಹಿಮೆಯ ಕಥನ 449

244. ಅಗಸ್ತ್ಯರ ಮತ್ತು ವಸಿಷ್ಠರ ಮಹಿಮೆ 456

245. ಚ್ಯವನರ ಮಹಿಮೆ 461

246. ಭೀಷ್ಮರಿಂದ ಕೃಷ್ಣನ ಮಹಿಮೆಯ ವರ್ಣನೆ 466

247. ಕೃಷ್ಣನಿಂದ ದುರ್ವಾಸ ಮಹಾತ್ಮ್ಯ ಕಥನ 481

248. ಕೃಷ್ಣನಿಂದ ಈಶ್ವರನ ಪ್ರಶಂಸೆ 492

249. ಶಂಕರನ ಮಹಿಮೆ 500

250. ಧರ್ಮನಿರ್ಣಯ 507

251. ಧರ್ಮಿಷ್ಠರಿಗೆ ಮತ್ತು ಅಧರ್ಮಿಷ್ಠರಿಗೆ ಆಗುವ ಗತಿಯ ಕಥನ 513

252. ಅದೃಷ್ಟದ ಪ್ರಾಬಲ್ಯ ಕಥನ 520

253. ಶುಭಕಾಲದ ಪ್ರಾಬಲ್ಯ ಕಥನ 524

254. ಸರ್ವಮಂಗಳವಾದ ದೇವರ್ಷಿನೃಪವಂಶ ಕಥನ 527

255. ಯುಧಿಷ್ಠಿರನ ಹಸ್ತಿನವತಿ ಪ್ರಯಾಣ 536

256. ಭೀಷ್ಮರಿಂದ ದೇಹತ್ಯಾಗ ಅನುಮತಿಯ ಪ್ರಾರ್ಥನೆ 540

257. ಭೀಷ್ಮರ ಸ್ವರ್ಗಾರೋಹಣ 550

★ ★ ★ ★ ★

॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ ॥

ಮಹಾಭಾರತ

ಅನುಶಾಸನ ಪರ್ವ

ಇನ್ನೂರ ಒಂದನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ವರ್ಣವಿಭಾಗಾದಿನಿಮಿತ್ತಕಥನ

ಉಮಾ

ಭಗವನ್ ಭಗನೇತ್ರಘ್ನ ಕಾಲಸೂದನ ಶಂಕರ ।
ಇಮೇ ತು ವರ್ಣಾಶ್ಚತ್ವಾರೋ ವಿಹಿತಾಃ ಸ್ವೇನ ಭಾವತಃ ।
ಉತಾಹೋ ಕ್ರಿಯಯಾ ವರ್ಣಾಃ ಸಂಭವಂತಿ ಮಹೇಶ್ವರ ॥೧॥

ಏಷ ಮೇ ಸಂಶಯಪ್ರಶ್ನಸ್ತಂ ಮೇ ಛೇತ್ತುಂ ತ್ವಮರ್ಹಸಿ ॥೨॥

ಉಮಾ– ಭಗವಂತನೇ, ಭಗನೇತ್ರವನ್ನು ನಾಶ ಮಾಡಿದವನೇ, ಕಾಲಸೂದನನೇ, ಶಂಕರನೇ, ಈ ನಾಲ್ಕು ವರ್ಣಗಳು ಸ್ವಭಾವದಿಂದ ವಿಹಿತವಾಗಿವೆಯೇ ಅಥವಾ ಕರ್ಮಗಳಿಂದ ವಿಹಿತವಾಗಿವೆಯೇ? ಎಲೈ ಮಹೇಶ್ವರನೇ, ಇದು ನನ್ನ ಸಂಶಯ ಮೂಲಕವಾದ ಪ್ರಶ್ನೆ. ನೀನು ಅದನ್ನು ಪರಿಹರಿಸಬೇಕು.

ಮಹೇಶ್ವರಃ

ಸ್ವಭಾವಾದೇವ ವಿದ್ಯಂತೇ ಚತ್ವಾರೋ ಬ್ರಾಹ್ಮಣಾದಯಃ ।
ಏಕಜಾತ್ಯಾ ಸುದುಷ್ಪ್ರಾಪಮನ್ಯವರ್ಣತ್ವಮಾಗತಮ್ ॥೩॥

ಮಹೇಶ್ವರ– ಬ್ರಾಹ್ಮಣಾದಿ ನಾಲ್ಕು ವರ್ಣಗಳು ಸ್ವಭಾವದಿಂದಲೇ ಇರುತ್ತವೆ. ಒಂದು ವರ್ಣದಲ್ಲಿ ಹುಟ್ಟಿದವನು ಇನ್ನೊಂದು ವರ್ಣವನ್ನು ಪಡೆಯುವುದು ಅತ್ಯಂತ ದುಷ್ಕರವಾದುದು.

ತಚ್ಚ ಕರ್ಮವಿಶೇಷೇಣ ಪುನರ್ಜನ್ಮನಿ ಜಾಯತೇ ।
ತಸ್ಮಾತ್ತೇ ಸಂಪ್ರವಕ್ಷ್ಯಾಮಿ ತತ್ಸರ್ವಂ ಕರ್ಮಪಾಕತಃ ॥೪॥

ಇನ್ನೊಂದು ವರ್ಣವಾದರೂ ಇನ್ನೊಂದು ಜನ್ಮದಲ್ಲಿ ಕರ್ಮವಿಶೇಷದಿಂದ ಉಂಟಾಗುತ್ತದೆ. ಆದ್ದರಿಂದ ನಿನಗೆ ಕರ್ಮಪಾಕದಿಂದ ಉಂಟಾಗುವ ಆ ವರ್ಣಾಂತರವೆಲ್ಲವನ್ನೂ ಸರಿಯಾಗಿ ಹೇಳುವೆನು.

ಬ್ರಾಹ್ಮಣಸ್ತು ನರೋ ಭೂತ್ವಾ ಸ್ವಜಾತಿಮನುಪಾಲಯೇತ್ ।
ದೃಢಂ ಬ್ರಾಹ್ಮಣಕರ್ಮಾಣಿ ವೇದೋಕ್ತಾನಿ ಸಮಾಚರೇತ್ ॥೫॥

ಬ್ರಾಹ್ಮಣನು ಮನುಷ್ಯನಾಗಿ ಜನಿಸಿ ತನ್ನ ಜಾತಿಯ ಕರ್ಮವನ್ನು ಮಾಡಬೇಕು. ವೇದೋಕ್ತವಾದ ಬ್ರಾಹ್ಮಣಕರ್ಮಗಳನ್ನು ದೃಢವಾಗಿ ಆಚರಿಸಬೇಕು.

ಸತ್ಯಾರ್ಜವಪರೋ ಭೂತ್ವಾ ದಾನಯಜ್ಞಪರಸ್ತಥಾ ।
ತಸ್ಯಾಂ ಜಾತ್ಯಾಂ ಸಮುದಿತೋ ಜಾತಿಧರ್ಮಾನ್ನ ಹಾಪಯೇತ್ ॥೬॥

ಸತ್ಯಾರ್ಜವ ಸಂಯುಕ್ತನೂ, ದಾನಯಜ್ಞಪರನೂ ಆಗಿರಬೇಕು. ಆ ಜಾತಿಯಲ್ಲಿ ಜನಿಸಿದವನು ಆ ಜಾತಿಯ ಧರ್ಮವನ್ನು ಬಿಡಬಾರದು.

ಏವಂ ಸಂವರ್ತಮಾನಸ್ತು ಕಾಲಧರ್ಮಂ ಗತಃ ಪುನಃ ।
ಸ್ವರ್ಗಲೋಕೇ ಚಾಭಿಜಾಯೇತ ಸ್ವರ್ಗಭೋಗಾಯ ಭಾಮಿನಿ ॥೭॥

ಎಲೌ ಭಾಮಿನಿಯೇ, ಹೀಗೆ ಜೀವನವನ್ನು ನಡೆಸುವವನು ಕಾಲವಶನಾಗಿ ಸ್ವರ್ಗಲೋಕದಲ್ಲಿ ಸ್ವರ್ಗಭೋಗಗಳನ್ನು ಅನುಭವಿಸಲು ಜನ್ಮವನ್ನು ಪಡೆಯುತ್ತಾನೆ.

ತತ್ಕ್ಷಯೇ ಬ್ರಾಹ್ಮಣೋ ಭೂತ್ವಾ ತಥೈವ ನೃಷು ಜಾಯತೇ ।
ಏವಂ ಸ್ವಕರ್ಮಣಾ ಮರ್ತ್ಯಃ ಸ್ವಜಾತಿಂ ಲಭತೇ ಪುನಃ ॥೮॥

ಆ ಸ್ವರ್ಗವು ಪುಣ್ಯನಾಶದಿಂದ ಕ್ಷಯವನ್ನು ಹೊಂದಿದ ಮೇಲೆ ಪುನಃ ಬ್ರಾಹ್ಮಣನಾಗಿ ಮೊದಲಿನಂತೆಯೇ ಭೂಮಿಯಲ್ಲಿ ಜನಿಸುತ್ತಾನೆ. ಹೀಗೆ ಮನುಷ್ಯನು ತನ್ನ ಸ್ವಕರ್ಮದಿಂದ ಪುನಃ ಸ್ವಜಾತಿಯನ್ನು ಪಡೆಯುತ್ತಾನೆ.

ಅಪರಸ್ತು ತಥಾ ಕಶ್ಚಿದ್ ಬ್ರಹ್ಮಯೋನಿಸಮುದ್ಭವಃ ।
ಅವಮತ್ಯೈವ ತಾಂ ಜಾತಿಮಜ್ಞಾನತಮಸಾವೃತಃ ॥೯॥

ಅನ್ಯಥಾ ವರ್ತಮಾನಸ್ತು ಜಾತಿಕರ್ಮಾಣಿ ವರ್ಜಯೇತ್ ।
ಶೂದ್ರವದ್ ವಿಚರೇಲ್ಲೋಕೇ ಶೂದ್ರಕರ್ಮಾಭಿಲಾಷಯಾ ।
ಶೂದ್ರೈಃ ಸಹ ಚರನ್ ನಿತ್ಯಂ ಶೌಚಮಂಗಲವರ್ಜಿತಃ ॥೧೦॥

ಸ ಚಾಪಿ ಕಾಲಧರ್ಮಸ್ಥೋ ಯಮಲೋಕೇಷು ದಂಡಿತಃ ।
ಯದಿ ಜಾಯೇತ ಮರ್ತ್ಯೇಷು ಶೂದ್ರ ಏವಾಭಿಜಾಯತೇ ॥೧೧॥

ಶೂದ್ರ ಏವ ಭವೇದ್ ದೇವಿ ಬ್ರಾಹ್ಮಣೋಽಪಿ ಸ್ವಕರ್ಮಣಾ ॥೧೨॥

ಹಾಗೆ ಇನ್ನೊಬ್ಬನು ಬ್ರಹ್ಮಯೋನಿಯಲ್ಲಿ ಹುಟ್ಟಿ, ಬ್ರಾಹ್ಮಣಜಾತಿಗೆ ಅವಮಾನ ಮಾಡಿ ಅಜ್ಞಾನದಿಂದ, ತಾಮಸ ಗುಣದಿಂದ ಕೂಡಿದವನಾಗಿ ಬೇರೆ ರೀತಿಯಲ್ಲಿ ಜೀವಿಸುತ್ತಾ ಜಾತಿಕರ್ಮಗಳನ್ನು ತ್ಯಜಿಸಿ ಶೂದ್ರಕರ್ಮಗಳನ್ನು ಬಯಸಿ ಲೋಕದಲ್ಲಿ ನಿತ್ಯವೂ ಶೌಚಮಂಗಲ ವರ್ಜಿತನಾಗಿ ಶೂದ್ರರ ಜೊತೆಯಲ್ಲಿ ಸಂಚಾರ ಮಾಡುತ್ತಾ ಜೀವಿಸಿ ಅವನು ಕಾಲವಶನಾಗಿ ಯಮಲೋಕದಲ್ಲಿ ಶಿಕ್ಷೆಯನ್ನು ಅನುಭವಿಸಿ ಪುನಃ ಮನುಷ್ಯನಾಗಿ ಹುಟ್ಟಿದರೆ ಶೂದ್ರನಾಗಿಯೇ ಹುಟ್ಟುತ್ತಾನೆ. ಅವನು ಹಿಂದೆ ಬ್ರಾಹ್ಮಣನಾಗಿದ್ದರೂ ಎಲೌ ದೇವಿಯೇ, ತನ್ನ ಕರ್ಮದಿಂದ ಅವನು ಶೂದ್ರನೇ ಆಗುತ್ತಾನೆ.

ತಥೈವ ಶೂದ್ರಸ್ತ್ವಪರಃ ಶೂದ್ರಕರ್ಮಾಣಿ ವರ್ಜಯನ್ ।
ಸತ್ಯಾರ್ಜವಪರೋ ಭೂತ್ವಾ ದಾನಧರ್ಮಪರಸ್ತಥಾ ।
ಮಂತ್ರಬ್ರಾಹ್ಮಣಸತ್ಕರ್ತಾ ಮನಸಾ ಬ್ರಾಹ್ಮಣಪ್ರಿಯಃ ॥೧೩॥

ಏವಂ ಯುಕ್ತಸಮಾಚಾರಃ ಶೂದ್ರೋಽಪಿ ಮರಣಂ ಗತಃ ।
ಸ್ವರ್ಗಲೋಕೇಽಭಿಜಾಯೇತ ತತ್ಕ್ಷಯೇ ನೃಷು ಜಾಯತೇ ।
ಬ್ರಾಹ್ಮಣಾನಾಂ ಕುಲೇ ಮುಖ್ಯೇ ವೇದಸ್ವಾಧ್ಯಾಯಸಂಯುತೇ ॥೧೪॥

ಏವಮೇವ ಸದಾ ಲೋಕೇ ಶೂದ್ರೋ ಬ್ರಾಹ್ಮಣ್ಯಮಾಪ್ನುಯಾತ್ ॥೧೫॥

ಹಾಗೆಯೇ ಇನ್ನೊಬ್ಬ ಶೂದ್ರನು ಶೂದ್ರಕರ್ಮಗಳನ್ನು ತ್ಯಜಿಸಿ, ಸತ್ಕಾರ್ಜವ ಪರಾಯಣನಾಗಿ, ದಾನ-ಧರ್ಮಪರಾಯಣನಾಗಿ, ವೇದವನ್ನೂ, ಬ್ರಾಹ್ಮಣರನ್ನೂ ಸತ್ಕರಿಸುತ್ತಾ ಮನಸ್ಸಿನಲ್ಲಿ ಬ್ರಾಹ್ಮಣರಲ್ಲಿ ಪ್ರೀತಿಯನ್ನು ಹೊಂದಿ ಇಂತಹ ಆಚಾರವನ್ನು ಹೊಂದಿದ್ದರೆ ಶೂದ್ರನೂ ಸಹ ಮರಣವನ್ನು ಹೊಂದಿ ಸ್ವರ್ಗಲೋಕವನ್ನು ಸೇರುತ್ತಾನೆ. ಸ್ವರ್ಗವು ನಾಶವಾದ ಮೇಲೆ ಪುನಃ ಅವನು ಮನುಷ್ಯರಲ್ಲಿ ವೇದಸ್ವಾಧ್ಯಾಯ ಸಂಪನ್ನರಾದ ಶ್ರೇಷ್ಠರಾದ ಬ್ರಾಹ್ಮಣರ ಕುಲದಲ್ಲಿ ಜನಿಸುತ್ತಾನೆ. ಹೀಗೆಯೇ ಶೂದ್ರನು ಯಾವಾಗಲೂ ಲೋಕದಲ್ಲಿ ಬ್ರಾಹ್ಮಣ್ಯವನ್ನು ಪಡೆಯುವನು (ಬ್ರಾಹ್ಮಣ್ಯವನ್ನು ಪಡೆಯುವ ರೀತಿ).

ಏವಂ ಕ್ಷತ್ರಿಯವೈಶ್ಯಾಶ್ಚ ಜಾತಿಧರ್ಮೇಣ ಸಂಯುತಾಃ ।
ಸ್ವಕರ್ಮಣ್ಯೈವ ಜಾಯಂತೇ ವಿಶಿಷ್ಟೇಷ್ವಧಮೇಷು ಚ ॥೧೬॥

ಹೀಗೆಯೇ ಕ್ಷತ್ರಿಯ, ವೈಶ್ಯಯೋನಿಯಲ್ಲಿ ಜನಿಸಿದ ಮನುಷ್ಯರೂ ಸಹ ತಮ್ಮ ಜಾತಿಯ ಕರ್ಮಗಳಿಂದ ಅಥವಾ ತಮ್ಮ ಧರ್ಮಕ್ಕೆ ವಿರುದ್ಧವಾದ ಕರ್ಮದಿಂದ ಶ್ರೇಷ್ಠವಾದ ಅಥವಾ ಕನಿಷ್ಠವಾದ ಯೋನಿಗಳಲ್ಲಿ ಜನಿಸುತ್ತಾರೆ.

ಏವಂ ಜಾತಿವಿಪರ್ಯಾಸಃ ಪ್ರೇತ್ಯಭಾವೇ ಭವೇನ್ನೃಣಾಮ್ ।
ಅನ್ಯಥಾ ತು ನ ಶಕ್ಯಂತೇ ಲೋಕಸಂಸ್ಥಿತಿಕಾರಣಾತ್ ॥೧೭॥

ಈ ರೀತಿಯಲ್ಲಿ ಮರಣವನ್ನು ಹೊಂದಿದ ಮೇಲೆ ಮನುಷ್ಯರಿಗೆ ಜಾತಿಯ ವ್ಯತ್ಯಾಸವಾಗುತ್ತದೆ. ಇಲ್ಲದಿದ್ದರೆ ಲೋಕ ಮರ್ಯಾದೆಯನ್ನು ರಕ್ಷಿಸುವುದಕ್ಕಾಗಿ ಬೇರೆ ರೀತಿಯಲ್ಲಿ ಆಗುವುದಿಲ್ಲ.

ತಸ್ಮಾಜ್ಜಾತಿಂ ವಿಶಿಷ್ಟಾಂ ತು ಕಥಂಚಿತ್ ಪ್ರಾಪ್ಯ ಪಂಡಿತಃ ।
ಸರ್ವಥಾ ತಾಂ ತಥಾ ರಕ್ಷೇನ್ನ ಪುನರ್ಭ್ರಶ್ಯತೇ ಯಥಾ ।
ಇತಿ ತೇ ಕಥಿತಂ ದೇವಿ ಭೂಯಃ ಶ್ರೋತುಂ ಕಿಮಿಚ್ಛಸಿ ॥೧೮॥

ಆದುದರಿಂದ ಪಂಡಿತನಾದವನು ಹೇಗೋ ವಿಶಿಷ್ಟವಾದ ಜಾತಿಯನ್ನು ಪಡೆದರೆ ಅದನ್ನು ರಕ್ಷಿಸಿಕೊಂಡು ಪುನಃ ಅಲ್ಲಿಂದ ಭ್ರಷ್ಟನಾಗದಂತೆ ಪ್ರಯತ್ನವನ್ನು ಪಡಬೇಕು. ಎಲೌ ದೇವಿಯೇ, ಇದನ್ನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

ಉಮಾ

ಜನ್ಮಪ್ರಭೃತಿ ಕೈಃ ಶುದ್ಧೋ ಲಭೇಜ್ಜನ್ಮಫಲಂ ನರಃ ।
ಶೋಭನಾಶೋಭನಂ ಸರ್ವಮಧಿಕಾರವಶಾತ್ ಸ್ವಯಮ್ ॥೧೯॥

ಉಮಾ– ಜನ್ಮವನ್ನಾರಂಭಿಸಿ ಯಾವ ಆಚಾರಗಳಿಂದ ಶುದ್ಧನಾಗಿ ಮನುಷ್ಯನು ಜನ್ಮಫಲವನ್ನು ಪಡೆಯುತ್ತಾನೆ? ಶೋಭನಾಶೋಭನಗಳೆಲ್ಲವೂ ತನ್ನ ಅಧಿಕಾರವಶದಿಂದ (ಯೋಗ್ಯತೆಗೆ ಅನುಗುಣವಾಗಿ) ಉಂಟಾಗುತ್ತವೆಯಷ್ಟೆ?

ಮಹೇಶ್ವರಃ

ಕರ್ಮ ಕುರ್ವನ್ನ ಲಿಪ್ಯೇತ ಆರ್ಜವೇನ ಸಮಾಚರನ್ ।
ಆತ್ಮೈವ ತಚ್ಛುಭಂ ಕುರ್ಯಾದಶುಭೇ ನೈವ ಯೋಜಯೇತ್ ॥೨೦॥

ಮಹೇಶ್ವರ– ಕರ್ಮವನ್ನು ಮಾಡುತ್ತಾ ಋಜುತ್ವವನ್ನು ಮಾಡುವವನು ದೋಷ ಲೇಪವನ್ನು ಹೊಂದುವುದಿಲ್ಲ. ತಾನೇ ಶುಭವನ್ನು ಹೊಂದಬೇಕು. ಅಶುಭದಲ್ಲಿ ತನ್ನನ್ನು ಯೋಜಿಸಿಕೊಳ್ಳಬಾರದು.

ಶಠೇಷು ಶಠವತ್ ಕುರ್ಯಾದಾರ್ಯೇಷ್ವಾರ್ಜವಮಾಚರೇತ್ ।
ಆಪತ್ಸು ನಾವಸೀದೇಚ್ಚ ಘೋರಾನ್ ಸಂಕ್ರಾಮಯೇತ್ ಪರಾತ್ ।
ಸಾಮ್ನೈವ ಸರ್ವಕಾರ್ಯಾಣಿ ಕರ್ತುಂ ಪೂರ್ವಂ ಸಮಾರಭೇತ್ ॥೨೧॥

ಶಠರಲ್ಲಿ ಶಠರಂತೆಯೇ ನಡೆದುಕೊಳ್ಳಬೇಕು. ಆರ್ಯರಲ್ಲಿ ಋಜುತನದಿಂದ ನಡೆದುಕೊಳ್ಳಬೇಕು. ಆಪತ್ತಿನಲ್ಲಿ ಕುಗ್ಗಿಹೋಗಬಾರದು. ಘೋರವಾದ ಪುರುಷರನ್ನು ಇನ್ನೊಬ್ಬರಿಂದ ದೂರ ಸರಿಸಬೇಕು. ಎಲ್ಲ ಕಾರ್ಯಗಳನ್ನೂ ಸಾಮೋಪಾಯದಿಂದಲೇ ಮಾಡಲು ಮೊದಲು ಪ್ರಾರಂಭಿಸಬೇಕು.

ಅನರ್ಥಾಧರ್ಮಶೋಕಾಂಸ್ತು ಯಥಾ ನ ಪ್ರಾಪ್ನುಯಾತ್ ಸ್ವಯಮ್ ।
ಪ್ರಯತೇತ ತಥಾ ಕರ್ತುಮೇತದ್ ವೃತ್ತಂ ಸಮಾಸತಃ ॥೨೨॥

ತನಗೆ ಅಧರ್ಮವಾಗಲೀ, ಅನರ್ಥವಾಗಲೀ, ಶೋಕವಾಗಲೀ ಉಂಟಾಗದಂತೆ ಸ್ವತಃ ಪ್ರಯತ್ನ ಪಡಬೇಕು. ಇದು ಸಂಕ್ಷೇಪವಾಗಿ ಒಳ್ಳೆಯ ನಡತೆಯ ನಿರೂಪಣೆ.

ಏತದ್ ವೃತ್ತಂ ಸಮಾಸಾದ್ಯ ಗೃಹಮಾಶ್ರಿತ್ಯ ಮಾನವಾಃ ।
ನಿರಾಹಾರಾ ನಿರುದ್ವೇಗಾಃ ಪ್ರಾಪ್ನುವಂತ್ಯುತ್ತಮಾಂ ಗತಿಮ್ ॥೨೩॥

ಇಂತಹ ನಡತೆಯನ್ನು ಹೊಂದಿ ಗೃಹಸ್ಥರಾದ ಮಾನವರು ನಿರುದ್ವೇಗದಿಂದ ನಿರಾಹಾರಾದಿಗಳನ್ನು ಮಾಡಿ ಉತ್ತಮ ಗತಿಯನ್ನು ಪಡೆಯುತ್ತಾರೆ.

ಏತಜ್ಜನ್ಮಫಲಂ ನಿತ್ಯಂ ಸರ್ವೇಷಾಂ ಗೃಹವಾಸಿನಾಮ್ ।
ಏವಂ ಗೃಹಗತೈರ್ನಿತ್ಯಂ ವರ್ತಿತವ್ಯಮಿತಿ ಸ್ಥಿತಿಃ ।
ಏತತ್ಸರ್ವಂ ಮಯಾ ಪ್ರೋಕ್ತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥೨೪॥

ಗೃಹಸ್ಥರಾದ ಎಲ್ಲರಿಗೂ ಇದು ಯಾವಾಗಲೂ ಜನ್ಮಫಲ. ಗೃಹಸ್ಥರಾದವರು ಹೀಗೆ ನಡೆದುಕೊಳ್ಳಬೇಕೆಂಬುದು ಶಾಸ್ತ್ರದ ಸ್ಥಿತಿ. ಇದೆಲ್ಲವನ್ನೂ ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

ಉಮಾ

ಸುರಾಸುರಪತೇ ದೇವ ವರದ ಪ್ರೀತಿವರ್ಧನ ।
ಮಾನುಷೇಷ್ವೇವ ಯೇ ಕೇಚಿದಾಢ್ಯಾಃ ಕ್ಲೇಶವಿವರ್ಜಿತಾಃ ।
ಭುಂಜಾನಾ ವಿವಿಧಾನ್ ಭೋಗಾನ್ ದೃಶ್ಯಂತೇ ನಿರುಪದ್ರವಾಃ ॥೨೫॥

ಉಮಾ– ಸುರಾಸುರಪತಿಯೇ, ದೇವನೇ, ವರದನೇ, ಸಂತೋಷ ವರ್ಧನನೇ, ಮನುಷ್ಯರಲ್ಲಿ ಕೆಲವರು ಆಢ್ಯರೂ, ಕ್ಲೇಶರಹಿತರೂ ಆಗಿ, ಯಾವ ಉಪದ್ರವವೂ ಇಲ್ಲದೆ ವಿವಿಧವಾದ ಭೋಗಗಳನ್ನು ಭುಂಜಿಸುವುದು ಕಂಡುಬರುತ್ತದೆ.

ಅಪರೇ ಕ್ಲೇಶಸಂಯುಕ್ತಾ ದರಿದ್ರಾ ಭೋಗವರ್ಜಿತಾಃ ॥೨೬॥

ಕಿಮರ್ಥಂ ಮಾನುಷೇ ಲೋಕೇ ನ ಸಮತ್ವೇನ ಕಲ್ಪಿತಾಃ ।
ಏತಚ್ಛ್ರೋತುಂ ಮಹಾದೇವ ಕೌತೂಹಲಮತೀವ ಮೇ ॥೨೭॥

ಇನ್ನು ಕೆಲವರು ಕ್ಲೇಶಯುಕ್ತರಾಗಿ, ದರಿದ್ರರಾಗಿ ಭೋಗವರ್ಜಿತರಾಗಿರುವುದು ಕಂಡುಬರುತ್ತದೆ. ಮನುಷ್ಯಲೋಕದಲ್ಲಿ ಏಕೆ ಎಲ್ಲರೂ ಸಮವಾಗಿ ಜನಿಸಿಲ್ಲ? ಮಹಾದೇವನೇ, ಇದನ್ನು ಕೇಳಲು ನನಗೆ ಬಹಳ ಕುತೂಹಲವಿದೆ.

ಮಹೇಶ್ವರಃ

ನ್ಯಾಯತಸ್ತ್ವಂ ಮಹಾಭಾಗೇ ಶ್ರೋತುಕಾಮಾಸಿ ಭಾಮಿನಿ ।
ಶೃಣು ತತ್ಸರ್ವಮಖಿಲಂ ಮಾನುಷಾಣಾಂ ಹಿತಂ ವಚಃ ॥೨೮॥

ಮಹೇಶ್ವರ– ಮಹಾನುಭಾವಳೇ, ಭಾಮಿನಿಯೇ, ನೀನು ಕೇಳಲು ಬಯಸುತ್ತಿರುವುದು ನ್ಯಾಯವಾಗಿಯೇ ಇದೆ. ಮನುಷ್ಯರಿಗೆ ಹಿತವಾದ ವಚನವನ್ನೆಲ್ಲವನ್ನೂ ನಾನು ಹೇಳುತ್ತೇನೆ, ಅದನ್ನು ಕೇಳು.

ಆದಿಸರ್ಗೇ ಪುರಾ ಬ್ರಹ್ಮಾ ಸಮತ್ವೇನಾಸೃಜತ್ ಪ್ರಜಾಃ ।
ನಿತ್ಯಂ ನ ಭವತೋ ಹ್ಯಸ್ಯ ರಾಗದ್ವೇಷೌ ಪ್ರಜಾಪತೇಃ ।
ತದಾ ತಸ್ಮಾತ್ ಸಮಾಃ ಸರ್ವೇ ಬಭೂವುಃ ಸರ್ವತೋ ನರಾಃ ॥೨೯॥

ಮೊದಲು ಆದಿಸೃಷ್ಟಿಯಲ್ಲಿ ಬ್ರಹ್ಮದೇವರು ಪ್ರಜೆಗಳನ್ನು ಸಮರಾಗಿಯೇ ಸೃಷ್ಟಿಸಿದರು. ಪ್ರಜಾಪತಿಯಾದ ಬ್ರಹ್ಮದೇವರಿಗೆ ಎಂದೂ ರಾಗ-ದ್ವೇಷವಿಲ್ಲವಷ್ಟೆ? ಆಗ ಎಲ್ಲ ನರರೂ ಎಲ್ಲ ರೀತಿಯಿಂದ ಸಮರಾಗಿದ್ದರು.

ಏವಂ ಸಂವರ್ತಮಾನೇ ತು ಯುಗೇ ಕಾಲವಿಪರ್ಯಯಾತ್ ।
ಕೇಚಿತ್ ಪ್ರಪೇದಿರೇ ತತ್ರ ವಿಷಮಂ ಬುದ್ಧಿಮೋಹಿತಾಃ ॥೩೦॥

ಹೀಗೆಯೇ ಯುಗವು ಮುಂದುವರಿಯುತ್ತಿರಲು ಕಾಲವಿಪರ್ಯಯದಿಂದ ಕೆಲವರು ಬುದ್ಧಿಮೋಹಿತರಾಗಿ ವಿಷಮವಾಗಿ ನಡೆದುಕೊಳ್ಳಲು ಆರಂಭಿಸಿದರು.

ತೇಷಾಂ ಹಾನಿಂ ತತೋ ದೃಷ್ಟ್ವಾ ತುಲ್ಯಾನಾಮೇವ ಭಾಮಿನಿ ।
ಬ್ರಹ್ಮಾಣಂ ತೇ ಸಮಾಜಗ್ಮುಸ್ತತ್ಕಾರಣನಿವೇದಕಾಃ ॥೩೧॥

ಎಲೌ ಭಾಮಿನಿಯೇ, ತಮಗೆ ಸದೃಶರಾದ ಅವರು ಹಾನಿಯನ್ನು ಹೊಂದುತ್ತಿರುವುದನ್ನು ನೋಡಿ ಉಳಿದವರು ಅದಕ್ಕೆ ಕಾರಣವನ್ನು ತಿಳಿದುಕೊಳ್ಳಲು ಬ್ರಹ್ಮದೇವರ ಬಳಿಗೆ ಹೋದರು.

ಕರ್ತುಂ ನಾರ್ಹಸಿ ದೇವೇಶ ಪಕ್ಷಪಾತಂ ತ್ವಮೀದೃಶಮ್ ।
ಪುತ್ರಭಾವೇ ಸಮೇ ದೇವ ಕಿಮರ್ಥಂ ನೋ ಭವೇತ್ ಕಲಿಃ ॥೩೨॥

ಎಲೈ ದೇವೇಶನೇ, ನೀನು ಇಂತಹ ಪಕ್ಷಪಾತವನ್ನು ಮಾಡಬಾರದು. ಎಲೈ ದೇವನೇ, ನಿನಗೆ ಎಲ್ಲರಲ್ಲಿಯೂ ಪುತ್ರಭಾವ ಸಮವಾಗಿದ್ದರೂ ನಮಗೆ ಏಕೆ ಇಂತಹ ಕಲಹವುಂಟಾಗುತ್ತಿದೆ?

ಇತ್ಯೇವಂ ತೈರುಪಾಲಬ್ಧೋ ಬ್ರಹ್ಮಾ ವಚನಮಬ್ರವೀತ್ ।
ಯೂಯಂ ಮಾ ಕಾರ್ಷ್ಟ ಮೇ ದೋಷಂ ಸ್ವಕೃತಂ ಸ್ಮರತ ಪ್ರಜಾಃ ॥೩೩॥

ಯುಷ್ಮಾಭಿರೇವ ಯುಷ್ಮಾಕಂ ಗ್ರಥಿತಂ ಹಿ ಶುಭಾಶುಭಮ್ ।
ಯಾದೃಶಂ ಕುರುತೇ ಕರ್ಮ ತಾದೃಶಂ ಫಲಮಶ್ನುತೇ ।
ಸ್ವಕೃತಸ್ಯ ಫಲಂ ಭುಂಕ್ತೇ ನಾನ್ಯಸ್ತದ್ ಭೋಕ್ತುಮರ್ಹತಿ ॥೩೪॥

ಹೀಗೆ ಅವರಿಂದ ನಿಂದಿಸಲ್ಪಟ್ಟ ಬ್ರಹ್ಮದೇವರು ಉತ್ತರವನ್ನು ನೀಡಿದರು: ಎಲೈ ಪ್ರಜೆಗಳೇ, ನೀವು ನನ್ನಲ್ಲಿ ದೋಷವನ್ನು ಎಣಿಸಬೇಡಿ. ನಿಮ್ಮ ಶುಭಾಶುಭಗಳನ್ನು ನೀವೇ ಗಂಟುಹಾಕಿಕೊಂಡಿದ್ದೀರಿ. ಮನುಷ್ಯರು ಎಂತಹ ಕರ್ಮವನ್ನು ಮಾಡುತ್ತಾರೆಯೋ ಅಂತಹ ಫಲವನ್ನು ಅನುಭವಿಸುತ್ತಾರೆ. ಮನುಷ್ಯರು ತಾವು ಮಾಡಿದ ಕರ್ಮದ ಫಲವನ್ನು ಅನುಭವಿಸುತ್ತಾರೆ. ಇನ್ನೊಬ್ಬರು ಅದನ್ನು ಅನುಭವಿಸುವುದಿಲ್ಲ (ಎಂದು ಹೇಳಿದರು).

ಏವಂ ಸಂಬೋಧಿತಾಸ್ತೇನ ಲೋಕಕರ್ತ್ರಾ ಸ್ವಯಂಭುವಾ ।
ಪುನರ್ನಿವೃತ್ಯ ಕರ್ಮಾಣಿ ಶುಭಾನ್ಯೇವ ಪ್ರಪೇದಿರೇ ॥೩೫॥

ಲೋಕಕರ್ತೃವಾದ ಬ್ರಹ್ಮದೇವರಿಂದ ಹೀಗೆ ಹೇಳಲ್ಪಟ್ಟ ಅವರು ಪುನಃ ಹಿಂದಿರುಗಿ ಶುಭಕರ್ಮಗಳನ್ನೇ ಮಾಡಲು ಪ್ರಾರಂಭಿಸಿದರು.

ಏವಂ ವಿಜ್ಞಾತತತ್ತ್ವಾಸ್ತೇ ದಾನಧರ್ಮಪರಾಯಣಾಃ ।
ಶುಭಾನಿ ವಿಧಿವತ್ ಕೃತ್ವಾ ಕಾಲಧರ್ಮಗತಾಃ ಪುನಃ ।
ತಾನಿ ದಾನಫಲಾನ್ಯೇವ ಭುಂಜತೇ ಸುಖಭೋಗಿನಃ ॥೩೬॥

ಸ್ವಕೃತಂ ತು ನರಸ್ತಸ್ಮಾತ್ ಸ್ವಯಮೇವ ಪ್ರಪದ್ಯತೇ ॥೩೭॥

ಹೀಗೆ ಅವರು ತತ್ತ್ವಜ್ಞಾನವನ್ನು ಹೊಂದಿ, ದಾನ-ಧರ್ಮಪರಾಯಣರಾಗಿ ವಿಧಿಗೆ ಅನುಸಾರವಾಗಿ ಶುಭಕರ್ಮವನ್ನು ಮಾಡಿ ಕಾಲಕ್ರಮದಲ್ಲಿ ಮೃತ್ಯುವಶರಾಗಿ ಪುನಃ ದಾನಫಲಗಳಾದ ಸುಖವನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಮನುಷ್ಯರು ತಮ್ಮ ಕರ್ಮದ ಫಲವನ್ನು ತಾವೇ ಹೊಂದುತ್ತಾರೆ.

ಅಪರೇ ಧರ್ಮಕಾಮೇಭ್ಯೋ ನಿವೃತ್ತಾಸ್ತು ಶುಭೇಕ್ಷಣೇ ।
ಕದರ್ಯಾ ನಿರನುಕ್ರೋಶಾಃ ಪ್ರಾಯೇಣಾತ್ಮಪರಾಯಣಾಃ ॥೩೮॥

ತಾದೃಶಾ ಮರಣಂ ಪ್ರಾಪ್ತಾಃ ಪುನರ್ಜನ್ಮನಿ ಶೋಭನೇ ।
ದರಿದ್ರಾಃ ಕ್ಲೇಶಸಂಯುಕ್ತಾ ಭವಂತ್ಯೇವ ನ ಸಂಶಯಃ ॥೩೯॥

ಎಲೌ ಶುಭೇಕ್ಷಣೆಯೇ, ಇನ್ನು ಕೆಲವರು ಧರ್ಮಕಾಮನೆಯುಳ್ಳ ಮಾನವರಿಂದ ದೂರ ಸರಿದು ಜಿಪುಣರಾಗಿ, ದಯಾಹೀನರಾಗಿ, ಹೆಚ್ಚಾಗಿ ಸ್ವಾರ್ಥಿಗಳಾಗಿ ಅನಂತರ ಮರಣವನ್ನು ಹೊಂದಿ ಇನ್ನೊಂದು ಜನ್ಮದಲ್ಲಿ ದರಿದ್ರರೂ, ಕ್ಲೇಶಯುಕ್ತರೂ ಆಗಿಯೇ ಆಗುತ್ತಾರೆ. ಇದರಲ್ಲಿ ಸಂಶಯವಿಲ್ಲ.

ಉಮಾ

ಮಾನುಷೇಷ್ವಥ ಯೇ ಕೇಚಿದ್ ಧನಧಾನ್ಯಸಮನ್ವಿತಾಃ ।
ಭೋಗಹೀನಾಃ ಪ್ರದೃಶ್ಯಂತೇ ಸರ್ವಭೋಗೇಷು ಸತ್ಸ್ವಪಿ ।
ನ ಭುಂಜತೇ ಕಿಮರ್ಥಂ ತೇ ತನ್ಮೇ ಶಂಸಿತುಮರ್ಹಸಿ ॥೪೦॥

ಉಮಾ– ಮನುಷ್ಯರಲ್ಲೇ ಕೆಲವರು ಧನ-ಧಾನ್ಯಗಳಿಂದ ಸಮನ್ವಿತರಾಗಿ, ಸರ್ವ ಭೋಗಗಳು ಇದ್ದರೂ ಭೋಗಹೀನರಾಗಿರುವುದು ಕಂಡುಬರುತ್ತದೆ. ಅವರಿಗೆ ಏಕೆ ಭೋಗವಿಲ್ಲ ಎಂದು ನನಗೆ ಹೇಳಬೇಕು.

ಮಹೇಶ್ವರಃ

ಪರೈಃ ಸಂಚೋದಿತಾ ಧರ್ಮಂ ಕುರ್ವತೇ ನ ಸ್ವಕಾಮತಃ ।
ಸ್ವಯಂ ಶ್ರದ್ಧಾಂ ಬಹಿಷ್ಕೃತ್ಯ ಕುರ್ವಂತಿ ಚ ರುದಂತಿ ಚ ॥೪೧॥

ತಾದೃಶಾ ಮರಣಂ ಪ್ರಾಪ್ತಾಃ ಪುನರ್ಜನ್ಮನಿ ಶೋಭನೇ ।
ಫಲಾನಿ ತಾನಿ ಸಂಪ್ರಾಪ್ಯ ಭುಂಜತೇ ನ ಕದಾಚನ ।
ರಕ್ಷಂತೋ ವರ್ಧಯಂತಶ್ಚ ಆಸತೇ ನಿಧಿಪಾಲವತ್ ॥೪೨॥

ಮಹೇಶ್ವರ– ತಾವು ತಮ್ಮ ಸ್ವಂತ ಇಚ್ಛೆ ಇಲ್ಲದೆ ಇನ್ನೊಬ್ಬರ ಪ್ರೇರಣೆಯಿಂದ ಧರ್ಮವನ್ನು ಆಚರಿಸುತ್ತಾರೆ. ಸ್ವತಃ ಶ್ರದ್ಧೆಯಿಲ್ಲದೆ ಧರ್ಮಕಾರ್ಯವನ್ನು ಮಾಡಿ (ಧನವ್ಯಯದಿಂದ ಮತ್ತು ಆಯಾಸದಿಂದ) ರೋದಿಸುತ್ತಾರೆ. ಎಲೌ ಶೋಭನೆಯೇ, ಅಂತಹವರು ಮರಣವನ್ನು ಹೊಂದಿದ ಮೇಲೆ ಇನ್ನೊಂದು ಜನ್ಮದಲ್ಲಿ ತಾವು ಮಾಡಿದ ಕರ್ಮದ ಫಲವನ್ನು ಪಡೆದು ಎಂದೂ ಭೋಗಿಸುವುದಿಲ್ಲ. ನಿಧಿಪಾಲಕರಂತೆ ತಮ್ಮ ಧನವನ್ನು ರಕ್ಷಣೆ ಮಾಡುತ್ತಾ, ಅಭಿವೃದ್ಧಿಪಡಿಸುತ್ತಾ ಇರುತ್ತಾರೆ.

ಉಮಾ

ಕೇಚಿದ್ ಧನವಿಯುಕ್ತಾಶ್ಚ ಭೋಗಯುಕ್ತಾ ಮಹೇಶ್ವರ ।
ಮಾನುಷಾಃ ಸಂಪ್ರದೃಶ್ಯಂತೇ ತನ್ಮೇ ಶಂಸಿತುಮರ್ಹಸಿ ॥೪೩॥

ಉಮಾ– ಎಲೈ ಮಹೇಶ್ವರನೇ, ಕೆಲವು ಮನುಷ್ಯರು ಧನವಿಲ್ಲದಿದ್ದರೂ ಭೋಗಯುಕ್ತರಾಗಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣವನ್ನು ನನಗೆ ಹೇಳಬೇಕು.

ಮಹೇಶ್ವರಃ

ಆನೃಶಂಸ್ಯಪರಾ ಯೇ ತು ಧರ್ಮಕಾಮಾಶ್ಚ ದುರ್ಗತಾಃ ।
ಪರೋಪಕಾರಂ ಕುರ್ವಂತಿ ದೀನಾನುಗ್ರಹಕಾರಣಾತ್ ॥೪೪॥

ಪ್ರತಿದದ್ಯುಃ ಪರಧನಂ ನಷ್ಟಂ ವಾऽನ್ಯೈರ್ಹೃತಂ ಧನಮ್ ।
ನಿತ್ಯಂ ಯೇ ದಾತುಮನಸೋ ನರಾ ವಿತ್ತೇಷ್ವಸತ್ಸ್ವಪಿ ॥೪೫॥

ಮಹೇಶ್ವರ– ದುರ್ಗತಿಯನ್ನು ಹೊಂದಿದರೂ (ದರಿದ್ರರಾದರೂ) ದಯಾಪರರೂ, ಧರ್ಮಕಾಮರೂ ಆಗಿರುತ್ತಾರೆ. ದೀನರಿಗೆ ಅನುಗ್ರಹ ಮಾಡಬೇಕೆಂಬ ದೃಷ್ಟಿಯಿಂದ ಪರೋಪಕಾರವನ್ನು ಮಾಡುತ್ತಾರೆ. ಇನ್ನೊಬ್ಬರ ಧನವನ್ನು ಹಿಂದಿರುಗಿಸುತ್ತಾರೆ. ಇನ್ನೊಬ್ಬರಿಂದ ಅಪಹೃತವಾದ ನಿಧಿಯನ್ನು ತಮ್ಮ ಬಳಿ ಧನವಿಲ್ಲದಿದ್ದರೂ ನಿತ್ಯವೂ ಕೊಡಲು ಬಯಸುತ್ತಾರೆ.

ಕಾಲಧರ್ಮವಶಂ ಪ್ರಾಪ್ತಾಃ ಪುನರ್ಜನ್ಮನಿ ತೇ ನರಾಃ ।
ಏತೇ ಧನವಿಯುಕ್ತಾಶ್ಚ ಭೋಗಯುಕ್ತಾ ಭವಂತ್ಯುತ ॥೪೬॥

ಧರ್ಮದಾನೋಪದೇಶಂ ವಾ ಕರ್ತವ್ಯಮಿತಿ ನಿಶ್ಚಯಃ ।
ಇತಿ ತೇ ಕಥಿತಂ ದೇವಿ ಕಿಂ ಭೂಯಃ ಶ್ರೋತುಮಿಚ್ಛಸಿ ॥೪೭॥

ಅಂತಹ ಮನುಷ್ಯರು ಮರಣವನ್ನು ಹೊಂದಿ ಪುನರ್ಜನ್ಮದಲ್ಲಿ ಧನಹೀನರಾದರೂ ಭೋಗಯುಕ್ತರಾಗುತ್ತಾರೆ. ಆದ್ದರಿಂದ ಧರ್ಮದ ಉಪದೇಶ ಮತ್ತು ದಾನದ ಉಪದೇಶವನ್ನಾದರೂ ಮಾಡಬೇಕೆಂಬುದು ನಿಶ್ಚಿತವಾದುದು. ದೇವಿಯೇ, ಇದನ್ನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಪರ್ವಣಿ ವರ್ಣವಿಭಾಗಾದಿನಿಮಿತ್ತಕಥನಂ ನಾಮ ಏಕೋತ್ತರದ್ವಿಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಒಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಎರಡನೆಯ ಅಧ್ಯಾಯ

ಉಮಾ-ಮಹೇಶ್ವರ ಸಂವಾದ. ಮನುಷ್ಯರ ತ್ರೈವಿಧ್ಯನಿಮಿತ್ತಕಥನ.

ಉಮಾ

ಭಗವನ್ ದೇವದೇವೇಶ ತ್ರಿಯಕ್ಷ ವೃಷಭಧ್ವಜ ।
ಮಾನುಷಾಸ್ತ್ರಿವಿಧಾ ದೇವ ದೃಶ್ಯಂತೇ ಸತತಂ ವಿಭೋ ॥೧॥

ಉಮಾ– ಭಗವಂತನೇ, ದೇವದೇವೇಶನೇ, ತ್ರ್ಯಂಬಕನೇ, ವೃಷಭಧ್ವಜನೇ, ವಿಭುವೇ, ಮನುಷ್ಯರು ಸತತವಾಗಿ ಮೂರು ವಿಧವಾಗಿ ಕಂಡುಬರುತ್ತಾರೆ.

ಅಸೀನಾ ಏವ ಭುಂಜಂತೇ ಸ್ವಾನ್ಯೈಶ್ವರ್ಯಪರಿಗ್ರಹೈಃ ।
ಅಪರೇ ಯತ್ನಪೂರ್ವಂ ತು ಲಭಂತೇ ಭೋಗಸಂಗ್ರಹಮ್ ॥೨॥

ಅಪರೇ ಯತ್ನಕುರ್ವಂತೋ ಲಭಂತೇ ನ ತು ಕಿಂಚನ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩॥

ಕೆಲವರು ಕುಳಿತುಕೊಂಡೇ ಸ್ಥಾನ, ಐಶ್ವರ್ಯ ಮತ್ತು ಸಲಕರಣೆಗಳನ್ನು ಹೊಂದಿ ಭೋಗಿಸುತ್ತಾರೆ. ಇನ್ನು ಕೆಲವರು ಪ್ರಯತ್ನಪೂರ್ವಕವಾಗಿ ಭೋಗಸಾಮಗ್ರಿಗಳನ್ನು ಹೊಂದುತ್ತಾರೆ. ಇನ್ನು ಕೆಲವರು ಯತ್ನವನ್ನು ಮಾಡಿದರೂ ಯಾವುದನ್ನೂ ಪಡೆಯುವುದಿಲ್ಲ. ಇದು ಯಾವ ಕರ್ಮವಿಪಾಕದಿಂದ ಎಂದು ನನಗೆ ಹೇಳಬೇಕು.

ಮಹೇಶ್ವರಃ

ನ್ಯಾಯತಸ್ತ್ವಂ ಮಹಾಭಾಗೇ ಶ್ರೋತುಕಾಮಾऽಸಿ ಭಾಮಿನಿ ॥೪॥

ಮಹೇಶ್ವರ– ಎಲೌ ಮಹಾನುಭಾವಳೇ, ಭಾಮಿನಿಯೇ, ನೀನು ನ್ಯಾಯವಾಗಿಯೇ ಕೇಳಲು ಬಯಸುತ್ತಿದ್ದೀಯೆ.

ಯೇ ಲೋಕೇ ಮಾನುಷಾ ದೇವಿ ದಾನಧರ್ಮಪರಾಯಣಾಃ ।
ಪಾತ್ರಾಣಿ ವಿಧಿವಜ್ಜ್ಞಾತ್ವಾ ದೂರತೋ ಹ್ಯನುಮಾನತಃ ॥೫॥

ದಾನಾದಿ ಚೇಂಗಿತೈರೇವ ತೈರವಿಜ್ಞಾತಮೇವ ವಾ ।
ಅಭಿಗಮ್ಯ ಸ್ವಯಂ ತತ್ರ ಗ್ರಾಹಯಂತಿ ಪ್ರಸಾದ್ಯ ಚ ॥೬॥

ಪುನರ್ಜನ್ಮನಿ ದೇವೇಶಿ ತಾದೃಶಾಃ ಶೋಭನಾ ನರಾಃ ।
ಅಯತ್ನತಸ್ತು ತಾನ್ಯೇವ ಫಲಾನಿ ಪ್ರಾಪ್ನುವಂತ್ಯುತ ॥೭॥

ಆಸೀನಾ ಏವ ಭುಂಜಂತೇ ಭೋಗಾನ್ ಸುಕೃತಭೋಗಿನಃ ॥೮॥

ದೇವಿಯೇ, ಲೋಕದಲ್ಲಿ ಯಾವ ಮನುಷ್ಯರು ದಾನ-ಧರ್ಮ ಪರಾಯಣರಾಗಿ ಪಾತ್ರರನ್ನು ಶಾಸ್ತ್ರೋಕ್ತ ರೀತಿಯಲ್ಲಿ ದೂರದಿಂದಲೇ ಅನುಮಾನದಿಂದ ಅಥವಾ ಅವರ ನಿಮಿತ್ತಗಳಿಂದ ತಿಳಿದು ಅಥವಾ ಅವರಿಗೆ ಗೊತ್ತಾಗದಂತೆಯೇ ತಿಳಿದು ಸ್ವತಃ ಅವರ ಬಳಿಗೆ ತಾವೇ ಹೋಗಿ ಅವರನ್ನು ಪ್ರಸನ್ನೀಕರಿಸಿ ದಾನಾದಿಗಳನ್ನು ಮಾಡುತ್ತಾರೆಯೋ, ಎಲೌ ದೇವೇಶಿಯೇ, ಅಂತಹ ಸತ್ಪುರುಷರು ಮುಂದಿನ ಜನ್ಮದಲ್ಲಿ ಪ್ರಯತ್ನವಿಲ್ಲದೆಯೇ ಆ ಫಲಗಳನ್ನು ಪಡೆಯುತ್ತಾರೆ. ತಮ್ಮ ಪುಣ್ಯಫಲವನ್ನು ಭೋಗಿಸುವ ಅವರು ಪ್ರಯತ್ನವಿಲ್ಲದೆ ಕುಳಿತುಕೊಂಡೇ ಭೋಗಿಸುತ್ತಾರೆ.

ಅಪರೇ ಯೇ ಚ ದಾನಾನಿ ದದತ್ಯೇವ ಪ್ರಯಾಚಿತಾಃ ।
ಯಥಾ ಯಥಾ ತೇ ದೀನತ್ವಾತ್ ಪುನರ್ದಾಸ್ಯಂತಿ ಯಾಚಿತಾಃ ॥೯॥

ತಾವತ್ಕಾಲಂ ತತೋ ದೇವಿ ಪುನರ್ಜನ್ಮನಿ ತೇ ನರಾಃ ।
ಯತ್ನತಃ ಶ್ರಮಸಂಯುಕ್ತಾಃ ಪುನಸ್ತಾನ್ ಪ್ರಾಪ್ನುವಂತಿ ಚ ॥೧೦॥

ಇನ್ನು ಕೆಲವರು ಬಹಳ ಯಾಚನೆಯನ್ನು ಮಾಡಿದ ಮೇಲೆ ದಾನವನ್ನು ಮಾಡುತ್ತಾರೆ. ದಾನವನ್ನು ಬೇಡುವವರು ದೀನರಾಗಿದ್ದರೆ ಅವರು ಪುನಃ ಪುನಃ ಕೇಳಿದಂತೆ ದಾನವನ್ನು ಕೊಡುತ್ತಾರೆ. ಎಲೌ ದೇವಿಯೇ, ಅಂತಹ ಮನುಷ್ಯರು ಮುಂದಿನ ಜನ್ಮದಲ್ಲಿ ಶ್ರಮದಿಂದ ಕೂಡಿ ಅಷ್ಟು ಕಾಲವು ಕಳೆದ ಮೇಲೆ ಆ ಭೋಗ ಸಾಮಗ್ರಿಗಳನ್ನು ಪಡೆಯುತ್ತಾರೆ.

ಯಾಚಿತಾ ಅಪಿ ಯೇ ಕೇಚಿನ್ನ ದದತ್ಯೇವ ಕಿಂಚನ ।
ಅಭ್ಯಸೂಯಾಪರಾ ಮರ್ತ್ಯಾ ಲೋಭೋಪಹತಚೇತಸಃ ॥೧೧॥

ತೇ ಪುನರ್ಜನ್ಮನಿ ಶುಭೇ ಯತಂತೇ ಬಹುಧಾ ನರಾಃ ।
ನ ಪ್ರಾಪ್ನುವಂತಿ ಮನುಜಾ ಮಾರ್ಗಂತಸ್ತೇಽಪಿ ಕಿಂಚನ ॥೧೨॥

ಇನ್ನು ಕೆಲವು ಅಸೂಯಾ ಪರರೂ, ಲೋಭದಿಂದ ಕೂಡಿದವರೂ ಆದ ಮನುಷ್ಯರು ಯಾಚನೆಯನ್ನು ಮಾಡಿದರೂ ಏನನ್ನೂ ದಾನ ಮಾಡುವುದಿಲ್ಲ. ಎಲೌ ಶುಭಳೇ, ಅಂತಹ ಮನುಷ್ಯರು ಇನ್ನೊಂದು ಜನ್ಮದಲ್ಲಿ ಬಹಳ ಪ್ರಯತ್ನವನ್ನು ಪಡುತ್ತಾರೆ. ಅವರು ಎಷ್ಟು ಪ್ರಯತ್ನ ಪಟ್ಟರೂ ಏನನ್ನೂ ಪಡೆಯುವುದಿಲ್ಲ.

ನಾನುಪ್ತಂ ರೋಹತೇ ಸಸ್ಯಂ ತದ್ವದ್ ದಾನಫಲಂ ವಿದುಃ ।
ಯದ್ಯದ್ ದದಾತಿ ಪುರುಷಸ್ತತ್ತತ್ ಪ್ರಾಪ್ನೋತಿ ಕೇವಲಮ್ ॥೧೩॥

ಇತಿ ತೇ ಕಥಿತಂ ದೇವಿ ಭೂಯಃ ಶ್ರೋತುಂ ಕಿಮಿಚ್ಛಸಿ ॥೧೪॥

ಬಿತ್ತದಿದ್ದ ಸಸ್ಯವು ಬೆಳೆಯುವುದಿಲ್ಲ. ದಾನಫಲವು ಅದರಂತೆಯೇ ಎಂದು ತಿಳಿಯುತ್ತಾರೆ. ಪುರುಷನು ಯಾವ ಯಾವ ದಾನವನ್ನು ಮಾಡುತ್ತಾನೋ ಅವುಗಳನ್ನು ಪಡೆಯುತ್ತಾನೆ. ದೇವಿಯೇ, ಇದನ್ನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

ಉಮಾ

ಭಗವನ್ ಭಗನೇತ್ರಘ್ನ ಕೇಚಿದ್ ವಾರ್ದ್ಧಕಸಂಯುತಾಃ ।
ಅಭೋಗಯೋಗ್ಯಕಾಲೇ ತು ಭೋಗಾಂಶ್ಚೈವ ಧನಾನಿ ಚ ॥೧೫॥

ಲಭಂತೇ ಸ್ಥವಿರಾ ಭೂತಾ ಭೋಗೈಶ್ವರ್ಯಂ ಯತಸ್ತತಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೧೬॥

ಉಮಾ– ಭಗವಂತನೇ, ಭಗನೇತ್ರನಾಶಕನೇ, ಕೆಲವರು ಮುಪ್ಪಿನ ಕಾಲದಲ್ಲಿ ಭೋಗಿಸುವ ಸಾಮರ್ಥ್ಯವಿಲ್ಲದಿದ್ದಾಗ ಭೋಗ ಸಾಮಗ್ರಿಗಳನ್ನು ಮತ್ತು ಧನವನ್ನು ಎಲ್ಲಿಂದಲಾದರೂ ಹೊಂದುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುತ್ತದೆ ಎಂದು ನನಗೆ ಹೇಳಬೇಕು.

ಮಹೇಶ್ವರಃ

ಹಂತ ತೇ ಕಥಯಿಷ್ಯಾಮಿ ಶೃಣು ತತ್ತ್ವಂ ಸಮಾಹಿತಾ ॥೧೭॥

ಮಹೇಶ್ವರ– ಸಂತೋಷ. ಹೇಳುವೆನು, ತತ್ವವನ್ನು ಸಮಾಧಾನದಿಂದ ಕೇಳು.

ಧರ್ಮಕಾರ್ಯಂ ಚಿರಂ ಕಾಲಂ ವಿಸ್ಮೃತ್ಯ ಧನಸಂಯುತಾಃ ।
ಪ್ರಾಣಾಂತಕಾಲೇ ಸಂಪ್ರಾಪ್ತೇ ವ್ಯಾಧಿಭಿಶ್ಚ ನಿಪೀಡಿತಾಃ ॥೧೮॥

ಆರಭಂತೇ ಪುನರ್ಧರ್ಮಂ ದಾತುಂ ದಾನಾನಿ ವಾ ನರಾಃ ।
ತೇ ಪುನರ್ಜನ್ಮನಿ ಶುಭೇ ಭೂತ್ವಾ ದುಃಖಪರಿಪ್ಲುತಾಃ ॥೧೯॥

ಅತೀತಯೌವನೇ ಕಾಲೇ ಸ್ಥವಿರತ್ವಮುಪಾಗತಾಃ ।
ಲಭಂತೇ ಪೂರ್ವದತ್ತಾನಾಂ ಫಲಾನಿ ಶುಭಲಕ್ಷಣೇ ॥೨೦॥

ಏವಂ ಕರ್ಮಫಲಂ ದೇವಿ ಕಾಲಯೋಗಾದ್ ಭವತ್ಯುತ ॥೨೧॥

ಯಾವ ಮನುಷ್ಯರು ಧನವನ್ನು ಹೊಂದಿದ್ದರೂ ಬಹಳ ಕಾಲ ಧರ್ಮಕಾರ್ಯವನ್ನು ಮಾಡುವುದನ್ನು ಮರೆತು, ರೋಗದಿಂದ ಪೀಡಿತರಾಗಿ ಪ್ರಾಣಾಂತಕಾಲವು ಸಮೀಪಿಸಿದಾಗ ದಾನ-ಧರ್ಮಗಳನ್ನು ಮಾಡಲು ಆರಂಭಿಸುತ್ತಾರೆಯೋ, ಎಲೌ ಶುಭಳೇ, ಅವರು ಇನ್ನೊಂದು ಜನ್ಮದಲ್ಲಿ ದುಃಖದಿಂದ ಕೂಡಿದವರಾಗಿ

ಯೌವನಕಾಲವು ಕಳೆದು ವಾರ್ಧಕ್ಯವು ಪ್ರಾಪ್ತವಾದಾಗ ಹಿಂದೆ ಮಾಡಿದ ದಾನದ ಫಲವನ್ನು ಪಡೆಯುತ್ತಾರೆ. ಎಲೌ ಶುಭಲಕ್ಷಣೆಯೇ, ದೇವಿಯೇ, ಹೀಗೆ ಮಾಡಿದ ಕರ್ಮದ ಫಲವು ಕಾಲಯೋಗದಿಂದ ಉಂಟಾಗುತ್ತದೆ.

ಉಮಾ

ಭೋಗಯುಕ್ತಾ ಮಹಾದೇವ ಕೇಚಿದ್‌ವ್ಯಾಧಿಪರಿಪ್ಲುತಾಃ ।
ಅಸಮರ್ಥಾಶ್ಚ ತಾನ್ ಭೋಕ್ತುಂ ಭವಂತಿ ಕಿಮು ಕಾರಣಮ್ ॥೨೨

ಉಮಾ– ಮಹಾದೇವನೇ, ಕೆಲವರು ಭೋಗಸಾಮಗ್ರಿಗಳಿಂದ ಕೂಡಿದ್ದರೂ ವ್ಯಾಧಿಗಳಿಂದ ಗ್ರಸ್ತರಾಗಿ ಭೋಗಿಸಲು ಸಮರ್ಥರಾಗುವುದಿಲ್ಲ. ಇದಕ್ಕೆ ಏನು ಕಾರಣ?

ಮಹೇಶ್ವರಃ

ವ್ಯಾಧಿಯೋಗಪರಿಕ್ಲಿಷ್ಟಾ ಯೇ ನಿರಾಶಾಃ ಸ್ವಜವಿತೇ ।
ಆರಭಂತೇ ತದಾ ಕರ್ತುಂ ದಾನಾನಿ ಶುಭಲಕ್ಷಣೇ ॥೨೩॥

ತೇ ಪುನರ್ಜನ್ಮನಿ ಶುಭೇ ಪ್ರಾಪ್ಯ ತಾನಿ ಫಲಾನ್ಯುತ ।
ಅಸಮರ್ಥಾಶ್ಚ ತಾನ್ ಭೋಕ್ತುಂ ವ್ಯಾಧಿತಾಸ್ತೇ ಭವಂತ್ಯುತ ॥೨೪॥

ಮಹೇಶ್ವರ– ಎಲೌ ಶುಭಲಕ್ಷಣವುಳ್ಳವಳೇ, ಕೆಲವರು ವ್ಯಾಧಿಗಳಿಂದ ಪೀಡಿತರಾಗಿ ತಮ್ಮ ಜೀವನದಲ್ಲೇ ಆಸೆಯನ್ನು ಕಳೆದುಕೊಂಡು, ಆಗ ದಾನಗಳನ್ನು ಮಾಡಲು ಪ್ರಾರಂಭಿಸುತ್ತಾರೆ. ಎಲೌ ಶುಭಳೇ, ಅವರು ಇನ್ನೊಂದು ಜನ್ಮದಲ್ಲಿ ಆ ದಾನದ ಫಲವನ್ನು ಪಡೆದು ವ್ಯಾಧಿಗ್ರಸ್ತರಾಗಿ ಭೋಗಿಸಲು ಅಸಮರ್ಥರಾಗುತ್ತಾರೆ.

ಉಮಾ

ಭಗವನ್ ದೇವದೇವೇಶ ಮಾನುಷೇಷ್ವೇವ ಕೇಚನ ।
ರೂಪಯುಕ್ತಾಃ ಪ್ರದೃಶ್ಯಂತೇ ಶುಭಾಂಗಾ ಪ್ರಿಯದರ್ಶನಾಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨೫॥

ಉಮಾ– ಭಗವಂತನೇ, ದೇವದೇವೇಶನೇ, ಮನುಷ್ಯರಲ್ಲಿ ಕೆಲವರು ಒಳ್ಳೆಯ ರೂಪದಿಂದ ಕೂಡಿ ನೋಡಲು ಮನೋಹರರಾಗಿರುತ್ತಾರೆ. ಯಾವ ಕರ್ಮ ವಿಪಾಕದಿಂದ ಹೀಗಾಗುತ್ತದೆ ಎಂದು ಹೇಳಬೇಕು.

ಮಹೇಶ್ವರಃ

ಹಂತ ತೇ ಕಥಯಿಷ್ಯಾಮಿ ಶೃಣು ತತ್ತ್ವಂ ಸಮಾಹಿತಾ ॥೨೬॥

ಮಹೇಶ್ವರ– ಸಂತೋಷ. ಅದನ್ನು ನಿನಗೆ ಹೇಳುವೆನು. ಸಮಾಧಾನದಿಂದ ಕೇಳು.

ಯೇ ಪುರಾ ಮನುಜಾ ದೇವಿ ಲಜ್ಜಾಯುಕ್ತಾಃ ಪ್ರಿಯಂವದಾಃ ।
ಶಕ್ತಾಃ ಸುಮಧುರಾ ನಿತ್ಯಂ ಭೂತ್ವಾ ಚೈವ ಸ್ವಭಾವತಃ ॥೨೭॥

ಅಮಾಂಸಭೋಜಿನಶ್ಚೈವ ಸದಾ ಪ್ರಾಣಿದಯಾಯುತಾಃ ।
ಪ್ರತಿಕರ್ಮಪ್ರದಾ ವಾಪಿ ವಸ್ತ್ರದಾ ಧರ್ಮಕಾರಣಾತ್ ।
ಭೂಮಿಶುದ್ಧಿಕರಾ ವಾऽಪಿ ಕಾರಣಾದಗ್ನಿಪೂಜಕಾಃ ॥೨೮॥

ಏವಂ ಯುಕ್ತಸಮಾಚಾರಾಃ ಪುನರ್ಜನ್ಮನಿ ತೇ ನರಾಃ ।
ರೂಪೇಣ ಸ್ಪೃಹಣೀಯಾಸ್ತು ಭವಂತ್ಯೇವ ನ ಸಂಶಯಃ ॥೨೯॥

ಎಲೌ ದೇವಿಯೇ, ಯಾವ ಮನುಷ್ಯರು ಹಿಂದೆ ನಾಚಿಕೆಯಿಂದ ಕೂಡಿ, ಪ್ರಿಯವನ್ನೇ ಮಾತನಾಡುವವರಾಗಿ, ಸಮರ್ಥರಾಗಿ, ಮಧುರಸ್ವಭಾವವನ್ನು ಹೊಂದಿದವರಾಗಿ, ಮಾಂಸಭೋಜನವನ್ನು ಮಾಡದೆ ಪ್ರಾಣಿದಯೆಯಿಂದ ಕೂಡಿದವರಾಗಿರುತ್ತಾರೆಯೋ, ಧರ್ಮದ ನಿಮಿತ್ತದಿಂದ ಕೇಳಿದವರಿಗೆ ಕರ್ಮವನ್ನು ಮಾಡುತ್ತಾರೆಯೋ ಮತ್ತು ವಸ್ತ್ರಗಳನ್ನು ನೀಡುತ್ತಾರೆಯೋ ಅಥವಾ ಭೂಶುದ್ಧಿಯನ್ನು ಮಾಡುತ್ತಾರೆಯೋ ಅಥವಾ ಅಗ್ನಿಪೂಜೆಯನ್ನು ಮಾಡುತ್ತಾರೆಯೋ ಅಂತಹ ಒಳ್ಳೆಯ ನಡತೆಯುಳ್ಳ ಮನುಷ್ಯರು ಇನ್ನೊಂದು ಜನ್ಮದಲ್ಲಿ ಒಳ್ಳೆಯ ರೂಪವನ್ನು ಹೊಂದಿ ಎಲ್ಲರಿಂದಲೂ ಅಪೇಕ್ಷಿಸಲ್ಪಡುವುದರಲ್ಲಿ ಸಂಶಯವಿಲ್ಲ.

ಉಮಾ

ವಿರೂಪಾಶ್ಚ ಪ್ರದೃಶ್ಯಂತೇ ಮಾನುಷೇಷ್ವೇವ ಕೇಚನ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೦॥

ಉಮಾ– ಮನುಷ್ಯರಲ್ಲಿ ಕೆಲವರು ಕುರೂಪಿಗಳಾಗಿ ಕಾಣುತ್ತಾರೆ. ಯಾವ ಕರ್ಮ ವಿಪಾಕದಿಂದ ಹೀಗಾಗುತ್ತದೆ ಎಂದು ಹೇಳಬೇಕು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ಕಲ್ಯಾಣಿ ಕಾರಣಮ್ ॥೩೧॥

ಮಹೇಶ್ವರ– ಕಲ್ಯಾಣಿಯೇ, ಅದನ್ನು ಹೇಳುವೆನು. ಕಾರಣವನ್ನು ಕೇಳು.

ರೂಪಯೋಗಾತ್ ಪುರಾ ಮರ್ತ್ಯಾ ದರ್ಪಾಹಂಕಾರಸಂಯುತಾಃ ।
ವಿರೂಪಹಾಸಕಾಶ್ಚೈವ ಸ್ತುತಿನಿಂದಾದಿಭಿರ್ಭೃಶಮ್ ॥೩೨॥

ಪರೋಪತಾಪಿನಶ್ಚೈವ ಮಾಂಸಾದಾಶ್ಚ ತಥೈವ ಚ ।
ಅಭ್ಯಸೂಯಾಪರಾಶ್ಚೈವ ಅಶುದ್ಧಾಶ್ಚ ತಥೈವ ಚ ॥೩೩॥

ಏವಂ ಯುಕ್ತಸಮಾಚಾರಾ ಯಮಲೋಕೇ ಸುದಂಡಿತಾಃ ।
ಕಥಂಚಿತ್ ಪ್ರಾಪ್ಯ ಮಾನುಷ್ಯಂ ತತ್ರ ತೇ ರೂಪವರ್ಜಿತಾಃ ।
ವಿರೂಪಾಃ ಸಂಭವಂತ್ಯೇವ ನಾಸ್ತಿ ತತ್ರ ವಿಚಾರಣಾ ॥೩೪॥

ಯಾವ ಮನುಷ್ಯರು ಹಿಂದೆ ಒಳ್ಳೆಯ ರೂಪವನ್ನು ಹೊಂದಿ ದರ್ಪ, ಅಹಂಕಾರದಿಂದ ಕೂಡಿ, ಕುರೂಪಿಗಳನ್ನು ಸ್ತುತಿ-ನಿಂದಾದಿಗಳಿಂದ ಅಪಹಾಸ್ಯ ಮಾಡುತ್ತಾರೆಯೋ, ಪರೋಪದ್ರವವನ್ನು ಉಂಟು ಮಾಡುತ್ತಾರೆಯೋ, ಮಾಂಸ ಭಕ್ಷಕರೂ, ಅಸೂಯಾಪರರೂ ಮತ್ತು ಅಶುದ್ಧರೂ ಆಗಿದ್ದಾರೆಯೋ ಅಂತಹ ಆಚಾರದಿಂದ ಕೂಡಿದವರು ಯಮಲೋಕದಲ್ಲಿ ಬಹಳ ಶಿಕ್ಷೆಯನ್ನು ಅನುಭವಿಸಿ, ಬಹಳ ಪ್ರಯಾಸದಿಂದ ಮನುಷ್ಯಜನ್ಮವನ್ನು ಪಡೆದು ಕುರೂಪಿಗಳಾಗುತ್ತಾರೆ. ಇದರಲ್ಲಿ ಬೇರೆ ವಿಚಾರವಿಲ್ಲ.

ಉಮಾ

ಭಗವನ್ ದೇವದೇವೇಶ ಕೇಚಿತ್ ಸೌಭಾಗ್ಯಸಂಯುತಾಃ ।
ರೂಪಭೋಗವಿಹೀನಾಶ್ಚ ದೃಶ್ಯಂತೇ ಪ್ರಮದಾಪ್ರಿಯಾಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೫॥

ಉಮಾ– ಭಗವಂತನೇ, ದೇವದೇವೇಶನೇ, ಕೆಲವರು ರೂಪ-ಭೋಗಗಳು ಇಲ್ಲದಿದ್ದರೂ ಸ್ತ್ರೀಯರಿಗೆ ಪ್ರಿಯರಾಗಿ ಕಂಡುಬರುತ್ತಾರೆ. ಯಾವ ಕರ್ಮ ವಿಪಾಕದಿಂದ ಹೀಗಾಗುತ್ತದೆ ಎಂದು ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಸೌಮ್ಯಶೀಲಾಃ ಪ್ರಿಯಂವದಾಃ ।
ಸ್ವದಾರೈರೇವ ಸಂತುಷ್ಟಾ ದಾರೇಷು ಸಮವೃತ್ತಯಃ ॥೩೬॥

ದಾಕ್ಷಿಣ್ಯೇನೈವ ವರ್ತಂತೇ ಪ್ರಮದಾಸ್ವಪ್ರಿಯಾಸ್ವಪಿ ।
ನ ತು ಪ್ರತ್ಯಾದಿಶಂತ್ಯೇವ ಸ್ತ್ರೀದೋಷಾನ್ ಗುಣಸಂಶ್ರಿತಾನ್ ॥೩೭॥

ಅನ್ನಪಾನೀಯದಾಃ ಕಾಲೇ ನೃಣಾಂ ಸ್ವಾದುಪ್ರದಾಶ್ಚ ಯೇ ।
ಸ್ವದಾರವರ್ತಿನಶ್ಚೈವ ಧೃತಿಮಂತೋ ನಿರತ್ಯಯಾಃ ॥೩೮॥

ಏವಂ ಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ।
ಮಾನುಷಾಸ್ತೇ ಭವಂತ್ಯೇವ ಸತತಂ ಸುಭಗಾ ಭೃಶಮ್ ।
ಅರ್ಥಾದೃತೇऽಪಿ ತೇ ದೇವಿ ಭವಂತಿ ಪ್ರಮದಾಪ್ರಿಯಾಃ ॥೩೯॥

ಮಹೇಶ್ವರ– ಎಲೌ ದೇವಿಯೇ, ಯಾರು ಹಿಂದೆ ಸೌಮ್ಯಸ್ವಭಾವವನ್ನು ಹೊಂದಿ ಪ್ರಿಯವಾದ ಮಾತುಗಳನ್ನು ಆಡಿದ್ದಾರೆಯೋ, ತಮ್ಮ ಪತ್ನಿಯರಲ್ಲೇ ತೃಪ್ತರಾಗಿದ್ದಾರೆಯೋ, ಅನೇಕ ಪತ್ನಿಯರನ್ನು ಹೊಂದಿ ಎಲ್ಲರಲ್ಲಿಯೂ ಸಮವಾಗಿ ನಡೆದುಕೊಂಡಿರುತ್ತಾರೆಯೋ, ಅಪ್ರಿಯರಾದ ಸ್ತ್ರೀಯರಲ್ಲಿಯೂ ಸಹ ಸೌಜನ್ಯದಿಂದ ನಡೆದುಕೊಂಡಿದ್ದಾರೆಯೋ, ಗುಣಗಳ ಜೊತೆಯಲ್ಲಿರುವ ಸ್ತ್ರೀ ದೋಷಗಳನ್ನು ಯಾರು ಕೀರ್ತಿಸಿಲ್ಲವೋ, ಯೋಗ್ಯವಾದ ಕಾಲದಲ್ಲಿ ಮನುಷ್ಯರಿಗೆ ಅನ್ನ-ಪಾನಗಳನ್ನೂ, ಸಿಹಿ ಭಕ್ಷ್ಯಗಳನ್ನು ಕೊಟ್ಟಿದ್ದಾರೆಯೋ ಅಂತಹ ಧೈರ್ಯಶಾಲಿಗಳೂ, ಧರ್ಮವನ್ನು ಮೀರದವರೂ ಆದ ಸದಾಚಾರವನ್ನು ಹೊಂದಿದ ಮನುಷ್ಯರು ಎಲೌ ಶೋಭನೆಯೇ, ಇನ್ನೊಂದು ಜನ್ಮದಲ್ಲಿ ಮನುಷ್ಯರಾಗಿ ಜನಿಸಿ ನೋಡಲು ಬಹಳ ಸುಂದರರಾಗಿರುತ್ತಾರೆ. ಎಲೌ ದೇವಿಯೇ, ಅವರ ಬಳಿ ಧನವಿಲ್ಲದಿದ್ದರೂ ಅವರು ಸ್ತ್ರೀಯರಿಗೆ ಪ್ರಿಯರಾಗುತ್ತಾರೆ.

ಉಮಾ

ದುರ್ಭಗಾಃ ಸಂಪ್ರದೃಶ್ಯಂತೇ ಆಢ್ಯಾ ಭೋಗಯುತಾ ಅಪಿ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೪೦॥

ಉಮಾ– ಕೆಲವರು ಧನಾಢ್ಯರಾಗಿದ್ದರೂ, ಭೋಗಸಾಮಗ್ರಿಗಳಿಂದ ಕೂಡಿದ್ದರೂ ಕುರೂಪಿಗಳಾಗಿರುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುತ್ತದೆ ಎಂದು ಹೇಳಬೇಕು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ಸರ್ವಂ ಸಮಾಹಿತಾ ॥೪೧॥

ಮಹೇಶ್ವರ– ನಾನು ಅದನ್ನು ಹೇಳುವೆನು. ಎಲ್ಲವನ್ನೂ ಸಮಾಧಾನದಿಂದ ಕೇಳು.

ಯೇ ಪುರಾ ಮನುಜಾ ದೇವಿ ಸ್ವದಾರೇಷ್ವನಪೇಕ್ಷಯಾ ।
ಯಥೇಷ್ಟವೃತ್ತಯಶ್ಚೈವ ನಿರ್ಲಜ್ಜಾ ವೀತಸಂಭ್ರಮಾಃ ॥೪೨॥

ಪರೇಷಾಂ ವಿಪ್ರಿಯಕರಾ ವಾಙ್ಮನಃಕಾಯಕರ್ಮಭಿಃ ।
ನಿರಾಶ್ರಯಾ ನಿರನ್ನಾದ್ಯಾಃ ಸ್ತ್ರೀಣಾಂ ಹೃದಯಕೋಪನಾಃ ॥೪೩॥

ಏವಂ ಯುಕ್ತಸಮಾಚಾರಾಃ ಪುನರ್ಜನ್ಮನಿ ತೇ ನರಾಃ ।
ದುರ್ಭಗಾಸ್ತು ಭವಂತ್ಯೇವ ಸ್ತ್ರೀಣಾಂ ಹೃದಯವಿಪ್ರಿಯಾಃ ॥೪೪॥

ನಾಸ್ತಿ ತೇಷಾಂ ರತಿಸುಖಂ ಸ್ವದಾರೇಷ್ವಪಿ ಕಿಂಚನ ॥೪೫॥

ಮಹೇಶ್ವರ– ಎಲೌ ದೇವಿಯೇ, ಯಾವ ಮನುಷ್ಯರು ಹಿಂದೆ ತಮ್ಮ ಪತ್ನಿಯರನ್ನು ಅಪೇಕ್ಷಿಸದೆ ನಾಚಿಕೆಯನ್ನೂ, ಭಯವನ್ನೂ ಬಿಟ್ಟು ಸ್ವೇಚ್ಛಾಚಾರಿಗಳಾಗಿರುತ್ತಾರೆಯೋ, ಮನೋ-ವಾಕ್-ಕಾಯಕರ್ಮಗಳಿಂದ ಇನ್ನೊಬ್ಬರಿಗೆ ಅಪ್ರಿಯವನ್ನು ಮಾಡಿರುತ್ತಾರೆಯೋ, ಯಾರಿಗೂ ಆಶ್ರಯವನ್ನು ನೀಡದೆ, ಅನ್ನವನ್ನು ದಾನಮಾಡದೆ, ಸ್ತ್ರೀಯರಿಗೆ ಕೋಪವನ್ನುಂಟು ಮಾಡಿದ್ದಾರೆಯೋ ಅಂತಹ ಆಚಾರದಿಂದ ಕೂಡಿದವರು ಇನ್ನೊಂದು ಜನ್ಮದಲ್ಲಿ ಕುರೂಪಿಗಳೂ, ಸ್ತ್ರೀಯರಿಗೆ ಅಪ್ರಿಯರೂ ಆಗಿರುತ್ತಾರೆ. ಅವರಿಗೆ ತಮ್ಮ ಪತ್ನಿಯಲ್ಲಿಯೂ ಸಹ ರತಿಸುಖವಿರುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಮಾನುಷಾಣಾಂ ತ್ರೈವಿಧ್ಯನಿಮಿತ್ತಕಥನಂ ನಾಮ ದ್ವ್ಯಧಿಕದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಮೂರನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಮನುಷ್ಯರ ವೈವಿಧ್ಯಕ್ಕೆ ನಿಮಿತ್ತಕಥನ.

ಉಮಾ

ಭಗವನ್ ದೇವದೇವೇಶ ಮಾನುಷೇಷ್ವೇವ ಕೇಚನ ।
ಜ್ಞಾನವಿಜ್ಞಾನಸಂಪನ್ನಾ ಬುದ್ಧಿಮಂತೋ ವಿಚಕ್ಷಣಾಃ ॥೧॥

ಉಮಾ– ಭಗವಂತನೇ, ದೇವದೇವೇಶನೇ, ಮನುಷ್ಯರಲ್ಲೇ ಕೆಲವರು ಜ್ಞಾನ-ವಿಜ್ಞಾನಸಂಪನ್ನರಾಗಿ, ಬುದ್ಧಿವಂತರಾಗಿಯೂ, ದಕ್ಷರಾಗಿಯೂ ಕಾಣುತ್ತಾರೆ.

ದುರ್ಗತಾಸ್ತು ಪ್ರದೃಶ್ಯಂತೇ ಯತಮಾನಾ ಯಥಾವಿಧಿ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨॥

ಇನ್ನು ಕೆಲವರು ಸರಿಯಾದ ಪ್ರಯತ್ನವನ್ನು ಮಾಡಿದರೂ ದುರ್ಗತಿಯನ್ನು ಹೊಂದಿರುವುದು ಕಂಡುಬರುತ್ತದೆ. ಯಾವ ಕರ್ಮವಿಪಾಕದಿಂದ ಹೀಗಾಗುವುದು ಎಂದು ಹೇಳಬೇಕು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ಕಲ್ಯಾಣಿ ಕಾರಣಮ್ ॥೩॥

ಮಹೇಶ್ವರ– ಕಲ್ಯಾಣಿಯೇ, ಅದನ್ನು ನಿನಗೆ ಹೇಳುವೆನು. ಅದಕ್ಕೆ ಕಾರಣವನ್ನು ಕೇಳು.

ಯೇ ಪುರಾ ಮನುಜಾ ದೇವಿ ಶ್ರುತವಂತೋऽಪಿ ಕೇವಲಮ್ ।
ನಿರಾಶ್ರಯಾ ನಿರನ್ನಾದ್ಯಾ ಭೃಶಮಾತ್ಮಪರಾಯಣಾಃ ॥೪॥

ತೇ ಪುನರ್ಜನ್ಮನಿ ಶುಭೇ ಜ್ಞಾನಬುದ್ಧಿಯುತಾ ಅಪಿ ।
ನಿಷ್ಕಿಂಚನಾ ಭವಂತ್ಯೇವ ಅನುಪ್ತಂ ಹಿ ನ ರೋಹತಿ ॥೫॥

ಎಲೌ ದೇವಿಯೇ, ಯಾರು ಹಿಂದೆ ವಿದ್ಯೆಯಿದ್ದರೂ ಇನ್ನೊಬ್ಬರಿಗೆ ಆಶ್ರಯವನ್ನು ಕೊಡದೆ, ಅನ್ನವನ್ನು ಕೊಡದೆ ಕೇವಲ ಸ್ವಾರ್ಥಿಗಳಾಗಿರುತ್ತಾರೆಯೋ ಅಂತಹವರು ಇನ್ನೊಂದು ಜನ್ಮದಲ್ಲಿ ಜ್ಞಾನಬುದ್ಧಿವಂತರಾದರೂ ದರಿದ್ರರಾಗಿರುತ್ತಾರೆ. ದೀಪ್ತವಿಲ್ಲದ ಬೀಜವು ಬೆಳೆಯುವುದಿಲ್ಲವಷ್ಟೆ?

ಉಮಾ

ಮೂರ್ಖಾ ಲೋಕೇ ಪ್ರದೃಶ್ಯಂತೇ ವೃಥಾಮೂಢಾ ವಿಚೇತಸಃ ।
ಜ್ಞಾನವಿಜ್ಞಾನರಹಿತಾಃ ಸಮೃದ್ಧಾಶ್ಚ ಸಮಂತತಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೬॥

ಉಮಾ– ಲೋಕದಲ್ಲಿ ಮೂರ್ಖರು, ಮೂಢರು, ಜ್ಞಾನ-ವಿಜ್ಞಾನಶೂನ್ಯರು ಸಮೃದ್ಧರಾಗಿರುವುದು ಕಂಡುಬರುತ್ತದೆ. ಯಾವ ಕರ್ಮವಿಪಾಕದಿಂದ ಹೀಗಾಗುತ್ತದೆ ಎಂದು ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಬಾಲಿಶಾ ಅಪಿ ಸರ್ವತಃ ।
ಸಮಾಚರಂತಿ ದಾನಾನಿ ದೀನಾನುಗ್ರಹಕಾರಣಾತ್ ॥೭॥

ಅಬುದ್ಧಿಪೂರ್ವಂ ವಾ ದಾನಂ ದದತ್ಯೇವ ಯತಸ್ತತಃ ।
ತೇ ಪುನರ್ಜನ್ಮನಿ ಶುಭೇ ಪ್ರಾಪ್ನುವಂತ್ಯೇವ ತತ್ತಥಾ ॥೮॥

ಪಂಡಿತೋಽಪಂಡಿತೋ ವಾಽಪಿ ಭುಂಕ್ತೇ ದಾನಫಲಂ ನರಃ ।
ಬುದ್ಧ್ಯಾಽನಪೇಕ್ಷಿತಂ ದಾನಂ ಸರ್ವಥಾ ತತ್ಫಲತ್ಯುತ ॥೯॥

ಮಹೇಶ್ವರ– ಎಲೌ ದೇವಿಯೇ, ಯಾರು ಹಿಂದೆ ಅಪಕ್ವ ಬುದ್ಧಿ ಇದ್ದರೂ ದೀನರಿಗೆ ಅನುಗ್ರಹವನ್ನು ಮಾಡಲು ಅಬುದ್ಧಿ ಪೂರ್ವಕವಾಗಿಯಾದರೂ ದಾನಗಳನ್ನು ಮಾಡಿದ್ದಾರೆಯೋ ಅವರು ಇನ್ನೊಂದು ಜನ್ಮದಲ್ಲಿ ಶುಭವನ್ನು ಪಡೆದೇ ಪಡೆಯುತ್ತಾರೆ. ಪಂಡಿತನಾಗಲಿ ಅಥವಾ ಆಗದಿರಲಿ ದಾನಫಲವನ್ನು ಭೋಗಿಸುತ್ತಾನೆ. ದಾನಫಲವು ದೊರೆಯಲು ಬುದ್ಧಿಯ ಅಪೇಕ್ಷೆ ಇರುವುದಿಲ್ಲ. ಕೊಟ್ಟ ದಾನವು ಫಲವನ್ನು ಕೊಟ್ಟೇ ಕೊಡುತ್ತದೆ.

ಉಮಾ

ಭಗವನ್ ದೇವದೇವೇಶ ಮಾನುಷೇಷ್ವೇವ ಕೇಚನ ।
ಮೇಧಾವಿನಃ ಶ್ರುತಧರಾ ಭವಂತಿ ವಿಶದಾಕ್ಷರಾಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೧೦॥

ಉಮಾ– ಭಗವಂತನೇ, ದೇವದೇವೇಶನೇ, ಮನುಷ್ಯರಲ್ಲೇ ಕೆಲವರು ವಿದ್ಯಾಸಂಪನ್ನರೂ ಮೇಧಾವಿಗಳೂ ಸ್ಪಷ್ಟವಾಗಿ ಮಾತನಾಡುವವರೂ ಆಗಿರುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುವುದು ಎಂದು ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಗುರುಶುಶ್ರೂಷಕಾ ಭೃಶಮ್ ।
ಜ್ಞಾನಾರ್ಥಂ ತೇ ತು ಸಂಗೃಹ್ಯ ತೀರ್ಥತೋ ವಿಧಿಪೂರ್ವಕಮ್ ॥೧೧॥

ವಿಧಿನೈವ ಪರಾಂಶ್ಚೈವ ಗ್ರಾಹಯಂತಿ ಚ ನಾನ್ಯಥಾ ।
ಅಶ್ಲಾಘಮಾನಾ ಜ್ಞಾನೇನ ಪ್ರಶಾಂತಾ ಯತವಾಚಕಾಃ ।
ವಿದ್ಯಾಸ್ಥಾನಾನಿ ಯೇ ಲೋಕೇ ಸ್ಥಾಪಯಂತಿ ಚ ಯತ್ನತಃ ॥೧೨॥

ತಾದೃಶಾ ಮರಣಂ ಪ್ರಾಪ್ತಾಃ ಪುನರ್ಜನ್ಮನಿ ಶೋಭನೇ ।
ಮೇಧಾವಿನಃ ಶ್ರುತಧರಾ ಭವಂತಿ ವಿಶದಾಕ್ಷರಾಃ ॥೧೩॥

ಮಹೇಶ್ವರ– ಎಲೌ ದೇವಿಯೇ, ಯಾವ ಮನುಷ್ಯರು ಹಿಂದೆ ಜ್ಞಾನಾರ್ಥವಾಗಿ ಯೋಗ್ಯವಾದ ಗುರುಗಳ ಸೇವೆಯನ್ನು ಶಾಸ್ತ್ರೋಕ್ತ ರೀತಿಯಲ್ಲಿ ಮಾಡಿದ್ದಾರೆಯೋ ಶಾಸ್ತ್ರೋಕ್ತ ರೀತಿಯಲ್ಲಿಯೇ ಇನ್ನೊಬ್ಬರಿಗೆ ಉಪದೇಶವನ್ನು ಮಾಡಿದ್ದಾರೆಯೋ, ತಮ್ಮನ್ನು ತಾವು ಹೊಗಳಿಕೊಳ್ಳದೆ ಜ್ಞಾನದಿಂದ ಶಾಂತರೂ, ಮಿತಭಾಷಿಗಳೂ ಆಗಿದ್ದಾರೆಯೋ, ಯಾರು ಪ್ರಯತ್ನಪೂರ್ವಕವಾಗಿ ವಿದ್ಯಾಪ್ರಭೇದಗಳನ್ನು ಸಾಧಿಸಿದ್ದಾರೆಯೋ ಎಲೌ ಶೋಭನೆಯೇ, ಅಂತಹವರು ಮರಣವನ್ನು ಹೊಂದಿದ ಮೇಲೆ ಜನ್ಮಾಂತರದಲ್ಲಿ ಮೇಧಾವಿಗಳೂ, ವಿದ್ಯಾಸಂಪನ್ನರೂ, ಒಳ್ಳೆಯ ಪ್ರವಚನಕಾರರೂ ಆಗುತ್ತಾರೆ.

ಉಮಾ

ಅಪರೇ ಮಾನುಷಾ ದೇವ ಯತಂತೋಽಪಿ ಯತಸ್ತತಃ ।
ಬಹಿಷ್ಕೃತಾಃ ಪ್ರದೃಶ್ಯಂತೇ ಶ್ರುತವಿಜ್ಞಾನಬುದ್ಧಿಭಿಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೧೪॥

ಉಮಾ– ಎಲೈ ದೇವನೇ, ಇನ್ನು ಕೆಲವು ಮನುಷ್ಯರು ಪ್ರಯತ್ನಪಟ್ಟರೂ ಜ್ಞಾನ-ವಿಜ್ಞಾನ ಬುದ್ಧಿಗಳಿಂದ ರಹಿತರಾಗಿರುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುವುದು ಎಂದು ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಜ್ಞಾನದರ್ಪಸಮನ್ವಿತಾಃ ।
ಶ್ಲಾಘಮಾನಾಶ್ಚ ತತ್‌ಪ್ರಾಪ್ಯ ಜ್ಞಾನಾಹಂಕಾರಮೋಹಿತಾಃ ॥೧೫॥

ತಪಂತಿ ಯೇ ಪರಾನ್ ನಿತ್ಯಂ ಜ್ಞಾನಾಧಿಕ್ಯೇನ ದರ್ಪಿತಾಃ ।
ಜ್ಞಾನಾದಸೂಯಾಂ ಕುರ್ವಂತಿ ನ ಸಹಂತ್ಯೇವ ಚಾಪರಾನ್ ॥೧೬॥

ತಾದೃಶಾ ಮರಣಂ ಪ್ರಾಪ್ತಾಃ ಪುನರ್ಜನ್ಮನಿ ಶೋಭನೇ ।
ಮಾನುಷ್ಯಂ ಸುಚಿರಾತ್‌ಪ್ರಾಪ್ಯ ತತ್ರ ಬೋಧವಿವರ್ಜಿತಾಃ ।
ಭವಂತಿ ಸತತಂ ದೇವಿ ವಿವರ್ಣವಚನಾಸ್ತಥಾ ॥೧೭॥

ಮಹೇಶ್ವರ– ಎಲೌ ದೇವಿಯೇ, ಯಾವ ಮನುಷ್ಯರು ಹಿಂದೆ ಜ್ಞಾನದಿಂದ ಅಹಂಕಾರವನ್ನು ಹೊಂದಿ, ಜ್ಞಾನ ಮತ್ತು ಅಹಂಕಾರದಿಂದ ಮೋಹಿತರಾಗಿ ತಮ್ಮನ್ನೇ ತಾವು ಹೊಗಳಿಕೊಳ್ಳುತ್ತಾ ಇನ್ನೊಬ್ಬರನ್ನು ತಾಪಪಡಿಸುತ್ತಾರೆಯೋ, ಇನ್ನೊಬ್ಬರ ಜ್ಞಾನವನ್ನು ನೋಡಿ ಸಹನೆಯನ್ನು ಹೊಂದದೆ ಅಸೂಯೆಯನ್ನು ಪಡುತ್ತಾರೆಯೋ, ಎಲೌ ಶೋಭನೆಯೇ, ಅಂತಹವರು ಜನ್ಮಾಂತರವನ್ನು ಹೊಂದಿ, ಅದರಲ್ಲೂ ಬಹಳ ಕಷ್ಟದಿಂದ ಬಹಳ ಕಾಲದ ಮೇಲೆ ಮನುಷ್ಯ ಜನ್ಮವನ್ನು ಹೊಂದಿ ಪ್ರಯತ್ನಪಟ್ಟರೂ ಹೀನ ಬುದ್ಧಿಯುಳ್ಳವರಾಗಿ ಜ್ಞಾನರಹಿತರಾಗಿ ಅಸ್ಪಷ್ಟವಾಗಿ ಮಾತನಾಡುವವರಾಗುತ್ತಾರೆ.

ಉಮಾ

ಭಗವನ್ ಮಾನುಷಾಃ ಕೇಚಿತ್ ಸರ್ವಕಲ್ಯಾಣಸಂಯುತಾಃ ।
ಪುತ್ರೈರ್ದಾರೈರ್ಗುಣಯುತೈರ್ದಾಸೀದಾಸಪರಿಚ್ಛದೈಃ ॥೧೮॥

ಪರಸ್ಪರರ್ದ್ಧಿಸಂಯುಕ್ತಾಃ ಸ್ಥಾನೈಶ್ವರ್ಯಪರಿಗ್ರಹೈಃ ।
ವ್ಯಾಧಿಹೀನಾ ನಿರಾಬಾಧಾ ರೂಪಾರೋಗ್ಯಬಲೈರ್ಯುತಾಃ ॥೧೯॥

ಧನಧಾನ್ಯೇನ ಸಂಪನ್ನಾಃ ಪ್ರಾಸಾದೈರ್ಯಾನವಾಹನೈಃ ।
ಸರ್ವೋಪಭೋಗಸಂಯುಕ್ತಾ ನಾನಾಚಿತ್ತೈರ್ಮನೋಹರೈಃ ॥೨೦॥

ಜ್ಞಾತಿಭಿಃ ಸಹ ಮೋದಂತೇ ಅವಿಘ್ನಂ ತು ದಿನೇದಿನೇ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨೧॥

ಉಮಾ– ಭಗವಂತನೇ, ಕೆಲವು ಮನುಷ್ಯರು ಸರ್ವಕಲ್ಯಾಣದಿಂದ ಯುಕ್ತರಾಗಿ ಗುಣವಂತರಾದ ಪತ್ನೀ-ಪುತ್ರರಿಂದಲೂ, ದಾಸೀ-ದಾಸರಿಂದಲೂ ಸಾಮಗ್ರಿಗಳಿಂದಲೂ ಯುಕ್ತರಾಗಿ ಸಮೃದ್ಧಿಯನ್ನೂ, ಸ್ಥಾನ-ಐಶ್ವರ್ಯ ಮತ್ತು ಸಾಮಗ್ರಿಗಳಿಂದ ಸಮೃದ್ಧಿಯನ್ನೂ ಹೊಂದಿ ವ್ಯಾಧಿಹೀನರಾಗಿ ಯಾರ ಬಾಧೆಯೂ ಇಲ್ಲದೆ ರೂಪ, ಆರೋಗ್ಯ ಮತ್ತು ಬಲಗಳನ್ನು ಹೊಂದಿರುತ್ತಾರೆ. ಧನ-ಧಾನ್ಯಗಳಿಂದಲೂ ಪ್ರಾಸಾದ, ಯಾನ ಮತ್ತು ವಾಹನಗಳಿಂದಲೂ, ವಿಚಿತ್ರವಾದ ಮತ್ತು ಮನೋಹರವಾದ ನಾನಾ ಭೋಗಗಳಿಂದಲೂ ಕೂಡಿರುತ್ತಾರೆ. ದಿನದಿನವೂ ಬಂಧುಗಳ ಜೊತೆಯಲ್ಲಿ ಸಂತೋಷ ಪಡುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುವುದು ಎಂದು ಹೇಳಬೇಕು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ಸರ್ವಂ ಸಮಾಹಿತಾ ॥೨೨॥

ಮಹೇಶ್ವರ– ಅದನ್ನು ನಾನು ಹೇಳುವೆನು, ಸಮಾಧಾನದಿಂದ ಕೇಳು.

ಯೇ ಪುರಾ ಮನುಜಾ ದೇವಿ ಆಢ್ಯಾ ವಾ ಇತರೇऽಪಿ ವಾ ।
ಶ್ರುತವೃತ್ತಸಮಾಯುಕ್ತಾ ದಾನಧರ್ಮರತಾಶ್ಚ ಯೇ ॥೨೩॥

ಪರೇಂಗಿತಪರಾ ನಿತ್ಯಂ ದಾತವ್ಯಮಿತಿ ನಿಶ್ಚಿತಾಃ ।
ಸತ್ಯಸಂಧಾಃ ಕ್ಷಮಾಶೀಲಾ ಲೋಭಮೋಹವಿವರ್ಜಿತಾಃ ॥೨೪॥

ಎಲೌ ದೇವಿಯೇ, ಯಾರು ಹಿಂದೆ ಧನಾಢ್ಯರಾಗಲಿ, ಆಗದಿರಲಿ ವಿದ್ಯಾ-ಶೀಲಗಳಿಂದ ಸಂಪನ್ನರಾಗಿ, ದಾನ-ಧರ್ಮಗಳಲ್ಲಿ ರತರಾಗಿ, ಇನ್ನೊಬ್ಬರ ಇಂಗಿತವನ್ನು ತಿಳಿದು ದಾನವನ್ನು ಮಾಡಲೇಬೇಕೆಂದು ನಿಶ್ಚಯಮಾಡಿ, ಸತ್ಯಸಂಧರಾಗಿ, ಕ್ಷಮಾಶೀಲರಾಗಿ, ಲೋಭ-ಮೋಹರಹಿತರಾಗಿರುತ್ತಾರೆಯೋ;

ದಾತಾರಃ ಪಾತ್ರತೋ ದಾನಂ ವ್ರತೈರ್ನಿಯಮಸಂಯುತಾಃ ।
ಸ್ವದುಃಖಮಿವ ಸಂಸ್ಮೃತ್ಯ ಪರದುಃಖಂ ಮಹಾತ್ಮನಃ ।
ಸೌಮ್ಯಶೀಲಾಃ ಶುಭಾಚಾರಾ ದೇವಬ್ರಾಹ್ಮಣಪೂಜಕಾಃ ॥೨೫॥

ಏವಂ ಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ।
ದಿವಿ ವಾ ಭುವಿ ವಾ ದೇವಿ ಜಾಯಂತೇ ಕರ್ಮಭೋಗಿನಃ ॥೨೬॥

ವ್ರತ-ನಿಯಮಗಳಿಂದ ಕೂಡಿ ಸತ್ಪಾತ್ರರಿಗೆ ದಾನವನ್ನು ಮಾಡುತ್ತಾರೆಯೋ, ಮಹಾತ್ಮರಾದ ಯಾರು ಇನ್ನೊಬ್ಬರ ದುಃಖವನ್ನು ತಮ್ಮ ದುಃಖವೆಂದು ನೋಡುತ್ತಾರೆಯೋ ಅಂತಹ ಸೌಮ್ಯ ನಡತೆಯಿಂದಲೂ, ಶುಭಾಚಾರದಿಂದಲೂ ಕೂಡಿ ದೇವ-ಬ್ರಾಹ್ಮಣರ ಪೂಜೆಯನ್ನು ಮಾಡುವವರು ಎಲೌ ಶೋಭನೆಯೇ, ಇನ್ನೊಂದು ಜನ್ಮದಲ್ಲಿ ಸ್ವರ್ಗದಲ್ಲಾಗಲೀ, ಭೂಮಿಯಲ್ಲಾಗಲೀ ತಮ್ಮ ಕರ್ಮದ ಫಲವನ್ನು ಭೋಗಿಸುವವರಾಗಿ ಜನಿಸುತ್ತಾರೆ.

ಮಾನುಷೇಷ್ವಪಿ ಯೇ ಜಾತಾಸ್ತಾದೃಶಾಃ ಸಂಭವಂತಿ ತೇ ।
ಯಾದೃಶಾಸ್ತು ತಥಾ ಪ್ರೋಕ್ತಾಃ ಸರ್ವೇ ಕಲ್ಯಾಣಸಂಯುತಾಃ ॥೨೭॥

ರೂಪಂ ದ್ರವ್ಯಂ ಬಲಂ ಚಾಯುರ್ಭೋಗೈಶ್ವರ್ಯಂ ಕುಲಂ ಶ್ರುತಮ್ ।
ಇತ್ಯೇತತ್ಸರ್ವಸಾದ್ಗುಣ್ಯಂ ದಾನಾದ್ ಭವತಿ ನಾನ್ಯಥಾ ।
ತಪೋದಾನಮಯಂ ಸರ್ವಮಿತಿ ವಿದ್ಧಿ ಶುಭಾನನೇ ॥೨೮॥

ಮನುಷ್ಯರಲ್ಲಿಯೂ ನೀನು ಹೇಳಿದ ಗುಣಗಳಿಂದ ಮತ್ತು ಕಲ್ಯಾಣಗಳಿಂದ ಕೂಡಿ ಜನ್ಮವನ್ನು ಪಡೆಯುತ್ತಾರೆ. ರೂಪ, ದ್ರವ್ಯ, ಬಲ, ಆಯುಸ್ಸು, ಭೋಗೈಶ್ವರ್ಯಗಳು, ಕುಲ, ವಿದ್ಯೆ, ಸರ್ವಸಾದ್ಗುಣ್ಯ - ಎಲ್ಲವೂ ದಾನದಿಂದಲೇ ಆಗುತ್ತವೆ. ಎಲೌ ಶುಭಾನನೆಯೇ, ತಪಸ್ಸು ಮತ್ತು ದಾನಗಳಿಂದ ಎಲ್ಲ ಫಲಗಳನ್ನು ಪಡೆಯಬಹುದೆಂದು ತಿಳಿ.

ಉಮಾ

ಅಥ ಕೇಚಿತ್ಪ್ರದೃಶ್ಯಂತೇ ಮಾನುಷೇಷ್ವೇವ ಮಾನುಷಾಃ ।
ದುರ್ಗತಾಃ ಕ್ಲೇಶಭೂಯಿಷ್ಠಾ ದಾನಭೋಗವಿವರ್ಜಿತಾಃ ॥೨೯॥

ಭಯೈಸ್ತ್ರಿಭಿಃ ಸಮಾಜುಷ್ಟಾ ವ್ಯಾಧಿಕ್ಷುದ್ಭಯಪೀಡಿತಾಃ ।
ದುಷ್ಕಳತ್ರಾಭಿಭೂತಾಶ್ಚ ಸತತಂ ವಿಘ್ನದರ್ಶಕಾಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೦॥

ಉಮಾ– ಇನ್ನು ಮನುಷ್ಯರಲ್ಲೇ ಕೆಲವರು ಬಹಳ ಕಷ್ಟವನ್ನು ಅನುಭವಿಸುತ್ತಾ, ದಾನ-ಭೋಗ ವರ್ಜಿತರಾಗಿ, ದುಃಸ್ಥಿತಿಯಲ್ಲಿದ್ದು ಆಧ್ಯಾತ್ಮಿಕಾದಿ ಮೂರು ಭಯಗಳಿಂದ ಕೂಡಿ, ವ್ಯಾಧಿಗಳಿಂದಲೂ, ಹಸಿವು ಮತ್ತು ಭಯಗಳಿಂದಲೂ ಪೀಡಿತರಾಗಿ ದುಷ್ಟ ಪತ್ನಿಯಿಂದ ಅವಮಾನಿತರಾಗಿ ಪ್ರತಿಯೊಂದು ಕೆಲಸದಲ್ಲಿಯೂ ಯಾವಾಗಲೂ ವಿಘ್ನವನ್ನೇ ಹೊಂದುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುವುದು ಎಂದು ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಆಸುರಂ ಭಾವಮಾಶ್ರಿತಾಃ ।
ಕ್ರೋಧಲೋಭರತಾ ನಿತ್ಯಂ ನಿರನ್ನಾದ್ಯಾಶ್ಚ ನಿಷ್ಕ್ರಿಯಾಃ ॥೩೧॥

ನಾಸ್ತಿಕಾಶ್ಚೈವ ಧೂರ್ತಾಶ್ಚ ಮೂರ್ಖಾಶ್ಚಾತ್ಮಪರಾಯಣಾಃ ।
ಪರೋಪತಾಪಿನೋ ದೇವಿ ಪ್ರಾಯಶಃ ಪ್ರಾಣಿನಿರ್ದಯಾಃ ॥೩೨॥

ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ।
ಕಥಂಚಿತ್ಪ್ರಾಪ್ಯ ಮಾನುಷ್ಯಂ ತತ್ರ ತೇ ದುಃಖಪೀಡಿತಾಃ ॥೩೩॥

ಮಹೇಶ್ವರ– ದೇವಿಯೇ, ಯಾವ ಮನುಷ್ಯರು ಹಿಂದೆ ಆಸುರಸ್ವಭಾವವನ್ನು ಹೊಂದಿ, ಕ್ರೋಧ-ಲೋಭದಲ್ಲಿ ರತರಾಗಿ, ಯಾರಿಗೂ ಅನ್ನದಾನವನ್ನು ಮಾಡದೆ, ಸತ್ಕರ್ಮಗಳನ್ನು ಮಾಡದೆ, ನಾಸ್ತಿಕರಾಗಿ ಧೂರ್ತರಾಗಿ, ಸ್ವಾರ್ಥಿಗಳಾಗಿ, ಮೂರ್ಖರಾಗಿ, ಪರೋಪದ್ರವವನ್ನು ಮಾಡುವವರಾಗಿ, ಹೆಚ್ಚಾಗಿ ಪ್ರಾಣಿದಯಾ ಶೂನ್ಯರಾಗಿ - ಇಂತಹ ದುರಾಚಾರಗಳಿಂದ ಕೂಡಿರುತ್ತಾರೆಯೋ ಎಲೌ ಶೋಭನೆಯೇ, ಅವರು ಇನ್ನೊಂದು ಜನ್ಮದಲ್ಲಿ ಬಹಳ ಕಷ್ಟದಿಂದ ಮಾನುಷ್ಯವನ್ನು ಪಡೆದು ಅಲ್ಲಿ ದುಃಖಪೀಡಿತರಾಗುತ್ತಾರೆ.

ಸರ್ವತಃ ಸಂಭವಂತ್ಯೇವ ಪೂರ್ವಮಾತ್ಮಪ್ರಮಾದತಃ ।
ಯಥಾ ತೇ ಪೂರ್ವಕಥಿತಂ ತಯಾ ತೇ ಸಂಭವಂತ್ಯುತ ॥೩೪॥

ಪ್ರಮಾದದಿಂದ ಮಾಡಿದ ಎಲ್ಲವೂ ನಾನು ಹಿಂದೆ ಹೇಳಿದಂತೆ ಅವುಗಳ ಫಲವನ್ನು ಕೊಟ್ಟೇ ಕೊಡುತ್ತವೆ.

ಶುಭಾಶುಭಂ ಕೃತಂ ಕರ್ಮ ಸುಖದುಃಖಫಲೋದಯಮ್ ।
ಇತಿ ತೇ ಕಥಿತಂ ದೇವಿ ಕಿಂ ಭೂಯಃ ಶ್ರೋತುಮಿಚ್ಛಸಿ ॥೩೫॥

ಶುಭವಾದ ಕರ್ಮವು ಸುಖವನ್ನೂ, ಅಶುಭವಾದ ಕರ್ಮವು ದುಃಖರೂಪವಾದ ಫಲವನ್ನೂ ಕೊಟ್ಟೇ ಕೊಡುತ್ತದೆ. ಎಲೌ ದೇವಿಯೇ, ಇದನ್ನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಮಾನುಷವೈಚಿತ್ರ್ಯಕಥನಂ ನಾಮ
ತ್ರ್ಯಧಿಕದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ನಾಲ್ಕನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಮನುಷ್ಯರ ರೋಗಗಳಿಗೆ ನಿಮಿತ್ತಕಥನ.

ಉಮಾ

ಭಗವನ್ ದೇವದೇವೇಶ ಮಮ ಪ್ರೀತಿವಿವರ್ಧನ ।
ಜಾತ್ಯಂಧಾಶ್ಚೈವ ದೃಶ್ಯಂತೇ ಜಾತಾ ವಾ ನಷ್ಟಚಕ್ಷುಷಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೧॥

ಉಮಾ– ಭಗವಂತನೇ, ದೇವದೇವೇಶನೇ, ನನ್ನ ಸಂತೋಷವನ್ನು ಹೆಚ್ಚಿಸುವವನೇ, ಮನುಷ್ಯರಲ್ಲಿ ಕೆಲವರು ಹುಟ್ಟುಕುರುಡರೂ, ಇನ್ನು ಕೆಲವರು ಹುಟ್ಟಿದ ನಂತರ ಕುರುಡರೂ ಕಂಡುಬರುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುವುದು ಎಂದು ಹೇಳಬೇಕು.

ಮಹೇಶ್ವರಃ

ಹಂತ ತೇ ಕಥಯಿಷ್ಯಾಮಿ ಶೃಣು ಕಲ್ಯಾಣಿ ಕಾರಣಮ್ ॥೨॥

ಮಹೇಶ್ವರ– ಸಂತೋಷ. ಕಲ್ಯಾಣಿಯೇ, ನಾನು ಅದರ ಕಾರಣವನ್ನು ಹೇಳುವೆನು, ಕೇಳು.

ಯೇ ಪುರಾ ಕಾಮಕಾರೇಣ ಪರವೇಶ್ಮಸು ಲೋಲುಪಾಃ ।
ಪರಸ್ತ್ರಿಯೋಽಭಿವೀಕ್ಷಂತೇ ದುಷ್ಟೇನೈವ ಸ್ವಚಕ್ಷುಷಾ ॥೩॥

ಅಂಧೀಕುರ್ವಂತಿ ಯನ್ಮರ್ತ್ಯಾನ್ ಕ್ರೋಧಲೋಭಸಮನ್ವಿತಾಃ ।
ಲಕ್ಷಣಜ್ಞಾಶ್ಚ ರೂಪೇಷು ಅಯಥಾವತ್ ಪ್ರದರ್ಶಕಾಃ ॥೪॥

ಏವಂಯುಕ್ತಸಮಾಚಾರಾಃ ಕಾಲಧರ್ಮಗತಾಸ್ತು ತೇ ।
ದಂಡಿತಾ ಯಮದಂಡೇನ ನಿರಯಸ್ಥಾಶ್ಚಿರಂ ಪ್ರಿಯೇ ॥೫॥

ಯದಿ ಚೇನ್ಮಾನುಷಂ ಜನ್ಮ ಲಭೇರನ್ ತೇ ತಥಾಪಿ ವಾ ।
ಸ್ವಭಾವತೋ ವಾ ಜಾತಾ ವಾ ಅಂಧಾ ಏವ ಭವಂತಿ ತೇ ।
ಅಕ್ಷಿರೋಗಯುತಾ ವಾಽಪಿ ನಾಸ್ತಿ ತತ್ರ ವಿಚಾರಣಾ ॥೬॥

ಯಾರು ಹಿಂದೆ ಕಾಮಲೋಲುಪರಾಗಿ ಪರಗೃಹಗಳಲ್ಲಿ ದುಷ್ಪದೃಷ್ಟಿಯಿಂದ ಸ್ತ್ರೀಯರನ್ನು ನೋಡುತ್ತಾರೆಯೋ, ಕ್ರೋಧ-ಲೋಭಯುಕ್ತರಾಗಿ ಮನುಷ್ಯರನ್ನು ಕುರುಡರನ್ನಾಗಿ ಮಾಡುತ್ತಾರೆಯೋ, ಲಕ್ಷಣಗಳನ್ನು ತಿಳಿದರೂ ಅವುಗಳನ್ನು ವಿಪರೀತವಾಗಿ ತೋರಿಸುತ್ತಾರೆಯೋ ಅಂತಹ ಆಚಾರವುಳ್ಳವರು ಮರಣವನ್ನು ಹೊಂದಿ ನರಕದಲ್ಲಿ ಬಹುಕಾಲ ಯಮದೇವರಿಂದ ಶಿಕ್ಷೆಯನ್ನು ಪಡೆಯುತ್ತಾರೆ. ಎಲೌ ಪ್ರಿಯೆಯೇ, ಅವರಿಗೆ ಪುನಃ ಮನುಷ್ಯ ಜನ್ಮ ಬಂದರೂ ಅವರು ಹುಟ್ಟುಕುರುಡರಾಗಿ ಅಥವಾ ಹುಟ್ಟಿದ ಮೇಲೆ ಕುರುಡರಾಗಿ ಅಥವಾ ನೇತ್ರರೋಗಿಗಳಾಗಿ ಜನಿಸುತ್ತಾರೆ. ಇದರಲ್ಲಿ ಸಂಶಯವಿಲ್ಲ.

ಉಮಾ

ಮುಖರೋಗಯುತಾಃ ಕೇಚಿದ್ ದೃಶ್ಯಂತೇ ಸತತಂ ನರಾಃ ।
ದಂತಕಂಠಕಪೋಲಸ್ಥೈರ್ವ್ಯಾಧಿಭಿರ್ಬಹುಪೀಡಿತಾಃ ॥೭॥

ಆದಿಪ್ರಭೃತಿ ಮರ್ತ್ಯಾ ವಾ ಜಾತಾ ವಾಽಪ್ಯಥ ಕಾರಣಾತ್ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೮॥

ಉಮಾ– ಕೆಲವು ಮನುಷ್ಯರು ಮುಖರೋಗದಿಂದಲೂ, ದಂತ-ಕಂಠ-ಕಪಾಲಗಳ ರೋಗದಿಂದಲೂ ಬಹಳವಾಗಿ ಪೀಡಿಸಲ್ಪಡುತ್ತಾರೆ. ಕೆಲವರು ಹುಟ್ಟಿದಾಗಿನಿಂದಲೂ, ಇನ್ನು ಕೆಲವರು ಹುಟ್ಟಿದ ನಂತರವೂ ಇಂತಹ ರೋಗಗಳಿಂದ ಪೀಡಿಸಲ್ಪಡುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುವುದು ಎಂದು ಹೇಳಬೇಕು.

ಮಹೇಶ್ವರಃ

ಹಂತ ತೇ ಕಥಯಿಷ್ಯಾಮಿ ಶೃಣು ದೇವಿ ಸಮಾಹಿತಾ ॥೯॥

ಮಹೇಶ್ವರ– ದೇವಿಯೇ, ಸಂತೋಷ. ಹೇಳುವೆನು ಸಮಾಧಾನದಿಂದ ಕೇಳು.

ಕುವಕ್ತಾರಸ್ತು ಯೇ ದೇವಿ ಜಿಹ್ವಯಾ ಕಟುಕಂ ಭೃಶಮ್ ।
ಅಸತ್ಯಂ ಪರುಷಂ ಘೋರಂ ಗುರೂನ್ ಪ್ರತಿ ಪರಾನ್ ಪ್ರತಿ ॥೧೦॥

ಜಿಹ್ವಾಬಾಧಾಂ ತದಾऽನ್ಯೇಷಾಂ ಕುರ್ವತೇ ಕೋಪಕಾರಣಾತ್ ।
ಪ್ರಾಯಶೋऽನೃತಭೂಯಿಷ್ಠಾ ನರಾಃ ಕಾರ್ಯವಶೇನ ವಾ ।
ತೇಷಾಂ ಜಿಹ್ವಾಪ್ರದೇಶಸ್ಥಾ ವ್ಯಾಧಯಃ ಸಂಭವಂತಿ ತೇ ॥೧೧॥

ಯಾರು ಹಿಂದೆ ಕೆಟ್ಟ ಮಾತುಗಳನ್ನು ಆಡಿರುತ್ತಾರೆಯೋ, ಗುರುಗಳನ್ನು ಮತ್ತು ಪರರನ್ನು ಕುರಿತು ಅಸತ್ಯವೂ, ಕ್ರೂರವೂ, ಘೋರವೂ, ತೀಕ್ಷ್ಣವೂ ಆದ ಮಾತುಗಳನ್ನು ಆಡಿರುತ್ತಾರೆಯೋ, ತಮ್ಮ ಕೋಪದಿಂದ ಇನ್ನೊಬ್ಬರ ನಾಲಿಗೆಗೆ ಬಾಧೆಯನ್ನು ಉಂಟುಮಾಡಿರುತ್ತಾರೆಯೋ ಅಂತಹ ಹೆಚ್ಚಾಗಿ ಸ್ವತಃ ಸುಳ್ಳನ್ನು ಮಾತನಾಡುವ ಅಥವಾ ಕಾರ್ಯವಶದಿಂದ ಸುಳ್ಳನ್ನು ಮಾತನಾಡುವ ಜನರು ನಾಲಿಗೆಯ ರೋಗಗಳನ್ನು ಹೊಂದುತ್ತಾರೆ.

ಕುಶ್ರೋತಾರಸ್ತು ಯೇ ಚಾರ್ಯಾನ್ ಪರೇಷಾಂ ಕರ್ಣನಾಶಕಾಃ ।
ಕರ್ಣರೋಗಾನ್ ಬಹುವಿಧಾಲ್ಲಭಂತೇ ತೇ ಪುನರ್ಭವೇ ॥೧೨॥

ದಂತರೋಗಶಿರೋರೋಗಕರ್ಣರೋಗಾಸ್ತಥೈವ ಚ ।
ಅನ್ಯೇ ದುಃಖಾಶ್ರಿತಾ ದೋಷಾಃ ಸರ್ವೇ ಚಾತ್ಮಕೃತಂ ಫಲಮ್ ॥೧೩॥

ಯಾರು ಹಿರಿಯರ ಮಾತನ್ನು ಕೇಳುವುದಿಲ್ಲವೋ, ಇನ್ನೊಬ್ಬರ ಶ್ರೋತ್ರವನ್ನು ನಾಶ ಮಾಡುತ್ತಾರೆಯೋ ಅಂತಹವರು ಮುಂದಿನ ಜನ್ಮದಲ್ಲಿ ಬಹುವಿಧವಾದ ಕಿವಿಯ

ರೋಗವನ್ನು ಹೊಂದುತ್ತಾರೆ. ದಂತರೋಗ, ಶಿರೋರೋಗ, ಕರ್ಣರೋಗ, ದುಃಖವನ್ನು ಕೊಡುವ ಉಳಿದ ರೋಗಗಳು ಎಲ್ಲವೂ ತಾನು ಮಾಡಿದ ಕರ್ಮದ ಫಲವಾಗಿದೆ.

ಉಮಾ

ಪೀಡ್ಯಂತೇ ಸತತಂ ದೇವ ಮಾನುಷೇಷ್ವೇವ ಕೇಚನ ।
ಕುಕ್ಷಿಪಕ್ಷಾಶ್ರಿತೈರ್ದೋಷೈರ್ವ್ಯಾಧಿಭಿಶ್ಚೋದರಾಶ್ರಿತೈಃ ॥೧೪॥

ತೀಕ್ಷ್ಣಶೂಲೈಶ್ಚ ಪೀಡ್ಯಂತೇ ನರಾ ದುಃಖಪರಿಪ್ಲುತಾಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೧೫॥

ಉಮಾ– ಎಲೈ ದೇವನೇ, ಕೆಲವು ಮನುಷ್ಯರು ಹೊಟ್ಟೆಯ ನೋವಿನಿಂದ, ಪಕ್ಕೆಯ ನೋವಿನಿಂದ ಮತ್ತು ಹೊಟ್ಟೆಗೆ ಸಂಬಂಧಪಟ್ಟ ರೋಗಗಳಿಂದ ಪೀಡಿಸಲ್ಪಡುತ್ತಾರೆ. ತೀವ್ರವಾದ ವೇದನೆಯನ್ನು ಕೊಡುವ ಆ ರೋಗಗಳಿಂದ ದುಃಖದಿಂದ ಪೂರ್ಣರಾಗಿ ಪೀಡಿಸಲ್ಪಡುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುತ್ತದೆ ಎಂದು ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಕಾಮಕ್ರೋಧವಶಾ ಭೃಶಮ್ ।
ಆತ್ಮಾರ್ಥಮೇವ ಚಾಹಾರಂ ಭುಂಜಂತೇ ನಿರಪೇಕ್ಷಕಾಃ ॥೧೬॥

ಅಭಕ್ಷ್ಯಾಹಾರದಾಶ್ಚೈವ ವಿಶ್ವಸ್ತಾನಾಂ ವಿಷಪ್ರದಾಃ ।
ಅಭಕ್ಷ್ಯಭಕ್ಷದಾಶ್ಚೈವ ಶೌಚಮಂಗಲವರ್ಜಿತಾಃ ॥೧೭॥

ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ।
ಕಥಂಚಿತ್ ಪ್ರಾಪ್ಯ ಮಾನುಷ್ಯಂ ತತ್ರ ತೇ ವ್ಯಾಧಿಪೀಡಿತಾಃ ॥೧೮॥

ತೈಸ್ತೈರ್ಬಹುವಿಧಾಕಾರೈರ್ವ್ಯಾಧಿಭಿರ್ದುಃಖಸಂಶ್ರಿತಾಃ ।
ಭವಂತ್ಯೇವಂ ತಥಾ ದೇವಿ ಯಥಾ ಯೇನ ಕೃತಂ ಪುರಾ ॥೧೯॥

ಮಹೇಶ್ವರ– ಎಲೌ ದೇವಿಯೇ, ಯಾವ ಮನುಷ್ಯರು ಹಿಂದೆ ಕಾಮ-ಕ್ರೋಧ ವಶರಾಗಿ ಇನ್ನೊಬ್ಬರನ್ನು ಅಪೇಕ್ಷಿಸದೆ ತಾವೊಬ್ಬರೇ ಆಹಾರವನ್ನು ಸ್ವೀಕರಿಸುತ್ತಾರೆಯೋ

ವಿಶ್ವಾಸ ಪಾತ್ರರಿಗೆ ಅಭಕ್ಷ್ಯವಾದ ಆಹಾರವನ್ನು ಅಥವಾ ವಿಷವನ್ನು ಕೊಡುತ್ತಾರೆಯೋ, ಶೌಚಾಚಾರ ವರ್ಜಿತರಾಗಿ ಅಭಕ್ಷ್ಯವಾದ ಭಕ್ಷವನ್ನು ಕೊಡುತ್ತಾರೆಯೋ, ಎಲೌ ಶೋಭನೆಯೇ, ಅಂತಹವರು ಮುಂದೆ ಹೇಗೋ ಮನುಷ್ಯಯೋನಿಯಲ್ಲಿ ಜನಿಸಿ ಅಂತಹ ಬಹುವಿಧವಾದ ವ್ಯಾಧಿಗಳಿಂದ ಪೀಡಿಸಲ್ಪಟ್ಟು, ಬಹಳ ದುಃಖವನ್ನು ಅನುಭವಿಸುತ್ತಾರೆ. ದೇವಿಯೇ, ಅವರು ಹಿಂದೆ ಇನ್ನೊಬ್ಬರಿಗೆ ಹೇಗೆ ಮಾಡಿದ್ದರೋ ಅದರಂತೆ ಅವರಿಗೂ ಆಗುತ್ತದೆ.

ಉಮಾ

ದೃಶ್ಯಂತೇ ಸತತಂ ದೇವ ವ್ಯಾಧಿಭಿರ್ಮೇಹನಾಶ್ರಿತೈಃ ।
ಪೀಡ್ಯಮಾನಾಸ್ತಥಾ ಮರ್ತ್ಯಾ ಅಶ್ಮರೀಶರ್ಕರಾದಿಭಿಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨೦॥

ಉಮಾ– ದೇವನೇ, ಕೆಲವು ಮನುಷ್ಯರು ಮೂತ್ರಾಂಗ ಸಂಬಂಧವಾದ ಅಶ್ಮರೀ (ಮೂತ್ರಕೋಶದ ಕಲ್ಲುಗಳು), ಶರ್ಕರಾ (ಮೂತ್ರಪಿಂಡದ ಕಲ್ಲುಗಳು) ಈ ರೋಗಗಳಿಂದ ಪೀಡಿಸಲ್ಪಡುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುತ್ತದೆ ಎಂದು ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಪರದಾರಪ್ರಧರ್ಷಕಾಃ ।
ತಿರ್ಯಗ್ಯೋನಿಷು ಧೂರ್ತಾ ವೈ ಮೈಥುನಾರ್ಥಂ ಚರಂತಿ ಚ ॥೨೧॥

ಕಾಮದೋಷೇಣ ಯೇ ಧೂರ್ತಾಃ ಕನ್ಯಾಸು ವಿಧವಾಸು ಚ ।
ಬಲಾತ್ಕಾರೇಣ ಗಚ್ಛಂತಿ ರೂಪದರ್ಪಸಮನ್ವಿತಾಃ ॥೨೨॥

ತಾದೃಶಾ ಮರಣಂ ಪ್ರಾಪ್ತಾಃ ಪುನರ್ಜನ್ಮನಿ ಶೋಭನೇ ।
ಯದಿ ಚೇನ್ಮಾನುಷಂ ಜನ್ಮ ಲಭೇರಂಸ್ತೇ ತಥಾವಿಧಾಃ ।
ತತ್ರ ಮೇಹನಜೈಘೋರ್ಯೈಃ ಪೀಡ್ಯಂತೇ ವ್ಯಾಧಿಭಿಃ ಪ್ರಿಯೇ ॥೨೩॥

ಮಹೇಶ್ವರ– ದೇವಿಯೇ, ಯಾವ ಮನುಷ್ಯರು ಹಿಂದೆ ಪರಸ್ತ್ರೀಯರನ್ನು ಬಲಾತ್ಕಾರ ಮಾಡಿರುತ್ತಾರೆಯೋ, ಯಾವ ಧೂರ್ತರು ಹಿಂದೆ ಪ್ರಾಣಿಗಳ ಜೊತೆಯಲ್ಲಿ

ಮೈಥುನವನ್ನು ಮಾಡಿರುತ್ತಾರೆಯೋ ಅಥವಾ ಧೂರ್ತರಾಗಿ ಕಾಮದೋಷದಿಂದ, ಬಲಾತ್ಕಾರದಿಂದ ಅಥವಾ ರೂಪದರ್ಪಸಮನ್ವಿತರಾಗಿ ಕನ್ಯೆಯರ ಮತ್ತು ವಿಧವೆಯರ ಸಂಗವನ್ನು ಮಾಡಿರುತ್ತಾರೆಯೋ ಅಂತಹವರು ಮರಣವನ್ನು ಹೊಂದಿ ಇನ್ನೊಂದು ಜನ್ಮದಲ್ಲಿ ಮಾನುಷ ಯೋನಿಯನ್ನು ಪಡೆದರೆ ಅಂತಹ ವಿಧವಾದ ಮೂತ್ರಾಂಗಗಳಿಗೆ ಸಂಬಂಧಿಸಿದ ಘೋರವಾದ ರೋಗಗಳಿಂದ ಪೀಡಿಸಲ್ಪಡುತ್ತಾರೆ.

ಉಮಾ

ಭಗವನ್ಮಾನುಷಾಃ ಕೇಚಿದ್ ದೃಶ್ಯಂತೇ ಶೋಷಿಣಃ ಕೃಶಾಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨೪॥

ಉಮಾ– ಭಗವಂತನೇ, ಕೆಲವು ಮನುಷ್ಯರು ದೇಹವು ಒಣಗಿ ಹೋಗಿ ಕೃಶರಾಗಿ ಕಾಣುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುತ್ತದೆ ಎಂದು ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಮಾಂಸಲುಬ್ಧಾಃ ಸುಲೋಲುಪಾಃ ।
ಆತ್ಮಾರ್ಥೇ ಸ್ವಾದುಗೃದ್ಧಾಶ್ಚ ಪರಭೋಗೋಪತಾಪಿನಃ ॥೨೫॥

ಅಭ್ಯಸೂಯಾಶ್ಚೋಪತಾಪಾಃ ಪರಭೋಗೇಷು ಯೇ ನರಾಃ ।
ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ॥೨೬॥

ಶೋಷವ್ಯಾಧಿಯುತಾಸ್ತತ್ರ ನರಾ ಧಮನಿಸಂತತಾಃ ।
ಭವಂತ್ಯೇವ ನರಾ ದೇವಿ ಪಾಪಕರ್ಮೋಪಭೋಗಿನಃ ॥೨೭॥

ಮಹೇಶ್ವರ– ಎಲೌ ದೇವಿಯೇ, ಯಾವ ಮನುಷ್ಯರು ಹಿಂದೆ ಮಾಂಸದಲ್ಲಿ ಬಹಳ ಆಸೆಯುಳ್ಳವರಾಗಿರುತ್ತಾರೆಯೋ, ಇನ್ನೊಬ್ಬರ ಭೋಗವನ್ನು ನಿಷೇಧಿಸಿ ತಾವೇ ಸ್ವಾದುಪದಾರ್ಥಗಳನ್ನು ಭುಂಜಿಸುತ್ತಾರೆಯೋ, ಪರಭೋಗಗಳನ್ನು ನೋಡಿ ಯಾರು ಅಸೂಯೆಯನ್ನು ಪಡುತ್ತಾರೆಯೋ ಅಂತಹವರು ಎಲೌ ಶೋಭನೆಯೇ, ಇನ್ನೊಂದು ಜನ್ಮದಲ್ಲಿ ಈ ಶೋಷಣವ್ಯಾಧಿಯನ್ನು ಹೊಂದಿ ನರಗಳು ಮತ್ತು ರಕ್ತನಾಳಗಳು ಎದ್ದು ಕಾಣುವಂತೆ ಇರುತ್ತಾರೆ. ಎಲೌ ದೇವಿಯೇ, ಮನುಷ್ಯರು ತಾವು ಮಾಡಿದ ಪಾಪ ಕರ್ಮದ ಫಲವನ್ನು ಭೋಗಿಸಿಯೇ ತೀರುತ್ತಾರೆ.

ಉಮಾ

ಭಗವನ್ಮಾನುಷಾಃ ಕೇಚಿತ್ ಕ್ಲಿಶ್ಯಂತೇ ಕುಷ್ಠರೋಗಿಣಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨೮॥

ಉಮಾ– ಭಗವಂತನೇ, ಕೆಲವು ಮನುಷ್ಯರು ಕುಷ್ಠರೋಗದಿಂದ ಕ್ಲೇಶ ಪಡುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುತ್ತದೆ ಎಂದು ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಪರೇಷಾಂ ರೂಪನಾಶನಾಃ ।
ಆಘಾತವಧಬಂಧೈಶ್ಚ ವೃಥಾದಂಡೇನ ಮೋಹಿತಾಃ ॥೨೯॥

ಇಷ್ಟನಾಶಕರಾ ಯೇ ತು ಅಪಥ್ಯಾಹಾರದಾ ನರಾಃ ।
ಚಿಕಿತ್ಸಕಾ ವಾ ದುಷ್ಟಾಶ್ಚ ದ್ವೇಷಲೋಭಸಮನ್ವಿತಾಃ ॥೩೦॥

ನಿರ್ದಯಾಃ ಪ್ರಾಣಹಿಂಸಾಯಾಂ ಮಲದಾಶ್ಚಿತ್ತನಾಶನಾಃ ।
ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ॥೩೧॥

ಯದಿ ವೈ ಮಾನುಷಂ ಜನ್ಮ ಲಭೇರಂಸ್ತೇ ಸುದುಃಖಿತಾಃ ।
ಅತ್ರ ತೇ ಕ್ಲೇಶಸಂಯುಕ್ತಾಃ ಕುಷ್ಠರೋಗಸಮನ್ವಿತಾಃ ॥೩೨॥

ಮಹೇಶ್ವರ– ಎಲೌ ದೇವಿಯೇ, ಯಾವ ಮನುಷ್ಯರು ಹಿಂದೆ ಇನ್ನೊಬ್ಬರ ರೂಪವನ್ನು ನಾಶಮಾಡಿರುತ್ತಾರೆಯೋ, ಹೊಡೆಯುವುದರಿಂದ ಅಥವಾ ಕೊಲ್ಲುವುದರಿಂದ ಅಥವಾ ಬೆಂಕಿ ಹಾಕುವುದರಿಂದ ಅಥವಾ ವ್ಯರ್ಥವಾದ ಶಿಕ್ಷೆಯನ್ನು ಕೊಡುವುದರಿಂದ ಇನ್ನೊಬ್ಬರ ಇಷ್ಟಗಳನ್ನು ನಾಶ ಮಾಡಿರುತ್ತಾರೆಯೋ, ಯಾರು ಇನ್ನೊಬ್ಬರಿಗೆ ಅಪಥ್ಯವಾದ ಆಹಾರವನ್ನು ಕೊಟ್ಟಿರುತ್ತಾರೆಯೋ ಅಥವಾ ದ್ವೇಷ-ಲೋಭಗಳಿಂದ ಕೂಡಿ, ದುಷ್ಟರಾದ ವೈದ್ಯರಾಗಿರುತ್ತಾರೆಯೋ, ಪ್ರಾಣಹಿಂಸೆಯ ವಿಷಯದಲ್ಲಿ ದಯಾರಹಿತರಾಗಿರುತ್ತಾರೆಯೋ, ಇನ್ನೊಬ್ಬರಿಗೆ ಕಶ್ಮಲಯುಕ್ತವಾದ ಆಹಾರವನ್ನು ಕೊಡುತ್ತಾರೆಯೋ ಅಂತಹವರು ಎಲೌ ಶೋಭನೆಯೇ, ಇನ್ನೊಂದು ಜನ್ಮದಲ್ಲಿ ಮನುಷ್ಯಜನ್ಮವನ್ನು ಪಡೆದರೆ ಬಹಳ ದುಃಖದಿಂದ ಕೂಡಿ ಕ್ಲೇಶದಿಂದ ಕೂಡಿ, ಕುಷ್ಠರೋಗವನ್ನು ಹೊಂದಿರುತ್ತಾರೆ.

ಕೇಚಿತ್ತ್ವಗ್ದೋಷಸಂಯುಕ್ತಾ ವ್ರಣಕುಷ್ಠೈಶ್ಚ ಸಂಯುತಾಃ ।
ಶ್ವಿತ್ರಕುಷ್ಠಯುತಾ ವಾऽಪಿ ಬಹುಧಾ ಕುಷ್ಠಸಂಯುತಾಃ ।
ಭವಂತ್ಯೇವ ನರಾ ದೇವಿ ಯಥಾ ತೇನ ಕೃತಂ ಫಲಮ್ ॥೩೩॥

ಕೆಲವರಿಗೆ ಕೇವಲ ತ್ವಗ್ದೋಷವಿರುತ್ತದೆ. ಕೆಲವರಿಗೆ ವ್ರಣವಿರುವ ಕುಷ್ಠರೋಗವಿರುತ್ತದೆ. ಕೆಲವರಿಗೆ ಶ್ವಿತ್ರಕುಷ್ಠವಿರುತ್ತದೆ. ಎಲೌ ದೇವಿಯೇ, ಹೀಗೆ ಅನೇಕ ವಿಧವಾದ ಕುಷ್ಠರೋಗಗಳನ್ನು ತಾವು ಹಿಂದೆ ಮಾಡಿದುದರ ಫಲವಾಗಿ ಅನುಭವಿಸುತ್ತಾರೆ.

ಉಮಾ

ಭಗವನ್ಮಾನುಷಾಃ ಕೇಚಿದಂಗಹೀನಾಶ್ಚ ಪಂಗವಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೪॥

ಉಮಾ– ಭಗವಂತನೇ, ಕೆಲವು ಮನುಷ್ಯರು ಕುಂಟರಾಗಿ ವಿಕಲಾಂಗರಾಗಿರುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುತ್ತದೆ ಎಂದು ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಲೋಭಮೋಹಸಮಾವೃತಾಃ ।
ಪ್ರಾಣಿನಾಂ ಪ್ರಾಣಹಿಂಸಾರ್ಥಮಂಗವಿಘ್ನಂ ಪ್ರಕುರ್ವತೇ ।
ಶಸ್ತ್ರೇಣೋತ್ಕೃತ್ಯ ವಾ ದೇವಿ ಪ್ರಾಣಿನಾಂ ಚೇಷ್ಟನಾಶಕಾಃ ॥೩೫॥

ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ।
ತದಂಗಹೀನಾ ವೈ ಪ್ರೇತ್ಯ ಭವಂತ್ಯೇವ ನ ಸಂಶಯಃ ।
ಸ್ವಭಾವತೋ ವಾ ಜಾತಾ ವಾ ಪಂಗವಶ್ಚ ಭವಂತಿ ತೇ ॥೩೬॥

ಮಹೇಶ್ವರ– ಎಲೌ ದೇವಿಯೇ, ಯಾವ ಮನುಷ್ಯರು ಹಿಂದೆ ಲೋಭ-ಮೋಹ ಯುಕ್ತರಾಗಿ ಪ್ರಾಣಿಗಳಿಗೆ ಹಿಂಸೆಯನ್ನು ಮಾಡಿ, ಪ್ರಾಣಿಗಳ ಅಂಗಗಳಿಗೆ ಶಸ್ತ್ರದಿಂದ ಹೊಡೆದಾಗಲೀ ಅಥವಾ ಕತ್ತರಿಸುವುದರಿಂದಾಗಲೀ ಹಿಂಸೆಯನ್ನು ಮಾಡಿರುತ್ತಾರೆಯೋ, ಪ್ರಾಣಿಗಳ ಇಷ್ಟವನ್ನು ನಾಶ ಮಾಡಿರುತ್ತಾರೆಯೋ ಅಂತಹವರು

ಎಲೌ ಶೋಭನೆಯೇ, ಕೆಲವರು ಹುಟ್ಟಿದಾಗಲೇ ಆಯಾ ಅಂಗಗಳಿಂದ ಹೀನರಾಗಿ ಜನಿಸುತ್ತಾರೆ. ಇನ್ನು ಕೆಲವರು ಹುಟ್ಟಿದ ಅನಂತರದಲ್ಲಿ ಅಂತಹ ಅಂಗಹೀನರೂ, ಕುಂಟರೂ ಆಗುತ್ತಾರೆ.

ಉಮಾ

ಭಗವನ್ಮಾನುಷಾಃ ಕೇಚಿದ್‌ಗ್ರಂಥಿಭಿಃ ಪಿಟಕೈಸ್ತಥಾ ।
ಕ್ಲಿಶ್ಯಮಾನಾಃ ಪ್ರದೃಶ್ಯಂತೇ ತನ್ಮೇ ಶಂಸಿತುಮರ್ಹಸಿ ॥೩೭॥

ಉಮಾ– ಭಗವಂತನೇ, ಕೆಲವು ಮನುಷ್ಯರು ಗಂಟುರೋಗದಿಂದಲೂ, ಕಜ್ಜಿ-ಕುರುಗಳಿಂದಲೂ ಕ್ಲೇಶಪಡುವುದು ಕಂಡುಬರುತ್ತದೆ. ಯಾವ ಕರ್ಮವಿಪಾಕದಿಂದ ಹೀಗಾಗುತ್ತದೆ ಎಂದು ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಗ್ರಂಥಿಭೇದಕರಾ ನೃಣಾಮ್ ।
ಮುಷ್ಟಿಪ್ರಹಾರಪರುಷಾ ನೃಶಂಸಾಃ ಪಾಪಕಾರಿಣಃ ।
ಪಾಟಕಾಸ್ತೋದಕಾಶ್ಚೈವ ಶೂಲತುನ್ನಾಸ್ತಥೈವ ಚ ॥೩೮॥

ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ।
ಗ್ರಂಥಿಭಿಃ ಪಿಟಕೈಶ್ಚೈವ ಕ್ಲಿಶ್ಯಂತೇ ಭೃಶದುಃಖಿತಾಃ ॥೩೯॥

ಮಹೇಶ್ವರ– ಎಲೌ ದೇವಿಯೇ, ಯಾವ ಮನುಷ್ಯರು ಹಿಂದೆ ಮನುಷ್ಯರಿಗೆ ಮುಷ್ಟಿಯಿಂದ ಪ್ರಹಾರವನ್ನು ಮಾಡಿ ಒರಟಾಗಿ, ಕ್ರೂರವಾಗಿ ಪಾಪಕರ್ಮವನ್ನು ಎಸಗಿರುತ್ತಾರೆಯೋ ಅಂತಹ ಅಂಗಗಳನ್ನು ಸೀಳುವ ಅಥವಾ ಶೂಲಾದಿಗಳಿಂದ ಚುಚ್ಚುವ ಮನುಷ್ಯರು ಎಲೌ ಶೋಭನೆಯೇ, ಇನ್ನೊಂದು ಜನ್ಮದಲ್ಲಿ ಗಂಟು ರೋಗದಿಂದಲೂ, ಕಜ್ಜಿ-ಕುರುಗಳಿಂದಲೂ ಬಹಳ ದುಃಖವನ್ನು ಹೊಂದಿ ಕ್ಲೇಶ ಪಡುತ್ತಾರೆ.

ಉಮಾ

ಭಗವನ್ಮಾನುಷಾಃ ಕೇಚಿತ್ಪಾದರೋಗಸಮನ್ವಿತಾಃ ।
ದೃಶ್ಯಂತೇ ಸತತಂ ದೇವ ತನ್ಮೇ ಶಂಸಿತುಮರ್ಹಸಿ ॥೪೦॥

ಉಮಾ– ಭಗವಂತನೇ, ಕೆಲವು ಮನುಷ್ಯರು ಪಾದರೋಗದಿಂದ ಕೂಡಿರುವುದು ಸತತವಾಗಿ ಕಂಡುಬರುತ್ತದೆ. ಎಲೈ ದೇವನೇ, ಅದನ್ನು ನನಗೆ ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಕ್ರೋಧಲೋಭಸಮನ್ವಿತಾಃ ।
ಮನುಜಾ ದೇವತಾಸ್ಥಾನಂ ಸ್ವಪಾದೈಃ ಸಂಸ್ಪೃಶಂತ್ಯುತ ।
ಜಾನುಭಿಃ ಪಾರ್ಷ್ಣಿಭಿಶ್ಚೈವ ಪ್ರಾಣಿಹಿಂಸಾಂ ಪ್ರಕುರ್ವತೇ ॥೪೧॥

ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ।
ಪಾದರೋಗೈರ್ಬಹುವಿಧೈರ್ಬಾಧ್ಯಂತೇ ಶ್ಲೀಪದಾದಿಭಿಃ ॥೪೨॥

ಮಹೇಶ್ವರ– ಎಲೌ ದೇವಿಯೇ, ಯಾವ ಮನುಷ್ಯರು ಕ್ರೋಧ-ಲೋಭ ಸಮನ್ವಿತರಾಗಿ ದೇವತಾ ಸ್ಥಾನಗಳನ್ನು ತಮ್ಮ ಪಾದದಿಂದ ಸ್ಪರ್ಶ ಮಾಡಿರುತ್ತಾರೆಯೋ, ಪ್ರಾಣಿಗಳನ್ನು ಮಂಡಿಯಿಂದ ಅಥವಾ ಹಿಮ್ಮಡಿಯಿಂದ ಹಿಂಸಿಸಿರುತ್ತಾರೆಯೋ ಎಲೌ ಶೋಭನೆಯೇ, ಅಂತಹವರು ಇನ್ನೊಂದು ಜನ್ಮವನ್ನು ಪಡೆದು ಆನೆಕಾಲು ರೋಗ ಮೊದಲಾದ ಬಹುವಿಧವಾದ ಪಾದರೋಗಗಳಿಂದ ಬಾಧಿಸಲ್ಪಡುತ್ತಾರೆ.

ಉಮಾ

ಭಗವನ್ಮಾನುಷಾಃ ಕೇಚಿದ್ ದೃಶ್ಯಂತೇ ಬಹವೋ ಭುವಿ ।
ವಾತಜೈಃ ಪಿತ್ತಜೈ ರೋಗೈರ್ಯುಗಪತ್‌ಸನ್ನಿಪಾತಕೈಃ ॥೪೩॥

ರೋಗೈರ್ಬಹುವಿಧೈರ್ದೇವ ಕ್ಲಿಶ್ಯಮಾನಾಃ ಸುದುಃಖಿತಾಃ ।
ಅಸಮಸ್ತೈಃ ಸಮಸ್ತೈಶ್ಚ ಆಢ್ಯಾ ವಾ ದುರ್ಗತಾಸ್ತಥಾ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೪೪॥

ಉಮಾ– ಭಗವಂತನೇ, ಲೋಕದಲ್ಲಿ ಅನೇಕ ಜನರಿಗೆ ವಾತ-ಪಿತ್ತಗಳಿಂದ ಒಟ್ಟಿಗೆ ಉಂಟಾದ ಅನೇಕ ರೋಗಗಳು ಕಂಡುಬರುತ್ತವೆ. ಅನೇಕ ವಿಧವಾಗ ರೋಗಗಳಿಂದ ಪೀಡಿಸಲ್ಪಟ್ಟು ಅವರು ದುಃಖವನ್ನು ಹೊಂದುತ್ತಾರೆ. ಧನಾಢ್ಯರಾಗಲೀ ಅಥವಾ ದರಿದ್ರರಾಗಲೀ ಒಂದು ರೋಗದಿಂದ ಅಥವಾ ಅನೇಕ ರೋಗಗಳಿಂದ ಪೀಡಿಸಲ್ಪಡುವುದು ಕಂಡುಬರುತ್ತದೆ. ಯಾವ ಕರ್ಮವಿಪಾಕದಿಂದ ಹೀಗಾಗುವುದು ಎಂದು ಹೇಳಬೇಕು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ಕಲ್ಯಾಣಿ ಕಾರಣಮ್ ॥೪೫॥

ಮಹೇಶ್ವರ– ಎಲೌ ಕಲ್ಯಾಣಿಯೇ, ನಾನು ಕಾರಣವನ್ನು ಹೇಳುವೆನು, ಅದನ್ನು ಕೇಳು.

ಯೇ ಪುರಾ ಮನುಜಾ ದೇವಿ ಸ್ವಧರ್ಮನಿರತಾಃ ಸದಾ ।
ಸ್ವವಶಾಃ ಕೋಪನಪರಾ ಗುರುವಿದ್ವೇಷಿಣಸ್ತಥಾ ॥೪೬॥

ಪರೇಷಾಂ ದುಃಖಜನಕಾ ಮನೋವಾಕ್ಕಾಯಕರ್ಮಭಿಃ ।
ಛಿಂದನ್ ಛಿಂದನ್ ತುದನ್ನೇವ ನಿತ್ಯಂ ಪ್ರಾಣಿಷು ನಿರ್ದಯಾಃ ॥೪೭॥

ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ।
ಯದಿ ವೈ ಮಾನುಷಂ ಜನ್ಮ ಲಭೇರಂಸ್ತೇ ತಥಾವಿಧಾಃ ।
ತತ್ರ ತೇ ಬಹುಭಿರ್ಘೋರೈಸ್ತಪ್ಯಂತೇ ವ್ಯಾಧಿಭಿಃ ಪ್ರಿಯೇ ॥೪೮॥

ಯಾವ ಮನುಷ್ಯರು ಹಿಂದೆ ಕೆಟ್ಟ ಅಧರ್ಮಗಳಲ್ಲಿಯೇ ನಿರತರಾಗಿ, ತಮಗೇ ತಮ್ಮ ಮೇಲೆ ನಿಯಂತ್ರಣವಿಲ್ಲದೆ ಕೋಪವನ್ನು ಹೊಂದಿ, ಗುರುದ್ವೇಷವನ್ನು ಮಾಡಿ ಮನೋವಾಕ್‌ಕಾಯ-ಕರ್ಮಗಳಿಂದ ಇನ್ನೊಬ್ಬರಿಗೆ ದುಃಖವನ್ನುಂಟು ಮಾಡಿರುತ್ತಾರೆಯೋ, ಕತ್ತರಿಸುತ್ತಾ, ಒಡೆಯುತ್ತಾ ಮತ್ತು ಚುಚ್ಚುತ್ತಾ ಪ್ರಾಣಿಗಳಲ್ಲಿ ನಿರ್ದಯರಾಗಿರುತ್ತಾರೆಯೋ, ಎಲೌ ಶೋಭನೆಯೇ, ಅವರು ಇನ್ನೊಂದು ಮನುಷ್ಯ ಜನ್ಮವನ್ನು ಪಡೆದರೆ ಅಲ್ಲಿ ಅನೇಕ ಘೋರವ್ಯಾಧಿಗಳಿಂದ ಪೀಡಿಸಲ್ಪಡುತ್ತಾರೆ.

ಕೇಚಿದ್ ದ್ವಿಪಾದಸಂಯುಕ್ತಾಃ ಕೇಚಿತ್ಕಾಸಸಮನ್ವಿತಾಃ ।
ಜ್ವರಾತಿಸಾರತೃಷ್ಣಾಭಿಃ ಪೀಡ್ಯಮಾನಾಸ್ತಥಾ ಪರೇ ॥೪೯॥

ವಾತಗುಲ್ಮೈಶ್ಚ ಬಹುಭಿಃ ಶ್ಲೇಷ್ಮದೋಷಸಮನ್ವಿತಾಃ ।
ಪಾದರೋಗೈಶ್ಚ ವಿವಿಧೈರ್ವ್ರಣಕುಷ್ಠಭಗಂದರೈಃ ।
ಆಢ್ಯಾ ವಾ ದುರ್ಗತಾ ವಾऽಪಿ ದೃಶ್ಯಂತೇ ವ್ಯಾಧಿಪೀಡಿತಾಃ ॥೫೦॥

ಏವಮಾತ್ಮಕೃತಂ ಕರ್ಮ ಭುಂಜಂತೇ ತತ್ರತತ್ರ ವೈ ।
ಗೂಹಿತುಂ ನ ಹಿ ಶಕ್ಯಂ ವೈ ಕೇನಚಿತ್ಸ್ವಕೃತಂ ಫಲಮ್ ।
ಇತಿ ತೇ ಕಥಿತಂ ದೇವಿ ಭೂಯಃ ಶ್ರೋತುಂ ಕಿಮಿಚ್ಛಸಿ ॥೫೧॥

ಕೆಲವರು ಎರಡು ಪಾದಗಳಲ್ಲಿಯೂ ರೋಗವನ್ನೂ ಹೊಂದುತ್ತಾರೆ. ಕೆಲವರು ಕಾಸರೋಗವನ್ನು ಹೊಂದುತ್ತಾರೆ. ಜ್ವರ-ಅತಿಸಾರ ಮತ್ತು ಬಾಯಾರಿಕೆಯಿಂದ ಇನ್ನು ಕೆಲವರು ಪೀಡಿಸಲ್ಪಡುತ್ತಾರೆ. ವಾತ-ಪಿತ್ಥ-ಕಫ ದೋಷಗಳಿಂದ ಕೂಡಿರುತ್ತಾರೆ. ವಿವಿಧವಾದ ಪಾದರೋಗಗಳಿಂದಲೂ, ವಿವಿಧವಾದ ವ್ರಣ, ಕುಷ್ಠ, ಭಗಂದರ ರೋಗಗಳಿಂದಲೂ ಕೂಡಿರುತ್ತಾರೆ. ಅವರು ಧನಾಢ್ಯರಾಗಲೀ ಅಥವಾ ದರಿದ್ರರಾಗಲೀ ಇಂತಹ ರೋಗಗಳಿಂದ ಕೂಡಿರುವುದು ಕಂಡುಬರುತ್ತದೆ. ಹೀಗೆ ಮನುಷ್ಯರು ಅಲ್ಲಲ್ಲಿ ತಾವು ಮಾಡಿದ ಕರ್ಮದ ಫಲವನ್ನು ಭೋಗಿಸುತ್ತಾರೆ. ತಾವು ಮಾಡಿದ ಕರ್ಮದ ಫಲವನ್ನು ಮುಚ್ಚಿಡಲು ಯಾರಿಗೂ ಸಾಧ್ಯವಿಲ್ಲ. ಎಲೌ ದೇವಿಯೇ, ಇದನ್ನು ನಾನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಪರ್ವಣಿ ಮಾನುಷಾಣಾಂ ವ್ಯಾಧಿನಿಮಿತ್ತಕಥನಂ ನಾಮ ಚತುರಧಿಕದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಐದನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಮನುಷ್ಯರೋಗಗಳಿಗೆ ನಿಮಿತ್ತಕಥನ

ಉಮಾ

ಭಗವನ್ ದೇವದೇವೇಶ ಭೂತಪಾಲ ನಮೋಸ್ತು ತೇ ।
ಹ್ರಸ್ವಾಂಗಾಶ್ಚೈವ ವಕ್ರಾಂಗಾಃ ಕುಬ್ಜಾ ವಾಮನಕಾಸ್ತಥಾ ॥೧॥

ಅಪರೇ ಮಾನುಷಾ ದೇವ ದೃಶ್ಯಂತೇ ಕುಣಿಬಾಹವಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨॥

ಉಮಾ– ಭಗವಂತನೇ, ದೇವದೇವೇಶನೇ, ಭೂತಪಾಲನೇ, ನಿನಗೆ ನಮಸ್ಕಾರ. ಕೆಲವು ಮನುಷ್ಯರು ಹ್ರಸ್ವವಾದ ಅವಯವವುಳ್ಳವರೂ, ಕೆಲವರು ವಕ್ರರೂ, ಕೆಲವರು ಕುಬ್ಜರೂ, ಕೆಲವರು ವಾಮನರೂ ಇನ್ನು ಕೆಲವರು ಹಸ್ತದೋಷವುಳ್ಳವರೂ (ಚೊತ್ತ ಕೈಯುಳ್ಳವರು) ಆಗಿ ಕಾಣುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುತ್ತದೆ ಎಂದು ನನಗೆ ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಲೋಭಮೋಹಸಮನ್ವಿತಾಃ ।
ಧಾನ್ಯಮಾನಾನ್ ವಿಕುರ್ವಂತಿ ಕ್ರಯವಿಕ್ರಯಕಾರಣಾತ್ ॥೩॥

ತುಲಾದೋಷಂ ತದಾ ದೇವಿ ಧೃತಮಾನೇಷು ನಿತ್ಯಶಃ ।
ಅರ್ಧಾಪಕರ್ಷಣಂ ಚೈವ ಸರ್ವೇಷಾಂ ಕ್ರಯವಿಕ್ರಯೇ ॥೪॥

ಅಂಗದೋಷಕರಾ ಯೇ ತು ಪರೇಷಾಂ ಕೋಪಕಾರಣಾತ್ ।
ಮಾಂಸಾದಾಶ್ಚೈವ ಯೇ ಮೂರ್ಖಾ ಅಯಥಾವದ್ ವೃಥಾಃ ಸದಾ ॥೫॥

ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ।
ವಾಮನಾಶ್ಚೈವ ಹ್ರಸ್ವಾಂಗಾ ಕುಬ್ಜಾಶ್ಚೈವ ಭವಂತಿ ತೇ ॥೬॥

ಮಹೇಶ್ವರ– ಎಲೌ ದೇವಿಯೇ, ಯಾವ ಮನುಷ್ಯರು ಹಿಂದೆ ಲೋಭ-ಮೋಹದಿಂದ ಕೂಡಿದವರಾಗಿ ಕ್ರಯ-ವಿಕ್ರಯ ಸಮಯದಲ್ಲಿ ಅಳತೆಗಳನ್ನು ವ್ಯತ್ಯಾಸ ಮಾಡುತ್ತಾರೆಯೋ, ತಕ್ಕಡಿಯಲ್ಲಿ ತೂಗುವಾಗ ಮೋಸ ಮಾಡುತ್ತಾರೆಯೋ, ತೂಗಿದ ಮೇಲೆ ಸಾಮಾನುಗಳನ್ನು ಕೊಡುವಾಗ ಸ್ವಲ್ಪ ಭಾಗವನ್ನು ಕಡಿವೆ ಮಾಡಿಕೊಡುತ್ತಾರೆಯೋ, ಯಾರು ಕೋಪದಿಂದ ಇನ್ನೊಬ್ಬರ ಅಂಗಗಳಿಗೆ ವೈಕಲ್ಯವನ್ನು ಉಂಟುಮಾಡಿರುತ್ತಾರೆಯೋ, ಯಾವ ಮೂರ್ಖರು ಶಾಸ್ತ್ರವಿರುದ್ಧವಾಗಿ ವ್ಯರ್ಥ ಮಾಂಸವನ್ನು ತಿನ್ನುತ್ತಾರೆಯೋ ಅಂತಹ ನಡತೆಯುಳ್ಳವರು ಎಲೌ ಶೋಭನೆಯೇ, ಇನ್ನೊಂದು ಜನ್ಮದಲ್ಲಿ ವಾಮನರೂ, ಹ್ರಸ್ವಾಂಗರೂ, ಕುಬ್ಜರೂ ಆಗುತ್ತಾರೆ (ಶರೀರದ ಎಲ್ಲಾ ಅವಯವಗಳು ಸಣ್ಣವಾಗಿರುವವರು ವಾಮನರು, ಹಸ್ತ-ಪಾದಗಳು ಮಾತ್ರ ಸಣ್ಣಗಿರುವವರು ಹ್ರಸ್ವಾಂಗರು, ವಕ್ರಶರೀರವುಳ್ಳವರು ಕುಬ್ಜರು- ಲಕ್ಷಾಲಂಕಾರ).

ಉಮಾ

ಭಗವನ್ಮಾನುಷಾಃ ಕೇಚಿದ್ ದೃಶ್ಯಂತೇ ಮಾನುಷೇಷು ವೈ ।
ಉನ್ಮತ್ತಾಶ್ಚ ಪಿಶಾಚಾಶ್ಚ ಪರ್ಯಟಂತೋ ಯತಸ್ತತಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೭॥

ಉಮಾ– ಪೂಜ್ಯನೇ, ಮನುಷ್ಯರಲ್ಲಿ ಕೆಲವರು ಹುಚ್ಚರೂ ಮತ್ತು ಪಿಶಾಚಿಗಳೂ ಆಗಿ ಎಲ್ಲ ಕಡೆಯಲ್ಲಿಯೂ ಅಲೆಯುವುದು ಕಂಡುಬರುತ್ತದೆ. ಯಾವ ಕರ್ಮ ವಿಪಾಕದಿಂದ ಹೀಗಾಗುವುದು ಎಂದು ನನಗೆ ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ದರ್ಪಾಹಂಕಾರಸಂಯುತಾಃ ।
ಬಹುಧಾ ಪ್ರಲಪಂತ್ಯೇವ ಪ್ರಹಸಂತಿ ಪರಾನ್ ಭೃಶಮ್ ॥೮॥

ಮೋಹಯಂತಿ ಪರಾನ್ ಭೋಗೈರ್ಮದಲೈಲೋ್ಯಭಕಾರಣಾತ್ ।
ವೃದ್ಧಾನ್ ಗುರೂಂಶ್ಚ ಯೇ ಮೂರ್ಖಾ ವೃಥೈವಾಪಹಸಂತಿ ಚ ।
ಶೌಂಡಾ ವಿದಗ್ಧಾಃ ಶಾಸ್ತ್ರೇಷು ತಥೈವಾನೃತವಾದಿನಃ ॥೯॥

ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ।
ಉನ್ಮತ್ತಾಶ್ಚ ಪಿಶಾಚಾಶ್ಚ ಭವಂತ್ಯೇವ ನ ಸಂಶಯಃ ॥೧೦॥

ಮಹೇಶ್ವರ– ಎಲೌ ದೇವಿಯೇ, ಯಾವ ಮನುಷ್ಯರು ಹಿಂದೆ ದರ್ಪ-ಅಹಂಕಾರದಿಂದ ಕೂಡಿ ಬಹಳವಾಗಿ ಮಾತನಾಡಿರುತ್ತಾರೆಯೋ, ಇನ್ನೊಬ್ಬರನ್ನು ಬಹಳವಾಗಿ ಹಾಸ್ಯಮಾಡಿರುತ್ತಾರೆಯೋ, ಲೋಭದಿಂದ ಕೂಡಿ ಇನ್ನೊಬ್ಬರಿಗೆ ಉನ್ಮಾದವನ್ನುಂಟು ಮಾಡುವ ಭೋಗಗಳನ್ನು ನೀಡಿರುತ್ತಾರೆಯೋ, ಹಿರಿಯರನ್ನು ಮತ್ತು ಗುರುಗಳನ್ನು ಯಾವ ಮೂರ್ಖರು ವ್ಯರ್ಥವಾಗಿ ಅಪಹಾಸ ಮಾಡಿರುತ್ತಾರೆಯೋ, ಶಾಸ್ತ್ರಗಳನ್ನು ಅಧ್ಯಯನ ಮಾಡಿ ಪರಿಣಿತರಾಗಿದ್ದರೂ ಯಾರು ಸುಳ್ಳು ಮಾತನ್ನಾಡಿರುತ್ತಾರೆಯೋ ಅಂತಹವರು ಎಲೌ ಶೋಭನೆಯೇ, ಇನ್ನೊಂದು ಜನ್ಮದಲ್ಲಿ ಹುಚ್ಚರೂ ಮತ್ತು ಪಿಶಾಚಗಳೂ ಆಗುವುದರಲ್ಲಿ ಸಂಶಯವಿಲ್ಲ.

ಉಮಾ

ಭಗವನ್ಮಾನುಷಾಃ ಕೇಚಿನ್ನಿರಪತ್ಯಾಃ ಸುದುಃಖಿತಾಃ ।
ಯತಂತೋ ನ ಲಭಂತ್ಯೇವ ಅಪತ್ಯಾನಿ ಯತಸ್ತತಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೧೧॥

ಉಮಾ– ಭಗವಂತನೇ, ಮನುಷ್ಯರಲ್ಲಿ ಯಾರು ಮಕ್ಕಳಿಲ್ಲದೆ ದುಃಖಪಡುತ್ತಾರೆ? ಪ್ರಯತ್ನಪಟ್ಟರೂ ಅವರಿಗೆ ಮಕ್ಕಳಾಗುವುದಿಲ್ಲ. ಯಾವ ಕರ್ಮವಿಪಾಕದಿಂದ ಹೀಗಾಗುತ್ತದೆ ಎಂದು ನನಗೆ ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಸರ್ವಪ್ರಾಣಿಷು ನಿರ್ದಯಾಃ ।
ಘ್ನಂತಿ ಬಾಲಾಂಶ್ಚ ಭುಂಜಂತೇ ಮೃಗಾಣಾಂ ಪಕ್ಷಿಣಾಮಪಿ ॥೧೨॥

ಗುರುವಿದ್ವೇಷಿಣಶ್ಚೈವ ಪರಪುತ್ರಾಭ್ಯಸೂಯಕಾಃ ।
ಪಿತೃಪೂಜಾಂ ನ ಕುರ್ವಂತಿ ಯಥೋಕ್ತಂ ಚಾಷ್ಟಕಾದಿಭಿಃ ॥೧೩॥

ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ।
ಮಾನುಷ್ಯಂ ಸುಚಿರಾತ್ ಪ್ರಾಪ್ಯ ನಿರಪತ್ಯಾ ಭವಂತಿ ತೇ ।
ಪುತ್ರಶೋಕಯುತಾ ವಾಪಿ ನಾಸ್ತಿ ತತ್ರ ವಿಚಾರಣಾ ॥೧೪॥

ಮಹೇಶ್ವರ– ಯಾವ ಮನುಷ್ಯರು ಹಿಂದೆ ಪ್ರಾಣಿಗಳಲ್ಲಿ ದಯೆಯಿಲ್ಲದೆ ಮೃಗಗಳ ಮತ್ತು ಪಕ್ಷಿಗಳ ಎಳೆ ಮರಿಗಳನ್ನು ಕೊಂದು ತಿಂದಿರುತ್ತಾರೆಯೋ, ಹಿರಿಯರನ್ನು ದ್ವೇಷಿಸಿರುತ್ತಾರೆಯೋ, ಇನ್ನೊಬ್ಬರ ಮಕ್ಕಳನ್ನು ನೋಡಿ ಅಸೂಯೆಯನ್ನು ಪಟ್ಟಿರುತ್ತಾರೆಯೋ ಪಿತೃಗಳಿಗೆ ಅಷ್ಟಕಾದಿ ಶ್ರಾದ್ಧಗಳನ್ನು ಮಾಡಿರುವುದಿಲ್ಲವೋ ಅಂತಹವರು ಬಹಳ ಕಾಲದ ಮೇಲೆ ಪುನಃ ಮನುಷ್ಯತ್ವವನ್ನು ಪಡೆದು ಪುತ್ರಹೀನರಾಗುತ್ತಾರೆ ಅಥವಾ ಅವರಿಗೆ ಜನಿಸಿದ ಪುತ್ರರು ಮರಣವನ್ನು ಹೊಂದುತ್ತಾರೆ. ಇದರಲ್ಲಿ ಸಂಶಯವಿಲ್ಲ.

ಉಮಾ

ಭಗವನ್ ಮಾನುಷಾಃ ಕೇಚಿತ್ ಪ್ರದೃಶ್ಯಂತೇ ಸುದುಃಖಿತಾಃ ।
ಉದ್ವೇಗವಾಸನಿರತಾಃ ಸೋದ್ವೇಗಾಶ್ಚ ಯತವ್ರತಾಃ ॥೧೫॥

ನಿತ್ಯಂ ಶೋಕಸಮಾವಿಷ್ಟಾ ದುರ್ಗತಾಶ್ಚ ತಥೈವ ಚ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೧೬॥

ಉಮಾ– ಭಗವಂತನೇ, ಮನುಷ್ಯರಲ್ಲಿ ಕೆಲವರು ಬಹಳ ದುಃಖದಿಂದ ಕೂಡಿ ಉದ್ವೇಗವನ್ನುಂಟು ಮಾಡುವ ಮನೆಯಲ್ಲಿ ತಾವೂ ಉದ್ವೇಗದಿಂದ ಕೂಡಿದವರಾಗಿ ವ್ರತಗಳನ್ನು ಅನುಷ್ಠಾನ ಮಾಡಿದರೂ ಯಾವಾಗಲೂ ದಾರಿದ್ರ್ಯ ಮತ್ತು ಶೋಕಗಳಿಂದ ಕೂಡಿರುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುವುದೆಂದು ನನಗೆ ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ನಿತ್ಯಮುತ್ಕೋಚನಪರಾಯಣಾಃ ।
ಭೀಷಯಂತಿ ಪರಾನ್ ನಿತ್ಯಂ ವಿಕುರ್ವಂತಿ ತಥೈವ ಚ ॥೧೭॥

ಋಣೈರ್ವೃದ್ಧಿಂ ಚ ಯೇ ಕೃತ್ವಾ ದರಿದ್ರೇಭ್ಯೋ ಯಥೇಷ್ಟತಃ ।
ಋಣಾರ್ಥಮಭಿಗಚ್ಛಂತಿ ಸತತಂ ವೃದ್ಧಿರೂಪಕಾಃ ॥೧೮॥

ಉದ್ವಿಜಂತೇ ಹಿ ತಾನ್ ದೃಷ್ಟ್ವಾ ಧಾರಕಾಃ ಸ್ವಾರ್ಥಕಾರಣಾತ್ ।
ಅತಿವೃದ್ಧಿರ್ನ ಕರ್ತವ್ಯಾ ದರಿದ್ರೇಭ್ಯೋ ಯಥೇಷ್ಟತಃ ॥೧೯॥

ಯೇ ಶ್ವಭಿಃ ಕ್ರೀಡಮಾನಾಶ್ಚ ತ್ರಾಸಯಂತಿ ವನೇ ಮೃಗಾನ್ ।
ಪ್ರಾಣಿಹಿಂಸಾಂ ತಥಾ ದೇವಿ ಕುರ್ವಂತಿ ಚ ಯತಸ್ತತಃ ॥೨೦॥

ಮಹೇಶ್ವರ– ಯಾವ ಮನುಷ್ಯರು ಹಿಂದೆ ಯಾವಾಗಲೂ ಇನ್ನೊಬ್ಬರನ್ನು ಪರಿಹಾಸ ಮಾಡುವುದರಲ್ಲಿ ನಿರತರಾಗಿರುತ್ತಾರೆಯೋ, ಇನ್ನೊಬ್ಬರನ್ನು ಹೆದರಿಸುತ್ತಾ ಇನ್ನೊಬ್ಬರಿಗೆ ವಿಕಾರವನ್ನುಂಟು ಮಾಡಿರುತ್ತಾರೆಯೋ, ದರಿದ್ರರಿಗೆ ಸಾಲವನ್ನು ಕೊಟ್ಟು ತಮಗಿಷ್ಟಬಂದಂತೆ ಬಡ್ಡಿಯನ್ನು ತೆಗೆದುಕೊಂಡು ಸಾಲವನ್ನು ಹಿಂಪಡೆಯಲು ಅವರ ಮನೆಗೆ ಸತತವಾಗಿ ಹೋಗುತ್ತಾರೆಯೋ, ಯಾರನ್ನು ನೋಡಿ ಸಾಲವನ್ನು ತೆಗೆದುಕೊಂಡವರು ಸತತವಾಗಿ ಹೆದರುತ್ತಾರೆಯೋ - ಬಡವರಿಗೆ ಸಾಲವನ್ನು ಕೊಟ್ಟಾಗ ಮನಸ್ಸಿಗೆ ಬಂದಂತೆ ಹೆಚ್ಚಾದ ಬಡ್ಡಿಯನ್ನು ತೆಗೆದುಕೊಳ್ಳಬಾರದು - ಯಾರು ನಾಯಿಗಳ ಜೊತೆಯಲ್ಲಿ ಆಟವಾಡಿಕೊಂಡು ಇರುತ್ತಾರೆಯೋ, ಕಾಡಿನಲ್ಲಿ ಮೃಗಗಳನ್ನು ನಾಯಿಗಳಿಂದ ಹೆದರಿಸಿ ಪ್ರಾಣಿಹಿಂಸೆಯನ್ನು ಮಾಡುತ್ತಾರೆಯೋ;

ಯೇಷಾಂ ಗೃಹೇಷು ವೈ ಶ್ವಾನಸ್ತ್ರಾಸಯಂತಿ ವೃಥಾ ನರಾನ್ ।
ಏವಂಯುಕ್ತಸಮಾಚಾರಾಃ ಕಾಲಧರ್ಮಗತಾಃ ಪುನಃ ॥೨೧॥

ಪೀಡಿತಾ ಯಮದಂಡೇನ ನಿರಯಸ್ಥಾಶ್ಚಿರಂ ಪ್ರಿಯೇ ।
ಕಥಂಚಿತ್‌ಪ್ರಾಪ್ಯ ಮಾನುಷ್ಯಂ ತತ್ರ ತೇ ದುಃಖಸಂಯುತಾಃ ॥೨೨॥

ಕುದೇಶೇ ದುಃಖಭೂಯಿಷ್ಠೇ ವ್ಯಾಘಾತಶತಸಂಕುಲೇ ।
ಜಾಯಂತೇ ತತ್ರ ಶೋಚಂತಃ ಸೋದ್ವೇಗಾಶ್ಚ ಯತಸ್ತತಃ ॥೨೩॥

ಯಾರ ಮನೆಯಲ್ಲಿ ನಾಯಿಗಳು ಮನೆಗೆ ಬಂದವರನ್ನು ವ್ಯರ್ಥವಾಗಿ ಹೆದರಿಸುತ್ತವೆಯೋ ಇಂತಹ ನಡತೆಯುಳ್ಳವರು ಮರಣವನ್ನು ಹೊಂದಿ ಯಮದೇವರು ಕೊಡುವ ಶಿಕ್ಷೆಯಿಂದ ಬಹಳ ಕಾಲ ನರಕದಲ್ಲಿ ಇದ್ದು, ಬಹಳ ಕಷ್ಟದಿಂದ ಪುನಃ ಮನುಷ್ಯತ್ವವನ್ನು ಪಡೆದು, ದುಃಖದಿಂದ ಕೂಡಿ, ದುಃಖಪ್ರದವಾದ ಅನೇಕ ಆಪತ್ತುಗಳಿರುವ (ಭೂಕಂಪ, ಅಗ್ನಿಪರ್ವತ ಮೊದಲಾದ ಅನೇಕ ದೋಷಗಳಿರುವ)ಕೆಟ್ಟ ದೇಶದಲ್ಲಿ ಹುಟ್ಟಿ ಯಾವಾಗಲೂ ಭಯವನ್ನೂ, ಶೋಕವನ್ನೂ ಅನುಭವಿಸುತ್ತಾರೆ.

ಉಮಾ

ಭಗವನ್ ಮಾನುಷಾಃ ಕೇಚಿದ್ಧೈಶ್ವರ್ಯಜ್ಞಾನಸಂಯುತಾಃ ।
ಮ್ಲೇಚ್ಛಭೂಮಿಷು ದೃಶ್ಯಂತೇ ಮ್ಲೇಚ್ಛೈಶ್ವರ್ಯಸಮನ್ವಿತಾಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨೪॥

ಉಮಾ– ಭಗವಂತನೇ, ಕೆಲವು ಮನುಷ್ಯರು ಮ್ಲೇಚ್ಛಭೂಮಿಯಲ್ಲಿ ಮ್ಲೇಚ್ಛೈಶ್ವರ್ಯವನ್ನು ಪಡೆದು ಜ್ಞಾನ ಮತ್ತು ಸಂಪತ್ತಿನಿಂದ ಕೂಡಿದವರಾಗಿರುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುವುದೆಂದು ನನಗೆ ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಧನಧಾನ್ಯಸಮನ್ವಿತಾಃ ।
ಅಯಥಾವತ್ ಪ್ರಯಚ್ಛಂತಿ ಶ್ರದ್ಧಾವರ್ಜಿತಮೇವ ವಾ ॥೨೫॥

ಅಪಾತ್ರೇಭ್ಯಶ್ಚ ಯೇ ದಾನಂ ಶೌಚಮಂಗಲವರ್ಜಿತಾಃ ।
ದದತ್ಯೇವ ಚ ಯೇ ಮೂರ್ಖಾಃ ಶ್ಲಾಘಯಾऽವಜ್ಞಯಾऽಪಿ ವಾ ॥೨೬॥

ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ।
ಕುದೇಶೇ ಮ್ಲೇಚ್ಛಭೂಯಿಷ್ಠೇ ದುರ್ಗಮೇ ವನಸಂಕಟೇ ।
ಮ್ಲೇಚ್ಛಾಧಿಪತ್ಯಂ ಸಂಪ್ರಾಪ್ಯ ಜಾಯಂತೇ ತತ್ರತತ್ರ ವೈ ॥೨೭॥

ಮಹೇಶ್ವರ– ಎಲೌ ದೇವಿಯೇ, ಯಾವ ಮನುಷ್ಯರು ಹಿಂದೆ ಧನ-ಧಾನ್ಯದಿಂದ ಕೂಡಿದವರೂ ಸರಿಯಾಗಿ ದಾನ ಮಾಡುವುದಿಲ್ಲವೋ ಅಥವಾ ಶ್ರದ್ಧೆಯಿಲ್ಲದೆ ದಾನ ಮಾಡುತ್ತಾರೆಯೋ, ಶೌಚ ಮತ್ತು ಶುಭಾಚಾರಗಳಿಲ್ಲದೆ ಅಪಾತ್ರರಿಗೆ ದಾನ ಮಾಡುತ್ತಾರೆಯೋ ಅಥವಾ ಮೂರ್ಖರಾಗಿ ತಮ್ಮನ್ನು ತಾವೇ ಹೊಗಳಿಕೊಂಡು ಅಥವಾ ಪ್ರತಿಗ್ರಹ ಮಾಡುವವರನ್ನು ತಿರಸ್ಕಾರ ಮಾಡುತ್ತಾ ದಾನ ಮಾಡುತ್ತಾರೆಯೋ ಅಂತಹವರು ಇನ್ನೊಂದು ಜನ್ಮದಲ್ಲಿ ದುರ್ಗಮವಾದ, ಕಾಡುಗಳಿಂದ ಕೂಡಿದ ಮ್ಲೇಚ್ಛ ಪ್ರದೇಶದಲ್ಲಿ ಮ್ಲೇಚ್ಛರ ಮೇಲೆ ಆಧಿಪತ್ಯವನ್ನು ಹೊಂದಿ ಅಲ್ಲಲ್ಲಿ ಜನಿಸುತ್ತಾರೆ.

ಉಮಾ

ಭಗವನ್ ಭಗನೇತ್ರಘ್ನ ಮಾನುಷೇಷು ಚ ಕೇಚನ ।
ಕ್ಲೀಬಾ ನಪುಂಸಕಾಶ್ಚೈವ ದೃಶ್ಯಂತೇ ಷಂಡಕಾಸ್ತಥಾ ॥೨೮॥

ನೀಚಕರ್ಮರತಾ ನೀಚಾ ನೀಚಸೌಖ್ಯಾಸ್ತಥಾ ಭುವಿ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨೯॥

ಉಮಾ– ಭಗವಂತನೇ, ಭಗನೇತ್ರನಾಶಕನೇ, ಮನುಷ್ಯರಲ್ಲಿ ಕೆಲವರು ಕ್ಲೀಬರೂ, ಕೆಲವರು ನಪುಂಸಕರೂ, ಕೆಲವರು ಷಂಡರೂ ಇರುತ್ತಾರೆ. ನೀಚಕರ್ಮರತರಾಗಿ, ನೀಚ ನಡತೆಯುಳ್ಳವರಾಗಿ ಅಲ್ಪವಾದ ಸೌಖ್ಯವನ್ನು ಅನುಭವಿಸುತ್ತಾರೆ. ಯಾವ ಕರ್ಮ ವಿಪಾಕದಿಂದ ಹೀಗಾಗುತ್ತದೆ ಎಂದು ನನಗೆ ಹೇಳಬೇಕು.

ಹುಟ್ಟಿದಾಗಿನಿಂದ ಸರಿಯಾಗಿ ಬೆಳೆಯದಿರುವ ಶಿಶ್ನವುಳ್ಳವರು ಕ್ಲೀಬರು. ಸರಿಯಾದ ಶಿಶ್ನವಿದ್ದರೂ ಪುಂಶಕ್ತಿಯಿಲ್ಲದ ಶಿಖಂಡಿಗಳು ನಪುಂಸಕರು. ಶಿಶ್ನವನ್ನು ಕತ್ತರಿಸಿಕೊಂಡವರು ಷಂಡರು - ಲಕ್ಷ್ಮಲಂಕಾರ.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ಕಲ್ಯಾಣಿ ಕಾರಣಮ್ ॥೩೦॥

ಮಹೇಶ್ವರ– ಕಲ್ಯಾಣಿಯೇ, ಅದಕ್ಕೆ ಕಾರಣವನ್ನು ನಿನಗೆ ಹೇಳುವೆನು. ಅದನ್ನು ಕೇಳು.

ಯೇ ಪುರಾ ಮನುಜಾ ಭೂತ್ವಾ ಘೋರಕರ್ಮರತಾಸ್ತಥಾ ।
ಪಶುಪುಂಸ್ತ್ವೋಪಘಾತೇನ ಜೀವಂತಿ ಚ ರಮಂತಿ ಚ ॥೩೧॥

ಪುಂಸ್ತ್ವೋಪಘಾತಿನಶ್ಚೈವ ನರಾಣಾಂ ಕೋಪಕಾರಣಾತ್ ।
ಯೇ ಧೂರ್ತಾಃ ಸ್ತ್ರೀಷು ಗಚ್ಛಂತಿ ಅಯಥಾವದ್ ಯಥೇಷ್ಟತಃ ॥೩೨॥

ಕಾಮವಿಘ್ನಕರಾ ಯೇ ತು ದ್ವೇಷಪೈಶುನ್ಯಕಾರಣಾತ್ ।
ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ।
ದಂಡಿತಾ ಯಮದಂಡೇನ ನಿರಯಸ್ಥಾಶ್ಚಿರಂ ಪ್ರಿಯೇ ॥೩೩॥

ಯದಿ ಚೇನ್ಮಾನುಷಂ ಜನ್ಮ ಲಭೇರಂಸ್ತೇ ತಥಾವಿಧಾಃ ।
ಕ್ಲೀಬಾ ವರ್ಷವರಾಶ್ಚೈವ ಷಂಡಕಾಶ್ಚ ಭವಂತಿ ತೇ ॥೩೪॥

ಯಾವ ಮನುಷ್ಯರು ಹಿಂದೆ ಘೋರಕರ್ಮಗಳಲ್ಲಿ ಆಸಕ್ತರಾಗಿರುತ್ತಾರೆಯೋ, ಪಶುಗಳ ಪುಂಸ್ತ್ವವನ್ನು ಅಪಹರಿಸಿ (ಬೀಜಗಳನ್ನು ಒಡೆದು) ಅದರಿಂದಲೇ ಸಂತೋಷದಿಂದ ಜೀವಿಸಿರುತ್ತಾರೆಯೋ, ಕೋಪದಿಂದ ಮನುಷ್ಯರ ಪುಂಸ್ತ್ವವನ್ನು ವಿನಾಶಗೊಳಿಸಿರುತ್ತಾರೆಯೋ, ಯಾವ ಧೂರ್ತರು ಮನಸ್ಸಿಗೆ ಬಂದಂತೆ ದುಷ್ಟ ರೀತಿಗಳಲ್ಲಿ ಸ್ತ್ರೀಸಂಗವನ್ನು ಮಾಡಿರುತ್ತಾರೆಯೋ, ಯಾರು ದ್ವೇಷ ಮತ್ತು ಅಸೂಯೆಗಳ ಕಾರಣಗಳಿಂದ ಇನ್ನೊಬ್ಬರ ಕಾಮಕ್ಕೆ ವಿಘ್ನವನ್ನುಂಟು ಮಾಡಿರುತ್ತಾರೆಯೋ ಅಂತಹ ನಡತೆಯುಳ್ಳವರು, ಎಲೌ ಶೋಭನೆಯೇ, ಪ್ರಿಯೆಯೇ, ಯಮದೇವರ ಶಿಕ್ಷೆಯನ್ನು ಬಹುಕಾಲ ಅನುಭವಿಸಿ ಒಂದು ಪಕ್ಷ ಮನುಷ್ಯತ್ವವನ್ನು ಪಡೆದರೂ ಆಗ ಅವರು ಕ್ಲೀಬರೂ, ನಪುಂಸಕರೂ, ಷಂಡರೂ ಆಗುತ್ತಾರೆ.

ನೀಚಕರ್ಮಪರಾ ಲೋಕೇ ನಿರ್ಲಜ್ಜಾ ವೀತಸಂಭ್ರಮಾಃ ।
ಪರನಿಂದಾಂ ಬಹಿಷ್ಕೃತ್ಯ ತೇ ಭವಂತಿ ಸ್ವಕರ್ಮಣಾ ॥೩೫॥

ಯದಿ ಚೇತ್ಸಂವಿಮೃಶ್ಯೇರನ್ ತೇ ಮುಚ್ಯಂತೇ ಹಿ ಕಲ್ಮಷಾತ್ ।
ಅತ್ರಾಪಿ ತೇ ಪ್ರಮಾದ್ಯೇಯುಃ ಪತಂತಿ ನರಕಾಲಯೇ ॥೩೬॥

ಅವರು ನಾಚಿಕೆಗೆಟ್ಟವರೂ, ನೀಚಕರ್ಮರತರೂ, ಯಾವ ಸಂಭ್ರಮವೂ ಇಲ್ಲದವರೂ ಮತ್ತು ಯಾವಾಗಲೂ ತಮ್ಮ ಮುಖದಿಂದ ಪರನಿಂದೆಯನ್ನು ಮಾಡುವವರೂ ಆಗಿರುತ್ತಾರೆ. ಆ ಜನ್ಮದಲ್ಲಿ ಅವರು ವಿಮರ್ಶೆ ಮಾಡಿ ತಮ್ಮ ದೋಷಗಳನ್ನು ತಿದ್ದಿಕೊಂಡರೆ ಆಗ ದೋಷಗಳಿಂದ ಬಿಡುಗಡೆಯನ್ನು ಹೊಂದುತ್ತಾರೆ. ಆ ಜನ್ಮದಲ್ಲಿಯೂ ಪ್ರಮಾದವನ್ನು ಮಾಡಿ ಅದೇ ದುಷ್ಕರ್ಮಗಳನ್ನು ಮುಂದುವರೆಸಿದರೆ ನರಕದಲ್ಲಿ ಬೀಳುತ್ತಾರೆ.

ಸ್ತ್ರೀಣಾಮಪಿ ತಥಾ ದೇವಿ ಯಥಾ ಪುಂಸಾಂ ತು ಕರ್ಮಜಮ್ ।
ಇತಿ ತೇ ಕಥಿತಂ ದೇವಿ ಭೂಯಃ ಶ್ರೋತುಂ ಕಿಮಿಚ್ಛಸಿ॥ ॥೩೭॥

ದೇವಿಯೇ, ಸ್ತ್ರೀಯರಿಗೂ ಸಹ ಪುರುಷರಿಗೆ ಕರ್ಮಫಲವಿದ್ದಂತೆಯೇ ಕರ್ಮಫಲವಿರುತ್ತದೆ. ದೇವಿಯೇ, ಇದನ್ನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ಉಮಾಮಹೇಶ್ವರಸಂವಾದೇ ರೋಗಾಣಾಂ ನಿಮಿತ್ತಕಥನಂ ನಾಮ ಪಂಚಾಧಿಕದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಆರನೆಯ ಅಧ್ಯಾಯ

ಉಮಾ-ಮಹೇಶ್ವರ ಸಂವಾದ. ಮನುಷ್ಯರ ದುಸ್ಥಿತಿಗೆ ಕಾರಣಕಥನ.

ಉಮಾ

ಭಗವನ್ ದೇವದೇವೇಶ ಶೂಲಪಾಣೇ ವೃಷಧ್ವಜ ।
ಪುಂಶ್ಚಲ್ಯ ಇವ ಯಾ ಸ್ತ್ರೀಷು ನೀಚವೃತ್ತಿರತಾಃ ಸ್ಮೃತಾಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೧॥

ಉಮಾ– ಭಗವಂತನೇ, ದೇವದೇವೇಶನೇ, ಶೂಲಪಾಣಿಯೇ, ವೃಷಧ್ವಜನೇ, ಯಾವ ಸ್ತ್ರೀಯರು ನೀಚವೃತ್ತಿಯಲ್ಲಿ ನಿರತರಾಗಿ ಅನೇಕ ಪುರುಷರ ಬಳಿಗೆ

ಹೋಗುತ್ತಾರೆಯೋ, ತಮ್ಮ ಪತಿಗಳನ್ನು ಮೀರಿ ನಡೆಯುತ್ತಾರೆಯೋ ಅವರಿಗೆ ಯಾವ ಕರ್ಮವಿಪಾಕದಿಂದ ಹೀಗಾಗುತ್ತದೆ ಎಂದು ನನಗೆ ಹೇಳಬೇಕು.

ಮಹೇಶ್ವರಃ

ಯಾಃ ಪುರಾ ಮನುಜಾ ದೇವಿ ಬುದ್ಧಿಮೋಹಸಮನ್ವಿತಾಃ ।
ಕಾಮರಾಗಸಮಾಯುಕ್ತಾಃ ಪತೀನತಿಚರಂತಿ ವೈ ॥೨॥

ಪ್ರತಿಕೂಲಪರಾ ಯಾಸ್ತು ಪತೀನ್ ಪ್ರತಿ ಯಥಾ ತಥಾ ।
ಶೌಚಂ ಲಜ್ಜಾಂ ತು ವಿಸೃಜ್ಯ ಯಥೇಷ್ಟಪರಿಚಾರಕಾಃ ॥೩॥

ಏವಂಯುಕ್ತಸಮಾಚಾರಾ ಯಮಲೋಕೇ ಸುದಂಡಿತಾಃ ।
ಯದಿ ವೈ ಮಾನುಷಂ ಜನ್ಮ ಲಭೇರಂಸ್ತಾಸ್ತಥಾವಿಧಾಃ ।
ಬಹುಸಾಧಾರಣಾ ಏವಂ ಪುಂಶ್ಚಲ್ಯಶ್ಚ ಭವಂತಿ ತಾಃ ॥೪॥

ಮಹೇಶ್ವರ– ಎಲೌ ದೇವಿಯೇ, ಯಾವ ಸ್ತ್ರೀಯರು ಹಿಂದೆ ಬುದ್ಧಿಮೋಹದಿಂದ ಕೂಡಿದವರಾಗಿ, ಕಾಮಯುಕ್ತರಾಗಿ ತಮ್ಮ ಪತಿಗಳಿಗೆ ಪ್ರತಿಕೂಲರಾಗಿ ನಡೆದುಕೊಂಡಿರುತ್ತಾರೆಯೋ, ಇಷ್ಟಬಂದಂತೆ ಪರಿಚರ್ಯೆಯನ್ನು ಮಾಡಿರುತ್ತಾರೆಯೋ ಅಂತಹವರು ಯಮಲೋಕದಲ್ಲಿ ಶಿಕ್ಷೆಯನ್ನು ಹೊಂದಿ ಪುನಃ ಮನುಷ್ಯರಾಗಿ ಜನಿಸಿದರೆ ಅನೇಕ ಪುರುಷರ ಬಳಿಗೆ ಹೋಗುವ ಪುಂಶ್ಚಲಿಯರಾಗುತ್ತಾರೆ.

ಪೌಂಶ್ಚಲ್ಯಂ ಯತ್ತು ತದ್ವೃತ್ತಂ ಸ್ತ್ರೀಣಾಂ ಕಷ್ಟತಮಂ ಸ್ಮೃತಮ್ ।
ತತಃಪ್ರಭೃತಿ ತಾ ದೇವಿ ಪತಂತ್ಯೇವ ನ ಸಂಶಯಃ ।
ಶೋಚಂತಿ ಚೇತ್ತು ತದ್ವೃತ್ತಂ ಮನಸಾ ಹಿತಮಾಪ್ನುಯುಃ ॥೫॥

ಎಲೌ ದೇವಿಯೇ, ಸ್ತ್ರೀಯರಿಗೆ ಅನೇಕ ಪುರುಷರ ಸಹವಾಸವು ಬಹಳ ದುಃಖವನ್ನು ಕೊಡುವುದಾಗಿದೆ ಎಂದು ಹೇಳಲ್ಪಡುತ್ತದೆ. ಅಲ್ಲಿಂದ ಮುಂದೆ ಅವರು ಇನ್ನೂ ಅಧಃಪಾತವನ್ನು ಹೊಂದುತ್ತಾರೆ. ತಮ್ಮ ನಡತೆಯ ಬಗ್ಗೆ ಪಶ್ಚಾತ್ತಾಪವನ್ನು ಹೊಂದಿತಿದ್ದಿಕೊಂಡರೆ ಮಾತ್ರ ಅವರಿಗೆ ಹಿತವಾದೀತು.

ಉಮಾ

ಭಗವನ್ ದೇವದೇವೇಶ ಪ್ರಮದಾ ವಿಧವಾ ಭೃಶಮ್ ॥೬॥

ದೃಶ್ಯಂತೇ ಮಾನುಷಾ ಲೋಕೇ ಸರ್ವಕಲ್ಯಾಣವರ್ಜಿತಾಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೭॥

ಉಮಾ– ಭಗವಂತನೇ, ದೇವದೇವೇಶನೇ, ಲೋಕದ ಮನುಷ್ಯರಲ್ಲಿ ಸರ್ವ ಕಲ್ಯಾಣವರ್ಜಿತರಾದ ಅನೇಕ ವಿಧವೆಯರು ಕಾಣುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುತ್ತದೆ ಎಂದು ನನಗೆ ಹೇಳಬೇಕು.

ಮಹೇಶ್ವರಃ

ಯಾಃ ಪುರಾ ಮನುಜಾ ದೇವಿ ಬುದ್ಧಿಮೋಹಸಮನ್ವಿತಾಃ ।
ಕುಟುಂಬಂ ತತ್ರ ವೈ ಪತ್ಯುರ್ನಾಶಯಂತಿ ವೃಥಾ ತಥಾ ॥೮॥

ವಿಷದಾಶ್ಚಾಗ್ನಿದಾಶ್ಚೈವ ಪತೀನ್ ಪ್ರತಿ ಸುನಿರ್ದಯಾಃ ।
ಅನ್ಯಾಸಾಂ ಹಿ ಪತೀನ್ ಯಾಂತಿ ಸ್ವಪತಿದ್ವೇಷಕಾರಣಾತ್ ॥೯॥

ಏವಂಯುಕ್ತಸಮಾಚಾರಾ ಯಮಲೋಕೇ ಸುದಂಡಿತಾಃ ।
ನಿರಯಸ್ಥಾಶ್ಚಿರಂ ಕಾಲಂ ಕಥಂಚಿತ್‌ಪ್ರಾಪ್ಯ ಮಾನುಷಮ್ ।
ತತ್ರ ತಾ ಭೋಗರಹಿತಾ ವಿಧವಾಸ್ತು ಭವಂತಿ ವೈ ॥೧೦॥

ಮಹೇಶ್ವರ– ಎಲೌ ದೇವಿಯೇ, ಯಾವ ಸ್ತ್ರೀಯರು ಹಿಂದೆ ವ್ಯರ್ಥವಾಗಿ ಪತಿಯ ಕುಟುಂಬವನ್ನು ಭಗ್ನಗೊಳಿಸಿರುತ್ತಾರೆಯೋ, ವಿಷದಾನ ಮತ್ತು ಅಗ್ನಿದಾಹಗಳನ್ನು ಮಾಡಿರುತ್ತಾರೆಯೋ ಅಥವಾ ಗೃಹಗಳಿಗೆ ಅಗ್ನಿಯನ್ನು ಕೊಟ್ಟಿರುತ್ತಾರೆಯೋ ತಮ್ಮ ಪತಿಗಳ ವಿಷಯದಲ್ಲಿ ಏನೂ ದಯೆಯಿಲ್ಲದೆ ಅವರ ಮೇಲಿನ ದ್ವೇಷದಿಂದ ಇನ್ನೊಬ್ಬರ ಪತಿಯ ಬಳಿಗೆ ಹೋಗಿರುತ್ತಾರೆಯೋ ಅಂತಹವರು ಯಮಲೋಕದಲ್ಲಿ ಬಹಳ ಶಿಕ್ಷೆಯನ್ನು ಅನುಭವಿಸುತ್ತಾ ಬಹುಕಾಲ ವಾಸಿಸಿ ಪುನಃ ಕಷ್ಟದಿಂದ ಮನುಷ್ಯತ್ವವನ್ನು ಪಡೆದು ಅಲ್ಲಿ ಭೋಗರಹಿತರಾದ ವಿಧವೆಯರಾಗುತ್ತಾರೆ.

ಉಮಾ

ಭಗವನ್ ಪ್ರಮದಾಸ್ತ್ವನ್ಯಾಃ ಪತೌ ಜ್ಞಾತಿಷು ಸತ್ಸ್ವಪಿ ।
ಲಿಂಗಿನ್ಯಃ ಸಂಪ್ರದೃಶ್ಯಂತೇ ಪಾಷಂಡಂ ಮತಮಾಶ್ರಿತಾಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೧೧॥

ಉಮಾ– ಭಗವಂತನೇ, ಇನ್ನು ಕೆಲವು ಸ್ತ್ರೀಯರು ಪತಿಯೂ, ಬಂಧುಗಳೂ ಇರುತ್ತಿರುವಾಗಲೇ ಪಾಷಂಡಮತವನ್ನು ಆಶ್ರಯಿಸಿ, ಸಂನ್ಯಾಸಚಿಹ್ನೆಯನ್ನು ಧರಿಸಿರುವುದು ಕಂಡುಬರುತ್ತದೆ. ಯಾವ ಕರ್ಮವಿಪಾಕದಿಂದ ಹೀಗಾಗುತ್ತದೆ?

ಮಹೇಶ್ವರಃ

ಯಾಃ ಪುರಾ ಭಾವದೋಷೇಣ ಲೋಭಮೋಹಸಮನ್ವಿತಾಃ ।
ಪರದ್ರವ್ಯಪರಾ ಲೋಭಾತ್ ಪರೇಷಾಂ ದ್ರವ್ಯಹಾರಕಾಃ ॥೧೨॥

ಅಭ್ಯಸೂಯಾಪರಾ ಯಾಸ್ತು ಸಪತ್ನೀನಾಂ ಪ್ರದೂಷಕಾಃ ।
ಈರ್ಷ್ಯಾಪರಾಃ ಕೋಪನಾಶ್ಚ ಬಂಧೂನಾಂ ವಿಫಲಾಃ ಸದಾ ॥೧೩॥

ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ತಾಃ ಪ್ರಿಯೇ ।
ಅಪಲಕ್ಷಣಸಂಪನ್ನಾಃ ಪಾಷಂಡಂ ಧರ್ಮಮಾಶ್ರಿತಾಃ ।
ಸ್ತ್ರಿಯಃ ಪ್ರವ್ರಾಜಶೀಲಾಶ್ಚ ಭವಂತ್ಯೇವ ನ ಸಂಶಯಃ ॥೧೪॥

ಮಹೇಶ್ವರ– ಯಾರು ಹಿಂದೆ ಮನೋದೋಷದಿಂದ ಕೂಡಿ, ಲೋಭ-ಮೋಹ ಯುಕ್ತರಾಗಿ ಪರದ್ರವ್ಯದಲ್ಲೇ ಕಣ್ಣಿಟ್ಟು ಅದನ್ನು ಅಪಹರಿಸಿರುತ್ತಾರೆಯೋ, ಅಸೂಯಾ ಪರರಾಗಿರುತ್ತಾರೆಯೋ, ಸವತಿಯರನ್ನು ನಿಂದಿಸಿರುತ್ತಾರೆಯೋ, ಯಾವಾಗಲೂ ಅಸೂಯೆಯನ್ನೂ ಕೋಪವನ್ನೂ ಹೊಂದಿ ಬಂಧುಗಳಿಗೆ ಯಾವ ಉಪಕಾರವನ್ನೂ ಮಾಡಿರುವುದಿಲ್ಲವೋ ಎಲೌ ಪ್ರಿಯೆಯೇ, ಅಂತಹವರು ಇನ್ನೊಂದು ಜನ್ಮವನ್ನು ಹೊಂದಿ ದುರ್ಲಕ್ಷಣಗಳನ್ನು ಹೊಂದಿ, ಪಾಷಂಡಮತವನ್ನು ಆಶ್ರಯಿಸುತ್ತಾರೆ. ಅಂತಹವರು ಸಂನ್ಯಾಸಿನಿಯರಾಗಿ ನಿತ್ಯವೂ ತಿರುಗಾಡುವುದರಲ್ಲಿಯೇ ರತರಾಗಿರುತ್ತಾರೆ. ಇದರಲ್ಲಿ ಸಂಶಯವಿಲ್ಲ.

ಉಮಾ

ಭಗವನ್ ಮಾನುಷಾಃ ಕೇಚಿತ್ ಕಾರುವೃತ್ತಿಂ ಸಮಾಶ್ರಿತಾಃ ।
ಪ್ರದೃಶ್ಯಂತೇ ಮನುಷ್ಯೇಷು ನೀಚಕರ್ಮರತಾ ಜನಾಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹತಿ ॥೧೫॥

ಉಮಾ– ಭಗವಂತನೇ, ಮನುಷ್ಯರಲ್ಲೇ ಕೆಲವರು ಮರಗೆಲಸ ಮುಂತಾದ ನೀಚ ಕಾರ್ಯವನ್ನು ಮಾಡಿಕೊಂಡು ಜೀವಿಸಿಕೊಂಡಿರುವುದು ಕಂಡುಬರುತ್ತದೆ. ಯಾವ ಕರ್ಮವಿಪಾಕದಿಂದ ಹೀಗಾಗುತ್ತದೆ?

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಸ್ತಬ್ಧಾ ಮಾನಯುತಾ ಭೃಶಮ್ ।
ದರ್ಪಾಹಂಕಾರಸಂಯುಕ್ತಾಃ ಕೇವಲಾತ್ಮಪರಾಯಣಾಃ ॥೧೬॥

ತಾದೃಶಾ ಮಾನುಷಾ ದೇವಿ ಪುನರ್ಜನ್ಮನಿ ಶೋಭನೇ ।
ಕಾರವೋ ನಟಗಂಧರ್ವಾಃ ಸಂಭವಂತಿ ಯಥಾ ತಥಾ ॥೧೭॥

ಮಹೇಶ್ವರ– ದೇವಿಯೇ, ಯಾವ ಮನುಷ್ಯರು ಹಿಂದೆ ಅಹಂಕಾರಯುತರಾಗಿ ಸ್ತಬ್ಧತೆಯನ್ನು ಹೊಂದಿ (ದೊಡ್ಡವರ ಜೊತೆ ಮಾತನಾಡದೆ) ದರ್ಪ- ಅಹಂಕಾರದಿಂದ ಕೂಡಿ ಕೇವಲ ಸ್ವಾರ್ಥಿಗಳಾಗಿರುತ್ತಾರೆಯೋ, ಎಲೌ ಶೋಭನೆಯೇ, ಅಂತಹವರು ಇನ್ನೊಂದು ಜನ್ಮದಲ್ಲಿ ಬಡಗಿಗಳೂ, ನಟರೂ, ಸಂಗೀತಗಾರರೂ ಆಗಿ ಜನಿಸುತ್ತಾರೆ.

ನಾಪಿತಾ ಬಂದಿನಶ್ಚೈವ ತಥಾ ವೈತಾಲಿಕಾಃ ಪ್ರಿಯೇ ।
ಏವಂಭೂತಾಸ್ತ್ವಧೋವೃತ್ತಿಂ ಜೀವಂತ್ಯಾಶ್ರಿತ್ಯ ಮಾನವಾಃ ॥೧೮॥

ಪರಪ್ರಸಾಧನಕರಾಸ್ತೇ ಪರೈಃ ಕೃತವೇತನಾಃ ।
ಪರಾವಮಾನಸ್ಯ ಫಲಂ ಭುಂಜತೇ ಪೌರ್ವದೈಹಿಕಮ್ ॥೧೯॥

ಕ್ಷೌರಕರ್ಮವನ್ನು ಮಾಡುವವರೂ, ಸೂತ-ಮಾಗಧ-ಬಂಧಿಗಳೂ ಆಗಿ ನೀಚ ವೃತ್ತಿಯನ್ನು ಆಶ್ರಯಿಸಿ ಜೀವಿಸುತ್ತಾರೆ. ಇನ್ನೊಬ್ಬರಿಗೆ ಅಲಂಕಾರವನ್ನು ಮಾಡಿ ಅವರಿಂದ ವೇತನವನ್ನು ಪಡೆದು ಹಿಂದಿನ ಜನ್ಮದಲ್ಲಿ ಇನ್ನೊಬ್ಬರಿಗೆ ಮಾಡಿದ ಅವಮಾನದ ಫಲವನ್ನು ಅನುಭವಿಸುತ್ತಾರೆ.

ಉಮಾ

ಭಗವನ್ ದೇವದೇವೇಶ ಮಾನುಷೇಷ್ವೇವ ಕೇಚನ ।
ದಾಸಭೂತಾಃ ಪ್ರದೃಶ್ಯಂತೇ ಸರ್ವಕರ್ಮಕರಾ ಭೃಶಮ್ ॥೨೦॥

ಆಘಾತಭರ್ತ್ಸನಸಹಾಃ ಪೀಡ್ಯಮಾನಾಶ್ಚ ಸರ್ವಶಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨೧॥

ಉಮಾ– ಭಗವಂತನೇ, ದೇವದೇವೇಶನೇ, ಮನುಷ್ಯರಲ್ಲೇ ಕೆಲವರು ದಾಸರಾಗಿ ಇನ್ನೊಬ್ಬರ ಎಲ್ಲ ಕರ್ಮಗಳನ್ನು ಮಾಡುತ್ತಾರೆ. ಅವರಿಂದ ಹೊಡೆಯಲ್ಪಟ್ಟು, ನಿಂದಿಸಲ್ಪಟ್ಟು, ಪೀಡಿಸಲ್ಪಡುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುವುದು ಎಂದು ಹೇಳಬೇಕು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ಕಲ್ಯಾಣಿ ಕಾರಣಮ್ ॥೨೨॥

ಮಹೇಶ್ವರ– ಕಲ್ಯಾಣಿಯೇ, ಅದಕ್ಕೆ ಕಾರಣವನ್ನು ಹೇಳುವೆನು. ಅದನ್ನು ಕೇಳು.

ಯೇ ಪುರಾ ಮನುಜಾ ದೇವಿ ಪರೇಷಾಂ ವಿತ್ತಹಾರಕಾಃ ।
ಋಣವೃದ್ಧಿಕರಂ ಕುರ್ಯಾನ್ನ್ಯಾಸದತ್ತಂ ತಥೈವ ಚ ॥೨೩॥

ನಿಕ್ಷೇಪಕಾರಣಾದ್ ದತ್ತಂ ಪರೇಷಾಂ ದ್ರವ್ಯಹಾರಿಣಃ ।
ಪ್ರಮಾದಾದ್ ವಿಸ್ಮೃತಂ ನಷ್ಟಂ ಪರೇಷಾಂ ಧನಹಾರಕಾಃ ॥೨೪॥

ವಧಬಂಧಪರಿಕ್ಲೇಶೈರ್ದಾಸತ್ವೇ ಕುರ್ವತೇಽಪರಾನ್ ।
ತಾದೃಶಾ ಮರಣಂ ಪ್ರಾಪ್ತಾ ದಂಡಿತಾ ಯಮಶಾಸನೈಃ ॥೨೫॥

ದೇವಿಯೇ, ಯಾರು ಹಿಂದೆ ಇನ್ನೊಬ್ಬರ ಧನವನ್ನು ಅಪಹರಿಸಿರುತ್ತಾರೆಯೋ, ಸಾಲ ನೀಡಿದ ಧನಕ್ಕೆ ಬಡ್ಡಿಯನ್ನು ಹೆಚ್ಚಿಸಿಕೊಂಡು ಹೋಗಿರುತ್ತಾರೆಯೋ, ತಮ್ಮಲ್ಲಿ ನ್ಯಾಸವಾಗಿಟ್ಟ ಪದಾರ್ಥವನ್ನು ಅಪಹರಿಸಿರುತ್ತಾರೆಯೋ, ಇನ್ನೊಬ್ಬರು ಕೊಟ್ಟು ಪ್ರಮಾದದಿಂದ ಮರೆತ ವಸ್ತುವನ್ನು ಅಥವಾ ಧನವನ್ನು ಅಪಹರಿಸಿರುತ್ತಾರೆಯೋ, ಹೊಡೆದು, ಬಂಧಿಸಿ ಅಥವಾ ಪೀಡಿಸಿ ಇನ್ನೊಬ್ಬರನ್ನು ದಾಸರನ್ನಾಗಿ ಮಾಡಿಕೊಂಡಿರುತ್ತಾರೆಯೋ ಅಂತಹವರು ಮರಣವನ್ನು ಹೊಂದಿ ಯಮದೇವರ ಶಾಸನದಂತೆ ಶಿಕ್ಷಿಸಲ್ಪಡುತ್ತಾರೆ.

ಕಥಂಚಿತ್ ಪ್ರಾಪ್ಯ ಮಾನುಷ್ಯಂ ತತ್ರ ತೇ ದೇವಿ ಸರ್ವಥಾ ।
ದಾಸಭೂತಾ ಭವಿಷ್ಯಂತಿ ಜನ್ಮಪ್ರಭೃತಿ ಮಾನವಾಃ ॥೨೬॥

ತೇಷಾಂ ಕರ್ಮಾಣಿ ಕುರ್ವಂತಿ ಯೇಷಾಂ ತೇ ಧನಹಾರಕಾಃ ।
ಆ ಸಮಾಪ್ತೇಃ ಸ್ವಪಾಪಸ್ಯ ಕುರ್ವಂತೀತಿ ವಿನಿಶ್ಚಯಃ ॥೨೭॥

ದೇವಿಯೇ, ಬಹಳ ಕಷ್ಟದಿಂದ ಪುನಃ ಮನುಷ್ಯಜನ್ಮವನ್ನು ಪಡೆದು ಹುಟ್ಟಿದಾಗಿನಿಂದಲೇ ದಾಸರಾಗುತ್ತಾರೆ. ಯಾರ ಧನವನ್ನು ಹಿಂದೆ ಅಪಹರಿಸಿದ್ದರೋ ಅವರಿಗೆ ದಾಸರಾಗಿ ಆ ಪಾಪಕರ್ಮವು ಮುಗಿಯುವವರೆಗೂ ಅವರ ಕರ್ಮಗಳನ್ನು ಮಾಡುತ್ತಿರುತ್ತಾರೆ ಎಂಬುದು ನಿಶ್ಚಿತವಾದುದು.

ಪಶುಭೂತಾಸ್ತಥಾ ಚಾನ್ಯೇ ಭವಂತಿ ಧನಹಾರಕಾಃ ।
ತತ್ತಥಾ ಕ್ಷೀಯತೇ ಕರ್ಮ ತೇಷಾಂ ಪೂರ್ವಾಪರಾಧ್ಜಮ್ ।
ಅತೋಽನ್ಯಥಾ ನ ತಚ್ಚಕ್ಯಂ ಕರ್ಮ ಹಾತುಂ ಸುರಾಸುರೈಃ ॥೨೮॥

ಪರಧನವನ್ನು ಅಪಹರಿಸಿದ ಕೆಲವರು ಪಶುಗಳಂತೆ ಭಾರವನ್ನು ಹೊರುತ್ತಾರೆ. ಅವರೂ ಸಹ ಹಿಂದಿನವರಂತೆ ನರಕ ಭೋಗವನ್ನು ಅನುಭವಿಸಿ ಹಿಂದೆ ಮಾಡಿದ ಅಪರಾಧದ ಕರ್ಮಫಲವನ್ನು ಕಳೆದುಕೊಳ್ಳುತ್ತಾರೆ (ಲಕ್ಷಾಲಂಕಾರ). ಅವರ ಸೇವೆಯನ್ನು ಹಾಗೆ ಮಾಡುವುದರಿಂದ ಪೂರ್ವಾಪರಾಧದಿಂದ ಉಂಟಾದ ಅವರ ಕರ್ಮವು ಕ್ಷಯವನ್ನು ಹೊಂದುತ್ತದೆ. ಇಲ್ಲದಿದ್ದರೆ ದೇವತೆಗಳಾಗಲೀ, ಅಸುರರಾಗಲೀ ಆ ಕರ್ಮದಿಂದ ಬಿಡುಗಡೆಯನ್ನು ಹೊಂದಲಾರರು.

ಕಿಂತು ಮೋಕ್ಷವಿಧಿಸ್ತೇಷಾಂ ಸರ್ವಥಾ ತತ್ಪ್ರಸಾದಜಃ ।
ಅಯಥಾವನ್ಮೋಕ್ಷಕಾಮಃ ಪುನರ್ಜನ್ಮನಿ ಚೇಷ್ಯತೇ ॥೨೯॥

ಆದರೆ ಹಿಂದಿನ ಜನ್ಮದಲ್ಲಿ ಯಾರ ಧನವನ್ನು ಅಪಹರಿಸಿ ಈ ಜನ್ಮದಲ್ಲಿ ಅವರ ಸೇವೆಯನ್ನು ಮಾಡುತ್ತಿರುತ್ತಾರೆಯೋ ಅವರೇ ಪ್ರಸನ್ನರಾಗಿ ಈ ದಾಸರನ್ನು ದಾಸ್ಯಕರ್ಮದಿಂದ ಮುಕ್ತರನ್ನಾಗಿ ಮಾಡಬಹುದು. ಹಾಗಲ್ಲದೆ ದಾಸ್ಯಕರ್ಮದಿಂದ ಸ್ವಾಮಿಯ ಪ್ರಸನ್ನತೆಯಿಲ್ಲದೆ ತಾನೇ ಬಿಡಿಸಿಕೊಂಡು ಓಡಿಹೋಗುವವನು ಪುನಃ ಇನ್ನೊಂದು ಜನ್ಮದಲ್ಲಿ ದಾಸನಾಗುತ್ತಾನೆ (ಲಕ್ಷಾಲಂಕಾರ).

ಮೋಕ್ಷಕಾಮೀ ಯಥಾನ್ಯಾಯಂ ಕುರ್ವನ್ ಕರ್ಮಾಣಿ ಸರ್ವಶಃ ।
ಭರ್ತುಃ ಪ್ರಸಾದಮಾಕಾಂಕ್ಷೇದಾಘಾತಾನ್ ಸರ್ವಥಾ ಸಹನ್ ॥೩೦॥

ದಾಸ್ಯದಿಂದ ಬಿಡುಗಡೆಯನ್ನು ಹೊಂದಲು ಬಯಸುವವನು ಸ್ವಾಮಿಯ ಕರ್ಮವನ್ನು ನ್ಯಾಯದಿಂದ ಮಾಡಿ, ಅವನು ಹೊಡೆದರೆ ಅದನ್ನು ಸಹಿಸಿಕೊಂಡು ಅವನ ಅನುಗ್ರಹವನ್ನು ಬಯಸಬೇಕು.

ಪ್ರೀತಿಪೂರ್ವಂ ತು ಯೋ ಭರ್ತ್ರಾ ಮುಕ್ತೋ ಮುಕ್ತಃ ಸ್ವಪಾಪತಃ ।
ತಥಾಭೂತಾನ್ ಕರ್ಮಕರಾನ್ ಸದಾ ಸಂತೋಷಯೇತ್ ಪತಿಃ ॥೩೧॥

ಸ್ವಾಮಿಯಾದವನು ಪ್ರೀತಿಪೂರ್ವಕವಾಗಿ ಅವನನ್ನು ಕಳುಹಿಸಿಕೊಟ್ಟರೆ ಅವನು ತನ್ನ ಕರ್ಮದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಸ್ವಾಮಿಯಾದವನು ಅಂತಹ ಕರ್ಮಕಾರರನ್ನು ಯಾವಾಗಲೂ ಸಂತೋಷಪಡಿಸಬೇಕು.

ಯಥಾಹಂ ಕಾರಯೇತ್‌ಕರ್ಮ ದಂಡಂ ಕಾರಣತಃ ಕ್ಷಿಪೇತ್ ।
ವೃದ್ಧಾನ್ ಬಾಲಾಂಸ್ತಥಾ ಕ್ಷೀಣಾನ್ ಪಾಲಯನ್ ಧರ್ಮಮಾಪ್ನುಯಾತ್ ॥
ಇತಿ ತೇ ಕಥಿತಂ ದೇವಿ ಕಿಂ ಭೂಯಃ ಶ್ರೋತುಮಿಚ್ಛಸಿ ॥೩೩॥

ಅಂತಹವರಿಂದ ಹಗಲಿನಲ್ಲಿಮಾತ್ರ ಕೆಲಸವನ್ನು ಮಾಡಿಸಬೇಕು. ಕಾರಣವಿದ್ದರೆ ಮಾತ್ರ ಶಿಕ್ಷೆಯನ್ನು ಕೊಡಬೇಕು. ಅದರಲ್ಲಿಯೂ ಕೂಡ ದಾಸರಾದವರು ವೃದ್ಧರೂ, ಬಾಲರೂ, ಕೃಶರೂ ಆಗಿದ್ದರೆ ಅವರನ್ನು ರಕ್ಷಿಸುವ ಸ್ವಾಮಿಯು ಪುಣ್ಯವನ್ನು ಹೊಂದುತ್ತಾನೆ (ಲಕ್ಷಾಲಂಕಾರ). ಎಲೌ ದೇವಿಯೇ, ಇದನ್ನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ಉಮಾಮಹೇಶ್ವರಸಂವಾದೇ ಮಾನುಷಾಣಾಂ ವೈಧವ್ಯದಾಸ್ಯಾದಿ
ನಿಮಿತ್ತಕಥನಂ ನಾಮ ಷಡಧಿಕದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಆರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಏಳನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಚಂಡಾಲಾದಿಯೋನಿಪ್ರಾಪ್ತಿನಿಮಿತ್ತದ ಮತ್ತು ಕರ್ಮಫಲಭೋಗಪ್ರಕಾರದ ಕಥನ.

ಉಮಾ

ಭಗವನ್ ಮಾನುಷೇಷ್ವೇವ ಮಾನುಷಾಃ ಸಮದರ್ಶನಾಃ ।
ಚಂಡಾಲಾ ಇವ ದೃಶ್ಯಂತೇ ಸ್ಪರ್ಶಮಾತ್ರೇಣ ದೂಷಕಾಃ ॥೧॥

ನೀಚಕರ್ಮರತಾ ದೇವ ಸರ್ವೇಷಾಂ ಮಲಹಾರಕಾಃ ।
ದುರ್ಗತಾಃ ಕ್ಲೇಶಭೂಯಿಷ್ಠಾ ವಿರೂಪಾ ದುಷ್ಟಚೇತಸಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨॥

ಉಮಾ- ಭಗವಂತನೇ, ಮನುಷ್ಯರಲ್ಲಿಯೇ ಎಲ್ಲಾ ಮನುಷ್ಯರಂತೆ ಕಾಣುವ ಸ್ಪರ್ಶದಿಂದಲೂ ದೋಷವನ್ನುಂಟು ಮಾಡುವ ಚಂಡಾಲರಂತೆ ಕಾಣುವ ಮನುಷ್ಯರೂ ಇದ್ದಾರೆ. ಎಲೈ ದೇವನೇ, ಅವರು ಎಲ್ಲರ ಕಶ್ಮಲವನ್ನು ನಾಶ ಮಾಡುವವರಾಗಿ ನೀಚ ಕರ್ಮರತರಾಗಿ ದರಿದ್ರರೂ, ಬಹಳ ಕ್ಲೇಶವನ್ನು ಹೊಂದಿದವರೂ, ವಿರೂಪವುಳ್ಳವರೂ ಮತ್ತು ದುಷ್ಟಮನಸ್ಸುಳ್ಳವರೂ ಆಗಿರುತ್ತಾರೆ. ಇದು ಯಾವ ಕರ್ಮವಿಪಾಕದಿಂದ ಆಗುತ್ತದೆ ಎಂದು ನನಗೆ ಹೇಳಬೇಕು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ತ್ವಮೇಕಾಗ್ರಮನಾಃ ಶೃಣು ॥೩॥

ಮಹೇಶ್ವರ- ಅದನ್ನು ನಿನಗೆ ಹೇಳುವೆನು, ಒಂದೇ ಮನಸ್ಸಿನಿಂದ ಕೇಳು.

ಯೇ ಪುರಾ ಮನುಜಾ ಘೋರಾ ಅತಿಮಾನಯುತಾ ಭೃಶಮ್ ।
ಆತ್ಮಸಂಭಾವನಾಯುಕ್ತಾಃ ಸ್ತಬ್ಧಾ ದರ್ಪಸಮನ್ವಿತಾಃ ॥೪॥

ಪ್ರಣಾಮಂ ನ ತು ಕುರ್ವಂತಿ ಗುರೂಣಾಮಪಿ ಪಾಮರಾಃ ।
ಯೇ ಸ್ವಧರ್ಮಾಶ್ರಿತಂ ಕಾಲಮತಿಮಾನಾನ್ನ ಕುರ್ವತೇ ॥೫॥

ಯಾವ ಮನುಷ್ಯರು ಹಿಂದೆ ಘೋರರಾಗಿ ಬಹಳ ಅಹಂಕಾರದಿಂದ ಕೂಡಿದವರಾಗಿ ಆತ್ಮಸಂಭಾವಿತರೂ, ಸ್ತಬ್ಧರೂ, ದರ್ಪಿಷ್ಠರೂ ಆಗಿ ಗುರುಗಳಿಗೂ

ನಮಸ್ಕಾರವನ್ನು ಮಾಡಿರುವುದಿಲ್ಲವೋ, ಯಾರು ಅತಿಯಾದ ಅಹಂಕಾರದಿಂದ ಕೂಡಿ ಆಯಾ ಕಾಲದಲ್ಲಿ ಮಾಡಬೇಕಾದ ತಮ್ಮ ಧರ್ಮವನ್ನು ಮಾಡುವುದಿಲ್ಲವೋ;

ಪರಾನ್ ಸನ್ಮಾಮಯಂತ್ಯೇವ ಅಜ್ಞಾನಾತ್ಮನಿ ಯೇ ಬಲಾತ್ ।
ಋದ್ಧಿಯೋಗಾತ್ ಪರಾನ್ ನಿತ್ಯಮವಮನ್ಯಂತಿ ಮಾನವಾನ್ ।
ಪಾನಪಾಃ ಸರ್ವಭಕ್ಷಾಶ್ಚ ಪರುಷಾಃ ಕಟುಕಾ ನರಾಃ ॥೬॥

ಏವಂಯುಕ್ತಸಮಾಚಾರಾ ದಂಡಿತಾ ಯಮಶಾಸನೈಃ ।
ಕಥಂಚಿತ್ ಪ್ರಾಪ್ಯ ಮಾನುಷ್ಯಂ ಚಂಡಾಲಾಃ ಸಂಭವಂತಿ ತೇ ॥೭॥

ಅಜ್ಞಾನರೂಪರಾದ ತಮಗೆ ಬೇರೆಯವರಿಂದ ಯಾರು ಬಲಾತ್ಕಾರದಿಂದ ನಮಸ್ಕಾರ ಮಾಡಿಸಿಕೊಳ್ಳುತ್ತಾರೆಯೋ, ತಮ್ಮ ಐಶ್ವರ್ಯದ ಕಾರಣದಿಂದ ಉಳಿದ ಮನುಷ್ಯರನ್ನು ನಿತ್ಯವೂ ಅವಮಾನಗೊಳಿಸುತ್ತಾರೆಯೋ, ಮದ್ಯಪಾನವನ್ನು ಮಾಡಿ ಸರ್ವಭಕ್ಷಕರಾಗಿ ಕ್ರೂರರೂ ಒರಟರೂ ಆಗಿರುತ್ತಾರೆಯೋ ಅಂತಹವರು ಯಮಲೋಕದಲ್ಲಿ ಶಿಕ್ಷೆಯನ್ನು ಅನುಭವಿಸಿ, ಬಹಳ ಪ್ರಯಾಸದಿಂದ ಮನುಷ್ಯಜನ್ಮವನ್ನು ಪಡೆದು ಚಂಡಾಲರಾಗುತ್ತಾರೆ.

ನೀಚಕರ್ಮರತಾಶ್ಚೈವ ಸರ್ವೇಷಾಂ ಮಲಹಾರಕಾಃ ।
ಪರೇಷಾಂ ವಂದನಪರಾಸ್ತೇ ಭವಂತ್ಯೇವಮಾನಿತಾಃ ॥೮॥

ವಿರೂಪಾಃ ಪಾಪಯೋನಿಸ್ಥಾಃ ಸ್ಪರ್ಶನಾದಪಿ ವರ್ಜಿತಾಃ ।
ಕುವೃತ್ತಿಮುಪಜೀವಂತಿ ಭೂತ್ವಾ ತೇ ರಜಕಾದಯಃ ।
ಪುರಾऽತಿಮಾನದೋಷಾತ್ತು ಭುಂಜತೇ ಸ್ವಕೃತಂ ಫಲಮ್ ॥೯॥

ನೀಚಕರ್ಮಗಳನ್ನು ಮಾಡುತ್ತಾ, ಎಲ್ಲರ ಕಶ್ಮಲಗಳನ್ನು ತೊಳೆಯುತ್ತಾ, ಎಲ್ಲರಿಗೂ ನಮಸ್ಕಾರ ಮಾಡುತ್ತಾ ಅವಮಾನಿತರಾಗುತ್ತಾರೆ. ಪಾಪಯೋನಿಗಳಲ್ಲಿ ಜನಿಸಿ ವಿರೂಪವನ್ನು ಹೊಂದಿ ಸ್ಪರ್ಶಕ್ಕೂ ಅನರ್ಹರಾಗಿರುತ್ತಾರೆ. ಅಗಸರು ಮುಂತಾದವರಾಗಿ ಜನಿಸಿ ಹೀನವಾದ ಜೀವನೋಪಾಯಗಳನ್ನು ಆಶ್ರಯಿಸಿರುತ್ತಾರೆ. ಹಿಂದೆ ಬಹಳ ಅಹಂಕಾರವನ್ನು ಮಾಡಿದ ದೋಷದಿಂದ ಮುಂದಿನ ಜನ್ಮದಲ್ಲಿ ತಾವು ಮಾಡಿದ ಕರ್ಮದ ಫಲವನ್ನು ಅನುಭವಿಸುತ್ತಾರೆ.

ನಾನ್ಯವ್ಯವಸ್ಥಾರೂಪಾಣಾಂ ಚಂಡಾಲಾನಪಿ ಬುದ್ಧಿಮಾನ್ ।
ನ ಚ ನಿಂದೇನ್ನಾತಿಕುಪ್ಯೇದ್ ಭುಂಜತೇ ಸ್ವಕೃತಂ ಫಲಮ್ ।
ಚಂಡಾಲಾ ಅಪಿ ತಾಂ ಜಾತಿಂ ಶೋಚಂತಃ ಶುದ್ಧಿಮಾಪ್ನುಯುಃ ॥೧೦॥

ಆದರೆ ವಿವೇಕಿಯಾದ ಮನುಷ್ಯನು ಬೇರೆ ಜೀವನೋಪಾಯವಿಲ್ಲದಿರುವ ಚಂಡಾಲರನ್ನು ನಿಂದಿಸಬಾರದು ಅಥವಾ ಅವರ ಮೇಲೆ ಕೋಪಗೊಳ್ಳಬಾರದು. ಅವರು ತಮ್ಮ ಕರ್ಮದ ಫಲವನ್ನು ಅನುಭವಿಸುತ್ತಿರುತ್ತಾರೆ. ಚಂಡಾಲರೂ ಸಹ ತಮ್ಮ ಜಾತಿಯ ವಿಷಯದಲ್ಲಿ ಪಶ್ಚಾತ್ತಾಪವನ್ನು ಹೊಂದಿದರೆ ಶುದ್ಧಿಯನ್ನು ಪಡೆಯುತ್ತಾರೆ.

ಉಮಾ

ಭಗವನ್ಮಾನುಷಾಃ ಕೇಚಿದಾಶಾಪಾಶಶತೈರ್ವೃತಾಃ ।
ಪರೇಷಾಂ ದ್ವಾರಿ ತಿಷ್ಠಂತಿ ಪ್ರತಿಷಿದ್ಧಾಃ ಪ್ರವೇಶನೇ ॥೧೧॥

ದ್ರಷ್ಟುಂ ಜ್ಞಾಪಯಿತುಂ ಚೈವ ನ ಲಭಂತೇ ಚ ಯತ್ನತಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೧೨॥

ಉಮಾ– ಭಗವಂತನೇ, ಕೆಲವರು ನೂರಾರು ಆಶಾಪಾಶಗಳಿಂದ ಬದ್ಧರಾಗಿ ಇನ್ನೊಬ್ಬರ ಮನೆಯ (ಅಥವಾ ಕಛೇರಿಯ) ಬಾಗಿಲಿನಲ್ಲಿ ಪ್ರವೇಶಿಸಲು ನಿಷೇಧಿಸಲ್ಪಟ್ಟು ನಿಂತಿರುತ್ತಾರೆ. ಅವರಿಗೆ ಆ ವ್ಯಕ್ತಿಯನ್ನು ನೋಡಲು ಅಥವಾ ತಮ್ಮ ವಿಷಯಗಳನ್ನು ಹೇಳಲೂ ಸಹ ಪ್ರಯತ್ನ ಮಾಡಿದರೂ ಅವಕಾಶವಿರುವುದಿಲ್ಲ. ಯಾವ ಕರ್ಮವಿಪಾಕದಿಂದ ಹೀಗಾಗುವುದೆಂದು ಹೇಳಬೇಕು.

ಮಹೇಶ್ವರಃ

ಯೇ ಪುರಾ ಮಾನುಷಾ ದೇವಿ ಐಶ್ವರ್ಯಸ್ಥಾನಸಂಯುತಾಃ ।
ಸಂವಿದಂ ತು ನ ಕುರ್ವಂತಿ ಪರೈರೈಶ್ವರ್ಯಮೋಹಿತಾಃ ॥೧೩॥

ದ್ವಾರಾಣಿ ನ ದದತ್ಯೇವ ಲೋಭಮೋಹಾದಿಭಿರ್ವೃತಾಃ ।
ಅವಸ್ಥಾಮೋಹಸಂಯುಕ್ತಾಃ ಸ್ವಾರ್ಥಮಾತ್ರಪರಾಯಣಾಃ ॥೧೪॥

ಮಹೇಶ್ವರ– ಎಲೌ ದೇವಿಯೇ, ಯಾವ ಮನುಷ್ಯರು ಹಿಂದೆ ಐಶ್ವರ್ಯ ಮತ್ತು ಸ್ಥಾನಗಳಿಂದ ಕೂಡಿ, ತಮ್ಮ ಐಶ್ವರ್ಯದಿಂದ ಮೋಹಿತರಾಗಿ ಇನ್ನೊಬ್ಬರ ಜೊತೆಯಲ್ಲಿ

ಮಾತನ್ನೂ ಆಡಿರುವುದಿಲ್ಲವೋ, ಲೋಭ-ಮೋಹಗಳಿಂದ ಕೂಡಿದವರಾಗಿ ಇನ್ನೊಬ್ಬರು ಮಾತನಾಡುವುದಕ್ಕೆ ಅವಕಾಶವನ್ನೂ ಕೊಡದೆ ತಮ್ಮ ಉನ್ನತ ಸ್ಥಿತಿಯಿಂದ ಮೋಹಿತರಾಗಿ ಸ್ವಾರ್ಥಿಗಳಾಗಿರುತ್ತಾರೆಯೋ;

ಸರ್ವಭೋಗಯುತಾ ವಾಪಿ ಸರ್ವೇಷಾಂ ನಿಷ್ಫಲಾ ಭೃಶಮ್ ।
ಅಪಿ ಶಕ್ತಾ ನ ಕುರ್ಯುಸ್ತೇ ಪರಾನುಗ್ರಹಕಾರಣಾತ್ ॥೧೫॥

ನಿರ್ದಯಾಶ್ಚೈವ ನಿರ್ದ್ವಾರಾ ಭೋಗೈಶ್ವರ್ಯಗತಿಂ ಪ್ರತಿ ।
ಏವಂಯುಕ್ತಸಮಾಚಾರಾಃ ಪುನರ್ಜನ್ಮನಿ ಶೋಭನೇ ॥೧೬॥

ಯದಿ ಚೇನ್ಮಾನುಷಂ ಜನ್ಮ ಲಭೇರಂಸ್ತೇ ತಥಾವಿಧಾಃ ।
ದುರ್ಗತಾ ದುರವಸ್ಥಾಶ್ಚ ಕರ್ಮವ್ಯಾಕ್ಷೇಪಸಂಯುತಾಃ ॥೧೭॥

ಯಾವ ಸರ್ವಭೋಗಗಳಿಂದ ಕೂಡಿದ್ದರೂ ಇನ್ನೊಬ್ಬರಿಗೆ ಉಪಕಾರವನ್ನು ಮಾಡದೆ ಇನ್ನೊಬ್ಬರ ದೃಷ್ಟಿಯಲ್ಲಿ ನಿಷ್ಫಲರಾಗಿರುತ್ತಾರೆಯೋ, ಇನ್ನೊಬ್ಬರಿಗೆ ಉಪಕಾರವನ್ನು ಮಾಡಲು ಸಮರ್ಥರಾಗಿಯೂ ಯಾರು ಉಪಕಾರವನ್ನು ಮಾಡಿರುವುದಿಲ್ಲವೋ, ಭೋಗೈಶ್ವರ್ಯಗಳ ವಿಷಯದಲ್ಲಿ ಯಾರಿಗೂ ಅವಕಾಶವನ್ನು ಕೊಡದೆ ನಿರ್ದಯರಾಗಿರುತ್ತಾರೆಯೋ, ಎಲೌ ಶೋಭನೆಯೇ, ಅವರು ಇನ್ನೊಂದು ಜನ್ಮದಲ್ಲಿ ಮಾನುಷ್ಯತ್ವವನ್ನು ಪಡೆಯುವುದಾದರೆ ಆ ರೀತಿಯಲ್ಲಿ ದರಿದ್ರರೂ, ದುರವಸ್ಥೆಯನ್ನು ಹೊಂದಿದವರೂ ಮತ್ತು ಕೆಲಸಗಳನ್ನು ಕಳೆದುಕೊಳ್ಳುವವರೂ ಆಗುತ್ತಾರೆ.

ಅಭಿಧಾವಂತಿ ತೇ ಸರ್ವೇ ತಮರ್ಥಮಭಿವೇದಿನಃ ।
ರಾಜ್ಞಾಂ ವಾ ರಾಜಮಾತ್ರಾಣಾಂ ದ್ವಾರಿ ತಿಷ್ಠಂತಿ ವಾರಿತಾಃ ॥೧೮॥

ತಮ್ಮ ದುರವಸ್ಥೆಯನ್ನು ಹೇಳಿಕೊಳ್ಳಲು ರಾಜನ ಅಥವಾ ರಾಜಪುರುಷನ ಮನೆಯ ಬಾಗಿಲಿಗೆ ಹೋಗಿ ದ್ವಾರದಲ್ಲಿ ನಿಂತು ಪ್ರವೇಶದಿಂದ ನಿಷೇಧಿಸಲ್ಪಡುತ್ತಾರೆ.

ಕರ್ಮ ವಿಜ್ಞಾಪಿತುಂ ದ್ರಷ್ಟುಂ ನ ಲಭಂತೇ ಕಥಂಚನ ।
ಪ್ರವೇಷ್ಟುಮಪಿ ತೇ ದ್ವಾರಂ ಬಹಿಸ್ತಿಷ್ಠಂತಿ ಕಾಂಕ್ಷಯಾ ॥೧೯॥

ರಾಜ ಮೊದಲಾದವರನ್ನು ನೋಡುವುದಕ್ಕಾಗಲೀ, ತಮ್ಮ ಪರಿಸ್ಥಿತಿಯನ್ನು ಹೇಳುವುದಕ್ಕಾಗಲೀ, ದ್ವಾರದೊಳಗೆ ಪ್ರವೇಶಿಸುವುದಕ್ಕಾಗಲೀ ಅವರು ಅವಕಾಶವನ್ನು ಪಡೆಯದೆ ಕೇವಲ ಆಸೆಯನ್ನು ಹೊತ್ತು ಬಾಗಿಲಿನಲ್ಲಿ ನಿಂತಿರುತ್ತಾರೆ.

ಉಮಾ

ಭಗವನ್ಮಾನುಷಾಃ ಕೇಚಿನ್ಮನುಷ್ಯೇಷು ಬಹುಷ್ವಪಿ ।
ಸಹಸಾ ನಷ್ಟಸರ್ವಸ್ವಾ ಭ್ರಷ್ಟಕೋಶಪರಿಗ್ರಹಾಃ ॥೨೦॥

ದೃಶ್ಯಂತೇ ಮಾನುಷಾಃ ಕೇಚಿದ್ ರಾಜಚೋರೋದಕಾದಿಭಿಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨೧॥

ಉಮಾ– ಭಗವಂತನೇ, ಮನುಷ್ಯರಲ್ಲಿಯೇ ಎಷ್ಟೋ ಮನುಷ್ಯರು ಇದ್ದಕ್ಕಿದ್ದಂತೆ ರಾಜರಿಂದ, ಚೋರರಿಂದ, ಜಲಪ್ರವಾಹ ಮೊದಲಾದವುಗಳಿಂದ ಎಲ್ಲವನ್ನೂ ಕಳೆದುಕೊಂಡು ತಮ್ಮ ಕೋಶವನ್ನು ಮತ್ತು ಉಪಕರಣಗಳನ್ನು ಕಳೆದುಕೊಂಡು ನಿಲ್ಲುವುದು ಕಂಡುಬರುತ್ತದೆ. ಯಾವ ಕರ್ಮವಿಪಾಕದಿಂದ ಹೀಗಾಗುವುದೆಂದು ನನಗೆ ಹೇಳಬೇಕು.

ಮಹೇಶ್ವರಃ

ಯೇ ಪುರಾ ಮಾನುಷಾ ದೇವಿ ಆಸುರಂ ಭಾವಮಾಶ್ರಿತಾಃ ।
ಪರೇಷಾಂ ವೃತ್ತಿನಾಶಂ ತು ಕುರ್ವತೇ ದ್ವೇಷಲೋಭತಃ ॥೨೨॥

ಉತ್ಕೋಚನಪರಾಶ್ಚೈವ ಪಿಶುನಾಶ್ಚ ತಥಾವಿಧಾಃ ।
ಪರದ್ರವ್ಯಹರಾ ಘೋರಾಶ್ಚೌರ್ಯಾದ್ವಾನ್ಯೇನ ಕರ್ಮಣಾ ॥೨೩॥

ಮಹೇಶ್ವರ– ಎಲೌ ದೇವಿಯೇ, ಯಾವ ಮನುಷ್ಯರು ಹಿಂದೆ ಅಸುರ ಸ್ವಭಾವವನ್ನು ಹೊಂದಿ, ದ್ವೇಷ ಮತ್ತು ಲೋಭಗಳಿಗೆ ಒಳಗಾಗಿ, ಇನ್ನೊಬ್ಬರ ಜೀವನೋಪಾಯವನ್ನು ನಾಶಪಡಿಸಿರುತ್ತಾರೆಯೋ, ಇನ್ನೊಬ್ಬರನ್ನು ನಿಂದಿಸುವವರಾಗಿ ಚಾಡಿಯನ್ನು ಹೇಳುವವರಾಗಿರುತ್ತಾರೆಯೋ, ಚೌರ್ಯದಿಂದಾಗಲೀ ಅಥವಾ ಬೇರೆ ರೀತಿಯಿಂದಾಗಲೀ ಪರದ್ರವ್ಯವನ್ನು ಅಪಹರಿಸಿ ಘೋರರಾಗಿರುತ್ತಾರೆಯೋ;

ನಿರ್ದಯಾ ನಿರನುಕ್ರೋಶಾಃ ಪರೇಷಾಂ ವೃತ್ತಿನಾಶಕಾಃ ।
ನಾಸ್ತಿಕಾನೃತಭೂಯಿಷ್ಠಾಃ ಪರದ್ರವ್ಯಾಪಹಾರಿಣಃ ॥೨೪॥

ಏವಂಯುಕ್ತಸಮಾಚಾರಾ ದಂಡಿತಾ ಯಮಶಾಸನೈಃ ।
ನಿರಯಸ್ಥಾಶ್ಚಿರಂ ಕಾಲಂ ತತ್ರ ದುಃಖಸಮನ್ವಿತಾಃ ॥೨೫॥

ದಯಾಶೂನ್ಯರೂ, ಅನುಕಂಪಶೂನ್ಯರೂ ಆಗಿ, ನಾಸ್ತಿಕರಾಗಿ ಸುಳ್ಳು ಮಾತುಗಳನ್ನಾಡಿ ಪರದ್ರವ್ಯವನ್ನು ಅಪಹರಿಸಿರುತ್ತಾರೆಯೋ ಅಂತಹವರು ನರಕದಲ್ಲಿ ಬಹುಕಾಲವಿದ್ದು ಯಮದೇವರ ಆಜ್ಞೆಯಂತೆ ಶಿಕ್ಷೆಯನ್ನು ಹೊಂದಿ ದುಃಖವನ್ನು ಅನುಭವಿಸುತ್ತಾರೆ.

ಯದಿ ಚೇನ್ಮಾನುಷಂ ಜನ್ಮ ಲಭೇರಂಸ್ತೇ ತಥಾವಿಧಾಃ ।
ತತ್ರಸ್ಥಾಃ ಪ್ರಾಪ್ನುವಂತ್ಯೇವ ಸಹಸಾ ದ್ರವ್ಯನಾಶನಮ್ ॥೨೬॥

ಕಷ್ಟಂ ಚ ಪ್ರಾಪ್ನುವಂತ್ಯೇವ ಕಾರಣಾಕಾರಣಾದಪಿ ।
ನಾಶಂ ವಿನಾಶಂ ದ್ರವ್ಯಾಣಾಮುಪಘಾತಾಂಶ್ಚ ಸರ್ವಶಃ ॥೨೭॥

ಅಂತಹವರು ಒಂದು ಪಕ್ಷ ಮನುಷ್ಯ ಜನ್ಮವನ್ನು ಪಡೆದರೆ ಅಲ್ಲಿ ಇದ್ದಕ್ಕಿದ್ದಂತೆಯೇ ದ್ರವ್ಯನಾಶವನ್ನು ಹೊಂದುತ್ತಾರೆ. ಕಾರಣವಿಲ್ಲದೆ ಅಥವಾ ಕಾರಣ ಸಹಿತವಾಗಿ ಕಷ್ಟವನ್ನು ಹೊಂದುತ್ತಾರೆ. ಸರ್ವನಾಶವನ್ನು ಮತ್ತು ದ್ರವ್ಯವಿನಾಶವನ್ನು ಹೊಂದುತ್ತಾರೆ.

ಉಮಾ

ಭಗವನ್ ಮಾನುಷಾಃ ಕೇಚಿದ್ ಬಾಂಧವೈಃ ಸಹಸಾ ಪೃಥಕ್ ।
ಕಾರಣಾಕಾರಣಾದೇವ ಸಹಸಾ ಪ್ರಾಣನಾಶನಮ್ ॥೨೮॥

ಶಸ್ತ್ರೇಣ ವಾಽನ್ಯಥಾ ವಾಽಪಿ ಪ್ರಾಪ್ನುವಂತಿ ವಧಂ ನರಾಃ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೨೯॥

ಉಮಾ– ಭಗವಂತನೇ, ಮನುಷ್ಯರಲ್ಲಿ ಕೆಲವರು ಬಾಂಧವರ ಜೊತೆಯಲ್ಲಿ ಅಥವಾ ಏಕಾಂಗಿಯಾಗಿ ಕಾರಣವಿದ್ದು ಅಥವಾ ಇಲ್ಲದೆ ಇದ್ದಕ್ಕಿದ್ದಂತೆಯೇ ಶಸ್ತ್ರದಿಂದಾಗಲೀ ಅಥವಾ ಬೇರೆ ಪ್ರಕಾರದಿಂದಾಗಲೀ ಮರಣವನ್ನು ಹೊಂದುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುವುದು ಎಂದು ನನಗೆ ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಘೋರಕರ್ಮರತಾ ನರಾಃ ।
ಆಸುರಾಃ ಪ್ರಾಯಶೋ ಮೂರ್ಖಾಃ ಪ್ರಾಣಿಹಿಂಸಾಪ್ರಿಯಾ ಭೃಶಮ್ ॥

ನಿರ್ದಯಾಃ ಪ್ರಾಣಿಹಿಂಸಾಯಾಂ ತಥಾ ಪ್ರಾಣವಿಘಾತಕಾಃ ।
ವಿಶ್ವಸ್ತಘಾತಕಾಶ್ಚೈವ ತಥಾ ಸುಪ್ತವಿಘಾತಕಾಃ ।
ಪ್ರಾಯಶೋऽನೃತಭೂಯಿಷ್ಠಾ ನಾಸ್ತಿಕಾ ಮಾಂಸಭೋಜಿನಃ ॥೩೧॥

ಏವಂಯುಕ್ತಸಮಾಚಾರಾಃ ಕಾಲಧರ್ಮಂ ಗತಾಃ ಪುನಃ ।
ದಂಡಿತಾ ಯಮದಂಡೇನ ನಿರಯಸ್ಥಾಶ್ಚಿರಂ ಪ್ರಿಯೇ ॥೩೨॥

ಮಹೇಶ್ವರ– ಎಲೌ ದೇವಿಯೇ, ಹಿಂದೆ ಯಾವ ಮನುಷ್ಯರು ಪ್ರಾಯಶಃ ಅಸುರರಾಗಿ ಘೋರಕರ್ಮಗಳಲ್ಲಿ ಆಸಕ್ತರಾಗಿ, ಮೂರ್ಖರಾಗಿ ಪ್ರಾಣಿಹಿಂಸೆಯಲ್ಲೇ ಸಂತೋಷವನ್ನು ಹೊಂದಿ ನಿರ್ದಯವಾಗಿ ಪ್ರಾಣಿ ಹಿಂಸೆಯನ್ನು ಮಾಡಿರುತ್ತಾರೆಯೋ, ವಿಶ್ವಾಸಘಾತವನ್ನು ಮಾಡಿರುತ್ತಾರೆಯೋ, ನಿದ್ರಿಸುತ್ತಿರುವವರನ್ನು ಕೊಂದಿರುತ್ತಾರೆಯೋ, ಪ್ರಾಯಶಃ ಸುಳ್ಳನ್ನೇ ಯಾವಾಗಲೂ ಮಾತನಾಡಿರುತ್ತಾರೆಯೋ, ನಾಸ್ತಿಕರಾಗಿ ಮತ್ತು ಮಾಂಸ ಭೋಜನರಾಗಿರುತ್ತಾರೆಯೋ ಅಂತಹ ನಡೆಯುಳ್ಳವರು ಮರಣವನ್ನು ಹೊಂದಿ, ಯಮದೇವರಿಂದ ಶಿಕ್ಷೆಯನ್ನು ಅನುಭವಿಸುತ್ತಾ ನರಕದಲ್ಲಿ ಬಹಳ ಕಾಲ ಇರುತ್ತಾರೆ.

ತಿರ್ಯಗ್ಯೋನಿಂ ಪುನಃ ಪ್ರಾಪ್ಯ ತತ್ರ ದುಃಖಪರಿಕ್ಷಯಾತ್ ।
ಯದಿ ಚೇನ್ಮಾನುಷಂ ಜನ್ಮ ಲಭೇರಂಸ್ತೇ ತಥಾವಿಧಾಃ ।
ತತ್ರ ತೇ ಪ್ರಾಪ್ನುವಂತ್ಯೇವ ವಧಬಂಧಾನ್ ಯಥಾ ತಥಾ ॥೩೩॥

ಆಢ್ಯಾ ವಾ ದುರ್ಗತಾ ವಾऽಪಿ ಭುಂಜತೇ ಸ್ವಕೃತಂ ಫಲಮ್ ।
ಸುಪ್ತಾ ಮತ್ತಾಶ್ಚ ವಿಶ್ವಸ್ತಾಸ್ತಥಾ ತೇ ಪ್ರಾಪ್ನುವಂತ್ಯುತ ॥೩೪॥

ಪ್ರಾಣಬಾಧಕೃತಂ ದುಃಖಂ ಬಾಂಧವೈಃ ಸಹಸಾ ಪೃಥಕ್ ।
ಪುತ್ರದಾರವಿನಾಶಂ ವಾ ಶಸ್ತ್ರೇಣಾನ್ಯೇನ ವಾ ವಧಮ್ ॥೩೫॥

ಅವರು ಪುನಃ ಅಲ್ಲಿಂದ ತಿರ್ಯಗ್ಯೋನಿಯನ್ನು ಹೊಂದಿ, ಪಾಪವನ್ನು ಕಳೆದುಕೊಂಡು, ಒಂದು ಪಕ್ಷ ಮನುಷ್ಯಜನ್ಮವನ್ನು ಪಡೆದರೆ ಅಲ್ಲಿ ಅವರು ವಧೆ, ಬಂಧನ ಮೊದಲಾದ ಅನಿಷ್ಟಗಳನ್ನು ಅನುಭವಿಸುತ್ತಾರೆ. ದರಿದ್ರರಾಗಲೀ ಅಥವಾ ಧನಾಢ್ಯರಾಗಲೀ ತಾವು ಮಾಡಿದ ಕರ್ಮದ ಫಲವನ್ನು ಅನುಭವಿಸುತ್ತಾರೆ. ಪ್ರಾಣ ಬಾಧೆಯನ್ನು ಮಾಡಿದ ಪಾಪದ ಫಲವಾದ ದುಃಖವನ್ನು ಬಾಂಧವರ ಜೊತೆಯಾಗಲೀ ಅಥವಾ ಒಬ್ಬನೇ ಆಗಲಿ ಹೊಂದಿ ಪುತ್ರ-ಪತ್ನೀ ವಿನಾಶವನ್ನಾಗಲೀ ಅಥವಾ ಶಸ್ತ್ರದಿಂದ ವಧೆಯನ್ನಾಗಲೀ ಹೊಂದುತ್ತಾರೆ.

ಉಮಾ

ಭಗವನ್ಮಾನುಷಾಃ ಕೇಚಿದ್ ರಾಜಭಿರ್ನೀತಿಕೋವಿದೈಃ ।
ದಂಡ್ಯಂತೇ ಮಾನುಷೇ ಲೋಕೇ ಮಾನುಷಾಃ ಸತತಂ ಭುವಿ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೩೬॥

ಉಮಾ– ಭಗವಂತನೇ, ಲೋಕದಲ್ಲಿ ಕೆಲವು ಮನುಷ್ಯರು ರಾಜನೀತಿ ಕೋವಿದರು ಮೊದಲಾದವರಿಂದ ಸತತವಾಗಿ ದಂಡನೆಗೆ ಒಳಗಾಗುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುವುದೆಂದು ನನಗೆ ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಮನುಜಾಂಶ್ಚೇತರಾಂಶ್ಚ ವಾ ।
ಕ್ಲಿಷ್ಟಘಾತೇನ ನಿಘ್ನಂತಿ ಪ್ರಾಣಾನ್ ಪ್ರಾಣಿಷು ನಿರ್ದಯಾಃ ।
ಆಸುರಾ ಘೋರಕರ್ಮಾಣಃ ಕ್ರೂರದಂಡವಧಪ್ರಿಯಾಃ ॥೩೭॥

ಯೇ ದಂಡಯಂತ್ಯದಂಡ್ಯಾಂಸ್ತು ರಾಜಾನಃ ಕೋಪಮೋಹಿತಾಃ ।
ಹಿಂಸಾವಿಹಾರಾಃ ಪುರುಷಾ ಮಾಂಸಾದಾ ನಾಸ್ತಿಕಾಃ ಶುಭೇ ॥೩೮॥

ಕೇಚಿತ್‌ಸ್ತ್ರೀಪುರುಷಘ್ನಾಶ್ಚ ಗುರುಘ್ನಾಶ್ಚ ತಥಾ ಪ್ರಿಯೇ ।
ಏವಂಯುಕ್ತಸಮಾಚಾರಾಃ ಪ್ರಾಣಿಧರ್ಮಗತಾಃ ಪುನಃ ॥೩೯॥

ದಂಡಿತಾ ಯಮದಂಡೇನ ನಿರಯಸ್ಥಾಶ್ಚಿರಂ ಪ್ರಿಯೇ ।
ಪೂರ್ವದೇಹಕೃತಂ ಕರ್ಮ ಭುಂಜತೇ ತದಿಹ ಪ್ರಜಾಃ ॥೪೦॥

ಮಹೇಶ್ವರ– ಎಲೌ ದೇವಿಯೇ, ಯಾವ ಪುರುಷರು ಹಿಂದೆ ಪುರುಷರನ್ನಾಗಲೀ ಪ್ರಾಣಿಗಳನ್ನಾಗಲೀ ನಿರ್ದಯವಾಗಿ ವಿಚಿತ್ರ ಹಿಂಸೆಗೆ ಗುರಿ ಮಾಡಿರುತ್ತಾರೆಯೋ ಅಂತಹ ಅಸುರರೂ, ಘೋರಕರ್ಮವನ್ನು ಮಾಡುವವರೂ, ಕ್ರೂರವಾದ ಶಿಕ್ಷೆ ಮತ್ತು ವಧೆಗಳನ್ನು ಮಾಡುವುದರಲ್ಲಿ ಸಂತೋಷ ಪಡುವವರೂ, ಆದ ಯಾವ ರಾಜರು ಕೋಪದಿಂದ ಮೋಹಿತರಾಗಿ ಶಿಕ್ಷೆಗೆ ಅನರ್ಹರಾದವರಿಗೆ ಶಿಕ್ಷೆಯನ್ನು ಕೊಟ್ಟಿರುತ್ತಾರೆಯೋ, ಹಿಂಸೆಯನ್ನೇ ವಿಹಾರವೆಂದು ತಿಳಿಯುತ್ತಾರೆಯೋ, ಮಾಂಸಭಕ್ಷಕರೋ, ನಾಸ್ತಿಕರೋ, ಯಾರು ಸ್ತ್ರೀಯನ್ನಾಗಲೀ, ಪುರುಷನನ್ನಾಗಲೀ, ಗುರುವನ್ನಾಗಲೀ ಕೊಂದಿರುತ್ತಾರೆಯೋ ಅಂತಹ ನಡತೆಯುಳ್ಳವರು ಪುನಃ ಪ್ರಾಣಿಧರ್ಮವನ್ನು ಹೊಂದಿದವರಾಗಿ, ಯಮದಂಡದಿಂದ ನರಕದಲ್ಲಿ ಚಿರಕಾಲ ಶಿಕ್ಷೆಯನ್ನು ಅನುಭವಿಸಿ, ಈ ಭೂಮಿಗೆ ಬಂದು ಹಿಂದಿನ ದೇಹದಲ್ಲಿ ಮಾಡಿದ ಕರ್ಮದ ಫಲವನ್ನು ಅನುಭವಿಸುತ್ತಾರೆ.

ಇಹೈವ ಯತ್‌ಕೃತಂ ಕರ್ಮ ತತ್‌ಪರತ್ರ ಫಲತ್ಯುತ ।
ಏಷಾ ವ್ಯವಸ್ಥಿತಿರ್ದೇವಿ ಮಾನುಷೇಷ್ವೇವ ದೃಶ್ಯತೇ ॥೪೧॥

ಭೂಲೋಕದಲ್ಲಿ ಮಾಡಿದ ಕರ್ಮದ ಫಲವು ಇಲ್ಲಿಯೇ ಇನ್ನೊಂದು ಜನ್ಮದಲ್ಲಿ ಅನುಭವಿಸಲ್ಪಡುತ್ತದೆ. ಎಲೌ ದೇವಿಯೇ, ಈ ವ್ಯವಸ್ಥೆಯು ಮನುಷ್ಯರಲ್ಲಿ ಮಾತ್ರ ಕಂಡು ಬರುತ್ತದೆ (ಮಾಡಿದ ಕರ್ಮದ ಬಹುಭಾಗದ ಫಲವನ್ನು ನರಕದಲ್ಲಿ ಅನುಭವಿಸಿ ಪುನಃ ಭೂಮಿಗೆ ಬಂದು ಇಲ್ಲಿಯೇ ಅನುಭವಿಸುತ್ತಾರೆ).

ನ ಋಷೀಣಾಂ ನ ದೇವಾನಾಮಮೃತತ್ವಾತ್ ತಪೋಬಲಾತ್ ।
ತೈರೇಕೇನ ಶರೀರೇಣ ಭುಜ್ಯತೇ ಕರ್ಮಣಃ ಫಲಮ್ ॥೪೨॥

ದೇವತೆಗಳು ಅಮರರಾದುದರಿಂದ ಮತ್ತು ಋಷಿಗಳು ತಪೋಬಲದಿಂದ ಕೂಡಿದವರಾದ್ದರಿಂದ ಅವರು ಆ ಶರೀರದಲ್ಲಿ ಮಾಡಿದ ಕರ್ಮಫಲವನ್ನು ಆ ಶರೀರದಲ್ಲಿಯೇ ಭುಂಜಿಸುತ್ತಾರೆ.

ನ ತಥಾ ಮಾನುಷಾಣಾಂ ಸ್ಯಾದಂತರ್ಧಾಯ ಭವೇದ್ಧಿ ತತ್ ॥೪೩॥

ಮನುಷ್ಯರಿಗೆ ಹಾಗಾಗುವುದಿಲ್ಲ. ದೇಹಾಂತರದಲ್ಲಿಯೇ ಆ ಕರ್ಮಫಲವನ್ನು ಅನುಭವಿಸುತ್ತಾರೆ.

ಉಮಾ

ಕಿಮರ್ಥಂ ಮಾನುಷಾ ಲೋಕೇ ದಂಡ್ಯಂತೇ ಪೃಥಿವೀಶ್ವರೈಃ ।
ಕೃತಾಪರಾಧಮುದ್ದಿಶ್ಯ ಹಂತಾ ಹರ್ತಾऽಯಮಿತ್ಯುತ ॥೪೪॥

ಉಮಾ– ಲೋಕದಲ್ಲಿ ಮನುಷ್ಯರು, ರಾಜರಿಂದ ಇವನು ಕೊಂದವನು, ಇವನು ಕದ್ದವನು ಎಂದು ಅವರು ಮಾಡಿದ ಅಪರಾಧವನ್ನು ನಿಮಿತ್ತೀಕರಿಸಿ ಏಕೆ ಶಿಕ್ಷೆಯನ್ನು ಹೊಂದುತ್ತಾರೆ?

ಪುತ್ರಾರ್ಥೀ ಪುತ್ರಕಾಮೇಷ್ಟ್ಯಾ ಇಹೈವ ಲಭತೇ ಸುತಾನ್ ।
ತೈರೇವ ಹಿ ಶರೀರೇಣ ಭುಂಜಾನಾಃ ಕರ್ಮಣಾಂ ಫಲಮ್ ॥೪೫॥

ದೃಶ್ಯಂತೇ ಮಾನುಷೇ ಲೋಕೇ ತದ್‌ಭವಾನನುಮನ್ಯತೇ ।
ಏತನ್ಮೇ ಸಂಶಯಸ್ಥಾನಂ ತನ್ಮೇ ತ್ವಂ ಛೇತ್ತುಮರ್ಹಸಿ ॥೪೬॥

ಪುತ್ರಾರ್ಥಿಯಾದವನು ಪುತ್ರಕಾಮೇಷ್ಟಿಯನ್ನು ಮಾಡಿ ಇಲ್ಲಿಯೇ ಈ ಜನ್ಮದಲ್ಲಿಯೇ ಫಲವನ್ನು ಪಡೆಯುತ್ತಾನೆ. ಆದ್ದರಿಂದ ಮನುಷ್ಯರೂ ಸಹ ತಾವು ಮಾಡಿದ ಕರ್ಮದ ಫಲವನ್ನು ಅದೇ ಜನ್ಮದಲ್ಲಿಯೇ ಪಡೆಯುವುದು ಕಂಡುಬರುತ್ತದೆ. ಇದು ನಿನಗೂ ಸಮ್ಮತವಾಗಿದೆ. ಆದ್ದರಿಂದ ನನ್ನ ಸಂಶಯವನ್ನು ಪರಿಹರಿಸಬೇಕು (ಮನುಷ್ಯರು ಜನ್ಮಾಂತರದಲ್ಲಿ ಅನುಭವಿಸುತ್ತಾರೆ ಎಂದು ಹೇಳಿದ್ದೀಯೆ. ಆದರೆ ಈ ಜನ್ಮದಲ್ಲಿಯೇ ಅನುಭವಿಸುವುದು ಕಂಡುಬರುತ್ತದೆ. ಆದ್ದರಿಂದ ನನಗೆ ಉಂಟಾದ ಸಂಶಯವನ್ನು ಪರಿಹರಿಸಬೇಕು).

ಮಹೇಶ್ವರಃ

ಸ್ಥಾನೇ ಸಂಶಯಿತಂ ದೇವಿ ತತ್ತ್ವಂ ಶೃಣು ಸಮಾಹಿತಾ ।
ಕರ್ಮ ಕರ್ಮಫಲಂ ಚೇತಿ ಯುಗಪದ್‌ಭುವಿ ನೇಷ್ಯತೇ ॥೪೭॥

ಮಹೇಶ್ವರ– ಎಲೌ ದೇವಿಯೇ, ನಿನ್ನ ಸಂಶಯವು ಬಹಳ ನ್ಯಾಯವಾಗಿದೆ. ಸಮಾಧಾನದಿಂದ ತತ್ತ್ವವನ್ನು ಕೇಳು. ಕರ್ಮ ಮತ್ತು ಅದರ ಫಲ ಎರಡೂ ಒಂದೇ ಕಾಲದಲ್ಲಿ ಉಂಟಾಗುವುದಿಲ್ಲ.

ಯತ್ತ್ವಯಾऽಭಿಹಿತಂ ದೇವಿ ಹಂತಾ ಹರ್ತಾऽಯಮಿತ್ಯಪಿ ।
ತೇಷಾಂ ತತ್‌ಪೂರ್ವಕಂ ಕರ್ಮ ದಂಡ್ಯತೇ ಯತ್ರ ರಾಜಭಿಃ ॥೪೮॥

ದೇವಿಯೇ, ಇವನು ಕಳ್ಳ, ಇವನು ಕೊಲೆಗಡುಕನೆಂದು ಹೇಳಿ ರಾಜರು ದಂಡಿಸುತ್ತಾರಷ್ಟೆ? ಅಲ್ಲಿಯೂ ಕೂಡ ರಾಜರು ಅವರು ಹಿಂದೆ ಮಾಡಿದ ಕರ್ಮಗಳಿಗೆ ಶಿಕ್ಷೆಯನ್ನು ಕೊಡುತ್ತಾರೆಯೇ ಹೊರತು ಆ ಜನ್ಮದಲ್ಲಿ ಮಾಡಿದ ಕರ್ಮಗಳಿಗೆ ಅದು ಶಿಕ್ಷೆಯಲ್ಲ.

ಐಹಿಕಂ ದುಷ್ಕೃತಂ ತೇಷಾಂ ಹೇತುರ್ಭವತಿ ಶಾಸನೇ ।
ಅಪರಾಧಾಪದೇಶೇನ ರಾಜಾ ದಂಡಯತಿ ಪ್ರಜಾಃ ॥೪೯॥

ರಾಜರು ಅವರಿಗೆ ಶಿಕ್ಷೆಯನ್ನು ಕೊಡುವುದಕ್ಕೆ ಆ ಜನ್ಮದಲ್ಲಿಯೇ ಮಾಡಿದ ಒಂದು ಅಪರಾಧವು ನಿಮಿತ್ತವಾಗುತ್ತದೆ ಅಷ್ಟೆ. ಆ ಅಪರಾಧವನ್ನು ನಿಮಿತ್ತ ಮಾಡಿಕೊಂಡು ರಾಜರು ದಂಡನೆಯನ್ನು ಕೊಡುತ್ತಾರೆ.

ಇಹ ಲೋಕೇ ವ್ಯವಸ್ಥಾರ್ಥಂ ರಾಜಭಿರ್ದಂಡನಂ ಸ್ಮೃತಮ್ ।
ಉದ್ವೇಜನಾರ್ಥಂ ಶೇಷಾಣಾಮಪರಾಧಂ ತಮುದ್ದಿಶನ್ ॥೫೦॥

ಈ ಲೋಕದಲ್ಲಿ ಕ್ಷೇಮದ ವ್ಯವಸ್ಥೆಯನ್ನು ಮಾಡಲು ಮತ್ತು ಅಪರಾಧವನ್ನು ಮಾಡುವ ಮನಸ್ಸನ್ನು ಹೊಂದಿರುವವರನ್ನು ಭಯಗೊಳಿಸಲು ರಾಜರು ಶಿಕ್ಷೆಯನ್ನು ಕೊಡುತ್ತಾರೆ.

ಪುರಾಕೃತಫಲಂ ದಂಡೋ ದಂಡ್ಯಮಾನಸ್ಯ ತದ್ ಧ್ರುವಮ್ ।
ಪ್ರಾಗೇವ ಚ ಮಯಾ ಪ್ರೋಕ್ತಂ ತತ್ರ ನಿಃಸಂಶಯಾ ಭವ ॥೫೧॥

ಆದರೆ ರಾಜರು ಅಪರಾಧವನ್ನು ಮಾಡಿದವರಿಗೆ ಕೊಡುವ ದಂಡವು ಆ ಜನ್ಮದಲ್ಲಿ ಮಾಡಿದ (ಲೋಕವು ತಿಳಿದಿರುವ) ಅಪರಾಧಕ್ಕಾಗಿ ಅಲ್ಲ. ಹಿಂದಿನ ಜನ್ಮದಲ್ಲಿ ಮಾಡಿದ ಅಪರಾಧಕ್ಕಾಗಿಯೇ ಇಲ್ಲಿ ಶಿಕ್ಷೆಯನ್ನು ಅನುಭವಿಸುತ್ತಾರೆ. ಇದನ್ನು ನಾನು ಮೊದಲೇ ಹೇಳಿದ್ದೇನೆ. ಈ ವಿಷಯದಲ್ಲಿ ಸಂಶಯವನ್ನು ಮಾಡಬೇಡ.

ಉಮಾ

ಭಗವನ್ ಭುವಿ ಮರ್ತ್ಯಾನಾಂ ದಂಡಿತಾನಾಂ ನರೇಶ್ವರೈಃ ।
ದಂಡೇನೈವ ತು ತೇನೇಹ ಪಾಪನಾಶೋ ಭವೇನ್ನ ವಾ ॥೫೨॥

ಏತನ್ಮಯಾ ಸಂಶಯಿತಂ ತದ್ಭವಾಂಶ್ಛೇತ್ತುಮರ್ಹತಿ ॥೫೩॥

ಉಮಾ– ಭಗವಂತನೇ, ರಾಜರಿಂದ ದಂಡಿತರಾದ ಪುರುಷರಿಗೆ ಆ ದಂಡದಿಂದಲೇ ಪಾಪನಾಶವು ಉಂಟಾಗುತ್ತದೆಯೋ, ಇಲ್ಲವೋ? ಈ ನನ್ನ ಸಂಶಯವನ್ನು ನೀನು ಪರಿಹರಿಸಬೇಕು.

ಮಹೇಶ್ವರಃ

ಸ್ಥಾನೇ ಸಂಶಯಿತಂ ದೇವಿ ಶೃಣು ತತ್ತ್ವಂ ಸಮಾಹಿತಾ ॥೫೩॥

ಮಹೇಶ್ವರ– ದೇವಿಯೇ, ನೀನು ಸಂಶಯಪಟ್ಟಿರುವುದು ಯೋಗ್ಯವಾಗಿದೆ. ಸಮಾಧಾನದಿಂದ ತತ್ತ್ವವನ್ನು ಕೇಳು.

ಯೇ ನೃಪೈರ್ದಂಡಿತಾ ಭೂಮಾವಪರಾಧಾಪದೇಶತಃ ।
ಯಮಲೋಕೇ ನ ದಂಡ್ಯಂತೇ ತತ್ರ ತೇ ಯಮದಂಡನೈಃ ॥೫೪॥

ಈ ಜನ್ಮದಲ್ಲಿ ಮಾಡಿದ ಅಪರಾಧದ ವ್ಯಾಜದಿಂದ ರಾಜರಿಂದ ದಂಡಿತರಾದವರು ಯಮಲೋಕದಲ್ಲಿ ಆ ಅಪರಾಧಕ್ಕಾಗಿ ಯಮಶಿಕ್ಷೆಯನ್ನು ಹೊಂದುವುದಿಲ್ಲ.

ಅದಂಡಿತಾ ವಾ ಯೇ ಮಿಥ್ಯಾ ಮರ್ತ್ಯಾ ವಾ ದಂಡಿತಾ ಭುವಿ ।
ತಾನ್ ಯಮೋ ದಂಡಯತ್ಯೇವ ಸ ಹಿ ವೇದ ಕೃತಾಕೃತಮ್ ।
ನಾತಿಕ್ರಮೇದ್ ಯಮಂ ಕಶ್ಚಿತ್ ಕರ್ಮ ಕೃತ್ವೇಹ ಮಾನುಷಃ ॥೫೫॥

ಭೂಮಿಯಲ್ಲಿ ಯಾರು ದಂಡಿತರಾಗಿದ್ದಾರೆಯೋ ಅಥವಾ ಅದಂಡಿತರಾಗಿದ್ದಾರೆಯೋ ಅಥವಾ ಸುಳ್ಳಾಗಿ ದಂಡಿತರಾಗಿದ್ದಾರೆಯೋ ಅವರನ್ನು ಯಮನು ದಂಡಿಸಿಯೇ ತೀರುತ್ತಾನೆ. ಅವರು ಮಾಡಿದುದನ್ನೂ ಮಾಡದೆ ಇದುದನ್ನೂ ಎಲ್ಲವನ್ನೂ ಯಮನು ತಿಳಿದಿರುವನಷ್ಟೆ? ಕರ್ಮವನ್ನು ಮಾಡಿದ ಯಾವುದೇ ಮನುಷ್ಯನು ಯಮನನ್ನು ಎಂದೂ ಉಲ್ಲಂಘಿಸಲಾರ.

ರಾಜಾ ಯಮಶ್ಚ ಕುರ್ವಾತೇ ದಂಡಮಾತ್ರಂ ತು ಶೋಭನೇ ।
ಉಭಾಭ್ಯಾಂ ಯಮರಾಜಭ್ಯಾಂ ದಂಡಿತೋಽದಂಡಿತೋಽಪಿ ವಾ ।
ಪಶ್ಚಾತ್ತಕ್ಕರ್ಮಫಲಂ ಭುಂಕ್ತೇ ನರಕೇ ಮಾನುಷೇಷು ವಾ ॥೫೬॥

ಎಲೌ ಶೋಭನೆಯೇ, ರಾಜ ಮತ್ತು ಯಮರಿಬ್ಬರೂ ಶಿಕ್ಷೆಯನ್ನು ಮಾತ್ರ ಕೊಡುತ್ತಾರೆ. ಅವರಿಬ್ಬರಿಂದ ದಂಡಿತನಾದವನು ಅಥವಾ ಅದಂಡಿತನಾದವನೂ ಸಹ ಅನಂತರ ನರಕದಲ್ಲಾಗಲೀ, ಮನುಷ್ಯಲೋಕದಲ್ಲಾಗಲೀ ಕರ್ಮದ ಫಲವನ್ನು ಅನುಭವಿಸುತ್ತಾನೆ (ರಾಜನಿಗೆ ಕಾಣುವ ಅಪರಾಧದ ವಿಷಯದಲ್ಲಿ ರಾಜನು ಶಿಕ್ಷೆಯನ್ನು ಕೊಡುತ್ತಾನೆ. ರಾಜನು ಕೊಡದಿದ್ದರೆ ಯಮನು ಶಿಕ್ಷೆಯನ್ನು ಕೊಡುತ್ತಾನೆ. ಆದರೆ ಲೋಕಕ್ಕೆ ಕಾಣದಿದ್ದ ಅದರ ಹಿನ್ನೆಲೆಯ ಫಲವನ್ನು ಮಾತ್ರ ನರಕದಲ್ಲಾಗಲೀ ಅಥವಾ ಪುನಃ ಮನುಷ್ಯ ಲೋಕದಲ್ಲಾಗಲೀ ಅನುಭವಿಸಬೇಕು.

ನಾಸ್ತಿ ಕರ್ಮಫಲಚ್ಛೇತ್ತಾ ಕಶ್ಚಿಲ್ಲೋಕತ್ರಯೇಽಪಿ ಚ ।
ಇತಿ ತೇ ಕಥಿತಂ ಸರ್ವಂ ನಿರ್ವಿಶಂಕಾ ಭವ ಪ್ರಿಯೇ ॥೫೭॥

ಮೂರುಲೋಕಗಳಲ್ಲಿ ಹುಡುಕಿದರೂ ಕರ್ಮಫಲವನ್ನು ಅನುಭವಿಸದಂತೆ ಮಾಡುವವರು ಯಾರೂ ಇಲ್ಲ. ಪ್ರಿಯೆಯೇ, ಇದನ್ನು ನಿನಗೆ ಹೇಳಿದ್ದೇನೆ. ನಿನ್ನ ಸಂಶಯಗಳನ್ನು ಬಿಡು.

ಉಮಾ

ಕಿಮರ್ಥಂ ದುಷ್ಕೃತಂ ಕೃತ್ವಾ ಮಾನುಷಾ ಭುವಿ ನಿತ್ಯಶಃ ।
ಪುನಸ್ತತ್ಕರ್ಮನಾಶಾಯ ಪ್ರಾಯಶ್ಚಿತ್ತಾನಿ ಕುರ್ವತೇ ॥೫೮॥

ಉಮಾ– ಮನುಷ್ಯರು ಭೂಮಿಯಲ್ಲಿ ದುಷ್ಕರ್ಮವನ್ನು ಮಾಡಿ ಅದರ ಫಲನಾಶಕ್ಕಾಗಿ ಯಾವಾಗಲೂ ಏತಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡುತ್ತಾರೆ.

ಸರ್ವಪಾಪಹರಂ ಚೇತಿ ಹಯಮೇಧಂ ವದಂತಿ ಚ ।
ಪ್ರಾಯಶ್ಚಿತ್ತಾನಿ ಚಾನ್ಯಾನಿ ಪಾಪನಾಶಾಯ ಕುರ್ವತೇ ।
ತಸ್ಮಾನ್ಮೇ ಸಂಶಯೋ ಜಾತಸ್ತ್ವಂ ತಂ ಚ್ಛೇತ್ತುಮಿಹಾರ್ಹಸಿ ॥೫೯॥

ಅಶ್ವಮೇಧವು ಸರ್ವಪಾಪಗಳನ್ನೂ ನಾಶಗೊಳಿಸುತ್ತದೆ ಎಂದು ಹೇಳುತ್ತಾರೆ. ಉಳಿದ ಪ್ರಾಯಶ್ಚಿತ್ತವನ್ನೂ ಸಹ ಪಾಪನಾಶಕ್ಕಾಗಿಯೇ ಮಾಡುತ್ತಾರೆ. ಆದ್ದರಿಂದ ನನಗೆ ಸಂಶಯವುಂಟಾಗಿದೆ. ಅದನ್ನು ನೀನು ಪರಿಹರಿಸಬೇಕು.

ಮಹೇಶ್ವರಃ

ಸ್ಥಾನೇ ಸಂಶಯಿತಂ ದೇವಿ ಶೃಣು ತತ್ತ್ವಂ ಸಮಾಹಿತಾ ।
ಸಂಶಯೋ ಹಿ ಮಹಾನೇವ ಪೂರ್ವೇಷಾಂ ಚ ಮನೀಷಿಣಾಮ್ ॥೬೦॥

ಮಹೇಶ್ವರ– ದೇವಿಯೇ, ನಿನ್ನ ಸಂಶಯವು ಯೋಗ್ಯವಾಗಿದೆ. ತತ್ತ್ವವನ್ನು ಕೇಳು. ಈ ವಿಷಯದಲ್ಲಿ ಪ್ರಾಚೀನರಾದ ಮೇಧಾವಿಗಳಿಗೂ ಸಂಶಯವಿದ್ದಿತು.

ದ್ವಿಧಾ ತು ಕ್ರಿಯತೇ ಪಾಪಂ ಸದ್ಭಿಶ್ಚಾಸದ್ಭಿರೇವ ಚ ।
ಅಭಿಸಂಧಾಯ ವಾ ನಿತ್ಯಮನ್ಯಥಾ ವಾ ಯದೃಚ್ಛಯಾ ॥೬೧॥

ಸಜ್ಜನರಾಗಲೀ, ಅಸಜ್ಜನರಾಗಲೀ ಎರಡು ರೀತಿಯಲ್ಲಿ ಕರ್ಮಗಳನ್ನು ಮಾಡುತ್ತಾರೆ. ಕೆಲವು ನಿತ್ಯವೂ ಉದ್ದೇಶಪೂರ್ವಕವಾಗಿ ಮಾಡುವ ಕರ್ಮಗಳು. ಕೆಲವು ಅಕಸ್ಮಾತ್ತಾಗಿ ನಡೆಯುವ ಕರ್ಮಗಳು.

ಕೇವಲಂ ಚಾಭಿಸಂಧಾಯ ಸಂರಂಭಾಚ್ಚ ಕರೋತಿ ಯತ್ ।
ಕರ್ಮಣಸ್ತಸ್ಯ ನಾಶಸ್ತು ನ ಕಥಂಚನ ವಿದ್ಯತೇ ॥೬೨॥

ಸಂಕಲ್ಪವನ್ನು ಮಾಡಿ ಕೋಪದಿಂದ ಉದ್ದೇಶಪೂರ್ವಕವಾಗಿ ಮಾಡಿದ ಕರ್ಮದ ಫಲವು ಎಂದೂ ನಾಶವನ್ನು ಹೊಂದುವುದಿಲ್ಲ.

ಅಭಿಸಂಧಿಕೃತಸ್ಯೇಹ ನೈವ ನಾಶೋऽಸ್ತಿ ಕರ್ಮಣಃ ।
ಅಶ್ವಮೇಧಸಹಸ್ರೈರ್ವಾ ಪ್ರಾಯಶ್ಚಿತ್ತಶತೈರಪಿ ॥೬೩॥

ಪಾಪಕರ್ಮದ ಫಲವನ್ನು ಉದ್ದೇಶ ಮಾಡಿ ಅಂತಹ ಪಾಪಕರ್ಮವನ್ನು ಮಾಡಿದರೆ ಸಹಸ್ರ ಅಶ್ವಮೇಧಗಳಿಂದಾಗಲೀ, ನೂರು ಪ್ರಾಯಶ್ಚಿತ್ತಗಳಿಂದಾಗಲೀ ಅದು ನಾಶವನ್ನು ಹೊಂದುವುದಿಲ್ಲ.

ಅನ್ಯಥಾ ಯತ್ಕೃತಂ ಪಾಪಂ ಪ್ರಮಾದಾದ್ವಾ ಯದೃಚ್ಛಯಾ ।
ಪ್ರಾಯಶ್ಚಿತ್ತಾಶ್ವಮೇಧಾಭ್ಯಾಂ ಶೋಧನಾತ್ ತು ಪ್ರಣಶ್ಯತಿ ॥೬೪॥

ಇನ್ನು ಪ್ರಮಾದದಿಂದ ಅಥವಾ ಅಕಸ್ಮಾತ್ತಾಗಿ ಮಾಡಿದ ಪಾಪಕರ್ಮಗಳು ಪ್ರಾಯಶ್ಚಿತ್ತ, ಅಶ್ವಮೇಧಗಳಿಂದ ಶೋಧನೆಯನ್ನು ಮಾಡುವುದರಿಂದ ನಾಶವನ್ನು ಹೊಂದುತ್ತವೆ.

ಲೋಕಸಂವ್ಯವಹಾರಾರ್ಥಂ ಪ್ರಾಯಶ್ಚಿತ್ತಾದಿರಿಷ್ಯತೇ ।
ವಿದ್ಧ್ಯೇವಂ ಪಾಪಕೇ ಕಾರ್ಯೇ ನಿರ್ವಿಶಂಕಾ ಭವ ಪ್ರಿಯೇ ॥೬೫॥

ಇತಿ ತೇ ಕಥಿತಂ ದೇವಿ ಭೂಯಃ ಶ್ರೋತುಂ ಕಿಮಿಚ್ಛಸಿ ॥೬೬॥

ಲೋಕದಲ್ಲಿ ಸುವ್ಯವಸ್ಥೆಯನ್ನು ಉಂಟುಮಾಡಲು ಪ್ರಾಯಶ್ಚಿತ್ತವು ವಿಧಿಸಲ್ಪಡುತ್ತದೆ. ಪಾಪಕಾರ್ಯದ ವಿಷಯದಲ್ಲಿ ಹೀಗೆ ತಿಳಿಯುವವಳಾಗು. ಪ್ರಿಯೆಯೇ, ಸಂಶಯವನ್ನು ಹೊಂದಬೇಡ. ದೇವಿಯೇ, ಇದನ್ನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

ಉಮಾ

ಭಗವನ್ ದೇವದೇವೇಶ ಮಾನುಷಾಶ್ಚೇತರಾ ಅಪಿ ।
ಮ್ರಿಯಂತೇ ಬಹುಧಾ ಲೋಕೇ ಕಾರಣಾಕಾರಣಾದಪಿ ।
ಕೇನ ಕರ್ಮವಿಪಾಕೇನ ತನ್ಮೇ ಶಂಸಿತುಮರ್ಹಸಿ ॥೬೭॥

ಉಮಾ– ಭಗವಂತನೇ, ದೇವದೇವೇಶನೇ, ಲೋಕದಲ್ಲಿ ಮನುಷ್ಯರು ಮತ್ತು ಇತರ ಪ್ರಾಣಿಗಳು ರೋಗಾದಿ ಕಾರಣದಿಂದಲೂ ಅಥವಾ ಇತರ ಕಾರಣಗಳಿಂದಲೂ ಅನೇಕ ರೀತಿಯಲ್ಲಿ ಮರಣವನ್ನು ಹೊಂದುತ್ತಾರೆ. ಯಾವ ಕರ್ಮವಿಪಾಕದಿಂದ ಹೀಗಾಗುವುದೆಂದು ಹೇಳಬೇಕು.

ಮಹೇಶ್ವರಃ

ಯೇ ಪುರಾ ಮನುಜಾ ದೇವಿ ಕಾರಣಾಕಾರಣಾದಪಿ ।
ಯಥಾऽಸುಭಿರ್ವಿಯೋಜ್ಯಂತೇ ಪ್ರಾಣಿನಃ ಪ್ರಾಣಿನಿರ್ದಯೈಃ ॥೬೮॥

ತಥೈವ ತೇ ಪ್ರಾಪ್ನುವಂತಿ ಯಥೈವಾತ್ಮಕೃತಂ ಫಲಮ್ ।
ವಿಷದಸ್ತು ವಿಷೇಣೈವ ಶಸ್ತ್ರೈಃ ಶಸ್ತ್ರೇಣ ಘಾತಕಾಃ ॥೬೯॥

ಮಹೇಶ್ವರ– ದೇವಿಯೇ, ಯಾವ ಮನುಷ್ಯರು ಹಿಂದೆ ಕಾರಣದಿಂದಾಗಲೀ ಅಥವಾ ನಿಷ್ಕಾರಣದಿಂದಾಗಲೀ ಪ್ರಾಣಿಗಳಲ್ಲಿ ದಯೆಯನ್ನು ಹೊಂದದೆ ಪ್ರಾಣಿಗಳನ್ನು ಕೊಂದಿರುತ್ತಾರೆಯೋ ಅವರು ತಾವು ಮಾಡಿದ ಕರ್ಮದ ಫಲದ ಭಾಗವನ್ನು ಹಾಗೆಯೇ ಹೊಂದುತ್ತಾರೆ. ವಿಷವನ್ನು ಕೊಟ್ಟವನು ವಿಷದಿಂದಲೇ ಪ್ರಾಣವನ್ನು ಕಳೆದುಕೊಳ್ಳುತ್ತಾನೆ. ಶಸ್ತ್ರದಿಂದ ಹೊಡೆದು ಕೊಂದವನು ಶಸ್ತ್ರಘಾತದಿಂದಲೇ ಮೃತನಾಗುತ್ತಾನೆ.

ಏವಮೇವ ಯಥಾ ಲೋಕೇ ಮಾನುಷಾನ್ ಘ್ನಂತಿ ಮಾನುಷಾಃ ।
ಕಾರಣೇನೈವ ತೇ ತೇನ ತಥಾ ಸ್ವಪ್ರಾಣನಾಶನಮ್ ।
ಪ್ರಾಪ್ನುವಂತಿ ಪುನರ್ದೇವಿ ನಾಸ್ತಿ ತತ್ರ ವಿಚಾರಣಾ ॥೭೦॥

ಈ ರೀತಿಯಲ್ಲಿ ಲೋಕದಲ್ಲಿ ಮನುಷ್ಯರು ಮನುಷ್ಯರನ್ನು ಯಾವ ರೀತಿಯಲ್ಲಿ ಕೊಲ್ಲುತ್ತಾರೆಯೋ ಅದೇ ರೀತಿಯಲ್ಲಿ ಕೊಲ್ಲುವವರೂ ಸಹ ತಮ್ಮ ಪ್ರಾಣನಾಶವನ್ನು ಹೊಂದುತ್ತಾರೆ. ಎಲೌ ದೇವಿಯೇ, ಇದರಲ್ಲಿ ವಿಚಾರ ಮಾಡಬೇಕಾದ ಅವಶ್ಯಕತೆ ಇಲ್ಲ.

ಇತಿ ತೇ ಕಥಿತಂ ಸರ್ವಂ ಪಾಪಕರ್ಮಫಲಂ ಪ್ರಿಯೇ ।
ಭೂಯಸ್ತವ ಸಮಾಸೇನ ಕಥಯಿಷ್ಯಾಮಿ ತಚ್ಛೃಣು ॥೭೧॥

ಪ್ರಿಯೆಯೇ, ಪಾಪಕರ್ಮಗಳ ಫಲವನ್ನು ಎಲ್ಲವನ್ನೂ ಹೇಳಿದ್ದೇನೆ. ಪುನಃ ಸಂಕ್ಷೇಪವಾಗಿ ನಿನಗೆ ಹೇಳುವೆನು. ಅದನ್ನು ಕೇಳು.

ಸತ್ಯಂ ಪ್ರಮಾಣಕರಣಂ ನಿತ್ಯಮವ್ಯಭಿಚಾರಿ ಚ ।
ಯೈಃ ಪುರಾ ಮನುಜೈರ್ದೇವಿ ಯಸ್ಮಿನ್ ಕಾಲೇ ಯಥಾ ಕೃತಮ್ ॥೭೨॥

ಯೇನೈವ ಕಾರಣೇನಾಪಿ ಕರ್ಮ ಯತ್ತು ಶುಭಾಶುಭಮ್ ।
ಕರ್ಮಣಃ ಫಲಮಾತ್ರಂ ತು ತೇನೈವ ಕಾರಣೇನ ತು ॥೭೩॥

ಪ್ರಮಾಣವನ್ನು ಮಾಡುವವರಿಗೆ ಹೇಗೆ ನಿಯಮೇನ ಜಯ ಉಂಟಾಗುತ್ತದೆಯೋ ಹೇಗೆ ಅಪಜಯ ಉಂಟಾಗುವುದಿಲ್ಲವೋ ಅದರಂತೆಯೇ ನನ್ನ ಮಾತುಗಳು ಎಂದು

ತಿಳಿ. ಯಾವ ಕಾರಣಗಳಿಂದ ಮನುಷ್ಯನು ಶುಭಕರ್ಮವನ್ನಾಗಲೀ, ಅಶುಭ ಕರ್ಮವನ್ನಾಗಲೀ ಮಾಡುತ್ತಾನೆಯೋ ಆ ಕರ್ಮದ ಫಲವನ್ನು ಅದೇ ಕಾರಣದಿಂದ ಅವನು ಹೊಂದುತ್ತಾನೆ (ಕಳ್ಳತನ ಮಾಡಿದವನು ತನ್ನ ವಸ್ತುವನ್ನು ಕಳ್ಳತನದಿಂದಲೇ ಕಳೆದುಕೊಳ್ಳುತ್ತಾನೆ. ಮೋಸ ಮಾಡಿದವನು ಮೋಸಮಾಡಲ್ಪಡುತ್ತಾನೆ).

ಪ್ರಾಪ್ನುವಂತಿ ನರಾಃ ಪ್ರೇತ್ಯ ನಿಃಸಂದೇಹಂ ಶುಭಾಶುಭಮ್ ।
ಇತಿ ಸತ್ಯಂ ವಿಜಾನೀಹಿ ಲೋಕತಂತ್ರವಿಧಿಂ ಪ್ರತಿ ॥೭೪॥

ಶುಭಾಶುಭ ಕರ್ಮವನ್ನು ಮಾಡಿದ ಮನುಷ್ಯರು ಮರಣಾನಂತರದಲ್ಲಿ ನಿಸ್ಸಂದೇಹವಾಗಿ ಅದರ ಫಲವನ್ನು ಹೊಂದುತ್ತಾರೆ. ಲೋಕದಲ್ಲಿ ಹೀಗೆ ನಡೆಯುತ್ತಿದೆ. ಇದು ಸತ್ಯ ಎಂದು ತಿಳಿ.

ಕರ್ಮ ಕೃತ್ವಾ ನರೋ ಭೋಕ್ತಾ ಸ ನಾಸ್ತಿ ದಿವಿ ವಾ ಭುವಿ ।
ಗ್ರಹೀತುಂ ಚ ನ ಶಕ್ಯಂ ಹಿ ಸದೇವಾಸುರಮಾನುಷೈಃ ॥೭೫॥

ಭೂಮಿಯಲ್ಲಾಗಲೀ, ಸ್ವರ್ಗದಲ್ಲಾಗಲೀ ಅಥವಾ ನರಕದಲ್ಲಾಗಲೀ ಕರ್ಮವನ್ನು ಮಾಡಿದ ಮನುಷ್ಯನು ಅದರ ಫಲವನ್ನು ಅನುಭವಿಸಿಯೇ ತೀರುತ್ತಾನೆ. ದೇವತೆಗಳಾಗಲೀ, ಅಸುರರಾಗಲೀ, ಮನುಷ್ಯರಾಗಲೀ ಆ ಕರ್ಮದ ಫಲವನ್ನು ಬದಲು ಮಾಡಲು ಸಾಧ್ಯವಿಲ್ಲ.

ಕರ್ಮಣಾ ಗ್ರಥಿತೋ ಲೋಕ ಆದಿಪ್ರಭೃತಿ ವರ್ತತೇ ।
ಏತದುದ್ದೇಶತಃ ಪ್ರೋಕ್ತಂ ಕರ್ಮಪಾಕಫಲಂ ಪ್ರಿಯೇ ॥೭೬॥

ಮೊದಲಿನಿಂದಲೂ ಲೋಕವು ಕರ್ಮದಿಂದ ಬದ್ಧವಾಗಿಯೇ ಇದೆ. ಪ್ರಿಯೆಯೇ, ಇದನ್ನು ನಿನಗೆ ಸಂಕ್ಷೇಪವಾಗಿ ಹೇಳಿದ್ದೇನೆ.

ಯದನ್ಯಚ್ಚ ಮಯಾ ನೋಕ್ತಂ ಯಸ್ಮಿಂಸ್ತೇ ಕರ್ಮಸಂಗ್ರಹೇ ।
ಬುದ್ಧಿತರ್ಕೇಣ ತತ್ಸರ್ವಂ ತಥಾ ವೇದಿತುಮರ್ಹಸಿ ।
ಕಥಿತಂ ಶ್ರೋತುಕಾಮಾಯಾ ಭೂಯಃ ಶ್ರೋತುಂ ಕಿಮಿಚ್ಛಸಿ ॥೭೭॥

ಈ ಕರ್ಮದ ವಿಷಯದಲ್ಲಿ ನಾನು ನಿನಗೆ ಏನು ಹೇಳಿಲ್ಲವೋ ಅದೆಲ್ಲವನ್ನೂ ನಿನ್ನ ಬುದ್ಧಿಯಿಂದ ಮತ್ತು ಯುಕ್ತಿಯಿಂದ ನೀನು ತಿಳಿದುಕೊಳ್ಳಬೇಕು. ನೀನು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಉಮಾಮಹೇಶ್ವರಸಂವಾದೇ
ಸಪ್ತಾಧಿಕದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಏಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಎಂಟನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಕರ್ಮಫಲಭೋಗದಲ್ಲಿ ಮನುಷ್ಯರಿಗೂ
ದೇವಾದಿಗಳಿಗೂ ಇರುವ ಅಂತರದ ಕಥನ

ಉಮಾ

ಭಗವನ್ ದೇವದೇವೇಶ ಲೋಕಪಾಲನಮಸ್ಕೃತ ।
ಪ್ರಸಾದಾತ್ ತೇ ಮಹಾದೇವ ಶ್ರುತಾ ಮೇ ಕರ್ಮಣಾಂ ಗತಿಃ ॥೧॥

ಉಮಾ- ಭಗವಂತನೇ, ದೇವದೇವೇಶನೇ, ಲೋಕಪಾಲಕರಿಂದ ನಮಸ್ಕೃತನಾದವನೇ, ಮಹಾದೇವನೇ, ನಿನ್ನ ಅನುಗ್ರಹದಿಂದ ನಾನು ಕರ್ಮಗಳ ಗತಿಯನ್ನು ಕೇಳಿದ್ದೆನು.

ಸಂಗೃಹೀತಂ ಚ ತತ್ಸರ್ವಂ ತತ್ತ್ವತೋऽಮೃತಸನ್ನಿಭಮ್ ।
ಕರ್ಮಣಾ ಗ್ರಥಿತಂ ಸರ್ವಮಿತಿ ವೇದ್ಮಿ ಶುಭಾಶುಭಮ್ ॥೨॥

ಅಮೃತಪ್ರಾಯವಾದ ಅವೆಲ್ಲವನ್ನೂ ನಾನು ಗ್ರಹಿಸಿದ್ದೇನೆ. ಎಲ್ಲ ಶುಭಾಶುಭಗಳು ಕರ್ಮದಿಂದ ಉಂಟಾದವುಗಳು ಎಂದು ತಿಳಿದಿದ್ದೇನೆ.

ಗೋವತ್ಸವಚ್ಚ ಜನನೀಂ ನಿಮ್ನಂ ಸಲಿಲವತ್ ತಥಾ ।
ಕರ್ತಾರಂ ಸ್ವಕೃತಂ ಕರ್ಮ ನಿತ್ಯಂ ತದನುಧಾವತಿ ॥೩॥

ಕರುವು ತನ್ನ ತಾಯಿಯ ಬಳಿಗೆ ಹೋಗುವಂತೆ, ಜಲವು ತಗ್ಗು ಪ್ರದೇಶವನ್ನು ಕುರಿತು ಹರಿಯುವಂತೆ ಕರ್ಮವನ್ನು ಮಾಡಿದವನನ್ನು ಆ ಕರ್ಮವು ಯಾವಾಗಲೂ ಹಿಂಬಾಲಿಸುತ್ತದೆ.

ಕೃತಸ್ಯ ಕರ್ಮಣಶ್ಚೇಹ ನಾಶೋ ನಾಸ್ತೀತಿ ನಿಶ್ಚಯಃ ।
ಅಶುಭಸ್ಯ ಶುಭಸ್ಯಾಪಿ ತದಪ್ಯುಪಗತಂ ಮಯಾ ॥೪॥

ಮಾಡಿದ ಕರ್ಮವು ಶುಭವಾಗಲೀ ಅಥವಾ ಅಶುಭವಾಗಲೀ ಅದಕ್ಕೆ ನಾಶವಿಲ್ಲ ಎಂಬುದು ನಿಶ್ಚಿತವಾದುದು. ಅದನ್ನೂ ನಾನು ತಿಳಿದಿದ್ದೇನೆ.

ಭೂಯ ಏವ ಮಹಾದೇವ ವರದ ಪ್ರೀತಿವರ್ಧನ ।
ಕರ್ಮಣಾಂ ಗತಿಮಾಶ್ರಿತ್ಯ ಸಂಶಯಾನ್ ಮೋಕ್ತುಮರ್ಹಸಿ ॥೫॥

ಎಲೈ ವರದನೇ, ಮಹಾದೇವನೇ, ಪ್ರೀತಿವರ್ಧನನೇ, ಇನ್ನೂ ನನಗಿರುವ ಕರ್ಮಗಳ ಭೋಗದ ವಿಷಯದಲ್ಲಿ ಸಂಶಯವನ್ನು ಪರಿಹರಿಸಬೇಕು.

ಮಹೇಶ್ವರಃ

ಯತ್ತೇ ವಿವಕ್ಷಿತಂ ದೇವಿ ಗುಹ್ಯಮಪ್ಯಸಿತೇಕ್ಷಣೇ ।
ತತ್ಸರ್ವಂ ನಿರ್ವಿಶಂಕಾ ತ್ವಂ ಪೃಚ್ಛ ಮಾಂ ಶುಭಲಕ್ಷಣೇ ॥೬॥

ಮಹೇಶ್ವರ– ಶುಭಲಕ್ಷಣೆಯೇ, ದೇವಿಯೇ, ಅಸಿತೇಕ್ಷಣೆಯೇ, ಯಾವ ಸಂಕೋಚವೂ ಇಲ್ಲದೆ ನೀನು ಕೇಳಬೇಕಾಗಿರುವ ಪ್ರಶ್ನೆಗಳನ್ನು ನನ್ನನ್ನು ಕೇಳು.

ಉಮಾ

ಏವಂ ವ್ಯವಸ್ಥಿತೇ ಲೋಕೇ ಕರ್ಮಣಾ ವೃಷಭಧ್ವಜ ।
ಕೃತ್ವಾ ತತ್ ಪುರುಷಃ ಕರ್ಮ ಶುಭಂ ವಾ ಯದಿ ವೇತರತ್ ॥೭॥

ಪ್ರೇತ್ಯ ದೇವ ಕದಾ ಭುಂಕ್ತೇ ಸ ಫಲಂ ಕರ್ಮಣಃ ಪುನಃ ।
ಇಹ ವಾ ಪ್ರೇತ್ಯ ವಾ ದೇವ ತನ್ಮೇ ಶಂಸಿತುಮರ್ಹಸಿ ॥೮॥

ಉಮಾ– ಎಲೈ ವೃಷಭಧ್ವಜನೇ, ಈ ಲೋಕದಲ್ಲಿ ಕರ್ಮವು ವ್ಯವಸ್ಥಿತವಾಗಿರುವಾಗ ಪುರುಷನು ಶುಭವಾದ ಅಥವಾ ಅಶುಭವಾದ ಕರ್ಮವನ್ನು ಮಾಡಿ ಅದರ ಫಲವನ್ನು ಯಾವಾಗ ಮತ್ತು ಹೇಗೆ ಅನುಭವಿಸುತ್ತಾನೆ? ಎಲೈ ದೇವನೇ, ಈ ಜನ್ಮದಲ್ಲಿಯೇ ಅನುಭವಿಸುತ್ತಾನೆಯೇ ಅಥವಾ ಮರಣಾನಂತರದಲ್ಲಿ ಅನುಭವಿಸುತ್ತಾನೆಯೇ ಎಂದು ನನಗೆ ಹೇಳಬೇಕು.

ಮಹೇಶ್ವರಃ

ಸ್ಥಾನೇ ಸಂಶಯಿತುಂ ದೇವಿ ತದ್ಧಿ ಗುಹ್ಯತಮಂ ಶೃಣು ।
ತವ ತ್ವಿಯಾರ್ಥಂ ಪ್ರವಕ್ಷ್ಯಾಮಿ ದೇವಿ ಗುಹ್ಯಂ ಶುಭಾನನೇ ॥೯॥

ಮಹೇಶ್ವರ– ದೇವಿಯೇ, ನೀನು ಸಂಶಯವನ್ನು ಪಡುವುದು ಯೋಗ್ಯವಾಗಿದೆ. ನೀನು ಕೇಳಿದ ವಿಷಯವು ಅತ್ಯಂತ ರಹಸ್ಯವಾದುದು. ಶುಭಾನನೆಯೇ, ನಿನ್ನ ಮೇಲೆ ಪ್ರೀತಿಯಿಂದ ರಹಸ್ಯವಾದ ಅದನ್ನು ಹೇಳುವೆನು. ದೇವಿಯೇ ಅದನ್ನು ಕೇಳು.

ಪೂರ್ವದೇಹಕೃತಂ ಕರ್ಮ ಭುಂಜತೇ ತದಿಹ ಪ್ರಜಾಃ ।
ಇಹೈವ ಯತ್‌ಕೃತಂ ಪುಂಸಾಂ ತತ್‌ಪರತ್ರ ಫಲಿಷ್ಯತಿ ।
ಏಷಾ ವ್ಯವಸ್ಥಿತಿರ್ದೇವಿ ಮಾನುಷೇಷ್ವೇವ ದೃಶ್ಯತೇ ॥೧೦॥

ಹಿಂದಿನ ದೇಹದಲ್ಲಿ ಮಾಡಿದ ಕರ್ಮದ ಫಲವನ್ನು ಪ್ರಜೆಗಳು ಇಂದಿನ ದೇಹದಲ್ಲಿ ಅನುಭವಿಸುತ್ತಾರೆ. ಈ ಜನ್ಮದಲ್ಲಿ ಮಾಡಿದ ಕರ್ಮದ ಫಲವನ್ನು ಮುಂದಿನ ಜನ್ಮಾಂತರದಲ್ಲಿ ಅನುಭವಿಸುವರು. ದೇವಿಯೇ, ಮನುಷ್ಯರಲ್ಲಿ ಈ ವ್ಯವಸ್ಥೆಯು ಶಾಸ್ತ್ರಗಳಲ್ಲಿ ದೃಷ್ಟವಾಗಿದೆ.

ದೇವಾನಾಮಸುರಾಣಾಂ ಚ ಅಮರತ್ವಾತ್ ತಪೋಬಲಾತ್ ।
ಏಕೇನೈವ ಶರೀರೇಣ ಭುಜ್ಯತೇ ಕರ್ಮಣಾಂ ಫಲಮ್ ।
ಮಾನುಷ್ಯೈರ್ನ ತಥಾ ದೇವಿ ಅಂತರಂ ತ್ವೇತದಿಷ್ಯತೇ ॥೧೧॥

ದೇವತೆಗಳು ಅಮರರಾಗಿರುವುದರಿಂದ ಮತ್ತು ಋಷಿಗಳು ತಪೋಬಲದಿಂದ ಕೂಡಿರುವುದರಿಂದ ಕರ್ಮವನ್ನು ಮಾಡಿದ ಶರೀರದಿಂದಲೇ ಅವರು ಕರ್ಮದ ಫಲವನ್ನು ಭೋಗಿಸುತ್ತಾರೆ. ಮನುಷ್ಯರು ಮಾತ್ರ ಹಾಗೆ ಭೋಗಿಸುವುದಿಲ್ಲ. ದೇವಿಯೇ, ಇದು ಮನುಷ್ಯರಿಗೂ ಮತ್ತು ದೇವತೆಗಳಿಗೂ ಇರುವ ಅಂತರ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮಪರ್ವಣಿ ಮಾನುಷಾಣಾಂ ದೇವಾದೀನಾಂ ಚ
ಭೋಗೇ ಅಂತರಕಥನಂ ನಾಮ ಅಷ್ಟೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಒಂಬತ್ತನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಕರ್ಮಫಲಭೋಗದಲ್ಲಿ ಗ್ರಹಗಳ ತಟಸ್ಥತ್ವ ಮತ್ತು ಅಲ್ಪಾಯುಷ್ಯಾದಿಗಳಿಗೆ ನಿಮಿತ್ತಕಥನ

ಉಮಾ

ಭಗವನ್ ಭಗನೇತ್ರಘ್ನ ಮಾನುಷಾಣಾಂ ವಿಚೇಷ್ಟಿತಮ್ ।
ಸರ್ವಮಾತ್ಮಕೃತಂ ಚೇತಿ ಶ್ರುತಂ ಮೇ ಭಗವನ್ಮತಮ್ ॥೧॥

ಲೋಕೇ ಗ್ರಹಕೃತಂ ಸರ್ವಂ ಮತ್ವಾ ಕರ್ಮ ಶುಭಾಶುಭಮ್ ।
ತದೇವ ಗ್ರಹನಕ್ಷತ್ರಂ ಪ್ರಾಯಶಃ ಪರ್ಯುಪಾಸತೇ ।

ಏತಂ ಮೇ ಸಂಶಯಂ ದೇವ ತದ್ಗತಂ ಛೇತ್ತುಮರ್ಹಸಿ ॥೨॥

ಉಮಾ– ಭಗವಂತನೇ, ಭಗನೇತ್ರನಾಶಕನೇ, ಮನುಷ್ಯರ ಎಲ್ಲ ಚೇಷ್ಟೆಗಳೂ ಅವರು ತಾವು ಮಾಡಿದ ಕರ್ಮದ ಫಲವಾಗಿ ಎಂಬ ನಿಮ್ಮ ಅಭಿಪ್ರಾಯವನ್ನು ಕೇಳಿದೆನು. ಆದರೆ ಲೋಕದಲ್ಲಿ ಶುಭಾಶುಭ ಕರ್ಮಗಳು ಗ್ರಹಗಳಿಂದ ಮಾಡಲ್ಪಡುತ್ತವೆ ಎಂದು ಆ ಗ್ರಹಗಳನ್ನೂ, ನಕ್ಷತ್ರಗಳನ್ನೂ ಹೆಚ್ಚಾಗಿ ಪೂಜಿಸುತ್ತಾರೆ. ಈ ವಿಷಯದಲ್ಲಿ ನನಗಿರುವ ಸಂಶಯವನ್ನು ಪರಿಹರಿಸಬೇಕು.

ಮಹೇಶ್ವರಃ

ಸ್ಥಾನೇ ಸಂಶಯಿತುಂ ದೇವಿ ಶೃಣು ತತ್ತ್ವವಿನಿಶ್ಚಯಮ್ ॥೩॥

ಮಹೇಶ್ವರ– ದೇವಿಯೇ, ಸಂಶಯವನ್ನು ಪಟ್ಟಿರುವುದು ಯೋಗ್ಯವಾಗಿದೆ. ತತ್ತ್ವನಿಶ್ಚಯವನ್ನು ಕೇಳು.

ನಕ್ಷತ್ರಾಣಿ ಗ್ರಹಾಶ್ಚೈವ ಶುಭಾಶುಭನಿವೇದಕಾಃ ।
ಮಾನವಾನಾಂ ಮಹಾಭಾಗೇ ನ ತು ಕರ್ಮಕರಾಃ ಸ್ವಯಮ್ ॥೪॥

ನಕ್ಷತ್ರಗಳು ಮತ್ತು ಗ್ರಹಗಳು ಶುಭಾಶುಭಗಳನ್ನು ತಿಳಿಸಿಕೊಡುತ್ತವೆ. ಎಲೌ ಮಹಾನುಭಾವಳೇ, ಮನುಷ್ಯರಿಗೆ ಅವು ಸ್ವತಃ ಶುಭಾಶುಭಗಳನ್ನು ಮಾಡಿಸುವುದಿಲ್ಲ.

ಪ್ರಜಾನಾಂ ತು ಹಿತಾರ್ಥಾಯ ಶುಭಾಶುಭವಿಧಿಂ ಪ್ರತಿ ।
ಅನಾಗತಮತಿಕ್ರಾಂತಂ ಜ್ಯೋತಿಶ್ಚಕ್ರೇಣ ಬೋಧ್ಯತೇ ॥೫॥

ಪ್ರಜೆಗಳ ಹಿತದ ಸಲುವಾಗಿ ಒದಗಲಿರುವ ಶುಭಾಶುಭಗಳನ್ನು ಅಥವಾ ಅತೀತವಾದ ಶುಭಾಶುಭಗಳನ್ನು ಜ್ಯೋತಿಶ್ಚಕ್ರವು ತೋರಿಸುತ್ತದೆ.

ಕಿಂತು ತತ್ರ ಶುಭಂ ಕರ್ಮ ಸುಗ್ರಹೈಸ್ತನ್ನಿವೇದ್ಯತೇ ।
ದುಷ್ಕೃತಸ್ಯಾಶುಭೈರೇವ ಸಮವಾಯೋ ಭವೇದಿತಿ ॥೬॥

ಅಲ್ಲಿ ಶುಭಗ್ರಹಗಳು ಶುಭಕರ್ಮವನ್ನೂ, ಅಶುಭ ಗ್ರಹಗಳು ಅಶುಭ ಕರ್ಮ ಅಥವಾ ಅದರ ಫಲವು ಉಂಟಾಗುವುದೆಂದೂ ಸೂಚಿಸುತ್ತವೆ.

ತಸ್ಮಾದ್ಧಿ ಗ್ರಹವೈಷಮ್ಯೇ ವೈಷಮ್ಯಂ ಕುರುತೇ ಜನಃ ।
ಗ್ರಹಸಾಮ್ಯೇ ಶುಭಂ ಕುರ್ಯಾತ್ ಜಾತ್ಯಾಂ ಜಾತ್ಯಾಂ ಪುರಸ್ಕೃತಮ್ ॥

ಆದ್ದರಿಂದ ಗ್ರಹಗಳು ವಿಷಮವಾಗಿದ್ದರೆ ಮನುಷ್ಯನು ವಿಷಮವಾಗಿ ಅಶುಭ ಕರ್ಮಗಳನ್ನು ಮಾಡುತ್ತಾನೆ. ಗ್ರಹಗಳು ಸಮವಾಗಿದ್ದರೆ ಹಿಂದಿನ ಜನ್ಮಗಳಲ್ಲಿ ಪ್ರಾರಂಭ ಮಾಡಿದ ಶುಭಗಳನ್ನೇ ಮಾಡಿಕೊಂಡು ಹೋಗುತ್ತಾನೆ.

ಕೇವಲಂ ಗ್ರಹನಕ್ಷತ್ರಂ ನ ಕರೋತಿ ಶುಭಾಶುಭಮ್ ।
ಸರ್ವಮಾತ್ಮಕೃತಂ ಕರ್ಮ ಲೋಕವಾದೋ ಗ್ರಹಾ ಇತಿ ॥೮॥

ಕೇವಲ ಗ್ರಹ-ನಕ್ಷತ್ರಗಳು ಶುಭಾಶುಭಗಳನ್ನು ಉಂಟುಮಾಡುವುದಿಲ್ಲ. ಎಲ್ಲವೂ ಜೀವನ ಕರ್ಮದಿಂದಲೇ ಉಂಟಾಗುತ್ತವೆ. ಗ್ರಹಗಳು ಉಂಟುಮಾಡುತ್ತವೆ ಎಂಬುದು ಲೋಕದ ಒಂದು ವದಂತಿ ಮಾತ್ರ.

ಪೃಥಗ್ಗ್ರಹಾಃ ಪೃಥಕ್ಕರ್ತಾ ಸ್ವಯಂಭೂರ್ಭುಜ್ಯತೇ ಫಲಮ್ ।
ಇತಿ ತೇ ಕಥಿತಂ ಸರ್ವಂ ವಿಶಂಕಾಂ ಜಹಿ ಶೋಭನೇ ॥೯॥

ಗ್ರಹಗಳೇ ಬೇರೆ, ಕರ್ಮವನ್ನು ಮಾಡುವ ಕರ್ತೃವೇ ಬೇರೆ. ಶುಭಾಶುಭ ಕರ್ಮಗಳಿಗೆ ಆಶ್ರಯನಾದ (ಸ್ವತಂತ್ರನಾದ) ಜೀವನೇ ಅವುಗಳ ಫಲವನ್ನು ಅನುಭವಿಸುತ್ತಾನೆ. ಶೋಭನೆಯೇ, ಎಲ್ಲವನ್ನೂ ನಿನಗೆ ಹೇಳಿದ್ದೇನೆ. ಸಂಶಯರಹಿತಳಾಗಿರು.

ಉಮಾ

ಭಗವನ್ ವಿವಿಧಂ ಕರ್ಮ ಕೃತ್ವಾ ಜಂತುಃ ಶುಭಾಶುಭಮ್ ।
ಕಿಂ ತಯೋಃ ಪೂರ್ವಕತರಂ ಭುಂಕ್ತೇ ಜನ್ಮಾಂತರೇ ಪುನಃ ।
ಏಷ ಮೇ ಸಂಶಯೋ ದೇವ ತಂ ಮೇ ತ್ವಂ ಛೇತ್ತುಮರ್ಹಸಿ ॥೧೦॥

ಉಮಾ– ಭಗವಂತನೇ, ಪುರುಷನು ವಿವಿಧವಾದ ಶುಭಾಶುಭಕರ್ಮಗಳನ್ನು ಮಾಡಿ ಅವುಗಳಲ್ಲಿ ಜನ್ಮಾಂತರಗಳಲ್ಲಿ ಮೊದಲು ಯಾವುದನ್ನು ಭೋಗಿಸುತ್ತಾನೆ ಮತ್ತು ಅನಂತರ ಯಾವುದನ್ನು ಭೋಗಿಸುತ್ತಾನೆ? ದೇವನೇ, ನನ್ನ ಈ ಸಂಶಯವನ್ನು ಪರಿಹರಿಸಬೇಕು.

ಮಹೇಶ್ವರಃ

ಸ್ಥಾನೇ ಸಂಶಯಿತುಂ ದೇವಿ ತತ್ತೇ ವಕ್ಷ್ಯಾಮಿ ತತ್ತ್ವತಃ ।
ಅಶುಭಂ ಪೂರ್ವಮಿತ್ಯಾಹುರಪರೇ ಶುಭಮಿತ್ಯಪಿ ॥೧೧॥

ಮಿಥ್ಯಾ ತದುಭಯಂ ಪ್ರೋಕ್ತಂ ಕೇವಲಂ ತದ್ಬ್ರವೀಮಿ ತೇ ॥೧೨॥

ಮಹೇಶ್ವರ– ದೇವಿಯೇ, ನಿನ್ನ ಸಂಶಯವು ಯೋಗ್ಯವಾಗಿದೆ. ಅದರ ತತ್ತ್ವವನ್ನು ಸರಿಯಾಗಿ ಹೇಳುವೆನು. ಕೆಲವರು ಅಶುಭವನ್ನು ಮೊದಲು ಅನುಭವಿಸುತ್ತಾನೆ ಎಂದೂ ಇನ್ನು ಕೆಲವರು ಶುಭವನ್ನು ಮೊದಲು ಅನುಭವಿಸುತ್ತಾನೆ ಎಂದೂ ಹೇಳುತ್ತಾರೆ. ಅವೆರಡೂ ಸುಳ್ಳು. ಶುದ್ಧ ತತ್ತ್ವವನ್ನು ನಿನಗೆ ಹೇಳುತ್ತೇನೆ.

ಮಾನುಷೇ ತು ಪದೇ ಕರ್ಮ ಯುಗಪದ್ ಯುಜ್ಯತೇ ಸದಾ ।
ಯಥಾಕೃತಂ ಯಥಾಯೋಗಮುಭಯಂ ಭುಜ್ಯತೇ ಕ್ರಮಾತ್ ॥೧೩॥

ಮನುಷ್ಯಜನ್ಮದಲ್ಲಿ ಶುಭಾಶುಭ ಕರ್ಮಗಳು ಒಟ್ಟಿಗೆ ಸಂಭವಿಸುತ್ತವೆ. ಅವುಗಳನ್ನು ಮಾಡಿದ ಕ್ರಮದಲ್ಲಿ, ಅವುಗಳನ್ನು ಮಾಡಿದ ರೀತಿಯಲ್ಲಿ ಶುಭಾಶುಭ ಫಲಗಳೆರಡೂ ಭೋಗಿಸಲ್ಪಡುತ್ತವೆ.

ಭುಂಜಾನಾಶ್ಚೈವ ದೃಶ್ಯಂತೇ ಕ್ರಮಶೋ ಭುವಿ ಮಾನವಾಃ ।
ಋದ್ಧಿಂ ಹಾನಿಂ ಸುಖಂ ದುಃಖಮುಭಯಂ ಭಯಮೇವ ಚ ॥೧೪॥

ಲೋಕದಲ್ಲಿ ಮನುಷ್ಯರು ಕ್ರಮವಾಗಿ ಸಮೃದ್ಧಿ-ನಷ್ಟ, ಸುಖ-ದುಃಖ, ಭಯ-ಅಭಯ ಇವುಗಳನ್ನು ಭೋಗಿಸುವುದು ಕಂಡುಬರುತ್ತದೆ.

ದುಃಖಾನ್ಯನುಭವಂತ್ಯಾಢ್ಯಾ ದರಿದ್ರಾಶ್ಚ ಸುಖಾನಿ ಚ ।
ಯೌಗಪದ್ಯಾಚ್ಚ ಭುಂಜಾನಾ ದೃಶ್ಯಂತೇ ಲೋಕಸಾಕ್ಷಿಕಮ್ ॥೧೫॥

ಧನಾಢ್ಯರೂ ದುಃಖವನ್ನು ಅನುಭವಿಸುತ್ತಾರೆ ಮತ್ತು ದರಿದ್ರರೂ ಸುಖವನ್ನು ಅನುಭವಿಸುತ್ತಾರೆ. ಕೆಲವರು ಸುಖ-ದುಃಖಗಳೆರಡನ್ನೂ (ಒಂದು ಅಂಶದಲ್ಲಿ ಸುಖ, ಒಂದು ಅಂಶದಲ್ಲಿ ದುಃಖ) ಒಂದೇ ಕಾಲದಲ್ಲಿ ಅನುಭವಿಸುವುದು ಲೋಕಸಾಕ್ಷಿಕವಾಗಿ ಕಂಡುಬರುತ್ತದೆ.

ನರಕೇ ಸ್ವರ್ಗಲೋಕೇ ಚ ನ ತಥಾ ಸಂಸ್ಥಿತಿಃ ಪ್ರಿಯೇ ।
ನಿತ್ಯಂ ದುಃಖಂ ಹಿ ನರಕೇ ಸ್ವರ್ಗೇ ನಿತ್ಯಂ ಸುಖಂ ತಥಾ ॥೧೬॥

ಪ್ರಿಯೆಯೇ, ನರಕದಲ್ಲಿ ಅಥವಾ ಸ್ವರ್ಗಲೋಕದಲ್ಲಿ ಇಂತಹ ಪರಿಸ್ಥಿತಿಯಿಲ್ಲ. ನರಕದಲ್ಲಿ ನಿತ್ಯ ದುಃಖವೂ, ಸ್ವರ್ಗದಲ್ಲಿ ನಿತ್ಯ ಸುಖವೂ ಇರುತ್ತದೆ.

ಶುಭಾಶುಭಾನಾಮಾಧಿಕ್ಯಾತ್ ಕರ್ಮಣಾಂ ತತ್ರ ಸೇವ್ಯತೇ ।
ನಿರಂತರಂ ಸುಖಂ ದುಃಖಂ ಸ್ವರ್ಗೇ ಚ ನರಕೇ ಭವೇತ್ ॥೧೭॥

ಅಲ್ಲಿ ಶುಭಾಶುಭ ಕರ್ಮಗಳು ಅಧಿಕವಾಗಿರುವುದರಿಂದ ಕರ್ಮಗಳ ಫಲವಾದ ಸುಖವು ಸ್ವರ್ಗದಲ್ಲಿಯೂ, ದುಃಖವು ನರಕದಲ್ಲಿಯೂ ನಿರಂತರವಾಗಿ ಸೇವಿಸಲ್ಪಡುತ್ತದೆ.

ತತ್ರಾಪಿ ಸುಮಹದ್‌ಭುಕ್ತ್ವಾ ಪೂರ್ವಮಲ್ಪಂ ಪುನಃ ಶುಭೇ ।
ಏತತ್ತೇ ಸರ್ವಮಾಖ್ಯಾತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥೧೮॥

ಸ್ವರ್ಗ-ನರಕಗಳಲ್ಲಿಯೂ ಕೂಡ ಯಾವುದು ಹೆಚ್ಚಾಗಿರುತ್ತದೆಯೋ ಅದನ್ನು ಮೊದಲು ಅನುಭವಿಸುತ್ತಾರೆ. ಮನುಷ್ಯರ ಶುಭಾಶುಭಗಳಲ್ಲಿ ಶುಭವು ಹೆಚ್ಚಾಗಿದ್ದರೆ ಮೊದಲು ಶುಭವನ್ನೂ, ಅಶುಭವು ಹೆಚ್ಚಾಗಿದ್ದರೆ ಮೊದಲು ಅಶುಭದ ಫಲವಾದ ನರಕವನ್ನೂ ಅನುಭವಿಸುತ್ತಾರೆ. ಅಲ್ಪವಾದುದರ ಫಲವನ್ನು ಅನಂತರ

ಅನುಭವಿಸುತ್ತಾರೆ. ಇವೆಲ್ಲವನ್ನೂ ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ? (ಲಕ್ಷಾಲಂಕಾರ).

ಉಮಾ

ಭಗವನ್ ಪ್ರಾಣಿನೋ ಲೋಕೇ ಮ್ರಿಯಂತೇ ಕೇನ ಹೇತುನಾ ।
ಜಾತಾಜಾತಾ ನ ತಿಷ್ಠಂತಿ ತನ್ಮೇ ಶಂಸಿತುಮರ್ಹಸಿ ॥೧೯॥

ಉಮಾ– ಭಗವಂತನೇ, ಲೋಕದಲ್ಲಿ ಪ್ರಾಣಿಗಳು ಯಾವ ಕಾರಣದಿಂದ ಸಾಯುತ್ತವೆ? ಹುಟ್ಟಿದವರು ಯಾರೂ ಇರುವುದಿಲ್ಲ. ಅದನ್ನು ನನಗೆ ಹೇಳಬೇಕು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ತತ್ತ್ವಂ ಸಮಾಹಿತಾ ।
ಆತ್ಮಕರ್ಮಕ್ಷಯಾದ್ ದೇಹಂ ಯಥಾ ಮುಂಚತಿ ತಚ್ಛೃಣು ॥೨೦॥

ಮಹೇಶ್ವರ– ಅದನ್ನು ನಿನಗೆ ಹೇಳುವೆನು, ಸಮಾಧಾನದಿಂದ ತತ್ತ್ವವನ್ನು ಕೇಳು. ತನ್ನ ಕರ್ಮಕ್ಷಯದ ಕಾರಣದಿಂದ ದೇಹವನ್ನು ಹೇಗೆ ತ್ಯಾಗ ಮಾಡುತ್ತಾರೆ ಎಂಬುದನ್ನು ಕೇಳು.

ಶರೀರಾತ್ಮಸಮಾಹಾರೋ ಜನುರಿತ್ಯಭಿಧೀಯತೇ ।
ತತ್ರಾತ್ಮಾನಂ ನಿತ್ಯಮಾಹುರನಿತ್ಯಂ ಕ್ಷೇತ್ರಮುಚ್ಯತೇ ॥೨೧॥

ಆತ್ಮ ಮತ್ತು ಶರೀರ ಸಂಬಂಧವಾದರೆ ಅದಕ್ಕೆ ಜನ್ಮ ಎಂದು ಹೆಸರು. ಅದರಲ್ಲಿ ಆತ್ಮ ಎಂಬುದು ನಿತ್ಯ ಕ್ಷೇತ್ರವೆನಿಸುವ ಶರೀರವು ಅನಿತ್ಯವಾದುದು.

ತತ್ತು ಕಾಲವಶಾಲ್ಲೋಕೇ ಜೀರ್ಣಂ ಭವತಿ ಶೋಭನೇ ।
ಕಾಲಶ್ಚಿನತ್ತಿ ಚಾಯೂಂಷಿ ದಿನಮಾಸರ್ತುಹಾಯನೈಃ ॥೨೨॥

ಕಾಲಃ ಪಚತಿ ಭೂತಾನಿ ಕಾಲೇನಾಕುಲಿತಂ ಜಗತ್ ।
ಕಾಲಂ ನಾತಿಕ್ರಮೇರನ್ ಹಿ ಸದೇವಾಸುರಮಾನವಾಃ ॥೨೩॥

ಯಥಾಕಾಶೇ ನ ತಿಷ್ಠೇತ ದ್ರವ್ಯಂ ಕಿಂಚಿದಚೇತನಮ್ ।
ತಥಾ ಧಾವತಿ ಕಾಲೋಽಯಂ ಕ್ಷಣಂ ಕಿಂಚಿನ್ನ ತಿಷ್ಠತಿ ॥೨೪॥

ಏವಂ ಕಾಲೇನ ಸಂಕ್ರಾಂತಂ ಶರೀರಂ ಜರ್ಝರೀಕೃತಮ್ ।
ಅಕರ್ಮಯೋಗ್ಯಂ ಸಂಶೀರ್ಣಂ ತ್ಯಕ್ತ್ವಾ ದೇಹೀ ತತೋ ವ್ರಜೇತ್ ॥

ನ ಚ ನಿತ್ಯಸ್ಯ ಜೀವಸ್ಯ ವಿನಾಶೋ ವಿದ್ಯತೇ ಶುಭೇ ।
ಸ ಪುನರ್ಜಾಯತೇಽನ್ಯತ್ರ ಶರೀರಂ ನವಮಾವಿಶನ್ ।
ಏವಂ ಲೋಕಗತಿರ್ನಿತ್ಯಮಾದಿಪ್ರಭೃತಿ ವರ್ತತೇ ॥೨೬॥

ಎಲೌ ಶೋಭನೆಯೇ, ಕಾಲವಶದಿಂದ ಆ ಶರೀರವು ಸವೆದು ಹೋಗುತ್ತದೆ. ಕಾಲವು ದಿನ, ಮಾಸ, ಋತು, ಸಂವತ್ಸರಗಳ ಕ್ರಮದಲ್ಲಿ ಆಯುಸ್ಸನ್ನು ನಾಶಪಡಿಸುತ್ತದೆ. ಕಾಲವು ಎಲ್ಲಾ ಪ್ರಾಣಿಗಳನ್ನೂ ಪಕ್ವಗೊಳಿಸುತ್ತದೆ. ಜಗತ್ತು ಕಾಲದ ಪ್ರಭಾವಕ್ಕೆ ತುತ್ತಾಗಿದೆ. ದೇವಾಸುರ ಮಾನವರೂ ಸಹ ಕಾಲವನ್ನು ಮೀರಲಾರರು. ಆಕಾಶಕ್ಕೆ ಎಸೆದ ವಸ್ತುವು ಹೇಗೆ ಅಲ್ಲಿ ನಿಲ್ಲುವುದಿಲ್ಲವೋ ಅದರಂತೆ ಕಾಲವು ಒಂದು ಕ್ಷಣವೂ ಸ್ವಲ್ಪವೂ ನಿಲ್ಲದೆ ಓಡುತ್ತದೆ. ಹೀಗೆ ಕಾಲಸಂಬಂಧದಿಂದ ಕೂಡಿ ಶಿಥಿಲವಾಗಿ ಕರ್ಮವನ್ನು ಮಾಡುವ ಸಾಧ್ಯತೆ ಇಲ್ಲದಿದ್ದಾಗ ಜೀವನು ಆ ಶರೀರವನ್ನು ಬಿಟ್ಟು ಇನ್ನೊಂದು ಶರೀರಕ್ಕೆ ಹೋಗುತ್ತಾನೆ. ಎಲೌ ಶುಭಳೇ, ಜೀವನು ನಿತ್ಯನಾದವನು. ಅವನಿಗೆ ವಿನಾಶವಿಲ್ಲ. ಅವನು ಇನ್ನೊಂದು ಹೊಸ ಶರೀರವನ್ನು ಪ್ರವೇಶಿಸಿ ಇನ್ನೊಂದು ಸ್ಥಳದಲ್ಲಿ ಜನಿಸುತ್ತಾನೆ. ಲೋಕಗತಿಯು ಸೃಷ್ಟಿಯ ಪ್ರಾರಂಭದಿಂದಲೂ ಇದೇ ರೀತಿ ನಡೆದುಕೊಂಡು ಬಂದಿದೆ.

ಉಮಾ

ಭಗವನ್ ಪ್ರಾಣಿನೋ ಬಾಲಾ ದೃಶ್ಯಂತೇ ಮರಣಂ ಗತಾಃ ।
ಅತಿವೃದ್ಧಾಶ್ಚ ಜೀವಂತೋ ದೃಶ್ಯಂತೇ ಚಿರಜೀವಿನಃ ॥೨೭॥

ಕೇವಲಂ ಕಾಲಮರಣಂ ನ ಪ್ರಮಾಣಂ ಮಹೇಶ್ವರ ।
ತಸ್ಮಾನ್ಮೇ ಸಂಶಯಂ ಬ್ರೂಹಿ ಪ್ರಾಣಿನಾಂ ಜೀವಕಾರಣಮ್ ॥೨೮॥

ಉಮಾ– ಭಗವಂತನೇ, ಬಾಲಕರು ಮತ್ತು ಚಿಕ್ಕ ವಯಸ್ಸಿನ ಪ್ರಾಣಿಗಳು ಮರಣವನ್ನು ಹೊಂದುವುದು ಕಂಡುಬರುತ್ತದೆ. ಅತಿ ವೃದ್ಧರೂ ಚಿರಜೀವಿಗಳಾಗಿ ಜೀವಿಸುವುದು ಕಂಡುಬರುತ್ತದೆ. ಎಲೈ ಮಹೇಶ್ವರನೇ, ಆದ್ದರಿಂದ ಕೇವಲ ಕಾಲವು ಮರಣಕ್ಕೆ ಕಾರಣವಲ್ಲ. ಆದ್ದರಿಂದ ಪ್ರಾಣಿಗಳ ಜೀವನ ವಿಷಯದಲ್ಲಿ (ಜೀವಾಂತರಾಗಿರುವ ಕಾಲದ ವಿಷಯದಲ್ಲಿ) ನನಗಿರುವ ಸಂಶಯವನ್ನು ಪರಿಹರಿಸು.

ಮಹೇಶ್ವರಃ

ಶೃಣು ತತ್ಕಾರಣಂ ದೇವಿ ನಿರ್ಣಯಸ್ತ್ವೇಕ ಏವ ಸಃ ।
ಜೀರ್ಣತ್ವಮಾತ್ರಂ ಕುರುತೇ ಕಾಲೋ ದೇಹಂ ನ ಪಾತಯೇತ್ ॥೨೯॥

ಮಹೇಶ್ವರ– ದೇವಿಯೇ, ಅದಕ್ಕೆ ಕಾರಣವನ್ನು ಕೇಳು. ಇದೊಂದೇ ನಿರ್ಣಯ. ಕಾಲವು ದೇಹವನ್ನು ಶಿಥಿಲಗೊಳಿಸುತ್ತದೆ ಹೊರತು ದೇಹವನ್ನು ಬೀಳಿಸುವುದಿಲ್ಲ.

ಜೀರ್ಣೇ ಕರ್ಮಣಿ ಸಂಘಾತಃ ಸ್ವಯಮೇವ ವಿಶೀರ್ಯತೇ ।
ಪೂರ್ವಕರ್ಮಪ್ರಮಾಣೇನ ಜೀವಿತಂ ಮೃತ್ಯುರೇವ ವಾ ॥೩೦॥

ಆ ದೇಹದಿಂದ ಕೂಡಿರಲು ಬೇಕಾದ ಕರ್ಮವು ಕ್ಷೀಣವಾಗುತ್ತಿರಲು ಇಂದ್ರಿಯಾದಿ ಸಂಘಾತರೂಪವಾದ ದೇಹವು ತಾನೇ ಬಿದ್ದು ಹೋಗುತ್ತದೆ. ಹಿಂದಿನ ಕರ್ಮಕ್ಕೆ ಅನುಗುಣವಾಗಿ ಜೀವನ ಅಥವಾ ಮರಣವು ಉಂಟಾಗುತ್ತದೆ.

ಯಾವತ್‌ಪೂರ್ವಕೃತಂ ಕರ್ಮ ತಾವಜ್ಜೀವತಿ ಮಾನವಃ ।
ತದ್ವತ್ ಕಾಲವಶಾದ್ ಬಾಲಾ ಮ್ರಿಯಂತೇ ಭೋಗಸಂಕ್ಷಯಾತ್ ॥೩೧॥

ಜೀವಂತಿ ಚಿರವೃದ್ಧಾಶ್ಚ ತಥಾ ಕರ್ಮಪ್ರಮಾಣತಃ ।
ಇತಿ ತೇ ಕಥಿತಂ ದೇವಿ ನಿರ್ವಿಶಂಕಾ ಭವ ಪ್ರಿಯೇ ॥೩೨॥

ಹಿಂದಿನ ಕರ್ಮವು ಇರುವವರೆಗೆ ಮನುಷ್ಯನು ಜೀವಿಸುತ್ತಾನೆ. ಅದರಂತೆ ಕಾಲವಶದಿಂದ ಭೋಗಕ್ಷಯವನ್ನು ಹೊಂದಿದ ಬಾಲರೂ ಮರಣವನ್ನು ಹೊಂದುತ್ತಾರೆ.ಚಿರಜೀವಿಗಳೂ ಸಹ ಅದೇ ಕರ್ಮದ ಪ್ರಭಾವದಿಂದ ಬದುಕಿರುತ್ತಾರೆ. ಪ್ರಿಯೆಯೇ, ದೇವಿಯೇ, ಇದನ್ನು ನಿನಗೆ ಹೇಳಿದ್ದೇನೆ. ಸಂಶಯವನ್ನು ಬಿಡು.

ಉಮಾ

ಭಗವನ್ ಕೇನ ವೃತ್ತೇನ ಭವಂತಿ ಚಿರಜೀವಿನಃ ।
ಅಲ್ಪಾಯುಷೋ ನರಾಃ ಕೇನ ತನ್ಮೇ ಶಂಸಿತುಮರ್ಹಸಿ ॥೩೩॥

ಉಮಾ– ಭಗವಂತನೇ, ಯಾವ ನಡತೆಯಿಂದ ಮನುಷ್ಯರು ಚಿರಜೀವಿ-ಗಳಾಗುತ್ತಾರೆ? ಯಾವ ನಡತೆಯಿಂದ ಮನುಷ್ಯರು ಅಲ್ಪಾಯುಷಿಗಳಾಗುತ್ತಾರೆ? ಇದನ್ನು ನನಗೆ ಹೇಳಬೇಕು.

ಮಹೇಶ್ವರಃ

ಶೃಣು ತತ್ಸರ್ವಮಖಿಲಂ ಗುಹ್ಯಂ ಪಥ್ಯತರಂ ನೃಣಾಮ್ ।
ಯೇ ನರಾ ವೃತ್ತಸಂಪನ್ನಾ ಭವಂತಿ ಚಿರಜೀವಿನಃ ॥೩೪॥

ಮಹೇಶ್ವರ– ಯಾವ ಮನುಷ್ಯರು ಒಳ್ಳೆಯ ನಡತೆಯಿಂದ ಕೂಡಿದವರಾಗಿ ಚಿರಜೀವಿಗಳಾಗುತ್ತಾರೆ ಎಂಬ ರಹಸ್ಯವಾದ, ಮನುಷ್ಯರಿಗೆ ಅತ್ಯಂತ ಹಿತವಾದ ಎಲ್ಲವನ್ನೂ ನೀನು ಕೇಳು.

ಅಹಿಂಸಾ ಸತ್ಯವಚನಮಕ್ರೋಧಃ ಕ್ಷಾಂತಿರಾರ್ಜವಮ್ ।
ಗುರೂಣಾಂ ನಿತ್ಯಶುಶ್ರೂಷಾ ವೃದ್ಧಾನಾಮಪಿ ಪೂಜನಮ್ ॥೩೫॥

ಶೌಚಂ ಚಾಕಾರ್ಯಸಂತ್ಯಾಗಃ ಸದಾ ಪಥ್ಯಸ್ಯ ಭೋಜನಮ್ ।
ಏವಮಾದಿ ಶುಭಂ ವೃತ್ತಂ ನರಾಣಾಂ ದೀರ್ಘಜೀವಿನಾಮ್ ॥೩೬॥

ಅಹಿಂಸೆ, ಸತ್ಯವಚನ, ಅಕ್ರೋಧ, ಕ್ಷಮೆ, ಆರ್ಜವ, ನಿತ್ಯವೂ ಗುರುಸೇವೆ, ವೃದ್ಧರ ಸತ್ಕಾರ, ಶೌಚ, ನಿಷಿದ್ಧಕಾರ್ಯತ್ಯಾಗ, ಸದಾ ಪಥ್ಯಾನ್ನ ಭೋಜನ ಇವೇ ಮುಂತಾದ ನಡತೆಯು ದೀರ್ಘಜೀವಿಗಳಾದ ಮನುಷ್ಯರಿಗೆ ಇರುತ್ತದೆ.

ತಪಸಾ ಬ್ರಹ್ಮಚರ್ಯೇಣ ರಸಾಯನನಿಷೇವಣಾತ್ ।
ಉದಗ್ರಸತ್ತ್ವಾ ಬಲಿನೋ ಭವಂತಿ ಚಿರಜೀವಿನಃ ।
ಸ್ವರ್ಗೇ ವಾ ಮಾನುಷೇ ವಾऽಪಿ ಚಿರಂ ತಿಷ್ಠಂತಿ ಧಾರ್ಮಿಕಾಃ ॥೩೭॥

ಚಿರಜೀವಿಗಳು ತಪಸ್ಸಿನಿಂದಲೂ, ಬ್ರಹ್ಮಚರ್ಯದಿಂದಲೂ, ರಸಾಯನ ಸೇವನೆಯಿಂದಲೂ ಶ್ರೇಷ್ಠವಾದ ಧೈರ್ಯ ಮತ್ತು ಬಲಗಳನ್ನು ಹೊಂದಿರುತ್ತಾರೆ. ಧಾರ್ಮಿಕರಾದವರು ಸ್ವರ್ಗದಲ್ಲಾಗಲೀ, ಮನುಷ್ಯಲೋಕದಲ್ಲಾಗಲೀ ಬಹುಕಾಲ ಇರುತ್ತಾರೆ.

ಅಪರೇ ಪಾಪಕರ್ಮಾಣಃ ಪ್ರಾಯಶೋऽನೃತವಾದಿನಃ ।
ಹಿಂಸಾಪ್ರಿಯಾ ಗುರುದ್ವಿಷ್ಟಾ ನಿಷ್ಕ್ರಿಯಾಃ ಶೌಚವರ್ಜಿತಾಃ ॥೩೮॥

ನಾಸ್ತಿಕಾ ಘೋರಕರ್ಮಾಣಃ ಸತತಂ ಮಾಂಸಪಾನಪಾಃ ।
ಪಾಪಾಚಾರಾ ಗುರುದ್ವೇಷಾಃ ಕೋಪನಾಃ ಕಲಹಪ್ರಿಯಾಃ ॥೩೯॥

ಏವಮೇವಾಶುಭಾಚಾರಾಸ್ತಿಷ್ಠಂತಿ ನರಕೇ ಚಿರಮ್ ।
ತಿರ್ಯಗ್ಯೋನೌ ತಥಾऽತ್ಯಂತಮಲ್ಪಂ ತಿಷ್ಠಂತಿ ಮಾನುಷೇ ।
ತಸ್ಮಾದಲ್ಪಾಯುಷೋ ಮರ್ತ್ಯಾಸ್ತಾದೃಶಾಃ ಸಂಭವಂತಿ ತೇ ॥೪೦॥

ಇನ್ನು ಉಳಿದ ಪಾಪಕರ್ಮಿಗಳು, ಹೆಚ್ಚಾಗಿ ಅನೃತವನ್ನೇ ಮಾತನಾಡುವವರು, ಹಿಂಸಾಪ್ರಿಯರೂ, ಗುರುಗಳ ದ್ವೇಷಕ್ಕೆ ಪಾತ್ರರಾದವರು, ಕ್ರಿಯಾಶೂನ್ಯರು, ಶೌಚಹೀನರು, ನಾಸ್ತಿಕರು, ಘೋರಕರ್ಮವನ್ನು ಮಾಡುವವರು, ಸದಾ ಮದ್ಯ ಮಾಂಸ ಪ್ರಿಯರಾದವರು, ಪಾಪಕರ್ಮವನ್ನು ಮಾಡುವವರು, ಗುರುಗಳನ್ನು ದ್ವೇಷಿಸುವವರು, ಕೋಪಸ್ವಭಾವದವರು, ಕಲಹ ಪ್ರಿಯರಾದವರು ಇಂತಹ ಅಶುಭಾಚಾರ ಉಳ್ಳವರು ನರಕದಲ್ಲಿ ವಾಸ ಮಾಡುತ್ತಾರೆ. ಹಾಗೆಯೇ ತಿರ್ಯಗ್ಯೋನಿಗಳಲ್ಲೂ ಬಹುಕಾಲ ವಾಸಮಾಡುತ್ತಾರೆ. ಮನುಷ್ಯಯೋನಿಯಲ್ಲಿ ಸ್ವಲ್ಪಕಾಲ ಮಾತ್ರ ವಾಸ ಮಾಡುತ್ತಾರೆ. ಆದ್ದರಿಂದ ಅಂತಹವರು ಮನುಷ್ಯರಾಗಿ ಅಲ್ಪಾಯುಷ್ಯವನ್ನು ಹೊಂದಿದವರಾಗುತ್ತಾರೆ.

ಅಗಮ್ಯದೇಶಗಮನಾದಪಥ್ಯಾನಾಂ ಚ ಭೋಜನಾತ್ ।
ಆಯುಃಕ್ಷಯೋ ಭವೇನ್ನೃಣಾಮಾಯುಃಕ್ಷಯಕರಾ ಹಿ ತೇ ॥೪೧॥

ಅಗಮ್ಯವಾದ ದೇಶಕ್ಕೆ ಹೋಗುವುದರಿಂದ, ಅಪಥ್ಯವಾದ ಭೋಜನವನ್ನು ಮಾಡುವುದರಿಂದ ಆಯುಷ್ಯ ಕ್ಷಯ ಉಂಟಾಗುತ್ತದೆ. ಅಂತಹ ಕಾರ್ಯಗಳು ಮನುಷ್ಯನ ಆಯುಷ್ಯವನ್ನು ನಾಶ ಮಾಡುವಂತಹವುಗಳು.

ಭವಂತ್ಯಲ್ಪಾಯುಷಸ್ತೈಸ್ತೈರನ್ಯಥಾ ಚಿರಜೀವಿನಃ ।
ಏತತ್ತೇ ಕಥಿತಂ ಸರ್ವಂ ಭೂಯಃ ಶ್ರೋತುಂ ಕಿಮಿಚ್ಛಸಿ ॥೪೨॥

ಆಯಾ ದುಷ್ಕಾರ್ಯಗಳಿಂದ ಅಲ್ಪಾಯುಷಿಗಳಾಗುತ್ತಾರೆ. ಇಲ್ಲದಿದ್ದರೆ ಚಿರಜೀವಿಗಳಾಗುತ್ತಾರೆ. ಇದೆಲ್ಲವನ್ನೂ ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಪರ್ವಣಿ ನೃಣಾಮಲ್ಪಾಯುಷ್ಯಾದಿನಿಮಿತ್ತಕಥನಂ ನಾಮ ನವೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಹತ್ತನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಪುಂಸ್ತ್ವ-ಸ್ತ್ರೀತ್ವಾದಿ ಕಥನ.

ಉಮಾ

ಭಗವನ್ ದೇವದೇವೇಶ ಶ್ರುತಂ ಮೇ ಪರಮಂ ಹಿತಮ್ ।
ಆತ್ಮನೋ ಜಾತಿಸಂಬಂಧಂ ಬ್ರೂಹಿ ಸ್ತ್ರೀಪುರುಷಾಂತರೇ ॥೧॥

ಸ್ತ್ರೀಪ್ರಾಣಃ ಪುರುಷಪ್ರಾಣ ಏಕಃ ಸ ಪೃಥಗೇವ ವಾ ।
ಏಷ ಮೇ ಸಂಶಯೋ ದೇವ ತಂ ಮೇ ಛೇತ್ತುಂ ತ್ವಮರ್ಹಸಿ ॥೨॥

ಉಮಾ– ಭಗವಂತನೇ, ದೇವದೇವೇಶನೇ, ಪರಮಹಿತವಾದ ನಿನ್ನ ಉಪದೇಶವನ್ನು ಕೇಳಿದೆನು. ಸ್ತ್ರೀ-ಪುರುಷರ ಜನ್ಮ ವಿಷಯದಲ್ಲಿ ನನಗೆ ಹೇಳು. ಒಂದೇ ಜೀವಕ್ಕೆ ಸ್ತ್ರೀ-ಪುರುಷ ಜನ್ಮ ಬರುತ್ತದೆಯೋ ಅಥವಾ ಸ್ತ್ರೀಯರೂ ಪುರುಷರೂ ಬೇರೆ ಬೇರೆಯೋ? ಇದು ನನ್ನ ಸಂಶಯ. ಇದನ್ನು ಪರಿಹರಿಸಬೇಕು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ಸರ್ವಂ ಸಮಾಹಿತಾ ।
ಪುಂಸ್ತ್ವಂ ಸ್ತ್ರೀತ್ವಮಿತಿ ಪ್ರಾಣೇ ಸ್ಥಿತಿರ್ನಾಸ್ತಿ ಶುಭೇಕ್ಷಣೇ ॥೩॥

ನಿರ್ವಿಕಾರೀ ಸದಾ ಚಾತ್ಮಾ ಸ್ತ್ರೀತ್ವಂ ಪುಂಸ್ತ್ವಂ ನ ಚಾತ್ಮನಿ ।
ಕರ್ಮಪ್ರಕಾರೇಣ ತಥಾ ಜಾತ್ಯಾಂ ಜಾತ್ಯಾಂ ಪ್ರಜಾಯತೇ ॥೪॥

ಮಹೇಶ್ವರ– ನಾನು ನಿನಗೆ ಅದನ್ನು ಹೇಳುವೆನು. ಸಮಾಧಾನದಿಂದ ಕೇಳುವವಳಾಗು. ಎಲೌ ಶುಭೇಕ್ಷಣೆಯೇ, ಜೀವನಲ್ಲಿ ಒಮ್ಮೆ ಪುಂಸ್ತ್ವ, ಇನ್ನೊಮ್ಮೆ ಸ್ತ್ರೀತ್ವ ಎಂಬ ಪರಿಸ್ಥಿತಿಯಿಲ್ಲ. ಆತ್ಮನು ನಿರ್ವಿಕಾರನಾದವನು. ಆದ್ದರಿಂದ ಆತ್ಮನ ಸ್ತ್ರೀತ್ವ, ಪುಂಸ್ತ್ವಗಳು ಬದಲಾವಣೆಯನ್ನು ಹೊಂದುವುದಿಲ್ಲ. ಕರ್ಮಗಳಿಗೆ ಅನುಗುಣವಾಗಿ ಬೇರೆ ಬೇರೆ ಜಾತಿಯಲ್ಲಿ ಹುಟ್ಟುತ್ತಾನೆ.

ಕೆಲವೊಮ್ಮೆ ಸ್ತ್ರೀತ್ವ, ಕೆಲವೊಮ್ಮೆ ಪುಂಸ್ತ್ವ ಎಂಬ ಸ್ತ್ರೀ-ಪುಂಸ್ತ್ವದ ವಿಷಯದಲ್ಲಿ ಅವ್ಯವಸ್ಥೆಯು ಜೀವನಲ್ಲಿ ಇಲ್ಲ. ಅದಕ್ಕೆ ಕಾರಣವಾದುದು ಅವನ ನಿರ್ವಿಕಾರತ್ವ.

ಆದರೆ ಅನಾದ್ಯನಂತ ಕಾಲದಲ್ಲಿ ಸ್ತ್ರೀ ಜೀವರು ಸ್ತ್ರೀ ಜೀವರಾಗಿಯೇ ಇರುತ್ತಾರೆ. ಪುರುಷ ಜೀವರು ಪುರುಷ ಜೀವರಾಗಿಯೇ ಇರುತ್ತಾರೆ. ಇಲ್ಲದಿದ್ದರೆ ಮೋಕ್ಷದಲ್ಲಿ ಸ್ತ್ರೀ-ಪುರುಷ ಭೇದ ಇಲ್ಲದೇ ಹೋಗಬೇಕಾದೀತು ಎಂದು ಶಿವನ ಅಭಿಪ್ರಾಯ ಮತ್ತು 'ಕರ್ತಾರಮವ್ಯಯಂ' ಕರ್ತೃವು ವ್ಯತ್ಯಾಸವನ್ನು ಹೊಂದುವುದಿಲ್ಲ ಎಂಬ ಪೂರ್ವ ವಾಕ್ಯದಿಂದಲೂ ವಿರೋಧವುಂಟಾಗುತ್ತದೆ. ಸ್ತ್ರೀಯರಲ್ಲಿ ಎರಡು ವಿಧ. ಔಪಾಧಿಕ ಸ್ತ್ರೀಯರು, ಸ್ವಾಭಾವಿಕವಾಗಿ ಸ್ತ್ರೀಯರು ಎಂದು. ಪುರುಷರಲ್ಲಿ ಹಾಗಲ್ಲ. ಸ್ವಾಭಾವಿಕವಾಗಿ ಪುರುಷರಾದವರು ಒಂದು ನಿಮಿತ್ತದಿಂದ ಅವರು ಸ್ತ್ರೀಯರಾಗುವುದೂ ಉಂಟು. ಸ್ವಾಭಾವಿಕ ಸ್ತ್ರೀಯರು ಮಾತ್ರ ಪುನಃ ಪುನಃ ಸ್ತ್ರೀಯರಾಗಿಯೇ ಹುಟ್ಟುತ್ತಾರೆ ಎಂದೂ ಪುರುಷರಾಗುವುದಿಲ್ಲ. ಪುರುಷನಾದರೆ ಸ್ವಾಭಾವಿಕನಾಗಿ ಪುರುಷನು ಕರ್ಮವಶದಿಂದ ಸ್ತ್ರೀಯೂ ಆಗುತ್ತಾನೆ. ಇಲ್ಲದಿದ್ದರೆ ಶಿಖಂಡಿಗೆ ಪುಂಭಾವ ಉಂಟಾಗಲು ಯಕ್ಷರೂಪನಾದ ಪುರುಷನ ಪ್ರವೇಶವು ವ್ಯರ್ಥವಾಗುತ್ತಿದ್ದಿತು ಎಂದು ಶಿವನ ಅಭಿಪ್ರಾಯ (ಲಕ್ಷಾಲಂಕಾರ).

ಅಕರ್ತಾ ಚಾವಿಕಾರೀ ಚ ನಿತ್ಯಶ್ಚ ಪುರುಷಃ ಸ್ಮೃತಃ ।
ಸ್ತ್ರೀಶರೀರಕೃತಂ ಕರ್ಮ ಸ್ತ್ರೀಭಾವೇನೋಪಭುಜ್ಯತೇ ॥೫॥

ಜೀವನು ನಿರ್ವಿಕಾರನಾದವನು ಮತ್ತು ನಿತ್ಯನಾದವನು. ದೇಹಸಂಬಂಧವಿಲ್ಲದೆ ಅವನು ಕರ್ಮವನ್ನು ಮಾಡುವುದಿಲ್ಲ. ಸ್ತ್ರೀ ಶರೀರದಿಂದ ಮಾಡಿದ ಕರ್ಮವನ್ನು ಸ್ತ್ರೀ ಶರೀರದಿಂದಲೇ ಅನುಭವಿಸುತ್ತಾನೆ.

ಪುರುಷೇಣ ಕೃತಂ ಕರ್ಮ ಪುರುಷೇಣೈವ ಭುಜ್ಯತೇ ।
ಏವಂ ಪ್ರಸಜ್ಯತೇ ಲೋಕೇ ಭಾವೈಕತ್ವೇನ ಭೂಯಶಃ ।
ಶರೀರಂ ಕರ್ಮನಾನಾತ್ವಾದ್ ದೃಶ್ಯತೇ ವಿಪರೀತವತ್ ॥೬॥

ಪುರುಷನು ಮಾಡಿದ ಕರ್ಮಫಲವನ್ನು ಪುರುಷ ಶರೀರದಿಂದಲೇ ಅನುಭವಿಸುತ್ತಾನೆ. ಹೀಗೆ ಕರ್ಮ ಮತ್ತು ಕರ್ಮಫಲಗಳು ಹೆಚ್ಚಾಗಿ ಒಂದೇ ಭಾವದಿಂದ ಮಾಡಲ್ಪಡುತ್ತವೆ ಮತ್ತು ಅನುಭವಿಸಲ್ಪಡುತ್ತವೆ. ಪುರುಷನ ಶರೀರವು ಮಾತ್ರ ಕರ್ಮ ವೈಚಿತ್ರ್ಯದಿಂದ ಪುರುಷನಾಗಿಯೂ, ಸ್ತ್ರೀಯಾಗಿಯೂ ಕಂಡುಬರುತ್ತದೆ.

ಕೃತ್ವಾ ತು ಪೌರುಷಂ ಕರ್ಮ ಸ್ತ್ರೀ ಪುಮಾನಪಿ ಜಾಯತೇ ।
ಸ್ತ್ರೀಭಾವಯುಕ್ ಪುಮಾನ್‌ಕೃತ್ವಾ ಕರ್ಮಣಾ ಪ್ರಮದಾ ಭವೇತ್ ॥೭॥

ನೈಮಿತ್ತಿಕ ಸ್ತ್ರೀಯಾದವಳು ಪುರುಷನಿಗೆ ಯೋಗ್ಯವಾದ ಕರ್ಮವನ್ನು ಮಾಡಿ ಪುನಃ ಪುರುಷನಾಗಿ ಜನಿಸುತ್ತಾಳೆ. ಪುರುಷನು ಸ್ತ್ರೀಯರಿಗೆ ಯೋಗ್ಯವಾದ ಕರ್ಮಗಳನ್ನು ಮಾಡಿ ಆ ಕರ್ಮದಿಂದ ಸ್ತ್ರೀಯಾಗಿಯೇ ಹುಟ್ಟುತ್ತಾನೆ (ಲಕ್ಷಾಲಂಕಾರ).

ಉಮಾ

ಭಗವನ್ ಸರ್ವಲೋಕೇಶ ಯದ್ಯಾತ್ಮಾ ನ ಕರೋತಿ ಚೇತ್ ।
ಕೋऽನ್ಯಃ ಕರ್ಮಕರಸ್ತತ್ರ ದೇಹೇ ತದ್‌ವಕ್ತುಮರ್ಹಸಿ ॥೮॥

ಉಮಾ– ಭಗವಂತನೇ, ಸರ್ವಲೋಕೇಶನೇ, ಜೀವನನ್ನು ಅಕರ್ತಾ ಎಂದು ಹೇಳಿದೆ. ಜೀವನು ಕರ್ತೃವಲ್ಲದಿದ್ದರೆ ದೇಹದಲ್ಲಿ ಪ್ರಕೃತಿಸಂಬಂಧರಹಿತನಾಗಿ ಕರ್ಮವನ್ನು ಮಾಡುವವನು ಯಾರು ಎಂದು ನನಗೆ ಹೇಳಬೇಕು (ಲಕ್ಷಾಲಂಕಾರ).

ಮಹೇಶ್ವರಃ

ಶೃಣು ಭಾಮಿನಿ ಕರ್ತಾರಮಾತ್ಮಾऽಯಂ ನೈವ ಕರ್ಮಕೃತ್ ।
ಪ್ರಕೃತ್ಯಾ ಗುಣಯುಕ್ತೇನ ಕ್ರಿಯತೇ ಕರ್ಮ ನಿತ್ಯಶಃ ॥೯॥

ಮಹೇಶ್ವರ– ಶರೀರ ರಹಿತನಾದ ಆತ್ಮನು ಎಂದೂ ಕರ್ಮವನ್ನು ಮಾಡುವುದಿಲ್ಲ. ಪ್ರಕೃತಿಯ ಗುಣವಾದ ದೇಹದಿಂದ ಯುಕ್ತನಾದ ಆತ್ಮನು ಮಾತ್ರ ಕರ್ಮವನ್ನು ಮಾಡುತ್ತಾನೆ (ಲಕ್ಷಾಲಂಕಾರ).

ಶರೀರಂ ಪ್ರಾಣಿನಾಂ ಲೋಕೇ ಯಥಾ ಪಿತ್ತಕಫಾನಿಲೈಃ ।
ವ್ಯಾಪ್ತಮೇವ ತ್ರಿಭಿರ್ದೋಷೈಸ್ತಥಾ ವ್ಯಾಪ್ತಂ ಗುಣೈಸ್ತ್ರಿಭಿಃ ॥೧೦॥

ಲೋಕದಲ್ಲಿ ಪ್ರಾಣಿಗಳ ಶರೀರವು ಹೇಗೆ ವಾತ, ಪಿತ್ಥ, ಕಫಗಳೆಂಬ ಮೂರು ದೋಷಗಳಿಂದ ವ್ಯಾಪ್ತವಾಗಿರುತ್ತದೆಯೋ ಅದರಂತೆ ಸತ್ವ-ರಜಸ್ತಮೋಗುಣಗಳಿಂದ ವ್ಯಾಪ್ತವಾಗಿರುತ್ತದೆ.

ಸತ್ವಂ ರಜಸ್ತಮ ಇತಿ ಗುಣಾಸ್ತ್ವೇತೇ ಶರೀರಿಣಃ ।
ಪ್ರಕಾಶಾತ್ಮಕಮೇತೇಷಾಂ ಸತ್ವಂ ಸತತಮಿಷ್ಯತೇ ॥೧೧॥

ಸತ್ವ-ರಜಸ್ಸು ಮತ್ತು ತಮಸ್ಸು ಎಂಬ ಗುಣಗಳು ಶರೀರಿಯ ಜೊತೆಯಲ್ಲಿ ಇರುತ್ತವೆ. ಇವುಗಳಲ್ಲಿ ಸತ್ವವು ಯಾವಾಗಲೂ ಪ್ರಕಾಶಾತ್ಮಕವಾದುದು.

ರಜೋ ದುಃಖಾತ್ಮಕಂ ತತ್ರ ತಮೋ ಮೋಹಾತ್ಮಕಂ ಸ್ಮೃತಮ್ ।
ತ್ರಿಭಿರೇತೈರ್ಗುಣೈಃ ಸರ್ವಂ ಲೋಕೇ ಕರ್ಮ ಪ್ರವರ್ತತೇ ॥೧೨॥

ರಜೋಗುಣವು ದುಃಖಾತ್ಮಕವಾದುದು ಮತ್ತು ತಮೋಗುಣವು ಮೋಹಾತ್ಮಕವಾದುದು ಎಂದು ಹೇಳಲ್ಪಡುತ್ತದೆ. ಲೋಕದಲ್ಲಿ ಎಲ್ಲ ಕರ್ಮವೂ ಈ ಮೂರುಗುಣಗಳಿಂದಲೇ ಮಾಡಲ್ಪಡುತ್ತದೆ.

ಸತ್ಯಂ ಪ್ರಾಣಿದಯಾ ಶೌಚಂ ಶ್ರೇಯಃ ಪ್ರೀತಿಃ ಕ್ಷಮಾ ದಮಃ ।
ಏವಮಾದಿ ತಥಾऽನ್ಯಚ್ಚ ಕರ್ಮ ಸಾತ್ವಿಕಮಿಷ್ಯತೇ ॥೧೩॥

ಸತ್ಯ, ಪ್ರಾಣಿದಯೆ, ಶೌಚ, ಶ್ರೇಯಸ್ಸಾಧನ, ಪ್ರೀತಿ, ಕ್ಷಮೆ, ಇಂದ್ರಿಯನಿಗ್ರಹ ಇವೇ ಮೊದಲಾದವುಗಳು ಸಾತ್ವಿಕ ಕರ್ಮಗಳೆಂದು ಹೇಳಲ್ಪಡುತ್ತವೆ.

ದಾಕ್ಷ್ಯಂ ಕರ್ಮಪರತ್ವಂ ಚ ಲೋಭೋ ಭೋಗವಿಧಿಂ ಪ್ರತಿ ।
ಕಳತ್ರಸಂಗೋ ಮಾಧುರ್ಯಂ ನಿತ್ಯಮೈಶ್ವರ್ಯಲುಬ್ಧತಾ ।
ರಜಸಶ್ಚೋದ್ಭವಂ ಚೈತತ್ಕರ್ಮ ನಾನಾವಿಧಂ ಸದಾ ॥೧೪॥

ಕೆಲಸ ಮಾಡುವುದರಲ್ಲಿ ದಕ್ಷತೆ, ಯಾವಾಗಲೂ ಕಾರ್ಯಪರತೆ, ಲೋಭ, ಭೋಗಾಸಕ್ತಿ, ಸ್ತ್ರೀಸಂಗ, ಮಧುರಭಾವ, ಯಾವಾಗಲೂ ಐಶ್ವರ್ಯದಲ್ಲಿ ಆಸೆ ಇಂತಹ ನಾನಾ ವಿಧವಾದ ಕರ್ಮಗಳು ಯಾವಾಗಲೂ ರಜೋಗುಣದಿಂದ ಉಂಟಾಗುತ್ತವೆ.

ಅನೃತಂ ಚೈವ ಪಾರುಷ್ಯಂ ಶ್ರುತಿವಿದ್ವೇಷತಾ ಭೃಶಮ್ ।
ಹಿಂಸಾಪರತ್ವಂ ನಾಸ್ತಿಕ್ಯಂ ನಿದ್ರಾಲಸ್ಯಭಯಾನಿ ಚ ।
ತಮಸಶ್ಚೋದ್ಭವಂ ಚೈತತ್ಕರ್ಮ ಪಾಪಯುತಂ ಸದಾ ॥೧೫॥

ಅನೃತ, ಕ್ರೌರ್ಯ, ಶ್ರುತಿಗಳಲ್ಲಿ ವಿದ್ವೇಷ, ಹಿಂಸಾಪರತ್ವ, ನಾಸ್ತಿಕ್ಯ, ನಿದ್ರೆ, ಆಲಸ್ಯ, ಭಯ ಇವುಗಳು ತಮೋಗುಣದಿಂದ ಉಂಟಾದವುಗಳು ಮತ್ತು ಪಾಪಕರ್ಮಗಳು.

ತಸ್ಮಾದ್ ಗುಣಮಯಃ ಸರ್ವಃ ಕಾರ್ಯಾರಂಭಃ ಶುಭಾಶುಭಃ ।
ತಸ್ಮಾದಾತ್ಮಾನಮವ್ಯಗ್ರಂ ವಿದ್ಧ್ಯಕರ್ತಾರಮವ್ಯಯಮ್ ॥೧೬॥

ಆದ್ದರಿಂದ ಶುಭಾಶುಭ ಕಾರ್ಯಗಳೆಲ್ಲವೂ ಗುಣಗಳಿಂದಲೇ ಆಗುತ್ತವೆ. ಆತ್ಮನು ಮಾತ್ರ ನಿರ್ವಿಕಾರನಾದವನು. ಗುಣಗಳ ಸಂಬಂಧವಿಲ್ಲದೆ ಕರ್ಮಗಳನ್ನು ಮಾಡಲು ಅಶಕ್ತನಾದವನು ಮತ್ತು ನಾಶರಹಿತನಾದವನು.

ಸಾತ್ವಿಕಾಃ ಪುಣ್ಯಲೋಕೇಷು ರಾಜಸಾ ಮಾನುಷೇ ಪದೇ ।
ತಿರ್ಯಗ್ಯೋನೌ ಚ ನರಕೇ ತಿಷ್ಠೇಯುಸ್ತಾಮಸಾ ನರಾಃ ॥೧೭॥

ಸಾತ್ವಿಕರು ಪುಣ್ಯಲೋಕಗಳಲ್ಲಿಯೂ ರಾಜಸ ಜೀವರು ಮನುಷ್ಯ ಲೋಕದಲ್ಲಿಯೂ, ತಾಮಸ ಜೀವರು ನೀಚಯೋನಿಗಳಲ್ಲಿಯೂ ಮತ್ತು ನರಕದಲ್ಲಿಯೂ ಇರುತ್ತಾರೆ.

ಉಮಾ

ಕಿಮರ್ಥಮಾತ್ಮಾ ಭಿನ್ನೇಽಸ್ಮಿನ್‌ದೇಹೇ ಶಸ್ತ್ರೇಣ ವಾ ಹತೇ ।
ಸ್ವಯಂ ಪ್ರಣಶ್ಯತೇ ದೇಹೀ ತನ್ಮೇ ಶಂಸಿತುಮರ್ಹಸಿ ॥೧೮॥

ಉಮಾ– ದೇಹವು ಶಸ್ತ್ರದಿಂದ ಹತವಾದಾಗ ದೇಹಿಯಾದ ಆತ್ಮನು ಏಕೆ ನಾಶವನ್ನು ಹೊಂದುತ್ತಾನೆ? ಇದನ್ನು ನನಗೆ ಹೇಳಬೇಕು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ಕಲ್ಯಾಣಿ ಕಾರಣಮ್ ।
ಏತನ್ನೈಯಾಯಿಕೈಶ್ಚಾಪಿ ಮುಹ್ಯತೇ ಸೂಕ್ಷ್ಮಬುದ್ಧಿಭಿಃ ॥೧೯॥

ಮಹೇಶ್ವರ– ಕಲ್ಯಾಣಿಯೇ, ಅದಕ್ಕೆ ಕಾರಣವನ್ನು ನಾನು ಹೇಳುವೆನು. ಅದನ್ನು ಕೇಳು. ಸೂಕ್ಷ್ಮವಾದ ತರ್ಕಬುದ್ಧಿಯುಳ್ಳವರೂ ಸಹ ಈ ವಿಷಯದಲ್ಲಿ ಮೋಹಕ್ಕೆ ಒಳಗಾಗುತ್ತಾರೆ.

ಕರ್ಮಕ್ಷಯೇ ತು ಸಂಪ್ರಾಪ್ತೇ ಪ್ರಾಣಿನಾಂ ಜನ್ಮಧಾರಿಣಾಮ್ ।
ಉಪದ್ರವೋ ಭವೇದ್ ದೇಹೇ ಯೇನ ಕೇನಾಪಿ ಹೇತುನಾ ॥೨೦॥

ಕರ್ಮಕ್ಷಯವು ಉಂಟಾಗುವ ಕಾಲದಲ್ಲಿ ಜನ್ಮವನ್ನು ಪಡೆದ ಜೀವರಿಗೆ ದೇಹದಲ್ಲಿ ಯಾವುದಾದರೂ ಕಾರಣದಿಂದ ಉಪದ್ರವವು ಉಂಟಾಗುತ್ತದೆ.

ತನ್ನಿಮಿತ್ತಂ ಶರೀರೀ ತು ಶರೀರಂ ಪ್ರಾಪ್ತಸಂಕ್ಷಯಮ್ ।
ಅಪಯಾತಿ ಪರಿತ್ಯಜ್ಯ ತತಃ ಕರ್ಮವಶೇನ ಸಃ ॥೨೧॥

ಆ ನಿಮಿತ್ತದಿಂದ ಶರೀರಿಯು ಆ ದೇಹದ ಸಂಕ್ಷಯವನ್ನು ಹೊಂದಿ ಆ ದೇಹವನ್ನು ಬಿಟ್ಟು ಕರ್ಮವಶದಿಂದ ಬೇರೆ ಕಡೆಗೆ ಹೋಗುತ್ತಾನೆ.

ದೇಹಹಾನೌ ಭವೇದಾತ್ಮಾ ವೇದನಾಭಿರ್ನ ಚಾಲ್ಯತೇ ।
ತಿಷ್ಠೇತ್‌ಕರ್ಮಫಲಂ ಯಾವದ್ ವ್ರಜೇತ್‌ಕರ್ಮಕ್ಷಯೇ ಪುನಃ ॥೨೨॥

ದೇಹಹಾನಿಯಾದಾಗ ಅವನು ಹೇಗೆ ಕರ್ಮದ ಫಲವನ್ನು ಭೋಗಿಸುತ್ತಾನೆ? ದೇಹದಿಂದ ಯುಕ್ತನಾಗಿಯೇ ಭೋಗಿಸುತ್ತಾನಷ್ಟೆ? ಕರ್ಮವನ್ನು ಮಾಡುವಾಗ ಸಹಾಯಭೂತವಾಗಿದ್ದ ದೇಹವು ಭೋಗಕಾಲದಲ್ಲಿ ನಷ್ಟವಾಗಿರುವುದರಿಂದ ಕರ್ಮಕಾಲದಲ್ಲಿದ್ದ ಶರೀರವು ಭೋಗಕ್ಕೆ ಉಪಯೋಗಿಯಲ್ಲ. ಆತ್ಮನೇ ಭೋಗವನ್ನು ಭೋಗಿಸುವವನು. ರಾಜನಿಗೆ ಗಮನಕ್ಕೆ ಸಹಾಯ ಮಾಡಿದ ಅಶ್ವವು ರಾಜನು ಭೋಜನ ಮಾಡುವ ಕಾಲದಲ್ಲಿಯೂ ಅವನ ಜೊತೆಯಲ್ಲಿ ಇರುವುದಿಲ್ಲವಷ್ಟೆ? ಕರ್ಮಕ್ಷಯ ಉಂಟಾದಾಗ ಯಾವ ಕರ್ಮದಿಂದ ಆ ದೇಹವು ಬಂದಿದ್ದಿತೋ ಆ ದೇಹವನ್ನು ಜೀವನು ತೊರೆಯುತ್ತಾನೆ. ಆದರೆ ದೇಹವು ನಾಶವನ್ನು ಹೊಂದಿದಾಗ ತಾನು ನಾಶವನ್ನು ಹೊಂದುವುದಿಲ್ಲ. ಸ್ವರ್ಗಕ್ಕೆ, ನರಕಕ್ಕೆ ಅಥವಾ ಮೋಕ್ಷಕ್ಕೆ ಹೋಗುತ್ತಾನೆ (ಲಕ್ಷಾಲಂಕಾರ).

ದೇಹವು ನಾಶವನ್ನು ಹೊಂದಿದರೂ ಆತ್ಮನು ಇದ್ದೇ ಇರುತ್ತಾನೆ. ವೇದನಾದಿಗಳಿಂದ ಆತ್ಮನು ನಾಶವನ್ನು ಹೊಂದುವುದಿಲ್ಲ. ಜೀವನು ಕರ್ಮಫಲವಿರುವವರೆಗೂ ಆ ದೇಹದಲ್ಲಿ ಇರುತ್ತಾನೆ. ಕರ್ಮಫಲವು ಕ್ಷಯಿಸಿದರೆ ಆ ದೇಹವನ್ನು ಬಿಟ್ಟು ಹೋಗುತ್ತಾನೆ.

ಆದಿಪ್ರಭೃತಿ ಲೋಕೇಽಸ್ಮಿನ್ನೇವಮಾತ್ಮಗತಿಃ ಸ್ಮೃತಾ ।
ಏತತ್ತೇ ಕಥಿತಂ ದೇವಿ ಕಿಂ ಭೂಯಃ ಶ್ರೋತುಮಿಚ್ಛಸಿ ॥೨೩॥

ದೇವಿಯೇ, ಮೊದಲಿನಿಂದಲೂ ಜಗತ್ತಿನ ಜೀವನ ಗತಿಯು ಈ ರೀತಿಯಾಗಿಯೇ ಇದೆ ಎಂದು ಹೇಳಲ್ಪಡುತ್ತದೆ. ಇದನ್ನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮಪರ್ವಣಿ ಪುಂಸ್ತ್ವಾದಿಕಥನಂ ನಾಮ
ದಶಾಧಿಕದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಹತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಹನ್ನೊಂದನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಹಿಂಸೆ ಮಾಡಿದರೂ ಪಾಪಾಲೇಪದ ಕಥನ.

ಉಮಾ

ಭಗವನ್ ದೇವದೇವೇಶ ಕರ್ಮಣ್ಯೇವ ಶುಭಾಶುಭಮ್ ।
ಯಥಾಯೋಗಂ ಫಲಂ ಜಂತುಃ ಪ್ರಾಪ್ನೋತೀತಿ ವಿನಿಶ್ಚಯಃ ॥೧॥

ಪರೇಷಾಂ ವಿಪ್ರಿಯಂ ಕುರ್ವನ್ ಯಥಾ ಸಂಪ್ರಾಪ್ನುಯಾಚ್ಛುಭಮ್ ।
ಯದ್ಯೇತದಸ್ತಿ ಚೇದ್ ದೇವ ತನ್ಮೇ ಶಂಸಿತುಮರ್ಹಸಿ ॥೨॥

ಉಮಾ- ಭಗವಂತನೇ, ದೇವದೇವೇಶನೇ, ಜೀವನು ತನ್ನ ಕರ್ಮಕ್ಕೆ ಅನುಗುಣವಾಗಿ ಶುಭಾಶುಭ ಫಲಗಳನ್ನು ಹೊಂದುತ್ತಾನೆ ಎಂಬುದು ನಿಶ್ಚಿತವಾದುದು. ಇನ್ನೊಬ್ಬರಿಗೆ ಹಿಂಸೆಯನ್ನು ಮಾಡಿದರೂ ಶುಭಫಲವನ್ನು ಹೊಂದುವಂತಹ ಯಾವುದಾದರೂ ವಿಷಯವಿದ್ದರೆ ಎಲೈ ದೇವನೇ, ಅದನ್ನು ನನಗೆ ಹೇಳಬೇಕು.

ಮಹೇಶ್ವರಃ

ತದಪ್ಯಸ್ತಿ ಮಹಾಭಾಗೇ ಅಭಿಸಂಧಿಫಲಂ ನೃಣಾಮ್ ।
ಹಿತಾರ್ಥಂ ದುಃಖಮನ್ಯೇಷಾಂ ಕೃತ್ವಾ ಶುಭಮವಾಪ್ನುಯಾತ್ ॥೩॥

ಕರ್ಮಕ್ಷಯವು ಉಂಟಾಗುವ ಕಾಲದಲ್ಲಿ ಜನ್ಮವನ್ನು ಪಡೆದ ಜೀವರಿಗೆ ದೇಹದಲ್ಲಿ ಯಾವುದಾದರೂ ಕಾರಣದಿಂದ ಉಪದ್ರವವು ಉಂಟಾಗುತ್ತದೆ.

ತನ್ನಿಮಿತ್ತಂ ಶರೀರೀ ತು ಶರೀರಂ ಪ್ರಾಪ್ತಸಂಕ್ಷಯಮ್ ।
ಅಪಯಾತಿ ಪರಿತ್ಯಜ್ಯ ತತಃ ಕರ್ಮವಶೇನ ಸಃ ॥೨೧॥

ಆ ನಿಮಿತ್ತದಿಂದ ಶರೀರಿಯು ಆ ದೇಹದ ಸಂಕ್ಷಯವನ್ನು ಹೊಂದಿ ಆ ದೇಹವನ್ನು ಬಿಟ್ಟು ಕರ್ಮವಶದಿಂದ ಬೇರೆ ಕಡೆಗೆ ಹೋಗುತ್ತಾನೆ.

ದೇಹಹಾನೌ ಭವೇದಾತ್ಮಾ ವೇದನಾಭಿರ್ನ ಚಾಲ್ಯತೇ ।
ತಿಷ್ಠೇತ್‌ಕರ್ಮಫಲಂ ಯಾವದ್ ವ್ರಜೇತ್‌ಕರ್ಮಕ್ಷಯೇ ಪುನಃ ॥೨೨॥

ದೇಹಹಾನಿಯಾದಾಗ ಅವನು ಹೇಗೆ ಕರ್ಮದ ಫಲವನ್ನು ಭೋಗಿಸುತ್ತಾನೆ? ದೇಹದಿಂದ ಯುಕ್ತನಾಗಿಯೇ ಭೋಗಿಸುತ್ತಾನಷ್ಟೆ? ಕರ್ಮವನ್ನು ಮಾಡುವಾಗ ಸಹಾಯಭೂತವಾಗಿದ್ದ ದೇಹವು ಭೋಗಕಾಲದಲ್ಲಿ ನಷ್ಟವಾಗಿರುವುದರಿಂದ ಕರ್ಮಕಾಲದಲ್ಲಿದ್ದ ಶರೀರವು ಭೋಗಕ್ಕೆ ಉಪಯೋಗಿಯಲ್ಲ. ಆತ್ಮನೇ ಭೋಗವನ್ನು ಭೋಗಿಸುವವನು. ರಾಜನಿಗೆ ಗಮನಕ್ಕೆ ಸಹಾಯ ಮಾಡಿದ ಅಶ್ವವು ರಾಜನು ಭೋಜನ ಮಾಡುವ ಕಾಲದಲ್ಲಿಯೂ ಅವನ ಜೊತೆಯಲ್ಲಿ ಇರುವುದಿಲ್ಲವಷ್ಟೆ? ಕರ್ಮಕ್ಷಯ ಉಂಟಾದಾಗ ಯಾವ ಕರ್ಮದಿಂದ ಆ ದೇಹವು ಬಂದಿದ್ದಿತೋ ಆ ದೇಹವನ್ನು ಜೀವನು ತೊರೆಯುತ್ತಾನೆ. ಆದರೆ ದೇಹವು ನಾಶವನ್ನು ಹೊಂದಿದಾಗ ತಾನು ನಾಶವನ್ನು ಹೊಂದುವುದಿಲ್ಲ. ಸ್ವರ್ಗಕ್ಕೆ, ನರಕಕ್ಕೆ ಅಥವಾ ಮೋಕ್ಷಕ್ಕೆ ಹೋಗುತ್ತಾನೆ (ಲಕ್ಷಾಲಂಕಾರ).

ದೇಹವು ನಾಶವನ್ನು ಹೊಂದಿದರೂ ಆತ್ಮನು ಇದ್ದೇ ಇರುತ್ತಾನೆ. ವೇದನಾದಿಗಳಿಂದ ಆತ್ಮನು ನಾಶವನ್ನು ಹೊಂದುವುದಿಲ್ಲ. ಜೀವನು ಕರ್ಮಫಲವಿರುವವರೆಗೂ ಆ ದೇಹದಲ್ಲಿ ಇರುತ್ತಾನೆ. ಕರ್ಮಫಲವು ಕ್ಷಯಿಸಿದರೆ ಆ ದೇಹವನ್ನು ಬಿಟ್ಟು ಹೋಗುತ್ತಾನೆ.

ಆದಿಪ್ರಭೃತಿ ಲೋಕೇಽಸ್ಮಿನ್ನೇವಮಾತ್ಮಗತಿಃ ಸ್ಮೃತಾ ।
ಏತತ್ತೇ ಕಥಿತಂ ದೇವಿ ಕಿಂ ಭೂಯಃ ಶ್ರೋತುಮಿಚ್ಛಸಿ ॥೨೩॥

ದೇವಿಯೇ, ಮೊದಲಿನಿಂದಲೂ ಜಗತ್ತಿನ ಜೀವನ ಗತಿಯು ಈ ರೀತಿಯಾಗಿಯೇ ಇದೆ ಎಂದು ಹೇಳಲ್ಪಡುತ್ತದೆ. ಇದನ್ನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮಪರ್ವಣಿ ಪುಂಸ್ತ್ವಾದಿಕಥನಂ ನಾಮ
ದಶಾಧಿಕದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಹತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಹನ್ನೊಂದನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಹಿಂಸೆ ಮಾಡಿದರೂ ಪಾಪಾಲೇಪದ ಕಥನ.

ಉಮಾ

ಭಗವನ್ ದೇವದೇವೇಶ ಕರ್ಮಣ್ಯೈವ ಶುಭಾಶುಭಮ್ ।
ಯಥಾಯೋಗಂ ಫಲಂ ಜಂತುಃ ಪ್ರಾಪ್ನೋತೀತಿ ವಿನಿಶ್ಚಯಃ ॥೧॥

ಪರೇಷಾಂ ವಿಪ್ರಿಯಂ ಕುರ್ವನ್ ಯಥಾ ಸಂಪ್ರಾಪ್ನುಯಾಚ್ಛುಭಮ್ ।
ಯದ್ಯೇತದಸ್ತಿ ಚೇದ್ ದೇವ ತನ್ಮೇ ಶಂಸಿತುಮರ್ಹಸಿ ॥೨॥

ಉಮಾ- ಭಗವಂತನೇ, ದೇವದೇವೇಶನೇ, ಜೀವನು ತನ್ನ ಕರ್ಮಕ್ಕೆ ಅನುಗುಣವಾಗಿ ಶುಭಾಶುಭ ಫಲಗಳನ್ನು ಹೊಂದುತ್ತಾನೆ ಎಂಬುದು ನಿಶ್ಚಿತವಾದುದು. ಇನ್ನೊಬ್ಬರಿಗೆ ಹಿಂಸೆಯನ್ನು ಮಾಡಿದರೂ ಶುಭಫಲವನ್ನು ಹೊಂದುವಂತಹ ಯಾವುದಾದರೂ ವಿಷಯವಿದ್ದರೆ ಎಲೈ ದೇವನೇ, ಅದನ್ನು ನನಗೆ ಹೇಳಬೇಕು.

ಮಹೇಶ್ವರಃ

ತದಪ್ಯಸ್ತಿ ಮಹಾಭಾಗೇ ಅಭಿಸಂಧಿಫಲಂ ನೃಣಾಮ್ ।
ಹಿತಾರ್ಥಂ ದುಃಖಮನ್ಯೇಷಾಂ ಕೃತ್ವಾ ಶುಭಮವಾಪ್ನುಯಾತ್ ॥೩॥

ಮಹೇಶ್ವರ– ಮಹಾಭಾಗ್ಯವಂತಳೇ, ಅಂತಹದೂ ಇದೆ. ಮನುಷ್ಯರಿಗೆ ಉದ್ದೇಶಕ್ಕೆ ಅನುಗುಣವಾಗಿ ಫಲವು ಲಭಿಸುತ್ತದೆ. ಇನ್ನೊಬ್ಬರ ಹಿತಕ್ಕಾಗಿ ದುಃಖವನ್ನು ಕೊಟ್ಟರೂ ಶುಭಫಲವೇ ದೊರಕುತ್ತದೆ.

ದಂಡಯನ್ ಭರ್ತ್ಸಯನ್ ರಾಜಾ ಪ್ರಜಾಃ ಪುಣ್ಯಮವಾಪ್ನುಯಾತ್ ।
ಗುರುಃ ಸಂತರ್ಜಯನ್ ಶಿಷ್ಯಾನ್ ಭರ್ತಾ ಭೃತ್ಯಜನಾನ್ ಸ್ವಕಾನ್ ।
ಉನ್ಮಾರ್ಗಪ್ರತಿಪನ್ನಾಂಶ್ಚ ಶಾಸ್ತಾ ಧರ್ಮಫಲಂ ಲಭೇತ್ ॥೪॥

ರಾಜನು ಪ್ರಜೆಗಳಿಗೆ ಶಿಕ್ಷೆಯನ್ನು ಕೊಟ್ಟು ಗದರಿಸಿ ಪುಣ್ಯವನ್ನು ಪಡೆಯುತ್ತಾನೆ. ಗುರುವು ಶಿಷ್ಯರನ್ನು ಗದರಿಸಿ, ಸ್ವಾಮಿಯು ತನ್ನ ಭೃತ್ಯರನ್ನು ಗದರಿಸಿ ಪುಣ್ಯವನ್ನು ಪಡೆಯುತ್ತಾರೆ. ದುರ್ಮಾರ್ಗದಲ್ಲಿ ಹೋಗುವವರಿಗೆ ಶಿಕ್ಷೆಯನ್ನು ಕೊಡುವವನು ಧರ್ಮಫಲವನ್ನು ಪಡೆಯುತ್ತಾನೆ.

ಚಿಕಿತ್ಸಕಶ್ಚ ದುಃಖಾನಿ ಜನಯನ್ ಹಿತಮಾಪ್ನುಯಾತ್ ।
ಯಜ್ಞಾರ್ಥಂ ಪಶುಹಿಂಸಾಂ ಚ ಕುರ್ವನ್ನಪಿ ನ ಹಿಂಸಕಃ ।
ಏವಮನ್ಯೇ ಸುಮನಸೋ ಹಿಂಸಕಾಃ ಸ್ವರ್ಗಮಾಪ್ನುಯುಃ ॥೫॥

ವೈದ್ಯನು ರೋಗಿಗೆ ದುಃಖವನ್ನು ಉಂಟುಮಾಡಿದರೂ ಶುಭವನ್ನು ಪಡೆಯುತ್ತಾನೆ. ಯಜ್ಞದ ಸಲುವಾಗಿ ಪಶುಹಿಂಸೆಯನ್ನು ಮಾಡಿದರೂ ಅವನು ಹಿಂಸಕನಾಗುವುದಿಲ್ಲ. ಹೀಗೆ ಒಳ್ಳೆಯ ಅಭಿಪ್ರಾಯದಿಂದ ಹಿಂಸೆಯನ್ನು ಮಾಡುವವರು ಸ್ವರ್ಗವನ್ನು ಹೊಂದುವರು.

ಏಕಸ್ಮಿನ್ ನಿಹತೇ ಭದ್ರೇ ಬಹವಃ ಸುಖಮಾಪ್ನುಯುಃ ।
ತಸ್ಮಿನ್ ಹತೇ ಭವೇದ್ ಧರ್ಮಃ ಕುತ ಏವ ತು ಪಾಪಕಮ್ ॥೬॥

ಮಂಗಳಸ್ವರೂಪಳೇ, ಒಬ್ಬನನ್ನು ಕೊಂದರೆ ಬಹಳ ಜನ ಸುಖವನ್ನು ಪಡೆಯುತ್ತಾರೆ (ಎಂದಾದರೆ) ಆ ಒಬ್ಬನನ್ನು ಕೊಲ್ಲುವುದು ಧರ್ಮವೇ ಆಗುತ್ತದೆ. ಪಾಪವು ಎಲ್ಲಿಂದ ಬರುತ್ತದೆ?

ಅಭಿಸಂಧೇರಜಿಹ್ಮತ್ವಾಚ್ಚುದ್ಧೇ ಧರ್ಮಸ್ಯ ಗೌರವಾತ್ ।
ಏತತ್ಕೃತ್ವಾ ತು ಪಾಪೇಭ್ಯೋ ನ ದೋಷಂ ಪ್ರಾಪ್ನುಯುಃ ಕ್ವಚಿತ್ ॥೭॥

ಉದ್ದೇಶವು ವಕ್ರವಿಲ್ಲದಿರುವುದರಿಂದ ಮತ್ತು ಶುದ್ಧಧರ್ಮದಲ್ಲಿ ಗೌರವ ಇರುವುದರಿಂದ ಇಂತಹ ಹಿಂಸಾ ಕಾರ್ಯಗಳನ್ನು ಮಾಡಿದರೂ ಅವರಿಗೆ ದೋಷ ಉಂಟಾಗುವುದಿಲ್ಲ.

ಉಮಾ

ಭಗವನ್ ಸರ್ವಮರ್ತ್ಯಾನಾಂ ಜ್ಞಾನೀ ಭವತಿ ಸತ್ತಮಃ ।
ಕಿಮವೇಕ್ಷ್ಯ ತದುತ್ಪನ್ನಂ ಜ್ಞಾನಂ ತಸ್ಯ ಫಲಂ ಚ ಯತ್ ।
ಕೃತ್ರಿಮಂ ತತ್‌ಸ್ವಭಾವಂ ವಾ ತನ್ಮೇ ಶಂಸಿತುಮರ್ಹಸಿ ॥೮॥

ಉಮಾ– ಭಗವಂತನೇ, ಎಲ್ಲಮನುಷ್ಯರಲ್ಲಿಜ್ಞಾನಿಯು ಶ್ರೇಷ್ಠನಾಗುತ್ತಾನೆ. ಆ ಜ್ಞಾನವು ಹೇಗೆ ಉಂಟಾಗುತ್ತದೆ? ಮತ್ತು ಅದರ ಫಲವೇನು? ಜ್ಞಾನವು ಸ್ವಾಭಾವಿಕವಾದುದೋ ಅಥವಾ ಆಗಂತುಕವಾದುದೋ ಎಂದು ನನಗೆ ಹೇಳಬೇಕು.

ನಾರದಃ

ಏತಚ್ಛ್ರುತ್ವಾ ಮಹಾದೇವೋ ಜಗೌ ಜ್ಞಾನಸ್ಯ ಸಂಭವಮ್ ॥೯॥

ನಾರದ– ಈ ಮಾತನ್ನು ಕೇಳಿ ಮಹಾದೇವನು ಜ್ಞಾನದ ಉತ್ಪತ್ತಿಯನ್ನು ಹೇಳಿದನು.

ಮಹೇಶ್ವರಃ

ಸ್ಥಾವರಂ ಜಂಗಮಂ ಚೈವ ಜಗದ್ ದ್ವಿವಿಧಮುಚ್ಯತೇ ।
ಚತಸ್ರೋ ಜಾತಯಸ್ತತ್ರ ಪ್ರಜಾನಾಂ ಕ್ರಮಶೋ ಯಥಾ ॥೧೦॥

ಮಹೇಶ್ವರ– ಪ್ರಪಂಚವು ಸ್ಥಾವರ ಮತ್ತು ಜಂಗಮ ಎಂದು ಎರಡು ವಿಧವಾದುದು. ಅವುಗಳಲ್ಲಿಪ್ರಾಣಿಗಳಿಗೆ ಕ್ರಮವಾಗಿ ನಾಲ್ಕು ಜಾತಿಗಳಿವೆ.

ತೇಷಾಮುದ್ಭೇದಜಾ ವೃಕ್ಷಾ ಲತಾ ವಲ್ಲ್ಯಶ್ಚ ವೀರುಧಃ ।
ದಂಶಯೂಕಾದಯಶ್ಚಾನ್ಯೇ ಸ್ವೇದಜಾಃ ಕೃಮಿಜಾತಯಃ ॥೧೧॥

ವೃಕ್ಷಗಳು, ಲತೆಗಳು, ಬಳ್ಳಿಗಳು, ಪೊದೆಗಳು ಇವು ಉದ್ಭೇದಜ ಜಾತಿಗೆ ಸೇರಿದವು. ಸೊಳ್ಳೆ, ಹೇನು ಮೊದಲಾದ ಕ್ರಿಮಿಗಳು ಸ್ವೇದಜ ಜಾತಿಗೆ ಸೇರಿದವುಗಳು.

ಪಕ್ಷಿಣಶ್ಛಿದ್ರಕರ್ಣಾಶ್ಚ ಪ್ರಾಣಿನಸ್ತ್ವಂಡಜಾ ಮತಾಃ ।
ಮೃಗವ್ಯಾಲಮನುಷ್ಯಾಂಶ್ಚ ವಿದ್ಧಿ ತೇಷಾಂ ಜರಾಯುಜಾನ್ ॥೧೨॥

ಪಕ್ಷಿಗಳು, ಕಿವಿಯಲ್ಲಿ ರಂಧ್ರವಿರುವ ಪ್ರಾಣಿಗಳು ಅಂಡಜ ಜಾತಿಗೆ ಸೇರಿದವುಗಳು (ಮೊಟ್ಟೆಯಿಂದ ಒಡೆದು ಹೊರಗೆ ಬರುವಂತಹವುಗಳು). ಮೃಗಗಳು, ಗಜಗಳು, ಮನುಷ್ಯರು ಮೊದಲಾದವರು ಜರಾಯುಜ (ಗರ್ಭಕೋಶದ ಆವರಣದಿಂದ ಹೊರಗೆ ಬರುವವರು) ಎಂದು ತಿಳಿ.

ಏವಂ ಚತುರ್ವಿಧಾಂ ಜಾತಿಮಾತ್ಮಾ ಸಂಸೃತ್ಯ ತಿಷ್ಠತಿ ॥೧೩॥

ಹೀಗೆ ಜೀವನು ಸಂಸಾರದಲ್ಲಿ ಈ ನಾಲ್ಕುವಿಧವಾದ ಜಾತಿಗಳಲ್ಲಿ ಕ್ರಮವಾಗಿ ಜನಿಸುತ್ತಾನೆ.

ಸ್ಪರ್ಶೇನೈಕೇಂದ್ರಿಯೇಣಾತ್ಮಾ ತಿಷ್ಠತ್ಯುದ್ಭೇದಜೇಷು ವೈ ।
ಶರೀರಸ್ಪರ್ಶರೂಪಾಭ್ಯಾಂ ಕ್ಲೇದಜೇಷ್ವಪಿ ತಿಷ್ಠತಿ ॥೧೪॥

ಪಂಚಭಿಶ್ಚೇಂದ್ರಿಯದ್ವಾರೈರ್ಜೀವಂತ್ಯೇಂಡಜರಾಯುಜಾಃ ॥೧೫॥

ಉದ್ಭೇದಜ ಜಾತಿ ಸ್ಪರ್ಶೇಂದ್ರಿಯವೊಂದನ್ನೇ ಹೊಂದಿರುತ್ತಾನೆ. ಸ್ವೇದಜ ಜಾತಿಗಳಲ್ಲಿ ಸ್ಪರ್ಶ ಮತ್ತು ರೂಪ ಎಂಬ ಎರಡು ಇಂದ್ರಿಯಗಳಿಂದ ಯುಕ್ತನಾಗಿರುತ್ತಾನೆ. ಅಂಡಜ ಮತ್ತು ಜರಾಯುಜಗಳಲ್ಲಿ ಐದು ಇಂದ್ರಿಯಗಳಿಂದಲೂ ಯುಕ್ತನಾಗಿರುತ್ತಾನೆ.

ತಥಾ ಭೂಮ್ಯಂಬುಸಂಯೋಗಾದ್ ಭವಂತ್ಯುದ್ಭೇದಜಾಃ ಪ್ರಿಯೇ ।
ಶೀತೋಷ್ಣಯೋಸ್ತು ಸಂಯೋಗಾಜ್ಜಾಯಂತೇ ಸ್ವೇದಜಾಃ ಪ್ರಿಯೇ ।
ಅಂಡಜಾಶ್ಚಾಪಿ ಸಂಯೋಗಾತ್ ಜಾಯಂತೇ ಕ್ಷೇತ್ರಬೀಜಯೋಃ ॥೧೬॥

ಪ್ರಿಯೆಯೇ, ಭೂಮಿ ಮತ್ತು ಜಲದ ಸಂಯೋಗದಿಂದ ಉದ್ಭೇದಜ ಜಾತಿಯ ಜೀವರು ಜನಿಸುತ್ತಾರೆ. ಶೀತೋಷ್ಣಗಳ ಸಂಯೋಗದಿಂದ ಸ್ವೇದಜ ಜಾತಿಯ ಕ್ರಿಮಿಗಳು ಉಂಟಾಗುತ್ತವೆ. ಕ್ಷೇತ್ರ-ಬೀಜಗಳ ಸಂಯೋಗದಿಂದ ಅಂಡಜಗಳು ಜನಿಸುತ್ತವೆ.

ಶುಕ್ಲಶೋಣಿತಸಂಯೋಗಾತ್ ಸಂಭವಂತಿ ಜರಾಯುಜಾಃ ।
ಜರಾಯುಜಾನಾಂ ಸರ್ವೇಷಾಂ ಮಾನುಷಂ ಪದಮುತ್ತಮಮ್ ॥೧೭॥

ಶುಕ್ಲ-ಶೋಣಿತಸಂಬಂಧದಿಂದ ಜರಾಯುಜಗಳು ಜನಿಸುತ್ತವೆ. ಎಲ್ಲ ಜರಾಯುಜಗಳಲ್ಲಿ ಮನುಷ್ಯನ ಸ್ಥಾನವು ಶ್ರೇಷ್ಠವಾದುದು.

ಸಕಲೈರಿಂದ್ರಿಯೈರ್ಮರ್ತ್ಯಾಃ ಸಂಯುಕ್ತಾ ಜಲ್ಪಿನಸ್ತಥಾ ।
ಭಯಂ ರತಿಶ್ಚ ಚಿತ್ತಂ ತದ್ ವಿದ್ಯತೇ ಮೃಗಪಕ್ಷಿಷು ॥೧೮॥

ಮನುಷ್ಯರು ಎಲ್ಲ ಇಂದ್ರಿಯಗಳಿಂದಲೂ ಕೂಡಿ ಮಾತನಾಡಲು ಸಮರ್ಥರಾಗಿರುತ್ತಾರೆ. ಮೃಗ-ಪಕ್ಷಿಗಳಲ್ಲಿ ಭಯ, ರತಿ ಮತ್ತು ಮನಸ್ಸುಗಳು ಮಾತ್ರ ಇರುತ್ತವೆ.

ಧರ್ಮಾಧರ್ಮೌ ಚ ವಿಜ್ಞಾನಂ ನೈವ ಪಕ್ಷಿಮೃಗಾದಿಷು ।
ಬುದ್ಧಿಃ ಸತ್ತ್ವಂ ಧೃತಿರ್ಲಜ್ಜಾ ಜ್ಞಾನಂ ವಿಜ್ಞಾನಮೇವ ಚ ॥೧೯॥

ಅವುಗಳಿಗೆ ಧರ್ಮಾಧರ್ಮಗಳಾಗಲೀ ಅಥವಾ ವಿಜ್ಞಾನವಾಗಲೀ ಇರುವುದಿಲ್ಲ. ಮನುಷ್ಯರಲ್ಲಿ ಬುದ್ಧಿ, ಬಲ, ಧೈರ್ಯ, ಲಜ್ಜೆ, ಸಾಮಾನ್ಯ ಜ್ಞಾನ, ವಿಶೇಷ ಜ್ಞಾನ ಎಲ್ಲವೂ ಇರುತ್ತವೆ.

ಊಹಾಪೋಹೌ ಚ ಮರ್ತ್ಯೇಷು ಗುಣಾ ನಾನಾವಿಧಾಃ ಸ್ಮೃತಾಃ ।
ಮಾನುಷಂ ಹಿ ಪದಂ ತಸ್ಮಾದ್ ವಿಶಿಷ್ಟಮಿಹ ಲಕ್ಷ್ಯತೇ ।
ಮಹತಾ ಧರ್ಮಕಾರ್ಯೇಣ ಪ್ರಾಪ್ಯತೇ ಜನ್ಮ ಮಾನುಷಮ್ ॥೨೦॥

ಅತಃಪರಂ ತಮೋತ್ಪತ್ತಿಂ ಶೃಣು ದೇವಿ ಸಮಾಹಿತಾ ।
ದ್ವಿವಿಧಂ ಹಿ ತಮೋ ಲೋಕೇ ಶಾರ್ವರಂ ದೇಹಜಂ ತಥಾ ॥೨೧॥

ಜ್ಯೋತಿರ್ಭಿಶ್ಚ ತಮೋ ಲೋಕೇ ನಾಶಂ ಗಚ್ಛತಿ ಶಾರ್ವರಮ್ ।
ದೇಹಜಂ ತು ತಮೋ ಘೋರಂ ತೈಃ ಸಮಸ್ತೈರ್ನ ಶಾಮ್ಯತೇ ॥೨೨॥

ತಮಸಸ್ತಸ್ಯ ನಾಶಾರ್ಥಂ ನೋಪಾಯಮಧಿಜಗ್ಮಿವಾನ್ ।
ತಪಶ್ಚಕಾರ ವಿಪುಲಂ ಲೋಕಕರ್ತಾ ಪಿತಾಮಹಃ ॥೨೩॥

ದೇವಿಯೇ, ಇನ್ನು ಮುಂದೆ ತಪಸ್ಸಿನ ಉತ್ಪತ್ತಿಯನ್ನು ಹೇಳು. ಕತ್ತಲು ಮತ್ತು ದೇಹದಲ್ಲಿ ಉಂಟಾದ (ಅಜ್ಞಾನ)ವೆಂದು ತಮಸ್ಸು ಎರಡು ವಿಧವಾದುದು. ಕತ್ತಲಿನ ರೂಪವಾದ ತಮಸ್ಸು ಜ್ಯೋತಿಗಳಿಂದ ನಾಶವನ್ನು ಹೊಂದುತ್ತದೆ. ದೇಹದಲ್ಲಿ ಉಂಟಾದ ತಮಸ್ಸು ಮಹಾಘೋರವಾದುದು. ಅದು ಯಾವ ಜ್ಯೋತಿಸ್ಸುಗಳಿಂದಲೂ ನಾಶವನ್ನು ಹೊಂದುವುದಿಲ್ಲ. ಪಿತಾಮಹರಾದ ಲೋಕಕರ್ತರಾದ ಬ್ರಹ್ಮದೇವರು ಆ ತಮಸ್ಸಿನ ನಾಶಕ್ಕೆ ಉಪಾಯವನ್ನು ಕಾಣದೆ ವಿಪುಲವಾದ ತಪಸ್ಸನ್ನು ಆಚರಿಸಿದರು.

ಚತುರಸ್ತು ಸಮುದ್ಭೂತಾ ವೇದಾಃ ಸಾಂಗಾಃ ಸಹೋತ್ತರಾಃ ।
ತಾಲ್ಲಬ್ಧ್ವಾ ಮುಮುದೇ ಬ್ರಹ್ಮಾ ಲೋಕಾನಾಂ ಹಿತಕಾಮ್ಯಯಾ ।
ದೇಹಜಂ ತು ತಮೋ ಘೋರಮಭೂತ್ ತೈರೇವ ನಾಶಿತಮ್ ॥೨೪॥

ಆಗ ಅಂಗ ಮತ್ತ ಉಪನಿಷತ್ತುಗಳಿಗೆ ಸಹಿತವಾದ ನಾಲ್ಕು ವೇದಗಳು ಉದ್ಭವಿಸಿದವು. ಲೋಕಗಳ ಹಿತವನ್ನು ಬಯಸಿದ ಬ್ರಹ್ಮದೇವರು ಅವುಗಳನ್ನು ಹೊಂದಿ ಸಂತೋಷಪಟ್ಟರು. ದೇಹದ ಒಳಗಿರುವ ಘೋರವಾದ ಕತ್ತಲೆಯು ಆ ವೇದಗಳಿಂದಲೇ ನಾಶವನ್ನು ಹೊಂದಿತು.

ಕಾರ್ಯಾಕಾರ್ಯಮಿದಂ ಚೇತಿ ವಾಚ್ಯಾವಾಚ್ಯಮಿದಂ ತ್ವಿತಿ ।
ಯದಿ ಚೇನ್ನ ಭವೇಲ್ಲೋಕೇ ಶ್ರುತಂ ಚಾರಿತ್ರದೈಶಿಕಮ್ ।
ಪಶುಭಿರ್ನಿರ್ವಿಶೇಷಂ ತು ಚೇಷ್ಟಂತೇ ಮಾನುಷಾ ಅಪಿ ॥೨೫॥

(ವೇದಗಳಿಂದ) ಇದು ಕಾರ್ಯ, ಇದು ಅಕಾರ್ಯ. ಇದು ಹೇಳಬಹುದಾದುದು, ಇದು ಹೇಳಬಾರದುದು ಎಂಬ ನಡತೆಯು ಉಪದೇಶವಿಲ್ಲದಿದ್ದರೆ ಲೋಕದಲ್ಲಿ ಮನುಷ್ಯರೂ ಸಹ ಪಶುಗಳಂತೆಯೇ ವರ್ತಿಸುತ್ತಾರೆ (ವೇದಗಳು ಅಂತಹ ಮಾರ್ಗಗಳನ್ನು ಉಪದೇಶಿಸುತ್ತವೆ).

ಯಜ್ಞಾದೀನಾಂ ಸಮಾರಂಭಃ ಶ್ರುತೇನೈವ ವಿಧೀಯತೇ ।
ಯಜ್ಞಸ್ಯ ಫಲಯೋಗೇನ ದೇವಲೋಕಃ ಸಮೃದ್ಧ್ಯತೇ ॥೨೬॥

ಯಜ್ಞಾದಿಗಳನ್ನು ಮಾಡುವ ರೀತಿಯೂ ಸಹ ವೇದಗಳಿಂದಲೇ ತಿಳಿಯುತ್ತದೆ. ಯಜ್ಞದ ಫಲವಾಗಿ ದೇವಲೋಕವು ಸಮೃದ್ಧಿಯಿಂದ ಕೂಡಿದೆ.

ಪ್ರೀತಿಯುಕ್ತಾಃ ಪುನರ್ದೇವಾ ಮಾನುಷಾಣಾಂ ಭವಂತ್ಯುತ ।
ಏವಂ ನಿತ್ಯಂ ಪ್ರವರ್ಧೇತೇ ರೋದಸೀ ಚ ಪರಸ್ಪರಮ್ ॥೨೭॥

ಯಜ್ಞವನ್ನು ಮಾಡಿದ ಮನುಷ್ಯರನ್ನು ನೋಡಿ ದೇವತೆಗಳು ಪ್ರೀತಿಯುಕ್ತರಾಗುತ್ತಾರೆ. ಹೀಗೆ ಮನುಷ್ಯಲೋಕ ಮತ್ತು ದೇವಲೋಕಗಳು ಪರಸ್ಪರವಾಗಿ ಅಭಿವೃದ್ಧಿಯನ್ನು ಹೊಂದುತ್ತವೆ.

ಲೋಕಸಂಧಾರಣಂ ತಸ್ಮಾಚ್ಛ್ರುತಮಿತ್ಯವಧಾರಯ ।
ಜ್ಞಾನಾದ್ ವಿಶಿಷ್ಟಂ ಜಂತೂನಾಂ ನಾಸ್ತಿ ಲೋಕತ್ರಯೇಽಪಿ ಚ ॥೨೮॥

ಆದ್ದರಿಂದ ಲೋಕಗಳ ಧಾರಣೆಯು ವೇದಗಳಿಂದಲೇ ಆಗುವುದೆಂದು ತಿಳಿ. ಜೀವರಿಗೆ ಜ್ಞಾನಕ್ಕಿಂತಲೂ ಶ್ರೇಷ್ಠವಾದುದು ಮೂರುಲೋಕಗಳಲ್ಲಿ ಯಾವುದೂ ಇಲ್ಲ.

ಸಹಜಂ ತತ್ಪ್ರಧಾನಂ ಸ್ಯಾದಪರಂ ಕೃತ್ರಿಮಂ ಸ್ಮೃತಮ್ ।
ಉಭಯಂ ಯತ್ರ ಸಂಪನ್ನಂ ಭವೇತ್ ತತ್ರ ತು ಶೋಭನಮ್ ॥೨೯॥

ಆ ಜ್ಞಾನಗಳಲ್ಲಿ ಸಹಜವಾದುದು ಮತ್ತು ಆಗಂತುಕವಾದುದು ಎಂದು ಎರಡು ವಿಧ. ಎಲ್ಲಿ ಎರಡೂ ಇರುತ್ತವೆಯೋ ಅಲ್ಲಿ ಬಹಳ ಶುಭವುಂಟಾಗುತ್ತದೆ.

ಸಂಪ್ರಗೃಹ್ಯ ಶ್ರುತಂ ಸರ್ವಂ ಕೃತಕೃತ್ಯೋ ಭವತ್ಯುತ ।
ಉಪರ್ಯುಪರಿ ಮರ್ತ್ಯಾನಾಂ ದೇವವತ್ಸಂಪ್ರಕಾಶತೇ ॥೩೦॥

ಕಾಮಂ ಕ್ರೋಧಂ ಭಯಂ ದರ್ಪಮಜ್ಞಾನಂ ಚೈವ ಬುದ್ಧಿಜಮ್ ।
ತಚ್ಛ್ರುತಂ ನುದತಿ ಕ್ಷಿಪ್ರಂ ಯಥಾ ವಾಯುರ್ಬಲಾಹಕಾನ್ ॥೩೧॥

ವೇದಗಳಲ್ಲಿ ಹೇಳಿದ ಎಲ್ಲವನ್ನೂ ಗ್ರಹಿಸಿದ ಮನುಷ್ಯನು ಕೃತಕೃತ್ಯನಾಗಿ ಮನುಷ್ಯರ ಮೇಲೆ ದೇವತೆಗಳಂತೆ ಪ್ರಕಾಶಿಸುತ್ತಾನೆ. ವೇದಗಳ ಅರ್ಥಾನುಸಂಧಾನವು ವಾಯುವು ಮೋಡಗಳನ್ನು ನಾಶಮಾಡಿದಂತೆ ಕಾಮ-ಕ್ರೋಧ, ಭಯ, ದರ್ಪ, ಅಜ್ಞಾನ ಮೊದಲಾದ ಬುದ್ಧಿದೋಷಗಳನ್ನು ಶೀಘ್ರವಾಗಿ ನಾಶ ಮಾಡುತ್ತದೆ.

ಅಲ್ಪಮಾತ್ರಂ ಕೃತೋ ಧರ್ಮೋ ಭವೇಜ್ಜ್ಞಾನವತೋ ಮಹಾನ್ ।
ಮಹಾನಪಿ ಕೃತೋ ಧರ್ಮೋ ಹ್ಯಜ್ಞಾನಾನಿಷ್ಫಲೋ ಭವೇತ್ ॥೩೨॥

ಜ್ಞಾನಿಯು ಮಾಡಿದ ಅಲ್ಪಧರ್ಮವೂ ಸಹ ಮಹಾಫಲವನ್ನು ಕೊಡುತ್ತದೆ. ಅಜ್ಞಾನಿಗಳು ಆಚರಿಸಿದ ಮಹಾಧರ್ಮವೂ ಸಹ ನಿಷ್ಫಲವಾಗುತ್ತದೆ.

ಪರಾವರಜ್ಞೋ ಭೂತಾನಾಂ ಜ್ಞಾನವಾಂಸ್ತತ್ತ್ವವಿದ್ ಭವೇತ್ ।
ಏವಂ ಶ್ರುತಫಲಂ ಸರ್ವಂ ಕಥಿತಂ ತೇ ಶುಭೇಕ್ಷಣೇ ॥೩೩॥

ಆದ್ದರಿಂದ ಮನುಷ್ಯನು ಪ್ರಾಣಿಗಳಲ್ಲಿ ಜ್ಯೇಷ್ಠರನ್ನೂ, ಕನಿಷ್ಠರನ್ನೂ ತಿಳಿದು ತತ್ತ್ವಜ್ಞಾನವನ್ನು ಸಂಪಾದಿಸಬೇಕು. ಎಲೌ ಶುಭೇಕ್ಷಣೆಯೇ, ನಿನಗೆ ವೇದಗಳ ಫಲವೆಲ್ಲವನ್ನೂ ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಹಿಂಸಾಯಾಮಪಿ ಶುಭಫಲಕಥನಂ ನಾಮ ಏಕಾದಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಹನ್ನೆರಡನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ನಾಸ್ತಿಕವಾದನಿರಾಕರಣೆ.

ಉಮಾ

ಭಗವನ್ ಸರ್ವಭೂತೇಶ ಲೋಕನಾಥ ವೃಷಧ್ವಜ ।
ನಾಸ್ಯಾತ್ಮಾ ಕರ್ಮಭೋಕ್ತೇತಿ ಮೃತೋ ಜಂತುರ್ನ ಜಾಯತೇ ॥೧॥

ಸ್ವಭಾವಾಜ್ಜಾಯತೇ ಸರ್ವಂ ಯಥಾ ವೃಕ್ಷಫಲಂ ತಥಾ ।
ಯಥೋರ್ಮಯಃ ಸಂಭವಂತಿ ತಥೈವ ಜಗದಾಕೃತಿಃ ॥೨॥

ತಪೋದಾನಾದಿ ಯತ್‌ಕರ್ಮ ತತ್ರಾತ್ಮಾ ದೃಶ್ಯತೇ ವೃಥಾ ।
ನಾಸ್ತಿ ಪೌನರ್ಭವಂ ಜನ್ಮ ಇತಿ ಕೇಚಿದ್‌ವ್ಯವಸ್ಥಿತಾಃ ॥೩॥

ಉಮಾ- ಭಗವಂತನೇ, ಸರ್ವಭೂತೇಶನೇ, ಲೋಕನಾಥನೇ, ವೃಷಧ್ವಜನೇ, ಕರ್ಮವನ್ನು ಭೋಗಿಸುವ ಆತ್ಮನು ಇಲ್ಲವೇ ಇಲ್ಲ. ಮೃತನಾದ ಜಂತುವು ಪುನಃ ಜನಿಸುವುದಿಲ್ಲ. ವೃಕ್ಷಗಳಲ್ಲಿ ಹಣ್ಣಾಗುವಂತೆ, ಸಮುದ್ರಗಳಲ್ಲಿ ಅಲೆಗಳು ಬಂದಂತೆ ಜಗತ್ತೆಲ್ಲವೂ ಸ್ವಭಾವದಿಂದಲೇ ನಡೆಯುತ್ತದೆ. ತಪಸ್ಸು-ದಾನ ಮೊದಲಾದ ಎಲ್ಲ ಕರ್ಮಗಳು ವ್ಯರ್ಥವಾದವುಗಳು. ಪುನರ್ಜನ್ಮ ಎಂಬುದಿಲ್ಲ ಎಂದು ಕೆಲವರು ಹೇಳುತ್ತಾರೆ.

ಪರೋಕ್ಷವಚನಂ ಶ್ರುತ್ವಾ ನ ಪ್ರತ್ಯಕ್ಷಸ್ಯ ದರ್ಶನಾತ್ ।
ತತ್ಸರ್ವಂ ನಾಸ್ತಿ ವಾಽಸ್ತೀತಿ ಸಂಶಯಸ್ಥಾಸ್ತಥಾ ಪರೇ ॥೪॥

ಪಕ್ಷಭೇದಾಂತರೇ ಚಾಸ್ಮಿಂಸ್ತತ್ವಂ ಮೇ ವಕ್ತುಮರ್ಹಸಿ ।
ಉಕ್ತಂ ಭಗವತಾ ಯತ್ತು ತತ್ತು ಲೋಕಸ್ಯ ಸಂಸ್ಥಿತಿಃ ॥೫॥

ಇನ್ನು ಕೆಲವರು ಧರ್ಮಾದಿಗಳೆಲ್ಲವೂ ಕಣ್ಣಿಗೆ ಕಾಣದ ವಸ್ತುಗಳು. ಕೇವಲ ಕೇಳಿರುವುದು ಮಾತ್ರ. ಅವು ಇವೆಯೋ ಇಲ್ಲವೋ ಎಂಬುದು ಸಂಶಯ ಎಂದು ಹೇಳುತ್ತಾರೆ. ಈ ಎರಡು ಪಕ್ಷಗಳಲ್ಲಿ ತತ್ತ್ವವು ಯಾವುದು ಎಂದು ನೀನು ಹೇಳಬೇಕು. ನೀನು ಯಾವುದನ್ನು ಹೇಳುತ್ತೀಯೋ ಅದೇ ತತ್ತ್ವವೆಂಬುದು ಸಿದ್ಧವಾದುದು.

ನಾರದಃ

ಪ್ರಶ್ನಮೇತಂ ತು ಪೃಚ್ಛಂತ್ಯಾಂ ರುದ್ರಾಣ್ಯಾಂ ಪರಿಷತ್‌ತದಾ ।
ಕೌತೂಹಲಯುತಾ ಶ್ರೋತುಂ ಸಮಾಹಿತಮನಾಽಭವತ್ ॥೬॥

ನಾರದ– ಪಾರ್ವತಿಯು ಈ ಪ್ರಶ್ನೆಯನ್ನು ಕೇಳುತ್ತಿರಲು ಪರಿಷತ್ತೆಲ್ಲವೂ ಕುತೂಹಲದಿಂದ ಕೂಡಿ ಸಾವಧಾನದಿಂದ ಕೇಳಲು ಪ್ರಾರಂಭಿಸಿತು.

ಮಹೇಶ್ವರಃ

ನೈತದಸ್ತಿ ಮಹಾಭಾಗೇ ಯದ್ ವದಂತೀಹ ನಾಸ್ತಿಕಾಃ ।
ಏತದೇವಾಭಿಶಸ್ತಾನಾಂ ಶ್ರುತಿವಿದ್ವೇಷಿಣಾಂ ಮತಮ್ ॥೭॥

ಮಹೇಶ್ವರ– ಮಹಾಭಾಗ್ಯವಂತಳೇ, ನಾಸ್ತಿಕರು ಹೇಳುವ ಈ ವಾದವು ಎಂದೂ ಸರಿಯಲ್ಲ. ಇದು ಅಧಮರಾದ ವೇದದ್ವೇಷಿಗಳ ಮತ.

ಅಸುರಾ ರಾಕ್ಷಸಾಶ್ಚೈವ ಮನ್ಯಂತೇ ಲೋಕನಾಯಕಾಃ ।
ನ ಪಶ್ಯಂತಿ ಚ ತೇ ಪಾಪಾಃ ಕೇವಲಂ ಮಾಂಸಭಕ್ಷಕಾಃ ॥೮॥

ಅಸುರರು ಮತ್ತು ರಾಕ್ಷಸರು ತಮ್ಮನ್ನು ಲೋಕನಾಯಕರೆಂದುಕೊಳ್ಳುತ್ತಾರೆ. ಪಾಪನಿರತರೂ, ಮಾಂಸಭಕ್ಷಕರೂ ಆದ ಅವರು ತತ್ವವನ್ನು ಕಾಣುವುದಿಲ್ಲ.

ಪ್ರಚ್ಛಾದಿತಂ ಹಿ ತತ್ಸರ್ವಂ ಗುಹ್ಯಕಾಮಾ ಹಿ ದೇವತಾಃ ।
ತದಹಂ ತೇ ಪ್ರವಕ್ಷ್ಯಾಮಿ ದೇವಿ ಗುಹ್ಯಂ ಪುರಾತನಮ್ ॥೯॥

ತತ್ವವೆಲ್ಲವೂ ಆಚ್ಛಾದಿತವಾಗಿರುತ್ತದೆ. ಏಕೆಂದರೆ ದೇವತೆಗಳು ರಹಸ್ಯ ಪ್ರಿಯರಾದವರು. ಎಲೌ ದೇವಿಯೇ, ರಹಸ್ಯವಾದ ಸನಾತನವಾದ ತತ್ವವನ್ನು ನಾನು ನಿನಗೆ ಹೇಳುವೆನು.

ಆದಿಕಾಲೇ ಪ್ರಜಾಃ ಸರ್ವಾಃ ಕೃತ್ವಾ ಕರ್ಮ ಶುಭಾಶುಭಮ್ ।
ಭುಂಜತೇ ಪಶ್ಯಮಾನಾಸ್ತೇ ವೃತ್ತಾಂತಂ ಲೋಕಯೋರ್ದ್ವಯೋಃ ॥೧೦॥

ಆದಿಕಾಲದಲ್ಲಿ ಪ್ರಜೆಗಳು ಶುಭಾಶುಭ ಕರ್ಮಗಳನ್ನು ಮಾಡಿ ಎರಡು ಲೋಕಗಳಲ್ಲಿಯೂ ಇನ್ನೊಬ್ಬರ ಕಣ್ಣಿಗೆ ಕಾಣುವಂತೆ ಅನುಭವಿಸುತ್ತಿದ್ದರು.

ಯಥೈವಾತ್ಮಕೃತಂ ಕರ್ಮ ದೇಶಾಂತರಗತಾ ನರಾಃ ।
ವಿದ್ಯುಸ್ತಥೈವಾಂತಕಾಲೇ ಸುಕೃತಂ ಪೌರ್ವದೈಹಿಕಮ್ ॥೧೧॥

ಒಬ್ಬನು ಮಾಡಿದ ಕರ್ಮವನ್ನು ದೇಶಾಂತರದಲ್ಲಿರುವ ಜನರು ಹೇಗೆ ತಿಳಿಯುತ್ತಾರೆಯೋ ಅದರಂತೆ ಜಂತುವಿನ ಅಂತ್ಯಕಾಲದಲ್ಲಿ ಪೂರ್ವದೇಹದಲ್ಲಿ ಮಾಡಿದ ಅಪರಾಧಾದಿಗಳ ಸ್ಮರಣೆಯುಂಟಾಗುತ್ತದೆ (ಉಂಟಾಗುತ್ತಿದ್ದಿತು).

ಏವಂ ವ್ಯವಸ್ಥಿತೇ ಲೋಕೇ ಸರ್ವೇ ಧರ್ಮರತಾऽಭವನ್ ।
ಅಚಿರೇಣೈವ ಕಾಲೇನ ಸ್ವರ್ಗಃ ಸಂಪೂರಿತಸ್ತದಾ ॥೧೨॥

ಲೋಕದಲ್ಲಿ ಇಂತಹ ವ್ಯವಸ್ಥೆ ಇದ್ದಾಗ ಎಲ್ಲರೂ ಧರ್ಮಪರರಾದರು. ಬಹಳ ಶೀಘ್ರವಾಗಿ ಸ್ವರ್ಗವು ಜೀವರಿಂದ ತುಂಬಿಹೋಯಿತು.

ದೇವಾನಾಮಪಿ ಸಂಬಾಧಂ ದೃಷ್ಟ್ವಾ ಬ್ರಹ್ಮಾऽಪ್ಯಚಿಂತಯತ್ ।
ಸಂಚರಂತೇ ಕಥಂ ಸ್ವರ್ಗಂ ಮಾನುಷಾಃ ಪ್ರವಿಶಂತಿ ಹಿ ॥೧೩॥

ದೇವತೆಗಳಿಗೂ ಸಹ ಜನಜಂಗುಳಿಯಿಂದ ತೊಂದರೆಯಾದುದನ್ನು ನೋಡಿ ಬ್ರಹ್ಮದೇವರು ಇಷ್ಟು ಜನ ಮನುಷ್ಯರ ಮಧ್ಯದಲ್ಲಿ ದೇವತೆಗಳು ಹೇಗೆ ಸಂಚರಿಸುತ್ತಾರೆ ಎಂದು ಚಿಂತಿಸಿದರು.

ಇತ್ಯೇವಮನುಚಿಂತ್ಯೈವ ಮಾನುಷಾನ್ ಸಮಮೋಹಯತ್ ।
ತದಾಪ್ರಭೃತಿ ತೇ ಮರ್ತ್ಯಾ ನ ವಿದುಸ್ತೇ ಪುರಾತನಮ್ ॥೧೪॥

ಹೀಗೆ ಚಿಂತಿಸಿ ಬ್ರಹ್ಮದೇವರು ಮನುಷ್ಯರಿಗೆ ಮೋಹವನ್ನುಂಟು ಮಾಡಿದರು. ಆಗಿನಿಂದ ಮನುಷ್ಯರಿಗೆ ಹಿಂದಿನ ಜನ್ಮದಲ್ಲಿ ತಾವು ಮಾಡಿದ ಅಪರಾಧಾದಿಗಳ ಸ್ಮರಣೆಯು ಬರುವುದಿಲ್ಲ.

ಕಾಮಕ್ರೋಧೌ ತು ತತ್ಕಾಲೇ ಮಾನುಷೇಷು ನ್ಯಪಾತಯತ್ ।
ತಾಭ್ಯಾಮಭಿಹತಾ ಮರ್ತ್ಯಾಃ ಸ್ವರ್ಗಲೋಕಂ ನ ಪೇದಿರೇ ॥೧೫॥

ಜೊತೆಗೆ ಬ್ರಹ್ಮದೇವರು ಮನುಷ್ಯರನ್ನು ಕಾಮ-ಕ್ರೋಧಗಳಿಂದ ಸಂಯುಕ್ತರನ್ನಾಗಿ ಮಾಡಿದರು. ಕಾಮ-ಕ್ರೋಧಗಳಿಂದ ಪೀಡಿಸಲ್ಪಟ್ಟ ಮನುಷ್ಯರು ಸ್ವರ್ಗಲೋಕಕ್ಕೆ ಹೋಗಲಿಲ್ಲ.

ಪುರಾಕೃತಸ್ಯಾವಿಜ್ಞಾನಾತ್ ಕಾಮಕ್ರೋಧಾಭಿಪೀಡನಾತ್ ।
ನೈತದಸ್ತೀತಿ ಮನ್ವಾನಾ ವಿಕಾರಾಂಶ್ಚಕ್ರಿರೇ ಪುನಃ ॥೧೬॥

ಹಿಂದಿನ ಜನ್ಮದ ವಿಸ್ಮರಣೆಯಿಂದ, ಕಾಮ-ಕ್ರೋಧಗಳ ಪೀಡೆಯಿಂದ ಸ್ವರ್ಗಾದಿಗಳು ಇಲ್ಲ ಎಂದು ತಿಳಿದು ಪುನಃ ದುಷ್ಕರ್ಮಗಳನ್ನು ಮಾಡಲು ಪ್ರಾರಂಭಿಸಿದರು.

ಅಕಾರ್ಯಾದೀನ್ ಮಹಾದೋಷಾನಾರಭಂತಾತ್ಮಕಾರಣಾತ್ ।
ವಿಸೃಜ್ಯ ಧರ್ಮಕಾರ್ಯಾಣಿ ಪರಲೋಕಭಯಂ ತದಾ ॥೧೭॥

ಧರ್ಮಕಾರ್ಯವನ್ನು ಮಾಡುವವರು ಪರಲೋಕದ ಭಯವನ್ನು ತ್ಯಜಿಸಿ, ಮಹಾದೋಷಕರವಾದ ಅಕಾರ್ಯಗಳನ್ನು ಸ್ವಾರ್ಥದ ಸಲುವಾಗಿ ಮಾಡಲು ಪ್ರಾರಂಭಿಸಿದರು.

ಏವಂ ವ್ಯವಸ್ಥಿತೇ ಲೋಕೇ ಕಶ್ಮಲಂ ಸಮಪದ್ಯತ ।
ಲೋಕಾನಾಂ ಚೈವ ವೇದಾನಾಂ ಕ್ಷಯಾಯೈವ ತದಾ ಪ್ರಿಯೇ ।
ನರಕಾಃ ಪೂರಿತಾಶ್ಚಾಸನ್ ಪ್ರಾಣಿಭಿಃ ಪಾಪಕಾರಿಭಿಃ ॥೧೮॥

ಎಲೌ ಪ್ರಿಯೆಯೇ, ಲೋಕವು ಹೀಗೆ ನಡೆದುಕೊಳ್ಳುತ್ತಿರಲು ಲೋಕಗಳಿಗೆ ಮತ್ತು ವೇದಗಳಿಗೆ ವಿನಾಶವನ್ನುಂಟುಮಾಡುವ ದುಃಸ್ಥಿತಿಯುಂಟಾಯಿತು. ಪಾಪಗಳನ್ನು ಮಾಡುವ ಪ್ರಾಣಿಗಳಿಂದ ನರಕವು ತುಂಬಿಹೋಯಿತು.

ಪುನರೇವ ತು ತದ್ ದೃಷ್ಟ್ವಾ ಲೋಕಕರ್ತಾ ಪಿತಾಮಹಃ ।
ಅಚಿಂತಯತ್ ತಮೇವಾರ್ಥಂ ಲೋಕಾನಾಂ ಹಿತಕಾರಣಾತ್ ।
ಸಮತ್ವೇನ ಕಥಂ ಲೋಕೋ ವರ್ತೇತೇತಿ ಮುಹುರ್ಮುಹುಃ ॥೧೯॥

ಲೋಕಕರ್ತರಾದ ಬ್ರಹ್ಮದೇವರು ಪುನಃ ಲೋಕದ ಹಿತಕ್ಕಾಗಿ ಈ ಪ್ರಜೆಗಳು ಸರಿಯಾಗಿ ಸಾಧುಮಾರ್ಗದಲ್ಲಿ ಹೇಗೆ ನಡೆದುಕೊಂಡಾರು ಎಂದು ಪುನಃ ಪುನಃ ಚಿಂತಿಸಿದರು.

ಚಿಂತಯಿತ್ವಾ ತದಾ ಬ್ರಹ್ಮಾ ಜ್ಞಾನೇನ ತಪಸಾ ಪ್ರಿಯೇ ।
ಅಕರೋಜ್ಜ್ಞಾನದೃಶ್ಯಂ ತತ್ಪರಲೋಕಂ ನ ಚಕ್ಷುಷಾ ॥೨೦॥

ಎಲೌ ಪ್ರಿಯೆಯೇ, ಹೀಗೆ ಚಿಂತಿಸಿ ಬ್ರಹ್ಮದೇವರು ಕಣ್ಣಿನಿಂದ ಕಾಣದಿದ್ದರೂ ಜ್ಞಾನದಿಂದ ಮತ್ತು ತಪಸ್ಸಿನಿಂದ ಪರಲೋಕಗಳು ಕಾಣಿಸುವಂತೆ ಮಾಡಿದರು.

ಸರ್ವಮರ್ಥಂ ಶ್ರುತಂ ದೃಷ್ಟಂ ಯತ್‌ಪ್ರಾಗುಕ್ತಂ ಮಯಾ ತವ ।
ತದಾಪ್ರಭೃತಿ ಮರ್ತ್ಯಾನಾಂ ಶ್ರುತಮಾಶ್ರಿತ್ಯ ಪಂಡಿತಾಃ ॥೨೧॥

ಕಾಮಾನ್ ಸಂಛಿದ್ಯ ಪರಿಘಾನ್ ಧೃತ್ಯಾ ವೈ ಪರಮಾಸಿನಾ ।
ಅಭಿಯಾಂತ್ಯೇವ ತೇ ಸ್ವರ್ಗಂ ಪಶ್ಯಂತಃ ಕರ್ಮಣಃ ಫಲಮ್ ॥೨೨॥

ನಾನು ನಿನಗೆ ನೋಡಿದಂತಹ, ಕೇಳಿದಂತಹ ಯಾವ ವಿಷಯಗಳನ್ನು ಹೇಳಿದೆನೋ ಅವೆಲ್ಲವನ್ನೂ ವಿವೇಕಿಗಳಾದವರು ಕೇಳಿ, ಅದನ್ನು ಆಶ್ರಯಿಸಿ ಮನುಷ್ಯರ ದೃಢವಾದ ಸಂಶಯಗಳನ್ನು ಆ ಜ್ಞಾನವೆಂಬ ಖಡ್ಗದಿಂದ ಧೈರ್ಯದಿಂದ ಕತ್ತರಿಸಿ ಸ್ವರ್ಗಕ್ಕೆ ಹೋಗಿಯೇ ಹೋಗುತ್ತಾರೆ.

ಏವಂ ಶ್ರದ್ಧಾಫಲಂ ಲೋಕೇ ಪರತಃ ಸುಮಹತ್ಫಲಮ್ ।
ಬುದ್ಧಿಃ ಶ್ರದ್ಧಾ ಚ ವಿನಯಃ ಕಾರಣಾನಿ ಹಿತೈಷಿಣಾಮ್ ॥೨೩॥

ಹೀಗೆ ಲೋಕದಲ್ಲಿ ಶ್ರದ್ಧೆಯು ಪರಲೋಕದಲ್ಲಿ ಮಹಾಫಲವನ್ನು ಕೊಡುವಂತಹದು. ತಮ್ಮ ಹಿತವನ್ನು ಬಯಸುವವರಿಗೆ ಬುದ್ಧಿ, ಶ್ರದ್ಧೆ ಮತ್ತು ವಿನಯಗಳು ಹಿತಕ್ಕೆ ಕಾರಣವಾದವುಗಳು.

ತಸ್ಮಾತ್‌ಸ್ವರ್ಗಾಭಿಗಂತಾರಃ ಕತಿಚಿತ್ ತ್ವಭವನ್ ನರಾಃ ।
ಅನ್ಯೇ ಕಾರಣಹೀನತ್ವಾನ್ನಾಸ್ತಿಕ್ಯಂ ಭಾವಮಾಶ್ರಿತಾಃ ॥೨೪॥

ಆದ್ದರಿಂದ ಕೆಲವು ಜನರು ಸ್ವರ್ಗಕ್ಕೆ ಹೋಗುವವರಾದರು. ಇನ್ನು ಕೆಲವರು ಅಂತಹ ಕಾರಣರಹಿತರಾದುದರಿಂದ ನಾಸ್ತಿಕ್ಯವಾದವನ್ನು ಆಶ್ರಯಿಸಿದರು.

ಶ್ರುತವಿದ್ವೇಷಿಣೋ ಮೂರ್ಖಾ ನಾಸ್ತಿಕಾ ದೃಢನಿಶ್ಚಯಾಃ ।
ನಿಷ್ಕ್ರಿಯಾಸ್ತು ನಿರನ್ನಾದ್ಯಾಃ ಪತಂತ್ಯೇವಾಧಮಾಂ ಗತಿಮ್ ॥೨೫॥

ಮೂರ್ಖರು ಜ್ಞಾನವನ್ನು ದ್ವೇಷಿಸಿ, ದೃಢನಿಶ್ಚಯದಿಂದ ನಾಸ್ತಿಕ್ಯವನ್ನು ಆಶ್ರಯಿಸಿ ಸತ್ಕರ್ಮಗಳನ್ನು ಮಾಡದೆ, ಅನ್ನದಾನಾದಿಗಳನ್ನು ಮಾಡದೆ ಅಧಮಗತಿಯನ್ನು ಹೊಂದಿಯೇ ಹೊಂದುತ್ತಾರೆ.

ನಾಸ್ತೀತಿ ವೈ ಪುನರ್ಜನ್ಮ ಕವಯೋಽಪ್ಯತ್ರ ಮೋಹಿತಾಃ ।
ನಾಧಿಗಚ್ಛಂತಿ ತನ್ನಿತ್ಯಂ ಹೇತುವಾದಶತೈರಪಿ. ॥೨೬॥

ಪುನರ್ಜನ್ಮವು ಇಲ್ಲ ಎಂಬ ವಿಷಯದಲ್ಲಿ ವಿವೇಕಿಗಳಿಗೂ ಸಂಶಯವುಂಟಾಗುತ್ತದೆ. ನೂರಾರು ಕಾರಣಗಳನ್ನು ಹೇಳಿದರೂ ಅವಿವೇಕಿಗಳು ಅದನ್ನು ತಿಳಿಯುವುದಿಲ್ಲ.

ಏಷಾ ಬ್ರಹ್ಮಕೃತಾ ಮಾಯಾ ದುರ್ವಿಜ್ಞೇಯಾ ಸುರಾಸುರೈಃ ।
ಕಿಂಪುನರ್ಮಾನುಷೈರ್ಲೋಕೇ ಜ್ಞಾತುಕಾಮೈಃ ಕುಬುದ್ಧಿಭಿಃ ॥೨೭॥

ಇದು ಬ್ರಹ್ಮದೇವರು ಹಾಕಿರುವ ಮಾಯೆ. ಸುರಾಸುರರು ಈ ತತ್ವವನ್ನು ತಿಳಿಯಲಾರರು. ಇನ್ನು ಅಲ್ಪಬುದ್ಧಿ, ಅದರಲ್ಲೂ ಕೆಟ್ಟಬುದ್ಧಿಯುಳ್ಳ ಮನುಷ್ಯರು ತಿಳಿಯಲು ಬಯಸಿದರೆ ಅದು ಹೇಗೆ ಸಾಧ್ಯ ?

ಕೇವಲಂ ಶ್ರದ್ಧಯಾ ದೇವಿ ಶ್ರುತಿಮಾತ್ರನಿವಿಷ್ಟಯಾ ।
ತದಸ್ತೀತ್ಯೇವ ಮಂತವ್ಯಂ ತಥಾ ಹಿ ತಮವಾಪ್ನುಯಾತ್ ॥೨೮॥

ಎಲೌ ದೇವಿಯೇ, ವೇದನಿಷ್ಠವಾದ ಮತ್ತು (ಜ್ಞಾನನಿಷ್ಠವಾದ) ಶುದ್ಧವಾದ ಶ್ರದ್ಧೆಯಿಂದ ಪರಲೋಕವು ಇದೆ ಎಂದೇ ತಿಳಿಯಬೇಕು. ಹಾಗಾದರೆ ಮಾತ್ರ ಫಲವು ದೊರೆತೀತು.

ವೇದಗುಹ್ಯೇಷು ಚಾನ್ಯೇಷು ಹೇತುರ್ದೇವಿ ನಿರರ್ಥಕಃ ।
ಬಧಿರಾಂಧವದೇವಾತ್ರ ವರ್ತಿತವ್ಯಂ ಹಿತೈಷಿಣಾ ॥೨೯॥

ಎಲೌ ದೇವಿಯೇ, ವೇದರಹಸ್ಯಗಳಲ್ಲಿ ಹೇತುಗಳನ್ನು ಹುಡುಕುವುದು ವ್ಯರ್ಥವಾದುದು. ಹಿತೈಷಿಯಾದವನು ಕುರುಡನಂತೆ, ಕಿವುಡರಂತೆ ವರ್ತಿಸಬೇಕು.

ಏತತ್ತೇ ಕಥಿತಂ ಸರ್ವಂ ದೇವಗುಹ್ಯಂ ಪ್ರಜಾಹಿತಮ್ ।
ತ್ವತ್ಪ್ರೀತ್ಯರ್ಥಮಿದಂ ಗುಹ್ಯಮವಾಚ್ಯಮಪಿ ಭಾಷಿತಮ್ ॥೩೦॥

ಪ್ರಜಾಹಿತಕ್ಕಾಗಿ ದೇವಗುಹ್ಯವಾದ ಈ ಎಲ್ಲವನ್ನೂ ಹೇಳಬಾರದಾಗಿದ್ದರೂ ನಿನ್ನ ಸಂತೋಷಕ್ಕಾಗಿ ಹೇಳಿದ್ದೇನೆ.

ಉಮಾ

ಭಗವನ್ಮಾನುಷಾಃ ಕೇಚಿಜ್ಜಾತಿಸ್ಮರಣಸಂಯುತಾಃ ।
ಕಿಮರ್ಥಂ ತೇಭಿಜಾಯಂತೇ ಜಾನಂತಃ ಪೌರ್ವದೈಹಿಕಮ್ ।
ಏತನ್ಮೇ ತತ್ತ್ವತೋ ದೇವ ಮಾನುಷೇಷು ವದಸ್ವ ಭೋ ॥೩೧॥

ಉಮಾ– ಭಗವಂತನೇ, ಮನುಷ್ಯರಲ್ಲಿ ಕೆಲವರು ಪೂರ್ವಜನ್ಮದ ಸ್ಮರಣೆಯನ್ನು ಹೊಂದಿರುತ್ತಾರೆ. ಹಾಗಾದರೆ ಪೂರ್ವಜನ್ಮದ ಸ್ಮರಣೆ ಇದ್ದರೂ ಪುನಃ ಏಕೆ ಹುಟ್ಟುತ್ತಾರೆ? ದೇವನೇ, ಮನುಷ್ಯರ ವಿಷಯದಲ್ಲಿರುವ ಈ ನನ್ನ ಸಂಶಯವನ್ನು ಪರಿಹರಿಸು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ತತ್ತ್ವಂ ಸಮಾಹಿತಾ ॥೩೨॥

ಮಹೇಶ್ವರ– ನಾನು ಆ ತತ್ತ್ವವನ್ನು ಹೇಳುವೆನು, ಸಮಾಧಾನದಿಂದ ಕೇಳು.

ಯೇ ಮೃತಾಃ ಸಹಸಾ ಮರ್ತ್ಯಾ ಜಾಯಂತೇ ಸಹಸಾ ಪುನಃ ।
ತೇಷಾಂ ಪೌರಾಣಿಕೋऽಭ್ಯಾಸಃ ಕಂಚಿತ್ಕಾಲಂ ಸ ತಿಷ್ಠತಿ ॥೩೩॥

ಯಾವ ಮನುಷ್ಯರು ತಕ್ಷಣದಲ್ಲಿ ಮರಣವನ್ನು ಹೊಂದಿ (ವ್ಯಾಧಿಗಳಿಂದ ಬಹಳ ಕಾಲ ನೆರಳದೆ) ತಕ್ಷಣವೇ ಜನ್ಮಾಂತರವನ್ನು ಪಡೆಯುತ್ತಾರೆಯೋ ಅವರಿಗೆ ಹಿಂದಿನ ಜನ್ಮದ ಸ್ಮರಣೆಯು ಸ್ವಲ್ಪ ಕಾಲದವರೆಗೆ ಇರುತ್ತದೆ.

ತಸ್ಮಾಜ್ಜಾತಿಸ್ಮರಾ ಲೋಕೇ ಜಾಯಂತೇ ಬೋಧಸಂಯುತಾಃ ।
ತೇಷಾಂ ವಿವರ್ಧತಾಂ ಸಂಜ್ಞಾ ಸ್ವಪ್ನವತ್ ಸಾ ಪ್ರಣಶ್ಯತಿ ।
ಪರಲೋಕಸ್ಯ ಚಾಸ್ತಿತ್ವೇ ಮೂಢಾನಾಂ ಕಾರಣಂ ಚ ತತ್ ॥೩೪॥

ಆದ್ದರಿಂದ ವಿವೇಕವುಳ್ಳವರೂ ಸಹ ಜಾತಿಸ್ಮರಣೆಯನ್ನು ಹೊಂದಿ ಜನಿಸುತ್ತಾರೆ. ಅವರು ಬೆಳೆದಂತೆ ಆ ಜಾತಿಸ್ಮರಣೆಯು ಸ್ವಪ್ನದಂತೆ ನಾಶವನ್ನು ಹೊಂದುತ್ತದೆ. ಮೂಢರು ಪರಲೋಕದ ಅಸ್ತಿತ್ವದ ವಿಷಯದಲ್ಲಿ ಸಂಶಯವನ್ನು ಪಡುವುದಕ್ಕೆ ಇದು ಕಾರಣ.

ಉಮಾ

ಭಗವನ್ಮಾನುಷಾಃ ಕೇಚಿನ್ಮೃತಾ ಭೂತ್ವಾ ಹಿ ಸಂಪ್ರತಿ ।
ನಿವರ್ತಮಾನಾ ದೃಶ್ಯಂತೇ ದೇಹೇಷ್ವೇವ ಪುನರ್ನರಾಃ ॥೩೫॥

ಉಮಾ– ಭಗವಂತನೇ, ಮನುಷ್ಯರಲ್ಲಿ ಕೆಲವರು ಈಗಲೂ ಮೃತರಾಗಿ ಪುನಃ ಅದೇ ದೇಹಕ್ಕೆ ಹಿಂದಿರುಗಿ ಬರುವುದು ಕಂಡುಬರುತ್ತದೆ.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಕಾರಣಂ ಶೃಣು ಶೋಭನೇ ॥೩೬॥

ಮಹೇಶ್ವರ– ಎಲೌ ಶೋಭನೆಯೇ, ಅದಕ್ಕೆ ಕಾರಣವನ್ನು ಹೇಳುವೆನು, ಕೇಳು.

ಪ್ರಾಣೈರ್ವಿಯುಜ್ಯಮಾನಾನಾಂ ಬಹುತ್ವಾತ್ ಪ್ರಾಣಿನಾಂ ವಧೇ ।
ತಥೈವ ನಾಮಸಾಮಾನ್ಯಾದ್ ಯಮದೂತಾ ನೃಣಾಂ ಪ್ರತಿ ॥೩೭॥

ವಹಂತಿ ತೇ ಕ್ವಚಿನ್ಮೋಹಾದನ್ಯಾಂಸ್ತ ಇತಿ ಯಾಮಿಕಾಃ ।
ನಿರ್ವಿಕಾರಂ ಹಿ ತತ್ಸರ್ವಂ ಯಮೋ ವೇದ ಕೃತಾಕೃತಮ್ ॥೩೮॥

ಪ್ರಾಣಿಗಳ ವಧೆಯ ಕಾಲದಲ್ಲಿ ಮರಣವನ್ನು ಹೊಂದುವವರ ಸಂಖ್ಯೆಯು ಬಹಳವಾಗಿರುವುದರಿಂದ ಹಾಗೂ ಹೆಸರಿನ ಸಾಮ್ಯವಿರುವ ಕಾರಣದಿಂದ (ನಾಮ ಸಾಮ್ಯವಿರುವ ಸ್ಥಳದಲ್ಲಿ) ಯಮದೂತರು ಮನುಷ್ಯರ ವಿಷಯದಲ್ಲಿ ಅವರನ್ನು ಬೇರೆಯವರು ಎಂದು ತಿಳಿದು ಬೇರೆಯವರನ್ನು ಕರೆದೊಯ್ಯುತ್ತಾರೆ. ಯಮದೇವರು ಯಾವ ವಿಕಾರವೂ ಇಲ್ಲದೆ ಎಲ್ಲರನ್ನೂ ಮತ್ತು ಎಲ್ಲರೂ ಮಾಡಿದ ಎಲ್ಲ ಕರ್ಮಗಳನ್ನೂ ತಿಳಿದಿರುತ್ತಾರೆ.

ತಸ್ಮಾತ್ ಸಂಯಮನೀಂ ಪ್ರಾಪ್ಯ ಯಮೇನೈತೇ ವಿಮೋಕ್ಷಿತಾಃ ।
ಪುನರೇವ ನಿವರ್ತಂತೇ ಶೇಷಂ ಭೋಕ್ತುಂ ಸ್ವಕರ್ಮಣಃ ।
ಸ್ವಕರ್ಮಣ್ಯಸಮಾಪ್ತೇ ತು ನ ಮ್ರಿಯಂತೇ ಹಿ ಮಾನವಾಃ ॥೩೯॥

ಆದ್ದರಿಂದ ಸಂಯಮನೀ ಪಟ್ಟಣಕ್ಕೆ ಹೋಗಿ ಯಮದೇವರಿಂದ ಬಿಡುಗಡೆಯನ್ನು ಹೊಂದಿ ತಮ್ಮ ಕರ್ಮಶೇಷವನ್ನು ಅನುಭವಿಸಲು ಪುನಃ ಅದೇ ದೇಹಕ್ಕೆ ಬರುತ್ತಾರೆ. ತಮ್ಮ ಕರ್ಮಗಳು ಮುಗಿಯುವವರೆಗೆ ಮನುಷ್ಯರು ಮರಣವನ್ನು ಹೊಂದುವುದಿಲ್ಲ.

ಉಮಾ

ಭಗವನ್ ಸುಪ್ತಮಾತ್ರೇಣ ಪ್ರಾಣಿನಾಂ ಸ್ವಪ್ನದರ್ಶನಮ್ ।
ಕಿಂ ತತ್ಸ್ವಭಾವಮನ್ಯದ್ವಾ ತನ್ಮೇ ಶಂಸಿತುಮರ್ಹಸಿ ॥೪೦॥

ಉಮಾ– ಭಗವಂತನೇ, ನಿದ್ರೆಯನ್ನು ಮಾಡುವ ಪ್ರಾಣಿಗಳಿಗೆಲ್ಲಾ ಸ್ವಪ್ನ ದರ್ಶನ ವಾಗುತ್ತದೆ. ಅದೇನು ಸ್ವಾಭಾವಿಕವೇ? (ಸತ್ಯವೇ) ಅಥವಾ ಅಲ್ಲವೇ ಎಂದು ನನಗೆ ಹೇಳಬೇಕು.

ಮಹೇಶ್ವರಃ

ಸುಪ್ತಾನಾಂ ತು ಮನಶ್ಚೇಷ್ಟಾ ಸ್ವಪ್ನ ಇತ್ಯಭಿಧೀಯತೇ ।
ಅನಾಗತಮತಿಕ್ರಾಂತಂ ಪಶ್ಯತೇ ಸಂಚರನ್ಮನಃ ॥೪೧॥

ನಿಮಿತ್ತಂ ಚ ಭವೇತ್ತಸ್ಮಾತ್ ಪ್ರಾಣಿನಾಂ ಸ್ವಪ್ನದರ್ಶನಮ್ ।
ಏತತ್ತೇ ಕಥಿತಂ ಸರ್ವಂ ಭೂಯಃ ಶ್ರೋತುಂ ಕಿಮಿಚ್ಛಸಿ ॥೪೨॥

ಮಹೇಶ್ವರ– ನಿದ್ರಿಸುವ ಜೀವರ ಮನಸ್ಸಿನ ವ್ಯಾಪಾರಕ್ಕೆ ಸ್ವಪ್ನ ಎಂದು ಹೆಸರು. ಸಂಚರಿಸುವ ಮನಸ್ಸು ಭೂತಕಾರದ ಘಟನೆಗಳನ್ನು, ಭವಿಷ್ಯತ್ಕಾಲದ ಘಟನೆಗಳನ್ನು ನೋಡುತ್ತದೆ. ಮನಸ್ಸಿನ ಸಂಚಾರವು ಪ್ರಾಣಿಗಳ ಸ್ವಪ್ನದರ್ಶನಕ್ಕೆ ಕಾರಣವಾಗುತ್ತದೆ. ಇದೆಲ್ಲವನ್ನೂ ನಿನಗೆ ಹೇಳಿದ್ದೇನೆ. ಪುನಃ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ದ್ವಾದಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಹದಿಮೂರನೆಯ ಅಧ್ಯಾಯ

ಉಮಾ- ಮಹೇಶ್ವರಸಂವಾದ.
ದೈವಪೌರುಷ ಸಂಯೋಗದಿಂದ ಕಾರ್ಯಸಿದ್ಧಿಕಥನ.

ಉಮಾ

ಭಗವನ್ ಸರ್ವಭೂತೇಶ ಲೋಕೇ ಕರ್ಮಕ್ರಿಯಾಪಥೇ ।
ದೈವಾತ್ ಪ್ರವರ್ತತೇ ಸರ್ವಮಿತಿ ಕೇಚಿದ್ ವ್ಯವಸ್ಥಿತಾಃ ॥೧॥

ಅಪರೇ ಚೇಷ್ಟಯಾ ಚೇತಿ ದೃಷ್ಟ್ವಾ ಪ್ರತ್ಯಕ್ಷತಃ ಕ್ರಿಯಾಮ್ ।
ಪಕ್ಷಭೇದೇ ದ್ವಿಧಾ ಚಾಸ್ಮಿನ್ ಸಂಶಯಸ್ಥಂ ಮನೋ ಮಮ ।
ತತ್ತ್ವಂ ವದ ಮಹಾದೇವ ಶ್ರೋತುಂ ಕೌತೂಹಲಂ ಹಿ ಮೇ ॥೨॥

ಉಮಾ- ಭಗವಂತನೇ, ಸರ್ವಭೂತೇಶನೇ, ಲೋಕದಲ್ಲಿ ಕ್ರಿಯಾ ಮಾರ್ಗವು ಎಲ್ಲವೂ ದೈವದಿಂದಲೇ ನಡೆಯುತ್ತದೆ ಎಂದು ಕೆಲವರ ಅಭಿಪ್ರಾಯ. ಇನ್ನು ಕೆಲವರು ಪ್ರತ್ಯಕ್ಷವಾಗಿ ಮನುಷ್ಯನ ಕ್ರಿಯೆಯು ಕಾಣುವುದರಿಂದ ಮನುಷ್ಯನ ಪ್ರಯತ್ನದಿಂದ ಕಾರ್ಯವು ನಡೆಯುತ್ತದೆ ಎಂದು ಅಭಿಪ್ರಾಯವನ್ನು ಹೊಂದುತ್ತಾರೆ. ಈ ಎರಡು ರೀತಿಯ ಅಭಿಪ್ರಾಯವಿರುವಾಗ ನನ್ನ ಮನಸ್ಸು ಸಂಶಯಸ್ಥವಾಗಿದೆ. ಮಹಾದೇವನೇ, ತತ್ತ್ವವನ್ನು ಹೇಳು. ಅದನ್ನು ಕೇಳಲು ನನಗೆ ಕುತೂಹಲವಿದೆ.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ತತ್ತ್ವಂ ಸಮಾಹಿತಾ ।
ನ ದೈವಂ ಕುರುತೇ ಕರ್ಮ ಲೋಕೇ ದೇವಿ ಶುಭಾಶುಭಮ್ ॥೩॥

ಮಹೇಶ್ವರ- ಅದನ್ನು ನಿನಗೆ ಹೇಳುವೆನು. ಸಮಾಧಾನದಿಂದ ತತ್ತ್ವವನ್ನು ಕೇಳು. ದೇವಿಯೇ, ದೈವವು ಲೋಕದಲ್ಲಿ ಶುಭಾಶುಭಕರ್ಮಗಳನ್ನು ಮಾಡುವುದಿಲ್ಲ.

ಲಕ್ಷ್ಯತೇ ದ್ವಿವಿಧಂ ಕರ್ಮ ಮಾನುಷಾಣಾಂ ಶುಭಾನನೇ ।
ಪುರಾಕೃತಂ ತಯೋರೇಕಮೈಹಿಕಂ ಚ ಪರಂ ತಥಾ ॥೪॥

ಎಲೈ ಶುಭಾನನೆಯೇ, ಮನುಷ್ಯರಲ್ಲಿ ಎರಡು ವಿಧವಾದ ಕರ್ಮಗಳು ಕಂಡುಬರುತ್ತವೆ. ಒಂದು ಹಿಂದಿನ ಜನ್ಮದಲ್ಲಿಮಾಡಿದುದು, ಇನ್ನೊಂದು ಈ ಜನ್ಮದಲ್ಲಿ ಮಾಡುತ್ತಿರುವುದು.

ಅದೃಷ್ಟಂ ಪೌರ್ವಿಕಂ ಕರ್ಮ ತದ್ ದೈವಮಿತಿ ಲಕ್ಷ್ಯತೇ ।
ಐಹಿಕಂ ದೃಷ್ಟಕರಣಂ ತನ್ಮಾನುಷಮಿತಿ ಸ್ಮೃತಮ್ ॥೫॥

ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮವನ್ನು ಅದೃಷ್ಟವೆಂದೂ, ದೈವವೆಂದೂ ಕರೆಯುತ್ತಾರೆ. ಈ ಜನ್ಮದ ಕರ್ಮವು ಪ್ರತ್ಯಕ್ಷಸಿದ್ಧವಾಗಿದೆ. ಅದನ್ನು ಮಾನುಷ, ಪೌರುಷ, ಪುರುಷಕಾರ ಮುಂತಾದ ಶಬ್ದಗಳಿಂದ ಕರೆಯುತ್ತಾರೆ.

ಮಾನುಷಂ ತು ಕ್ರಿಯಾಮಾತ್ರಂ ದೈವಾತ್ ಸಂಭವತೇ ಫಲಮ್ ।
ಏವಂ ತದುಭಯಂ ಕರ್ಮ ಮಾನುಷಂ ವಿದ್ಯತೇ ನೃಷು ॥೬॥

ಮನುಷ್ಯರ ಪ್ರಯತ್ನಸಾಧ್ಯವಾದುದು ಕೇವಲ ಕ್ರಿಯೆ ಮಾತ್ರ. ಫಲವುಂಟಾಗುವುದು ಮಾತ್ರ ದೈವದಿಂದಲೇ. ಹೀಗೆ ಮನುಷ್ಯರಲ್ಲಿ ಆ ಎರಡು ವಿಧವಾದ ಕರ್ಮಗಳು ಇವೆ.

ಲೌಕಿಕಂ ತತ್ ಪ್ರವಕ್ಷ್ಯಾಮಿ ದೈವಮಾನುಷನಿರ್ಮಿತಮ್ ।
ಕೃಷೌ ತು ದೃಶ್ಯತೇ ಕರ್ಮ ಕರ್ಷಣಂ ವಪನಂ ತಥಾ ॥೭॥

ರೋಪಣಂ ಚೈವಲವನಂ ಯಚ್ಚಾನ್ಯತ್ ಪೌರುಷಂ ಸ್ಮೃತಮ್ ।
ಕಾಲೇ ವೃಷ್ಟಿಃ ಸುವಾಪಶ್ಚ ಪ್ರರೋಹಃ ಪಕ್ತಿರೇವ ಚ ॥೮॥

ಏವಮಾದಿ ತು ಯಚ್ಚಾನ್ಯತ್ ತದ್ ದೈವತಮಿತಿ ಸ್ಮೃತಮ್ ।
ಪ್ರವಾಪಃ ಪೌರುಷಂ ಕರ್ಮ ಸಿದ್ಧಿರ್ದೈವಮಿತಿ ಸ್ಮೃತಮ್ ।
ದೈವಾದಸಿದ್ಧಿಶ್ಚ ಭವೇದ್ ದುಷ್ಕೃತಂ ಚಾಸ್ತಿ ಪೌರುಷೇ ॥೯॥

ದೈವ ಮತ್ತು ಮಾನುಷ ಎರಡು ಸೇರಿ ಫಲವುಂಟಾಗುವ ಲೋಕಸಿದ್ಧವಾದ ವಿಷಯ (ದೃಷ್ಟಾಂತ)ವನ್ನು ಹೇಳುವೆನು. ಕೃಷಿಯಲ್ಲಿ ಉಳುವುದು, ಬಿತ್ತುವುದು ಅಥವಾ ಸಸಿಯನ್ನು ನೆಡುವುದು, ಬೆಳೆಯನ್ನು ಕೊಯ್ಯುವುದು ಇಂತಹ ಕ್ರಿಯೆಗಳೆಲ್ಲಾ

ಪೌರುಷವೆಂದು ಹೇಳುತ್ತಾರೆ. ಕಾಲದಲ್ಲಿ ಮಳೆ, ಒಳ್ಳೆಯ ಮೊಳಕೆ, ಅಂಕುರೋತ್ಪತ್ತಿ, ಬೆಳೆಗಳ ಪಾಕ - ಇವೇ ಮೊದಲಾದವುಗಳು ದೈವವೆಂದು ಹೇಳಲ್ಪಡುತ್ತವೆ. ಬೀಜವನ್ನು ಬಿತ್ತುವುದು ಪೌರುಷ ಕರ್ಮ. ಬೆಳೆಯ ಸಿದ್ಧಿಯು ದೈವದಿಂದಾಗುತ್ತದೆ. ಒಮ್ಮೊಮ್ಮೆ ಪುರುಷಪ್ರಯತ್ನವಿದ್ದರೂ ದೈವದಿಂದ ಫಲಸಿದ್ಧಿಯಾಗುವುದಿಲ್ಲ. ಇನ್ನು ಪುರುಷರು ಕೆಲವೊಮ್ಮೆ ದುಷ್ಪ್ರಯತ್ನವನ್ನು ಮಾಡುತ್ತಾರೆ ಆಗಲೂ ಕಾರ್ಯ ಸಿದ್ಧಿಯಾಗುವುದಿಲ್ಲ.

ಸುಯತ್ನಾಲ್ಲಭ್ಯತೇ ಕೀರ್ತಿರ್ದುರ್ಯತ್ನಾದಯಶಸ್ತಥಾ ।
ಏವಂ ಲೋಕಗತಿರ್ದೇವಿ ಆದಿಪ್ರಭೃತಿ ವರ್ತತೇ ॥೧೦॥

ಒಳ್ಳೆಯ ಪ್ರಯತ್ನದಿಂದ ಕೀರ್ತಿಯೂ, ಕೆಟ್ಟ ಪ್ರಯತ್ನದಿಂದ ಅಪಕೀರ್ತಿಯೂ ಉಂಟಾಗುತ್ತದೆ. ಎಲೌ ದೇವಿಯೇ, ಇಂತಹ ಲೋಕಗತಿಯು ಮೊದಲಿನಿಂದಲೂ ಇದೆ.

ಉಮಾ

ಭಗವನ್ ಸರ್ವಲೋಕೇಶ ಸುರಾಸುರನಮಸ್ಕೃತ ।
ಕಥಮಾತ್ಮಾ ಸದಾ ಗರ್ಭಂ ಸಂವಿಶೇತ್ ಕರ್ಮಕಾರಣಾತ್ ।
ತನ್ಮೇ ವದ ಮಹಾದೇವ ತದ್ಧಿ ಗುಹ್ಯಂ ಪರಂ ಮತಮ್ ॥೧೧॥

ಉಮಾ– ಭಗವಂತನೇ, ಸರ್ವಲೋಕೇಶನೇ, ಸುರಾಸುರನಮಸ್ಕೃತನೇ, ಜೀವನು ತನ್ನ ಕರ್ಮನಿಮಿತ್ತದಿಂದ ಹೇಗೆ ಗರ್ಭವನ್ನು ಪ್ರವೇಶಿಸುತ್ತಾನೆ? ಮಹಾದೇವನೇ, ಇದನ್ನು ಹೇಳು. ಇದು ಬಹಳ ರಹಸ್ಯವಾದುದು ಎಂದು ನನ್ನ ಅಭಿಪ್ರಾಯ.

ಮಹೇಶ್ವರಃ

ಶೃಣು ಭಾಮಿನಿ ತದ್ ಗುಹ್ಯಂ ಗುಹ್ಯಾನಾಂ ಪರಮಂ ಪ್ರಿಯೇ ।
ದೇವಗುಹ್ಯಾದಪಿ ಪರಮಾತ್ಮಗುಹ್ಯಮಿತಿ ಸ್ಮೃತಮ್ ॥೧೨॥

ಮಹೇಶ್ವರ– ಎಲೌ ಭಾಮಿನಿಯೇ, ಪ್ರಿಯೆಯೇ, ಇದು ರಹಸ್ಯಗಳಲ್ಲಿ ರಹಸ್ಯವಾದುದು. ಇದನ್ನು ಕೇಳು. ದೇವಗುಹ್ಯಕ್ಕಿಂತಲೂ ದೇಹ(ಜೀವ)ಗುಹ್ಯವು ಇನ್ನೂ ಅಧಿಕವಾದುದು ಎಂದು ಹೇಳುತ್ತಾರೆ.

ದೇವಾಸುರಾಸ್ತನ್ನ ವಿದುರಾತ್ಮನೋ ಹಿ ಗತಾಗತಮ್ ।
ಅದೃಶ್ಯೋ ಹಿ ಸ ದೇವಾನಾಂ ಶೈಘ್ರ್ಯಾತ್ ಸೌಕ್ಷ್ಮ್ಯಾನ್ನಿರಾಶ್ರಯಾತ್ ॥

ದೇವಾಸುರರು ತಾವು ಈ ಲೋಕಕ್ಕೆ ಬಂದು ಹೋಗುವ ಪ್ರಕಾರವನ್ನು ತಿಳಿಯುವುದಿಲ್ಲ. ಗಮನಾಗಮನಗಳು ಶೀಘ್ರವಾಗಿರುವುದರಿಂದ, ಬಹಳ ಸೂಕ್ಷ್ಮವಾಗಿರುವುದರಿಂದ, ಯಾವ ಆಶ್ರಯವೂ ಕಾಣದಿರುವುದರಿಂದ ದೇವತೆಗಳೂ ಅದನ್ನು ಕಾಣುವುದಿಲ್ಲ.

ಅತಿಮಾತ್ರಾತಿಮಾಯಾನಾಮಾತ್ಮಮಾಯಾ ಸದೇಷ್ಯತೇ ।
ಸೋಽಯಂ ಚತುರ್ವಿಧಾಂ ಜಾತಿಂ ಸಂವಿಶತ್ಯಾತ್ಮಮಾಯಯಾ ।
ಮೈಥುನಂ ಶೋಣಿತಂ ಬೀಜಂ ದೈವಂ ಚಾಪ್ಯತ್ರ ಕಾರಣಮ್ ॥೧೪॥

ಎಲ್ಲ ಮಾಯೆಗಳಲ್ಲಿ ಪರಮಾತ್ಮನ ಮಾಯೆ ಅತ್ಯಂತ ನಿಗೂಢವಾದುದು ಎಂದು ಹೇಳಲ್ಪಡುತ್ತದೆ. ಈ ಜೀವನು ಪರಮಾತ್ಮನ ಮಾಯೆಯಿಂದ ಎಂದರೆ ಸಾಮರ್ಥ್ಯದಿಂದ, ಇಚ್ಛೆಯಿಂದ ನಾಲ್ಕು ವಿಧವಾದ ಜಾತಿಗಳಲ್ಲಿ ಪ್ರವೇಶಿಸುತ್ತಾನೆ. ಮೈಥುನ, ಶೋಣಿತ, ಬೀಜ, ದೈವ ಎಲ್ಲವೂ ಇದಕ್ಕೆ ಕಾರಣವಾಗುತ್ತದೆ.

ಬೀಜಶೋಣಿತಸಂಯೋಗೋ ಯದಾ ಸಂಭವತೇ ಶುಭೇ ।
ತದಾऽऽತ್ಮಾ ವಿಶತೇ ಗರ್ಭಮೇವಮಂಡಜರಾಯುಜೇ ॥೧೫॥

ಎಲೌ ಶುಭಳೇ, ಅಂಡಜ, ಜರಾಯುಜ ಪ್ರಾಣಿಗಳಲ್ಲಿ ಬೀಜ-ಶೋಣಿತ ಸಂಯೋಗ ಉಂಟಾದಾಗ ಜೀವನು ಗರ್ಭವನ್ನು ಪ್ರವೇಶಿಸುತ್ತಾನೆ.

ಶೀತೋಷ್ಣಯೋಸ್ತು ಸಂಯೋಗೇ ಕ್ಲೇದಜೇಷ್ವವತಿಷ್ಠತಿ ।
ಬೀಜಭೂಮಿಜಲಾನಾಂ ತು ಯೋಗಾದುದ್ಭೇದಜೇಷು ಚ ।
ಏವಂ ಸಂಯೋಗಕಾಲೇ ತು ಆತ್ಮಾ ಗರ್ಭತ್ವಮೇಯಿವಾನ್ ॥೧೬॥

ಕ್ಲೇದಜ (ಸ್ವೇದಜ ಜಾತಿಗಳಲ್ಲಿ) ಶೀತೋಷ್ಣ ಸಂಯೋಗದಿಂದ ಜೀವನು ಪ್ರವೇಶಿಸುತ್ತಾನೆ. ಉದ್ಭಿಜ ಜಾತಿಗಳಲ್ಲಿ ಬೀಜ, ಭೂಮಿ ಮತ್ತು ಜಲಗಳ ಸಂಯೋಗದಿಂದ ಜೀವನು ಪ್ರವೇಶಿಸುತ್ತಾನೆ. ಹೀಗೆ ಯಾವುದಾದರೂ ಸಂಯೋಗದ ಕಾಲದಲ್ಲಿ ಜೀವನು ಗರ್ಭವನ್ನು ಪ್ರವೇಶಿಸುತ್ತಾನೆ.

ಕಲಲಾಜ್ಜಾಯತೇ ಪಿಂಡಂ ಪಿಂಡಾತ್ ಪೇಶ್ಯರ್ಬುದಂ ಭವೇತ್ ।
ವ್ಯಕ್ತಿಭಾವಂ ಗತೇ ಚೈವ ಕರ್ಮ ತ್ವಾಶ್ರಯತೇ ಕ್ರಮಾತ್ ॥೧೭॥

ಗರ್ಭವು ನೀರಿನ ಗುಳ್ಳೆಯ ಆಕಾರದಿಂದ ಒಂದು ಸಣ್ಣ ಪಿಂಡದ ಆಕಾರವನ್ನೂ ಅನಂತರ ಪೇಶಿ (ರೇಷ್ಮೆ ಹುಳುವಿನ ಗೂಡಿನಷ್ಟು) ಆಕಾರವನ್ನೂ ಅನಂತರ ಅದಕ್ಕಿಂತ ದೊಡ್ಡ ಆಕಾರವನ್ನೂ ಪಡೆಯುತ್ತದೆ. ಜೀವನು ವ್ಯಕ್ತಾವಸ್ಥೆಯನ್ನು ಹೊಂದಿದ ಮೇಲೆ ಕರ್ಮಗಳನ್ನು ಕ್ರಮವಾಗಿ ಮಾಡುತ್ತಾನೆ.

ಏವಂ ಸ್ತ್ರೀಪುರುಷಸಂಯೋಗಂ ಪೌರುಷಂ ವಿದ್ಧಿ ಭಾಮಿನಿ ।
ಅಪತ್ಯಲಾಭೋ ಯಚ್ಚಾನ್ಯತ್ ತದ್ ದೈವಮಿತಿ ಸಂಸ್ಮೃತಮ್ ॥೧೮॥

ಎಲೌ ಭಾಮಿನಿಯೇ, ಹೀಗೆ ಸ್ತ್ರೀ-ಪುರುಷ ಸಂಯೋಗವು ಪುರುಷಪ್ರಯತ್ನ ಸಾಧ್ಯವಾದುದೆಂದು ತಿಳಿ. ಪುತ್ರೋತ್ಪತ್ತಿಯಾಗಲೀ ಅಥವಾ ಬೇರೆ ಯಾವುದಾಗಲೀ ಅದು ದೈವವೆಂದು ಕರೆಯಲ್ಪಡುತ್ತದೆ.

ಪಂಚಭೂತಸ್ಥಿತಿಶ್ಚೈವ ಜ್ಯೋತಿಷಾಮಯನಂ ತಥಾ ।
ಅಬುದ್ಧಿಗಮ್ಯಂ ಯನ್ಮರ್ತ್ಯೈರ್ಹೇತುಭಿರ್ವಾ ನ ವಿದ್ಯತೇ ॥೧೯॥

ತಾದೃಶಂ ಕಾರಣಂ ದೈವಂ ಶುಭಂ ವಾ ಯದಿ ವೇತರತ್ ।
ಯಾದೃಶಂ ಚಾತ್ಮನಾ ಶಕ್ಯಂ ತತ್ ಪೌರುಷಮಿತಿ ಸ್ಮೃತಮ್ ॥೨೦॥

ಪಂಚಭೂತಗಳ ಸ್ಥಿತಿ, ಜ್ಯೋತಿಸ್ಸುಗಳ ಗತಿ, ಮನುಷ್ಯರ ಬುದ್ಧಿಗೆ ಗೋಚರವಾಗದುದು ಅಥವಾ ಮನುಷ್ಯರ ಯುಕ್ತಿಗೂ ಗೋಚರವಾಗದುದು ಅದು ಶುಭವಾಗಲೀ ಅಥವಾ ಅಶುಭವಾಗಲೀ ಅದನ್ನು ದೈವವೆಂದು ಹೇಳುತ್ತಾರೆ. ಜೀವನು ಏನನ್ನು ಮಾಡಲು ಸಾಧ್ಯವೋ ಅದನ್ನು ಮಾತ್ರ ಪೌರುಷವೆಂದು ಹೇಳುತ್ತಾರೆ.

ಕೇವಲಂ ಫಲನಿಷ್ಪತ್ತಿರೇಕೇನ ನ ತು ಶಕ್ಯತೇ ।
ಪೌರುಷೇಣೈವ ದೈವೇನ ಯುಗಪದ್ ಗ್ರಥಿತಂ ಪ್ರಿಯೇ ।
ತಯೋಃ ಸಮಾಹಿತಂ ಕರ್ಮ ಶೀತೋಷ್ಣಂ ಯುಗಪತ್ ತಥಾ ॥೨೧॥

ಇವೆರಡರಲ್ಲಿ ಯಾವುದೇ ಒಂದರಿಂದ ಫಲಸಿದ್ಧಿಯಾಗುವುದಿಲ್ಲ. ಪ್ರಿಯೆಯೇ, ಪೌರುಷ ಮತ್ತು ದೈವ ಇವೆರಡೂ ಒಂದಕ್ಕೊಂದು ಹೆಣೆದುಕೊಂಡಿವೆ. ಶೀತೋಷ್ಣಗಳಂತೆ ಅವು ಯಾವಾಗಲೂ ಒಟ್ಟಿಗೆ ಸೇರಿರುತ್ತವೆ.

ಪೌರುಷಂ ತು ತಯೋಃ ಪೂರ್ವಮಾರಬ್ಧವ್ಯಂ ವಿಜಾನತಾ ।
ಆತ್ಮನಾ ನೈವ ಶಕ್ಯಂ ಹಿ ನ ತಥಾ ಕೀರ್ತಿಮಾಪ್ನುಯಾತ್ ॥೨೨॥

ವಿವೇಕಿಯಾದ ಪುರುಷನು ಮೊದಲು ಪುರುಷ ಪ್ರಯತ್ನವನ್ನು ಮಾಡಬೇಕು. ಪುರುಷಪ್ರಯತ್ನ ಒಂದರಿಂದಲೇ ಕಾರ್ಯಸಿದ್ಧಿಯುಂಟಾಗಿ ಕೀರ್ತಿಯು ಉಂಟಾಗುವುದಿಲ್ಲ.

ಖನನಾನ್ಮಥನಾಲ್ಲೋಕೇ ಜಲಾಗ್ನಿಪ್ರಾಪಣಂ ಯಥಾ ।
ತಥಾ ಪುರುಷಕಾರೇ ತು ದೈವಸಂಪತ್ ಸಮಾಹಿತಾ ॥೨೩॥

ಭೂಮಿಯನ್ನು ತೋಡಿ ನೀರನ್ನು ಪಡೆಯುವುದು, ಮಥನದಿಂದ ಅಗ್ನಿಯನ್ನು ಪಡೆಯುವುದು ಇದಕ್ಕೆ ದೃಷ್ಟಾಂತ. ಭೂಮಿಯನ್ನು ತೋಡಿದರೂ ನೀರು ಬರುತ್ತದೆಂಬ ನಿಶ್ಚಯವಿಲ್ಲ. ಮಥನವನ್ನು ಮಾಡಿದರೂ ಅಗ್ನಿ ಉತ್ಪತ್ತಿಯಾಗುವುದೆಂಬ ನಿಶ್ಚಯವಿಲ್ಲ. ಈ ರೀತಿಯಲ್ಲಿ ಪುರುಷ ಪ್ರಯತ್ನದ ಜೊತೆಯಲ್ಲಿ ದೈವ ಸಂಪತ್ತು ಸಮಾಹಿತವಾಗಿದೆ.

ನರಸ್ಯಾಕುರ್ವತಃ ಕರ್ಮ ದೈವಸಂಪನ್ನ ಲಭ್ಯತೇ ।
ತಸ್ಮಾತ್ ಸರ್ವಸಮಾರಂಭೋ ದೈವಮಾನುಷನಿರ್ಮಿತಃ ॥೨೪॥

ಮನುಷ್ಯನು ಯಾವ ಪ್ರಯತ್ನವನ್ನೂ ಮಾಡದಿದ್ದರೆ ದೈವಸಹಾಯ (ದೈವ ಸಂಪತ್ತಿ ಯಾವ ರೀತಿಯಲ್ಲಿಯೂ ಇರುವುದಿಲ್ಲ. ಆದ್ದರಿಂದ ಎಲ್ಲ ಕ್ರಿಯಾರಂಭಗಳೂ ದೈವ-ಮಾನುಷ ಉಭಯನಿರ್ಮಿತವಾಗಿರುತ್ತದೆ.

ಉಮಾ

ಭಗವನ್ ಮೃತಮಾತ್ರಸ್ತು ಯೋಽಯಂ ಜಾತ ಇತಿ ಸ್ಮೃತಃ ।
ತಥೈವ ದೃಶ್ಯತೇ ಜಾತಸ್ತತ್ರಾತ್ಮಾ ತು ಕಥಂ ಭವೇತ್ ॥೨೫॥

ಗರ್ಭಾದಾವೇವ ಸಂವಿಷ್ಟ ಆತ್ಮಾ ತು ಭಗವನ್ ಮತಮ್ ।
ಏಷ ಮೇ ಸಂಶಯೋ ದೇವ ತನ್ಮೇ ಛೇತ್ತುಂ ತ್ವಮರ್ಹಸಿ ॥೨೬॥

ಉಮಾ– ಭಗವಂತನೇ, ಮೃತನಾದವನು ಪುನಃ ಜನಿಸುತ್ತಾನೆ ಎಂದು ಹೇಳುತ್ತಾರೆ. ಜನಿಸುವುದು ಕಂಡುಬರುತ್ತದೆ. ಮೃತರಾದ ಮೇಲೆ ಜೀವನು ಅಲ್ಲಿಗೆ ಬರುವುದು ಹೇಗೆ? ಗರ್ಭದಲ್ಲಿ ಜೀವನು ಅಲ್ಲಿಯೇ ಮೃತಿಯನ್ನು ಹೊಂದಿರುತ್ತಾನಷ್ಟೆ? ಎಲೈ ದೇವನೇ, ಇದು ನನ್ನ ಸಂಶಯ. ಇದನ್ನು ಪರಿಹರಿಸಬೇಕು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ತತ್ತ್ವಂ ಸಮಾಹಿತಾ ॥೨೭॥

ಮಹೇಶ್ವರ– ಅದನ್ನು ನಿನಗೆ ಹೇಳುವೆನು. ಸಮಾಧಾನದಿಂದ ತತ್ತ್ವವನ್ನು ಕೇಳು.

ಅನ್ಯೋ ಗರ್ಭಗತೋ ಭೂತ್ವಾ ತತ್ರೈವ ನಿಧನಂ ಗತಃ ।
ಪುನರನ್ಯಃ ಶರೀರಂ ತದಾವಿಶ್ಯ ಭುವಿ ಜಾಯತೇ ।
ತತ್ ಕ್ವಚಿನ್ನೈವ ಸರ್ವತ್ರ ದೈವಯೋಗಂ ತು ತದ್ ಭವೇತ್ ॥೨೮॥

ಒಬ್ಬ ಜೀವನು ಗರ್ಭದಲ್ಲಿದ್ದು ಅಲ್ಲಿಯೇ ಮೃತನಾಗುತ್ತಾನೆ. ಪುನಃ ಇನ್ನೊಬ್ಬ ಜೀವನು ಆ ಶರೀರವನ್ನು ಪ್ರವೇಶಿಸಿ ಭೂಮಿಯಲ್ಲಿ ಜನಿಸುತ್ತಾನೆ. ಇದು ಬಹಳ ಅಪರೂಪವಾದುದು. ಯಾವಾಗಲೂ ನಡೆಯುವುದಿಲ್ಲ. ಹೀಗೆ ನಡೆಯುವುದಕ್ಕೆ ದೈವಯೋಗವು ಕಾರಣ.

ಸೂತಿಕಾಯಾ ಹಿತಾರ್ಥಂ ಚ ಮೋಹನಾರ್ಥಂ ಚ ದೇಹಿನಾಮ್ ।
ಸಮಕರ್ಮವಿಧಾನಂ ತದಿತ್ಯೇವಂ ವಿದ್ಧಿ ಶೋಭನೇ ॥೨೯॥

ಎಲೌ ಶೋಭನೆಯೇ, ಪ್ರಸವದ ಹಿತಕ್ಕಾಗಿ ಮತ್ತು ಜೀವನನ್ನು ಮೋಹಗೊಳಿಸುವುದಕ್ಕಾಗಿ ಇಂತಹ ಕರ್ಮವಿಧಾನವು ನಡೆಯುತ್ತದೆ ಎಂದು ತಿಳಿ.

ಕೌಕ್ಷಮಾತ್ರಂ ತು ನರಕಂ ಭುಕ್ತ್ವಾ ಕೇಚಿತ್ ಪ್ರಯಾಂತಿ ಹಿ ।
ಮಾಯಾ ಸಾ ಯಾಮಿಕಾ ನಾಮ ಯಜ್ಜನ್ಮಮರಣಾಂತರೇ ।
ಇತಿ ತೇ ಕಥಿತಂ ದೇವಿ ಭೂಯಃ ಶ್ರೋತುಂ ಕಿಮಿಚ್ಛಸಿ ॥೩೦॥

ಕೆಲವರು ಗರ್ಭವಾಸ ದುಃಖವನ್ನು ಮಾತ್ರ ಅನುಭವಿಸಿ ಮೃತರಾಗಿ ಹೊರಟು ಹೋಗುತ್ತಾರೆ. ಆ ಜನ್ಮಮರಣಗಳ ಮಧ್ಯೆ ಅವರು ಯಾಮಿಕಾ ಎಂಬ ಭಗವಂತನ

ಮಾಯೆಗೆ ಒಳಗಾಗಿರುತ್ತಾರೆ. ದೇವಿಯೇ, ಇದನ್ನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ದೈವಪುರುಷಕಾರಯೋರ್ಮೇಲನಕಥನಂ ನಾಮ ತ್ರಯೋದಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಹದಿನಾಲ್ಕನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ನರಕಮಾರ್ಗಗಳ ವರ್ಣನೆ

ಉಮಾ

ಭಗವನ್ ಸರ್ವಲೋಕೇಶ ತ್ರಿಪುರಾರ್ದನ ಶಂಕರ ।
ಕೀದೃಶಾ ಯಮದಂಡಾಸ್ತೇ ಕೀದೃಶಾಃ ಪರಿಚಾರಕಾಃ ॥೧॥

ಕಥಂ ಮೃತಾಸ್ತೇ ಗಚ್ಛಂತಿ ಪ್ರಾಣಿನೋ ಯಮಸಾದನಮ್ ।
ಕೀದೃಶಂ ಭವನಂ ತಸ್ಯ ಕಥಂ ದಂಡಯತಿ ಪ್ರಜಾಃ ।
ಏತತ್ಸರ್ವಂ ಮಹಾದೇವ ಶ್ರೋತುಮಿಚ್ಛಾಮ್ಯಹಂ ಪ್ರಭೋ ॥೨॥

ಉಮಾ- ಭಗವಂತನೇ, ಸರ್ವಲೋಕೇಶನೆ, ತ್ರಿಪುರ ಸಂಹಾರಿಯೇ, ಶಂಕರನೇ, ಯಮನ ದೂತರು ಹೇಗಿರುತ್ತಾರೆ? ಯಮನು ಕೊಡುವ ಶಿಕ್ಷೆಯು ಹೇಗಿರುತ್ತದೆ? ಮೃತರಾದ ಪ್ರಾಣಿಗಳು ಯಮಲೋಕಕ್ಕೆ ಹೇಗೆ ಹೋಗುತ್ತಾರೆ? ಯಮನ ಗೃಹವು ಹೇಗಿರುತ್ತದೆ? ಅವನು ಜೀವರನ್ನು ಹೇಗೆ ಶಿಕ್ಷಿಸುತ್ತಾನೆ? ಎಲೈ ಮಹಾದೇವನೇ, ಪ್ರಭುವೇ, ನಾನು ಇದೆಲ್ಲವನ್ನೂ ಕೇಳಲು ಬಯಸುತ್ತೇನೆ.

ಮಹೇಶ್ವರಃ

ಶೃಣು ಕಲ್ಯಾಣಿ ತತ್ಸರ್ವಂ ಯತ್ತದ್ ದೇವಿ ಮನಃಪ್ರಿಯಮ್ ।
ದಕ್ಷಿಣಸ್ಯಾಂ ದಿಶಿ ಶುಭೇ ಯಮಸ್ಯ ಸದನಂ ಮಹತ್ ॥೩॥

ವಿಚಿತ್ರಂ ರಮಣೀಯಂ ಚ ನಾನಾಭಾವಸಮನ್ವಿತಮ್ ।
ಪಿತೃಭಿಃ ಪ್ರೇತಸಂಘೈಶ್ಚ ಯಮದೂತೈಶ್ಚ ಸಂತತಮ್ ॥೪॥

ಮಹೇಶ್ವರ– ಕಲ್ಯಾಣಿಯೇ, ದೇವಿಯೇ, ನಿನ್ನ ಮನಸ್ಸಿಗೆ ಪ್ರಿಯವಾದ ಆ ಎಲ್ಲ ವಿಷಯವನ್ನೂ ಕೇಳು. ಶುಭವಾದ ದಕ್ಷಿಣ ದಿಕ್ಕಿನಲ್ಲಿ ಯಮನ ದೊಡ್ಡ ಗೃಹವಿದೆ. ಅದು ವಿಚಿತ್ರವೂ, ಮನೋಹರವೂ ಮತ್ತು ನಾನಾ ಕೌಶಲದಿಂದ ಕೂಡಿದುದೂ ಆಗಿದೆ. ಅಲ್ಲಿ ಪಿತೃಗಳು, ಯಮದೂತರು ಮತ್ತು ಮೃತ ಜೀವರು ತುಂಬಿರುತ್ತಾರೆ.

ಪ್ರಾಣಿಸಂಘೈಃ ಸುಬಹುಭಿಃ ಕರ್ಮವಶ್ಯೈ ರ್ಚ ಪೂರಿತಮ್ ।
ತತ್ರಾಸ್ತೇ ದಂಡಯನ್ ನಿತ್ಯಂ ಯಮೋ ಲೋಕಹಿತೇ ರತಃ ॥೫॥

ಕರ್ಮವಶರಾದ, ಅನೇಕ ವಿಧವಾದ ಜೀವ ಸಂಘಗಳಿಂದ ಅದು ತುಂಬಿರುತ್ತದೆ. ಅಲ್ಲಿ ಲೋಕಹಿತದಲ್ಲಿ ರತನಾದ ಯಮನು ನಿತ್ಯವೂ ಜೀವರಿಗೆ ಶಿಕ್ಷೆಯನ್ನು ವಿಧಿಸುತ್ತಾ ಇರುತ್ತಾನೆ.

ಮಾಯಯಾ ಸತತಂ ವೇತ್ತಿ ಪ್ರಾಣಿನಾಂ ಯಚ್ಛುಭಾಶುಭಮ್ ।
ಮಾಯಯಾ ಸಂಹರನ್ ತತ್ರ ಪ್ರಾಣಿಸಂಘಾನ್ ಯತಸ್ತತಃ ॥೬॥

ತನ್ನ ಸಾಮರ್ಥ್ಯದಿಂದ ಅವನು ಸತತವಾಗಿ ಪ್ರಾಣಿಗಳ ಶುಭಾಶುಭಗಳನ್ನು ತಿಳಿಯುತ್ತಾನೆ. ತನ್ನ ಸಾಮರ್ಥ್ಯದಿಂದಲೇ ಪ್ರಾಣಿಸಮೂಹಗಳನ್ನು ಎಲ್ಲೆಂದರಲ್ಲಿ ಸಂಹರಿಸುತ್ತಾನೆ (ಸಾಮರ್ಥ್ಯ ಎಂಬ ಅರ್ಥದಲ್ಲಿ ಮಾಯಾ ಶಬ್ದ ಪ್ರಯೋಗವನ್ನು ಗಮನಿಸಬೇಕು).

ತಸ್ಯ ಮಾಯಾಮಯಾಃ ಪಾಶಾ ನ ವೇದ್ಯಂತೇ ಸುರಾಸುರೈಃ ।
ಕೋ ಹಿ ಮಾನುಷಮಾತ್ರಸ್ತು ವೇತ್ತಾ ತಚ್ಚರಿತಂ ಮಹತ್ ॥೭॥

ಅವನ ಮಾಯಾಮಯವಾದ ಪಾಶಗಳು ಸುರಾಸುರರಿಗೂ ತಿಳಿಯುವುದಿಲ್ಲ. ಇನ್ನು ಮನುಷ್ಯಮಾತ್ರನಾದವನು ಯಮನ ಮಹಾಚರಿತೆಯನ್ನು ಹೇಗೆ ತಿಳಿದಾನು?

ಏವಂ ಹಿ ಶಾಸತಸ್ತಸ್ಯ ಯಮಸ್ಯ ಪರಿಚಾರಕಾಃ ।
ಗೃಹೀತ್ವಾ ಸನ್ನಯಂತ್ಯೇವ ಪ್ರಾಣಿನಃ ಕ್ಷೀಣಕರ್ಮಿಣಃ ।
ಯೇನ ಕೇನಾಪದೇಶೇನ ತತ್ಪದೇಶಸಮುದ್ಭವಾಃ ॥೮॥

ಹೀಗೆ ಶಿಕ್ಷೆಯನ್ನು ಕೊಡುವ ಯಮನ ದೂತರು, ತಮ್ಮ ಕರ್ಮವು ವಿನಾಶವನ್ನು ಹೊಂದಿದ ಪ್ರಾಣಿಗಳನ್ನು ಯಾವುದಾದರೂ ಒಂದು ವ್ಯಾಜದಿಂದ ಹಿಡಿದುಕೊಂಡು ಎಳೆದುಕೊಂಡು ಹೋಗುತ್ತಾರೆ.

ಕರ್ಮಣಾ ಪ್ರಾಣಿನೋ ಲೋಕ ಉತ್ತಮಾಧಮಮಧ್ಯಮಾಃ ।
ಯಥಾರ್ಹಂ ತಾನ್ ಸಮಾದಾಯ ನಯಂತಿ ಯಮಸಾದನಮ್ ॥೯॥

ಪ್ರಾಣಿಗಳು ತಾವು ಮಾಡುವ ಕರ್ಮದಿಂದ ಲೋಕದಲ್ಲಿ ಉತ್ತಮ, ಅಧಮ, ಮಧ್ಯಮರೆಂದು ಮೂರು ವಿಧವಾಗಿರುತ್ತಾರೆ. ಅವರವರಿಗೆ ಯೋಗ್ಯವಾದ ರೀತಿಯಲ್ಲಿ ಅವರನ್ನು ಕರೆದುಕೊಂಡು ಯಮದೂತರು ಯಮಪಟ್ಟಣಕ್ಕೆ ಹೋಗುತ್ತಾರೆ.

ಧಾರ್ಮಿಕಾನುತ್ತಮಾನ್ ವಿದ್ಧಿ ಸ್ವರ್ಗೀಯಾಸ್ತೇ ಯಥಾऽಮರಾಃ ।
ನೃಷು ಜನ್ಮ ಲಭಂತೇ ಯೇ ಕರ್ಮಣಾ ಮಧ್ಯಮಾಃ ಸ್ಮೃತಾಃ ।
ತಿರ್ಯಙ್ನರಕಗಂತಾರೋ ಹ್ಯಧಮಾಸ್ತೇ ನರಾಧಮಾಃ ॥೧೦॥

ಧಾರ್ಮಿಕರಾದವರು ಉತ್ತಮರೆಂದು ತಿಳಿ. ಅವರು ಸ್ವರ್ಗಕ್ಕೆ ಹೋಗುವ ದೇವತೆಗಳು. ಯಾರು ಮನುಷ್ಯಯೋನಿಯಲ್ಲಿ ಜನ್ಮವನ್ನು ಪಡೆಯುತ್ತಾರೆಯೋ ಅವರು ಕರ್ಮಗಳಿಂದ ಮಧ್ಯಮರು. ತಿರ್ಯಗ್ಯೋನಿಗಳಿಗೆ ಮತ್ತು ನರಕಕ್ಕೆ ಹೋಗುವ ನರಾಧಮರು ಅಧಮರು.

ಪಂಥಾನಸ್ತ್ರಿವಿಧಾ ದೃಷ್ಟಾ ಸರ್ವೇಷಾಂ ಗತಜೀವಿನಾಮ್ ।
ರಮಣೀಯಂ ನಿರಾಬಾಧಂ ದುರ್ದರ್ಶಮಿತಿ ನಾಮತಃ ॥೧೧॥

ಮೃತರಾದವರೆಲ್ಲ ಹೋಗುವ ಮಾರ್ಗಗಳು ರಮಣೀಯ, ನಿರಾಬಾಧ ಮತ್ತು ದುರ್ದರ್ಶ ಎಂದು ಮೂರು ಇವೆ.

ರಮಣೀಯಂ ತು ಸನ್ಮಾರ್ಗಂ ಪತಾಕಾಧ್ವಜಸಂಕುಲಮ್ ।
ಧೂಪಿತಂ ಸಿಕ್ತಸಂಮೃಷ್ಟಂ ಪುಷ್ಪಮಾಲಾಭಿಸಂಕುಲಮ್ ॥೧೨॥

ರಮಣೀಯವೆಂಬ ಮಾರ್ಗವು ಒಳ್ಳೆಯ ಮಾರ್ಗ. ಪತಾಕೆ, ಧ್ವಜಗಳಿಂದ ಅಲಂಕೃತವಾಗಿ, ಒಳ್ಳೆಯ ಧೂಪದಿಂದ ಕೂಡಿ, ಸುಗಂಧ ದ್ರವ್ಯಗಳನ್ನು ಚುಮುಕಿಸಿ ಪುಷ್ಪಮಾಲೆಗಳಿಂದ ಅಲಂಕೃತವಾಗಿರುತ್ತದೆ.

ಮನೋಹರಂ ಸುಖಸ್ಪರ್ಶಂ ಗಚ್ಛತಾಮೇವ ತದ್ ಭವೇತ್ ।
ನಿರಾಬಾಧಂ ಯಥಾ ಲೋಕೇ ಸುಪ್ರಶಸ್ತಂ ತಥಾ ಭವೇತ್ ॥೧೩॥

ಅದರಲ್ಲಿ ಹೋಗುವವರಿಗೆ ಅದು ಮನೋಹರವೂ, ಸುಖಸ್ಪರ್ಶವನ್ನು ಕೊಡುವಂತಹದೂ ಆಗಿರುತ್ತದೆ. ನಿರಾಬಾಧ ಮಾರ್ಗವು ಈ ಲೋಕದಲ್ಲಿ ಒಳ್ಳೆಯ ಮಾರ್ಗದಂತೆ ಇರುತ್ತದೆ.

ತೃತೀಯಂ ಯತ್ತು ದುರ್ದರ್ಶಂ ದುರ್ಗಂಧಿ ತಮಸಾವೃತಮ್ ।
ಪರುಷಂ ಶರ್ಕರಾಕೀರ್ಣಂ ಶ್ವದಂಷ್ಟ್ರಾಬಹುಲಂ ಭೃಶಮ್ ।
ಕೃಮಿಕೀಟಸಮಾಕೀರ್ಣಂ ಗಚ್ಛತಾಮತಿದುರ್ಗಮಮ್ ॥೧೪॥

ಮೂರನೆಯದಾದ ದುರ್ದರ್ಶ ಮಾರ್ಗವು ದುರ್ಗಂಧವುಳ್ಳದುದು, ಕತ್ತಲೆಯಿಂದ ಕೂಡಿದುದು, ಒರಟಾದುದು, ಕಲ್ಲುಗಳಿಂದ ತುಂಬಿದುದು, ನಾಯಿ ಮುಂತಾದ ಪ್ರಾಣಿಗಳಿಂದಲೂ, ಕ್ರಿಮಿ-ಕೀಟಗಳಿಂದಲೂ ತುಂಬಿ ನಡೆಯಲು ಅತಿ ದುರ್ಗಮವಾದುದು.

ಮಾರ್ಗೈರೇಭಿಸ್ತ್ರಿಭಿರ್ನಿತ್ಯಮುತ್ತಮಾಧಮಮಧ್ಯಮಾನ್ ।
ಸನ್ನಯಂತಿ ಯಥಾ ಕಾಲೇ ತನ್ಮೇ ಶೃಣು ಶುಚಿಸ್ಮಿತೇ ॥೧೫॥

ಎಲೌ ಶುಚಿಸ್ಮಿತೆಯೇ, ಯಮದೂತರು ಈ ಮೂರು ಮಾರ್ಗಗಳಲ್ಲಿ ಉತ್ತಮ-ಅಧಮ-ಮಧ್ಯಮರನ್ನು ಮರಣ ಕಾಲದಲ್ಲಿ ಹೇಗೆ ಕರೆದುಕೊಂಡು ಹೋಗುತ್ತಾರೆಂದು ಕೇಳು.

ಉತ್ತಮಾನಂತಕಾಲೇ ತು ಯಮದೂತಾಃ ಸುಸಂವೃತಾಃ ।
ನಯಂತಿ ಸುಖಮಾದಾಯ ರಮಣೀಯಪಥೇನ ವೈ ॥೧೬॥

ಮರಣಕಾಲದಲ್ಲಿ ಉತ್ತಮರನ್ನು ಒಳ್ಳೆಯ ವೇಷವನ್ನು ಧರಿಸಿದ ಯಮದೂತರು ಸುಖವಾಗಿ ರಮಣೀಯ ಮಾರ್ಗದಲ್ಲಿ ಕರೆದುಕೊಂಡು ಹೋಗುತ್ತಾರೆ.

ಉಮಾ

ಭಗವಂಸ್ತತ್ರ ಚಾತ್ಮಾನಂ ತ್ಯಕ್ತದೇಹಂ ನಿರಾಶ್ರಯಮ್ ।
ಅದೃಶ್ಯಂ ಕಥಮಾದಾಯ ಸನ್ನಯಂತಿ ಯಮಾಂತಿಕಮ್ ॥೧೭॥

ಉಮಾ– ಭಗವಂತನೇ, ಜೀವನು ದೇಹವನ್ನು ತ್ಯಜಿಸಿ ಆಶ್ರಯವಿಲ್ಲದೆ ಅದೃಶ್ಯನಾಗಿರುವಾಗ ಅವನನ್ನು ಯಮನ ಬಳಿಗೆ ಹೇಗೆ ಕರೆದುಕೊಂಡು ಹೋಗುತ್ತಾರೆ?

ಮಹೇಶ್ವರಃ

ಶೃಣು ಭಾಮಿನಿ ತತ್ಸರ್ವಂ ತ್ರಿವಿಧಂ ದೇಹಕಾರಣಮ್ ।
ಕರ್ಮವಶ್ಯಂ ಭೋಗವಶ್ಯಂ ದುಃಖವಶ್ಯಮಿತಿ ಪ್ರಿಯೇ ॥೧೮॥

ಮಹೇಶ್ವರ– ಎಲೌ ಭಾಮಿನಿಯೇ, ಪ್ರಿಯೆಯೇ, ದೇಹಗಳು ಕರ್ಮವಶ್ಯ, ಭೋಗವಶ್ಯ ಮತ್ತು ದುಃಖವಶ್ಯ ಎಂದು ಮೂರು ವಿಧವಾಗಿವೆ ಎಂಬುದನ್ನು ಕೇಳು.

ಮಾನುಷಂ ಕರ್ಮವಶ್ಯಂ ಸ್ಯಾತ್ ಸ್ವರ್ಗೀಯಂ ಭೋಗಸಾಧನಮ್ ।
ತೃತೀಯಂ ಯಾತನಾವಶ್ಯಂ ಶರೀರಂ ಮಾಯಯಾ ಕೃತಮ್ ।
ಯಮಲೋಕೇ ನ ಚಾನ್ಯತ್ರ ದೃಶ್ಯತೇ ಯಾತನಾಯುತಮ್ ॥೧೯॥

ಮನುಷ್ಯರ ದೇಹವು ಕರ್ಮವಶ್ಯವಾಗಿರುತ್ತದೆ. ದೇವತೆಗಳ ಸ್ವರ್ಗೀಯ ದೇಹವು ಭೋಗವಶ್ಯ ಎಂದೇ ಭೋಗಸಾಧನವಾಗಿರುತ್ತದೆ. ಮೂರನೆಯದಾದ ಯಾತನಾವಶ್ಯ ಎಂಬ ಶರೀರವು ಯಮಲೋಕದಲ್ಲಿ ಮಾತ್ರ ಕಂಡು ಬರುತ್ತದೆ. ಬೇರೆಲ್ಲಿಯೂ ಕಂಡುಬರುವುದಿಲ್ಲ.

ಶರೀರೈರ್ಯಾತನಾವಶ್ಯೈರ್ಜೀವಾನಾಮುಚ್ಯ ಭಾಮಿನಿ ।
ನಯಂತಿ ಯಾಮಿಕಾಸ್ತತ್ರ ಪ್ರಾಣಿನೋ ಮಾಯಯಾ ಮೃತಾನ್ ॥೨೦॥

ಎಲೌ ಭಾಮಿನಿಯೇ, ಯಮದೂತರು ನೂತನಾದಿ ಜೀವನನ್ನು ಯಾತನಾ ಶರೀರದಲ್ಲಿ ಪ್ರವೇಶಿಸಿ ತಮ್ಮ ಸಾಮರ್ಥ್ಯದಿಂದ ಕರೆದುಕೊಂಡು ಹೋಗುತ್ತಾರೆ.

ಮಧ್ಯಮಾನಥ ವೇಷೇಣ ಮಧ್ಯಮೇನ ಪಥಾ ತಥಾ ॥೨೧॥

ಚಂಡಾಲವೇಷಾಸ್ತ ್ವಧಮಾನ್ ಗೃಹೀತ್ವಾ ಭರ್ತ್ಸತರ್ಜನೈಃ ।
ಆಕರ್ಷಂತಸ್ತಥಾ ಪಾಶೈರ್ದುರ್ದರ್ಶೇನ ನಯಂತಿ ತಾನ್ ॥೨೨॥

ಮಧ್ಯಮರನ್ನು ಮಧ್ಯಮ ಮಾರ್ಗದಲ್ಲಿ ಯೋಧರ ವೇಷದಂತೆ ಮಧ್ಯಮ ವೇಷವನ್ನು ಧರಿಸಿ ಕರೆದುಕೊಂಡು ಹೋಗುತ್ತಾರೆ. ಅಧಮರನ್ನು ಚಂಡಾಲವೇಷವನ್ನು

ಧರಿಸಿ ಅವರನ್ನು ಹಿಡಿದುಕೊಂಡು ಅವರನ್ನು ಹೆದರಿಸುತ್ತಾ, ಬೆದರಿಸುತ್ತಾ ಪಾಶಗಳಿಂದ ಎಳೆದುಕೊಂಡು ದುರ್ದರ್ಶ ಮಾರ್ಗದಿಂದ ಕರೆದುಕೊಂಡು ಹೋಗುತ್ತಾರೆ.

ತ್ರಿವಿಧಾನೇವಮಾದಾಯ ನಯಂತಿ ಯಮಸಾದನಮ್ ।
ಧರ್ಮಾಸನಗತಂ ದಕ್ಷಂ ಭ್ರಾಜಮಾನಂ ಸ್ವತೇಜಸಾ ॥೨೩॥

ಲೋಕಪಾಲಂ ಸಭಾಧ್ಯಕ್ಷಂ ತಥೈವ ಪರಿಷದ್ಗತಮ್ ।
ದರ್ಶಯಂತಿ ಮಹಾಭಾಗೇ ಯಾಮಿಕಾಸ್ತಾನ್ನಿವೇದ್ಯ ತೇ ॥೨೪॥

ಮೂರು ವಿಧ ಜೀವರನ್ನು ಹೀಗೆ ಎಳೆದುಕೊಂಡು ಧರ್ಮಾಸನದಲ್ಲಿ ದಕ್ಷತೆಯಿಂದ ತನ್ನ ಕಾಂತಿಯಿಂದ ಶೋಭಿಸುತ್ತಾ ಕುಳಿತು ಲೋಕಪಾಲಕನೂ, ಸಭಾಧ್ಯಕ್ಷನೂ, ಸಭೆಯಲ್ಲಿ ಇರುವವನೂ ಆದ ಯಮನಿಗೆ ತೋರಿಸುತ್ತಾರೆ. ಎಲೌ ಮಹಾಭಾಗ್ಯವಂತಳೇ ಮತ್ತು ಯಮನಿಗೆ ಅವರನ್ನು ನಿವೇದಿಸುತ್ತಾರೆ.

ಪೂಜಯನ್ ದಂಡಯನ್ ಕಾಂಶ್ಚಿತ್ ತೇಷಾಂ ಶೃಣ್ವನ್ ಶುಭಾಶುಭಮ್ ।
ವ್ಯಾಹೃತೋ ಬಹುಸಾಹಸ್ರೈಸ್ತತ್ರಾಸ್ತೇ ಸತತಂ ಯಮಃ ॥೨೫॥

ಯಮದೇವರು ಅವರ ಶುಭಾಶುಭಗಳನ್ನು ಕೇಳಿ, ಕೆಲವರಿಗೆ ಪೂಜೆಯನ್ನೂ, ಕೆಲವರಿಗೆ ಶಿಕ್ಷೆಯನ್ನೂ ಕೊಡುತ್ತಾರೆ. ಹೀಗೆ ಸಹಸ್ರಾರು ದೂತರು ಯಮನಿಗೆ ಸತತವಾಗಿ ಜೀವರನ್ನು ನಿವೇದಿಸುತ್ತಿರುತ್ತಾರೆ.

ಗತಾನಾಂ ತು ಯಮಸ್ತೇಷಾಮುತ್ತಮಾನಭಿಪೂಜಯಾ ।
ಅಭಿಸಂಗಮ್ಯ ವಿಧಿವತ್ ಪೃಷ್ಟ್ವಾ ಸ್ವಾಗತಕೌಶಲಮ್ ।
ಪ್ರಸ್ತುತ್ಯ ಸತ್ಕಥಾಂ ತೇಷಾಂ ಲೋಕಂ ಸಂದಿಶತೇ ಯಮಃ ॥೨೬॥

ಯಮೇನೈವಮನುಜ್ಞಾತಾ ಯಾಂತಿ ಪಶ್ಚಾತ್ ತ್ರಿವಿಷ್ಟಪಮ್ ॥೨೭॥

ಯಮನು ತನ್ನ ಬಳಿಗೆ ಬಂದ ಉತ್ತಮರನ್ನು ಪೂಜಿಸಿ, ಅವರ ಜೊತೆಯಲ್ಲಿ ಬೆರೆತು, ವಿಧಿಗೆ ಅನುಗುಣವಾಗಿ ಕುಶಲಪ್ರಶ್ನೆಯನ್ನು ಮಾಡಿ, ಅವರು ಮಾಡಿದ ಸತ್ಕರ್ಮಗಳನ್ನು ನಿಮಿತ್ತವನ್ನಾಗಿ ಮಾಡಿಕೊಂಡು ಅವರಿಗೆ ಯೋಗ್ಯವಾದ ಲೋಕಗಳನ್ನು ಕೊಡುತ್ತಾನೆ. ಈ ರೀತಿಯಲ್ಲಿ ಯಮನಿಂದ ಅನುಮತಿಯನ್ನು ಪಡೆದ ಅವರು ಅನಂತರ ಸ್ವರ್ಗಕ್ಕೆ ಹೋಗುತ್ತಾರೆ.

ಮಧ್ಯಮಾನಾಂ ಯಮಸ್ತೇಷಾಂ ಶ್ರುತ್ವಾ ಕರ್ಮ ಯಥಾತಥಮ್ ।
ಜಾಯಂತಾಂ ಮಾನುಷೇಷ್ವೇವ ಇತಿ ಸಂದಿಶತೇ ಚ ತಾನ್ ॥೨೮॥

ಮಧ್ಯಮ ಜೀವರ ವಿಷಯದಲ್ಲಿ ಯಮನು ಅವರ ಶುಭಾಶುಭಕರ್ಮಗಳನ್ನು ಕೇಳಿ ಮನುಷ್ಯರಲ್ಲೇ ಹುಟ್ಟಿ ಎಂದು ಆದೇಶವನ್ನು ಕೊಡುತ್ತಾನೆ.

ಅಧಮಾನ್ ಪಾಶಸಂಯುಕ್ತಾನ್ ಯಮೋ ನಾವೇಕ್ಷತೇऽऽಗತಾನ್ ।
ಯಮಸ್ಯ ಪುರುಷಾ ಘೋರಾಶ್ಚಂಡಾಲಸಮದರ್ಶನಾಃ ।
ಯಾತನಾ ಯಾಪಯಂತ್ಯೇತಾಲ್ಲೋಕಪಾಲಸ್ಯ ಶಾಸನಾತ್ ॥೨೯॥

ಪಾಶದಿಂದ ಬಿಗಿಯಲ್ಪಟ್ಟ ಅಧಮರನ್ನು ಯಮನು ನೋಡುವುದೇ ಇಲ್ಲ. ಚಂಡಾಲರಂತೆ ಕಾಣುವ ಘೋರರಾದ ಯಮದೂತರು ಲೋಕಪಾಲಕನಾದ ಯಮನ ಶಾಸನದಂತೆ ಅವರಿಗೆ ತೀವ್ರ ಯಾತನೆಗಳನ್ನು ಉಂಟುಮಾಡುತ್ತಾರೆ.

ಛಿಂದಂತಶ್ಚ ತುದಂತಶ್ಚ ಪ್ರಕರ್ಷಂತೋ ಯತಸ್ತತಃ ।
ಕ್ರೋಶತಃ ಪಾತಯಂತ್ಯೇತಾನ್ ಮಿಥೋ ಗರ್ತೇಷ್ವವಾಙ್ಮುಖಾನ್ ॥೩೦॥

ಕತ್ತರಿಸುತ್ತಾ, ಚುಚ್ಚುತ್ತಾ, ಅಲ್ಲಿಂದಿಲ್ಲಿಗೆ ಎಳೆದಾಡುತ್ತಾ ಕಿರುಚುತ್ತಿರುವ ಆ ಜೀವರನ್ನು ತಲೆಕೆಳಗಾಗಿ ಹಳ್ಳಗಳಲ್ಲಿ ಕೆಡವುತ್ತಾರೆ.

ಸಂಯಾಮಿನ್ಯಃ ಶಿಲಾಸ್ತೇಷಾಂ ಪತಂತಿ ಶಿರಸಿ ಪ್ರಿಯೇ ।
ಅಯೋಮುಖಾಃ ಕಾಕವಲಾ ಭಕ್ಷಯಂತಿ ಸುದಾರುಣಾಃ ॥೩೧॥

ಯಮಲೋಕದ ಶಿಲೆಗಳು ಅವರ ತಲೆಯ ಮೇಲೆ ಬೀಳುತ್ತವೆ. ಪ್ರಿಯೆಯೇ, ಕಬ್ಬಿಣದ ಮುಖವುಳ್ಳ ಅತ್ಯಂತ ದಾರುಣವಾದ ಕಾಗೆಗಳು ಮತ್ತು ವಲಪಕ್ಷಿಗಳು ಅವರನ್ನು ತಿನ್ನುತ್ತವೆ.

ಅಸಿಪತ್ರವನೇ ಘೋರೇ ಚಾರಯಂತಿ ತಥಾ ಪರಾನ್ ।
ತೀಕ್ಷ್ಣದಂಷ್ಟ್ರಾಸ್ತಥಾ ಶ್ವಾನಃ ಕಾಂಶ್ಚಿತ್ ತತ್ರ ಹ್ಯದಂತಿ ವೈ ॥೩೨॥

ಇನ್ನು ಕೆಲವರನ್ನು ಅಸಿಪತ್ರವನ (ಖಡ್ಗದಂತಿರುವ ಎಲೆಗಳುಳ್ಳ ಗಿಡಗಳು ಇರುವ ವನ)ದಲ್ಲಿ ತಿರುಗಾಡಿಸುತ್ತಾರೆ. ಇನ್ನು ಕೆಲವರನ್ನು ತೀಕ್ಷ್ಣವಾದ ದಂಷ್ಟ್ರ (ಹಲ್ಲು)ವಿರುವ ನಾಯಿಗಳು ತಿನ್ನುತ್ತವೆ.

ತತ್ರ ವೈತರಣೀ ನಾಮ ನದೀ ಗ್ರಾಹಸಮಾಕುಲಾ ।
ದುಷ್ಪ್ರವೇಶಾ ಚ ಘೋರಾ ಚ ಮೂತ್ರಶೋಣಿತವಾಹಿನೀ ।
ತಸ್ಯಾಂ ಸಮ್ಮಜ್ಜಯಂತ್ಯೇತೇ ತೃಷಿತಾನ್ ಪಾಯಯಂತಿ ತಾನ್ ॥೩೩॥

ಅಲ್ಲಿ ಮೊಸಳೆಗಳಿಂದ ಕೂಡಿರುವ ವೈತರಣೀ ಎಂಬ ನದಿಯಿದೆ. ಅದು ಮೂತ್ರ-ರಕ್ತಗಳಿಂದ ಕೂಡಿದ ಘೋರವಾದ, ಪ್ರವೇಶಿಸಲು ಅಸಾಧ್ಯವಾದ ನದಿ. ಯಮದೂತರು ಬಾಯಾರಿದ ಇಂತಹ ಜೀವರನ್ನು ಆ ನದಿಯಲ್ಲಿ ಮುಳುಗಿಸಿ ಅದನ್ನೇ ಪಾನ ಮಾಡಿಸುತ್ತಾರೆ.

ಆರೋಪಯಂತಿ ವೈ ಕಾಂಶ್ಚಿತ್ ತತ್ರ ಕಂಟಕಶಾಲ್ಮಲೀಮ್ ।
ಯಂತ್ರೇಚಕ್ರೇಷು ತಿಲವತ್ ಪೀಡ್ಯಂತೇ ತತ್ರ ಕೇಚನ ॥೩೪॥

ಕೆಲವರನ್ನು ಮುಳ್ಳುಗಳಿಂದ ಕೂಡಿದ ಶಾಲ್ಮಲೀ ವೃಕ್ಷಕ್ಕೆ ಏರಿಸುತ್ತಾರೆ. ಇನ್ನು ಕೆಲವರನ್ನು ಎಳ್ಳುಗಳನ್ನು ಗಾಣದಲ್ಲಿ ಅರೆದಂತೆ ಅರೆಯುತ್ತಾರೆ.

ಅಂಗಾರೇಷು ಚ ದಹ್ಯಂತೇ ತಥಾ ದುಷ್ಕೃತಕಾರಿಣಃ ।
ಕುಂಭೀಪಾಕೇಷು ಪಚ್ಯಂತೇ ಭರ್ಜ್ಯಂತೇ ಸಫ್ಕತೇಷು ವೈ ॥೩೫॥

ದುಷ್ಕರ್ಮಗಳನ್ನು ಮಾಡಿ ಇನ್ನು ಕೆಲವರು ಕೆಂಡಗಳಲ್ಲಿ ಸುಡಲ್ಪಡುತ್ತಾರೆ. ಇನ್ನು ಕೆಲವರು ದೊಡ್ಡ ದೊಡ್ಡ ತುಪ್ಪದ ಹಂಡೆಗಳಲ್ಲಿ ಕರಿದು ಬೇಯಿಸಲ್ಪಡುತ್ತಾರೆ.

ಪಾಟ್ಯಂತೇ ತರುವಚ್ಚಸ್ತ್ರೈಃ ಪೀಡ್ಯಂತೇ ಲೋಚನಾದಿಷು ।
ಭಿದ್ಯಂತೇಽಥಾಂಗಶಃ ಶೂಲೈಸ್ತುದ್ಯಂತೇ ಸೂಕ್ಷ್ಮಸೂಚಿಭಿಃ ॥೩೬॥

ಕಟ್ಟಿಗೆಯಂತೆ ಸೀಳಲ್ಪಡುತ್ತಾರೆ. ಕಣ್ಣುಗಳಲ್ಲಿ ಚುಚ್ಚಲ್ಪಡುತ್ತಾರೆ. ಶೂಲಗಳಿಂದ ಅವಯವಗಳನ್ನು ಕತ್ತರಿಸುತ್ತಾರೆ. ತೀಕ್ಷ್ಣವಾದ ಸೂಜಿಗಳಿಂದ ಚುಚ್ಚುತ್ತಾರೆ.

ಏವಂ ತ್ವಯಾ ಕೃತೋ ದೋಷಸ್ತದರ್ಥಂ ದಂಡನಂ ತ್ವಿದಮ್ ।
ವಾಚೈವ ಘೋಷಯಂತಿ ಸ್ಮ ದಂಡ್ಯಮಾನಾನ್ ಸಮಂತತಃ ॥೩೭॥

ನೀನು ಇಂತಹ ದೋಷವನ್ನು ಮಾಡಿದ್ದೀಯೆ. ಅದಕ್ಕೆ ಇದು ಶಿಕ್ಷೆ ಎಂದು ಶಿಕ್ಷೆಗೆ ಒಳಪಡುವ ಜೀವರಿಗೆ ಘೋಷಣೆ ಮಾಡುತ್ತಿರುತ್ತಾರೆ.

ಏವಂ ತೇ ಯಾತನಾಂ ಪ್ರಾಪ್ಯ ಶರೀರೈರ್ಯಾತನಾಶಯೈಃ ।
ಪ್ರಸಹಂತಶ್ಚ ತದ್ ದುಃಖಂ ಸ್ಮರಂತಃ ಸ್ವಾಪರಾಧಜಮ್ ॥೩೮॥

ಕ್ರೋಶಂತಶ್ಚ ರುದಂತಶ್ಚ ನ ಮುಚ್ಯಂತೇ ಕಥಂಚನ ।
ಸ್ಮರಂತಸ್ತತ್ರ ತಪ್ಯಂತೇ ಪಾಪಮಾತ್ಮಕೃತಂ ಫಲಮ್ ॥೩೯॥

ಹೀಗೆ ಯಾತನಾಶರೀರದಲ್ಲಿ ಆ ಜೀವರು ಯಾತನೆಯನ್ನು ಹೊಂದಿ, ಆ ದುಃಖವನ್ನು ತಡೆದುಕೊಂಡು, ತಾವು ಮಾಡಿದ ಅಪರಾಧಗಳನ್ನು ಸ್ಮರಿಸುತ್ತಾ, ಕಿರುಚುತ್ತಾ ಅಳುತ್ತಾ ಅವರು ಬಿಡುಗಡೆಯನ್ನು ಹೊಂದುವುದಿಲ್ಲ. ತಾವು ಮಾಡಿದ ಪಾಪಕರ್ಮಗಳನ್ನು ಸ್ಮರಿಸುತ್ತಾ ತಾಪಪಡುತ್ತಾರೆ.

ಏವಂ ಬಹುವಿಧಾ ದಂಡಾ ಭುಜ್ಯಂತೇ ಪಾಪಕಾರಿಭಿಃ ।
ಯಾತನಾಶ್ಚ ತಥಾ ಭುಕ್ತ್ವಾ ಪಚ್ಯಂತೇ ನರಕೇ ಪುನಃ ॥೪೦॥

ಹೀಗೆ ಪಾಪಕರ್ಮವನ್ನು ಮಾಡಿದವರು ಬಹುವಿಧವಾದ ಶಿಕ್ಷೆಯನ್ನು ಅನುಭವಿಸುತ್ತಾರೆ. ಇಂತಹ ಯಾತನೆಗಳನ್ನು ಅನುಭವಿಸಿ ಕೆಲವರು ಪುನಃ ನರಕದಲ್ಲಿಯೇ ಯಾತನೆಗಳನ್ನು ಅನುಭವಿಸುತ್ತಾರೆ.

ಅಪರೇ ಯಾತನಾ ಭುಕ್ತ್ವಾ ಮುಚ್ಯಂತೇ ತತ್ರ ಕಿಲ್ಬಿಷಾತ್ ।
ಪಾಪದೋಷಕ್ಷಯಕರಾ ಯಾತನಾ ಸಂಸ್ಮೃತಾ ನೃಣಾಮ್ ।
ಬಹುತಪ್ತಂ ಯಥಾ ಲೋಹಂ ನಿರ್ಮಲಂ ತತ್ ತಥಾ ಭವೇತ್ ॥೪೧॥

ಇನ್ನು ಕೆಲವರು ಯಾತನೆಗಳನ್ನು ಅನುಭವಿಸಿ, ಪಾಪಗಳಿಂದ ಮುಕ್ತರಾಗಿ ಬಿಡುಗಡೆಯನ್ನು ಹೊಂದುತ್ತಾರೆ. ಮನುಷ್ಯರಿಗೆ ಯಮದೇವರು ಕೊಡುವ ಯಾತನೆಯು ಅವರ ಪಾಪದೋಷಗಳನ್ನು ಪರಿಹಾರ ಮಾಡುತ್ತದೆ ಎಂದು ಹೇಳಲಾಗುತ್ತದೆ. ಬಹಳವಾಗಿ ಕಾಯಿಸಿದ ಲೋಹವು ಹೇಗೆ ದೋಷವನ್ನು ಕಳೆದುಕೊಳ್ಳುವುದೋ ಹಾಗೆಯೇ ಶಿಕ್ಷೆಗೆ ಒಳಗಾದವರು ಪಾಪಗಳನ್ನು ಕಳೆದುಕೊಳ್ಳುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ನರಕಮಾರ್ಗಾದಿವರ್ಣನಂ ನಾಮ
ಚತುರ್ದಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಹದಿನೈದನೆಯ ಅಧ್ಯಾಯ

ಉಮಾ-ಮಹೇಶ್ವರಸಂವಾದ. ವಿವಿಧನರಕಗಳ ವರ್ಣನೆ.

ಉಮಾ

ಭಗವಂಸ್ತೇ ಕಥಂ ತತ್ರ ದಂಡ್ಯಂತೇ ನರಕೇಷು ವೈ ।
ಕತಿ ತೇ ನಿರಯಾ ಘೋರಾಃ ಕೀದೃಶಾಸ್ತೇ ಮಹೇಶ್ವರ ॥೧॥

ಉಮಾ– ಭಗವಂತನೇ, ಜೀವರು ನರಕದಲ್ಲಿ ಹೇಗೆ ಶಿಕ್ಷೆಯನ್ನು ಹೊಂದುತ್ತಾರೆ? ಘೋರವಾದ ನರಕಗಳು ಎಷ್ಟಿವೆ? ಮಹೇಶ್ವರನೇ, ಅವು ಯಾವ ರೀತಿಯಲ್ಲಿವೆ?

ಮಹೇಶ್ವರಃ

ಶೃಣು ಭಾಮಿನಿ ತತ್ಸರ್ವಂ ಪಂಚೈತೇ ನರಕಾಹ್ವಯಾಃ ।
ಭೂಮೇರಧಸ್ತಾದ್ ವಿಹಿತಾ ಘೋರಾ ದುಷ್ಕೃತಕರ್ಮಣಾಮ್ ॥೨॥

ಮಹೇಶ್ವರ– ಭಾಮಿನಿಯೇ, ಕೇಳು. ದುಷ್ಕರ್ಮವನ್ನು ಮಾಡಿದವರಿಗೆ ಭೂಮಿಯ ಕೆಳಗಿರುವ ಘೋರವಾದ ನರಕಗಳು ಐದು ಇವೆ.

ಪ್ರಥಮಂ ರೌರವಂ ನಾಮ ಶತಯೋಜನಮಾಯತಮ್ ।
ತಾವತ್ಪ್ರಮಾಣಂ ವಿಸ್ತೀರ್ಣಂ ತಾಮಸಂ ಪಾಪಪೀಡಿತಮ್ ॥೩॥

ಮೊದಲನೆಯದು ರೌರವ ನರಕ. ಅದು ನೂರು ಯೋಜನ ಉದ್ದ ಮತ್ತು ನೂರು ಯೋಜನ ಅಗಲವಾಗಿದ್ದು, ಕತ್ತಲೆಯಿಂದ ಕೂಡಿ ಬಹಳ ದುಸ್ಸಹವಾಗಿದೆ.

ಭೃಶಂ ದುರ್ಗಂಧಿ ಪರುಷಂ ಕೃಮಿಭಿರ್ದಾರುಣೈರ್ಯುತಮ್ ।
ಅತಿಘೋರಮನಿರ್ದೇಶ್ಯಂ ಪ್ರತಿಕೂಲಂ ತತಸ್ತತಃ ॥೪॥

ಬಹಳ ದುರ್ಗಂಧ, ಒರಟುತನ ಮತ್ತು ದಾರುಣವಾದ ಕ್ರಿಮಿಗಳಿಂದ ಕೂಡಿದೆ. ಅತಿಘೋರವೂ, ಜೀವರಿಗೆ ಪ್ರತಿಕೂಲವೂ ಆಗಿದೆ. ಅದನ್ನು ಶಬ್ದಗಳಿಂದ ವರ್ಣಿಸುವುದು ಅಸಾಧ್ಯವಾದುದು.

ತೇ ಚಿರಂ ತತ್ರ ತಿಷ್ಠಂತಿ ನ ತತ್ರ ಶಯನಾಸನೇ ।
ಕೃಮಿಭಿರ್ಭಕ್ಷ್ಯಮಾಣಾಶ್ಚ ವಿಸ್ರಗಂಧಸಮಾಯುತಾಃ ॥೫॥

ಜೀವರು ಅಲ್ಲಿ ಬಹುಕಾಲ ನಿಲ್ಲುತ್ತಾರೆ. ಅಲ್ಲಿ ಕುಳಿತುಕೊಳ್ಳಲು ಅಥವಾ ಮಲಗಲು ಸ್ಥಳವಿಲ್ಲ. ಜೀವರು ಅಮೇಧ್ಯಗಂಧಯುಕ್ತವಾದ ಆ ಸ್ಥಳದಲ್ಲಿ ಕ್ರಿಮಿಗಳಿಂದ ಭಕ್ಷಿಸಲ್ಪಡುತ್ತಾರೆ.

ಏವಂಪ್ರಮಾಣಮುದ್ವಿಗ್ನಾ ಯಾಂತಿ ತಿಷ್ಠಂತಿ ತತ್ರ ತೇ ।
ಯಾತನಾಭ್ಯೋ ದಶಗುಣಂ ನರಕೇ ದುಃಖಮಿಷ್ಯತೇ ॥೬॥

ಅಷ್ಟು ವಿಸ್ತಾರವಾದ ಪ್ರದೇಶದಲ್ಲಿ ಅವರು ನಿಲ್ಲುತ್ತಾರೆ ಮತ್ತು ಓಡಾಡುತ್ತಾರೆ. ಭೂಲೋಕದ ಯಾತನೆಗಳಿಗಿಂತ ನರಕದ ಯಾತನೆಗಳು ಹತ್ತು ಪಟ್ಟು ಅಧಿಕವಾಗಿರುತ್ತವೆ.

ತತ್ರ ಚಾತ್ಯಂತಿಕಂ ದುಃಖಮಿತಿ ವಿದ್ಧಿ ಶುಭೇಕ್ಷಣೇ ।
ಕ್ರೋಶಂತಶ್ಚ ರುದಂತಶ್ಚ ವೇದನಾಸ್ತತ್ರ ಭುಂಜತೇ ॥೭॥

ಎಲೌ ಶುಭೇಕ್ಷಣೆಯೇ, ಅಲ್ಲಿ ದುಃಖವು ಪರಮಾವಧಿಯಾಗಿರುತ್ತದೆ ಎಂದು ತಿಳಿ. ಅಲ್ಲಿ ಜೀವರು ಅಳುತ್ತಾ, ಕಿರುಚುತ್ತಾ ವೇದನೆಗಳನ್ನು ಅನುಭವಿಸುತ್ತಾರೆ.

ಭ್ರಮಂತಿ ದುಃಖಮೋಕ್ಷಾರ್ಥಂ ತ್ರಾತಾ ಕಶ್ಚಿನ್ನ ವಿದ್ಯತೇ ।
ದುಃಖಸ್ಯಾಂತರಮಾತ್ರಂ ತು ದ್ವಾರಂ ವಾ ನ ಚ ಲಭ್ಯತೇ ॥೮॥

ದುಃಖದ ಬಿಡುಗಡೆಗಾಗಿ ಓಡಾಡುತ್ತಾರೆ. ಆದರೆ ಅಲ್ಲಿ ಯಾರೂ ರಕ್ಷಕರಿಲ್ಲ. ದುಃಖದ ಬಿಡುಗಡೆಯಾಗಲೀ ಅಥವಾ ದುಃಖದ ಪರಿಹಾರ ಮಾರ್ಗವಾಗಲೀ ದೊರೆಯುವುದಿಲ್ಲ.

ಮಹಾರೌರವಸಂಜ್ಞಂ ತು ದ್ವಿತೀಯಂ ನರಕಂ ಪ್ರಿಯೇ ।
ತಸ್ಮಾದ್ ದ್ವಿಗುಣಿತಂ ವಿದ್ಧಿ ಮಾನೇ ದುಃಖೇ ಚ ರೌರವಾತ್ ॥೯॥

ಎಲೌ ಪ್ರಿಯೆಯೇ, ಮಹಾರೌರವ ಎಂಬುದು ಎರಡನೆಯ ನರಕ. ಅದು ವಿಸ್ತೀರ್ಣದಲ್ಲಿ ಮತ್ತು ಜೀವರಿಗೆ ಉಂಟುಮಾಡುವ ದುಃಖದ ವಿಷಯದಲ್ಲಿ ರೌರವಕ್ಕಿಂತ ಎರಡು ಪಟ್ಟು ಹೆಚ್ಚಾಗಿರುತ್ತದೆ.

ತೃತೀಯಂ ನರಕಂ ತತ್ರ ಕಂಟಕಾವನಸಂಜ್ಞಿತಮ್ ।
ತತೋ ದ್ವಿಗುಣಿತಂ ತಚ್ಚ ಪೂರ್ವಾಭ್ಯಾಂ ದುಃಖಮಾನಯೋಃ ।
ಮಹಾಪಾತಕಸಂಯುಕ್ತಾ ಘೋರಾಸ್ತಸ್ಮಿನ್ ವಿಶಂತಿ ಹಿ ॥೧೦॥

ಕಂಟಕಾವನವೆಂಬುದು ಅಲ್ಲಿ ಮೂರನೆಯ ನರಕ. ಅದು ಹಿಂದಿನ ನರಕಕ್ಕಿಂತ ವಿಸ್ತೀರ್ಣ ಮತ್ತು ದುಃಖದಲ್ಲಿ ಎರಡು ಪಟ್ಟು ಹೆಚ್ಚಾಗಿರುತ್ತದೆ. ಮಹಾಪಾತಕವನ್ನು ಮಾಡಿದ ಘೋರ ಜೀವರು ಅಲ್ಲಿಗೆ ಬರುತ್ತಾರೆ.

ಅಗ್ನಿಕುಂಡಮಿತಿ ಖ್ಯಾತಂ ಚತುರ್ಥಂ ನರಕಂ ಪ್ರಿಯೇ ।
ಏತದ್ ದ್ವಿಗುಣಿತಂ ತಸ್ಮಾದ್ ಯಥಾನಿಷ್ಟಸುಖಂ ತಥಾ ॥೧೧॥

ಎಲೌ ಪ್ರಿಯೆಯೇ, ನಾಲ್ಕನೆಯ ನರಕವು ಅಗ್ನಿಕುಂಡವೆಂದು ಪ್ರಸಿದ್ಧವಾದುದು. ಅದೂ ಸಹ ವಿಸ್ತೀರ್ಣ ಮತ್ತು ದುಃಖದಲ್ಲಿ ಹಿಂದಿನದರ ಎರಡರಷ್ಟಿದೆ.

ತತ್ರ ದುಃಖಂ ಹಿ ಸುಮಹದಮಾನುಷಮಿತಿ ಸ್ಮೃತಮ್ ।
ಭುಂಜತೇ ತತ್ರತತ್ರೈವ ದುಃಖಂ ದುಷ್ಕೃತಕಾರಿಣಃ ॥೧೨॥

ಅಲ್ಲಿ ಉಂಟಾಗುವ ದುಃಖವು ಮನುಷ್ಯರನ್ನು ಮೀರಿದುದು ಎಂದು ಹೇಳಲಾಗುತ್ತದೆ. ದುಷ್ಕರ್ಮವನ್ನು ಮಾಡಿದವರು ಅಲ್ಲಲ್ಲಿಯೇ ಇದ್ದು (ಓಡಾಡಲು ಸಾಧ್ಯವಾಗದೆ) ಆ ದುಃಖವನ್ನು ಅನುಭವಿಸುತ್ತಾರೆ.

ಪಂಚಕಷ್ಟಮಿತಿ ಖ್ಯಾತಂ ಪಂಚಮಂ ನರಕಂ ಪ್ರಿಯೇ ।
ತತ್ರ ದುಃಖಮನಿರ್ದೇಶ್ಯಂ ಮಹಾಘೋರಂ ಯಥಾತಥಮ್ ॥೧೩॥

ಪ್ರಿಯೆಯೇ, ಐದನೆಯ ನರಕವು ಪಂಚಕಷ್ಟವೆಂದು ಪ್ರಸಿದ್ಧವಾದುದು. ಅಲ್ಲಿ ಉಂಟಾಗುವ ಮಹಾಘೋರವಾದ ದುಃಖವನ್ನು ಶಬ್ದಗಳಿಂದ ವರ್ಣಿಸಲು ಸಾಧ್ಯವಿಲ್ಲ.

ಪಂಚೇಂದ್ರಿಯೈರಸಹ್ಯತ್ವಾತ್ ಪಂಚಕಷ್ಟಮಿತಿ ಸ್ಮೃತಮ್ ।
ಭುಂಜತೇ ತತ್ರತತ್ರೈವ ದುಃಖಂ ದುಷ್ಕೃತಕಾರಿಣಃ ॥೧೪॥

ಅಲ್ಲಿ ಉಂಟಾಗುವ ದುಃಖಗಳು ಪಂಚೇಂದ್ರಿಯಗಳಿಗೂ ವೇದನೆಯನ್ನು ಉಂಟು ಮಾಡುವುದರಿಂದ ಅದಕ್ಕೆ ಪಂಚಕಷ್ಟವೆಂದು ಹೆಸರು. ದುಷ್ಕರ್ಮವನ್ನು ಮಾಡಿದವರು ಅಲ್ಲಿಯೂ ಸಹ ಒಂದೇ ಸ್ಥಳದಲ್ಲಿದ್ದು ದುಃಖವನ್ನು ಅನುಭವಿಸುತ್ತಾರೆ.

ಅಮಾನುಷಾರ್ಹಂ ತದ್ ದುಃಖಂ ಮಹಾಭೂತೈಸ್ತು ಭುಂಜತೇ ।
ಅತಿಘೋರಂ ಚಿರಂ ಕೃತ್ವಾ ಮಹಾಭೂತಾನಿ ಯಾಂತಿ ತಮ್ ॥೧೫॥

ಅಮಾನುಷವಾದ ಆ ದುಃಖಗಳನ್ನು ಮಹಾಭೂತಗಳು ಅನುಭವಿಸುತ್ತವೆ. ಭೂಮಿಯಲ್ಲಿ ಅವು ಅತಿಘೋರವಾದ ಕರ್ಮಗಳನ್ನು ಬಹುಕಾಲ ಮಾಡಿ ಆ ನರಕಕ್ಕೆ ಹೋಗುತ್ತವೆ.

ಪಂಚಕಷ್ಟೇನ ಹಿ ಸಮಂ ನಾಸ್ತಿ ದುಃಖಂ ತಥಾವಿಧಮ್ ।
ದುಃಖಸ್ಯಾಂತಮಿತಿ ಪ್ರಾಹುಃ ಪಂಚಕಷ್ಟಂ ಸದಾ ಪ್ರಿಯೇ ॥೧೬॥

ಪಂಚಕಷ್ಟ ದುಃಖಕ್ಕೆ ಸಮಾನವಾದ ಇನ್ನೊಂದು ದುಃಖವಿಲ್ಲ. ಪ್ರಿಯೆಯೇ, ಪಂಚಕಷ್ಟದ ದುಃಖವನ್ನು ದುಃಖದ ಪರಾಕಾಷ್ಠೆ ಎಂದು ಹೇಳುತ್ತಾರೆ.

ಏವಂ ತೇ ತೇಷು ತಿಷ್ಠಂತಿ ಪ್ರಾಣಿನೋ ದುಃಖಭೋಗಿನಃ ।
ಅನ್ಯೇ ಚ ನರಕಾಃ ಸಂತಿ ಅವೀಚಿಪ್ರಮುಖಾಃ ಪ್ರಿಯೇ ॥೧೭॥

ಹೀಗೆ ಪ್ರಾಣಿಗಳು ದುಃಖವನ್ನು ಅನುಭವಿಸುತ್ತಾ ಅವುಗಳಲ್ಲಿರುತ್ತಾರೆ. ಪ್ರಿಯೆಯೇ, ಅವೀಚಿ ಮೊದಲಾದ ಬೇರೆ ನರಕಗಳೂ ಇವೆ.

ಕ್ರೋಶಂತಶ್ಚ ರುದಂತಶ್ಚ ವೇದನಾರ್ತಾ ಭೃಶಾತುರಾಃ ।
ಕೇಚಿದ್ ಭ್ರಮಂತಿ ವೇಷ್ಟಂತೇ ಕೇಚಿದ್ ಧಾವಂತಿ ಚಾತುರಾಃ ॥೧೮॥

ವೇದನೆಯಿಂದ ಆರ್ತರಾಗಿ, ಬಹಳ ಸಂಕಟವನ್ನನುಭವಿಸುತ್ತಾ, ಕಿರುಚುತ್ತಾ, ಅಳುತ್ತಾ ಕೆಲವರು ಓಡುತ್ತಾರೆ. ಕೆಲವರು ಮುದುಡಿಕೊಳ್ಳುತ್ತಾರೆ.

ಆಧಾವಂತೋ ನಿವಾರ್ಯಂತೇ ಶೂಲಹಸ್ತೈರ್ಯತಸ್ತತಃ ।
ರುಜಾರ್ದಿತಾಸ್ಫುಷಾಯುಕ್ತಾಃ ಪ್ರಾಣಿನಃ ಪಾಪಕಾರಿಣಃ ॥೧೯॥

ಕ್ರೋಶಂತಶ್ಚ ನದಂತಶ್ಚ ನ ಮುಚ್ಯಂತೇ ಕಥಂಚನ ।
ಕ್ರಿಮಿಭಿರ್ಭಕ್ಷ್ಯಮಾಣಾಶ್ಚ ವೇದನಾರ್ತಾಸ್ಫುಷಾನ್ವಿತಾಃ ॥೨೦॥

ಸಂಸ್ಮರಂತಃ ಸ್ವಕಂ ಪಾಪಂ ಕೃತಮಾತ್ಮಾಪರಾಧಜಮ್ ।
ಶೋಚಂತಸ್ತತ್ರ ತಿಷ್ಠಂತಿ ಯಾವತ್ ಪಾಪಕ್ಷಯಂ ಪ್ರಿಯೇ ।
ಏವಂ ಭುಕ್ತ್ವಾ ತು ನರಕಂ ಮುಚ್ಯಂತೇ ಪಾಪಸಂಕ್ಷಯಾತ್ ॥೨೧॥

ಓಡುತ್ತಿರುವ ಜೀವರನ್ನು ಶೂಲಪಾಣಿಗಳಾದ ಯಮದೂತರು ತಡೆಯುತ್ತಾರೆ. ಪಾಪವನ್ನು ಮಾಡಿದ ಜೀವರು ದುಃಖಪೂರ್ಣರಾಗಿ, ಬಾಯಾರಿಕೆಯಿಂದ ಬಳಲಿ ಅತ್ತು ಅರುಚುತ್ತಿದ್ದರೂ ಅಲ್ಲಿ ಬಿಡುಗಡೆಯನ್ನು ಹೊಂದುವುದಿಲ್ಲ. ಬಾಯಾರಿ ವೇದನೆಯಿಂದ ಕೂಡಿ ಕ್ರಿಮಿಗಳಿಂದ ಭಕ್ಷಿಸುತ್ತಾರೆ. ತಮ್ಮ ಪಾಪದ ಕ್ಷಯವಾಗುವವರೆಗೆ ಅಲ್ಲಿರುತ್ತಾರೆ. ಪಾಪಕ್ಷಯವಾದ ಮೇಲೆ ಅವರು ನರಕದಿಂದ ಬಿಡುಗಡೆಯನ್ನು ಹೊಂದುತ್ತಾರೆ.

ಉಮಾ

ಭಗವನ್ ಕತಿಕಾಲಂ ತೇ ತಿಷ್ಠಂತಿ ನರಕೇಷು ವೈ ।
ಏತದ್ ವೇದಿತುಮಿಚ್ಛಾಮಿ ತನ್ಮೇ ಬ್ರೂಹಿ ಮಹೇಶ್ವರ ॥೨೨॥

ಉಮಾ– ಭಗವಂತನೇ, ಅವರು ಎಷ್ಟು ಕಾಲ ಆ ನರಕದಲ್ಲಿರುತ್ತಾರೆ ಎಂದು ತಿಳಿಯಲು ಬಯಸುತ್ತೇನೆ. ಮಹೇಶ್ವರನೇ, ಅದನ್ನು ನನಗೆ ಹೇಳು.

ಮಹೇಶ್ವರಃ

ಶತಂ ಸಹಸ್ರಂ ವರ್ಷಾಣಾಮಾದಿಂ ಕೃತ್ವಾ ಹಿ ಜಂತವಃ ।
ತಿಷ್ಠಂತಿ ನರಕಾವಾಸಾಃ ಪ್ರಳಯಾಂತಮಿತಿ ಸ್ಥಿತಿಃ ॥೨೩॥

ಮಹೇಶ್ವರ– ನೂರು ವರ್ಷ, ಸಾವಿರ ವರ್ಷಗಳನ್ನು ಆರಂಭಿಸಿ ಜಂತುಗಳು ನರಕದಲ್ಲಿ ಪ್ರಳಯದವರೆಗೂ ಇರುತ್ತಾರೆಂಬುದು ಪರಿಸ್ಥಿತಿ.

ಉಮಾ

ಭಗವಂಸ್ತೇಷು ಕೇ ಕುತ್ರ ತಿಷ್ಠಂತೀತಿ ವದ ಪ್ರಭೋ ॥೨೪॥

ಉಮಾ– ಭಗವಂತನೇ, ಪ್ರಭುವೇ, ಆ ನರಕಗಳಲ್ಲಿ ಯಾವ ಜೀವರು ಎಲ್ಲಿ ಇರುತ್ತಾರೆಂದು ಹೇಳು.

ಮಹೇಶ್ವರಃ

ರೌರವೇ ಶತಸಾಹಸ್ರಂ ವರ್ಷಾಣಾಮಿತಿ ಸಂಸ್ಥಿತಿಃ ।
ಮಾನುಷಘ್ನಾಃ ಕೃತಘ್ನಾಶ್ಚ ತಥೈವಾನೃತವಾದಿನಃ ॥೨೫॥

ಮಹೇಶ್ವರ– ಮನುಷ್ಯರನ್ನು ಕೊಂದವರು, ಕೃತಘ್ನರಾದವರು, ಸುಳ್ಳು ಮಾತನಾಡುವವರು ರೌರವದಲ್ಲಿ ಹತ್ತುಸಾವಿರ ವರ್ಷಗಳು ಇರುತ್ತಾರೆಂಬುದು ಪರಿಸ್ಥಿತಿ.

ಜಾರಚೋರಾಶ್ಚ ನಾರೀ ಚ ಸರ್ವತಶ್ಚಾಪಚಾರಿಣೀ ।
ಉತ್ಕೋಚಕಾಶ್ಚ ಪಿಶುನಾ ವರ್ಣಸಂಭೇದಕಾರಕಾಃ ।
ತಾದೃಶಾಃ ಪರಿಪಚ್ಯಂತೇ ರೌರವೇ ನರಕೇ ನರಾಃ ॥೨೬॥

ಜಾರರು, ಚೋರರು, ಎಲ್ಲರಿಗೂ ಅಪಚಾರವನ್ನು ಮಾಡುವ ಸ್ತ್ರೀಯರು, ನಿಂದಿಸುವವರು, ಚಾಡಿಯನ್ನು ಹೇಳುವವರು, ವರ್ಣಸಂಕರವನ್ನು ಮಾಡುವವರು ಆದ ಜೀವರು ರೌರವ ನರಕದಲ್ಲಿ ದುಃಖವನ್ನು ಅನುಭವಿಸುತ್ತಾರೆ.

ದೇಶಘ್ನಾಶ್ಚೈವ ರಾಜಘ್ನಾಃ ಪಿತೃಮಾತೃವಿಘಾತಿನಃ ॥೨೭॥

ರಾಜಾ ಚಾನ್ಯಾಯತಃ ಶಾಸ್ತಾ ಸಾಕ್ಷಿತ್ವೇऽನೃತವಾದಿನಃ ।
ಬಹುಘ್ನಾಶ್ಚ ಕುಲಘ್ನಾಶ್ಚ ಭ್ರೂಣಘ್ನಾ ಗುರುಘಾತಿನಃ ॥೨೮॥

ವಿಶ್ವಸ್ತಘಾತಕಾಶ್ಚೈವಮಾತ್ಮಘ್ನಾಃ ಕೋಪಕಾರಣಾತ್ ।
ಪತಿಘ್ನ್ಯಃ ಪ್ರಮದಾ ಮೋಹಾದ್ ಯಜ್ಞವಿಘ್ನಕರಾಶ್ಚ ಯೇ ।
ದ್ವಿತೀಯೇ ದ್ವಿಗುಣಂ ಕಾಲಂ ಪಚ್ಯಂತೇ ತಾದೃಶಾ ನರಾಃ ॥೨೯॥

ದೇಶದ್ರೋಹಿಗಳು, ರಾಜನನ್ನು ಕೊಲ್ಲುವವರು, ತಂದೆ-ತಾಯಿಯರನ್ನು ಕೊಲ್ಲುವವರು, ಅನ್ಯಾಯದಿಂದ ರಾಜ್ಯವನ್ನು ಆಳುವ ರಾಜ, ಸುಳ್ಳು ಸಾಕ್ಷಿಯನ್ನು ಹೇಳುವವರು, ಬಹಳ ಮನುಷ್ಯರನ್ನು ಮತ್ತು ಪ್ರಾಣಿಗಳನ್ನು ಕೊಲ್ಲುವವರು, ಕುಲನಾಶಕರು, ಭ್ರೂಣಹತ್ಯೆಯನ್ನು ಮಾಡಿದವರು, ಗುರುಹತ್ಯೆಯನ್ನು ಮಾಡಿದವರು, ವಿಶ್ವಾಸಘಾತಕರು, ಕೋಪದಿಂದ ಆತ್ಮಹತ್ಯೆಯನ್ನು ಮಾಡಿಕೊಂಡವರು, ಪತಿಗಳನ್ನು ಕೊಂದ ಸ್ತ್ರೀಯರು, ಮೋಹದಿಂದ ಯಜ್ಞಕ್ಕೆ ವಿಘ್ನವನ್ನುಂಟು ಮಾಡುವವರು - ಈ ಎಲ್ಲ ಮನುಷ್ಯರು ಎರಡನೆಯ ನರಕದಲ್ಲಿ ಮೊದಲನೆಯ ನರಕದ ಎರಡರಷ್ಟು ಕಾಲ ದುಃಖವನ್ನು ಅನುಭವಿಸುತ್ತಾರೆ.

ಮಹಾಪಾತಕಯುಕ್ತಾಸ್ತು ತೃತೀಯೇ ದುಃಖಮಾಪ್ನುಯುಃ ।
ಏತಾವನ್ಮಾನುಷಸಹಂ ಪರಮನ್ಯೇಷು ಲಕ್ಷ್ಯತೇ ॥೩೦॥

ಮಹಾಪಾತಕವನ್ನು ಮಾಡಿದವರು ಮೂರನೆಯ ನರಕದಲ್ಲಿ ದುಃಖವನ್ನು ಹೊಂದುತ್ತಾರೆ. ಇಷ್ಟು ದುಃಖಗಳು ಮನುಷ್ಯನಿಂದ ಸಹಿಸಲು ಶಕ್ಯವಾದವುಗಳು. ಬೇರೆ ನರಕಗಳಲ್ಲಿ ಇದಕ್ಕಿಂತ ಅಧಿಕವಾದ ದುಃಖವಿರುತ್ತದೆ.

ಯಕ್ಷಾ ವಿದ್ಯಾಧರಾಶ್ಚೈವ ಕಾದ್ರವೇಯಾಶ್ಚ ಕಿನ್ನರಾಃ ।
ಗಂಧರ್ವಾ ಭೂತಸಂಘಾಶ್ಚ ತೇಷಾಂ ಪಾಪಯುತಾ ಭೃಶಮ್ ।
ಚತುರ್ಥೇ ಪರಿಪಚ್ಯಂತೇ ಯಾವದ್ಯುಗವಿಪರ್ಯಯಃ ॥೩೧॥

ಸಹಂತಸ್ತಾದೃಶಂ ಘೋರಂ ಪಂಚಕಷ್ಟೇ ಚ ಯಾದೃಶಮ್ ।
ತಾದೃಗ್ವಿಧಸ್ಯ ದುಃಖಸ್ಯ ಅಯೋಗ್ಯಾನ್ ವಿದ್ಧಿ ಮಾನುಷಾನ್ ॥೩೨॥

ಪಾಪವನ್ನು ಮಾಡಿದ ಯಕ್ಷರು, ವಿದ್ಯಾಧರರು, ಸರ್ಪಗಳು, ಕಿನ್ನರರು, ಗಂಧರ್ವರು, ಭೂತಸಂಘಗಳು ನಾಲ್ಕನೆಯ ನರಕದಲ್ಲಿ ಯುಗಾಂತ್ಯದವರೆಗೂ ದುಃಖವನ್ನು ಅನುಭವಿಸುತ್ತಾರೆ. ಪಂಚಕಷ್ಟದಲ್ಲಿರುವ ದುಃಖಕ್ಕೆ ಸಮಾನವಾದ ಘೋರವಾದ ದುಃಖವನ್ನು ಅವರು ಅನುಭವಿಸುತ್ತಾರೆ. ಮನುಷ್ಯರು ಅಂತಹ ದುಃಖವನ್ನು ಅನುಭವಿಸಲು ಸಾಮರ್ಥ್ಯವನ್ನು ಹೊಂದಿಲ್ಲವೆಂದು ತಿಳಿ.

ಏವಂ ತೇ ನರಕಾನ್ ಭುಕ್ತ್ವಾ ತತ್ರ ಕ್ಷಪಿತಕಲ್ಮಷಾಃ ।
ನರಕೇಭ್ಯೋ ವಿಮುಕ್ತಾಶ್ಚ ಜಾಯಂತೇ ಕೃಮಿಜಾತಿಷು ॥೩೩॥

ಉದ್ಭೇದಜೇಷು ವಾ ಕೇಚಿತ್ ತತ್ರಾಪಿ ಕ್ಷೀಣಕಲ್ಮಷಾಃ ।
ಪುನರೇವ ಪ್ರಜಾಯಂತೇ ಮೃಗಪಕ್ಷಿಷು ಶೋಭನೇ ।
ಮೃಗಪಕ್ಷಿಷು ತದ್‌ಭುಕ್ತ್ವಾ ಲಭಂತೇ ಮಾನುಷಂ ಪದಮ್ ॥೩೪॥

ಅವರು ನರಕಗಳನ್ನು ಅನುಭವಿಸಿ ತಮ್ಮ ದೋಷಗಳನ್ನು ಕಳೆದುಕೊಂಡು, ನರಕದಿಂದ ಮುಕ್ತರಾಗಿ ಕ್ರಿಮಿಯೋನಿಗಳಲ್ಲಿ ಜನಿಸುತ್ತಾರೆ. ಕೆಲವರು ಉದ್ಭಿಜಜಾತಿಗಳಲ್ಲಿ ಜನಿಸಿ ಅಲ್ಲಿಯೂ ತಮ್ಮ ಪಾಪವನ್ನು ಕಳೆದುಕೊಂಡು ಮೃಗ-

ಪಕ್ಷಿಗಳ ಜಾತಿಯಲ್ಲಿ ಜನಿಸುತ್ತಾರೆ. ಎಲೌ ಶೋಭನೆಯೇ, ಮೃಗ-ಪಕ್ಷಿಗಳ ಜಾತಿಯಲ್ಲಿ ತಮ್ಮ ಉಳಿದ ಕರ್ಮದ ಭಾಗವನ್ನು ಭೋಗಿಸಿ ಅನಂತರ ಮನುಷ್ಯರಾಗುತ್ತಾರೆ.

ಉಮಾ

ನಾನಾಜಾತಿಷು ಕೇನೈವ ಜಾಯಂತೇ ಪಾಪಕಾರಿಣಃ ॥೩೫॥

ಉಮಾ– ಪಾಪವನ್ನು ಮಾಡಿದವರು ಯಾವ ಯಾವ ಪಾಪದಿಂದ, ಯಾವ ಯೋನಿಯಲ್ಲಿ ಜನಿಸುತ್ತಾರೆ?

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಯತ್ತ್ವಮಿಚ್ಛಸಿ ಶೋಭನೇ ।
ಸರ್ವಥಾऽऽತ್ಮಾ ಕರ್ಮವಶಾನ್ನಾನಾಜಾತಿಷು ದೃಶ್ಯತೇ ॥೩೬॥

ಎಲೌ ಶೋಭನೆಯೇ, ನೀನು ಬಯಸುವುದನ್ನು ನಿನಗೆ ಹೇಳುವೆನು. ಜೀವನು ಸರ್ವಥಾ ಕರ್ಮವಶನಾಗಿ ನಾನಾ ಯೋನಿಗಳಲ್ಲಿ ಜನಿಸುತ್ತಾನೆ.

ಯಶ್ಚ ಮಾಂಸಪ್ರಿಯೋ ನಿತ್ಯಂ ಕಾಕಗೃಧ್ನಾನ್ ಸ ಸಂಸ್ಪೃಶೇತ್ ।
ಸುರಾಪಃ ಸತತಂ ಮರ್ತ್ಯಃ ಸೂಕರತ್ವಂ ವ್ರಜೇದ್ ಧ್ರುವಮ್ ॥೩೭॥

ಸತತ ಮಾಂಸಪ್ರಿಯನು ಕಾಗೆ-ಹದ್ದುಗಳ ಯೋನಿಯಲ್ಲಿ ಜನಿಸುತ್ತಾನೆ. ಸತತ ಮದ್ಯಪಾನವನ್ನು ಮಾಡುವ ಮನುಷ್ಯನು ಹಂದಿಯ ಜನ್ಮವನ್ನು ನಿಶ್ಚಯವಾಗಿ ಪಡೆಯುತ್ತಾನೆ.

ಅಭಕ್ಷ್ಯಭಕ್ಷಣೋ ಮರ್ತ್ಯಃ ಕಾಕಜಾತಿಷು ಸಂಸ್ಪೃಶೇತ್ ।
ಪರೋದ್ವೇಗಕರೋ ನಿತ್ಯಂ ವ್ಯಾಲಜಾತಿಷು ಜಾಯತೇ ।
ಆತ್ಮಘ್ನೋ ಯೋ ನರಃ ಕೋಪಾತ್ ಪ್ರೇತಜಾತಿಸು ತಿಷ್ಠತಿ ॥೩೮॥

ಅಭಕ್ಷ್ಯಭಕ್ಷ್ಯನಾದ ಮನುಷ್ಯನು ಕಾಗೆಯ ಯೋನಿಯಲ್ಲಿ ಜನಿಸುತ್ತಾನೆ. ಇನ್ನೊಬ್ಬರಿಗೆ ಯಾವಾಗಲೂ ಭಯವನ್ನುಂಟು ಮಾಡುವವನು ಸರ್ಪಯೋನಿಯಲ್ಲಿ ಜನಿಸುತ್ತಾನೆ. ಕೋಪದಿಂದ ಆತ್ಮಹತ್ಯೆಯನ್ನು ಮಾಡಿಕೊಂಡ ಮನುಷ್ಯನು ಪ್ರೇತಯೋನಿಯಲ್ಲಿ (ಪಿಶಾಚ ಯೋನಿಯಲ್ಲಿ) ಹುಟ್ಟುತ್ತಾನೆ.

ಪೈಶುನ್ಯಾತ್ ಪರಿವಾದಾಚ್ಚ ಕುಕ್ಕುಟತ್ವಂ ಸಮಶ್ನುಯಾತ್ ।
ನಾಸ್ತಿಕಶ್ಚೈವ ಯೋ ಮೂಖರ್ೋ ಮೃಗಜಾತಿಂ ಸ ಗಚ್ಛತಿ ॥೫೯॥

ಪರನಿಂದೆಯಿಂದ ಮತ್ತು ಚಾಡಿಯಿಂದ ಕೋಳಿಯ ಜನ್ಮವು ಬರುತ್ತದೆ. ಮೂರ್ಖರು ಮತ್ತು ನಾಸ್ತಿಕರು ಮೃಗಗಳ ಜಾತಿಯನ್ನು ಹೊಂದುತ್ತಾರೆ.

ಹಿಂಸಾವಿಹಾರಸ್ತು ನರಃ ಕೃಮಿಕೀಟೇಷು ಜಾಯತೇ ।
ಅತ್ರ ಮಾನಯುತೋ ನಿತ್ಯಂ ಪ್ರೇತ್ಯ ಗರ್ದಭತಾಂ ವ್ರಜೇತ್ ॥೪೧॥

ಹಿಂಸೆಯನ್ನೇ ವಿಹಾರವಾಗಿ ಹೊಂದಿದ ಮನುಷ್ಯರು ಕ್ರಿಮಿ-ಕೀಟಗಳ ಯೋನಿಯಲ್ಲಿ ಜನಿಸುತ್ತಾರೆ. ಭೂಲೋಕದಲ್ಲಿ ನಿತ್ಯವೂ ಬಹಳ ಅಹಂಕಾರದಿಂದ ಕೂಡಿದವನು ಮರಣವನ್ನು ಹೊಂದಿ ಕತ್ತೆಯ ಜನ್ಮವನ್ನು ಪಡೆಯುತ್ತಾನೆ.

ಅಸತ್ಯಂ ಪರುಷಂ ವಾಕ್ಯಂ ಯೋ ವದೇದ್ ಮತ್ಸ್ಯತಾಂ ವ್ರಜೇತ್ ।
ಅಗಮ್ಯಾಗಮನಾಚ್ಚೈವ ಪರದಾರಾಭಿಮರ್ಶನಾತ್ ।
ಮೂಷಿಕತ್ವಂ ವ್ರಜೇನ್ಮರ್ತ್ಯೋ ನಾಸ್ತಿ ತತ್ರ ವಿಚಾರಣಾ ॥೪೨॥

ಸುಳ್ಳು ಮಾತನಾಡುವವನು, ಒರಟು ಮಾತನ್ನಾಡುವವನು ಮೀನಿನ ಜನ್ಮವನ್ನು ಪಡೆಯುತ್ತಾನೆ. ಅಗಮ್ಯಾಗಮನವನ್ನು ಮಾಡುವುದರಿಂದ ಮತ್ತು ಪರಪತ್ನಿಯರ ಸ್ಪರ್ಶ ಮಾಡುವುದರಿಂದ ಮನುಷ್ಯನು ಇಲಿಯ ಜನ್ಮವನ್ನು ಪಡೆಯುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಕೃತಘ್ನೋ ಮಿತ್ರಘಾತೀ ಚ ಸೃಗಾಲವೃಕಜಾತಿಷು ।
ಗುರುಘ್ನಃ ಮಿತ್ರಘಾತೀ ಚ ಸ್ಥಾವರೇಷ್ವವತಿಷ್ಠತಿ ॥೪೩॥

ಕೃತಘ್ನನಾದವನು, ಮಿತ್ರನನ್ನು ಕೊಂದವನು ನರಿ ಮತ್ತು ತೋಳಗಳ ಜಾತಿಯಲ್ಲಿ ಹುಟ್ಟುತ್ತಾನೆ. ಗುರುಹತ್ಯೆ ಮತ್ತು ಮಿತ್ರಹತ್ಯೆಯನ್ನು ಮಾಡಿದವನು ದುಷ್ಟ ಜಾತಿಗಳಲ್ಲಿ ಜನಿಸುತ್ತಾನೆ.

ವಾಚಿಕೈಃ ಪಕ್ಷಿಮೃಗತಾಂ ಮಾನಸೈರನ್ಯಜಾತಿತಾಮ್ ।
ಶರೀರಜೈಃ ಕರ್ಮದೋಷೈರ್ಯಾತಿ ಸ್ಥಾವರತಾಂ ನರಃ ॥೪೪॥

ಮನುಷ್ಯನು ವಾಚಿಕ ದೋಷಗಳಿಂದ ಪಕ್ಷಿ-ಮೃಗ ಜಾತಿಗಳನ್ನೂ, ಮಾನಸ ದೋಷಗಳಿಂದ ಬೇರೆ ಜಾತಿಗಳನ್ನೂ, ಶರೀರದಿಂದ ಮಾಡಿದ ಕರ್ಮದೋಷದಿಂದ ವೃಕ್ಷಾದಿ ಸ್ಥಾವರ ಜಾತಿಗಳನ್ನೂ ಹೊಂದುತ್ತಾನೆ.

ಏವಮಾದ್ಯಶುಭಂ ಕೃತ್ವಾ ನರಾ ನಿರಯಮಾಶ್ರಿತಾಃ ।
ತಾಂಸ್ತಾನ್‌ಭಾವಾನ್‌ಪ್ರಪದ್ಯಂತೇ ಸ್ವಕೃತಸ್ಯೈವ ಕಾರಣಾತ್ ॥೪೫॥

ಹೀಗೆ ಅಶುಭಕರ್ಮವನ್ನು ಮಾಡಿದ ಮನುಷ್ಯನು ತಾವು ಮಾಡಿದ ಕರ್ಮದ ನಿಮಿತ್ತದಿಂದ ನರಕಕ್ಕೆ ಹೋಗಿ, ಅಲ್ಲಿ ದುಃಖಗಳನ್ನು ಅನುಭವಿಸಿ, ಅನಂತರ ಆಯಾ ಯೋನಿಗಳಲ್ಲಿ ಜನಿಸುತ್ತಾರೆ.

ಏವಂ ಜಾತಿಷು ನಿರ್ದಗ್ಧಾಃ ಪ್ರಾಣಿನಃ ಪಾಪಕಾರಿಣಃ ।
ಕಥಂಚಿತ್ ಪುನರುತ್ಪದ್ಯ ಲಭಂತೇ ಮಾನುಷಂ ಪದಮ್ ॥೪೬॥

ಹೀಗೆ ಆಯಾ ಜಾತಿಗಳಲ್ಲಿ ಜನಿಸಿದ ಪಾಪಕಾರಿಗಳಾದ ಪ್ರಾಣಿಗಳು ಅಲ್ಲಿ ತಮ್ಮ ಅಪರಾಧವನ್ನು ಕಳೆದುಕೊಂಡು, ಬಹಳ ಕಷ್ಟದಿಂದ ಪುನಃ ಮನುಷ್ಯಜನ್ಮವನ್ನು ಪಡೆಯುತ್ತಾರೆ.

ಬಹುಕೃತ್ವೋऽತಿ(ಗ್ನಿ)ಸಂತಪ್ತಂ ಲೋಹಂ ಶುಚಿತಮಂ ತಥಾ ।
ಬಹುದುಃಖಾಭಿಸಂತಪ್ತಸ್ತಥಾऽऽತ್ಮಾ ಶುದ್ಧ್ಯತೇ ಮಲಾತ್ ।
ತಸ್ಮಾತ್ ಸುದುರ್ಲಭಂ ಚೇತಿ ವಿದ್ಧಿ ಜನ್ಮ ಸುಮಾನುಷಮ್ ॥೪೭॥

ಅಗ್ನಿಯಲ್ಲಿ ಬಹಳವಾಗಿ ಕಾಯಿಸಿದ ಲೋಹವು ಶುದ್ಧವಾಗುವಂತೆ ಬಹಳ ದುಃಖವನ್ನು ಅನುಭವಿಸಿದ ಜೀವನು ದೋಷದಿಂದ ಬಿಡುಗಡೆಯನ್ನು ಹೊಂದಿ ಶುದ್ಧಿಯನ್ನು ಪಡೆಯುತ್ತಾನೆ. ಆದ್ದರಿಂದ ಮನುಷ್ಯ ಜನ್ಮವು ಅತ್ಯಂತ ದುರ್ಲಭವೆಂದು ತಿಳಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮಪರ್ವಣಿ ಪಂಚನರಕವರ್ಣನಂ
ನಾನಾಯೋನಿಪ್ರವೇಶಕಥನಂ ನಾಮ ಪಂಚದಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರಹದಿನೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಹದಿನಾರನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಅಶುಭಕರ್ಮಗಳ ವಿಸ್ತೃತಕಥನ.

ಉಮಾ

ಭಗವನ್ ದೇವದೇವೇಶ ಶೂಲಪಾಣೇ ವೃಷಧ್ವಜ ।
ಶ್ರುತಂ ಮೇ ಪರಮಂ ಗುಹ್ಯಂ ಪ್ರಸಾದಾತ್ ತೇ ವರಪ್ರದ ॥೧॥

ಶ್ರೋತುಂ ಭೂಯೋಽಹಮಿಚ್ಛಾಮಿ ಪ್ರಜಾನಾಂ ಹಿತಕಾರಣಾತ್ ।
ಶುಭಾಶುಭಮಿತಿ ಪ್ರೋಕ್ತಂ ಕರ್ಮ ಸ್ವಂಸ್ವಂ ಸಮಾಸತಃ ॥೨॥

ಉಮಾ- ಭಗವಂತನೇ, ದೇವದೇವೇಶನೇ, ಶೂಲಪಾಣಿಯೇ, ವೃಷಧ್ವಜನೇ, ವರಪ್ರದನೇ, ನಿನ್ನ ಅನುಗ್ರಹದಿಂದ ಪರಮ ರಹಸ್ಯವಾದ ವಿಷಯಗಳನ್ನು ಕೇಳಿದೆನು. ಸಂಕ್ಷೇಪವಾಗಿ ತಮ್ಮ ತಮ್ಮ ಶುಭಾಶುಭಗಳನ್ನು ಹೇಳಿದೆಯಷ್ಟೆ? ಪ್ರಜೆಗಳ ಹಿತಕ್ಕಾಗಿ ಅದನ್ನು ಇನ್ನೂ ಕೇಳಲು ಬಯಸುತ್ತೇನೆ.

ತನ್ಮೇ ವಿಸ್ತರತೋ ಬ್ರೂಹಿ ಶುಭಾಶುಭವಿಧಿಂ ಪ್ರತಿ ।
ಅಶುಭಂ ಕೀದೃಶಂ ಕರ್ಮ ಪ್ರಾಣಿನೋಽಧೋ ನಿಪಾತಯೇತ್ ॥೩॥

ಶುಭಂ ಕರ್ಮ ಕಥಂ ದೇವ ಪ್ರಜಾನಾಮೂರ್ಧ್ವತೋ ನಯೇತ್ ।
ಏತನ್ಮೇ ವದ ದೇವೇಶ ಶ್ರೋತುಕಾಮಾಽಸ್ಮಿ ಕೀರ್ತಯ ॥೪॥

ನನಗೆ ಶುಭಾಶುಭ ಕರ್ಮಗಳ ವಿಧಾನವನ್ನು ವಿಸ್ತಾರವಾಗಿ ಹೇಳು. ಪ್ರಾಣಿಗಳನ್ನು ಅಧೋಲೋಕಕ್ಕೆ ಎಳೆದುಕೊಂಡು ಹೋಗುವ ಅಶುಭ ಕರ್ಮವು ಹೇಗಿರುತ್ತದೆ? ಎಲೈ ದೇವನೇ, ಶುಭಕರ್ಮವು ಪ್ರಜೆಗಳನ್ನು ಹೇಗೆ ಊರ್ಧ್ವಲೋಕಗಳಿಗೆ ಕರೆದುಕೊಂಡು ಹೋಗುತ್ತದೆ? ದೇವೇಶನೆ, ಇದನ್ನು ಕೇಳಲು ಬಯಸುತ್ತೇನೆ, ಹೇಳುವವನಾಗು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ತತ್ಸರ್ವಂ ಶೃಣು ಶೋಭನೇ ।
ಸುಕೃತಂ ದುಷ್ಕೃತಂ ಚೇತಿ ದ್ವಿವಿಧಂ ಕರ್ಮವಿಸ್ತರಮ್ ॥೫॥

ಮಹೇಶ್ವರ- ಶೋಭನೆಯೇ, ಎಲ್ಲವನ್ನೂ ಹೇಳುವೆನು, ಕೇಳು. ಸುಕೃತ ಮತ್ತು ದುಷ್ಕೃತ ಎಂಬ ಎರಡು ವಿಧವಾದ ಕರ್ಮಗಳೂ ವಿಸ್ತಾರವಾಗಿವೆ.

ತಯೋರ್ಯದ್ ದುಷ್ಕೃತಂ ಕರ್ಮ ತಚ್ಚ ಸಂಜಾಯತೇ ತ್ರಿಧಾ ।
ಮನಸಾ ಕರ್ಮಣಾ ವಾಚಾ ಬುದ್ಧಿಮೋಹಸಮುದ್ಭವಮ್ ॥೬॥

ಅವುಗಳಲ್ಲಿ ದುಷ್ಕೃತವೆಂಬ ಕರ್ಮವು ಮನುಷ್ಯರ ಬುದ್ಧಿಮೋಹದಿಂದ ಮನಸ್ಸಿನಿಂದ, ಮಾತಿನಿಂದ ಮತ್ತು ಕರ್ಮದಿಂದ ಎಂದು ಮೂರು ವಿಧವಾಗಿ ಉಂಟಾಗುತ್ತದೆ.

ಮನಃಪೂರ್ವಂ ತು ವಾಕ್ಕರ್ಮ ವರ್ತತೇ ವಾಙ್ಮಯಂ ತತಃ ।
ಜಾಯತೇ ವೈ ಕ್ರಿಯಾಯೋಗಮೇವಂ ಚೇಷ್ಟಾಕ್ರಮಂ ಪ್ರಿಯೇ ॥೭॥

ಎಲೌ ಪ್ರಿಯೆಯೇ, ಮೊದಲು ಮಾನಸಕರ್ಮ, ಅನಂತರ ವಾಙ್ಮಯವಾದ ವಾಕ್ ಕರ್ಮ, ಅನಂತರ ದೇಹಚೇಷ್ಟಾರೂಪವಾದ ಶಾರೀರಿಕ ಕರ್ಮವು ಉಂಟಾಗುತ್ತದೆ.

ಅಭಿದ್ರೋಹೋಽಭ್ಯಸೂಯಾ ಚ ಪರಾರ್ಥೇ ಚಕ್ಷುಷಾ ಸ್ಪೃಹಾ ।
ಶುಭಾಶುಭಾನಾಂ ಮರ್ತ್ಯಾನಾಂ ವರ್ತನಂ ವಿಪರೀತತಃ ॥೮॥

ಧರ್ಮಕಾರ್ಯೇ ಯದಾಽಶ್ರದ್ಧಾ ಪಾಪಕರ್ಮಣಿ ಹರ್ಷಣಮ್ ।
ಏವಮಾದ್ಯಶುಭಂ ಕರ್ಮ ಮನಸಾ ಪಾಪಮುಚ್ಯತೇ ॥೯॥

ಇನ್ನೊಬ್ಬರಿಗೆ ಕೇಡನ್ನು ಚಿಂತಿಸುವುದು, ಅಸೂಯೆ, ಇನ್ನೊಬ್ಬರ ವಸ್ತುವನ್ನು ನೋಡಿ ಆಶಿಸುವುದು, ಶುಭಾಶುಭ ಮನುಷ್ಯರನ್ನು ವಿರುದ್ಧವಾಗಿ ತಿಳಿಯುವುದು. ಧರ್ಮಕಾರ್ಯಗಳಲ್ಲಿ ಅಶ್ರದ್ಧೆ, ಪಾಪಕರ್ಮಗಳಲ್ಲಿ ಸಂತೋಷ - ಇವೇ ಮೊದಲಾದವುಗಳು ಮನಸ್ಸಿನ ಅಶುಭವಾದ ಪಾಪಗಳು ಎಂದು ಹೇಳಲ್ಪಡುತ್ತವೆ.

ಅನೃತಂ ಯಚ್ಚ ಪರುಷಮಬದ್ಧವಚನಂ ಕಟು ।
ಅಸತ್ಯಂ ಪರಿವಾದಶ್ಚ ಪಾಪಮೇತತ್ತು ವಾಙ್ಮಯಮ್ ॥೧೦॥

ಸುಳ್ಳು ಮಾತನ್ನಾಡುವುದು, ಅಸಂಗತವಾದ ಮಾತನ್ನಾಡುವುದು, ಒರಟಾದ, ತೀಕ್ಷ್ಣವಾದ ಮಾತನ್ನಾಡುವುದು, ಮಿಥ್ಯಾಪವಾದಗಳನ್ನು ಆರೋಪಿಸುವುದು - ಇವು ವಾಙ್ಮಯವಾದ ಪಾಪಗಳು.

ಅಗಮ್ಯಾಗಮನಂ ಚೈವ ಪರದಾರನಿಷೇವಣಮ್ ।
ವಧಬಂಧಪರಿಕ್ಲೇಶೈಃ ಪರಪ್ರಾಣೋಪತಾಪನಮ್ ॥೧೧॥

ಚೌರ್ಯಂ ಪರೇಷಾಂ ದ್ರವ್ಯಾಣಾಂ ಹರಣಂ ನಾಶನಂ ತಥಾ ।
ಅಭಕ್ಷ್ಯಭಕ್ಷಣಂ ಚೈವ ವ್ಯಸನೇಷ್ವಭಿಷಂಗತಾ ॥೧೨॥

ದರ್ಪಾತ್ ಸ್ತಂಭಾಭಿಮಾನಾಚ್ಚ ಪರೇಷಾಮುಪತಾಪನಮ್ ।
ಅಕಾರ್ಯಾಣಾಂ ಚ ಕರಣಮಶೌಚಂ ಪಾನಮೇವ ಚ ॥೧೩॥

ದೌಃಶೀಲ್ಯೇ ಕ್ಷುದ್ರಸಂಪರ್ಕಃ ಸಾಹಾಯ್ಯಂ ಪಾಪಕರ್ಮಣಿ ।
ಅಧರ್ಮ್ಯಮಯಶಸ್ಯಂ ಚ ಕಾರ್ಯಂ ತಸ್ಯ ನಿಷೇವಣಮ್ ।
ಏವಮಾದ್ಯಶುಭಂ ಚಾನ್ಯಚ್ಚಾರೀರಂ ಪಾಪಮುಚ್ಯತೇ ॥೧೪॥

ಅಗಮ್ಯಾಗಮನ, ಇನ್ನೊಬ್ಬರ ಪತ್ನಿಯ ಜೊತೆಯಲ್ಲಿ ಚೆಲ್ಲಾಟ, ವಧ-ಬಂಧ ಕ್ಲೇಶಗಳನ್ನುಂಟು ಮಾಡಿ ಇನ್ನೊಬ್ಬರಿಗೆ ಪ್ರಾಣಹಿಂಸೆಯನ್ನು ಕೊಡುವುದು, ಕಳ್ಳತನ, ಇನ್ನೊಬ್ಬರ ದ್ರವ್ಯದ ಅಪಹರಣ, ಇನ್ನೊಬ್ಬರ ದ್ರವ್ಯದ ನಾಶ, ಅಭಕ್ಷ್ಯವಾದುದರ ಭಕ್ಷಣ, ಚಟಗಳಿಗೆ ಬಲಿಯಾಗುವುದು, ದರ್ಪದಿಂದ ಸ್ತಬ್ಧತೆಯಿಂದ ಮತ್ತು ಅಹಂಕಾರದಿಂದ ಇನ್ನೊಬ್ಬರನ್ನು ಹಿಂಸಿಸುವುದು, ಮಾಡಬಾರದ ಕಾರ್ಯವನ್ನು ಮಾಡುವುದು, ಶುಚಿಯಾಗಿಲ್ಲದಿರುವುದು, ಮದ್ಯಪಾನವನ್ನು ಮಾಡುವುದು, ದುಷ್ಟ ನಡತೆಯುಳ್ಳವರ ಜೊತೆಯಲ್ಲಿ ಕೆಟ್ಟ ಸಂಪರ್ಕವನ್ನು ಹೊಂದಿರುವುದು, ಪಾಪ ಕರ್ಮಗಳಿಗೆ ಸಹಾಯವನ್ನು ಮಾಡುವುದು, ಧರ್ಮನಾಶಕವಾದ ಮತ್ತು ಕೀರ್ತಿನಾಶಕವಾದ ಕಾರ್ಯಗಳನ್ನು ಮಾಡುವುದು - ಇವೇ ಮೊದಲಾದವುಗಳು ಅಶುಭವಾದ ಶರೀರ ಪಾಪಗಳೆನಿಸಿಕೊಳ್ಳುತ್ತವೆ.

ಮಾನಸಾದ್ ವಾಙ್ಮಯಂ ಪಾಪಂ ವಿಶಿಷ್ಟಮಿತಿ ವಕ್ಷ್ಯತೇ ।
ವಾಙ್ಮಯಾದಪಿ ವೈ ಪಾಪಾಚ್ಚಾರೀರಂ ಗಣ್ಯತೇ ಬಹು ॥೧೫॥

ಮನಸ್ಸಿನ ಪಾಪಕ್ಕಿಂತಲೂ ವಾಙ್ಮಯವಾದ ಪಾಪವು ಅಧಿಕವೆಂದು ಹೇಳಲ್ಪಡುತ್ತದೆ. ವಾಙ್ಮಯವಾದ ಪಾಪಕ್ಕಿಂತಲೂ ದೈಹಿಕವಾದ ಪಾಪವು ದೊಡ್ಡದೆಂದು ಪರಿಗಣಿಸಲ್ಪಡುತ್ತದೆ.

ಏವಂ ಪಾಪಯುತಂ ಕರ್ಮ ಪಾತಯೇತ್ ತ್ರಿವಿಧಂ ನರಮ್ ।
ಪರೋಪತಾಪಜನನಮತ್ಯಂತಂ ಪಾಪಕಂ ಸ್ಮೃತಮ್ ॥೧೬॥

ಈ ರೀತಿಯಲ್ಲಿ ಪಾಪಸಂಬಂಧಿಯಾದ ಮೂರು ವಿಧವಾದ ಕರ್ಮವು ಮನುಷ್ಯನನ್ನು ಕೆಡಹುತ್ತದೆ. ಇನ್ನೊಬ್ಬರಿಗೆ ಹಿಂಸೆಯನ್ನು ಕೊಟ್ಟ ಪಾಪವು ಅತ್ಯಂತ ಅಧಿಕವಾದುದೆಂದು ಹೇಳಲ್ಪಡುತ್ತದೆ.

ತ್ರಿವಿಧಂ ತತ್‌ಕೃತಂ ಪಾಪಂ ಕರ್ತಾರಂ ನರಕಂ ನಯೇತ್ ।
ಪಾತಕಂ ತ್ವಪಿ ಯತ್‌ಕರ್ಮ ಕರಣಾದ್ ಬುದ್ಧಿಪೂರ್ವಕಮ್ ॥೧೭॥

ಬುದ್ಧಿಪೂರ್ವಕವಾಗಿ ಮಾಡಿದ ಈ ಮೂರು ಪಾತಕಗಳು ಕರ್ತೃವನ್ನು ನರಕಕ್ಕೆ ಕರೆದುಕೊಂಡು ಹೋಗುತ್ತವೆ.

ಸಾಪದೇಶಮವಶ್ಯಂ ತು ಕರ್ತವ್ಯಮಿತಿ ಯತ್ಕೃತಮ್ ।
ಕಥಂಚಿತ್ ತತ್ಕೃತಮಪಿ ಕರ್ತಾ ತೇನ ನ ಲಿಪ್ಯತೇ ॥೧೮॥

ಅವಶ್ಯಮಪದೇಶೇನ ಪ್ರತಿಹನ್ಯೇತ ಕಾರಣಮ್ ॥೧೯॥

ಶಾಸ್ತ್ರಕ್ಕೆ ಅನುಸಾರವಾಗಿ ಇಂತಹ ಜಾತಿಯವನು ಇಂತಹ ಹಿಂಸೆಯನ್ನು ಮಾಡಲೇಬೇಕೆಂಬ ವಿಧಿಯಿಂದ ಮಾಡಿದ ಹಿಂಸೆಯು ಪಾಪಲೇಪಕ್ಕೆ ಒಳಗಾಗುವುದಿಲ್ಲ. ಶ್ರುತಿ-ಸ್ಮೃತಿಗಳ ಆಜ್ಞೆಯಿಂದ ಪಾಪವು ವಿನಾಶವನ್ನು ಹೊಂದುತ್ತದೆ (ಲಕ್ಷ್ಯಲಂಕಾರ).

ಉಮಾ

ಭಗವನ್ ಪಾಪಕಂ ಕರ್ಮ ಯಥಾ ಕೃತ್ವಾ ನ ಲಿಪ್ಯತೇ ॥೨೦॥

ಉಮಾ– ಭಗವಂತನೇ, ಪಾಪಕರ್ಮವನ್ನು ಮಾಡಿದವನು ಪಾಪಲೇಪವನ್ನು ಹೊಂದದಿರುವ ಬಗೆ ಹೇಗೆ?

ಮಹೇಶ್ವರಃ

ಯೋ ನರೋಽನಪರಾಧೀ ಚ ಸ್ವಾತ್ಮಪ್ರಾಣಸ್ಯ ರಕ್ಷಣಾತ್ ।
ಶತ್ರುಮುದ್ಯತಶಸ್ತ್ರಂ ವಾ ಪೂರ್ವಂ ತೇನ ಹತೋಽಪಿ ವಾ ।
ಪ್ರತಿಗತ್ಯ ನರೋ ಹಿಂಸ್ಯಾನ್ನ ಸ ಪಾಪೇನ ಲಿಪ್ಯತೇ ॥೨೧॥

ಮಹೇಶ್ವರ– ಯಾವ ನಿರಪರಾಧಿಯಾದ ಮನುಷ್ಯನು ತನ್ನ ಪ್ರಾಣರಕ್ಷಣೆಯನ್ನು ಮಾಡಿಕೊಳ್ಳಲು ಶಸ್ತ್ರವನ್ನು ಹಿಡಿದ ಶತ್ರುವನ್ನು ಅಥವಾ ಹಿಂದೆ ಯಾವನಿಂದ ಆಕ್ರಮಣಕ್ಕೆ

ಒಳಗಾಗಿದ್ದನೋ ಅವನನ್ನು ಸಮೀಪಿಸಿ ಹಿಂಸಿಸಿದರೆ ಅವನಿಗೆ ಪಾಪಲೇಪವು ಆಗುವುದಿಲ್ಲ.

ಚೋರಾಟವಿಕಸಂತ್ರಸ್ತಸ್ತತ್‌ಪ್ರತೀಕಾರಚೇಷ್ಟಯಾ ।
ತಾನ್ ಪ್ರತಿಘ್ನನ್ ನರೋ ಹಿಂಸ್ಯಾನ್ನ ಸ ಪಾಪೇನ ಲಿಪ್ಯತೇ ॥೨೨॥

ಕಳ್ಳರು ಮತ್ತು ಅಡವಿಯ ಕಳ್ಳರಿಂದ ಹೆದರಿ ಅದಕ್ಕೆ ಪ್ರತೀಕಾರವನ್ನು ಮಾಡಲು ಮನುಷ್ಯನು ಅವರು ಹೊಡೆದುದಕ್ಕೆ ಪ್ರತಿಯಾಗಿ ಹೊಡೆದರೆ ಪಾಪಲೇಪವನ್ನು ಹೊಂದುವುದಿಲ್ಲ.

ಗ್ರಾಮಾರ್ಥಂ ಭರ್ತೃಪಿಂಡಾರ್ಥಂ ದೀನಾನುಗ್ರಹಕಾರಣಾತ್ ।
ವಧಬಂಧಪರಿಕ್ಲೇಶಾನ್ ಕುರ್ವನ್ ಪಾಪಾತ್ ಪ್ರಮುಚ್ಯತೇ ॥೨೩॥

ಗ್ರಾಮದ ಸಲುವಾಗಿ ಅಥವಾ ತನ್ನನ್ನು ಪೋಷಿಸಿದ ಸ್ವಾಮಿಗೆ ಅನುಗುಣವಾಗಿ ಅಥವಾ ದೀನರಿಗೆ ಅನುಗ್ರಹವನ್ನು ಮಾಡುವುದಕ್ಕಾಗಿ ವಧ-ಬಂಧ ಪರಿಕ್ಲೇಶಗಳನ್ನು ಉಂಟುಮಾಡುವ ಮನುಷ್ಯನು ಪಾಪದಿಂದ ನಿರ್ಮುಕ್ತನಾಗುತ್ತಾನೆ.

ದುರ್ಭಿಕ್ಷೇ ಚಾತ್ಮವೃತ್ತ್ಯರ್ಥಮೇಕಾಯತನಗತಸ್ತಥಾ ।
ಅಕಾರ್ಯಂ ವಾऽಪ್ಯಭಕ್ಷ್ಯಂ ವಾ ಕೃತ್ವಾ ಪಾಪೈರ್ನ ಲಿಪ್ಯತೇ ॥೨೪॥

ದುರ್ಭಿಕ್ಷ ಪ್ರದೇಶದಲ್ಲಿ ಇದ್ದು ತಾನು ಬದುಕುವುದಕ್ಕಾಗಿ ಅಕಾರ್ಯವನ್ನು ಮಾಡಿದರೂ ಅಭಕ್ಷ್ಯವನ್ನು ಸೇವಿಸಿದರೂ ಪಾಪಲೇಪ ಉಂಟಾಗುವುದಿಲ್ಲ (ಲಕ್ಷಾಲಂಕಾರ).

ವ್ಯಾಧಿತೋ ರೋಗಮೋಕ್ಷಾರ್ಥಮಭಕ್ಷ್ಯೇಣ ನ ಲಿಪ್ಯತೇ ।
ಅನೃತಂ ಧರ್ಮಯುಕ್ತಂ ಚ ದಾಕ್ಷಿಣ್ಯಾತ್ ಸ್ತ್ರೀಷು ಭಾಷಿತಮ್ ॥೨೫॥

ಆತ್ಮಪ್ರಾಣಭಯಾದುಕ್ತಂ ಮೋಕ್ಷಾರ್ಥಂ ಚಾಪ್ಯಧಾರ್ಮಿಕಾತ್ ।
ವಿವಾಹಕರಣೇ ಚೈವ ಲೌಕಿಕೇನಾನೃತಂ ಬ್ರುವನ್ ।
ಸಂಸ್ತಂಭನಾರ್ಥಂ ತ್ರಸ್ತಾನಾಮನೃತೇನ ನ ಲಿಪ್ಯತೇ ॥೨೬॥

ವ್ಯಾಧಿಗ್ರಸ್ತನಾದವನು ವ್ಯಾಧಿ ಪರಿಹಾರಕ್ಕಾಗಿ ಅಭಕ್ಷ್ಯವನ್ನು ಸೇವಿಸಿದರೆ ದೋಷದ ಲೇಪವನ್ನು ಹೊಂದುವುದಿಲ್ಲ. ಧರ್ಮಕ್ಕಾಗಿ ಅನೃತವನ್ನು ಮಾತನಾಡಿದರೆ, ಸ್ತ್ರೀಯರ ಮೇಲಿನ ಅನುಕಂಪದಿಂದ ಅನೃತವನ್ನು ಮಾತನಾಡಿದರೆ, ತನಗೆ ಪ್ರಾಣಭಯ ಉಂಟಾದಾಗ ಅನೃತವನ್ನು ಮಾತನಾಡಿದರೆ, ದುಷ್ಟರಿಂದ ಬಿಡಿಸಿಕೊಳ್ಳುವುದಕ್ಕಾಗಿ (ಇನ್ನೊಬ್ಬರನ್ನು ಬಿಡಿಸುವುದಕ್ಕಾಗಿ) ಅನೃತವನ್ನು ಮಾತನಾಡಿದರೆ, ವಿವಾಹವನ್ನು ಸಂಘಟಿಸಲು ಲೋಕವಿಷಯದಲ್ಲಿ ಅನೃತವನ್ನು ಮಾತನಾಡಿದರೆ, ಹೆದರಿದವರನ್ನು ಸಮಾಧಾನ ಪಡಿಸಲು ಅನೃತವನ್ನು ಮಾತನಾಡಿದರೆ ದೋಷವುಂಟಾಗುವುದಿಲ್ಲ.

ವಿಧಿರೇಷ ಗೃಹಸ್ಥಾನಾಂ ಪ್ರಾಯೇಣೈವೋಪದಿಶ್ಯತೇ ।
ಅವಾಚ್ಯಂ ವಾऽಪ್ಯಕಾರ್ಯಂ ವಾ ದೇಶಕಾಲವಶೇನ ತು ॥೨೭॥

ಇದು ಆಯಾ ದೇಶ-ಕಾಲಗಳಿಗೆ ಅನುಗುಣವಾಗಿ ಹೆಚ್ಚಾಗಿ ಗೃಹಸ್ಥರಿಗೆ ಹೇಳಿದ ನಿಂದನೀಯವಲ್ಲದ ಅಕಾರ್ಯಗಳ ವಿಧಾನ.

ಬುದ್ಧಿಪೂರ್ವಂ ನರಃ ಕುರ್ವಂಸ್ತತ್ಪ್ರಯೋಜನಮಾತ್ರಯಾ ।
ಕಿಂಚಿದ್ವಾ ಲಿಪ್ಯತೇ ಪಾಪೈರಥವಾ ನ ಚ ಲಿಪ್ಯತೇ ॥೨೮॥

ಏವಂ ದೇವಿ ವಿಜಾನೀಹಿ ನಾಸ್ತಿ ತತ್ರ ವಿಚಾರಣಾ ॥೨೯॥

ಎಲೌ ದೇವಿಯೇ, ಬುದ್ಧಿಪೂರ್ವಕವಾಗಿ ಮನುಷ್ಯನು ಇದನ್ನು ಮಾಡಿ ಅದರಲ್ಲಿ ತನ್ನ ಪ್ರಯೋಜನವು ಇದ್ದರೆ ಸ್ವಲ್ಪ ಪಾಪಲೇಪವನ್ನು ಹೊಂದುತ್ತಾನೆ. ಅಥವಾ ಹೊಂದುವುದಿಲ್ಲ ಎಂದು (ಕೆಲವರ ಅಭಿಪ್ರಾಯ). ದೇವಿಯೇ, ಇದನ್ನು ಹೀಗೆಯೇ ತಿಳಿ. ಇದರಲ್ಲಿ ವಿಚಾರ ಮಾಡಬೇಕಾದ ಅವಶ್ಯಕತೆ ಇಲ್ಲ.

ಉಮಾ

ಭಗವನ್ ಪಾನದೋಷಾಂಶ್ಚ ಪ್ರೇಕ್ಷಯಾಪೇಯಕಾರಣಾನ್ ।
ಏತದಿಚ್ಛಾಮ್ಯಹಂ ಶ್ರೋತುಂ ತನ್ಮೇ ವದ ಮಹೇಶ್ವರ ॥೩೦॥

ಉಮಾ– ಪೂಜ್ಯನೇ, ಅಪೇಯವಾದುದನ್ನು ಪಾನ ಮಾಡುವುದರಿಂದ ಉಂಟಾಗುವ ದೋಷಗಳನ್ನು ಪ್ರದರ್ಶಿಸು. ಮಹೇಶ್ವರನೇ, ಅದನ್ನು ನಾನು ಕೇಳಲು ಬಯಸುತ್ತೇನೆ. ಅದನ್ನು ನನಗೆ ಹೇಳು.

ಮಹೇಶ್ವರಃ

ಹಂತ ತೇ ಕಥಯಿಷ್ಯಾಮಿ ಪಾನೋತ್ಪತ್ತಿಂ ಶುಚಿಸ್ಮಿತೇ ॥೩೧॥

ಮಹೇಶ್ವರ– ಶುಚಿಸ್ಮಿತೆಯೇ, ಸಂತೋಷ. ನಿನಗೆ ಪಾನದ ಉತ್ಪತ್ತಿಯನ್ನು ಮೊದಲು ಹೇಳುತ್ತೇನೆ.

ಪುರಾ ಸರ್ವೇऽಭವನ್ಮರ್ತ್ಯಾ ಬುದ್ಧಿಮಂತೋ ನಯಾನುಗಾಃ ।
ಶುಚಯಃ ಸುಭಗಾಚಾರಾಃ ಸರ್ವೇ ಸುಮನಸಃ ಪ್ರಿಯೇ ॥೩೨॥

ಪ್ರಿಯೆಯೇ, ಪ್ರಾಚೀನ ಕಾಲದಲ್ಲಿ ಎಲ್ಲ ಮನುಷ್ಯರೂ ಬುದ್ಧಿವಂತರೂ, ನೀತಿವಂತರೂ, ಶುಚಿಗಳೂ, ಒಳ್ಳೆಯ ಆಚಾರವುಳ್ಳವರೂ, ಒಳ್ಳೆಯ ಮನಸ್ಸುಳ್ಳವರೂ ಆಗಿದ್ದರು.

ಏವಂಭೂತೇ ತದಾ ಲೋಕೇ ಪ್ರೇಷ್ಯತ್ವಂ ನ ಪರಸ್ಪರಮ್ ।
ಪ್ರೇಷ್ಯಾಭಾವಾನ್ಮನುಷ್ಯಾಣಾಂ ಕರ್ಮಾರಂಭೋ ನನಾಶ ಹ ॥೩೩॥

ಲೋಕವು ಹೀಗೆ ನಡೆಯುತ್ತಿರಲು ಒಬ್ಬರಿಗೊಬ್ಬರು ಸೇವಕರಾಗಲಿಲ್ಲ. ಸೇವಕರೇ ಇಲ್ಲದೆ ಮನುಷ್ಯರ ಕಾರ್ಯಗಳು ನಷ್ಟವಾದವು.

ಉಭಯೋರ್ಲೋಕಯೋರ್ನಾಶಂ ದೃಷ್ಟ್ವಾ ಕರ್ಮಕ್ಷಯಾತ್ ಪ್ರಭುಃ ।
ಯಜ್ಞಕರ್ಮ ಕಥಂ ಲೋಕೇ ವರ್ತೇತೇತಿ ಪಿತಾಮಹಃ ॥೩೪॥

ಕರ್ಮವೇ ಇಲ್ಲದುದರಿಂದ ಎರಡು ಲೋಕಗಳಲ್ಲಿ ನಾಶವನ್ನು ನೋಡಿದ ಪ್ರಭುಗಳಾದ, ಪಿತಾಮಹರಾದ ಬ್ರಹ್ಮದೇವರು ಲೋಕದಲ್ಲಿ ಯಜ್ಞಕರ್ಮವು ಹೇಗೆ ನಡೆದೀತು ಎಂದು ಚಿಂತಿಸಿದರು.

ಆಜ್ಞಾಪಯತ್ ಸುರಾನ್ ದೇವಿ ಮೋಹಯಸ್ವೇತಿ ಮಾನುಷಾನ್ ।
ತಮಸಃ ಸಾರಮುದ್ಧೃತ್ಯ ಪಾನಂ ಬುದ್ಧಿಪ್ರಣಾಶನಮ್ ।
ನ್ಯಪಾತಯನ್ ಮನುಷ್ಯೇಷು ಪಾಪದೋಷಾವಹಂ ಪ್ರಿಯೇ ॥೩೫॥

ದೇವಿಯೆ, ಆಗ ದೇವತೆಗಳನ್ನು ಕುರಿತು, ಮನುಷ್ಯರನ್ನು ಮೋಹಗೊಳಿಸಿ ಎಂದು ಆಜ್ಞಾಪಿಸಿದರು. ಪ್ರಿಯೆಯೇ, ತಮಸ್ಸಿನ ಸಾರವನ್ನು ತೆಗೆದು ಅದರಿಂದ ಬುದ್ಧಿಯನ್ನು

ಕೆಡಿಸುವ ಪಾನೀಯವನ್ನು ಮಾಡಿ ದೇವತೆಗಳು ಪಾಪದೋಷಗಳನ್ನು ತಂದುಕೊಡುವ ಆ ಪಾನೀಯವನ್ನು ಮನುಷ್ಯಲೋಕದಲ್ಲಿ ಹಾಕಿದರು.

ತದಾಪ್ರಭೃತಿ ತತ್ ಪೀತ್ವಾ ಮುಮುಹುರ್ಮಾನವಾ ಭುವಿ ।
ಕಾರ್ಯಾಕಾರ್ಯಮಜಾನಂತೋ ವಾಚ್ಯಾವಾಚ್ಯಂ ಗುಣಾಗುಣಮ್ ॥

ಅನೇಕ ಮನುಷ್ಯರು ಭೂಮಿಯಲ್ಲಿ ಅದನ್ನು ಕುಡಿದು ಕಾರ್ಯಾಕಾರ್ಯ-ಗಳನ್ನಾಗಲೀ, ವಾಚ್ಯಾವಾಚ್ಯಗಳನ್ನಾಗಲೀ, ಗುಣ-ದೋಷಗಳನ್ನಾಗಲೀ ತಿಳಿಯದೆ ಮೋಹಕ್ಕೆ ಒಳಗಾದರು.

ಕೇಚಿದ್ ಹಸಂತಿ ತತ್ ಪೀತ್ವಾ ಪ್ರವದಂತಿ ತಥಾ ಪರೇ ।
ನೃತ್ಯಂತಿ ಮುದಿತಾಃ ಕೇಚಿದ್ ಗಾಯಂತಿ ಚ ಶುಭಾಶುಭಾನ್ ॥೩೭॥

ಕಲಹಂ ಕುರ್ವತೇಽಭೀಕ್ಷ್ಣಂ ಪ್ರಹರಂತಿ ಪರಸ್ಪರಮ್ ।
ಕ್ವಚಿದ್ ಧಾವಂತಿ ಸಹಸಾ ಪ್ರಸ್ಖಲಂತಿ ಪತಂತಿ ಚ ॥೩೮॥

ಅಯುಕ್ತಂ ಬಹು ಭಾಷಂತೇ ಯತ್ರ ಕ್ವಚನ ಶೋಭನೇ ।
ನಗ್ನಾ ವಿಕ್ಷಿಪ್ಯ ಗಾತ್ರಾಣಿ ನಷ್ಟಸಂಜ್ಞಾ ಮೃತಾ ಇವ ॥೩೯॥

ಕುಡಿದವರಲ್ಲಿ ಕೆಲವರು ನಗುತ್ತಾರೆ. ಇನ್ನು ಕೆಲವರು ಬಹಳವಾಗಿ ಮಾತನಾಡುತ್ತಾರೆ. ಕೆಲವರು ಸಂತೋಷದಿಂದ ನರ್ತನವನ್ನು ಮಾಡುತ್ತಾರೆ. ಕೆಲವರು ಒಳ್ಳೆಯ ಮತ್ತು ಕೆಟ್ಟ ಹಾಡುಗಳನ್ನು ಹಾಡುತ್ತಾರೆ. ಕೆಲವರು ಜಗಳವಾಡುತ್ತಾರೆ. ಕೆಲವರು ಪರಸ್ಪರವಾಗಿ ಹೊಡೆದಾಡುತ್ತಾರೆ. ಕೆಲವರು ಓಡುತ್ತಾರೆ, ಎಡವಿ ಬೀಳುತ್ತಾರೆ. ಎಲೌ ಶೋಭನೆಯೇ, ಕೆಲವರು ಅಸಂಗತವಾದ ಬಹಳ ಮಾತನಾಡುತ್ತಾರೆ. ನಗ್ನರಾಗಿ ತಮ್ಮ ಶರೀರವನ್ನು ತೋರಿಸುತ್ತಾ ಮೃತರಂತೆ ಜ್ಞಾನಶೂನ್ಯರಾಗಿರುತ್ತಾರೆ.

ಏವಂ ಬಹುವಿಧಾನ್ ಪಾಪಾನ್ ಕುರ್ವಂತಿ ಹೃತಚೇತಸಃ ।
ಯೇ ಪಿಬಂತಿ ಮಹಾಮೋಹಂ ಪಾನಂ ಪಾಪಯುತಾ ನರಾಃ ॥೪೦॥

ಹೀಗೆ ಯಾರು ಪಾನ ಮಾಡುತ್ತಾರೆಯೋ ಅವರು ಮಹಾಮೋಹವನ್ನು ಉಂಟುಮಾಡುವ ಪಾಪಯುಕ್ತರಾಗಿ, ಜ್ಞಾನಶೂನ್ಯರಾಗಿ ಬಹುವಿಧ ಪಾಪಗಳನ್ನು ಮಾಡುತ್ತಾರೆ.

ಧೃತಿಂ ಲಜ್ಜಾಂ ಚ ಬುದ್ಧಿಂ ಚ ಪಾನಂ ಪೀತಂ ಪ್ರಣಾಶಯೇತ್ ।
ತಸ್ಮಾನ್ನರಾಃ ಸಂಭವಂತಿ ನಿರ್ಲಜ್ಜಾ ನಿರಪತ್ರಪಾಃ ॥೪೧॥

ಪಾನವು ಪಾನ ಮಾಡಿದವರ ಧೈರ್ಯವನ್ನೂ, ನಾಚಿಕೆಯ ಪ್ರಜ್ಞೆಯನ್ನೂ, ಬುದ್ಧಿಯನ್ನೂ ಕೆಡಿಸುತ್ತದೆ. ಅದರಿಂದ ಮನುಷ್ಯರು ನಿರ್ಲಜ್ಜರಾಗುತ್ತಾರೆ.

ಬುದ್ಧಿಸತ್ತ್ವೈಃ ಪರಿಕ್ಷೀಣಾಸ್ತೇಜೋಹೀನಾ ಮಲಾನ್ವಿತಾಃ ।
ಪೀತ್ವಾಪೀತ್ವಾ ತೃಷಾಯುಕ್ತಾಃ ಪಾನಪಾಃ ಸಂಭವಂತಿ ಚ ॥೪೨॥

ಬುದ್ಧಿ ಮತ್ತು ಬಲಗಳನ್ನು ಕಳೆದುಕೊಂಡು, ತೇಜೋಹೀನರಾಗಿ, ಕಶ್ಮಲದಿಂದ ಕೂಡಿ, ಪಾನವನ್ನು ಮಾಡುವವರು ಮತ್ತೆ ಮತ್ತೆ ಕುಡಿದರೂ ಇನ್ನೂ ಕುಡಿಯುವ ಆಸೆಯನ್ನು ಹೊಂದುತ್ತಾರೆ.

ಪಾನಕಾಮಾಃ ಪಾನಕಥಾಃ ಪಾನಕಾಲಾಭಿಕಾಂಕ್ಷಿಣಃ ।
ಪಾನಾರ್ಥಂ ಕರ್ಮವಶ್ಯಾಸ್ತೇ ಸಂಭವಂತಿ ನರಾಧಮಾಃ ॥೪೩॥

ಪಾನವನ್ನು ಮಾಡುವ ನರಾಧಮರು ಯಾವಾಗಲೂ ಪಾನದ ಆಸೆಯನ್ನೇ ಹೊಂದಿ ಪಾನದ ವಿಷಯವನ್ನೇ ಮಾತನಾಡುತ್ತಾ ಪಾನದ ಕಾಲವನ್ನು ನಿರೀಕ್ಷಿಸುತ್ತಿರುತ್ತಾರೆ. ಪಾನಕ್ಕಾಗಿಯೇ ಎಲ್ಲ ಕರ್ಮಗಳನ್ನು ಮಾಡುತ್ತಾರೆ.

ಪಾನಕಾಮಾಸ್ತೃಷಾಯೋಗಾದ್ ಬುದ್ಧಿಸತ್ತ್ವಪರಿಕ್ಷಯಾತ್ ।
ಪಾನಪಾನಾಂ ಪ್ರೇಷ್ಯಕರಾಃ ಪಾನಪಾಸ್ತ್ವಭವನ್ ಭೃಶಮ್ ॥೪೪॥

ಅನಂತರ ಅಂತಹ ಪಾನ ಮಾಡುವವರು ಪಾನಕಾಮರಾಗಿ, ಪುನಃ ಪಾನವನ್ನು ಮಾಡುವ ಆಸೆಯನ್ನು ಹೊಂದಿ, ಬುದ್ಧಿ-ಬಲಗಳನ್ನು ಕಳೆದುಕೊಂಡು, ಪಾನ ಮಾಡಿಸುವವರಿಗೇ ಸೇವಕರಾದರು.

ತದಾಪ್ರಭೃತಿ ವೈ ಲೋಕೇ ನೀಚೈಃ ಪಾನವಶೈರ್ನರೈಃ ।
ಕಾರಯಂತಿ ಚ ಕರ್ಮಾಣಿ ಬುದ್ಧಿಮಂತಸ್ತ್ವಪಾನಪಾಃ ॥೪೫॥

ಆಗಿನಿಂದ ಪ್ರಾರಂಭಿಸಿ ಪಾನ ಮಾಡದಿರುವ ಬುದ್ಧಿವಂತರಾದ ಜನರು ಪಾನ ಮಾಡುವ ನೀಚರ ಕೈಯಲ್ಲಿ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ.

ಕಾಕೃತ್ವಮಥ ದಾಸತ್ವಂ ಪ್ರೇಷ್ಯತಾಮೇತ್ಯ ಪಾನಪಾಃ ।
ಸರ್ವಕರ್ಮಕರಾಶ್ಚಾಸನ್ ಪಶುವದ್ ರಜ್ಜುಬಂಧಿತಾಃ ॥೪೬॥

ಪಾನ ಮಾಡುವವರು ಯಾವ ನೀಚಕರ್ಮಗಳನ್ನು ಬೇಕಾದರೂ ಮಾಡುತ್ತಾ, ಸೇವಕರಾಗಿ ಹಗ್ಗದಿಂದ ಕಟ್ಟಲ್ಪಟ್ಟ ಪಶುಗಳಂತೆ ಎಲ್ಲ ಕಾರ್ಯಗಳನ್ನೂ ಮಾಡಲು ಪ್ರಾರಂಭಿಸಿದರು.

ಪಾನಪಸ್ತು ಮದಾಂಧತ್ವಾತ್ ತದಾ ಬುದ್ಧಿಪ್ರಣಾಶನಾತ್ ।
ಕಾರ್ಯಾಕಾರ್ಯಸ್ಯ ಚಾಜ್ಞಾನಾದ್ ಯಥೇಷ್ಟಕರಣಾತ್ ಸ್ವಯಮ್ ।
ವಿದುಷಾಮವಿಧೇಯತ್ವಾತ್ ಪಾಪಮೇವಾಭಿಪದ್ಯತೇ ॥೪೭॥

ಪಾನ ಮಾಡುವವರಾದರೂ ಮದಾಂಧರಾಗಿ ಬುದ್ಧಿಯನ್ನು ಕಳೆದುಕೊಂಡು ಕಾರ್ಯಾಕಾರ್ಯ ವಿವೇಕವಿಲ್ಲದೆ, ಮನಸ್ಸಿಗೆ ಬಂದಂತೆ ವರ್ತಿಸುತ್ತಾ, ವಿವೇಕಿಗಳಿಗೆ ಅವಿಧೇಯರಾಗಿ ಪುನಃ ಪಾಪವನ್ನು ಮಾಡುತ್ತಾರೆ.

ಪರಿಭೂತೋ ಭವೇಲ್ಲೋಕೇ ಮದ್ಯಪೋ ಮಿತ್ರಭೇದಕಃ ।
ಸರ್ವಕಾಲಮಶುದ್ಧಶ್ಚ ಸರ್ವಭಕ್ಷಸ್ತಥಾಭವತ್ ॥೪೮॥

ಪಾನವನ್ನು ಮಾಡಿದವನು ಲೋಕದಲ್ಲಿ ಅವಮಾನಕ್ಕೊಳಗಾಗುತ್ತಾನೆ. ಮಿತ್ರಭೇದವನ್ನು ಮಾಡುತ್ತಾನೆ. ಸರ್ವಕಾಲದಲ್ಲಿಯೂ ಅಶುದ್ಧನಾಗಿರುತ್ತಾನೆ ಮತ್ತು ಸರ್ವಭಕ್ಷಕನಾಗಿರುತ್ತಾನೆ.

ವಿಶಿಷ್ಟೈರ್ಜ್ಞಾತಿಭಿರ್ದ್ವೇಷ್ಯಃ ಸತತಂ ಕಲಿಭಾವನಃ ।
ಕಟುಕಂ ಪರುಷಂ ಘೋರಂ ವಾಕ್ಯಂ ವದತಿ ಸರ್ವಶಃ ॥೪೯॥

ತನ್ನ ಬಂಧುಗಳ ದ್ವೇಷಕ್ಕೆ ಪಾತ್ರನಾಗುತ್ತಾನೆ. ಯಾವಾಗಲೂ ಕಲಹವನ್ನು ಉಂಟುಮಾಡುತ್ತಿರುತ್ತಾನೆ. ತೀಕ್ಷ್ಣವಾದ, ಘೋರವಾದ, ಒರಟಾದ ಮಾತನ್ನು ಆಡುತ್ತಾನೆ.

ಗುರೂನತಿವದೇನ್ಮತ್ತಃ ಪರದಾರಾನ್ ಪ್ರಧರ್ಷಯೇತ್ ।
ಸಂವಿದಂ ಕುರುತೇ ಶೌಂಡೈರ್ನ ಶೃಣೋತಿ ಹಿತಂ ಕ್ವಚಿತ್ ॥೫೦॥

ಮತ್ತನಾಗಿ ಗುರುಗಳನ್ನೂ ನಿರಾಕರಿಸುತ್ತಾನೆ. ಪರಸ್ತ್ರೀಯರನ್ನು ಅವಮಾನಗೊಳಿಸುತ್ತಾನೆ. ಬಹಳ ದೊಡ್ಡವರ ಜೊತೆಯಲ್ಲಿ ಮಾತನಾಡುತ್ತಾನೆ. ಹಿತವಚನಗಳನ್ನು ಕೇಳುವುದಿಲ್ಲ.

ಏವಂ ಬಹುವಿಧಾ ದೋಷಾಃ ಪಾನಪೇ ಸಂತಿ ಶೋಭನೇ ।
ಕೇವಲಂ ನರಕಂ ಯಾಂತಿ ನಾಸ್ತಿ ತತ್ರ ವಿಚಾರಣಾ ।
ತಸ್ಮಾತ್ ತದ್ ವರ್ಜಿತಂ ಸದ್ಭಿಃ ಪಾನಮಾತ್ಮಹಿತೈಷಿಭಿಃ ॥೫೧॥

ಎಲೌ ಶೋಭನೆಯೇ, ಪಾನ ಮಾಡುವವನಲ್ಲಿ ಇಂತಹ ಬಹುವಿಧವಾದ ದೋಷಗಳಿರುತ್ತವೆ. ಅವರೆಲ್ಲರೂ ನರಕಕ್ಕೆ ಹೋಗುತ್ತಾರೆ. ಇದರಲ್ಲಿ ಬೇರೆ ವಿಚಾರವೇ ಇಲ್ಲ. ಆದ್ದರಿಂದ ತಮ್ಮ ಹಿತವನ್ನು ಬಯಸುವ ಸಜ್ಜನರು ಪಾನವನ್ನು ಪರಿತ್ಯಜಿಸಿದ್ದಾರೆ.

ಯದಿ ಪಾನಂ ನ ವರ್ಜೇರನ್ ಸಂತಶ್ಚಾರಿತ್ರಕಾರಣಾತ್ ।
ಭವೇದೇವಂ ಜಗತ್ ಸರ್ವಂ ನಿರ್ಮರ್ಯಾದಂ ಚ ನಿಷ್ಕ್ರಿಯಮ್ ॥೫೨॥

ಸಜ್ಜನರೂ ಸಹ ತಮ್ಮ ಶೀಲವನ್ನು ರಕ್ಷಿಸಿಕೊಳ್ಳಲು ಪಾನವನ್ನು ವರ್ಜಿಸದಿದ್ದರೆ ಜಗತ್ತೆಲ್ಲವೂ ಯಾವ ನಡತೆಯ ಎಲ್ಲೆಯೂ ಇಲ್ಲದೆ ನಿಷ್ಕ್ರಿಯವಾಗಿರುತ್ತಿದ್ದಿತು.

ತಸ್ಮಾದ್ ಬುದ್ಧೇರ್ಹಿ ರಕ್ಷಾರ್ಥಂ ಸದ್ಭಿಃ ಪಾನಂ ವಿವರ್ಜಿತಮ್ ।
ಇತಿ ತೇ ದುಷ್ಕೃತಂ ಸರ್ವಂ ತ್ರಿವಿಧಂ ಕಥಿತಂ ಪ್ರಿಯೇ ॥೫೩॥

ಆದ್ದರಿಂದ ಸಜ್ಜನರು ತಮ್ಮ ಬುದ್ಧಿಯನ್ನು ರಕ್ಷಿಸಿಕೊಳ್ಳಲು ಪಾನವನ್ನು ವರ್ಜಿಸಿದ್ದಾರೆ. ಪ್ರಿಯೆಯೇ, ನಿನಗೆ ನಾನು ಮೂರು ವಿಧವಾದ ಎಲ್ಲಾ ದುಷ್ಕರ್ಮಗಳನ್ನು ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮಪರ್ವಣಿ ಷೋಡಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಹದಿನಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಹದಿನೇಳನೆಯ ಅಧ್ಯಾಯ

ಉಮಾ-ಮಹೇಶ್ವರಸಂವಾದ. ಸುಕೃತವಿಭಾಗಕಥನ.

ಮಹೇಶ್ವರಃ

ವಿಧಾನಂ ಸುಕೃತಸ್ಯಾಪಿ ಭೂಯಃ ಶೃಣು ಶುಚಿಸ್ಮಿತೇ ।
ಪ್ರೋಚ್ಯತೇ ತತ್ ತ್ರಿಧಾ ದೇವಿ ಸುಕೃತಂ ಚ ಸಮಾಸತಃ ॥೧॥

ಮಹೇಶ್ವರ– ಶುಚಿಸ್ಮಿತೆಯೇ, ಸುಕೃತದ ವಿಧಾನವನ್ನು ಕೇಳು. ದೇವಿಯೇ, ಸುಕೃತವೂ ಸಹ ಸಂಕ್ಷೇಪವಾಗಿ ಮೂರು ವಿಧವೆಂದು ಹೇಳಲ್ಪಡುತ್ತದೆ.

ಯದೌಪರಮಿತಂ ಚೈವ ಸುಕೃತಂ ನಿರುಪದ್ರವಮ್ ।
ತಥೈವ ಸೋಪಕರಣಂ ತಾವತಾ ಸುಕೃತಂ ವಿದುಃ ॥೨॥

ಔಪರಮಿತ, ನಿರುಪದ್ರವ (ನಿರುಪಸಾಧನ) ಮತ್ತು ಸೋಪಕರಣ ಎಂದು ಸುಕೃತದ ಮೂರು ವಿಧಗಳು.

ನಿವೃತ್ತಿಃ ಪಾಪಕರ್ಮಭ್ಯಸ್ತದೌಪರಮಿತಂ ಪ್ರಿಯೇ ।
ಮನೋವಾಕ್ಕಾಯಜಾ ದೋಷಾಃ ಶೃಣು ಮೇ ವರ್ಜನಾಚ್ಛುಭಮ್ ॥೩॥

ಪ್ರಿಯೆಯೇ, ಪಾಪಕರ್ಮಗಳಿಂದ ನಿವೃತ್ತಿಯು ಔಪರಮಿತ ಎಂದು ಹೇಳಲ್ಪಡುತ್ತದೆ. ಮನೋ-ವಾಕ್-ಶರೀರದ ದೋಷಗಳು ಏನಿವೆಯೋ ಅವುಗಳ ಪರಿತ್ಯಾಗವು ಶುಭವನ್ನುಂಟು ಮಾಡುತ್ತದೆ ಎಂದು ನನ್ನಿಂದ ಕೇಳು.

ತ್ರೈವಿಧ್ಯದೋಷೋಪರಮೇ ಯಸ್ತು ದೋಷವ್ಯಪೇಕ್ಷಯಾ ।
ಸ ಹಿ ಪ್ರಾಪ್ನೋತಿ ಸಕಲಂ ಸರ್ವದುಷ್ಕೃತವರ್ಜನಾತ್ ॥೪॥

ಹಿಂದೆ ಹೇಳಿದ ಮೂರು ವಿಧವಾದ ದೋಷಗಳನ್ನು ಪರಿತ್ಯಾಗ ಮಾಡಿದರೆ ದೋಷದ ಅಪೇಕ್ಷೆಯನ್ನು ಬಿಡುವುದರಿಂದ ಜೀವನು ಎಲ್ಲವನ್ನೂ ಪಡೆಯುತ್ತಾನೆ.

ಪ್ರಥಮಂ ವರ್ಜಯೇದ್ ದೋಷಾನ್ ಯುಗಪತ್ ಪೃಥಗೇವ ವಾ ।
ತಥಾ ಧರ್ಮಮವಾಪ್ನೋತಿ ದೋಷತ್ಯಾಗೋ ಹಿ ದುಷ್ಕರಃ ।
ದೋಷಸಾಕಲ್ಯಸಂತ್ಯಾಗಾನ್ಮುನಿರ್ಭವತಿ ಮಾನವಃ ॥೫॥

ಮೊದಲು ದೋಷಗಳನ್ನು ಒಂದೊಂದಾಗಿ ಅಥವಾ ಒಟ್ಟಿಗೆ ಬಿಡಬೇಕು. ಅದರಿಂದ ಧರ್ಮವುಂಟಾಗುತ್ತದೆ. ದೋಷತ್ಯಾಗವು ಕಷ್ಟಸಾಧ್ಯವಾದುದು. ಸಕಲ ದೋಷಗಳನ್ನು ತ್ಯಜಿಸುವುದರಿಂದ ಮನುಷ್ಯನು ಮುನಿಯಾಗುತ್ತಾನೆ.

ಸೌಕರ್ಯಂ ಪಶ್ಯ ಧರ್ಮಸ್ಯ ಕಾರ್ಯಾರಂಭಾದೃತೇऽಪಿ ಚ ।
ಆತ್ಮನಾ ಸ್ಥಾಪನಾಮಾತ್ರಾಲ್ಲಭಂತೇ ಸುಕೃತಂ ಪರಮ್ ॥೬॥

ಧರ್ಮದ ಸೌಕರ್ಯವನ್ನು ನೋಡು. ಕಾರ್ಯಾರಂಭವನ್ನು ಮಾಡದಿದ್ದರೂ ದುಷ್ಕರ್ಮಗಳಿಗೆ ಹೋಗದಂತೆ ಮನಸ್ಸನ್ನು ತಡೆಯುವ ಮಾತ್ರದಿಂದ ಶ್ರೇಷ್ಠವಾದ ಸುಕೃತವು ಉಂಟಾಗುತ್ತದೆ.

ಅಹೋ ನೃಶಂಸಾಃ ಪಚ್ಯಂತೇ ಮಾನುಷಾಃ ಸ್ವಲ್ಪಬುದ್ಧಯಃ ।
ಯೇ ತಾದೃಶಂ ನ ಬುಧ್ಯಂತೇ ಆತ್ಮಾಧೀನಂ ನ ನಿರ್ವ್ಯಯಮ್ ॥೭॥

ಅಯ್ಯೋ ಕ್ರೂರಿಗಳಾದ ಮನುಷ್ಯರು ನರಕದಲ್ಲಿ ಬೇಯಿಸಲ್ಪಡುತ್ತಾರೆ! ಸ್ವಲ್ಪ ಬುದ್ಧಿಯುಳ್ಳ ಅಂತಹ ಮನುಷ್ಯರು ಯಾವ ವ್ಯಯವನ್ನೂ (ಖರ್ಚು) ಉಂಟುಮಾಡದ, ತಮಗೆ ಅಧೀನವಾದ ಇಂತಹ ಸುಕೃತ ಸಾಧನವನ್ನು ತಿಳಿಯುವುದಿಲ್ಲ.

ದುಷ್ಕೃತತ್ಯಾಗಮಾತ್ರೇಣ ಪದಮೂರ್ಧ್ವಂ ಹಿ ಲಭ್ಯತೇ ॥೮॥

ದುಷ್ಕೃತವನ್ನು ತ್ಯಾಗ ಮಾಡುವ ಮಾತ್ರದಿಂದ ಊರ್ಧ್ವಸ್ಥಾನಗಳು ಲಭಿಸುತ್ತವೆ.

ಪಾಪಭೀರುತ್ವಮಾತ್ರೇಣ ದೋಷಾಣಾಂ ಪರಿವರ್ಜನಾತ್ ।
ಸುಶೋಭನಂ ಭವೇದ್ ದೇವಿ ಕಿಮು ಧರ್ಮವ್ಯಪೇಕ್ಷಯಾ ।
ಇತ್ಯೌಪರಮಿತಂ(ಕಂ) ದೇವಿ ಸುಕೃತಂ ಕಥಿತಂ ತವ ॥೯॥

ಎಲೌ ದೇವಿಯೇ, ಪಾಪಕ್ಕೆ ಹೆದರಿ ದೋಷವನ್ನು ಪರಿತ್ಯಾಗ ಮಾಡುವುದರಿಂದಲೇ ಒಳ್ಳೆಯ ಫಲ ಉಂಟಾಗುತ್ತದೆ. ಇನ್ನು ಧರ್ಮಾಚರಣೆಯನ್ನು ಮಾಡಿದರೆ ಹೇಳುವುದೇನು? ಹೀಗೆ ಔಪರಮಿತ ಸುಕೃತವನ್ನು ನಿನಗೆ ಹೇಳಿದ್ದೇನೆ.

ಶ್ರುತಾಚ್ಚ ವೃದ್ಧಸಂಯೋಗಾದಿಂದ್ರಿಯಾಣಾಂ ಚ ನಿಗ್ರಹಾತ್ ।
ಸಂತೋಷಾಚ್ಚ ಧೃತೇಶ್ಚೈವ ಶಕ್ಯತೇ ದೋಷವರ್ಜನಮ್ ॥೧೦॥

ವಿದ್ಯೆಯಿಂದಲೂ, ದೊಡ್ಡವರ ಸಹವಾಸದಿಂದಲೂ, ಇಂದ್ರಿಯನಿಗ್ರಹದಿಂದಲೂ, ಮನಸ್ಸಂತೋಷದಿಂದಲೂ ಮತ್ತು ಧೈರ್ಯದಿಂದಲೂ ದೋಷಗಳನ್ನು ಪರಿತ್ಯಾಗ ಮಾಡುವುದು ಸಾಧ್ಯವಾಗುತ್ತದೆ.

ತದೇವ ಯಮ ಇತ್ಯಾಹುರ್ದೋಷಸಂಯಮನಂ ಪ್ರಿಯೇ ।
ಯಮಧರ್ಮೇಣ ಧರ್ಮೋऽಸ್ತಿ ನಾನ್ಯಃ ಶುಭತರಃ ಪ್ರಿಯೇ ।
ಯಮಧರ್ಮೇಣ ಯತಯಃ ಪ್ರಾಪ್ನುವಂತ್ಯುತ್ತಮಾಂ ಗತಿಮ್ ॥೧೧॥

ಪ್ರಿಯೆಯೇ, ಈ ದೋಷಗಳನ್ನು ನಿಯಂತ್ರಣ ಮಾಡುವ ವಿಧಾನಗಳನ್ನೇ ಯಮ ಎಂದು ಹೇಳುತ್ತಾರೆ. ಪ್ರಿಯೆಯೇ, ಯಮಧರ್ಮಕ್ಕಿಂತ ಶುಭತರವಾದ ಧರ್ಮವು ಇನ್ನೊಂದಿಲ್ಲ. ಯತಿಗಳು ಯಮಧರ್ಮದಿಂದ ಉತ್ತಮ ಗತಿಯನ್ನು ಹೊಂದುತ್ತಾರೆ.

ಈಶ್ವರಾಣಾಂ ಪ್ರಭವತಾಂ ದರಿದ್ರಾಣಾಂ ಚ ವೈ ನೃಣಾಮ್ ।
ಸಫಲೋ ದೋಷಸಂತ್ಯಾಗೋ ದಾನಾದಪಿ ಶುಭಾದಪಿ ॥೧೨॥

ಧನಾಢ್ಯರಾದವರಿಗೂ, ಪ್ರಭುಗಳಿಗೂ, ದರಿದ್ರರಾದ ಮನುಷ್ಯರಿಗೂ ದೋಷ ಸಂತ್ಯಾಗವು ದಾನದಿಂದ ಉಂಟಾಗುವ, ಶುಭದಿಂದ ಉಂಟಾಗುವ ಫಲಗಳಿಗಿಂತಲೂ ಹೆಚ್ಚಿನ ಫಲವನ್ನು ಕೊಡುತ್ತದೆ.

ತಪೋ ದಾನಂ ಮಹಾದೇವಿ ದೋಷಮಲ್ಪಂ ವಿನಿರ್ದಹೇತ್ ।
ಸುಕೃತಂ ಯಾಮಿಕಂ ಪ್ರೋಕ್ತಂ ವಕ್ಷ್ಯೇ ನಿರುಪಸಾಧನಮ್ ॥೧೩॥

ಎಲೌ ಮಹಾದೇವಿಯೇ, ತಪಸ್ಸು ಮತ್ತು ದಾನಗಳು ಅಲ್ಪಪ್ರಮಾಣದಲ್ಲಿ ಮಾತ್ರ ದೋಷಗಳನ್ನು ವಿನಾಶಗೊಳಿಸುತ್ತವೆ. ಈ ಯಮಸಂಬಂಧಿಯಾದ ಸುಕೃತವನ್ನು ನಿನಗೆ ಹೇಳಿದ್ದೇನೆ. ಇನ್ನು ನಿರುಪಸಾಧನವನ್ನು ನಿನಗೆ ಹೇಳುವೆನು.

ಸುಖಾಭಿಸಂಧಿರ್ಲೋಕಾನಾಂ ಸತ್ಯಂ ಶೌಚಮಥಾರ್ಜವಮ್ ।
ವ್ರತೋಪವಾಸಃ ಪ್ರೀತಿಶ್ಚ ಬ್ರಹ್ಮಚರ್ಯಂ ದಮಃ ಶಮಃ ॥೧೪॥

ಏವಮಾದಿ ಶುಭಂ ಕರ್ಮ ಸುಕೃತಂ ನಿಯಮಾಶ್ರಿತಮ್ ।
ಶೃಣು ತೇಷಾಂ ವಿಶೇಷಾಂಶ್ಚ ಕೀರ್ತಯಿಷ್ಯಾಮಿ ಭಾಮಿನಿ ॥೧೫॥

ಲೋಕಗಳಿಗೆ ಸುಖವಾಗಲಿ ಎಂಬ ಇಚ್ಛೆ, ಸತ್ಯವಚನ, ಶೌಚ, ಋಜುತನ, ವ್ರತೋಪವಾಸಗಳು, ಸಂತೋಷ, ಬ್ರಹ್ಮಚರ್ಯ, ಇಂದ್ರಿಯನಿಗ್ರಹ, ಭಗವನ್ನಿಷ್ಠೆ - ಇವೆಲ್ಲವೂ ಯಮನಿಯಮಗಳಲ್ಲಿ ಯಮಕ್ಕೆ ಸಂಬಂಧಿಸಿದ ಸುಕೃತ. ಎಲೌ ಭಾಮಿನಿಯೇ, ಅವುಗಳ ವಿಶೇಷವನ್ನು ಹೇಳುವೆನು. ಅದನ್ನು ಕೇಳು.

ಸತ್ಯಂ ಸ್ವರ್ಗಸ್ಯ ಸೋಪಾನಂ ಪಾರಾವಾರಸ್ಯ ನೌರಿವ ।
ನಾಸ್ತಿ ಸತ್ಯಾತ್‌ಪರಂ ದಾನಂ ನಾಸ್ತಿ ಸತ್ಯಾತ್‌ಪರಂ ತಪಃ ॥೧೬॥

ಸಮುದ್ರವನ್ನು ದಾಟುವುದಕ್ಕೆ ನೌಕೆಯಂತೆ ಸ್ವರ್ಗವನ್ನು ಹೊಂದುವುದಕ್ಕೆ ಸತ್ಯವು ಸೋಪಾನ ರೂಪವಾದುದು. ಸತ್ಯಕ್ಕಿಂತಲೂ ಶ್ರೇಷ್ಠವಾದ ದಾನವಿಲ್ಲ. ಸತ್ಯಕ್ಕಿಂತಲೂ ಶ್ರೇಷ್ಠವಾದ ತಪಸ್ಸಿಲ್ಲ.

ಯಥಾ ಶ್ರುತಂ ಯಥಾ ದೃಷ್ಟಮಾತ್ಮನಾ ಯದ್ಯಥಾ ಕೃತಮ್ ।
ತಥಾ ಸತ್ಯೋಪಕಾರೇಣ ವಚನಂ ಸತ್ಯಲಕ್ಷಣಮ್ ॥೧೭॥

ನಾವು ನೋಡಿದಂತೆ ಅಥವಾ ಕೇಳಿದಂತೆ ಅಥವಾ ಮಾಡಿದಂತೆ ಅಥವಾ ಸಜ್ಜನರಿಗೆ ಉಪಕಾರವಾಗುವಂತೆ ಮಾತನಾಡುವುದು ಸತ್ಯದ ಲಕ್ಷಣ.

ಯಚ್ಛಲೇನಾಭಿಸಂಯುಕ್ತಂ ಸತ್ಯರೂಪಂ ಮೃಷೈವ ತತ್ ।
ನಿತ್ಯಮೇವ ಪ್ರವಕ್ತವ್ಯಂ ಪಾರಾವರ್ಯಂ ವಿಜಾನತಾ ॥೧೮॥

ಕಪಟದ ಉದ್ದೇಶದಿಂದ ಸತ್ಯವಚನವನ್ನು ಆಡಿದರೂ ಅದು ಅನೃತವೇ ಸರಿ. ಉಚ್ಚ-ನೀಚ ಭಾವವನ್ನು ತಿಳಿದವನು ಯಾವಾಗಲೂ ಸತ್ಯವನ್ನೇ ಮಾತನಾಡಬೇಕು.

ದೀರ್ಘಾಯುಶ್ಚ ಭವೇತ್ ಸತ್ಯಾತ್ ಕುಲಸಂತಾನಪಾಲಕಃ ।
ಲೋಕಸಂಸ್ಥಿತಿಪಾಲಶ್ಚ ಭವೇತ್ ಸತ್ಯೇನ ಮಾನವಃ ॥೧೯॥

ಸತ್ಯವಚನದಿಂದ ಮನುಷ್ಯನು ದೀರ್ಘಾಯುವೂ, ಕುಲ-ಸಂತತಿಯನ್ನು ರಕ್ಷಿಸುವವನೂ, ಲೋಕಸಂಸ್ಥಿತಿಯನ್ನು ರಕ್ಷಿಸುವವನೂ ಆಗುತ್ತಾನೆ.

ಉಮಾ

ಕಥಂ ಸಂಧಾರಯನ್ ಮರ್ತ್ಯೋ ವ್ರತಂ ಶುಭಮವಾಪ್ನುಯಾತ್ ॥೨೦॥

ಉಮಾ– ಕೇವಲ ತನ್ನನ್ನು ಪಾಪದಿಂದ ತಡೆದುಕೊಳ್ಳುವ ಮನುಷ್ಯನು ಶುಭವ್ರತ ಫಲವನ್ನು ಹೇಗೆ ಹೊಂದುತ್ತಾನೆ?

ಮಹೇಶ್ವರಃ

ಪೂರ್ವಮುಕ್ತಂ ತು ಯತ್ಪಾಪಂ ಮನೋವಾಕ್ಕಾಯಕರ್ಮಭಿಃ ।
ವ್ರತವತ್ತಸ್ಯ ಸಂತ್ಯಾಗಸ್ತದೌಪರಮಿತಂ ಸ್ಮೃತಮ್ ॥೨೧॥

ಮಹೇಶ್ವರ– ಹಿಂದೆ ಮನೋವಾಕ್-ಕಾಯಗಳಿಂದ ಉಂಟಾಗುವ ಮೂರು ವಿಧವಾದ ಪಾಪಗಳನ್ನು ಹೇಳಿದ್ದೇನೆ. ವ್ರತಗಳಂತೆ ಅವುಗಳ ಪರಿತ್ಯಾಗವು ಔಪರಮಿತ ಸುಕೃತವೆಂದು ಹೇಳಲ್ಪಡುತ್ತದೆ.

ತೇನ ಧರ್ಮಮವಾಪ್ನೋತಿ ವ್ರತವತ್ ಪರಿಪಾಲಯನ್ ।
ಮಂಗಲಂ ಶುಭಕರ್ಮಾಣಿ ವ್ರತೇನೈವ ಸಮಾಚರೇತ್ ।
ನರೋ ಧರ್ಮಮವಾಪ್ನೋತಿ ಶುಭಸಂಜೋಷಣಂ ವ್ರತಮ್ ॥೨೨॥

ವ್ರತದಂತೆ ಆ ಪರಿತ್ಯಾಗಗಳನ್ನು ರಕ್ಷಿಸುವವನು ಅದರಿಂದ ಧರ್ಮವನ್ನು ಹೊಂದುತ್ತಾನೆ. ಮಂಗಳ ಮತ್ತು ಶುಭಕರ್ಮಗಳನ್ನು ಅಂತಹ ವ್ರತದಿಂದ ಕೂಡಿಯೇ ಆಚರಿಸಬೇಕು. ಅಂತಹ ಶುಭಕರ್ಮವನ್ನು ಮತ್ತು ವ್ರತವನ್ನು ಆಚರಿಸುವ ಮನುಷ್ಯನು ಧರ್ಮವನ್ನು ಹೊಂದುತ್ತಾನೆ.

ಯದ್ಯದಾತ್ಮಪ್ರಿಯಂ ನಿತ್ಯಂ ಮನೋವಾಕ್ಕಾಯಕರ್ಮಭಿಃ ।
ವ್ರತವತ್ತಸ್ಯ ಸಂತ್ಯಾಗಸ್ತಪೋವ್ರತಮಿತಿ ಸ್ಥಿತಮ್ ॥೨೩॥

ತನಗೆ ಪ್ರಿಯವಾದ ವಸ್ತುಗಳನ್ನು ಮನೋ-ವಾಕ್-ಕಾಯಕರ್ಮಗಳಿಂದ ವ್ರತದಂತೆ ಪರಿತ್ಯಾಗ ಮಾಡುವುದು ತಪೋವ್ರತವೆಂದು ಹೇಳಲ್ಪಡುತ್ತದೆ.

ತ್ಯಾಜ್ಯಂ ವಾ ಯದಿ ವಾ ಜೋಷ್ಯಮವ್ರತೇನ ವೃಥಾ ಚರನ್ ।
ತಥಾ ಫಲಂ ನ ಲಭತೇ ತಸ್ಮಾದ್ಧರ್ಮಂ ವ್ರತಾಚ್ಚರೇತ್ ॥೨೪॥

ತ್ಯಾಜ್ಯವಾದ ಅಥವಾ ಭೋಜ್ಯವಾದ ವಸ್ತುವನ್ನು ವ್ರತಶೂನ್ಯನಾಗಿ ಸೇವಿಸಿದರೆ ಅದು ಫಲವನ್ನು ಕೊಡುವುದಿಲ್ಲ. ಆದ್ದರಿಂದ ವ್ರತಸಹಿತವಾಗಿಯೇ ಧರ್ಮವನ್ನು ಆಚರಿಸಬೇಕು.

ಶುದ್ಧಕಾಯೋ ನರೋ ಭೂತ್ವಾ ಸ್ನಾತ್ವಾ ತೀರ್ಥೇ ಯಥಾವಿಧಿ ।
ಪಂಚಭೂತಾನಿ ಚಂದ್ರಾರ್ಕೌ ಸಂಧ್ಯೇ ಧರ್ಮಂ ಯಮಂ ಪಿತೄನ್ ॥

ಆತ್ಮನ್ಯೇವ ರತಾನ್ ಮತ್ವಾ ನಿರ್ಬಂಧವ್ರತಮಾಚರೇತ್ ।
ವ್ರತಮಾಮರಣಾದ್ ವಾऽಪಿ ಕಾಲಚ್ಛೇದೇನ ವಾ ಹರೇತ್ ॥೨೬॥

ಮನುಷ್ಯನು ತೀರ್ಥದಲ್ಲಿ ವಿಧಿಗೆ ಅನುಗುಣವಾಗಿ ಸ್ನಾನವನ್ನು ಮಾಡಿ, ಶರೀರ ಶುದ್ಧಿಯನ್ನು ಹೊಂದಿ ಪಂಚಭೂತಗಳು, ಸೂರ್ಯ-ಚಂದ್ರರು, ಸಂಧ್ಯೆಗಳು, ಧರ್ಮ-ಯಮ-ಪಿತೃಗಳು ಪರಮಾತ್ಮನಲ್ಲಿಯೇ ರತರಾಗಿದ್ದಾರೆಂದು ಚಿಂತಿಸಿ ನಿರ್ಬಂಧದಿಂದ ವ್ರತವನ್ನು ಮಾಡಬೇಕು (ಇವೆಲ್ಲವೂ ಪರಮಾತ್ಮನ ಅಧೀನವೆಂದು ತಿಳಿದು ಶರೀರ ಶೋಷಕವಾದ ವ್ರತವನ್ನು ಆರಂಭಿಸಬೇಕು). ವ್ರತವನ್ನು ಪರಿಮಿತ ಕಾಲದವರೆಗೆ ಅಥವಾ ಮರಣ ಕಾಲದವರೆಗೆ ಮಾಡಬಹುದು-ಲಕ್ಷಾಲಂಕಾರ.

ಶಾಕಾದಿಷು ವ್ರತಂ ಕುರ್ಯಾತ್ತಥಾ ಪುಷ್ಪಫಲಾದಿಷು ।
ಬ್ರಹ್ಮಚರ್ಯಂ ವ್ರತಂ ಕುರ್ಯಾದುಪವಾಸಂ ತಥಾ ವ್ರತಮ್ ॥೨೭॥

ಶಾಕಾದಿಗಳ ವಿಷಯದಲ್ಲಿ, ಪುಷ್ಪಫಲಾದಿಗಳ ವಿಷಯದಲ್ಲಿ ಅಂತಹ ವ್ರತವನ್ನು ಮಾಡಬೇಕು. ಬ್ರಹ್ಮಚರ್ಯದ ವಿಷಯದಲ್ಲಿ, ಉಪವಾಸದ ವಿಷಯದಲ್ಲಿಯೂ ಸಹ ವ್ರತವನ್ನು ಮಾಡಬೇಕು.

ಏವಮನ್ಯೇಷು ಬಹುಷು ವ್ರತಂ ಕಾರ್ಯಂ ಹಿತೈಷಿಣಾ ।
ವ್ರತಭಂಗೋ ಯಥಾ ನ ಸ್ಯಾದ್ ರಕ್ಷಿತವ್ಯಂ ತಥಾ ಬುಧೈಃ ।
ವ್ರತಭಂಗೋ ಮಹತ್‌ಪಾಪಮಿತಿ ವಿದ್ಧಿ ಶುಭೇಕ್ಷಣೇ ॥೨೮॥

ಹಾಗೆಯೇ ತನ್ನ ಹಿತವನ್ನು ಬಯಸುವವನು ಉಳಿದ ಅನೇಕ ವಸ್ತುಗಳ ವಿಷಯದಲ್ಲಿಯೂ ವ್ರತವನ್ನು ಮಾಡಬೇಕು. ವಿವೇಕಿಯಾದವನು ಆರಂಭಿಸಿದ ವ್ರತವು ಭಗ್ನವಾಗದಂತೆ ರಕ್ಷಣೆಯನ್ನು ಮಾಡಬೇಕು. ಎಲೌ ಶುಭೇಕ್ಷಣೆಯೇ, ವ್ರತಭಂಗವು ದೊಡ್ಡ ಪಾಪವೆಂದು ತಿಳಿ.

ಔಷಧಾರ್ಥಂ ಯಥಾಜ್ಞಾನಾದ್ ಗುರೂಣಾಂ ವಚನಾದಪಿ ।
ಅನುಗ್ರಹಾರ್ಥಂ ಬಂಧೂನಾಂ ವ್ರತಭಂಗೋ ನ ದುಷ್ಯತೇ ॥೨೯॥

ಔಷಧಿಯ ಸಲುವಾಗಿ ಅಥವಾ ಪ್ರಮಾದದಿಂದ ಅಥವಾ ಹಿರಿಯರ ವಚನದಂತೆ ಅಥವಾ ಬಂಧುಗಳಿಗೆ ಅನುಗ್ರಹವನ್ನು ಮಾಡುವುದಕ್ಕಾಗಿ ಮಾಡಿದ ವ್ರತಭಂಗವು ದೋಷವಾಗುವುದಿಲ್ಲ.

ವ್ರತಾಪವರ್ಗಕಾಲೇಷು ದೈವಬ್ರಾಹ್ಮಣಪೂಜನಮ್ ।
ನರೇಣ ತು ಯಥಾಶಕ್ತಿ ಕಾರ್ಯಂ ಸಿದ್ಧಿಂ ತಥಾऽऽಪ್ನುಯಾತ್ ॥೩೦॥

ವ್ರತವನ್ನು ಉಪಸಂಹಾರ ಮಾಡುವ ಕಾಲದಲ್ಲಿ ಯಥಾಶಕ್ತಿಯಾಗಿ ದೈವ-ಬ್ರಾಹ್ಮಣ ಪೂಜೆಯನ್ನು ಮಾಡುವ ಮನುಷ್ಯನು ಕಾರ್ಯಸಿದ್ಧಿಯನ್ನು ಹೊಂದುತ್ತಾನೆ.

ಉಮಾ

ಕಥಂ ಶೌಚವಿಧಿಸ್ತತ್ರ ತನ್ಮೇ ಶಂಸಿತುಮರ್ಹಸಿ ॥೩೧॥

ಉಮಾ– ವ್ರತಾನುಷ್ಠಾನ ಸಮಯದಲ್ಲಿ ಶೌಚಪ್ರಕಾರವು ಹೇಗಿರುತ್ತದೆ ಎಂದು ನನಗೆ ಹೇಳಬೇಕು.

ಮಹೇಶ್ವರಃ

ಬಾಹ್ಯಮಾಭ್ಯಂತರಂ ಚೇತಿ ದ್ವಿವಿಧಂ ಶೌಚಮಿಷ್ಯತೇ ।
ಮಾನಸಂ ಸುಕೃತಂ ಯತ್ತಚ್ಛೌಚಮಾಭ್ಯಂತರಂ ಸ್ಮೃತಮ್ ॥೩೨॥

ಮಹೇಶ್ವರ– ಶೌಚವು ಬಾಹ್ಯ ಮತ್ತು ಆಂತರಿಕ ಎಂದು ಎರಡು ವಿಧವಾಗಿರುತ್ತದೆ. ಮನಸ್ಸಿನಲ್ಲಿ ಮಾಡುವ ಸುಕೃತವು ಆಂತರಿಕ ಶೌಚವೆಂದು ಹೇಳಲ್ಪಡುತ್ತದೆ.

ಸದಾऽऽಹಾರವಿಶುದ್ಧಿಶ್ಚ ಕಾಯಪ್ರಕ್ಷಾಲನಂ ಚ ಯತ್ ।
ಬಾಹ್ಯಶೌಚಂ ಭವೇದೇತತ್ ತಥೈವಾಚಮನಾದಿನಾ ॥೩೩॥

ಯಾವಾಗಲೂ ಆಹಾರದ ಶುದ್ಧಿ ಮತ್ತು ದೇಹಶುದ್ಧಿಗಳು ಮತ್ತು ಆಚಮನಾದಿಗಳು ಬಾಹ್ಯಶೌಚವೆಂದು ಹೇಳಲ್ಪಡುತ್ತವೆ.

ಮೃಚ್ಚೈವ ಶುದ್ಧದೇಶಸ್ಥಾ ಗೋಶಕೃನ್ಮೂತ್ರಮೇವ ಚ ।
ದ್ರವ್ಯಾಣಿ ಗಂಧಯುಕ್ತಾನಿ ಯಾನಿ ಪುಷ್ಟಿಕರಾಣಿ ಚ ।
ಏತೈಃ ಸಮ್ಮಾರ್ಜಯೇತ್ ಕಾಯಮಂಭಸಾ ಚ ಪುನಃ ಪುನಃ ॥೩೪॥

ಶುದ್ಧದೇಶದ ಮೃತ್ತಿಕೆ, ಗೋಮಯ, ಗೋಮೂತ್ರ, ಪುಷ್ಟಿಕರವಾದ ಸುಗಂಧ ದ್ರವ್ಯಗಳು ಇವುಗಳಿಂದಲೂ ಮತ್ತು ನೀರಿನಿಂದಲೂ ದೇಹವನ್ನು ಪುನಃ ಪುನಃ ತೊಳೆದುಕೊಳ್ಳಬೇಕು.

ಅಕ್ಷೋಭ್ಯಂ ಯತ್ಪ್ರಕೀರ್ಣಂ ಚ ನಿತ್ಯಸ್ರೋತಶ್ಚ ಯಜ್ಜಲಮ್ ।
ಪ್ರಾಯಶಸ್ತಾದೃಶೇ ಮಜ್ಜೇದನ್ಯಥಾ ಚಾಪಿ ವರ್ಜಯೇತ್ ॥೩೫॥

ಅಲುಗಾಡಿಸಲು ಸಾಧ್ಯವಾಗದ ನಿಂತ ನೀರು (ಕೆರೆ-ಸರೋವರ ಮುಂತಾದವು) ಮತ್ತು ನಿತ್ಯಪ್ರವಾಹದಲ್ಲಿರುವ ನೀರು ಇವುಗಳಲ್ಲಿ ಸ್ನಾನ ಮಾಡಬೇಕು. ಬೇರೆ ಜಲಗಳನ್ನು ವರ್ಜಿಸಬೇಕು.

ತ್ರಿಸ್ತ್ರಿರಾಚಮನಂ ಶ್ರೇಷ್ಠಂ ನಿಷ್ಫೇನೈರ್ನಿರ್ಮಲೈರ್ಜಲೈಃ ।
ತಥಾ ವಿಣ್ಮೂತ್ರಯೋಃ ಶುದ್ಧಿರದ್ಭಿರ್ಬಹುಮೃದಾ ಭವೇತ್ ।
ತಥೈವ ಜಲಸಂಶುದ್ಧಿರ್ಯತ್ಸಂಶುದ್ಧಂ ತು ಸಂಸ್ಪೃಶೇತ್ ॥೩೬॥

ನೊರೆಯಿಲ್ಲದ ನಿರ್ಮಲವಾದ ಜಲದಿಂದ ಮೂರುಬಾರಿ ಆಚಮನವನ್ನು ಮಾಡಬೇಕು. ಹಾಗೆಯೇ ಮಲ-ಮೂತ್ರ ವಿಸರ್ಜನೆಯನ್ನು ಮಾಡಿದಾಗ ಜಲ ಮತ್ತು ಬಹಳ ಮೃತ್ತಿಕೆಗಳಿಂದ ಶುದ್ಧಿಯಾಗುತ್ತದೆ. ಹಾಗೆಯೇ ಜಲಶುದ್ಧಿಯನ್ನು ಗಮನಿಸಬೇಕು. ಶುದ್ಧವಾದ ಜಲವನ್ನು ಮಾತ್ರ ಉಪಯೋಗಿಸಬೇಕು.

ಶಕೃತಾ ಭೂಮಿಶುದ್ಧಿಃ ಸ್ಯಾಲ್ಲೋಹಾನಾಂ ಭಸ್ಮನಾ ಸ್ಮೃತಮ್ ।
ತಕ್ಷಣಂ ಘರ್ಷಣಂ ಚೈವ ದಾರವಾಣಾಂ ವಿಶೋಧನಮ್ ॥೩೭॥

ಗೋಮಯದಿಂದ ಭೂಶುದ್ಧಿಯಾಗುತ್ತದೆ. ಭಸ್ಮದಿಂದ ಲೋಹ-ಶುದ್ಧಿ ಆಗುತ್ತದೆ. ಮರದ ವಸ್ತುಗಳಿಗೆ ಕೆತ್ತುವುದರಿಂದ ಅಥವಾ ಉಜ್ಜುವುದರಿಂದ ಶುದ್ಧಿಯಾಗುತ್ತದೆ.

ದಹನಂ ಮೃಣ್ಮಯಾನಾಂ ಚ ಮರ್ತ್ಯಾನಾಂ ಕೃಚ್ಛ್ರಧಾರಣಮ್ ।
ಶೇಷಾಣಾಂ ದೇವಿ ಸರ್ವೇಷಾಮಾತಪೇನ ಜಲೇನ ಚ ।
ಬ್ರಾಹ್ಮಣಾನಾಂ ಚ ವಾಕ್ಯೇನ ಸದಾ ಸಂಶೋಧನಂ ಭವೇತ್ ॥೩೮॥

ಮಣ್ಣಿನ ಪಾತ್ರೆಗಳಿಗೆ ದಹನದಿಂದಲೂ, ಮನುಷ್ಯರಿಗೆ ಕೃಚ್ಛ್ರವ್ರತ ಧಾರಣೆಯಿಂದಲೂ ಶುದ್ಧಿಯಾಗುತ್ತದೆ. ಎಲೌ ದೇವಿಯೇ, ಉಳಿದ ಎಲ್ಲಾ

ವಸ್ತುಗಳಿಗೂ ಸೂರ್ಯ ಕಿರಣಗಳಿಂದ ಮತ್ತು ಜಲದಿಂದ ಶುದ್ಧಿಯಾಗುತ್ತದೆ. ಬ್ರಾಹ್ಮಣರ ವಾಕ್ಯದಿಂದಲೂ ಯಾವಾಗಲೂ ಶುದ್ಧಿಯಾಗುತ್ತದೆ.

ಆಮೃಷ್ಟಮದ್ಭಿರ್ನಿರ್ಣಿಕ್ತಂ ಯಚ್ಚ ವಾಚಾ ಪ್ರಶಸ್ಯತೇ ।
ಏವಮಾಪದಿ ಸಂಶುದ್ಧಿರೇವಂ ಶೌಚಂ ವಿಧೀಯತೇ ॥೩೯॥

ಆಪತ್ಕಾಲದಲ್ಲಿ ತೊಳೆಯುವಷ್ಟು ಜಲವಿಲ್ಲದಿದ್ದರೂ ಪಾತ್ರೆಯನ್ನು ಜಲದಿಂದ ಒದ್ದೆ ಮಾಡಿದರೂ ಶುದ್ಧಿಯಾಗುತ್ತದೆ ಮತ್ತು ನಾರಾಯಣ-ಪುಂಡರೀಕಾಕ್ಷಾದಿ ನಾಮಸ್ಮರಣೆಯಿಂದಲೂ ಶುದ್ಧಿಯಾಗುತ್ತದೆ. ಆಪತ್ತಿನಲ್ಲಿ ಶುದ್ಧಿಯ ಕ್ರಮವು ಹೀಗೆ ಹೇಳಲ್ಪಡುತ್ತದೆ.

ಉಮಾ

ಆಹಾರಶುದ್ಧಿಸ್ತು ಕಥಂ ದೇವದೇವ ಮಹೇಶ್ವರ ॥೪೦॥

ಉಮಾ– ಎಲೈ ಮಹೇಶ್ವರನೇ, ದೇವದೇವನೇ, ಆಹಾರಶುದ್ಧಿಯು ಹೇಗೆ ಉಂಟಾಗುತ್ತದೆ?

ಮಹೇಶ್ವರಃ

ಅಮಾಂಸಮದ್ಯಮಕ್ಲೇದ್ಯಮಪರ್ಯುಷಿತಮೇವ ಚ ।
ಅತಿಕಟ್ವಾಮ್ಲಲವಣೈರ್ಹೀನಂ ಚ ಶುಭಗಂಧಿ ಚ ॥೪೧॥

ಕೃಮಿಕೀಟಮಲೈರ್ಹೀನಂ ಸಂಭೃತಂ ಶುದ್ಧಭಾಜನೇ ।
ಏವಂವಿಧಂ ಸದಾಹಾರಂ ದೇವಬ್ರಾಹ್ಮಣಸತ್ಕೃತಮ್ ॥೪೨॥

ಮಹೇಶ್ವರ– ಮಾಂಸಭಕ್ಷಣೆಯನ್ನು ಮಾಡದಿರುವುದು, ಮದ್ಯಪಾನವನ್ನು ಮಾಡದಿರುವುದು, ಹಳಸಿದುದನ್ನು ತಿನ್ನದಿರುವುದು, ತಂಗಳನ್ನು ತಿನ್ನದಿರುವುದು, ಅತಿಯಾದ ಹುಳಿ-ಉಪ್ಪು-ಖಾರಗಳನ್ನು ತಿನ್ನದಿರುವುದು, ಕ್ರಿಮಿ-ಕೀಟ-ಕಶ್ಮಲಗಳಿಂದ ಹೀನವಾದುದನ್ನು ಸೇವಿಸುವುದು, ಶುದ್ಧವಾದ ಪಾತ್ರೆಯಲ್ಲಿ ತುಂಬಿಟ್ಟ, ಒಳ್ಳೆಯ ಗಂಧದಿಂದ ಕೂಡಿದ, ದೇವ-ಬ್ರಾಹ್ಮಣರಿಗೆ ನಿವೇದಿಸಿದ ಒಳ್ಳೆಯ ಆಹಾರವನ್ನು ಸೇವಿಸುವುದು, ಇವು ಆಹಾರ ಶುದ್ಧಿಯ ಕ್ರಮ.

ಶ್ರುತಮಿತ್ಯೇವ ವಿಜ್ಞೇಯಮನ್ಯಥಾ ತ್ವಶುಭಂ ಭವೇತ್ ।
ಗ್ರಾಮ್ಯಾದಾರಣ್ಯಕೈಃ ಸಿದ್ಧಂ ಶುದ್ಧಮಿತ್ಯವಧಾರಯ ॥೪೩॥

ಸೇವಿಸುವ ಆಹಾರವು ಶುಭವಾಗಿದೆ ಎಂದೇ ತಿಳಿದುಕೊಂಡು ಸೇವಿಸಬೇಕು. ಇಲ್ಲದಿದ್ದರೆ ಅಶುಭ ಉಂಟಾಗುತ್ತದೆ. ಗ್ರಾಮದಲ್ಲಿ ದೊರೆಯುವ ಆಹಾರಗಳಿಗಿಂತ ಅರಣ್ಯದಲ್ಲಿ ದೊರೆಯುವ ಆಹಾರಗಳು ಶುದ್ಧವಾಗಿರುತ್ತವೆ ಎಂದು ತಿಳಿ.

ಅತಿಮಾತ್ರಗೃಹೀತಾತ್ತು ಅಲ್ಪದತ್ತಂ ಭವೇಚ್ಛುಚಿ ।
ಯಜ್ಞಶೇಷಂ ಹವಿಃಶೇಷಂ ಪಿತೃಶೇಷಂ ಚ ನಿರ್ಮಲಮ್ ।
ಇತಿ ತೇ ಕಥಿತಂ ದೇವಿ ಭೂಯಃ ಕಿಂ ಶ್ರೋತುಮಿಚ್ಛಸಿ ॥೪೪॥

ಬಹಳ ಪರಿಮಾಣದ ಆಹಾರಕ್ಕಿಂತಲೂ ಅಲ್ಪಪರಿಮಾಣದ ಆಹಾರವು ಶುದ್ಧವಾಗಿರುತ್ತದೆ. ಯಜ್ಞಶೇಷ, ಹವಿಶ್ಶೇಷ ಮತ್ತು ಪಿತೃಶೇಷಗಳು ಯಾವಾಗಲೂ ನಿರ್ಮಲವಾಗಿರುತ್ತವೆ. ದೇವಿಯೇ, ಇದನ್ನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ? (ಸೋಪಕರಣ ಎಂದು ತೃತೀಯ ಸುಕೃತವನ್ನು ಇಲ್ಲಿ ಹೇಳಿಲ್ಲ. ಅದನ್ನು ಮುಂದೆ ಇನ್ನೂರ ಹತ್ತೊಂಬತ್ತನೆಯ ಅಧ್ಯಾಯದಲ್ಲಿ ಹೇಳುತ್ತಾರೆ).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮಪರ್ವಣಿ ಸುಕೃತವಿಭಾಗಕಥನಂ ನಾಮ
ಸಪ್ತದಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಹದಿನೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಹದಿನೆಂಟನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಮಾಂಸಾಭಕ್ಷಣ,
ಬ್ರಹ್ಮಚರ್ಯ-ಉಪವಾಸಾದಿಫಲಕಥನ.

ಉಮಾ

ಭಕ್ಷಯಂತ್ಯಪರೇ ಮಾಂಸಂ ವರ್ಜಯಂತ್ಯಪರೇ ವಿಭೋ ।
ತನ್ಮೇ ವದ ಮಹಾದೇವ ಭಕ್ಷ್ಯಾಭಕ್ಷ್ಯಸ್ಯ ಕಾರಣಮ್ ॥೧॥

ಉಮಾ– ಎಲೈ ವಿಭುವೇ, ಕೆಲವರು ಮಾಂಸವನ್ನು ಭಕ್ಷಿಸುತ್ತಾರೆ. ಇನ್ನು ಕೆಲವರು ವರ್ಜಿಸುತ್ತಾರೆ. ಎಲೈ ಮಹಾದೇವನೇ, ಮಾಂಸ ಭಕ್ಷಣಾಭಕ್ಷಣಗಳ ವಿಷಯದಲ್ಲಿ ನನಗೆ ನಿರ್ಣಯವನ್ನು ಹೇಳು.

ಮಹೇಶ್ವರಃ

ಮಾಂಸಸ್ಯ ಭಕ್ಷಣೇ ದೋಷೋ ಯಶ್ಚಾಸ್ಯಾಭಕ್ಷಣೇ ಗುಣಃ ।
ತದಹಂ ಕೀರ್ತಯಿಷ್ಯಾಮಿ ತನ್ನಿಬೋಧ ಯಥಾತಥಮ್ ॥೨॥

ಮಹೇಶ್ವರ– ಮಾಂಸಭಕ್ಷಣದ ಏನು ದೋಷವಿದೆಯೋ, ಮಾಂಸವನ್ನು ಭಕ್ಷಿಸದಿರುವುದರಲ್ಲಿ ಏನು ಗುಣವಿದೆಯೋ ಅದನ್ನು ನಿನಗೆ ಹೇಳುವೆನು, ಸರಿಯಾಗಿ ತಿಳಿದುಕೊ.

ಇಷ್ಟಂ ದತ್ತಮಧೀತಂ ಚ ಕ್ರತವಶ್ಚ ಸದಕ್ಷಿಣಾಃ ।
ಅಮಾಂಸಭಕ್ಷಣಸ್ಯೈತೇ ಕಲಾಂ ನಾರ್ಹಂತಿ ಷೋಡಶೀಮ್ ॥೩॥

ಇಷ್ಟಗಳು, ದಾನಗಳು, ಅಧ್ಯಯನಗಳು, ದಕ್ಷಿಣಾ ಸಹಿತವಾದ ಯಾಗಗಳು ಇವು ಯಾವುವೂ ಮಾಂಸದ ಅಭಕ್ಷಣೆಯ ಹದಿನಾರನೆಯ ಒಂದು ಭಾಗಕ್ಕೂ ಸಮನಾಗುವುದಿಲ್ಲ.

ಆತ್ಮಾರ್ಥಂ ಯಃ ಪರಪ್ರಾಣಾನ್ ಹಿಂಸ್ಯಾತ್ ಸ್ವಾದುಫಲೇಪ್ಸಯಾ ।
ವ್ಯಾಲಗೃಧ್ರಸೃಗಾಲೈಶ್ಚ ರಾಕ್ಷಸೈಶ್ಚ ಸಮಸ್ತು ಸಃ ॥೪॥

ತನ್ನ ರುಚಿಕರವಾದ ಭೋಜನಕ್ಕೋಸ್ಕರ ಯಾವನು ಪರಪ್ರಾಣವನ್ನು ಹಿಂಸಿಸುತ್ತಾನೆಯೋ ಅಂತಹ ಮನುಷ್ಯನು ಸರ್ಪ, ಹದ್ದು, ನರಿ ಮತ್ತು ರಾಕ್ಷಸರಿಗೆ ಸಮನಾದವನು.

ಯೋ ವೃಥಾ ನಿತ್ಯಮಾಂಸಾಶೀ ಸ ಪುಮಾನಧಮೋ ಭವೇತ್ ।
ತತಃ ಕಷ್ಟತರಂ ನಾಸ್ತಿ ಸ್ವಯಮಾಹೃತ್ಯ ಭಕ್ಷಣಾತ್ ॥೫॥

ಯಾವನು ನಿತ್ಯವೂ ವ್ಯರ್ಥವಾಗಿ ಮಾಂಸವನ್ನು ಭಕ್ಷಿಸುತ್ತಾನೆಯೋ ಅವನು ಪುರುಷಾಧಮನೆನಿಸುತ್ತಾನೆ. ತಾನೇ ಪ್ರಾಣಿಯನ್ನು ಕೊಂದು ಮಾಂಸವನ್ನು ಭಕ್ಷಿಸುವುದಕ್ಕಿಂತಲೂ ದುಃಖದಾಯಕವಾದುದು ಇನ್ನೊಂದಿಲ್ಲ.

ಸ್ವಮಾಂಸಂ ಪರಮಾಂಸೇನ ಯೋ ವರ್ಧಯಿತುಮಿಚ್ಛತಿ ।
ಉದ್ವಿಗ್ನವಾಸಂ ಲಭತೇ ಯತ್ರಯತ್ರೋಪಜಾಯತೇ ॥೬॥

ಇನ್ನೊಂದು ಪ್ರಾಣಿಯ ಮಾಂಸದಿಂದ ತನ್ನ ಮಾಂಸವನ್ನು ವೃದ್ಧಿಸಿಕೊಳ್ಳಲು ಬಯಸುವವನು ಎಲ್ಲಿ ತಾನು ವಾಸಮಾಡಿದರೂ ಭಯದಿಂದಲೇ ಬದುಕುತ್ತಾನೆ.

ಸಂಛೇದನಂ ಸ್ವಮಾಂಸಸ್ಯ ಯಥಾ ಸಂಜನಯೇದ್ ರುಜಮ್ ।
ತಥೈವ ಪರಮಾಂಸೇಽಪಿ ವೇದಿತವ್ಯಂ ವಿಜಾನತಾ ॥೭॥

ತನ್ನ ಮಾಂಸವನ್ನು ಕತ್ತರಿಸಿದರೆ ಹೇಗೆ ವೇದನೆಯಾಗುತ್ತದೆಯೋ ಹಾಗೆ ಇನ್ನೊಬ್ಬರ ಮಾಂಸವನ್ನು ಕತ್ತರಿಸಿದರೂ ವೇದನೆಯಾಗುತ್ತದೆ ಎಂದು ವಿವೇಕಿಯಾದವನು ತಿಳಿಯಬೇಕು.

ಯಸ್ತು ಸರ್ವಾಣಿ ಮಾಂಸಾನಿ ಯಾವಜ್ಜೀವಂ ನ ಭಕ್ಷಯೇತ್ ।
ಸ ಸ್ವರ್ಗೇ ವಿಪುಲಂ ಸ್ಥಾನಂ ಲಭತೇ ನಾತ್ರ ಸಂಶಯಃ ॥೮॥

ಯಾವನು ಜೀವನವಿಡೀ ಯಾವ ಮಾಂಸವನ್ನೂ ಭಕ್ಷಿಸುವುದಿಲ್ಲವೋ ಅವನು ಸ್ವರ್ಗದಲ್ಲಿ ವಿಪುಲವಾದ ಸ್ಥಾನವನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

ಯಸ್ತು ವರ್ಷಶತಂ ಪೂರ್ಣಂ ತಪ್ಯತೇ ಪರಮಂ ತಪಃ ।
ಯಶ್ಚಾಪಿ ವರ್ಜಯೇನ್ಮಾಂಸಂ ಸಮಮೇತನ್ನ ವಾ ಸಮಮ್ ॥೯॥

ನೂರು ವರ್ಷಗಳ ಕಾಲ ಪೂರ್ಣವಾಗಿ ಶ್ರೇಷ್ಠವಾದ ತಪಸ್ಸನ್ನು ಆಚರಿಸುವವನು ಒಬ್ಬನು, ಇನ್ನೊಬ್ಬನು ಮಾಂಸವನ್ನು ಸಂಪೂರ್ಣವಾಗಿ ಭುಂಜಿಸದವನು- ಇವರಿಬ್ಬರೂ ಸಮಾನರಾದಾರು ಅಥವಾ ಆಗಲಾರರು.

ನ ಹಿ ಪ್ರಾಣೈಃ ಪ್ರಿಯತಮಂ ಲೋಕೇ ಕಿಂಚನ ವಿದ್ಯತೇ ।
ತಸ್ಮಾತ್ಪ್ರಾಣಿದಯಾ ಕಾರ್ಯಾ ಯಥಾತ್ಮನಿ ತಥಾ ಪರೇ ॥೧೦॥

ಲೋಕದಲ್ಲಿ ಯಾರಿಗೂ ತಮ್ಮ ಪ್ರಾಣಕ್ಕಿಂತ ಹೆಚ್ಚು ಪ್ರಿಯವಾದ ವಸ್ತುವು ಯಾವುದೂ ಇಲ್ಲ. ಆದ್ದರಿಂದ ತನ್ನಲ್ಲಿ ಪ್ರೀತಿಯನ್ನು ಮಾಡುವಂತೆ ಇನ್ನೊಬ್ಬರಲ್ಲಿಯೂ ಪ್ರೀತಿಯನ್ನು ಮಾಡಿ, ಪ್ರಾಣಿಗಳಲ್ಲಿ ದಯೆಯನ್ನು ಮಾಡಬೇಕು.

ಸರ್ವೇ ಯಜ್ಞಾ ನ ತತ್ತುಲ್ಯಾಃ ಸರ್ವೇ ದೇವಾಶ್ಚ ಭಾಮಿನಿ ।
ಯನ್ಮಾಂಸರಸಮಾಸ್ವಾದ್ಯ ಪುನರ್ಮಾಂಸಾನಿ ವರ್ಜಯೇತ್ ॥೧೧॥

ಎಲೌ ಭಾಮಿನಿಯೇ, ಮಾಂಸವನ್ನು ಮೊದಲು ಭಕ್ಷಿಸಿ, ಅದರ ರುಚಿಯನ್ನು ತಿಳಿದು ಪುನಃ ಯಾವನು ಮಾಂಸವನ್ನು ಬಿಡುತ್ತಾನೆಯೋ ಅವನಿಗೆ ಉಂಟಾಗುವ ಫಲವನ್ನು ಎಲ್ಲ ಯಜ್ಞಗಳೂ ಮತ್ತು ಎಲ್ಲಾ ದೇವತೆಗಳೂ ಸೇರಿ ಉಂಟುಮಾಡಲಾರರು.

ಧರ್ಮಂ ಯಶಸ್ಯಮಾಯುಷ್ಯಂ ಸ್ವರ್ಗ್ಯಂ ಸ್ವಸ್ತ್ಯಯನಂ ಮಹತ್ ।
ಇತ್ಯೇವಂ ಮುನಯಃ ಪ್ರಾಹುರ್ಮಾಂಸಸ್ಯಾಭಕ್ಷಣೇ ಗುಣಾಃ ।
ಏವಂ ಬಹುಗುಣಂ ದೇವಿ ನೃಣಾಂ ಮಾಂಸವಿವರ್ಜನಮ್ ॥೧೨॥

ಮುನಿಗಳು ಮಾಂಸದ ಅಭಕ್ಷಣೆಯಲ್ಲಿ ಧರ್ಮ, ಯಶಸ್ಸು, ಆಯುಷ್ಯ, ಸ್ವರ್ಗಪ್ರಾಪ್ತಿ, ಕ್ಷೇಮ ಮೊದಲಾದ ಗುಣಗಳಿವೆ ಎಂದು ಹೇಳುತ್ತಾರೆ. ಎಲೌ ದೇವಿಯೇ, ಮಾಂಸವರ್ಜನೆಯು ಹೀಗೆ ಅನೇಕ ಗುಣಗಳಿಂದ ಕೂಡಿದೆ.

ನ ಶಕ್ನುಯಾದ್ ಯದಾ ಜೀವನ್ ತ್ಯಕ್ತುಂ ಮಾಂಸಂ ಕಥಂಚನ ।
ತ್ರಿಪುಣ್ಯಮಾಸಮಾತ್ರಂ ವಾ ವರ್ಜನೀಯಂ ವಿಶೇಷತಃ ॥೧೩॥

ಬದುಕಿರುವವನು ಯಾವುದೇ ಕಾರಣದಿಂದ ಮಾಂಸವನ್ನು ಸಂಪೂರ್ಣವಾಗಿ ಬಿಡಲು ಸಾಧ್ಯವಾಗದಿದ್ದರೆ ಮೂರು ಪುಣ್ಯಮಾಸಗಳಲ್ಲಾದರೂ (ವೈಶಾಖ, ಕಾರ್ತಿಕ ಮತ್ತು ಮಾಘ ಮಾಸಗಳಲ್ಲಿ) ವಿಶೇಷವಾಗಿ ವರ್ಜಿಸಬೇಕು.

ನ ಶಕ್ನುಯಾದಪಿ ತಥಾ ಕೌಮುದೀಮಾಸಮೇವ ಚ ।
ಜನ್ಮನಕ್ಷತ್ರತಿಥಿಷು ಸದಾ ಪರ್ವಸು ರಾತ್ರಿಷು ।
ವರ್ಜನೀಯಂ ತಥಾ ಮಾಂಸಂ ಪರತ್ರ ಹಿತಮಿಚ್ಛತಾ ॥೧೪॥

ಮೂರು ತಿಂಗಳು ಬಿಡಲೂ ಸಾಧ್ಯವಾಗದಿದ್ದರೆ ಕಾರ್ತಿಕ ಮಾಸದಲ್ಲಾದರೂ ಮಾಂಸವನ್ನು ವರ್ಜಿಸಬೇಕು. ಪರಲೋಕದಲ್ಲಿ ತನಗೆ ಹಿತವನ್ನು ಬಯಸುವವನು ಜನ್ಮನಕ್ಷತ್ರಗಳಲ್ಲಿಯೂ, ಜನ್ಮತಿಥಿಗಳಲ್ಲಿಯೂ, ಪರ್ವಕಾಲಗಳಲ್ಲಿಯೂ ಮತ್ತು ರಾತ್ರಿಗಳಲ್ಲಿಯೂ ಮಾಂಸವನ್ನು ವರ್ಜಿಸಬೇಕು.

ಅಶಕ್ತಃ ಕಾರಣಾನ್ಮತ್ಸ್ಯೇ ಭೋಕ್ತುಮಿಚ್ಛೇದ್ ವಿಧಿಂ ಶೃಣು ।
ಅನೇನ ಖಾದನ್ ವಿಧಿನಾ ಕಲ್ಮಷೇಣ ನ ಲಿಪ್ಯತೇ ॥೧೫॥

ಯಾವುದೇ ಕಾರಣದಿಂದ ಮಾಂಸವನ್ನು ಬಿಡಲು ಅಸಮರ್ಥನಾದ ಮನುಷ್ಯನು ಮಾಂಸವನ್ನು ತಿನ್ನಲು ಬಯಸಿದರೆ ಅದರ ವಿಧಿಯನ್ನು ಕೇಳು. ಈ ವಿಧಾನದಿಂದ ಭಕ್ಷಿಸಿದರೆ ಅವನಿಗೆ ದೋಷಲೇಪವಾಗುವುದಿಲ್ಲ.

ಹತಾನಾಮುದ್ಗತಪ್ರಾಣಂ ಕ್ರೀತ್ವಾ ನ್ಯಾಯೇನ ಭಾಮಿನಿ ।
ಬ್ರಾಹ್ಮಣಾತಿಥಿಪೂಜಾರ್ಥಂ ಭೋಕ್ತವ್ಯಂ ಹಿತಮಿಚ್ಛತಾ ॥೧೬॥

ಎಲೌ ಭಾಮಿನಿಯೇ, ತನ್ನ ಹಿತವನ್ನು ಬಯಸುವವನು ಇನ್ನೊಬ್ಬರಿಂದ ಹತವಾದ ಪ್ರಾಣಿಯ ಮಾಂಸವನ್ನು ನ್ಯಾಯವಾದ ಬೆಲೆಯನ್ನು ಕೊಟ್ಟು, ಬ್ರಾಹ್ಮಣರ ಮತ್ತು ಅತಿಥಿಗಳ ಪೂಜಾರ್ಥವಾಗಿ ಕೊಂಡುಕೊಂಡು ಅನಂತರ ತಾನು ಭುಂಜಿಸಬೇಕು (ಲಕ್ಷಾಲಂಕಾರ).

ಭೈಷಜ್ಯಕಾರಣಾದ್ ವ್ಯಾಧೌ ಖಾದನ್ ಪಾಪೈರ್ನ ಲಿಪ್ಯತೇ ।
ಪಿತೃಶೇಷಂ ತಥೈವಾಶ್ನನ್ ಮಾಂಸಂ ನಾಶುಭಮೃಚ್ಛತಿ ॥೧೭॥

ಔಷಧಿಯ ನಿಮಿತ್ತದಿಂದಾಗಿ ವ್ಯಾಧಿಗ್ರಸ್ತನಾದವನು ಮಾಂಸ ಭಕ್ಷಣವನ್ನು ಮಾಡಿದರೆ ಪಾಪಲೇಪವುಂಟಾಗುವುದಿಲ್ಲ. ಹಾಗೆಯೇ ಪಿತೃಶೇಷವಾದ ಮಾಂಸವನ್ನು ತಿನ್ನುವವನೂ ಸಹ ಅಶುಭವನ್ನು ಹೊಂದುವುದಿಲ್ಲ.

ಉಮಾ

ಗುರುಪೂಜಾ ಕಥಂ ದೇವ ಕ್ರಿಯತೇ ಧರ್ಮಚಾರಿಭಿಃ ॥೧೮॥

ಉಮಾ– ದೇವನೇ, ಧರ್ಮವನ್ನು ಆಚರಿಸುವವರು ಗುರುಪೂಜೆಯನ್ನು ಹೇಗೆ ಮಾಡುತ್ತಾರೆ?

ಮಹೇಶ್ವರಃ

ಗುರುಪೂಜಾಂ ಪ್ರವಕ್ಷ್ಯಾಮಿ ಯಥಾವತ್ ತವ ಶೋಭನೇ ।
ಕೃತಜ್ಞಾನಾಂ ಪರೋ ಧರ್ಮ ಇತಿ ವೇದಾನುಶಾಸನಮ್ ॥೧೯॥

ಮಹೇಶ್ವರ– ಎಲೌ ಶೋಭನೆಯೇ, ನಿನಗೆ ಗುರುಪೂಜೆಯನ್ನು ಸರಿಯಾಗಿ ಹೇಳುವೆನು. ಕೃತಜ್ಞರಾದವರಿಗೆ ಗುರುಪೂಜೆಯು ಶ್ರೇಷ್ಠವಾದ ಧರ್ಮ ಎಂದು ವೇದದ ಶಾಸನವಿದೆ.

ತಸ್ಮಾತ್ ಸ್ವಗುರವಃ ಪೂಜ್ಯಾಸ್ತೇ ಹಿ ಪೂರ್ವೋಪಕಾರಿಣಃ ।
ಗುರೂಣಾಂ ಚ ಗರೀಯಾಂಸಸ್ತ್ರಯೋ ಲೋಕೇಷು ಪೂಜಿತಾಃ ॥೨೦॥

ಆದ್ದರಿಂದ ತನ್ನ ಗುರುಗಳನ್ನು ಪೂಜಿಸಬೇಕು. ಏಕೆಂದರೆ ಅವರೇ ಇವನಿಗೆ ಮೊದಲು ಉಪಕಾರವನ್ನು ಮಾಡಿದವರು. ಗುರುಗಳಲ್ಲಿಯೂ ಶ್ರೇಷ್ಠರಾದವರು ಮೂರು ಮಂದಿ ಅವರು ಲೋಕಪೂಜಿತರಾದವರು.

ಉಪಾಧ್ಯಾಯಃ ಪಿತಾ ಮಾತಾ ಸಂಪೂಜ್ಯಾಸ್ತೇ ವಿಶೇಷತಃ ।
ಯೇ ಪಿತುರ್ಭ್ರಾತರೋ ಜ್ಯೇಷ್ಠಾ ಯೇ ಚ ತಸ್ಯಾನುಜಾಸ್ತಥಾ ।
ಪಿತುಃ ಪಿತಾ ಚ ಸರ್ವೇ ತೇ ಪೂಜನೀಯಾಃ ತಥಾ ಪಿತಾ ॥೨೧॥

ಉಪಾಧ್ಯಾಯರು, ತಂದೆ-ತಾಯಿಗಳು- ಈ ಮೂವರು ವಿಶೇಷವಾಗಿ ಪೂಜಿಸಲ್ಪಡಬೇಕಾದವರು. ತಂದೆಯ ಅಣ್ಣ-ತಮ್ಮಂದಿರು, ತಂದೆಯ ತಂದೆ ಎಲ್ಲರೂ ತಂದೆಯಂತೆಯೇ ಪೂಜಿಸಲ್ಪಡಬೇಕು.

ಮಾತುರ್ಯಾ ಭಗಿನೀ ಜ್ಯೇಷ್ಠಾ ಮಾತುರ್ಯಾ ಚ ಯವೀಯಸೀ ।
ಮಾತಾಮಹೀ ಚ ಧಾತ್ರೀ ಚ ಸರ್ವಾಸ್ತಾ ಮಾತರಃ ಸ್ಮೃತಾಃ ॥೨೨॥

ತಾಯಿಯ ಅಕ್ಕ-ತಂಗಿಯರು, ತಾಯಿಯ ತಾಯಿ ಮತ್ತು ತನ್ನನ್ನು ಸಾಕಿದ ದಾದಿ ಎಲ್ಲರೂ ತಾಯಿಯರೆಂದೇ ಹೇಳಲ್ಪಡುತ್ತಾರೆ.

ಉಪಾಧ್ಯಾಯಸ್ಯ ಯಃ ಪುತ್ರೋ ಯಶ್ಚ ತಸ್ಯ ಭವೇದ್ ಗುರುಃ ।
ಋತ್ವಿಗ್ಗುರುಃ ಪಿತಾ ಚೇತಿ ಗುರವಃ ಸಂಪ್ರಕೀರ್ತಿತಾಃ ॥೨೩॥

ಉಪಾಧ್ಯಾಯನ ಪುತ್ರ , ಉಪಾಧ್ಯಾಯನ ಗುರು, ಋತ್ವಿಕ್, ತನ್ನ ಗುರು, ತಂದೆ ಇವರೆಲ್ಲರೂ ಗುರುಗಳೆಂದು ಹೇಳಲ್ಪಡುತ್ತಾರೆ.

ಜ್ಯೇಷ್ಠೋ ಭ್ರಾತಾ ನರೇಂದ್ರಶ್ಚ ಮಾತುಲಃ ಶ್ವಶುರಸ್ತಥಾ ।
ಭಯತ್ರಾತಾ ಚ ಭರ್ತಾ ಚ ಗುರವಸ್ತೇ ಪ್ರಕೀರ್ತಿತಾಃ ॥೨೪॥

ಅಣ್ಣ, ರಾಜ, ಸೋದರಮಾವ, ಹೆಣ್ಣುಕೊಟ್ಟಮಾವ, ಭಯದಿಂದ ರಕ್ಷಿಸುವವನು, ಪೋಷಿಸುವವನು- ಎಲ್ಲರೂ ಗುರುಗಳೆಂದು ಹೇಳಲ್ಪಡುತ್ತಾರೆ.

ಇತ್ಯೇಷ ಕಥಿತಃ ಸಾಧ್ವಿ ಗುರೂಣಾಂ ಸರ್ವಸಂಗ್ರಹಃ ।
ಅನುವೃತ್ತಿಂ ಚ ಪೂಜಾಂ ಚ ತೇಷಾಮಪಿ ನಿಬೋಧ ಮೇ ॥೨೫॥

ಎಲೌ ಸಾಧ್ವಿಯೇ, ಎಲ್ಲ ಗುರುಗಳ ಸಂಗ್ರಹವನ್ನು ಈ ರೀತಿಯಲ್ಲಿ ಹೇಳಿದ್ದೇನೆ. ಅವರ ಅನುಸರಣೆಯನ್ನು ಮತ್ತು ಪೂಜಾ ವಿಧಾನವನ್ನು ತಿಳಿದುಕೊ.

ಅವಧ್ಯೌ ಮಾತಾಪಿತರಾವುಪಾಧ್ಯಾಯಸ್ತಥೈವ ಚ ।
ಕಥಂಚಿನ್ನಾವಮಂತವ್ಯಾ ನರೇಣ ಹಿತಮಿಚ್ಛತಾ ॥೨೬॥

ತಂದೆ-ತಾಯಿಗಳನ್ನಾಗಲೀ, ಉಪಾಧ್ಯಾಯರನ್ನಾಗಲೀ ಎಂದೂ ಹೊಡೆಯಬಾರದು. ತನ್ನ ಹಿತವನ್ನು ಬಯಸುವ ಮನುಷ್ಯನು ಯಾವ ರೀತಿಯಿಂದಲೂ ಅವರಿಗೆ ಅವಮಾನವನ್ನು ಮಾಡಬಾರದು.

ಯೇನ ಪ್ರೀಣಂತಿ ಪಿತರಸ್ತೇನ ಪ್ರೀತಃ ಪ್ರಜಾಪತಿಃ ।
ಯೇನ ಪ್ರೀಣಾತಿ ಚೇನ್ಮಾತಾ ಪ್ರೀತಾಃ ಸ್ಯುರ್ದೇವಮಾತರಃ ॥೨೭॥

ಪಿತೃಗಳು ಪ್ರೀತರಾದರೆ ಬ್ರಹ್ಮದೇವರು ಪ್ರೀತರಾಗುತ್ತಾರೆ. ತಾಯಿಯು ಪ್ರೀತಳಾದರೆ ದೇವ-ಮಾತೃಗಳೆಲ್ಲರೂ ಪ್ರೀತರಾಗುತ್ತಾರೆ.

ಯೇನ ಪ್ರೀಣಾತ್ಯುಪಾಧ್ಯಾಯೋ ಬ್ರಹ್ಮಾ ತೇನಾಭಿಪೂಜಿತಃ ।
ಅಪ್ರೀತೇಷು ಪುನಸ್ತೇಷು ನರೋ ನರಕಮೇತಿ ಹಿ ॥೨೮॥

ಉಪಾಧ್ಯಾಯನು ಪ್ರೀತನಾದರೆ ಬ್ರಹ್ಮದೇವರೇ ಅವನಿಂದ ಪೂಜಿಸಲ್ಪಡುತ್ತಾರೆ. ಅವರು (ಮೂವರು) ಪ್ರಸನ್ನರಾಗದಿದ್ದರೆ ಮನುಷ್ಯನು ನರಕಕ್ಕೆ ಹೋಗುತ್ತಾನೆ.

ಗುರೂಣಾಂ ವೈರನಿರ್ಬಂಧೋ ನ ಕರ್ತವ್ಯಃ ಕಥಂಚನ ।
ನರಕಂ ಸ ಗುರುಪ್ರೀತ್ಯಾ ಮನಸಾಪಿ ನ ಗಚ್ಛತಿ ॥೨೯॥

ಗುರುಗಳ ಜೊತೆ ವೈರವನ್ನಾಗಲೀ ಅವರಿಗೆ ನಿರ್ಬಂಧವನ್ನಾಗಲೀ ಯಾವ ರೀತಿಯಿಂದಲೂ ಮಾಡಬಾರದು. ಗುರುಗಳನ್ನು ಹರ್ಷಗೊಳಿಸಿದವನು ಮನಸ್ಸಿನಿಂದಲೂ ನರಕಕ್ಕೆ ಹೋಗುವುದಿಲ್ಲ.

ನ ಬ್ರೂಯಾದ್ ವಿಪ್ರಿಯಂ ತೇಷಾಮನಿಷ್ಟೇ ನ ಪ್ರವರ್ತಯೇತ್ ।
ವಿಗೃಹ್ಯ ನ ವದೇತ್ ತೇಷಾಂ ಸಮೀಪೇ ಸ್ಪರ್ಧಯಾ ಕ್ವಚಿತ್ ॥೩೦॥

ಅವರಿಗೆ ಅಪ್ರಿಯವಾದುದನ್ನು ಮಾತನಾಡಬಾರದು. ಅವರಿಗೆ ಇಷ್ಟವಿಲ್ಲದುದರಲ್ಲಿ ಪ್ರವೃತ್ತನಾಗಬಾರದು. ಅವರ ಸಮೀಪದಲ್ಲಿ, ಅವರ ಜೊತೆ ವಿರೋಧವನ್ನು ಮಾಡಿ ಸ್ಪರ್ಧೆಯಿಂದ ಮಾತನಾಡಬಾರದು.

ಯದ್ಯದಿಚ್ಛಂತಿ ತೇ ಕರ್ತುಮಸ್ವತಂತ್ರಸ್ತದಾಚರೇತ್ ।
ವೇದಾನುಶಾಸನಸಮಂ ಗುರುಶಾಸನಮಿಷ್ಯತೇ ॥೩೧॥

ಅವರು ಏನೇನು ಮಾಡಬೇಕೆಂದು ಇಚ್ಛಿಸುತ್ತಾರೋ ಅದನ್ನು ಅಸ್ವತಂತ್ರನಾಗಿ ಆಚರಿಸಬೇಕು. ಗುರುಗಳ ಶಾಸನವು ವೇದದ ಶಾಸನಕ್ಕೆ ಸಮವಾದುದು ಎಂದು ಹೇಳಲ್ಪಡುತ್ತದೆ.

ಕಲಹಾಂಶ್ಚ ವಿವಾದಾಂಶ್ಚ ಗುರುಭಿಃ ಸಹ ವರ್ಜಯೇತ್ ।
ಕೈತವಂ ಪರಿಹಾಸಾಂಶ್ಚ ಮನ್ಯುಕಾಮಾಶ್ರಯಾಃ ಕಥಾಃ ॥೩೨॥

ಗುರುಗಳ ಜೊತೆಯಲ್ಲಿ ಕಲಹವನ್ನಾಗಲೀ, ವಿವಾದವನ್ನಾಗಲೀ ಮಾಡಬಾರದು. ಕಪಟವನ್ನಾಗಲೀ, ಹಾಸ್ಯವನ್ನಾಗಲೀ, ಸಿಟ್ಟು ಮತ್ತು ಕಾಮಕ್ಕೆ ಸಂಬಂಧಿಸಿದ ಮಾತುಗಳನ್ನಾಗಲೀ ಆಡಬಾರದು.

ಗುರೂಣಾಂ ಯೋऽನಹಂವಾದೀ ಕರೋತ್ಯಾಜ್ಞಾಮತಂದ್ರಿತಃ ।
ನ ತಸ್ಮಾತ್ ಸರ್ವಮರ್ತ್ಯೇಷು ವಿದ್ಯತೇ ಪುಣ್ಯಕೃತ್ತಮಃ ॥೩೩॥

ಯಾವನು ನಿರಹಂಕಾರಿಯಾಗಿ, ಆಲಸ್ಯವಿಲ್ಲದೆ ಗುರುಗಳ ಆಜ್ಞೆಯನ್ನು ಪಾಲಿಸುತ್ತಾನೆಯೋ, ಸರ್ವಮನುಷ್ಯರಲ್ಲಿ ಅವನಿಗಿಂತ ಹೆಚ್ಚು ಪುಣ್ಯವನ್ನು ಮಾಡಿದವನು ಯಾವನೂ ಇರುವುದಿಲ್ಲ.

ಅಸೂಯಾಮಪವಾದಾಂಶ್ಚ ಗುರೂಣಾಂ ಪರಿವರ್ಜಯೇತ್ ।
ತೇಷಾಂ ಪ್ರಿಯಹಿತಾನ್ವೇಷೀ ಭೂತ್ವಾ ಪರಿಚರೇತ್ ಸದಾ ॥೩೪॥

ಗುರುಗಳಲ್ಲಿ ಅಸೂಯೆಯನ್ನಾಗಲೀ, ಅವರ ಮೇಲೆ ಅಪವಾದವನ್ನು ಹೊರಿಸುವುದನ್ನಾಗಲೀ ಪರಿತ್ಯಜಿಸಬೇಕು. ಅವರ ಪ್ರಿಯವನ್ನು ಮತ್ತು ಹಿತವನ್ನು ಬಯಸುತ್ತಾ ಯಾವಾಗಲೂ ಪರಿಚರಿಸಬೇಕು (ಸೇವೆ ಮಾಡಬೇಕು).

ನ ತದ್ಯಜ್ಞಫಲಂ ಕುರ್ಯಾತ್ ತಪೋ ವಾऽऽಚರಿತಂ ಮಹತ್ ।
ಯತ್ ಕುರ್ಯಾತ್ ಪುರುಷಸ್ಯೇಹ ಗುರುಪೂಜಾ ಸದಾ ಕೃತಾ ॥೩೫॥

ಯಾವಾಗಲೂ ಗುರುಪೂಜೆಯನ್ನು ಮಾಡಿದ ಮನುಷ್ಯನಿಗೆ ಗುರುಪೂಜೆಯು ಎಂತಹ ಫಲವನ್ನು ಉಂಟುಮಾಡಿಕೊಡುತ್ತದೆಯೋ ಅದನ್ನು ಆಚರಿಸಿದ ಯಜ್ಞವಾಗಲೀ ಅಥವಾ ದೊಡ್ಡ ತಪಸ್ಸಾಗಲೀ ಉಂಟುಮಾಡಿಕೊಡಲಾರವು.

ಅನುವೃತ್ತೇರ್ವಿನಾ ಧರ್ಮೋ ನಾಸ್ತಿ ಸರ್ವಾಶ್ರಮೇಷ್ವಪಿ ।
ತಸ್ಮಾತ್ ಸಮಾದೃತಃ ಕಾಲೇ ಗುರುವೃತ್ತಿಂ ಸಮಾಚರೇತ್ ॥೩೬॥

ಎಲ್ಲಾ ಆಶ್ರಮಗಳಲ್ಲಿ ಗುರುಗಳನ್ನು ಅನುಸರಿಸುವುದನ್ನು ಬಿಟ್ಟು ಬೇರೆ ಧರ್ಮಾಚರಣೆ ಇಲ್ಲ. ಆದ್ದರಿಂದ ಯೋಗ್ಯಕಾಲದಲ್ಲಿ ಗುರುಸೇವೆಯನ್ನು ಮಾಡಬೇಕು.

ಸ್ವಮರ್ಥಂ ಸ್ವಶರೀರಂ ಚ ಗುರ್ವರ್ಥೇ ಸಂತ್ಯಜೇದ್ ಬುಧಃ ।
ವಿವಾದಂ ಧನಹೇತೋರ್ವಾ ಮೋಹಾದ್ವಾ ತೈರ್ನ ರೋಚಯೇತ್ ॥

ತನ್ನ ಧನವನ್ನು ಮತ್ತು ಶರೀರವನ್ನು ಗುರುಗಳ ಸಲುವಾಗಿ ವಿನಿಯೋಗಿಸಬೇಕು. ಧನದ ನಿಮಿತ್ತದಿಂದಾಗಲೀ ಅಥವಾ ಮೋಹದಿಂದಾಗಲೀ ಅವರ ಜೊತೆಯಲ್ಲಿ ವಿವಾದವನ್ನು ಮಾಡಲು ಬಯಸಬಾರದು.

ಬ್ರಹ್ಮಚರ್ಯಮಹಿಂಸಾ ಚ ದಾನಾನಿ ವಿವಿಧಾನಿ ಚ ।
ಗುರುಭಿಃ ಪ್ರತಿಷಿದ್ಧಸ್ಯ ಸರ್ವಮೇತದಪಾರ್ಥಕಮ್ ॥೩೮॥

ಗುರುಗಳ ಪ್ರೀತಿಗೆ ಪಾತ್ರನಾಗದವನಿಗೆ ಅವನು ಮಾಡುವ ಬ್ರಹ್ಮಚರ್ಯ, ಅಹಿಂಸೆ, ವಿವಿಧ ದಾನಗಳು ಎಲ್ಲವೂ ವ್ಯರ್ಥವಾದವು.

ಉಪಾಧ್ಯಾಯಂ ಪಿತರಂ ಮಾತರಂ ಚ
ಯೇऽಭಿದ್ರುಹ್ಯುರ್ಮನಸಾ ಕರ್ಮಣಾ ವಾ ।

ತೇಷಾಂ ಪಾಪಂ ಭ್ರೂಣಹತ್ಯಾವಿಶಿಷ್ಟಂ
ತೇಭ್ಯೋ ನಾನ್ಯಃ ಪಾಪಕೃದಸ್ತಿ ಲೋಕೇ ॥೩೯॥

ಯಾರು ಮನಸ್ಸಿನಿಂದಾಗಲೀ, ಕರ್ಮದಿಂದಾಗಲೀ ಉಪಾಧ್ಯಾಯರಿಗೂ, ಮಾತಾ ಪಿತೃಗಳಿಗೂ ದ್ರೋಹವನ್ನು ಮಾಡುತ್ತಾರೆಯೋ ಅವರಿಗೆ ಉಂಟಾಗುವ ಪಾಪವು ಭ್ರೂಣ ಹತ್ಯೆಗಿಂತಲೂ ದೊಡ್ಡದಾದ ಪಾಪ. ಲೋಕದಲ್ಲಿ ಅವರಿಗಿಂತ ಹೆಚ್ಚು ಪಾಪವನ್ನು ಮಾಡಿದವನು ಯಾವನೂ ಇರುವುದಿಲ್ಲ.

ಉಮಾ

ಉಪವಾಸವಿಧಿಂ ತತ್ರ ತನ್ಮೇ ಶಂಸಿತುಮರ್ಹಸಿ ॥೪೦॥

ಉಮಾ– ನನಗೆ ಉಪವಾಸ ವಿಧಿಯನ್ನು ಹೇಳಬೇಕು.

ಮಹೇಶ್ವರಃ

ಶರೀರಮಲಶಾಂತ್ಯರ್ಥಮಿಂದ್ರಿಯೋಚ್ಛೋಷಣಾಯ ಚ ।
ಏಕಭುಕ್ತೋಪವಾಸೈಸ್ತು ಧಾರಯಂತೇ ವ್ರತಂ ನರಾಃ ॥೪೧॥

ಮಹೇಶ್ವರ– ಶರೀರದೋಷಗಳ ಪರಿಹಾರಾರ್ಥವಾಗಿ ಮತ್ತು ಇಂದ್ರಿಯಗಳನ್ನು ಪಳಗಿಸುವ ಸಲುವಾಗಿ ಮನುಷ್ಯರು ಏಕಭುಕ್ತ ಮತ್ತು ಉಪವಾಸ ವ್ರತಗಳನ್ನು ಮಾಡುತ್ತಾರೆ.

ಲಭಂತೇ ವಿಪುಲಂ ಧರ್ಮಂ ತಥಾऽऽಹಾರಪರಿಕ್ಷಯಾತ್ ।
ಬಹೂನಾಮುಪರೋಧಂ ತು ನ ಕುರ್ಯಾದಾತ್ಮಕಾರಣಾತ್ ॥೪೨॥

ಆಹಾರದ ಪರಿತ್ಯಾಗವನ್ನು ಮಾಡುವುದರಿಂದ ವಿಪುಲವಾದ ಧರ್ಮವನ್ನು ಹೊಂದುತ್ತಾರೆ. ತನ್ನ ಸಲುವಾಗಿ ಬಹಳ ಜನರಿಗೆ ತೊಂದರೆಯನ್ನು ಮಾಡಬಾರದು.

ಜೀವೋಪಘಾತಂ ಚ ತಥಾ ಧಾನ್ಯಂ ಸಂಜೀವ್ಯಮಿಷ್ಯತೇ ।
ತಸ್ಮಾತ್ ಪುಣ್ಯಂ ಲಭೇನ್ಮರ್ತ್ಯಃ ಸ್ವಯಮಾಹಾರಕರ್ಶನಾತ್ ।
ತದ್ ಗೃಹಸ್ಥೈರ್ಯಥಾಶಕ್ತಿ ಕರ್ತವ್ಯಮಿತಿ ನಿಶ್ಚಯಃ ॥೪೩॥

ಜೀವರಿಗೆ ತೊಂದರೆಯನ್ನು ಮಾಡಬಾರದು (ಆಹಾರವನ್ನು ಸೇವಿಸುವುದರಿಂದ ಧಾನ್ಯದಲ್ಲಿರುವ ಜೀವರಿಗೆ ಹಿಂಸೆಯಾಗುತ್ತದೆ). ಧಾನ್ಯವು ಜೀವಸಹಿತವಾಗಿ ಉಳಿಯಬೇಕಾದುದು ಎಂದು ಹೇಳುತ್ತಾರೆ. ಆದ್ದರಿಂದ ಸ್ವತಃ ಆಹಾರವನ್ನು ಕಡಿಮೆ ಮಾಡಿಕೊಳ್ಳುವ ಮನುಷ್ಯನು ಪುಣ್ಯವನ್ನು ಪಡೆಯುತ್ತಾನೆ. ಗೃಹಸ್ಥರು ತಮ್ಮ ಶಕ್ತಿಗೆ ಅನುಗುಣವಾಗಿ ಈ ಉಪವಾಸ ವ್ರತವನ್ನು ಮಾಡಬೇಕೆಂಬುದು ನಿಶ್ಚಿತವಾದುದು.

ಉಪವಾಸಾರ್ದಿತೇ ಕಾಯೇ ಆಪದರ್ಥಂ ಪಯೋ ಜಲಮ್ ।
ಭುಂಜನ್ನ ಪ್ರತಿಘಾತೀ ಸ್ಯಾದ್ ಬ್ರಾಹ್ಮಣಾನನುಮಾನ್ಯ ಚ ॥೪೪॥

ದೇಹವು ಉಪವಾಸದಿಂದ ಪೀಡಿತವಾಗಿದ್ದಾಗ ಆಪತ್ತಿನ ಪರಿಹಾರಕ್ಕಾಗಿ ಕ್ಷೀರವನ್ನಾಗಲೀ, ಜಲವನ್ನಾಗಲೀ ಬ್ರಾಹ್ಮಣರ ಅನುಮತಿಯಿಂದ ಸೇವಿಸಿದರೆ ಉಪವಾಸ ವ್ರತಕ್ಕೆ ಭಂಗ ಉಂಟಾಗುವುದಿಲ್ಲ.

ಉಮಾ

ಬ್ರಹ್ಮಚರ್ಯಂ ಕಥಂ ದೇವ ರಕ್ಷಿತವ್ಯಂ ವಿಜಾನತಾ ॥೪೫॥

ಉಮಾ– ಎಲೈ ದೇವನೇ, ವಿವೇಕಿಯಾದವನು ಬ್ರಹ್ಮಚರ್ಯವನ್ನು ಹೇಗೆ ರಕ್ಷಿಸಿಕೊಳ್ಳಬೇಕು?

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಶೃಣು ದೇವಿ ಸಮಾಹಿತಾ ॥೪೬॥

ಮಹೇಶ್ವರ– ದೇವಿಯೇ, ಅದನ್ನು ನಿನಗೆ ಹೇಳುವೆನು. ಸಮಾಧಾನದಿಂದ ಕೇಳು.

ಬ್ರಹ್ಮಚರ್ಯಂ ಪರಂ ಶೌಚಂ ಬ್ರಹ್ಮಚರ್ಯಂ ಪರಂ ತಪಃ ।
ಕೇವಲಂ ಬ್ರಹ್ಮಚರ್ಯೇಣ ಪ್ರಾಪ್ಯತೇ ಪರಮಂ ಪದಮ್ ॥೪೭॥

ಬ್ರಹ್ಮಚರ್ಯವು ಶ್ರೇಷ್ಠವಾದ ಶೌಚ. ಬ್ರಹ್ಮಚರ್ಯವು ಶ್ರೇಷ್ಠವಾದ ತಪಸ್ಸು. ಕೇವಲ ಬ್ರಹ್ಮಚರ್ಯದಿಂದ ಶ್ರೇಷ್ಠವಾದ ಸ್ಥಾನವು ದೊರೆಯುತ್ತದೆ.

ಸಂಕಲ್ಪಾದ್ ದರ್ಶನಾಚ್ಚೈವ ತದ್ಯುಕ್ತವಚನಾದಪಿ ।
ಸಂಸ್ಪರ್ಶಾದಥ ಸಂಯೋಗಾತ್ ಪಂಚಧಾ ರಕ್ಷಿತಂ ವ್ರತಮ್ ॥೪೮॥

ಮೈಥುನ ವಿಷಯದ ಸಂಕಲ್ಪದಿಂದಲೂ, ದರ್ಶನದಿಂದಲೂ, ತತ್ಸಂಬಂಧಿಯಾದ ಮಾತುಗಳಿಂದಲೂ, ಸ್ಪರ್ಶದಿಂದಲೂ ಮತ್ತು ಸಂಯೋಗದಿಂದಲೂ - ಈ ಐದು ರೀತಿಯಲ್ಲಿ ಬ್ರಹ್ಮಚರ್ಯವನ್ನು ರಕ್ಷಿಸಿಕೊಳ್ಳಬೇಕು.

ವ್ರತವದ್ ಧಾರಿತಂ ಚೈವ ಬ್ರಹ್ಮಚರ್ಯಮಕಲ್ಮಷಮ್ ।
ನಿತ್ಯಸಂರಕ್ಷಣಂ ತಸ್ಯ ನೈಷ್ಠಿಕಾನಾಂ ವಿಧೀಯತೇ ।
ತದಿಷ್ಯತೇ ಗೃಹಸ್ಥಾನಾಂ ಕಾಲಮುದ್ದಿಶ್ಯ ಕಾರಣಮ್ ॥೪೯॥

ವ್ರತದಂತೆ ಧಾರಣೆ ಮಾಡಿದ ಈ ಬ್ರಹ್ಮಚರ್ಯವು ನಿಷ್ಕಲ್ಮಷವಾಗಿರುತ್ತದೆ. ನೈಷ್ಠಿಕ ಬ್ರಹ್ಮಚಾರಿಗಳು ಅಂತಹ ಬ್ರಹ್ಮಚರ್ಯವನ್ನು ಯಾವಾಗಲೂ ಸಂರಕ್ಷಿಸಿಕೊಳ್ಳಬೇಕು ಎಂಬುದು ವಿಹಿತವಾಗಿದೆ. ಗೃಹಸ್ಥರಿಗೆ ವಿಶೇಷ ಕಾಲಗಳಲ್ಲಿ ಬ್ರಹ್ಮಚರ್ಯವು ವಿಹಿತವಾಗಿದೆ.

ಜನ್ಮನಕ್ಷತ್ರಯೋಗೇಷು ಪುಣ್ಯವಾಸೇಷು ಪರ್ವಸು ।
ದೇವತಾಧರ್ಮಕಾರ್ಯೇಷು ಬ್ರಹ್ಮಚರ್ಯವ್ರತಂ ಚರೇತ್ ॥೫೦॥

ಜನ್ಮ ನಕ್ಷತ್ರಗಳಲ್ಲಿ, ಪುಣ್ಯಕ್ಷೇತ್ರಗಳಲ್ಲಿ, ಪರ್ವಕಾಲಗಳಲ್ಲಿ, ದೇವತಾ ಕಾರ್ಯಗಳಲ್ಲಿ, ಧರ್ಮಕಾರ್ಯಗಳಲ್ಲಿ ಗೃಹಸ್ಥನು ಬ್ರಹ್ಮಚರ್ಯವನ್ನು ಪಾಲಿಸಬೇಕು.

ಬ್ರಹ್ಮಚರ್ಯವ್ರತಫಲಂ ಲಭೇದ್ ದಾರವ್ರತೀ ಸದಾ ।
ಶೌಚಮಾಯುಸ್ತಥಾऽऽರೋಗ್ಯಂ ಲಭ್ಯತೇ ಬ್ರಹ್ಮಚಾರಿಭಿಃ ॥೫೧॥

ಪತ್ನೀ ಇದ್ದವನೂ ಸಹ ಹೀಗೆ ಮಾಡಿದರೆ ಬ್ರಹ್ಮಚರ್ಯವ್ರತದ ಫಲವನ್ನು ಹೊಂದುತ್ತಾನೆ. ಬ್ರಹ್ಮಚರ್ಯ ವ್ರತವನ್ನು ಮಾಡಿದವರು ಶುದ್ಧಿಯನ್ನೂ, ಆಯುಸ್ಸನ್ನೂ, ಆರೋಗ್ಯವನ್ನೂ ಪಡೆಯುತ್ತಾರೆ.

ಉಮಾ

ತೀರ್ಥಚರ್ಯಾವ್ರತಂ ದೇವ ಕ್ರಿಯತೇ ಧರ್ಮಕಾಂಕ್ಷಿಭಿಃ ।
ಕಾನಿ ತೀರ್ಥಾನಿ ಲೋಕೇಶ ತನ್ಮೇ ಶಂಸಿತುಮರ್ಹಸಿ ॥೫೨॥

ಉಮಾ– ಎಲೈ ದೇವನೇ, ಧರ್ಮಾಕಾಂಕ್ಷಿಗಳು ತೀರ್ಥಯಾತ್ರಾ ವ್ರತವನ್ನು ಮಾಡುತ್ತಾರೆ. ಲೋಕೇಶನೇ, ತೀರ್ಥವು ಯಾವುವು ಎಂದು ನನಗೆ ಹೇಳಬೇಕು.

ಮಹೇಶ್ವರಃ

ಹಂತ ತೇ ಕಥಯಿಷ್ಯಾಮಿ ತೀರ್ಥಸ್ನಾನವಿಧಿಂ ಪ್ರಿಯೇ ।
ಪಾವನಾರ್ಥಂ ಚ ಶೌಚಾರ್ಥಂ ಬ್ರಹ್ಮಣಾ ನಿರ್ಮಿತಂ ಪುರಾ ॥೫೩॥

ಮಹೇಶ್ವರ– ಸಂತೋಷ. ಪ್ರಿಯೆಯೇ, ನಿನಗೆ ತೀರ್ಥಸ್ನಾನವಿಧಿಯನ್ನು ಹೇಳುವೆನು. ತೀರ್ಥವು ಹಿಂದೆ ಬ್ರಹ್ಮದೇವರಿಂದ ಪುಣ್ಯಸಂಪಾದನೆಗಾಗಿ ಮತ್ತು ಶೌಚಾಚಾರದ ಸಲುವಾಗಿ ನಿರ್ಮಿಸಲ್ಪಟ್ಟವು.

ಯಾಸ್ತು ಲೋಕೇ ಮಹಾನದ್ಯಸ್ತಾಃ ಸರ್ವಾಸ್ತೀರ್ಥಸಂಜ್ಞಿತಾಃ ।
ತಾಸಾಂ ಪ್ರಾಕ್‌ಸ್ರೋತಸಃ ಶ್ರೇಷ್ಠಾಃ ಸಂಗಮಶ್ಚ ಪರಸ್ಪರಮ್ ।
ತಾಸಾಂ ಸಾಗರಸಂಯೋಗೋ ವರಿಷ್ಠಶ್ಚೇತಿ ವಿದ್ಯತೇ ॥೫೪॥

ಲೋಕದಲ್ಲಿರುವ ಮಹಾನದಿಗಳೆಲ್ಲವೂ ತೀರ್ಥಗಳೆಂದು ಕರೆಯಲ್ಪಡುತ್ತವೆ. ಅವುಗಳಲ್ಲಿ ಪೂರ್ವಾಭಿಮುಖವಾಗಿ ಹರಿಯುವ ನದಿಗಳು ಶ್ರೇಷ್ಠವಾದವುಗಳು. ನದಿಗಳ ಪರಸ್ಪರ ಸಂಗಮವೂ ಶ್ರೇಷ್ಠವಾದುದು. ನದೀ-ಸಾಗರ ಸಂಗಮವು ಶ್ರೇಷ್ಠವಾದುದು.

ತಾಸಾಮುಭಯತಃ ಕೂಲಂ ಯತ್ರ ತತ್ರ ಮನೀಷಿಭಿಃ ।
ದೇವೈರ್ವಾ ಸೇವಿತಂ ದೇವಿ ತತ್ತೀರ್ಥಂ ಪರಮಂ ಸ್ಮೃತಮ್ ॥೫೫॥

ಅವುಗಳಲ್ಲಿ ಎರಡೂ ಕಡೆಗಳಲ್ಲಿ ದಡವಿರುವ ಸ್ರೋತಸ್ಸುಗಳು ಋಷಿಗಳಿಂದಲೂ, ದೇವತೆಗಳಿಂದಲೂ ಸೇವಿತವಾದವುಗಳು. ಎಲೌ ದೇವಿಯೇ, ಅಂತಹ ತೀರ್ಥವು ಬಹಳ ಶ್ರೇಷ್ಠವಾದುದೆಂದು ಹೇಳಲ್ಪಡುತ್ತದೆ.

ಸಮುದ್ರಶ್ಚ ಮಹಾತೀರ್ಥಂ ಪಾವನಂ ಪರಮಂ ಶುಭಮ್ ।
ತಸ್ಯ ಕೂಲಗತಾಸ್ತೀರ್ಥಾ ಮಹದ್ಭಿಶ್ಚ ಸಮಾಪ್ಲುತಾಃ ॥೫೬॥

ಸಮುದ್ರವೂ ಸಹ ಪರಮ ಮಂಗಳವಾದ, ಪವಿತ್ರವಾದ ದೊಡ್ಡ ತೀರ್ಥ. ಸಮುದ್ರತೀರದಲ್ಲಿರುವ, ಮಹಾತ್ಮರಿಂದ ಸೇವಿತವಾದ ಜಲಾಶಯಗಳೂ ಸಹ ತೀರ್ಥಗಳು.

ಸ್ರೋತಸಾಂ ಪರ್ವತಾನಾಂ ಚ ಜೋಷಿತಾನಾಂ ಮಹರ್ಷಿಭಿಃ ।
ಅಪಿ ಕೂಪತಟಾಕಂ ವಾ ಮುನಿಭಿಃ ಸೇವಿತಂ ಪ್ರಿಯೇ ॥೫೭॥

ತತ್ತು ತೀರ್ಥಮಿತಿ ಜ್ಞೇಯಂ ಪ್ರಭಾವಾತ್ತು ತಪಸ್ವಿನಾಮ್ ।
ತದಾಪ್ರಭೃತಿ ತೀರ್ಥತ್ವಂ ಲೇಭೇ ಲೋಕಹಿತಾಯ ವೈ ॥೫೮॥

ಮಹರ್ಷಿಗಳಿಂದ ಸೇವಿತವಾದ ನದಿಗಳು, ಪರ್ವತಗಳು, ಕೆರೆ-ಬಾವಿಗಳು ತಪಸ್ವಿಗಳ ಪ್ರಭಾವದಿಂದ ತೀರ್ಥವೆಂದು ತಿಳಿಯಬೇಕು. ಎಲೌ ಪ್ರಿಯೆಯೇ, ಮಹಾತ್ಮರ ಸಂಪರ್ಕದಿಂದ ಆ ಜಲಾಶಯಗಳು ಲೋಕಹಿತಕ್ಕಾಗಿ ತೀರ್ಥಸಂಜ್ಞೆಯನ್ನು ಪಡೆದವು.

ಏವಂ ತೀರ್ಥೋದ್ಭವಂ ವಿದ್ಧಿ ತಸ್ಯ ಸ್ನಾನವಿಧಿಂ ಶೃಣು ॥೫೯॥

ತೀರ್ಥಗಳು ಹೀಗೆ ಉಂಟಾದವುಗಳು ಎಂದು ತಿಳಿ. ಅವುಗಳಲ್ಲಿ ಸ್ನಾನ ಮಾಡುವ ವಿಧಿಯನ್ನು ಹೇಳುತ್ತೇನೆ, ಕೇಳು.

ತನ್ಮನಾ ವ್ರತಭೂಯಿಷ್ಠೋ ಗತ್ವಾ ತೀರ್ಥಾಭಿಕಾಂಕ್ಷಯಾ ।
ಉಪವಾಸತ್ರಯಂ ಕುರ್ಯಾದೇಕಂ ವಾ ನಿಯಮಾನ್ವಿತಃ ॥೬೦॥

ತೀರ್ಥವನ್ನೇ ಮನಸ್ಸಿನಲ್ಲಿ ಧ್ಯಾನ ಮಾಡುತ್ತಾ, ಅಲ್ಲಿಗೆ ಹೋಗಲು ಬಯಸಿ, ತೀರ್ಥಕ್ಕೆ ಹೋಗಿ, ಮೂರು ರಾತ್ರಿಗಳು ಅಥವಾ ಒಂದು ದಿನವಾಗಲೀ ನಿಯಮದಿಂದ ಕೂಡಿ ಉಪವಾಸವನ್ನು ಮಾಡಬೇಕು.

ಪುಣ್ಯಮಾಸಯುತೇ ಕಾಲೇ ಪೌರ್ಣಮಾಸ್ಯಾಂ ಯಥಾವಿಧಿ ।
ಬಹಿರೇವ ಶುಚಿರ್ಭೂತ್ವಾ ತತ್ತೀರ್ಥಂ ತನ್ಮನಾ ವಿಶೇತ್ ॥೬೧॥

ಪುಣ್ಯಮಾಸಗಳಲ್ಲಿ ಅದರಲ್ಲೂ ಪೌರ್ಣಮಾಸಿಯಂದು ವಿಧಿಗೆ ಅನುಗುಣವಾಗಿ ಹೊರಗೆ ಸ್ನಾನವನ್ನು ಮಾಡಿ, ಶುಚಿಯಾಗಿ, ಅನಂತರ ತೀರ್ಥವನ್ನು ಧ್ಯಾನಿಸುತ್ತಾ ತೀರ್ಥವನ್ನು ಪ್ರವೇಶಿಸಬೇಕು.

ತ್ರಿರಾಪ್ಲುತ್ಯ ಜಲಾಭ್ಯಾಶೇ ದತ್ತ್ವಾ ಬ್ರಾಹ್ಮಣದಕ್ಷಿಣಾಮ್ ।
ಅಭ್ಯರ್ಚ್ಯ ದೇವಾಯತನಂ ತತಃ ಪ್ರಾಯಾದ್ ಯಥಾಗತಮ್ ॥೬೨॥

ನೀರಿನಲ್ಲಿ ಮೂರು ಬಾರಿ ಮುಳುಗಿ, ಬ್ರಾಹ್ಮಣರಿಗೆ ದಕ್ಷಿಣೆಯನ್ನು ಕೊಟ್ಟು, ಅಲ್ಲಿಯೇ ದೇವತಾ ಪೂಜೆಯನ್ನು ಮಾಡಿ, ಅನಂತರ ಬಂದಂತೆಯೇ ಹಿಂದಿರುಗಬೇಕು.

ಏತದ್ ವಿಧಾನಂ ಸರ್ವೇಷಾಂ ತೀರ್ಥಂ ತೀರ್ಥಂ ಪ್ರತಿ ಪ್ರಿಯೇ ।
ಸಮೀಪತೀರ್ಥಸ್ನಾನಾತ್ತು ದೂರತೀರ್ಥಂ ಸುಪೂಜಿತಮ್ ॥೬೩॥

ಎಲೌ ಪ್ರಿಯೆಯೇ, ಎಲ್ಲ ತೀರ್ಥಗಳಲ್ಲಿಯೂ ಇದು ಸ್ನಾನ ಮಾಡುವ ವಿಧಿ. ಸಮೀಪದಲ್ಲಿರುವ ತೀರ್ಥಸ್ನಾನಕ್ಕಿಂತಲೂ ದೂರದಲ್ಲಿರುವ ತೀರ್ಥಸ್ನಾನವು ಶ್ರೇಷ್ಠವಾದುದು.

ಆದಿಪ್ರಭೃತಿಶುದ್ಧಸ್ಯ ತೀರ್ಥಸ್ನಾನಂ ಶುಭಂ ಭವೇತ್ ।
ತಪೋರ್ಥಂ ಪಾಪನಾಶಾರ್ಥಂ ಶೌಚಾರ್ಥಂ ತೀರ್ಥಗಾಹನಮ್ ॥೬೪॥

ಮೊದಲಿನಿಂದಲೂ ಶುದ್ಧನಾದವನು ತೀರ್ಥಸ್ನಾನವನ್ನು ಮಾಡಿದರೆ ಬಹಳ ಶುಭವನ್ನು ಹೊಂದುತ್ತಾನೆ. ತಪಸ್ಸನ್ನು ಮಾಡುವ ಸಲುವಾಗಿಯೂ, ಪಾಪನಾಶದ ಸಲುವಾಗಿಯೂ ಮತ್ತು ಶುದ್ಧಿಯ ಸಲುವಾಗಿಯೂ ತೀರ್ಥಸ್ನಾನವು ಹೇಳಲ್ಪಟ್ಟಿದೆ.

ಏವಂ ಪುಣ್ಯೇಷು ಮಾಸೇಷು ತೀರ್ಥಸ್ನಾನಂ ಶುಭಂ ಭವೇತ್ ।
ಏತನ್ನೈಯಮಿಕಂ ಸರ್ವಂ ಸುಕೃತಂ ಕಥಿತಂ ತವ ॥೬೫॥

ಹೀಗೆ ಪವಿತ್ರವಾದ ಮಾಸಗಳಲ್ಲಿ ತೀರ್ಥಸ್ನಾನವು ಶುಭವನ್ನುಂಟು ಮಾಡುತ್ತದೆ. ಇವೆಲ್ಲವೂ ಎರಡನೆಯದಾದ ನಿಯಮ ಸಂಬಂಧಿಯಾದ ಸುಕೃತ. ಇದೆಲ್ಲವನ್ನೂ ನಿನಗೆ ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮಿಪರ್ವಣಿ ಭಕ್ಷ್ಯಾಭಕ್ಷ್ಯಕಥನಂ ನಾಮ
ಗುರುಸೇವಾತೀರ್ಥಸ್ನಾನಪ್ರಕರಣಂ ಅಷ್ಟಾದಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಹದಿನೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಹತ್ತೊಂಬತ್ತನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಸೋಪಕರಣಸುಕೃತಕಥನ.

ಮಹೇಶ್ವರಃ

ತೃತೀಯಂ ಸೋಪಕರಣಂ ಕ್ರಿಯತೇ ಗೃಹವಾಸಿಭಿಃ ।
ದಾನಾನಿ ದೇವಪೂಜಾಂ ಚ ಪಿತೃಪೂಜಾಂ ತಥೈವ ಚ ॥೧॥

ಅನ್ಯಾನಿ ಧರ್ಮಕಾರ್ಯಾಣಿ ಸುಕೃತಂ ಸೋಪಸಾಧನಮ್ ।
ತತ್ಸರ್ವಂ ಶೃಣು ಕಲ್ಯಾಣಿ ಪ್ರಜಾನಾಂ ಹಿತಕಾಮ್ಯಯಾ ॥೨॥

ಮಹೇಶ್ವರ- ಮೂರನೆಯದಾದ ಸೋಪಕರಣಸುಕೃತವನ್ನು ಗೃಹಸ್ಥರು ಮಾಡುತ್ತಾರೆ. ದಾನಗಳು, ದೇವಪೂಜೆ, ಪಿತೃಪೂಜೆ, ಉಳಿದ ಧರ್ಮಕಾರ್ಯಗಳು ಎಲ್ಲವೂ ಸೋಪಸಾಧನ (ಸೋಪಕರಣ) ಸುಕೃತಗಳು. ಎಲೌ ಕಲ್ಯಾಣಿಯೇ, ಪ್ರಜೆಗಳ ಹಿತಕಾಮನೆಯಿಂದ ಅವೆಲ್ಲವನ್ನೂ ಕೇಳು.

ಚೇತನಾಚೇತನೈರ್ಯುಕ್ತಂ ಯಲ್ಲೋಕೇ ವಿದ್ಯತೇ ಧನಮ್ ।
ಏತದರ್ಥಮವಾಪ್ನೋತಿ ನರಃ ಪ್ರೇತ್ಯ ಶುಭೇಕ್ಷಣೇ ॥೩॥

ಎಲೌ ಶುಭೇಕ್ಷಣೆಯೇ, ಚೇತನಾಚೇತನರೂಪವಾದ ಸಂಪತ್ತು ಲೋಕದಲ್ಲಿ ಏನಿದೆಯೋ ಅದನ್ನು ಮನುಷ್ಯನು ದಾನ ಮಾಡಲು ಸಂಪಾದಿಸಿ, ದಾನಮಾಡಿ ಅದರ ಫಲವನ್ನು ಮರಣಾನಂತರದಲ್ಲಿ ಪಡೆಯುತ್ತಾನೆ.

ಉಮಾ

ಲೋಕಸಿದ್ಧಂ ತು ಯದ್ ದ್ರವ್ಯಂ ಸರ್ವಸಾಧಾರಣಂ ಭವೇತ್ ॥೪॥

ತದ್ ದದತ್ ಸರ್ವಸಾಮಾನ್ಯಂ ಕಥಂ ಧರ್ಮಂ ಲಭೇನ್ನರಃ ।
ಏವಂ ಸಾಧಾರಣೇ ದ್ರವ್ಯೇ ಕಸ್ಯ ಸ್ವತ್ವಂ ಕಥಂ ಭವೇತ್ ॥೫॥

ಉಮಾ- ಲೋಕಸಿದ್ಧವಾದ ಸಾಧಾರಣವಾದ ದ್ರವ್ಯವೇನಿದೆಯೋ ಅಂತಹ ಸರ್ವಸಾಧಾರಣವಾದ ದ್ರವ್ಯವನ್ನು ದಾನ ಮಾಡುವ ಮನುಷ್ಯನು ಹೇಗೆ ಧರ್ಮವನ್ನು ಪಡೆಯುತ್ತಾನೆ? ಸರ್ವಸಾಧಾರಣವಾದ ದ್ರವ್ಯದಲ್ಲಿ ಯಾರಿಗೆ, ಹೇಗೆ ಸ್ವತ್ವ ಉಂಟಾಗುತ್ತದೆ?

ಮಹೇಶ್ವರಃ

ಲೋಕೇ ಭೂತಮಯಂ ದ್ರವ್ಯಂ ಸರ್ವಸಾಧಾರಣಂ ತಥಾ ।
ತಥೈವ ತದ್ ದದನ್ಮರ್ತ್ಯೋ ಭವೇತ್ ಪುಣ್ಯಂ ಹಿ ತಚ್ಛೃಣು ॥೬॥

ಮಹೇಶ್ವರ– ಲೋಕದಲ್ಲಿ ಪಂಚಭೂತಾತ್ಮಕವಾದ ದ್ರವ್ಯವು ಸರ್ವ ಸಾಧಾರಣವಾದುದು. ಅದನ್ನು ಹಾಗೆಯೇ ದಾನ ಮಾಡುವ ಮನುಷ್ಯನು ಪುಣ್ಯವನ್ನು ಸಂಪಾದಿಸುತ್ತಾನೆ. ಅದನ್ನು ಕೇಳು.

ದಾತಾ ಪ್ರಕೃತಿಹೀನಶ್ಚ ದೇಯಂ ಸೋಪಕ್ರಮಂ ತಥಾ ।
ದೇಶಕಾಲೌ ಚ ಯತ್ತೈತದ್ ದಾನಂ ಷಡ್ಗುಣಮುಚ್ಯತೇ ।
ತೇಷಾಂ ಸಂಪದ್ವಿಶೇಷಾಂಶ್ಚ ಕೀರ್ತ್ಯಮಾನಾನ್ ನಿಬೋಧ ಮೇ ॥೭॥

ದಾನ ಮಾಡುವವನು ದ್ರವ್ಯಹೀನನಾದವನು. ದೇಯವಾದ ವಸ್ತು, ಉಪಕ್ರಮ, ದೇಶ ಮತ್ತು ಕಾಲ- ಇವು ದಾನದ ಆರು ಅಂಗಗಳು. ಅವುಗಳು ಸಂಪನ್ನವಾಗುವ ಬಗೆಯನ್ನು ನಾನು ಹೇಳುತ್ತೇನೆ. ಅದನ್ನು ಕೇಳು.

ಆದಿಪ್ರಭೃತಿ ಯಃ ಶುದ್ಧೋ ಮನೋವಾಕ್ಕಾಯಕರ್ಮಭಿಃ ।
ಸತ್ಯವಾದೀ ಜಿತಕ್ರೋಧಸ್ತ್ವಲುಬ್ಧೋ ನಾಭ್ಯಸೂಯಕಃ ।
ಶ್ರದ್ಧಾವಾನಾಸ್ತಿಕಶ್ಚೈವ ಏವಂ ದಾತಾ ಪ್ರಶಸ್ಯತೇ ॥೮॥

ಮೊದಲಿನಿಂದಲೂ ಯಾವನು ಮನೋ-ವಾಕ್-ಕಾಯ ಕರ್ಮಗಳಿಂದ ಶುದ್ಧನಾಗಿ ಸತ್ಯವನ್ನು ನುಡಿಯುತ್ತಾ, ಕ್ರೋಧವನ್ನು ಜಯಿಸಿ, ಲೋಭ-ಅಸೂಯೆಗಳಿಲ್ಲದೆ, ಶ್ರದ್ಧಾವಂತನೂ, ಆಸ್ತಿಕ್ಯ ಬುದ್ಧಿಯುಳ್ಳವನೂ ಆಗಿರುತ್ತಾನೆಯೋ ಅಂತಹ ದಾತೃವು (ದಾನವನ್ನು ಸ್ವೀಕರಿಸುವವನು) ಪ್ರಶಂಸಿಸಲ್ಪಡುತ್ತಾನೆ.

ಶುದ್ಧೋ ದಾಂತೋ ಜಿತಕ್ರೋಧಸ್ತಥೋದಿತಕುಲೋದ್ಭವಃ ।
ಶ್ರುತಚಾರಿತ್ರಸಂಪನ್ನಸ್ತಥಾ ಬಹುಕಳತ್ರವಾನ್ ॥೯॥

ಪಂಚಯಜ್ಞಪರೋ ನಿತ್ಯಂ ನಿರ್ವಿಕಾರಶರೀರವಾನ್ ।
ಏತಾನ್ ಪಾತ್ರಗುಣಾನ್ ವಿದ್ಧಿ ತಾದೃಕ್ಪಾತ್ರಂ ಪ್ರಶಸ್ಯತೇ ॥೧೦॥

ಶುದ್ಧನೂ, ಇಂದ್ರಿಯನಿಗ್ರಹವುಳ್ಳವನೂ, ಕ್ರೋಧವನ್ನು ಜಯಿಸಿದವನೂ, ಒಳ್ಳೆಯ ಕುಲದಲ್ಲಿ ಜನಿಸಿದವನೂ, ವಿದ್ಯಾ-ಚಾರಿತ್ರಸಂಪನ್ನನೂ, ಬಹು ಪರಿವಾರವನ್ನು ಹೊಂದಿದವನೂ, ನಿತ್ಯವೂ ಪಂಚಯಜ್ಞಪರನಾದವನೂ ಮತ್ತು ವಿಕಾರವಿಲ್ಲದ ಶರೀರವನ್ನು ಹೊಂದಿದವನೂ - ಇವೆಲ್ಲ ಪಾತ್ರಗುಣಗಳು - ಆದಂತಹ ಪಾತ್ರನು ಪ್ರಶಸ್ತನಾದವನು ಎಂದು ತಿಳಿ.

ಪಿತೃದೇವಾಗ್ನಿಕಾರ್ಯೇಷು ತಸ್ಯ ದತ್ತಂ ಮಹತ್ಫಲಮ್ ।
ಯದ್ಯದರ್ಹತಿ ಯೋ ಲೋಕೇ ಪಾತ್ರಂ ತಸ್ಯ ಭವೇಚ್ಚ ಸಃ ।
ಮುಚ್ಯೇದಾಪದಮಾಪನ್ನೋ ಯೇನ ಪಾತ್ರಂ ಸ ತಸ್ಯ ತು ॥೧೧॥

ಪಿತೃ-ದೇವಾಗ್ನಿ ಕಾರ್ಯಗಳಲ್ಲಿ ಅಂತಹ ಪಾತ್ರನಿಗೆ ಮಾಡಿದ ದಾನವು ಮಹಾಫಲವನ್ನು ಕೊಡುತ್ತದೆ. ಯಾವನು ಯಾವ ಯಾವ ವಸ್ತುವನ್ನು ಸ್ವೀಕರಿಸಲು ಅರ್ಹನಾಗಿರುತ್ತಾನೆಯೋ ದಾತೃವಿಗೆ ಅವನು ಪಾತ್ರನಾಗುತ್ತಾನೆ. ಯಾವನಿಗೆ ಮಾಡಿದ ದಾನದಿಂದ ಪ್ರತಿಗೃಹೀತೃವು ಆಪತ್ತಿನಿಂದ ಬಿಡುಗಡೆಯನ್ನು ಹೊಂದುತ್ತಾನೆಯೋ ಅವನು ಪಾತ್ರನಾಗುತ್ತಾನೆ.

ಅನ್ನಸ್ಯ ಕ್ಷುಧಿತಂ ಪಾತ್ರಂ ತೃಷಿತಸ್ತು ಜಲಸ್ಯ ವೈ ।
ಏವಂ ಪಾತ್ರೇಷು ನಾನಾತ್ವಮಿಷ್ಯತೇ ಪುರುಷಂ ಪ್ರತಿ ॥೧೨॥

ಅನ್ನಕ್ಕೆ ಹಸಿದವನು ಪಾತ್ರ. ಬಾಯಾರಿದವನು ನೀರಿಗೆ ಪಾತ್ರ. ಹೀಗೆ ಪುರುಷರಲ್ಲಿ ಪಾತ್ರರಲ್ಲಿ ನಾನಾವಿಧವಿದೆ.

ಜಾರಶ್ಚೋರಶ್ಚ ಷಂಡಶ್ಚ ಹಿಂಸ್ರಶ್ಚ ಕುಹಕಃ ಶುನಿಃ ।
ಲೋಕವಿಘ್ನಕರಾಶ್ಚಾನ್ಯೇ ವರ್ಜಿತವ್ಯಾಃ ಸರ್ವಶಃ ಪ್ರಿಯೇ ॥೧೩॥

ಜಾರ, ಚೋರ, ಷಂಡ, ಹಿಂಸೆಯನ್ನು ಮಾಡುವವನು, ಕಪಟಿ, ನಾಯಿಗಳನ್ನು ಸಾಕುವವನು, ಜನರಿಗೆ ವಿಘ್ನವನ್ನು ಮಾಡಿದ ಉಳಿದವರು ಎಲೌ ಪ್ರಿಯೆಯೇ, ಇವರೆಲ್ಲರನ್ನೂ ದಾನದಿಂದ ವರ್ಜಿಸಬೇಕು.

ಪರೋಪಘಾತಾದ್ ಯದ್ ದ್ರವ್ಯಂ ಚೌರ್ಯಾದ್ವಾ ಲಭ್ಯತೇ ನೃಭಿಃ ।
ನಿಂದಯಾ ಲಭ್ಯತೇ ಯಚ್ಚ ಧೂರ್ತಭಾವೇನ ವೈ ತಥಾ ॥೧೪॥

ಅಧರ್ಮಾದಥ ಮೋಹಾದ್ವಾ ಬಹೂನಾಮುಪರೋಧನಾತ್ ।
ಲಭ್ಯತೇ ಯದ್ ಧನಂ ದೇವಿ ತದತ್ಯಂತವಿಗರ್ಹಿತಮ್ ॥೧೫॥

ಇನ್ನೊಬ್ಬರಿಗೆ ಉಪದ್ರವವನ್ನು ಕೊಟ್ಟು ಸಂಪಾದಿಸಿದ ಧನ, ಕಳ್ಳತನದಿಂದ ಸಂಪಾದಿಸಿದ ಧನ, ನಿಂದೆಯಿಂದ ಹಾಗೂ ಧೂರ್ತತನದಿಂದ ಸಂಪಾದಿಸಿದ ಧನ, ಅಧರ್ಮದಿಂದ ಅಥವಾ ಮೋಹದಿಂದ ಅಥವಾ ಅನೇಕ ಜನರಿಗೆ ತೊಂದರೆಯನ್ನು ಕೊಟ್ಟು ಸಂಪಾದಿಸಿದ ಧನವು ಎಲೌ ದೇವಿಯೇ, ಅತ್ಯಂತ ನಿಂದಿತವಾದುದು.

ತಾದೃಶೇನ ಕೃತಂ ಧರ್ಮಂ ನಿಷ್ಫಲಂ ವಿದ್ಧಿ ಭಾಮಿನಿ ।
ತಸ್ಮಾನ್ನ್ಯಾಯಾಗತೇನೈವ ದಾತವ್ಯಂ ಶುಭಮಿಚ್ಛತಾ ॥೧೬॥

ಎಲೌ ಭಾಮಿನಿಯೇ, ಅಂತಹ ಧನದಿಂದ ಮಾಡಿದ ಧರ್ಮವು ನಿಷ್ಫಲವೆಂದು ತಿಳಿ. ಆದ್ದರಿಂದ ಶುಭವನ್ನು ಬಯಸುವವನು ನ್ಯಾಯಮಾರ್ಗದಿಂದ ಸಂಪಾದಿಸಿದ ಧನದಿಂದಲೇ ದಾನವನ್ನು ಮಾಡಬೇಕು.

ಯದ್ಯದಾತ್ಮಪ್ರಿಯಂ ನಿತ್ಯಂ ತತ್ತದ್ ದೇಯಮಿತಿ ಸ್ಥಿತಿಃ ।
ಉಪಕ್ರಮಮಿಮಂ ವಿದ್ಧಿ ದಾತೄಣಾಂ ಪರಮಂ ಹಿತಮ್ ॥೧೭॥

ತನಗೆ ಯಾವ ಯಾವ ವಸ್ತುಗಳು ಪ್ರಿಯವೋ ಅವುಗಳನ್ನು ದಾನ ಮಾಡಬೇಕೆಂಬುದು ಸ್ಥಿತಿ. ಇದನ್ನು ಉಪಕ್ರಮವೆಂದು ತಿಳಿ (ಇದಕ್ಕೆ ಉಪಕ್ರಮವೆಂದು ಹೆಸರು). ಇದು ದಾತೃಗಳಿಗೆ ಪರಮ ಹಿತವನ್ನು ಉಂಟುಮಾಡುತ್ತದೆ.

ಪಾತ್ರಭೂತಂ ತು ದೂರಸ್ಥಮಭಿಗಮ್ಯ ಪ್ರಸಾದ್ಯ ಚ ।
ದಾತಾ ದಾನಂ ತಥಾ ದದ್ಯಾದ್ ಯಥಾ ತುಷ್ಯೇತ ತೇನ ಸಃ ।
ಏಷ ದಾನವಿಧಿಃ ಶ್ರೇಷ್ಠಃ ಸಮಾಹೂಯ ತು ಮಧ್ಯಮಃ ॥೧೮॥

ದೂರದಲ್ಲಿರುವ ಪಾತ್ರನ ಬಳಿಗೆ ಸ್ವತಃ ಹೋಗಿ ಅವನನ್ನು ಪ್ರಸನ್ನೀಕರಿಸಿಕೊಂಡು ಅವನು ಸಂತೋಷಗೊಳ್ಳುವಂತೆ ದಾತೃವು ದಾನವನ್ನು ಮಾಡಬೇಕು. ಇದು ಶ್ರೇಷ್ಠವಾದ ದಾನವಿಧಿ. ಪಾತ್ರನನ್ನು ಆಹ್ವಾನಿಸಿ, ತನ್ನ ಬಳಿಗೆ ಕರೆಸಿ ಕೊಡುವ ಧನವು ಮಧ್ಯಮವಾದುದು.

ಪೂರ್ವಂ ಚ ಪಾತ್ರತಾಂ ಜ್ಞಾತ್ವಾ ಸಮಾಹೂಯ ನಿವೇದ್ಯ ಚ ।
ಶೌಚಾರ್ಚನಸಮಾಯುಕ್ತಂ ದಾತವ್ಯಂ ಶ್ರದ್ಧಯಾ ಪ್ರಿಯೇ ॥೧೯॥

ಎಲೌ ದೇವಿಯೇ, ಮೊದಲು ಅವನು ಪಾತ್ರನೆಂದು ತಿಳಿದು, ಅನಂತರ ಆಹ್ವಾನಿಸಿ, ಅನಂತರ ದಾನವನ್ನು ಅವನಿಗೆ ವಿವರಿಸಿ, ತಾನೂ ಶುಚಿಯಾಗಿ ಅರ್ಚನ ಪೂರ್ವಕವಾಗಿ ಶ್ರದ್ಧೆಯಿಂದ ದಾನವನ್ನು ಮಾಡಬೇಕು.

ಯಾಚಿತ್ಭ್ಯಾಂ ತು ಪರಮಮಾಭಿಮುಖ್ಯಪುರಸ್ಕೃತಮ್ ।
ಸಮ್ಮಾನಪೂರ್ವಂ ಸಂಗ್ರಾಹ್ಯಂ ದಾತವ್ಯಂ ದೇಶಕಾಲಯೋಃ ॥೨೦॥

ಯಾಚನೆಯನ್ನು ಮಾಡುವವರಿಗೆ ಅಭಿಮುಖವಾಗಿ ಕೊಟ್ಟ ದಾನವು ಪ್ರಶಸ್ತವಾದುದು. ಸಮ್ಮಾನಪೂರ್ವಕವಾಗಿ, ಒಳ್ಳೆಯ ದೇಶ-ಕಾಲಗಳಲ್ಲಿ ಪ್ರತಿಗ್ರಹೀತೃವಿಗೆ ಉಪಯೋಗಕ್ಕೆ ಬರುವ ವಸ್ತುವನ್ನು ದಾನ ಮಾಡಬೇಕು.

ಅಪಾತ್ರೇಭ್ಯೋಽಪಿ ಚಾನ್ಯೇಭ್ಯೋ ದಾತವ್ಯಂ ಭೂತಿಮಿಚ್ಛತಾ ।
ಪಾತ್ರಾಣಿ ಸಂಪರೀಕ್ಷ್ಯೈವ ದಾತಾ ವೈ ದಾನಪಾತ್ರಯೋಃ ॥೨೧॥

ತನ್ನ ಕಲ್ಯಾಣವನ್ನು ಬಯಸುವವನು ಉಳಿದ ಅಪಾತ್ರರಿಗೂ ದಾನವನ್ನು ಮಾಡಬೇಕಾಗುತ್ತದೆ. ಯಾವ ದಾನದಲ್ಲೇ ಆದರೂ ದಾತೃವು ಪಾತ್ರರನ್ನು ಪರೀಕ್ಷಿಸಿಯೇ ದಾನವನ್ನು ಮಾಡಬೇಕು.

ಅತಿಶಕ್ಯಾ ಪರಂ ದಾನಂ ಯಥಾಶಕ್ತಿ ತು ಮಧ್ಯಮಮ್ ।
ತೃತೀಯಂ ತ್ವವರಂ ದಾನಂ ದಾನರೂಪಮಿವಾತ್ಮನಃ ॥೨೨॥

ತನ್ನ ಶಕ್ತಿಯನ್ನು ಮೀರಿ ಮಾಡಿದ ದಾನವು ಶ್ರೇಷ್ಠವಾದುದು. ತನ್ನ ಶಕ್ತಿಗೆ ಅನುಗುಣವಾದ ದಾನವು ಮಧ್ಯಮವಾದುದು. ತನ್ನ ಶಕ್ತಿಗಿಂತ ಕಡಿಮೆಯಾಗಿ ಮಾಡಿದ ಅಲ್ಪದಾನವು ಅಧಮ ದಾನ. ತನಗೆ ಆ ದಾನದ ಫಲವು ಹೇಗೆ ತುಚ್ಛವೋ ಹಾಗೆ ಆ ದಾನವೂ ತುಚ್ಛವಾದುದು (ಲಕ್ಷಾಲಂಕಾರ).

ಯಥಾ ಸಂಭಾವಿತಂ ಪೂರ್ವಂ ದಾತವ್ಯಂ ತತ್ ತಥೈವ ಚ ।
ಪುಣ್ಯಕ್ಷೇತ್ರೇಷು ಯದ್ ದತ್ತಂ ಪುಣ್ಯಕಾಲೇಷು ವಾ ಯಥಾ ।
ತಚ್ಛೋಭನತರಂ ವಿದ್ಧಿ ಗೌರವಾದ್ ದೇಶಕಾಲಯೋಃ ॥೨೩॥

ಮೊದಲು ಯೋಚಿಸಿದಂತೆಯೇ ದಾನವನ್ನು ಮಾಡಬೇಕು (ಮೊದಲು ಯೋಚಿಸಿದುದಕ್ಕಿಂತ ಕಡಿಮೆಯಾದ ದಾನವನ್ನು ಮಾಡಬಾರದು). ಪುಣ್ಯಕ್ಷೇತ್ರಗಳಲ್ಲಿ ಮತ್ತು ಪುಣ್ಯಕಾಲಗಳಲ್ಲಿ ಮಾಡಿದ ದಾನವು ಬಹಳ ಒಳ್ಳೆಯದೆಂದು ತಿಳಿ. ಏಕೆಂದರೆ ಅದು ದೇಶ-ಕಾಲಗಳ ಮಹತ್ತ್ವದಿಂದಲೂ ಯುಕ್ತವಾಗಿರುತ್ತದೆ.

ಉಮಾ

ಯಶ್ಚ ಪುಣ್ಯತಮೋ ದೇಶಸ್ತಥಾ ಕಾಲಶ್ಚ ಶಂಸ ಮೇ ॥೨೪॥

ಉಮಾ– ಪುಣ್ಯತಮವಾದ ದೇಶವನ್ನು ಮತ್ತು ಕಾಲವನ್ನು ನನಗೆ ಹೇಳು.

ಮಹೇಶ್ವರಃ

ಕುರುಕ್ಷೇತ್ರಂ ಮಹಾನದ್ಯೋ ಯಶ್ಚ ದೇವರ್ಷಿಸೇವಿತಮ್ ।
ಗಿರಿರ್ವರಶ್ಚ ತೀರ್ಥಾನಿ ದೇಶಭಾಗೇಷು ಪೂಜಿತಾಃ ।
ಗ್ರಹೀತುರೀಪ್ಸಿತೋ ಯಶ್ಚ ತತ್ರ ದತ್ತಂ ಮಹಾಫಲಮ್ ॥೨೫॥

ಮಹೇಶ್ವರ– ಕುರುಕ್ಷೇತ್ರ, ಮಹಾನದಿಗಳು, ದೇವರ್ಷಿಗಳಿಂದ ಸೇವಿತವಾದ ಪ್ರದೇಶಗಳು, ಪರ್ವತ, ತೀರ್ಥಗಳು, ದೇಶಭಾಗದಲ್ಲಿ ಪೂಜಿತವಾದ ಪ್ರದೇಶಗಳು, ಸ್ವೀಕರಿಸುವವನಿಗೆ ಇಷ್ಟವಾದ ಸ್ಥಳ - ಇವುಗಳಲ್ಲಿ ಮಾಡಿದ ದಾನವು ಮಹಾಫಲವನ್ನು ಕೊಡುತ್ತದೆ.

ಶರದ್ವಸಂತಕಾಲಶ್ಚ ಪುಣ್ಯಮಾಸಸ್ತಥೈವ ಚ ।
ಶುದ್ಧಪಕ್ಷಶ್ಚ ಪಕ್ಷಾಂತಃ ಪೌರ್ಣಮಾಸೀ ಚ ಪರ್ವಸು ॥೨೬॥

ಪಿತೃದೈವತನಕ್ಷತ್ರಂ ನಿರ್ಮಲಾ ದಿವಸಾಸ್ತಥಾ ।
ತಚ್ಚೋಭನತರಂ ವಿದ್ಧಿ ಚಂದ್ರಸೂರ್ಯಗ್ರಹಂ ತಥಾ ॥೨೭॥

ಶರತ್ಕಾಲ, ವಸಂತಕಾಲ, ಪವಿತ್ರವಾದ ಮಾಸಗಳು, ಶುಕ್ಲಪಕ್ಷ, ಅಮಾವಾಸ್ಯೆ, ಪೌರ್ಣಮಾಸೀ, ಪರ್ವಕಾಲ, ಪಿತೃ-ದೈವತ ನಕ್ಷತ್ರಗಳು, ನಿರ್ಮಲವಾದ ದಿವಸಗಳು, ಚಂದ್ರ-ಸೂರ್ಯಗ್ರಹಣ- ಇವುಗಳನ್ನು ದಾನಕ್ಕೆ ಶುಭವಾದ ಕಾಲವೆಂದು ತಿಳಿ.

ಪ್ರತಿಗ್ರಹೀತುರ್ಯಃ ಕಾಲೋ ಮನಸಾ ಕೀರ್ತಿತಃ ಶುಭೇ ।
ಏವಮಾದಿಷು ಕಾಲೇಷು ದತ್ತಂ ದಾನಂ ಮಹದ್ಭವೇತ್ ॥೨೮॥

ಎಲೌ ಶುಭಳೇ, ಪ್ರತಿಗೃಹೀತೃವಿನ ಮನಸ್ಸಿಗೆ ಇಷ್ಟವಾದ ಕಾಲ ಇವೇ ಮೊದಲಾದ ಕಾಲಗಳಲ್ಲಿ ಮಾಡಿದ ದಾನವು ಮಹಾಫಲವನ್ನು ಕೊಡುತ್ತದೆ.

ದಾತಾ ದೇಯಂ ಚ ಪಾತ್ರಂ ಚ ಉಪಕ್ರಮಯುತಾ ಕ್ರಿಯಾ ।
ದೇಶಃ ಕಾಲಶ್ಚ ಇತ್ಯೇಷಾಂ ಸಂಪಚ್ಛುದ್ಧಿಃ ಪ್ರಕೀರ್ತಿತಾ ॥೨೯॥

ಯತ್ರೈವ ಯುಗಪತ್ ಸಂಪತ್ ತತ್ರ ಶುದ್ಧಿರ್ಮಹದ್ ಭವೇತ್ ॥೩೦॥

ದಾತೃ, ದೇಯ (ದಾನವನ್ನು ಕೊಡುವ ವಸ್ತು), ಪಾತ್ರ, ಉಪಕ್ರಮ ಸಹಿತವಾದ ದಾನಕ್ರಿಯೆ, ದೇಶ, ಕಾಲ ಇವುಗಳ ಸಂಪತ್ತನ್ನು (ಒಟ್ಟುಗೂಡುವಿಕೆಯನ್ನು) ಶುದ್ಧಿ ಎಂದು ಹೇಳುತ್ತಾರೆ. ಎಲ್ಲಿ ಈ ಅನೇಕ ಸಂಪತ್ತುಗಳು ಒಟ್ಟಿಗೆ ಉಂಟಾಗುತ್ತವೆಯೋ ಅಲ್ಲಿ ಬಹಳ ಶುದ್ಧಿ ಇರುತ್ತದೆ.

ಅತ್ಯಲ್ಪಮಪಿ ಯದ್ ದಾನಮೇಭಿಃ ಷಡ್ಭಿರ್ಗುಣೈರ್ಯುತಮ್ ।
ಭೂತ್ವಾನಂತಂ ನಯೇತ್ ಸ್ವರ್ಗಂ ದಾತಾರಂ ದೋಷವರ್ಜಿತಮ್ ॥

ಈ ಆರು ಗುಣಗಳಿಂದ ಕೂಡಿದ ದಾನವು ಅಲ್ಪವಾದರೂ ಅದು ದೋಷವರ್ಜಿತವಾಗಿ ದಾತೃವಿಗೆ ಅನಂತವಾದ ಸ್ವರ್ಗವನ್ನು ಕೊಡುತ್ತದೆ.

ಸುಮಹದ್ದಾನಪಿ ಯದ್ ದಾನಂ ಗುಣೈರೇಭಿರ್ವಿನಾಕೃತಮ್ ।
ಅತ್ಯಲ್ಪಫಲನಿರ್ಯೋಗಮಫಲಂ ವಾ ಭವೇದ್ಧಿ ತತ್ ॥೩೨॥

ಈ ಗುಣಗಳಿಲ್ಲದ ದಾನವು ಬಹಳ ದೊಡ್ಡದಾದರೂ ಅಲ್ಪಫಲವನ್ನು ಕೊಡುತ್ತದೆ ಅಥವಾ ನಿಷ್ಫಲವಾಗುತ್ತದೆ.

ಉಮಾ

ಏವಂ ಗುಣಯುತಂ ದಾನಂ ದತ್ತಂ ತ್ವಫಲತಾಂ ವ್ರಜೇತ್ ।
ತದಸ್ತಿ ಚೇನ್ಮಹದ್ ದೇಯಂ ತನ್ಮೇ ಶಂಸಿತುಮರ್ಹಸಿ ॥೩೩॥

ಉಮಾ– ಇಂತಹ ಗುಣಯುತ ದಾನವು ಮಹಾದ್ರವ್ಯದ ದಾನವಾದರೂ ಅದು ನಿಷ್ಫಲವಾಗುವುದನ್ನು ನನಗೆ ಹೇಳು.

ಮಹೇಶ್ವರಃ

ತದಪ್ಯಸ್ತಿ ಮಹಾಭಾಗೇ ನರಾಣಾಂ ಭಾವದೋಷತಃ ॥೩೪॥

ಮಹೇಶ್ವರ– ಎಲೌ ಮಹಾಭಾಗ್ಯವಂತಳೇ, ಮನುಷ್ಯರ ಮನೋದೋಷಗಳಿಂದ ನಿಷ್ಫಲವಾಗುವಂತಹ ದೊಡ್ಡ ದಾನವೂ ಇದೆ.

ಕೃತ್ವಾ ತು ಧರ್ಮಂ ವಿಧಿವತ್ ಪಶ್ಚಾತ್ತಾಪಂ ಕರೋತಿ ಚೇತ್ ।
ಶ್ಲಾಘಯಾ ವಾ ಯದಿ ಬ್ರೂಯಾದ್ ವೃಥಾ ಸಂಸದಿ ಯತ್ಕೃತಮ್ ॥

ಪ್ರಕಲ್ಪಯೇಚ್ಚ ಮನಸಾ ತತ್ಫಲಂ ಪ್ರೇತ್ಯಭಾವತಃ ।
ಧರ್ಮಕಾರ್ಯಕೃತಂ ಯಚ್ಚ ಸತತಂ ಫಲಕಾಂಕ್ಷಯಾ ।
ಏವಂ ಕೃತಂ ವಾ ದತ್ತಂ ವಾ ಪರತ್ರ ವಿಫಲಂ ಭವೇತ್ ॥೩೬॥

ವಿಧಿಪೂರ್ವಕವಾಗಿ ದಾನವನ್ನು ಮಾಡಿ ಪಶ್ಚಾತ್ತಾಪವನ್ನು ಪಟ್ಟರೆ, ಸಂಸತ್ತಿನಲ್ಲಿ ತಾನು ಮಾಡಿದ ದಾನವನ್ನು ವ್ಯರ್ಥವಾಗಿ ಹೊಗಳಿಕೊಂಡರೆ, ತಾನು ಮಾಡುವ ದಾನಕ್ಕೆ ಮನಸ್ಸಿನಲ್ಲಿ ಮರಣಾನಂತರದಲ್ಲಿ ಫಲವನ್ನು ಅಪೇಕ್ಷಿಸಿದರೆ - ಹೀಗೆ ಫಲದ ಅಪೇಕ್ಷೆಯಿಂದ ಸತತವಾಗಿ ಯಾರು ಧರ್ಮಕಾರ್ಯವನ್ನು ಮಾಡಿದರೂ ಅಂತಹ ದಾನವೂ ಮತ್ತು ಧರ್ಮವೂ ಪರಲೋಕದಲ್ಲಿ ನಿಷ್ಫಲವಾಗುತ್ತದೆ.

ಏತೇ ದೋಷಾ ವಿವರ್ಜ್ಯಾಶ್ಚ ದಾತೃಭಿಃ ಪುಣ್ಯಕಾಂಕ್ಷಿಭಿಃ ।
ಸನಾತನಮಿದಂ ವೃತ್ತಂ ಸದ್ಭಿರಾಚರಿತಂ ತಥಾ ॥೩೭॥

ಪುಣ್ಯವನ್ನು ಬಯಸುವ ದಾತೃಗಳು ಈ ದೋಷಗಳನ್ನು ವರ್ಜಿಸಬೇಕು. ಇದು ಸಜ್ಜನರು ಆಚರಿಸಿದ ಸನಾತನವಾದ ಸಂಪ್ರದಾಯ.

ಅನುಗ್ರಹಾತ್ ಪರೇಷಾಂ ತು ಗೃಹಸ್ಥಾನಾಮೃಣಂ ಹಿ ತತ್ ।
ಇತ್ಯೇವಂ ಮನ ಆವೇಶ್ಯ ದಾತವ್ಯಂ ಸತತಂ ಬುಧೈಃ ॥೩೮॥

ಇನ್ನೊಬ್ಬರನ್ನು ಅನುಗ್ರಹಿಸುವುದು ಗೃಹಸ್ಥರ ಋಣ ಎಂದು ಮನಸ್ಸಿನಲ್ಲಿ ತಿಳಿದು ವಿವೇಕಿಗಳಾದವರು ಸತತವಾಗಿ ದಾನವನ್ನು ಮಾಡಬೇಕು.

ಏವಮೇವ ಕೃತಂ ನಿತ್ಯಂ ಸುಕೃತಂ ತದ್ ಭವೇನ್ಮಹತ್ ।
ಸರ್ವಸಾಧಾರಣಂ ದ್ರವ್ಯಮೇವಂ ದತ್ತ್ವಾ ಮಹತ್ಫಲಮ್ ॥೩೯॥

ಹೀಗೆ ಮಾಡಿದ ದಾನವು ನಿತ್ಯವೂ ದೊಡ್ಡ ಸುಕೃತವಾಗುತ್ತದೆ. ಸರ್ವ ಸಾಧಾರಣವಾದ ದ್ರವ್ಯವನ್ನು ಈ ರೀತಿ ದಾನ ಮಾಡುವುದರಿಂದ ಮಹಾಫಲ ಉಂಟಾಗುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ತೃತೀಯಸುಕೃತಕಥನಂ ನಾಮ
ಏಕೋನವಿಂಶತ್ಯುತ್ತರದ್ವಿಶತತಮೋಽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಇಪ್ಪತ್ತನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ವಿವಿಧ ದಾನಫಲಗಳ ಕಥನ.

ಉಮಾ

ಭಗವನ್ ಕಾನಿ ದೇಯಾನಿ ಧರ್ಮಮುದ್ದಿಶ್ಯ ಮಾನವೈಃ ।
ತಾನ್ಯಹಂ ಶ್ರೋತುಮಿಚ್ಛಾಮಿ ತನ್ಮೇ ಶಂಸಿತುಮರ್ಹಸಿ ॥೧॥

ಉಮಾ– ಪೂಜ್ಯನೇ, ಮನುಷ್ಯರು ಧರ್ಮವನ್ನು ಉದ್ದೇಶಿಸಿ ಯಾವ ದಾನಗಳನ್ನು ಮಾಡಬೇಕೆಂದು ನಾನು ಕೇಳಲು ಬಯಸುತ್ತೇನೆ. ಅದನ್ನು ನನಗೆ ಹೇಳಬೇಕು.

ಮಹೇಶ್ವರಃ

ಅಜಸ್ರಂ ಧರ್ಮಕಾರ್ಯಂ ಚ ತಥಾ ನೈಮಿತ್ತಿಕಂ ಪ್ರಿಯೇ ।
ಅನ್ನಂ ಪ್ರತಿಶ್ರಯೋ ದೀಪಃ ಪಾನೀಯಂ ತೃಣಮಿಂಧನಮ್ ॥೨॥

ಸ್ನೇಹೋ ಗಂಧಶ್ಚ ಭೈಷಜ್ಯಂ ತಿಲಾಶ್ಚ ಲವಣಂ ತಥಾ ।
ಏವಮಾದಿ ತಥಾಽನ್ಯಚ್ಚ ದಾನಮಾಜಸ್ರಮುಚ್ಯತೇ ॥೩॥

ಮಹೇಶ್ವರ– ಎಲೌ ಪ್ರಿಯೆಯೇ, ಧರ್ಮಕಾರ್ಯವು ನಿತ್ಯವಾದುದು ಮತ್ತು ನೈಮಿತ್ತಿಕವಾದುದು ಎಂದು ಎರಡು ವಿಧ. ಅನ್ನ, ವಾಸಸ್ಥಾನ, ದೀಪ, ಜಲ, ಆಸನ, ಸಮಿತ್ತು, ಘೃತ, ಗಂಧ, ಔಷಧಿ, ಎಳ್ಳು, ಉಪ್ಪು- ಇವೇ ಮೊದಲಾದ ವಸ್ತುಗಳ ದಾನವು ಆಜಸ್ರ (ನಿತ್ಯ) ಎನಿಸುತ್ತದೆ.

ಅಜಸ್ರದಾನಾತ್ ಸತತಮಾಜಸ್ರಮಿತಿ ನಿಶ್ಚಿತಮ್ ।
ಸಾಮಾನ್ಯಂ ಸರ್ವವರ್ಣಾನಾಂ ದಾನಂ ಶೃಣು ಸಮಾಹಿತಾ ॥೪॥

ಅಜಸ್ರವಾಗಿ (ಸತತವಾಗಿ) ದಾನ ಮಾಡುವುದರಿಂದ ಇದಕ್ಕೆ ಆಜಸ್ರ ಎಂದು ಹೆಸರು. ಸರ್ವವರ್ಣಗಳಿಗೆ ಸಾಮಾನ್ಯವಾದ ದಾನಗಳನ್ನು ಹೇಳುತ್ತೇನೆ. ಸಮಾಧಾನದಿಂದ ಕೇಳು.

ಅನ್ನಂ ಪ್ರಾಣೋ ಮನುಷ್ಯಾಣಾಮನ್ನದಃ ಪ್ರಾಣದೋ ಭವೇತ್ ।
ತಸ್ಮಾದನ್ನಂ ವಿಶೇಷೇಣ ದಾತುಮಿಚ್ಛಂತಿ ಮಾನವಾಃ ॥೫॥

ಮನುಷ್ಯರಿಗೆ ಅನ್ನವೇ ಪ್ರಾಣ. ಅನ್ನವನ್ನು ದಾನ ಮಾಡುವವನು ಪ್ರಾಣದಾನವನ್ನೇ ಮಾಡುತ್ತಾನೆ. ಆದ್ದರಿಂದ ಮನುಷ್ಯರು ವಿಶೇಷವಾಗಿ ಅನ್ನದಾನವನ್ನು ಮಾಡಲು ಬಯಸುತ್ತಾರೆ.

ಬ್ರಾಹ್ಮಣಾಯಾಭಿರೂಪಾಯ ಯೋ ದದ್ಯಾದನ್ನಮೀಪ್ಸಿತಮ್ ।
ನಿದಧಾತಿ ನಿಧಿಂ ಶ್ರೇಷ್ಠಂ ಸೋಽನಂತಂ ಪಾರಲೌಕಿಕಮ್ ॥೬॥

ಯಾವನು ಯೋಗ್ಯನಾದ ಬ್ರಾಹ್ಮಣನಿಗೆ ಅವನಿಗೆ ಇಷ್ಟವಾದ ಅನ್ನವನ್ನು ಕೊಡುತ್ತಾನೆಯೋ ಅವನು ಪರಲೋಕದಲ್ಲಿ ಅನಂತವಾದ, ಶ್ರೇಷ್ಠವಾದ ನಿಧಿಯನ್ನು ಸ್ಥಾಪಿಸುತ್ತಾನೆ.

ಶ್ರಾಂತಮಧ್ವಪರಿಶ್ರಾಂತಮತಿಥಿಂ ಗೃಹಮಾಗತಮ್ ।
ಅರ್ಚಯೀತ ಪ್ರಯತ್ನೇನ ಸ ಹಿ ಯಜ್ಞೋ ವರಃ ಸ್ಮೃತಃ ॥೭॥

ಮಾರ್ಗಾಯಾಸದಿಂದ ಬಳಲಿ ಮನೆಗೆ ಬಂದ ಅತಿಥಿಯನ್ನು ಪ್ರಯತ್ನ ಪೂರ್ವಕವಾಗಿ ಪೂಜಿಸಬೇಕು. ಅದು ಶ್ರೇಷ್ಠವಾದ ಯಜ್ಞವೆನಿಸುತ್ತದೆ.

ಕೃತ್ವಾ ತು ಪಾತಕಂ ಕರ್ಮ ಯೋ ದದ್ಯಾದನ್ನಮರ್ಥಿನಾಮ್ ।
ಬ್ರಾಹ್ಮಣಾನಾಂ ವಿಶೇಷೇಣ ಸೋಽಪಹಂತಿ ಸ್ವಕಂ ತಮಃ ॥೮೪॥

ಪಾತಕವನ್ನು ಮಾಡಿದವನೂ ಸಹ ಬ್ರಾಹ್ಮಣರಿಗೆ ವಿಶೇಷವಾಗಿ ಅನ್ನದಾನವನ್ನು ಮಾಡುವುದರಿಂದ ತನ್ನ ಪಾಪವನ್ನು ಕಳೆದುಕೊಳ್ಳುತ್ತಾನೆ.

ಪಿತರಸ್ತಸ್ಯ ನಂದಂತಿ ಸುವೃಷ್ಟ್ಯಾ ಕರ್ಷಕಾ ಇವ ।
ಪುತ್ರೋ ವಾ ಯಸ್ಯ ಪೌತ್ರೋ ವಾ ಶ್ರೋತ್ರಿಯಾನ್ ಭೋಜಯಿಷ್ಯತಿ ॥

ಕೃಷಿಕರು ಒಳ್ಳೆಯ ಮಳೆಯಿಂದ ಸಂತೋಷಪಡುವಂತೆ ಪಿತೃಗಳು ತನ್ನ ಪುತ್ರನು ಅಥವಾ ಪೌತ್ರನು ಶ್ರೋತ್ರಿಯರಿಗೆ ಅನ್ನದಾನ ಮಾಡಿದರೆ ಸಂತೋಷ ಪಡುತ್ತಾರೆ.

ಅಪಿ ಚಂಡಾಲಶೂದ್ರಾಣಾಮನ್ನದಾನಾನ್ನ ಗರ್ಹ್ಯತೇ ।
ತಸ್ಮಾತ್ ಸರ್ವಪ್ರಯತ್ನೇನ ದದ್ಯಾದನ್ನಮಮತ್ಸರಃ ॥೮೦॥

ಚಂಡಾಲ, ಶೂದ್ರರಿಗೆ ಅನ್ನದಾನವನ್ನು ಮಾಡಿದರೂ ಅದು ನಿಂದಿತವಾದುದಲ್ಲ. ಆದ್ದರಿಂದ ಸರ್ವಪ್ರಯತ್ನದಿಂದ ಮತ್ಸರಹೀನರಾಗಿ ಅನ್ನದಾನವನ್ನು ಮಾಡಬೇಕು.

ಕಳತ್ರಂ ಪೀಡಯಿತ್ವಾಽಪಿ ಪೋಷಯೇದತಿಥೀನ್ ಸದಾ ।
ಜನ್ಮಾಪಿ ಮಾನುಷೇ ಲೋಕೇ ತದರ್ಥಂ ಹಿ ವಿಧೀಯತೇ ॥೮೧॥

ಪತ್ನಿ ಮೊದಲಾದ ಪರಿವಾರಕ್ಕೆ ತೊಂದರೆಯಾದರೂ ಸಹ ಅತಿಥಿಗಳನ್ನು ಪೋಷಿಸಬೇಕು. ಮನುಷ್ಯಜನ್ಮವು ಅದಕ್ಕಾಗಿ ಎಂದು ಹೇಳಲ್ಪಡುತ್ತದೆ.

ಅನ್ನದಾನಾಚ್ಚ ಲೋಕಾಂಸ್ತಾನ್ ಸಂಪ್ರವಕ್ಷ್ಯಾಮ್ಯನಿಂದಿತೇ ।
ಭವನಾನಿ ಪ್ರಕಾಶಂತೇ ದಿವಿ ತೇಷಾಂ ಮಹಾತ್ಮನಾಮ್ ॥೮೨॥

ಎಲೌ ಅನಿಂದಿತೆಯೇ, ಅನ್ನದಾನದಿಂದ ಉಂಟಾಗುವ ಲೋಕಗಳನ್ನು ನಾನು ಹೇಳುವೆನು. ಅಂತಹ ಮಹಾತ್ಮರ ಭವನಗಳು ಸ್ವರ್ಗಲೋಕದಲ್ಲಿ ಪ್ರಕಾಶಿಸುತ್ತವೆ.

ಅನೇಕಶತಭೌಮಾನಿ ಸಾಂತರ್ಜಲವನಾನಿ ಚ ।
ವೈಡೂರ್ಯಾರ್ಚಿಃಪ್ರಕಾಶಾನಿ ರುಗ್ಮರೂಪ್ಯನಿಭಾನಿ ಚ ॥೮೩॥

ನಾನಾಸಂಸ್ಥಾನರೂಪಾಣಿ ನಾನಾರತ್ನಮಯಾನಿ ಚ ।
ಚಂದ್ರಮಂಡಲಶುಭ್ರಾಣಿ ಕಿಂಕಿಣೀಜಾಲವಂತಿ ಚ ॥೧೪॥

ತರುಣಾದಿತ್ಯವರ್ಣಾನಿ ಸ್ಥಾವರಾಣಿ ಚರಾಣಿ ಚ ।
ಯಥೇಷ್ಟಭಕ್ಷ್ಯಭೋಜ್ಯಾನಿ ಶಯನಾಸನವಂತಿ ಚ ॥೧೫॥

ನೂರಾರು ರತ್ನಗಳಿಂದ ಕೂಡಿರುವ, ಜಲಾಶಯಗಳನ್ನು ಮತ್ತು ವನಗಳನ್ನು ಹೊಂದಿದ, ವೈಡೂರ್ಯಕಾಂತಿಯಿಂದ ಹೊಳೆಯುವ, ಸುವರ್ಣ-ರಜತ ಕಾಂತಿಯನ್ನು ಹೊಂದಿದ, ಅನೇಕ ವಿಧವಾದ ಆಕಾರಗಳನ್ನು ಹೊಂದಿದ, ನಾನಾ ರತ್ನಮಯವಾದ, ಚಂದ್ರಮಂಡಲದಂತೆ ಶುಭ್ರವಾದ, ಸಣ್ಣಗಂಟೆಗಳ ಜಾಲದಿಂದ ಕೂಡಿದ, ಉದಯಿಸುವ ಸೂರ್ಯನ ಬಣ್ಣವನ್ನು ಹೊಂದಿದ, ಚಲಿಸುವ ಮತ್ತು ಚಲಿಸದಿರುವ, ಯಥೇಷ್ಟ ಭಕ್ಷ್ಯಭೋಜ್ಯಗಳಿಂದ ಕೂಡಿದ, ಶ್ರೇಷ್ಠವಾದ ಶಯ್ಯಾಸನಗಳಿಂದ ಕೂಡಿದ ಭವನಗಳು ಅವರಿಗೆ ಅಲ್ಲಿ ಪ್ರಕಾಶಿಸುತ್ತವೆ.

ಸರ್ವಕಾಮಫಲಾಶ್ಚಾತ್ರ ವೃಕ್ಷಾ ಭವನಸಂಸ್ಥಿತಾಃ ।
ವಾಪ್ಯೋ ಬಹ್ವ್ಯಶ್ಚ ಕೂಪಾಶ್ಚ ದೀರ್ಘಿಕಾಶ್ಚ ಸಹಸ್ರಶಃ ॥೧೬॥

ಅರುಜಾನಿ ವಿಶೋಕಾನಿ ನಿತ್ಯಾನಿ ವಿವಿಧಾನಿ ಚ ।
ಭವನಾನಿ ವಿವಿಕ್ತಾನಿ ಪ್ರಾಣದಾನಾಂ ತ್ರಿವಿಷ್ಟಪೇ ॥೧೭॥

ಭವನದ ಸುತ್ತಲೂ ಇರುವ ವೃಕ್ಷಗಳು ಅಪೇಕ್ಷಿತವಾದ ಎಲ್ಲಾ ಫಲಗಳನ್ನೂ ಕೊಡುತ್ತವೆ. ಅನೇಕ ಬಾವಿಗಳು, ಸರೋವರಗಳು, ಇಳಿಯುವ ಬಾವಿಗಳು ಸಾವಿರಾರು ಸಂಖ್ಯೆಯಲ್ಲಿ ಇರುತ್ತವೆ. ಅನ್ನದಾನವನ್ನು ಮಾಡಿದವರಿಗೆ ಸ್ವರ್ಗದಲ್ಲಿ ಶೋಕ-ರೋಗ ರಹಿತವಾದ ಪ್ರತ್ಯೇಕವಾದ ವಿವಿಧವಾದ ನಿತ್ಯವಾದ ಭವನಗಳು ಇರುತ್ತವೆ.

ವಿವಸ್ವತಶ್ಚ ಸೋಮಸ್ಯ ಬ್ರಹ್ಮಣಶ್ಚ ಪ್ರಜಾಪತೇಃ ।
ವಿಶಂತಿ ಲೋಕಾಂಸ್ತೇ ನಿತ್ಯಂ ಜಗತ್ಯನ್ನೋದಕಪ್ರದಾಃ ॥೧೮॥

ಜಗತ್ತಿನಲ್ಲಿ ಅನ್ನೋದಕವನ್ನು ದಾನ ಮಾಡುವವರು ಸೂರ್ಯಲೋಕಕ್ಕೂ, ಚಂದ್ರಲೋಕಕ್ಕೂ, ಪ್ರಜಾಪತಿಯಾದ ಬ್ರಹ್ಮನ ಲೋಕಕ್ಕೂ ಹೋಗುತ್ತಾರೆ.

ತತ್ರ ತೇ ಸುಚಿರಂ ಕಾಲಂ ವಿಹೃತ್ಯಾಪ್ಸರಸಾಂ ಗಣೈಃ ।
ಜಾಯಂತೇ ಮಾನುಷೇ ಲೋಕೇ ಸರ್ವಕಲ್ಯಾಣಸಂಯುತಾಃ ॥೧೯॥

ಅವರು ಅಲ್ಲಿ ಬಹಳ ಕಾಲದವರೆಗೆ ಅಪ್ಸರೆಯರ ಜೊತೆಯಲ್ಲಿ ವಿಹಾರವನ್ನು ಮಾಡಿ, ಮನುಷ್ಯಲೋಕದಲ್ಲಿ ಎಲ್ಲಾ ಕಲ್ಯಾಣಗಳಿಂದ ಸಹಿತರಾಗಿ ಜನಿಸುತ್ತಾರೆ.

ಬಲಸಂಹನನೋಪೇತಾ ನೀರೋಗಾಶ್ಚಿರಜೀವಿನಃ ।
ಕುಲೀನಾ ಮತಿಮಂತಶ್ಚ ಭವಂತ್ಯನ್ನಪ್ರದಾ ನರಾಃ ॥೨೦॥

ಅನ್ನದಾನವನ್ನು ಮಾಡುವ ಮನುಷ್ಯರು ಒಳ್ಳೆಯ ಶರೀರ, ಬಲ, ಆರೋಗ್ಯ, ಚಿರಜೀವನ, ಸತ್ಕುಲ, ಮೇಧಾಶಕ್ತಿ- ಇವುಗಳನ್ನು ಹೊಂದುತ್ತಾರೆ.

ತಸ್ಮಾದನ್ನಂ ವಿಶೇಷೇಣ ದಾತವ್ಯಂ ಭೂತಿಮಿಚ್ಛತಾ ।
ಸರ್ವಕಾಲಂ ಚ ಸರ್ವಸ್ಯ ಸರ್ವತ್ರ ಚ ಸದೈವ ಚ ॥೨೧॥

ಆದ್ದರಿಂದ ಕಲ್ಯಾಣವನ್ನು ಬಯಸುವವನು ಎಲ್ಲಾ ಕಾಲಗಳಲ್ಲಿಯೂ, ಎಲ್ಲ ದೇಶಗಳಲ್ಲಿಯೂ ಎಲ್ಲರಿಗೂ ವಿಶೇಷವಾಗಿ ಅನ್ನದಾನವನ್ನು ಮಾಡಬೇಕು.

ಸುವರ್ಣದಾನಂ ಪರಮಂ ಸ್ವರ್ಗ್ಯಂ ಸ್ವಸ್ತ್ಯಯನಂ ಮಹತ್ ।
ತಸ್ಮಾತ್ ತದ್ ವರ್ಣಯಿಷ್ಯಾಮಿ ಯಥಾವದನುಪೂರ್ವಶಃ ॥೨೨॥

ಅಪಿ ಪಾಪಕೃತಂ ಕ್ರೂರಂ ದತ್ತಂ ರುಗ್ಮಂ ಪ್ರಣಾಶಯೇತ್ ॥೨೩॥

ಸುವರ್ಣದಾನವು ಶ್ರೇಷ್ಠವಾದ ಸ್ವರ್ಗ ಪ್ರಾಪಕವಾದ, ಕ್ಷೇಮವನ್ನುಂಟು ಮಾಡುವ ದೊಡ್ಡ ದಾನ. ಆದ್ದರಿಂದ ಅದನ್ನು ಒಂದು ಕ್ರಮದಿಂದ ಸರಿಯಾಗಿ ವರ್ಣಿಸುವೆನು. ಸುವರ್ಣದಾನವು ಮಾಡಿದ ಕ್ರೂರವಾದ ಪಾಪವನ್ನೂ ವಿನಾಶಗೊಳಿಸುತ್ತದೆ.

ಸುವರ್ಣಂ ಯೇ ಪ್ರಯಚ್ಛಂತಿ ಶ್ರೋತ್ರಿಯೇಭ್ಯಃ ಸುಚೇತಸಃ ।
ದೇವತಾಸ್ತೇ ತರ್ಪಯಂತಿ ಸಮಸ್ತಾ ಇತಿ ವೈದಿಕಮ್ ॥೨೪॥

ಯಾರು ಒಳ್ಳೆಯ ಮನಸ್ಸಿನಿಂದ ಕೂಡಿ ಶ್ರೋತ್ರಿಯರಿಗೆ ಸುವರ್ಣದಾನವನ್ನು ಮಾಡುತ್ತಾರೆಯೋ ಅವರು ಸಮಸ್ತ ದೇವತೆಗಳನ್ನೂ ತೃಪ್ತಿಪಡಿಸುತ್ತಾರೆ ಎಂದು ವೇದಾನುಶಾಸನವಿದೆ.

ಅಗ್ನಿರ್ಹಿ ದೇವತಾಃ ಸರ್ವಾಃ ಸುವರ್ಣಂ ಚಾಗ್ನಿರುಚ್ಯತೇ ।
ತಸ್ಮಾತ್ ಸುವರ್ಣದಾನೇನ ದತ್ತಾಃ ಸ್ಯುಃ ಸರ್ವದೇವತಾಃ ॥೨೫॥

ಅಗ್ನಿಯಲ್ಲಿ ಸರ್ವದೇವತೆಗಳೂ ಸನ್ನಿಹಿತರಾಗಿರುತ್ತಾರೆ. ಸುವರ್ಣದಲ್ಲಿ ಅಗ್ನಿಯು ಸನ್ನಿಹಿತನಾಗಿದ್ದಾನೆ. ಆದ್ದರಿಂದ ಸುವರ್ಣದಾನವನ್ನು ಮಾಡಿದರೆ ಎಲ್ಲಾ ದೇವತೆಗಳ ದಾನವನ್ನು ಮಾಡಿದಂತಾಗುತ್ತದೆ.

ಅಗ್ನ್ಯಭಾವೇ ತು ಕುರ್ವಂತಿ ವಹ್ನಿಸ್ಥಾನೇಷು ಕಾಂಚನಮ್ ।
ತಸ್ಮಾತ್ ಸುವರ್ಣದಾತಾರಃ ಸರ್ವಾನ್ ಕಾಮಾನವಾಪ್ನುಯುಃ ॥೨೬॥

ಅಗ್ನಿ ಇಲ್ಲದಿದ್ದರೆ ಅಗ್ನಿಸ್ಥಾನದಲ್ಲಿ ಸುವರ್ಣವನ್ನಿಟ್ಟು ಕಾರ್ಯವನ್ನು ಮಾಡುತ್ತಾರೆ. ಆದ್ದರಿಂದ ಸುವರ್ಣದಾನವನ್ನು ಮಾಡುವವರು ಎಲ್ಲಾ ಕಾಮಗಳನ್ನೂ ಹೊಂದುತ್ತಾರೆ.

ಆದಿತ್ಯಸ್ಯ ಹುತಾಶಸ್ಯ ಲೋಕಾನ್ ನಾನಾವಿಧಾನ್ ಶುಭಾನ್ ।
ಕಾಂಚನಂ ಸಂಪ್ರದಾಯಾಶು ಪ್ರವಿಶಂತಿ ನ ಸಂಶಯಃ ॥೨೭॥

ಸುವರ್ಣದಾನವನ್ನು ಮಾಡಿದವರು ನಾನಾ ವಿಧವಾದ ಶುಭವಾದ ಆದಿತ್ಯಲೋಕಕ್ಕೂ, ಅಗ್ನಿಲೋಕಕ್ಕೂ ಹೋಗುವುದರಲ್ಲಿ ಸಂಶಯವಿಲ್ಲ.

ಅಲಂಕಾರಕೃತಂ ಚಾಪಿ ಕೇವಲಾತ್ ಪ್ರವಿಶಿಷ್ಯತೇ ।
ಸೌವರ್ಣೈರ್ಬ್ರಾಹ್ಮಣಾನ್ ಕಾಲೇ ತೈರಲಂಕೃತ್ಯ ಭೋಜಯೇತ್ ॥೨೮॥

ಕೇವಲ ಸುವರ್ಣಕ್ಕಿಂತಲೂ ಆಭರಣರೂಪವಾದ ಸುವರ್ಣವು ಶ್ರೇಷ್ಠವಾದುದು. ಬ್ರಾಹ್ಮಣರನ್ನು ಸುವರ್ಣಾಭರಣಗಳಿಂದ ಅಲಂಕರಿಸಿ, ಅವರಿಗೆ ಭೋಜನವನ್ನು ಮಾಡಿಸಬೇಕು.

ಏತತ್ಪರಮಕಂ ದಾನಂ ದತ್ತ್ವಾ (ದತ್ತ್ವಾಸೌ ವರ್ಣ) ಸೌವರ್ಣಮದ್ಭುತಮ್ ।
ದ್ಯುತಿಂ ಮೇಧಾಂ ವಪುಃ ಕೀರ್ತಿಂ ಪುನರ್ಜಾತೇ ಲಭೇದ್ ಧ್ರುವಮ್॥೨೯॥

ಇದು ಶ್ರೇಷ್ಠವಾದ ದಾನ. ಸುವರ್ಣದಾನವನ್ನು ಮಾಡುವವನು ಮುಂದಿನ ಜನ್ಮದಲ್ಲಿ ಒಳ್ಳೆಯ ವರ್ಣವನ್ನೂ, ಕಾಂತಿಯನ್ನೂ, ಮೇಧಾಶಕ್ತಿಯನ್ನೂ, ಶರೀರವನ್ನೂ ಮತ್ತು ಕೀರ್ತಿಯನ್ನೂ ಪಡೆಯುತ್ತಾನೆ.

ತಸ್ಮಾತ್ ಸ್ವಶಕ್ತ್ಯಾ ದಾತವ್ಯಂ ಕಾಂಚನಂ ಭುವಿ ಮಾನವೈಃ ।
ನ ಹ್ಯೇತಸ್ಮಾತ್ ಪರಂ ಲೋಕೇಷ್ವನ್ಯತ್ ಪಾವನಮುಚ್ಯತೇ ॥೩೦॥

ಆದ್ದರಿಂದ ಭೂಮಿಯಲ್ಲಿ ಮನುಷ್ಯರು ತಮ್ಮ ಶಕ್ತಿಗೆ ಅನುಗುಣವಾಗಿ ಸುವರ್ಣ ದಾನವನ್ನು ಮಾಡಬೇಕು. ಲೋಕದಲ್ಲಿ ಇದಕ್ಕಿಂತ ಪವಿತ್ರವಾದುದು ಯಾವುದೂ ಇಲ್ಲವೆಂದು ಹೇಳಲ್ಪಡುತ್ತದೆ.

ಅತ ಊರ್ಧ್ವಂ ಪ್ರವಕ್ಷ್ಯಾಮಿ ಗವಾಂ ದಾನಮನಿಂದಿತೇ ।
ನಹಿ ಗೋಭ್ಯಃ ಪರಂ ದಾನಂ ವಿದ್ಯತೇ ಜಗತಿ ಪ್ರಿಯೇ ॥೩೧॥

ಎಲೌ ಅನಿಂದಿತೆಯೇ, ಇಲ್ಲಿಂದ ಮುಂದೆ ಗೋದಾನವನ್ನು ಹೇಳುವೆನು. ಪ್ರಿಯೆಯೇ, ಜಗತ್ತಿನಲ್ಲಿ ಗೋದಾನಕ್ಕಿಂತಲೂ ಶ್ರೇಷ್ಠವಾದ ದಾನವಿಲ್ಲ.

ಲೋಕಾನ್ ಸಿಸೃಕ್ಷುಣಾ ಪೂರ್ವಂ ಗಾವಃ ಸೃಷ್ಟಾಃ ಸ್ವಯಂಭುವಾ ।
ವೃತ್ಯರ್ಥಂ ಸರ್ವಭೂತಾನಾಂ ತಸ್ಮಾತ್ತಾ ಮಾತರಃ ಸ್ಮೃತಾಃ ॥೩೨॥

ಜಗತ್ತನ್ನು ಸೃಷ್ಟಿಮಾಡಲು ಇಚ್ಛಿಸಿದ ಬ್ರಹ್ಮದೇವರು ಮೊದಲು ಪ್ರಜೆಗಳ ಜೀವನಕ್ಕಾಗಿ ಗೋವುಗಳನ್ನು ಸೃಷ್ಟಿಸಿದರು. ಆದ್ದರಿಂದ ಗೋವುಗಳು ಪ್ರಜೆಗಳ ತಾಯಂದಿರು ಎಂದು ಹೇಳಲ್ಪಡುತ್ತವೆ.

ಲೋಕಜ್ಯೇಷ್ಠಾ ಲೋಕವೃತ್ಯಾ ಪ್ರವೃತ್ತಾ
ಮಯ್ಯಾಯತ್ತಾಃ ಸೋಮವಿಷ್ಯಂದಭೂತಾಃ ।
ಸೌಮ್ಯಾಃ ಪುಣ್ಯಾಃ ಕಾಮದಾಃ ಪ್ರಾಣದಾಶ್ಚ
ತಸ್ಮಾತ್ ಪೂಜ್ಯಾಃ ಪುಣ್ಯಕಾಮೈರ್ಮನುಷ್ಯೈಃ ॥೩೩॥

ಗೋವುಗಳು ಲೋಕದಲ್ಲಿ ಜ್ಯೇಷ್ಠವಾದವುಗಳು. ಲೋಕದ ಸ್ಥಿತಿಗಾಗಿ ಪ್ರವೃತ್ತವಾದವುಗಳು. ನನ್ನನ್ನು ಆಶ್ರಯಿಸಿಕೊಂಡಿರುವಂತಹವು. ಕ್ಷೀರವನ್ನು ಹರಿಸುವಂತಹವು. ಸೌಮ್ಯ ಸ್ವಭಾವವನ್ನು ಹೊಂದಿರುವಂತಹವು. ಪವಿತ್ರವಾದವುಗಳು. ಕಾಮಪ್ರದವಾದವುಗಳು. ಪ್ರಾಣಪ್ರದವಾದವುಗಳು. ಆದ್ದರಿಂದ ಪುಣ್ಯವನ್ನು ಬಯಸುವ ಮನುಷ್ಯರು ಅವುಗಳನ್ನು ಪೂಜಿಸಬೇಕು.

ಧೇನುಂ ಹಿ ದತ್ತ್ವಾ ನಿಭೃತಾಮರೋಗಾಂ
ಕಲ್ಯಾಣವತ್ಸಾಂ ಚ ಪಯಸ್ವಿನೀಂ ಚ ।
ಯಾವಂತಿ ರೋಮಾಣಿ ಭವಂತಿ ತಸ್ಯಾ-
ಸ್ತಾವತ್ಸಮಾಃ ಸ್ವರ್ಗಫಲಾನಿ ಭುಂಕ್ತೇ ॥೩೪॥

ಸೌಮ್ಯ ಸ್ವಭಾವದ, ರೋಗಹೀನವಾದ, ಒಳ್ಳೆಯ ಕರುವನ್ನು ಹೊಂದಿದ, ಹಾಲನ್ನು ಕರೆಯುವ ಗೋವನ್ನು ದಾನ ಮಾಡಿದವನು ಆ ಗೋವಿನ ಶರೀರದಲ್ಲಿ ಎಷ್ಟು ರೋಮಗಳಿರುತ್ತವೆಯೋ ಅಷ್ಟು ವರ್ಷಗಳ ಕಾಲ ಸ್ವರ್ಗಫಲವನ್ನು ಅನುಭವಿಸುತ್ತಾನೆ.

ಪ್ರಯಚ್ಛತೇ ಯಃ ಕಪಿಲಾಂ ಸಚೇಲಾಂ
ಕಾಂಸ್ಯೋಪದೋಹಾಂ ಕನಕಾಗ್ರಶೃಂಗೀಮ್ ।
ಪುತ್ರಾಶ್ಚ ಪೌತ್ರಾಂಶ್ಚ ಕುಲಂ ಚ ಸರ್ವಮ್
ಆ ಸಪ್ತಮಂ ತಾರಯತೇ ಪರತ್ರ ॥೩೫॥

ಯಾವನು ವಸ್ತ್ರಸಹಿತವಾದ, ಕಂಚಿನ ಕರೆಯುವ ಪಾತ್ರೆಯಿಂದ ಸಹಿತವಾದ, ಶೃಂಗದ ತುದಿಗಳನ್ನು ಚಿನ್ನದಿಂದ ಅಲಂಕರಿಸಿದ ಕಪಿಲಾಗೋವನ್ನು ದಾನ ಮಾಡುತ್ತಾನೆಯೋ ಅವನು ಏಳು ತಲೆಯವರೆಗೆ ತನ್ನ ಪುತ್ರರನ್ನೂ, ಪೌತ್ರರನ್ನೂ, ಕುಲವನ್ನೂ ಸಂಕಟದಿಂದ ಪಾರು ಮಾಡುತ್ತಾನೆ.

ಅಂತರ್ಜಾತಾಃ ಕ್ರೀತಕಾ ದ್ಯೂತಲಬ್ಧಾಃ
ಪ್ರಾಣಕ್ರೀತಾಃ ಸೋದಕಾಶ್ಚೋಜಸಾ ವಾ ।
ಕೃಚ್ಛ್ರೋತ್ಸೃಷ್ಟಾಃ ಪೋಷಣಾರ್ಥಾಗತಾಶ್ಚ
ದ್ವಾರೈರೇತೈಸ್ತಾಃ ಪ್ರಲಬ್ಧಾಃ ಪ್ರದದ್ಯಾತ್ ॥೩೬॥

ಮನೆಯಲ್ಲಿ ಹುಟ್ಟಿದ ಹಸುಗಳು, ಕೊಂಡಂತಹವು, ದ್ಯೂತದಲ್ಲಿ ಪಡೆದವುಗಳು, ದಾನವಾಗಿ ಪಡೆದಂತಹವು, ಪ್ರಾಣವನ್ನು ಕೊಟ್ಟು ಕೊಂಡುಕೊಂಡತಹವು, ಸಾಕುವವರಿಗೆ ಕಷ್ಟವಾಗಿ ತ್ಯಜಿಸಲ್ಪಟ್ಟವುಗಳು, ಪೋಷಣೆಗಾಗಿ ತಾವಾಗಿಯೇ ತನ್ನ ಬಳಿಗೆ ಬಂದಂತಹವುಗಳು -ಇಂತಹ ಅನೇಕ ರೀತಿಯಲ್ಲಿ ಪಡೆದ ಗೋವುಗಳನ್ನು ದಾನ ಮಾಡಬೇಕು.

ಕೃಶಾಯ ಬಹುಪುತ್ರಾಯ ಶ್ರೋತ್ರಿಯಾಯಾಹಿತಾಗ್ನಯೇ ।
ಪ್ರದಾಯ ನೀರುಜಾಂ ಧೇನುಂ ಲೋಕಾನ್ ಪ್ರಾಪ್ನೋತ್ಯನುತ್ತಮಾನ್ ॥

ಕೃಶನಾದ, ಬಹುಪುತ್ರರನ್ನು ಹೊಂದಿದ, ಆಹಿತಾಗ್ನಿಯಾದ, ಶ್ರೋತ್ರಿಯನಾದ ಬ್ರಾಹ್ಮಣನಿಗೆ ರೋಗರಹಿತವಾದ ಧೇನುವನ್ನು ಕೊಡುವವನು ಶ್ರೇಷ್ಠವಾದ ಲೋಕವನ್ನು ಹೊಂದುತ್ತಾನೆ.

ನೃಶಂಸಸ್ಯ ಕೃತಘ್ನಸ್ಯ ಲುಬ್ಧಸ್ಯಾನೃತವಾದಿನಃ ।
ಹವ್ಯಕವ್ಯವ್ಯಪೇತಸ್ಯ ನ ದದ್ಯಾದ್ ಗಾಃ ಕಥಂಚನ ॥೩೮॥

ಕ್ರೂರಿಯಾದವನಿಗೆ, ಕೃತಘ್ನನಾದವನಿಗೆ, ಲೋಭಿಯಾದವನಿಗೆ, ಅನೃತವಾದಿಗೆ, ಹವ್ಯ-ಕವ್ಯರಹಿತನಾದವನಿಗೆ ಎಂದೂ ಗೋದಾನವನ್ನು ಮಾಡಬಾರದು.

ಸಮಾನವತ್ಸಾಂ ಯೋ ದದ್ಯಾದ್ ಧೇನುಂ ವಿಪ್ರೇ ಪಯಸ್ವಿನೀಮ್ ।
ಸುವೃತ್ತಾಂ ವಸ್ತ್ರಸಂದಾನಾಂ ಸೋಮಲೋಕೇ ಮಹೀಯತೇ ॥೩೯॥

ಒಳ್ಳೆಯ ಗುಣವನ್ನು ಹೊಂದಿದ, ಹಾಲನ್ನು ಕರೆಯುವ ಸಮಾನವಾದ ಕರುವಿನಿಂದ ಕೂಡಿದ, ವಸ್ತ್ರದಿಂದ ಆಚ್ಛಾದಿತವಾದ ಗೋವನ್ನು ದಾನ ಮಾಡುವವನು ಚಂದ್ರ ಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಸಮಾನವತ್ಸಾಂ ಯೋ ಧೇನುಂ ಕೃಷ್ಣಾಂ ದದ್ಯಾತ್ ಪಯಸ್ವಿನೀಮ್ ।
ಸುವೃತ್ತಾಂ ವಸ್ತ್ರಸಂದಾನಾಂ ಲೋಕಾನ್ ಪ್ರಾಪ್ನೋತ್ಯಪಾಂಪತೇಃ ॥೪೦॥

ಸಮಾನ ವತ್ಸವುಳ್ಳ, ಹಾಲನ್ನು ಕರೆಯುವ, ಒಳ್ಳೆಯ ನಡತೆಯನ್ನು ಹೊಂದಿದ, ವಸ್ತ್ರದಿಂದ ಆಚ್ಛಾದಿತವಾದ ಕೃಷ್ಣಧೇನುವನ್ನು ದಾನ ಮಾಡುವವನು ವರುಣ ಲೋಕವನ್ನು ಹೊಂದುತ್ತಾನೆ.

ಸಮಾನವತ್ಸಾಂ ಯೋ ಧೇನುಂ ದದ್ಯಾದ್ ಗೌರೀಂ ಪಯಸ್ವಿನೀಮ್ ।
ಸುವೃತ್ತಾಂ ವಸ್ತ್ರಸಂದಾನಾಮಗ್ನಿಲೋಕೇ ಮಹೀಯತೇ ॥೪೧॥

ಸಮಾನ ವತ್ಸವನ್ನು ಹೊಂದಿದ, ಹಾಲು ಕರೆಯುವ, ಒಳ್ಳೆಯ ನಡತೆಯುಳ್ಳ, ವಸ್ತ್ರಾಚ್ಛಾದಿತವಾದ ಗೌರವರ್ಣದ ಗೋವನ್ನು ದಾನ ಮಾಡುವವನು ಅಗ್ನಿ ಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಹಿರಣ್ಯವರ್ಣಾಂ ಪಿಂಗಾಕ್ಷೀಂ ಸವತ್ಸಾಂ ಕಾಂಸ್ಯದೋಹನಾಮ್ ।
ಪ್ರದಾಯ ವಸ್ತ್ರಸಂದಾನಾಂ ಯಾತಿ ಕೌಬೇರಸದ್ಮ ಸಃ ॥೪೨॥

ಸುವರ್ಣವರ್ಣದ, ಕಂದುಬಣ್ಣದ ಕಣ್ಣುಳ್ಳ ಕರುವನ್ನು ಹೊಂದಿರುವ, ಕರೆಯುವ ಪಾತ್ರೆ ಮತ್ತು ವಸ್ತ್ರಗಳಿಂದ ಕೂಡಿದ ಗೋದಾನವನ್ನು ಮಾಡಿದವನು ಕುಬೇರನ ಮನೆಯನ್ನು ಪ್ರವೇಶಿಸುತ್ತಾನೆ.

ವಾಯುರೇಣುಸವರ್ಣಾಂ ತು ಸವತ್ಸಾಂ ಕಾಂಸ್ಯದೋಹನಾಮ್ ।
ಪ್ರದಾಯ ವಸ್ತ್ರಸಂದಾನಾಂ ವಾಯುಲೋಕೇ ಮಹೀಯತೇ ॥೪೩॥

ವಾಯುವಿನ ಧೂಳಿನ ಕಣದ ಬಣ್ಣವನ್ನು ಹೊಂದಿದ, ವತ್ಸಸಹಿತವಾದ, ಕಂಚಿನ ಪಾತ್ರೆಯಿಂದ ಸಹಿತವಾದ, ವಸ್ತ್ರಯುತವಾದ ಗೋವನ್ನು ದಾನ ಮಾಡುವವನು ವಾಯುಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಯುವಾನಂ ಬಲಿನಂ ಶ್ಯಾಮಂ ಶತೇನ ಸಹ ಯೂಥಪಮ್ ।
ಗವೇಂದ್ರಂ ಬ್ರಾಹ್ಮಣೇಂದ್ರಾಯ ಭೂರಿಶೃಂಗಮಲಂಕೃತಮ್ ॥೪೪॥

ಋಷಭಂ ಯೇ ಪ್ರಯಚ್ಛಂತಿ ಶ್ರೋತ್ರಿಯಾಣಾಂ ಮಹಾತ್ಮನಾಮ್ ।
ಐಶ್ವರ್ಯಮಭಿಜಾಯಂತೇ ಜಾಯಮಾನಾಃ ಪುನಃಪುನಃ ॥೪೫॥

ಯುವವಯಸ್ಸಿನ, ಬಲಿಷ್ಠವಾದ, ಶ್ಯಾಮವರ್ಣದ, ನೂರು ನಿಷ್ಕಗಳಿಂದ ಸಹಿತವಾದ, ಅಲಂಕೃತವಾದ ದೊಡ್ಡ ಕೊಂಬುಗಳನ್ನು ಹೊಂದಿದ, ಗುಂಪಿನ ನಾಯಕನಾದ ಗೂಳಿಯನ್ನು ಬ್ರಾಹ್ಮಣರಿಗೆ ದಾನ ಮಾಡುವವನು ಪುನಃ ಪುನಃ ಮಹಾತ್ಮರ, ಶ್ರೋತ್ರೀಯರ ಕುಲದಲ್ಲಿ ಐಶ್ವರ್ಯಯುಕ್ತನಾಗಿ ಜನಿಸುತ್ತಾನೆ.

ಗವಾಂ ಮೂತ್ರಪುರೀಷಾಣಿ ನೋದ್ವಿಜೇತ ಕದಾಚನ ।
ನ ಚಾಸಾಂ ಮಾಂಸಮಶ್ನೀಯಾದ್ ಗೋಷು ಭಕ್ತಃ ಸದಾ ಭವೇತ್ ॥

ಗೋಮೂತ್ರ ಮತ್ತು ಗೋಮಯಗಳಿಗೆ ಎಂದೂ ಅಸಹ್ಯ ಪಡಬಾರದು. ಅವುಗಳ ಮಾಂಸವನ್ನು ಎಂದೂ ತಿನ್ನಬಾರದು. ಯಾವಾಗಲೂ ಗೋವುಗಳಲ್ಲಿ ಭಕ್ತಿಯನ್ನು ಹೊಂದಿರಬೇಕು.

ಗ್ರಾಸಮುಷ್ಟಿಂ ಪರಗವೇ ದದ್ಯಾತ್ ಸಂವತ್ಸರಂ ಶುಚಿ ।
ಅಕೃತ್ವಾ ಸ್ವಯಮಾಹಾರಂ ವ್ರತಂ ತತ್ಸಾರ್ವಕಾಮಿಕಮ್ ॥೪೭॥

ಯಾವನು ತಾನು ಆಹಾರವನ್ನು ಸೇವಿಸುವುದಕ್ಕಿಂತ ಮೊದಲು ಶುಚಿಯಾಗಿ ಒಂದು ವರ್ಷದ ಕಾಲ ಇನ್ನೊಬ್ಬರ ಹಸುವಿಗೆ ಒಂದು ಹಿಡಿ ಗ್ರಾಸವನ್ನು ಕೊಡುತ್ತಾನೆಯೋ ಆ ವ್ರತಕ್ಕೆ ಸರ್ವಕಾಮಪ್ರದವಾದ ವ್ರತವೆಂದು ಹೆಸರು.

ಗವಾಮುಭಯತಃ ಕಾಲೇ ನಿತ್ಯಂ ಸ್ವಸ್ತ್ಯಯನಂ ವದೇತ್ ।
ನ ಚಾಸಾಂ ಚಿಂತಯೇತ್ ಪಾಪಮಿತಿ ಧರ್ಮವಿದೋ ವಿದುಃ ॥೪೮॥

ಪ್ರಾತಃಕಾಲ ಮತ್ತು ಸಂಧ್ಯಾಕಾಲಗಳಲ್ಲಿ ಗೋವುಗಳಿಗೆ ಕ್ಷೇಮವಾಗಲಿ ಎಂದು ಹೇಳಬೇಕು. ಅವುಗಳಿಗೆ ಕೇಡನ್ನು ಚಿಂತಿಸಬಾರದು ಎಂದು ಧರ್ಮವನ್ನು ತಿಳಿದವರು ಹೇಳುತ್ತಾರೆ.

ಗಾವಃ ಪವಿತ್ರಂ ಪರಮಂ ಗೋಷು ಲೋಕಾಃ ಪ್ರತಿಷ್ಠಿತಾಃ ।
ಕಥಂಚಿನ್ನಾವಮಂತವ್ಯಾ ಗಾವೋ ಲೋಕಸ್ಯ ಮಾತರಃ ॥೪೯॥

ಗೋವುಗಳು ಪರಮಪವಿತ್ರವಾದವುಗಳು. ಅವುಗಳಲ್ಲಿ ಲೋಕಗಳು ಪ್ರತಿಷ್ಠಿತವಾಗಿವೆ. ಅವು ಲೋಕದ ತಾಯಿಯರು. ಯಾವ ಕಾರಣದಿಂದಲೂ ಗೋವುಗಳಿಗೆ ಅವಮಾನವನ್ನು ಮಾಡಬಾರದು.

ತಸ್ಮಾದೇವ ಗವಾಂ ದಾನಂ ವಿಶಿಷ್ಟಮಿತಿ ಕಥ್ಯತೇ ।
ಗೋಷು ಪೂಜಾ ಚ ಭಕ್ತಿಶ್ಚ ನರಸ್ಯಾಯುಷ್ಯಮಾವಹೇತ್ ॥೫೦॥

ಆದ್ದರಿಂದ ಗೋದಾನವು ಬಹಳ ಶ್ರೇಷ್ಠವಾದುದೆಂದು ಹೇಳಲ್ಪಡುತ್ತದೆ. ಗೋವುಗಳ ಪೂಜೆ ಮತ್ತು ಅವುಗಳಲ್ಲಿ ಭಕ್ತಿಯ ಮನುಷ್ಯನ ಆಯುಸ್ಸನ್ನು ಹೆಚ್ಚಿಸುತ್ತವೆ.

ಅತಃಪರಂ ಪ್ರವಕ್ಷ್ಯಾಮಿ ಭೂಮಿದಾನಂ ಮಹಾಫಲಮ್ ।
ಭೂಮಿದಾನಸಮಂ ದಾನಂ ಲೋಕೇ ನಾಸ್ತೀತಿ ನಿಶ್ಚಯಃ ॥೫೧॥

ಇಲ್ಲಿಂದ ಮುಂದೆ ಮಹಾಫಲವನ್ನು ಕೊಡುವ ಭೂಮಿದಾನವನ್ನು ಹೇಳುವೆನು. ಲೋಕದಲ್ಲಿ ಭೂಮಿದಾನಕ್ಕೆ ಸಮಾನವಾದ ದಾನವಿಲ್ಲವೆಂಬುದು ನಿಶ್ಚಿತವಾದುದು.

ಗೃಹಯುಕ್ ಕ್ಷೇತ್ರಯುಗ್ವಾಽಪಿ ಭೂಮಿಭಾಗಃ ಪ್ರದೀಯತೇ ।
ಸುಖಭೋಗಂ ನಿರಾಕ್ರೋಶಂ ವಾಸ್ತುಪೂರ್ವಂ ಪ್ರಕಲ್ಪ್ಯ ಚ ॥೫೨॥

ಮೊದಲು ಮನೆಯನ್ನು ನಿರ್ಮಿಸಿ, ಮನೆಯಿಂದ ಮತ್ತು ಹೊಲದಿಂದ ಸಹಿತವಾದ, ಸುಖವಾದ ಭೋಗವನ್ನು ಕೊಡುವ, ನಿರುಪದ್ರವವಾದ ಭೂಮಿ ಭಾಗವನ್ನು ದಾನ ಮಾಡಬೇಕು.

ಗ್ರಹೀತಾರಮಲಂಕೃತ್ಯ ವಸ್ತ್ರಪುಷ್ಪಾನುಲೇಪನೈಃ ।
ಸಭೃತ್ಯಂ ಸಪರೀವಾರಂ ಭೋಜಯಿತ್ವಾ ಯಥೇಷ್ಟತಃ ।
ಯೋ ದದ್ಯಾದ್ ದಕ್ಷಿಣಾಕಾಲೇ ತ್ರಿರದ್ಭಿರ್ಗ್ರಹ್ಯತಾಮಿತಿ ॥೫೩॥

ಏವಂ ಭೂಮ್ಯಾಂ ಪ್ರದತ್ತಾಯಾಂ ಶ್ರದ್ಧಯಾ ವೀತಮತ್ಸರೈಃ ।
ಯಾವತ್ ತಿಷ್ಠತಿ ಸಾ ಭೂಮಿಸ್ತಾವತ್ ತಸ್ಯ ಫಲಂ ವಿದುಃ ॥೫೪॥

ದಾನವನ್ನು ಸ್ವೀಕಾರ ಮಾಡುವವನನ್ನು ಗಂಧ-ಪುಷ್ಪಗಳಿಂದ ಅಲಂಕರಿಸಿ, ಭೃತ್ಯ ಪರಿವಾರದ ಜೊತೆಯಲ್ಲಿ ಅವನಿಗೆ ಇಷ್ಟ ಭೋಜನವನ್ನು ಮಾಡಿಸಿ ದಕ್ಷಿಣಾಸಹಿತವಾಗಿ ಜಲಧಾರಾ ಪೂರ್ವಕವಾಗಿ ಸ್ವೀಕರಿಸಬೇಕು ಎಂದು ಹೇಳಿ ಯಾವನು ಭೂಮಿದಾನವನ್ನು ಮಾಡುತ್ತಾನೆಯೋ ಅಂತಹ, ಮತ್ಸರರಹಿತನಾಗಿ ಶ್ರದ್ಧೆಯಿಂದ ಭೂಮಿದಾನವನ್ನು ಮಾಡುವವನು ಭೂಮಿಯು ಇರುವವರೆಗೂ ಆ ದಾನದ ಫಲವನ್ನು ಅನುಭವಿಸುವನೆಂದು ಜ್ಞಾನಿಗಳು ತಿಳಿಯುತ್ತಾರೆ.

ಭೂಮಿದಃ ಸ್ವರ್ಗಮಾರುಹ್ಯ ರಮತೇ ಶಾಶ್ವತೀಃ ಸಮಾಃ ।
ಅಚಲಾ ಹ್ಯಕ್ಷಯಾ ಭೂಮಿಃ ಸರ್ವಕಾಮಾನ್ ದುಧುಕ್ಷತಿ ॥೫೫॥

ಭೂಮಿದಾನವನ್ನು ಮಾಡಿದವನು ಸ್ವರ್ಗಕ್ಕೆ ಹೋಗಿ ಬಹಳ ಕಾಲ ಸುಖವನ್ನು ಅನುಭವಿಸುತ್ತಾನೆ. ಅಚಲವೂ, ಅಕ್ಷಯವೂ ಆದ ಭೂಮಿಯು ಅವನಿಗೆ ಸರ್ವಕಾಮಗಳನ್ನು ಕೊಡುತ್ತದೆ.

ಯದ್ಯಚ್ಚ ಕುರುತೇ ಪಾಪಂ ಪುರುಷೋ ವೃತ್ತಿಕರ್ಶಿತಃ ।
ಅಪಿ ಗೋಕರ್ಣಮಾತ್ರೇಣ ಭೂಮಿದಾನೇನ ಮುಚ್ಯತೇ ॥೫೬॥

ಮನುಷ್ಯನು ಜೀವನೋಪಾಯದಿಂದ ಕರ್ಶಿತನಾಗಿ ಏನೇನು ಪಾಪವನ್ನು ಮಾಡಿದರೂ ಗೋವಿನ ಕಿವಿಯಷ್ಟು ಮಾತ್ರ (ಒಂದು ಗೇಣಿನಷ್ಟು) ಭೂಮಿದಾನವನ್ನು ಮಾಡಿದರೂ ಆ ಪಾಪದಿಂದ ನಿರ್ಮುಕ್ತನಾಗುತ್ತಾನೆ.

ಸುವರ್ಣಂ ರಜತಂ ವಸ್ತ್ರಂ ಮಣಿಮುಕ್ತಾವಸೂನಿ ಚ ।
ಸರ್ವಮೇತನ್ಮಹಾಪ್ರಾಜ್ಞೇ ಭೂಮಿದಾನೇ ಪ್ರತಿಷ್ಠಿತಮ್ ॥೫೭॥

ಎಲೌ ಮಹಾಪ್ರಾಜ್ಞೆಯೇ, ಸುವರ್ಣದಾನ, ರಜತದಾನ, ವಸ್ತ್ರದಾನ, ಮಣಿ ಮುಕ್ತಾಫಲದಾನ - ಈ ಎಲ್ಲ ದಾನವೂ ಭೂದಾನದಲ್ಲಿ ಸೇರಿಕೊಂಡಿದೆ.

ಭರ್ತುರ್ನಿಶ್ರೇಯಸೇ ಯುಕ್ತಾಸ್ತ್ಯಕ್ತಾತ್ಮಾನೋ ರಣೇ ಹತಾಃ ।
ಬ್ರಹ್ಮಲೋಕಾಯ ಸಂಸಿದ್ಧಾ ನಾತಿಕ್ರಾಮಂತಿ ಭೂಮಿದಮ್ ॥೫೮॥

ಸ್ವಾಮಿಯ ಶ್ರೇಯಸ್ಸಿನಲ್ಲಿ ನಿರತರಾಗಿ ಯುದ್ಧದಲ್ಲಿ ಪ್ರಾಣವನ್ನು ತ್ಯಜಿಸಿ ಬ್ರಹ್ಮಲೋಕವನ್ನು ಪಡೆದವರೂ ಸಹ ಭೂಮಿದಾನ ಮಾಡಿದವನನ್ನು ಮೀರಿ ಹೋಗುವುದಿಲ್ಲ.

ಹಲಕೃಷ್ಟಾಂ ಮಹೀಂ ದದ್ಯಾತ್ ಯಃ ಸಬೀಜಫಲಾನ್ವಿತಾಮ್ ।
ಸುಕೂಪಶರಣಾಂ ವಾಪಿ ಸಾ ಭವೇತ್ ಸರ್ವಕಾಮದಾ ॥೫೯॥

ನೇಗಿಲಿನಿಂದ ಉತ್ತು, ಬಿತ್ತಿ, ಬೆಳೆಯಿಂದ ಕೂಡಿದ ಒಳ್ಳೆಯ ನೀರನ್ನು, ಆಸರೆಯನ್ನು, ಗೃಹವನ್ನು ಹೊಂದಿದ ಭೂಮಿಯನ್ನು ದಾನ ಮಾಡಬೇಕು. ಅಂತಹ ಭೂಮಿಯು ಸರ್ವಕಾಮಗಳನ್ನು ಕೊಡುತ್ತದೆ.

ನಿಷ್ಪನ್ನಸಸ್ಯಾಂ ಪೃಥಿವೀಂ ಯೋ ದದಾತಿ ದ್ವಿಜನ್ಮನಾಮ್ ।
ವಿಮುಕ್ತಃ ಕಲುಷೈಃ ಸರ್ವೈಃ ಶಕ್ರಲೋಕಂ ಸ ಗಚ್ಛತಿ ॥೬೦॥

ಯಾವ ತೊಂದರೆಯೂ ಇಲ್ಲದ ಸಸ್ಯಾರೂಢವಾದ ಭೂಮಿಯನ್ನು ಬ್ರಾಹ್ಮಣನಿಗೆ ದಾನವನ್ನು ಮಾಡುವವನು ಇಂದ್ರಲೋಕಕ್ಕೆ ಹೋಗುತ್ತಾನೆ.

ಯಥಾ ಜನಿತ್ರೀ ಕ್ಷೀರೇಣ ಸ್ವಪುತ್ರಮಭಿವರ್ಧಯೇತ್ ।
ಏವಂ ಸರ್ವಫಲೈರ್ಭೂಮಿರ್ದಾತಾರಮಭಿವರ್ಧಯೇತ್ ॥೬೧॥

ತಾಯಿಯು ತನ್ನ ಮಗುವನ್ನು ಕ್ಷೀರದಿಂದ ಪೋಷಿಸುವಂತೆ ಭೂಮಿಯು ದಾನ ಮಾಡಿದವನನ್ನು ಸರ್ವಫಲಗಳಿಂದಲೂ ಪೋಷಿಸುತ್ತದೆ.

ಬ್ರಾಹ್ಮಣಂ ವೃತ್ತಸಂಪನ್ನಮಾಹಿತಾಗ್ನಿಂ ಶುಚಿವ್ರತಮ್ ।
ಗ್ರಾಹಯಿತ್ವಾ ನಿಜಾಂ ಭೂಮಿಂ ನ ಯಾಂತಿ ಯಮಸಾದನಮ್ ॥೬೨॥

ವೃತ್ತಸಂಪನ್ನನಾದ, ಶುಚಿವ್ರತನಾದ, ಆಹಿತಾಗ್ನಿಯಾದ ಬ್ರಾಹ್ಮಣನಿಗೆ ತಮ್ಮ ಭೂಮಿಯನ್ನು ದಾನ ಮಾಡಿದವರು ಯಮಲೋಕಕ್ಕೆ ಹೋಗುವುದಿಲ್ಲ.

ಯಥಾ ಚಂದ್ರಮಸೋ ವೃದ್ಧಿರಹನ್ಯಹನಿ ದೃಶ್ಯತೇ ।
ತಥಾ ಭೂಮಿಕೃತಂ ದಾನಂ ಸಸ್ಯೇಸಸ್ಯೇ ವಿವರ್ಧತೇ ॥೬೩॥

ಶುಕ್ಲಪಕ್ಷದಲ್ಲಿ ಚಂದ್ರನ ವೃದ್ಧಿಯು ದಿನದಿನದಲ್ಲಿ ಹೆಚ್ಚಾಗಿ ತೋರುವಂತೆ ಭೂದಾನದ ಫಲವು ಸಸ್ಯಗಳು ಬೆಳೆದಂತೆ ಅಭಿವೃದ್ಧಿಯನ್ನು ಹೊಂದುತ್ತದೆ.

ಯಥಾ ಬೀಜಾನಿ ರೋಹಂತಿ ಪ್ರಕೀರ್ಣಾನಿ ಮಹೀತಳೇ ।
ತಥಾ ಕಾಮಾಃ ಪ್ರರೋಹಂತಿ ಭೂಮಿದಾನಗುಣಾರ್ಜಿತಾಃ ॥೬೪॥

ಭೂಮಿಯ ಮೇಲೆ ಎಸೆದ ಬೀಜಗಳು ಮೊಳಕೆಯೊಡೆದು ಬೆಳೆಯುವಂತೆ ಭೂಮಿದಾನದಿಂದ ಸಂಪಾದಿಸಿದ ಅವನ ಕಾಮಗಳು ಬೆಳೆಯುತ್ತವೆ.

ಪಿತರಃ ಪಿತೃಲೋಕಸ್ಥಾ ದೇವತಾಶ್ಚ ದಿವಿ ಸ್ಥಿತಾಃ ।
ಸಂತರ್ಪಯಂತಿ ಭೋಗೈಸ್ತಂ ಯೋ ದದಾತಿ ವಸುಂಧರಾಮ್ ॥೬೫॥

ಪಿತೃಲೋಕದಲ್ಲಿರುವ ಪಿತೃಗಳು, ಸ್ವರ್ಗಲೋಕದಲ್ಲಿರುವ ದೇವತೆಗಳು ಭೂಮಿದಾನವನ್ನು ಮಾಡಿದವನನ್ನು ಎಲ್ಲ ಭೋಗಗಳಿಂದಲೂ ಸಂತೋಷಪಡಿಸುತ್ತಾರೆ.

ದೀರ್ಘಾಯುಷ್ಟ್ವಮರೋಗತ್ವಂ ಸ್ಫೀತಾಂ ಚ ಶ್ರಿಯಮುತ್ತಮಾಮ್ ।
ಪರತ್ರ ಲಭತೇ ಮರ್ತ್ಯಃ ಸಂಪ್ರದಾಯ ವಸುಂಧರಾಮ್ ॥೬೬॥

ಭೂದಾನವನ್ನು ಮಾಡಿದವನು ದೀರ್ಘಾಯುಷ್ಯವನ್ನೂ, ಆರೋಗತ್ವವನ್ನೂ, ಶುದ್ಧವಾದ ಸಂಪತ್ತನ್ನೂ ಪರಲೋಕದಲ್ಲಿ ಪಡೆಯುತ್ತಾನೆ.

ಮನುಷ್ಯನು ಜೀವನೋಪಾಯದಿಂದ ಕರ್ಶಿತನಾಗಿ ಏನೇನು ಪಾಪವನ್ನು ಮಾಡಿದರೂ ಗೋವಿನ ಕಿವಿಯಷ್ಟುಮಾತ್ರ (ಒಂದು ಗೇಣಿನಷ್ಟು) ಭೂಮಿದಾನವನ್ನು ಮಾಡಿದರೂ ಆ ಪಾಪದಿಂದ ನಿರ್ಮುಕ್ತನಾಗುತ್ತಾನೆ.

ಸುವರ್ಣಂ ರಜತಂ ವಸ್ತ್ರಂ ಮಣಿಮುಕ್ತಾವಸೂನಿ ಚ ।
ಸರ್ವಮೇತನ್ಮಹಾಪ್ರಾಜ್ಞೇ ಭೂಮಿದಾನೇ ಪ್ರತಿಷ್ಠಿತಮ್ ॥೫೭॥

ಎಲೌ ಮಹಾಪ್ರಾಜ್ಞೆಯೇ, ಸುವರ್ಣದಾನ, ರಜತದಾನ, ವಸ್ತ್ರದಾನ, ಮಣಿ ಮುಕ್ತಾಫಲದಾನ - ಈ ಎಲ್ಲ ದಾನವೂ ಭೂದಾನದಲ್ಲಿ ಸೇರಿಕೊಂಡಿದೆ.

ಭರ್ತುರ್ನಿಶ್ರೇಯಸೇ ಯುಕ್ತಾಸ್ತ್ಯಕ್ತಾತ್ಮಾನೋ ರಣೇ ಹತಾಃ ।
ಬ್ರಹ್ಮಲೋಕಾಯ ಸಂಸಿದ್ಧಾ ನಾತಿಕ್ರಾಮಂತಿ ಭೂಮಿದಮ್ ॥೫೮॥

ಸ್ವಾಮಿಯ ಶ್ರೇಯಸ್ಸಿನಲ್ಲಿ ನಿರತರಾಗಿ ಯುದ್ಧದಲ್ಲಿ ಪ್ರಾಣವನ್ನು ತ್ಯಜಿಸಿ ಬ್ರಹ್ಮಲೋಕವನ್ನು ಪಡೆದವರೂ ಸಹ ಭೂಮಿದಾನ ಮಾಡಿದವನನ್ನು ಮೀರಿ ಹೋಗುವುದಿಲ್ಲ.

ಹಲಕೃಷ್ಟಾಂ ಮಹೀಂ ದದ್ಯಾತ್ ಯಃ ಸಬೀಜಫಲಾನ್ವಿತಾಮ್ ।
ಸುಕೂಪಶರಣಾಂ ವಾಪಿ ಸಾ ಭವೇತ್ ಸರ್ವಕಾಮದಾ ॥೫೯॥

ನೇಗಿಲಿನಿಂದ ಉತ್ತು, ಬಿತ್ತಿ, ಬೆಳೆಯಿಂದ ಕೂಡಿದ ಒಳ್ಳೆಯ ನೀರನ್ನು, ಆಸರೆಯನ್ನು, ಗೃಹವನ್ನು ಹೊಂದಿದ ಭೂಮಿಯನ್ನು ದಾನ ಮಾಡಬೇಕು. ಅಂತಹ ಭೂಮಿಯು ಸರ್ವಕಾಮಗಳನ್ನು ಕೊಡುತ್ತದೆ.

ನಿಷ್ಪನ್ನಸಸ್ಯಾಂ ಪೃಥಿವೀಂ ಯೋ ದದಾತಿ ದ್ವಿಜನ್ಮನಾಮ್ ।
ವಿಮುಕ್ತಃ ಕಲುಷೈಃ ಸರ್ವೈಃ ಶಕ್ರಲೋಕಂ ಸ ಗಚ್ಛತಿ ॥೬೦॥

ಯಾವ ತೊಂದರೆಯೂ ಇಲ್ಲದ ಸಸ್ಯಾರೂಢವಾದ ಭೂಮಿಯನ್ನು ಬ್ರಾಹ್ಮಣನಿಗೆ ದಾನವನ್ನು ಮಾಡುವವನು ಇಂದ್ರಲೋಕಕ್ಕೆ ಹೋಗುತ್ತಾನೆ.

ಯಥಾ ಜನಿತ್ರೀ ಕ್ಷೀರೇಣ ಸ್ವಪುತ್ರಮಭಿವರ್ಧಯೇತ್ ।
ಏವಂ ಸರ್ವಫಲೈರ್ಭೂಮಿರ್ದಾತಾರಮಭಿವರ್ಧಯೇತ್ ॥೬೧॥

ತಾಯಿಯು ತನ್ನ ಮಗುವನ್ನು ಕ್ಷೀರದಿಂದ ಪೋಷಿಸುವಂತೆ ಭೂಮಿಯು ದಾನ ಮಾಡಿದವನನ್ನು ಸರ್ವಫಲಗಳಿಂದಲೂ ಪೋಷಿಸುತ್ತದೆ.

ಬ್ರಾಹ್ಮಣಂ ವೃತ್ತಸಂಪನ್ನಮಾಹಿತಾಗ್ನಿಂ ಶುಚಿವ್ರತಮ್ ।
ಗ್ರಾಹಯಿತ್ವಾ ನಿಜಾಂ ಭೂಮಿಂ ನ ಯಾಂತಿ ಯಮಸಾದನಮ್ ॥೬೨॥

ವೃತ್ತಸಂಪನ್ನನಾದ, ಶುಚಿವ್ರತನಾದ, ಆಹಿತಾಗ್ನಿಯಾದ ಬ್ರಾಹ್ಮಣನಿಗೆ ತಮ್ಮ ಭೂಮಿಯನ್ನು ದಾನ ಮಾಡಿದವರು ಯಮಲೋಕಕ್ಕೆ ಹೋಗುವುದಿಲ್ಲ.

ಯಥಾ ಚಂದ್ರಮಸೋ ವೃದ್ಧಿರಹನ್ಯಹನಿ ದೃಶ್ಯತೇ ।
ತಥಾ ಭೂಮಿಕೃತಂ ದಾನಂ ಸಸ್ಯೇಸಸ್ಯೇ ವಿವರ್ಧತೇ ॥೬೩॥

ಶುಕ್ಲಪಕ್ಷದಲ್ಲಿ ಚಂದ್ರನ ವೃದ್ಧಿಯು ದಿನದಿನದಲ್ಲಿ ಹೆಚ್ಚಾಗಿ ತೋರುವಂತೆ ಭೂದಾನದ ಫಲವು ಸಸ್ಯಗಳು ಬೆಳೆದಂತೆ ಅಭಿವೃದ್ಧಿಯನ್ನು ಹೊಂದುತ್ತದೆ.

ಯಥಾ ಬೀಜಾನಿ ರೋಹಂತಿ ಪ್ರಕೀರ್ಣಾನಿ ಮಹೀತಳೇ ।
ತಥಾ ಕಾಮಾಃ ಪ್ರರೋಹಂತಿ ಭೂಮಿದಾನಗುಣಾರ್ಜಿತಾಃ ॥೬೪॥

ಭೂಮಿಯ ಮೇಲೆ ಎಸೆದ ಬೀಜಗಳು ಮೊಳಕೆಯೊಡೆದು ಬೆಳೆಯುವಂತೆ ಭೂಮಿದಾನದಿಂದ ಸಂಪಾದಿಸಿದ ಅವನ ಕಾಮಗಳು ಬೆಳೆಯುತ್ತವೆ.

ಪಿತರಃ ಪಿತೃಲೋಕಸ್ಥಾ ದೇವತಾಶ್ಚ ದಿವಿ ಸ್ಥಿತಾಃ ।
ಸಂತರ್ಪಯಂತಿ ಭೋಗೈಸ್ತಂ ಯೋ ದದಾತಿ ವಸುಂಧರಾಮ್ ॥೬೫॥

ಪಿತೃಲೋಕದಲ್ಲಿರುವ ಪಿತೃಗಳು, ಸ್ವರ್ಗಲೋಕದಲ್ಲಿರುವ ದೇವತೆಗಳು ಭೂಮಿದಾನವನ್ನು ಮಾಡಿದವನನ್ನು ಎಲ್ಲ ಭೋಗಗಳಿಂದಲೂ ಸಂತೋಷಪಡಿಸುತ್ತಾರೆ.

ದೀರ್ಘಾಯುಷ್ಟ್ವಮರೋಗತ್ವಂ ಸ್ಫೀತಾಂ ಚ ಶ್ರಿಯಮುತ್ತಮಾಮ್ ।
ಪರತ್ರ ಲಭತೇ ಮರ್ತ್ಯಃ ಸಂಪ್ರದಾಯ ವಸುಂಧರಾಮ್ ॥೬೬॥

ಭೂದಾನವನ್ನು ಮಾಡಿದವನು ದೀರ್ಘಾಯುಷ್ಯವನ್ನೂ, ಆರೋಗತ್ವವನ್ನೂ, ಶುದ್ಧವಾದ ಸಂಪತ್ತನ್ನೂ ಪರಲೋಕದಲ್ಲಿ ಪಡೆಯುತ್ತಾನೆ.

ಏತತ್ಸರ್ವಂ ಮಯೋದ್ದಿಷ್ಟಂ ಭೂಮಿದಾನಸ್ಯ ಯತ್ಫಲಮ್ ।
ಶ್ರದ್ದಧಾನೈರ್ನರೈರ್ನಿತ್ಯಂ ಶ್ರಾವ್ಯಮೇತತ್ ಸನಾತನಮ್ ॥೬೭॥

ಭೂದಾನದ ಫಲವೆಲ್ಲವನ್ನೂ ನಾನು ಹೇಳಿದ್ದೇನೆ. ಶ್ರದ್ಧೆಯುಳ್ಳ ಪುರುಷರು ಸನಾತನವಾದ ಈ ದಾನವಿಧಿಯನ್ನು ನಿತ್ಯವೂ ಕೇಳಬೇಕು.

ಅತಃ ಪರಂ ಪ್ರವಕ್ಷ್ಯಾಮಿ ಕನ್ಯಾದಾನಂ ಯಥಾವಿಧಿ ।
ಕನ್ಯಾ ದೇಯಾ ಮಹಾದೇವಿ ಪರೇಷಾಮಾತ್ಮನೋಪಿ ವಾ ॥೬೮॥

ಇನ್ನು ಮುಂದೆ ವಿಧಿಗೆ ಅನುಸಾರಿಯಾದ ಕನ್ಯಾದಾನವನ್ನು ಹೇಳುವೆನು. ಎಲೌ ಮಹಾದೇವಿಯೇ, ಇನ್ನೊಬ್ಬರ ಕನ್ಯೆಯನ್ನು ಅಥವಾ ತನ್ನ ಕನ್ಯೆಯನ್ನು ದಾನ ಮಾಡಬೇಕು.

ಕನ್ಯಾಂ ಶುದ್ಧವ್ರತಾಚಾರಾಂ ಕುಲರೂಪಸಮನ್ವಿತಾಮ್ ।
ಯಸ್ಮೈ ದಿತ್ಸತಿ ಪಾತ್ರಾಯ ತೇನಾಪಿ ಭೃಶಕಾಮಿತಾಮ್ ॥೬೯॥

ಪ್ರಥಮಂ ತತ್ಸಮಾಕಲ್ಪ್ಯ ಬಂಧುಭಿಃ ಕೃತನಿಶ್ಚಯಮ್ ।
ಕಾರಯಿತ್ವಾ ಗೃಹಂ ಪೂರ್ವಂ ದಾಸೀದಾಸಪರಿಚ್ಛದೈಃ ॥೭೦॥

ಗೃಹೋಪಕರಣಂ ಚೈವ ಶುದ್ಧಧಾನ್ಯೇನ ಸಂಯುತಮ್ ।
ದಾರಾರ್ಥಿನೇ ತದರ್ಹಾಯ ಕನ್ಯಾಂ ತಾಂ ಸಮಲಂಕೃತಾಮ್ ॥೭೧॥

ಸವಿವಾಹಂ ಯಥಾನ್ಯಾಯಂ ಪ್ರಯಚ್ಛೇದಗ್ನಿಸಾಕ್ಷಿಕಮ್ ।
ವೃತ್ತ್ಯಾಯತಿಂ ಯಥಾ ಕೃತ್ವಾ ಸದ್ಗೃಹೇ ತೌ ನಿವೇಶಯೇತ್ ॥೭೨॥

ಶುದ್ಧವ್ರತ ಮತ್ತು ಆಚಾರಗಳುಳ್ಳ, ಕುಲ-ರೂಪಸಮನ್ವಿತಳಾದ ಪಾತ್ರರಿಂದಲೂ ಅಪೇಕ್ಷಿಸಲ್ಪಟ್ಟ ಕನ್ಯೆಯನ್ನು ಪಾತ್ರರಿಗೆ ಕೊಡಲು ಬಯಸಿದಾಗ ಮೊದಲು ಬಂಧುಗಳ ಜೊತೆಯಲ್ಲಿ ಸೇರಿ ನಿಶ್ಚಯವನ್ನು ಮಾಡಿ ದಾಸೀ-ದಾಸ ಸಲಕರಣೆಗಳಿಂದ ತುಂಬಿದ ಒಂದು ಗೃಹವನ್ನು ಕಟ್ಟಿಸಿ, ಗೃಹದಲ್ಲಿ ಉಪಕರಣಗಳನ್ನೂ ಮತ್ತು ಶುದ್ಧ ಧಾನ್ಯಗಳನ್ನೂ ಇಟ್ಟು, ಕನ್ಯಾರ್ಥಿಯಾದ ವರನಿಗೆ ಅಲಂಕೃತಳಾದ ಕನ್ಯೆಯನ್ನು ವಿಧಿಪೂರ್ವಕವಾಗಿ,

ಅಗ್ನಿಸಾಕ್ಷಿಕವಾಗಿ ಶಾಸ್ತ್ರೀತಿಯಲ್ಲಿ ವಿವಾಹ ಮಾಡಿಕೊಡಬೇಕು. ಅವರ ಜೀವನೋಪಾಯವನ್ನು ಕಲ್ಪಿಸಿ ಅಂತಹ ಒಳ್ಳೆಯ ಮನೆಯಲ್ಲಿ ಅವರನ್ನು ಇಡಬೇಕು.

ಏವಂ ಕೃತ್ವಾ ವಧೂದಾನಂ ತಸ್ಯ ದಾನಸ್ಯ ಗೌರವಾತ್ ।
ಪ್ರೇತ್ಯಭಾವೇ ಮಹೀಯೇತ ಸ್ವರ್ಗಲೋಕೇ ಯಥಾಸುಖಮ್ ॥೭೩॥

ಪುನರ್ಜಾತೌ ಚ ಸೌಭಾಗ್ಯಂ ಕುಲವೃದ್ಧಿಂ ತಥಾऽऽಪ್ನುಯಾತ್ ॥೭೪॥

ಇಂತಹ ವಧೂದಾನವನ್ನು ಮಾಡಿದವನು ಆ ದಾನದ ಮಹಿಮೆಯಿಂದ ಮರಣಾನಂತರದಲ್ಲಿ ಸ್ವರ್ಗಲೋಕದಲ್ಲಿ ಸುಖದಿಂದ ಪೂಜಿಸಲ್ಪಡುತ್ತಾನೆ. ಪುನಃ ಮುಂದಿನ ಜನ್ಮದಲ್ಲಿ ಅವನು ಸೌಭಾಗ್ಯವನ್ನೂ, ಕುಲವೃದ್ಧಿಯನ್ನೂ ಹೊಂದುತ್ತಾನೆ.

ವಿದ್ಯಾದಾನಂ ತಥಾ ದೇವಿ ಪಾತ್ರಭೂತಾಯ ವೈ ದದತ್ ।
ಪ್ರೇತ್ಯಭಾವೇ ಲಭೇನ್ಮರ್ತ್ಯೋ ಮೇಧಾಂ ವೃದ್ಧಿಂ ಧೃತಿಂ ಸ್ಮೃತಿಮ್ ॥೭೫॥

ಎಲೌ ದೇವಿಯೇ, ಪಾತ್ರನಾದವನಿಗೆ ವಿದ್ಯಾದಾನವನ್ನು ಮಾಡಿದವನು ಮರಣಾನಂತರ ಮುಂದಿನ ಜನ್ಮದಲ್ಲಿ ಮೇಧಾಶಕ್ತಿಯನ್ನೂ, ಅಭಿವೃದ್ಧಿಯನ್ನೂ, ಧೈರ್ಯವನ್ನೂ ಮತ್ತು ಸ್ಮೃತಿಯನ್ನೂ ಹೊಂದುತ್ತಾನೆ.

ಅನುರೂಪಾಯ ಶಿಷ್ಯಾಯ ಸ್ವಾಂ ವಿದ್ಯಾಂ ಯಃ ಪ್ರಯಚ್ಛತಿ ।
ಯಥೋಕ್ತಸ್ಯ ಚ ದಾನಸ್ಯ ಫಲಮಾನಂತ್ಯಮುಚ್ಯತೇ ॥೭೬॥

ಅನುರೂಪನಾದ ಶಿಷ್ಯನಿಗೆ ತನ್ನ ವಿದ್ಯೆಯನ್ನು ದಾನ ಮಾಡುವವನು ಹಿಂದೆ ಹೇಳಿದ ದಾನದ ಫಲವನ್ನು ಅನಂತವಾಗಿ ಪಡೆಯುತ್ತಾನೆ.

ದಾಪನಂ ತ್ವಥ ವಿದ್ಯಾನಾಂ ದರಿದ್ರೇಭ್ಯೋऽರ್ಥವೇದನೈಃ ।
ಸ್ವಯಂ ದತ್ತೇನ ತುಲ್ಯಂ ಸ್ಯಾದಿತಿ ವಿದ್ಧಿ ಶುಭಾನನೇ ॥೭೭॥

ದರಿದ್ರನಾದವನಿಗೆ ಅರ್ಥಜ್ಞಾನಪೂರ್ವಕವಾಗಿ ವಿದ್ಯಾದಾನವನ್ನು ಮಾಡುವವನು ಎಲೌ ಶುಭಾನನೆಯೇ, ಆತ್ಮದಾನವನ್ನೇ ಮಾಡಿದವನಿಗೆ ಸಮಾನನೆಂದು ತಿಳಿ.

ಏವಂ ತೇ ಕಥಿತಾನ್ಯೇವ ಮಹಾದಾನಾನಿ ಭಾಮಿನಿ ।
ತತ್ತ್ವಪ್ರಯಾರ್ಥಂ ಮಹಾದೇವಿ ಭೂಯಃ ಶ್ರೋತುಂ ಕಿಮಿಚ್ಛಸಿ ॥೭೮॥

ಎಲೌ ಭಾಮಿನಿಯೇ, ಹೀಗೆ ನಾನು ನಿನಗೆ ನಿನ್ನ ಸಂತೋಷಕ್ಕಾಗಿ ಮಹಾದಾನಗಳನ್ನು ಹೇಳಿದ್ದೇನೆ. ಮಹಾದೇವಿಯೇ, ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಪರ್ವಣಿ ವಿವಿಧದಾನಫಲಕಥನಂ ನಾಮ ವಿಂಶೋತ್ತರದ್ವಿಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಇಪ್ಪತ್ತೊಂದನೆಯ ಅಧ್ಯಾಯ

ಉಮಾ-ಮಹೇಶ್ವರಸಂವಾದ. ತಿಲಾದಿ ದಾನವಿಧಿ.

ಉಮಾ

ಭಗವನ್ ದೇವದೇವೇಶ ಕಥಂ ದೇಯಂ ತಿಲಾನ್ವಿತಮ್ ।
ತಸ್ಯ ತಸ್ಯ ಫಲಂ ಬ್ರೂಹಿ ದತ್ತಸ್ಯ ಚ ಕೃತಸ್ಯ ಚ ॥೧॥

ಉಮಾ- ಪೂಜ್ಯನೇ, ದೇವದೇವೇಶನೇ, ತಿಲದಾನ ವಿಧಿಯನ್ನು ಮತ್ತು ಉಳಿದ ಸತ್ಕರ್ಮಗಳ ಫಲವನ್ನು ಹೇಳು.

ಮಹೇಶ್ವರಃ

ತಿಲಕಲ್ಪವಿಧಿಂ ದೇವಿ ತನ್ಮೇ ಶೃಣು ಸಮಾಹಿತಾ ॥೨॥

ಮಹೇಶ್ವರ- ದೇವಿಯೇ, ತಿಲದಾನ ವಿಧಿಯನ್ನು ಹೇಳುತ್ತೇನೆ. ಸಮಾಧಾನದಿಂದ ಕೇಳು.

ಸಮೃದ್ಧೈರಸಮೃದ್ಧೈರ್ವಾ ತಿಲಾ ದೇಯಾ ವಿಶೇಷತಃ ।
ತಿಲಾಃ ಪವಿತ್ರಾಃ ಪಾಪಘ್ನಾಃ ಸುಪುಣ್ಯಾ ಇತಿ ಸಂಸ್ಮೃತಾಃ ॥೩॥

ಸಂಪತ್ತು ಇದ್ದವರಾಗಲೀ, ಇಲ್ಲದಿದ್ದವರಾಗಲೀ ವಿಶೇಷವಾಗಿ ತಿಲದಾನವನ್ನು ಮಾಡಬೇಕು. ತಿಲಗಳು ಪವಿತ್ರವಾದವುಗಳು, ಪಾಪಪರಿಹಾರಕವಾದವುಗಳು ಮತ್ತು ಪುಣ್ಯಪ್ರದವಾದವುಗಳು ಎಂದು ಹೇಳಲ್ಪಡುತ್ತವೆ.

ನ್ಯಾಯತಸ್ತು ತಿಲಾನ್ ಶುದ್ಧಾನ್ ಸಂಹೃತ್ಯಾಥ ಸ್ವಶಕ್ತಿತಃ ।
ತಿಲರಾಶಿಂ ಪುನಃ ಕುರ್ಯಾತ್ ಪರ್ವತಾಭಂ ಸುರತ್ನಕಮ್ ।
ಮಹಾಂತಂ ಯದಿ ವಾ ಸ್ತೋಕಂ ನಾನಾದ್ರವ್ಯಸಮಾಯುತಮ್ ॥೪॥

ನ್ಯಾಯದಿಂದ ತಿಲಗಳನ್ನು ತನ್ನ ಶಕ್ತಿಯಿದ್ದಷ್ಟು ಸಂಪಾದಿಸಿ, ಅವುಗಳನ್ನು ಶುದ್ಧ ಮಾಡಿ, ಪರ್ವತದಂತೆ ಎತ್ತರವಾಗಿ ರತ್ನಸಹಿತವಾಗಿ ತಿಲರಾಶಿಯನ್ನು ಮಾಡಬೇಕು. ದೊಡ್ಡದಾಗಲೀ, ಸಣ್ಣದಾಗಲೀ, ನಾನಾದ್ರವ್ಯಯುಕ್ತವಾದ ರಾಶಿಯನ್ನು ಮಾಡಬೇಕು.

ಸುವರ್ಣರಜತಾಭ್ಯಾಂ ಚ ಮಣಿಮುಕ್ತಾಪ್ರವಾಳಕೈಃ ।
ಅಲಂಕೃತ್ಯ ಯಥಾಯೋಗಂ ಸಪತಾಕಂ ಸವೇದಿಕಮ್ ।
ಸಭೂಷಣಂ ಸವಸ್ತ್ರಂ ಚ ಶಯನಾಸನಸಂಯುತಮ್ ॥೫॥

ಅದಕ್ಕೆ ಸುವರ್ಣ-ರಜತಗಳಿಂದಲೂ, ಮಣಿ-ಮುತ್ತು ಮತ್ತು ಹವಳಗಳಿಂದಲೂ ಸಾಧ್ಯವಿದ್ದಷ್ಟು ಅಲಂಕಾರವನ್ನು ಮಾಡಿ ಪತಾಕೆಯನ್ನೂ, ಒಂದು ವೇದಿಕೆಯನ್ನೂ ಇಟ್ಟು ಭೂಷಣ, ವಸ್ತ್ರ, ಶಯನ ಮತ್ತು ಆಸನಗಳನ್ನು ಇಡಬೇಕು.

ಪ್ರಾಯಶಃ ಕೌಮುದೀಮಾಸೇ ಪೌರ್ಣಮಾಸ್ಯಾಂ ವಿಶೇಷತಃ ।
ಭೋಜಯಿತ್ವಾ ಚ ವಿಧಿವದ್ ಬ್ರಾಹ್ಮಣಾನರ್ಹತೋ ಬಹೂನ್ ॥೬॥

ಸ್ವಯಂ ಕೃತೋಪವಾಸಂ ಚ ವೃತ್ತಶೌಚಸಮನ್ವಿತಃ ।
ದದ್ಯಾತ್ ಪ್ರದಕ್ಷಿಣೀಕೃತ್ಯ ತಿಲರಾಶಿಂ ಸದಕ್ಷಿಣಮ್ ॥೭॥

ಹೆಚ್ಚಾಗಿ ಕಾರ್ತಿಕ ಮಾಸದಲ್ಲಿ, ಅದರಲ್ಲೂ ವಿಶೇಷವಾಗಿ ಪೌರ್ಣಮಾಸಿಯಂದು ಯೋಗ್ಯರಾದ ಅನೇಕ ಬ್ರಾಹ್ಮಣರಿಗೆ ವಿಧಿಗೆ ಅನುಸಾರವಾಗಿ ಭೋಜನವನ್ನು ಮಾಡಿಸಿ ತಾನು ಶೌಚ-ವ್ರತ ಸಮನ್ವಿತನಾಗಿ, ಉಪವಾಸವನ್ನು ಮಾಡಿ, ತಿಲರಾಶಿಯನ್ನು ಪ್ರದಕ್ಷಿಣೆ ಮಾಡಿ ದಕ್ಷಿಣಾಸಹಿತವಾದ ತಿಲರಾಶಿಯನ್ನು ದಾನ ಮಾಡಬೇಕು.

ಏಕಸ್ಯ ವಾ ಬಹೂನಾಂ ವಾ ದಾತವ್ಯಂ ಭೂತಿಮಿಚ್ಛತಾ ।
ತಸ್ಯ ದಾನಫಲಂ ದೇವಿ ಅಗ್ನಿಷ್ಟೋಮೇನ ಸಮ್ಮಿತಮ್ ॥೮॥

ತನ್ನ ಕಲ್ಯಾಣವನ್ನು ಬಯಸುವವನು ಒಬ್ಬನಿಗಾಗಲೀ, ಅನೇಕರಿಗಾಗಲೀ ದಾನವನ್ನು ಮಾಡಬೇಕು. ಎಲೌ ದೇವಿಯೇ, ಆ ದಾನದ ಫಲವು ಅಗ್ನಿಷ್ಟೋಮದ ಫಲಕ್ಕೆ ಸಮವಾಗಿರುತ್ತದೆ.

ಕೇವಲಂ ವಾ ತಿಲೈರೇವ ಭೂಮೌ ಕೃತ್ವಾ ಗವಾಕೃತಿಮ್ ।
ಸವಸ್ತ್ರಕಂ ಸವಸ್ತ್ರಂ ಚ ಪುಂಸಾ ಗೋದಾನಕಾಂಕ್ಷಿಣಾ ।
ತದರ್ಹಾಯ ಪ್ರದಾತವ್ಯಂ ತಸ್ಯ ಗೋದಾನವತ್‌ಫಲಮ್ ॥೯॥

ಅಥವಾ ಭೂಮಿಯ ಮೇಲೆ ಕೇವಲ ತಿಲಗಳಿಂದಲೇ ಗೋವಿನ ಆಕೃತಿಯನ್ನು ಮಾಡಿ ವಸ್ತ್ರಸಹಿತವಾಗಿ ಗೋದಾನವನ್ನು ಮಾಡಲು ಬಯ್ಸುವ ಪುರುಷನು ಅದನ್ನು ಯೋಗ್ಯನಾದವನಿಗೆ ದಾನ ಮಾಡಬೇಕು. ಅದರಿಂದ ಪ್ರತ್ಯಕ್ಷ ಗೋದಾನ ಮಾಡಿದಷ್ಟೇ ಫಲವುಂಟಾಗುತ್ತದೆ.

ಶರಾವಾಂಸ್ತಿಲಸಂಪೂರ್ಣಾನ್ ಸಹಿರಣ್ಯಾನ್ ಸಚಂಪಕಾನ್ ।
ಜಲೈರ್ದದದ್ ಬ್ರಾಹ್ಮಣಾಯ ಸ ಪುಣ್ಯಫಲಭಾಗ್ಭವೇತ್ ॥೧೦॥

ಮಡಕೆಗಳನ್ನು ಅಥವಾ ಪಾತ್ರೆಗಳನ್ನು ಎಳ್ಳಿನಿಂದ ತುಂಬಿ, ಅದರ ಮೇಲೆ ಹಿರಣ್ಯವನ್ನೂ ಮತ್ತು ಚಂಪಕ ಪುಷ್ಪವನ್ನೂ ಇಟ್ಟು ಜಲಧಾರಾ ಪೂರ್ವಕವಾಗಿ ಬ್ರಾಹ್ಮಣರಿಗೆ ದಾನ ಮಾಡುವವನು ಬಹಳ ಪುಣ್ಯಫಲವನ್ನು ಹೊಂದುತ್ತಾನೆ.

ಏವಂ ತಿಲಮಯಂ ದೇಯಂ ನರೇಣ ಹಿತಮಿಚ್ಛತಾ ।
ನಾನಾದಾನಫಲಂ ಭೂಯಃ ಶೃಣು ದೇವಿ ಸಮಾಹಿತಾ ॥೧೧॥

ತನ್ನ ಹಿತವನ್ನು ಬಯಸುವ ಪುರುಷನು ಹೀಗೆ ತಿಲದಾನವನ್ನು ಮಾಡಬೇಕು. ಎಲೌ ದೇವಿಯೇ, ನಾನಾ ದಾನಗಳ ಫಲವನ್ನು ಪುನಃ ಸಮಾಧಾನದಿಂದ ಕೇಳು.

ಬಲಮಾಯುಷ್ಯಮಾರೋಗ್ಯಮನ್ನದಾನಾಲ್ಲಭೇನ್ನರಃ ।
ಪಾನೀಯದಸ್ತು ಸೌಭಾಗ್ಯಂ ರಸಜ್ಞಾನಂ ಲಭೇನ್ನರಃ ॥೧೨॥

ಮನುಷ್ಯನು ಅನ್ನದಾನದಿಂದ ಬಲವನ್ನೂ, ಆಯುಷ್ಯವನ್ನೂ, ಆರೋಗ್ಯವನ್ನೂ ಪಡೆಯುತ್ತಾನೆ. ಜಲದಾನವನ್ನು ಮಾಡುವ ಪುರುಷನು ಸೌಭಾಗ್ಯವನ್ನೂ ಮತ್ತು ರಸಜ್ಞಾನವನ್ನೂ ಪಡೆಯುತ್ತಾನೆ.

ವಸ್ತ್ರದಾನಾದ್ ವಪುಃಶೋಭಾಮಲಂಕಾರಂ ಲಭೇನ್ನರಃ ।
ದೀಪದೋ ಬುದ್ಧಿವೈಮಲ್ಯಂ ದ್ಯುತಿಂ ಶೋಭಾಂ ಲಭೇತ್‌ಪುನಃ ॥೧೩॥

ವಸ್ತ್ರದಾನದಿಂದ ದೇಹದ ಕಾಂತಿಯನ್ನೂ ಮತ್ತು ಅಲಂಕಾರವನ್ನೂ ಪಡೆಯುತ್ತಾನೆ. ದೀಪದಾನವನ್ನು ಮಾಡಿದವನು ನಿರ್ಮಲವಾದ ಬುದ್ಧಿಯನ್ನೂ ಮತ್ತು ದೇಹ ಕಾಂತಿಯನ್ನೂ ಪಡೆಯುತ್ತಾನೆ.

ರಾಜಪೀಡಾವಿಮೋಕ್ಷಂ ತಚ್ಛತ್ರದೋ ಲಭತೇ ಫಲಮ್ ।
ದಾಸೀದಾಸಪ್ರದಾನಾತ್ತು ಭವೇತ್ ಕರ್ಮಾಂತಭಾಜ್ ನರಃ ।
ದಾಸೀದಾಸಂ ಚ ವಿವಿಧಂ ಲಭೇತ್ ಪ್ರೇತ್ಯ ಗುಣಾನ್ವಿತಮ್ ॥೧೪॥

ಛತ್ರಿಯನ್ನು ದಾನ ಮಾಡುವವನು ರಾಜಪೀಡೆಯಿಂದ ಬಿಡುಗಡೆಯನ್ನು ಹೊಂದುತ್ತಾನೆ. ದಾಸೀ-ದಾಸರನ್ನು ದಾನ ಮಾಡುವುದರಿಂದ ಪ್ರಾರಂಭಿಸಿದ ಕಾರ್ಯವು ಪೂರ್ಣಗೊಳ್ಳುತ್ತದೆ. ತಾನೂ ಸಹ ಮರಣಾನಂತರದಲ್ಲಿ (ಮುಂದಿನ ಜನ್ಮದಲ್ಲಿ) ಗುಣಾನ್ವಿತರಾದ ಅನೇಕ ದಾಸ-ದಾಸಿಯರನ್ನು ಪಡೆಯುತ್ತಾನೆ.

ಯಾನಾನಿ ವಾಹನಂ ಚೈವ ತದರ್ಹಾಯ ದದನ್ನರಃ ।
ಪಾದರೋಗಪರಿಕ್ಲೇಶಾನ್ಮುಕ್ತಶ್ಚೋತ್ಸಾಹವಾನ್ ಭವೇತ್ ।
ವಿಚಿತ್ರಂ ರಮಣೀಯಂ ಚ ಲಭತೇ ಯಾನವಾಹನಮ್ ॥೧೫॥

ಯಾನಗಳನ್ನು ಮತ್ತು ವಾಹನಗಳನ್ನು (ಅಶ್ವ ಮೊದಲಾದವುಗಳನ್ನು) ದಾನ ಮಾಡುವ ಮನುಷ್ಯನು ಪಾದರೋಗಗಳಿಂದ ಮುಕ್ತನಾಗಿ ಉತ್ಸಾಹಯುಕ್ತನಾಗುತ್ತಾನೆ. ತಾನೂ ಸಹ ವಿಚಿತ್ರವಾದ, ಮನೋಹರವಾದ ಯಾನ-ವಾಹನಗಳನ್ನು ಪಡೆಯುತ್ತಾನೆ.

ಪ್ರತಿಶ್ರಯಪ್ರದಾನಂ ಚ ತದರ್ಹಾಯ ತದಿಚ್ಛತೇ ।
ವರ್ಷಾಕಾಲೇ ತು ರಾತ್ರೌ ವಾ ಲಭೇತ್ ಪಕ್ಷಬಲಂ ಶುಭಮ್ ॥೧೬॥

ಮಳೆಗಾಲದ ರಾತ್ರಿಯಲ್ಲಿ ನಿವಾಸವನ್ನು ಬಯಸುವವನಿಗೆ ನಿವಾಸವನ್ನು ಕೊಡುವವನು ಶುಭವಾದ ತನ್ನ ಪಕ್ಷದ ಬಲವನ್ನು ಹೆಚ್ಚಿಸುತ್ತಾನೆ.

ಸೇತುಕೂಪತಟಾಕಾನಾಂ ಕರ್ತಾ ತು ಲಭತೇ ನರಃ ।
ದೀರ್ಘಾಯುಷ್ಟ್ವಂ ಚ ಸೌಭಾಗ್ಯಂ ತಥಾ ಪ್ರೇತ್ಯಾಯತೀಂ ಶುಭಾಮ್ ॥

ಅಣೆಕಟ್ಟುಗಳನ್ನೂ, ಬಾವಿಗಳನ್ನೂ ಮತ್ತು ಕೆರೆಗಳನ್ನೂ ನಿರ್ಮಿಸುವ ನರನು ದೀರ್ಘಾಯುಷ್ಯವನ್ನೂ, ಸೌಭಾಗ್ಯವನ್ನೂ ಮರಣಾನಂತರದಲ್ಲಿ ಬಹಳ ಶುಭವನ್ನೂ ಹೊಂದುತ್ತಾನೆ.

ವೃಕ್ಷಪಂಕ್ತಿಕರೋ ಯಸ್ತು ಛಾಯಾಪುಷ್ಪಫಲಪ್ರದಃ ।
ಪ್ರೇತ್ಯಭಾವೇ ಲಭೇತ್ ಪುಣ್ಯಮಭಿಗಮ್ಯೋ ಭವೇನ್ನರಃ ॥೧೮॥

ಸಾಲು ಮರಗಳನ್ನು ನೆಡಿಸುವವನು, ಛಾಯಾಪುಷ್ಪ ಮತ್ತು ಫಲಗಳನ್ನು ಕೊಡುವವನು ಮರಣಾನಂತರದಲ್ಲಿ ಬಹಳ ಪುಣ್ಯವನ್ನು ಪಡೆಯುತ್ತಾನೆ. ಎಲ್ಲರಿಂದಲೂ ಪ್ರಾಪ್ಯನಾಗುತ್ತಾನೆ.

ಯಸ್ತು ಸಂಕ್ರಮಕೃಲ್ಲೋಕೇ ನದೀಷು ಜಲತಾರಿಣಾಮ್ ।
ಲಭೇತ್ ಪುಣ್ಯಫಲಂ ಪ್ರೇತ್ಯ ವ್ಯಸನೇಭ್ಯೋ ವಿಮೋಕ್ಷಣಮ್ ॥೧೯॥

ಯಾವನು ನದಿಯನ್ನು ದಾಟಲು ಬಯಸುವವರನ್ನು ದಾಟಿಸುತ್ತಾನೆಯೋ ಅವನು ಪುಣ್ಯಫಲವನ್ನು ಪಡೆದು ಮರಣಾನಂತರದಲ್ಲಿ ವ್ಯಸನಗಳಿಂದ ಮುಕ್ತನಾಗುತ್ತಾನೆ.

ಮಾರ್ಗಕೃತ್ ಸತತಂ ಮರ್ತ್ಯೋ ಭವೇತ್ ಸಂತಾನವಾನ್ ಪುನಃ ।
ಕಾಯದೋಷವಿಮುಕ್ತಸ್ತು ತೀರ್ಥಕೃತ್ ಸತತಂ ಭವೇತ್ ॥೨೦॥

ಮಾರ್ಗಗಳನ್ನು ನಿರ್ಮಿಸುವ ಮನುಷ್ಯನು ಒಳ್ಳೆಯ ಸಂತತಿಯುಳ್ಳವನಾಗುತ್ತಾನೆ. ತೀರ್ಥವನ್ನು ನಿರ್ಮಾಣ ಮಾಡುವವನು ದೇಹದೋಷಗಳಿಂದ ಮುಕ್ತನಾಗುತ್ತಾನೆ.

ಔಷಧಾನಾಂ ಪ್ರದಾತಾ ಚ ಸತತಂ ಕೃಪಯಾऽನ್ವಿತಃ ।
ಭವೇದ್ ವ್ಯಾಧಿವಿಹೀನಶ್ಚ ದೀರ್ಘಾಯುಶ್ಚ ವಿಶೇಷತಃ ॥೨೧॥

ಕೃಪೆಯಿಂದ ಕೂಡಿ ಇನ್ನೊಬ್ಬರಿಗೆ ಔಷಧವನ್ನು ದಾನ ಮಾಡುವವನು ವ್ಯಾಧಿ ರಹಿತನೂ, ದೀರ್ಘಾಯುಷ್ಯವಂತನೂ ಆಗುತ್ತಾನೆ.

ಅನಾಥಾನ್ ಪೋಷಯೇದ್ ಯಸ್ತು ಕೃಪಣಾಂಧಕಪಂಗುಕಾನ್ ।
ಸ ಚ ಪುಣ್ಯಫಲಂ ಪ್ರೇತ್ಯ ಲಭತೇ ಕೃಚ್ಛ್ರಮೋಕ್ಷಣಮ್ ॥೨೨॥

ಅನಾಥರನ್ನೂ, ದರಿದ್ರರನ್ನೂ, ಕುರುಡ-ಕುಂಟರನ್ನೂ ಪೋಷಿಸುವ ಮನುಷ್ಯನು ಪುಣ್ಯಫಲವನ್ನು ಪಡೆದು ಮರಣಾನಂತರದಲ್ಲಿ (ಮುಂದಿನ ಜನ್ಮದಲ್ಲಿ) ಎಲ್ಲ ಕಷ್ಟಗಳಿಂದ ಬಿಡುಗಡೆಯನ್ನು ಹೊಂದುತ್ತಾನೆ.

ದೇವಗೋಷ್ಠಾನ್ ಸಭಾಃ ಶಾಲಾ ಭಿಕ್ಷೂಣಾಂ ಚ ಪ್ರತಿಶ್ರಯಮ್ ।
ಯಃ ಕುರ್ಯಾಲ್ಲಭತೇ ನಿತ್ಯಂ ನರಃ ಪ್ರೇತ್ಯ ಫಲಂ ಶುಭಮ್ ॥೨೩॥

ಪ್ರಾಸಾದವಾಸಂ ವಿವಿಧಂ ಪಕ್ಷಶೋಭಾಂ ಲಭೇನ್ನರಃ ।
ವಿವಿಧಂ ವಿವಿಧಾಕಾರಂ ಭಕ್ಷ್ಯಭೋಜ್ಯಗುಣಾನ್ವಿತಮ್ ॥೨೪॥

ಯಾವನು ದೇವಾಲಯಗಳನ್ನೂ, ಗೋಶಾಲೆಗಳನ್ನೂ, ಸಭಾಮಂದಿರಗಳನ್ನೂ, ಶಾಲೆಗಳನ್ನೂ ಮತ್ತು ಭಿಕ್ಷುಗಳಿಗೆ ಆವಾಸ ಸ್ಥಾನಗಳನ್ನೂ ನಿರ್ಮಿಸುತ್ತಾನೆಯೋ ಅವನು ಮರಣಾನಂತರದಲ್ಲಿ ಶುಭಫಲವನ್ನು ಅನುಭವಿಸುತ್ತಾನೆ. ವಿಧವಿಧವಾದ ಉಪ್ಪರಿಗೆ ಗೃಹದಲ್ಲಿ ವಾಸವನ್ನೂ, ಪಕ್ಷಶೋಭೆಯನ್ನೂ ಪಡೆಯುತ್ತಾನೆ. ವಿವಿಧವಾದ ವಿವಿಧಾಕಾರವನ್ನು ಹೊಂದಿದ ಭಕ್ಷ್ಯ-ಭೋಜ್ಯ ಗುಣಗಳಿಂದ ಕೂಡಿದ ಭೋಜನವನ್ನು ಪಡೆಯುತ್ತಾನೆ.

ರಮ್ಯಂ ಸದೈವ ಗೋವಾಟಂ ಯಃ ಕುರ್ಯಾಲ್ಲಭತೇ ನರಃ ।
ಪ್ರೇತ್ಯಭಾವೇ ಶುಭಾಂ ಜಾತಿಂ ವ್ಯಾಧಿಮೋಕ್ಷಂ ತಥೈವ ಚ ॥೨೫॥

ಏವಂ ನಾನಾವಿಧಂ ದ್ರವ್ಯಂ ದಾತಾ ಕರ್ತಾ ಲಭೇತ್ ಫಲಮ್ ॥೨೬॥

ಮನೋಹರವಾದ ಗೋಶಾಲೆಯನ್ನು ಕಟ್ಟಿಸುವ ನರನು ಮರಣಾನಂತರದಲ್ಲಿ ಶುಭಜಾತಿಯನ್ನೂ ಮತ್ತು ವ್ಯಾಧಿಗಳಿಂದ ಮೋಕ್ಷವನ್ನೂ ಹೊಂದುತ್ತಾನೆ. ಹೀಗೆ ನಾನಾ ವಿಧವಾದ ಕಾರ್ಯಗಳನ್ನು ಮಾಡುವವನೂ ಮತ್ತು ನಾನಾ ವಿಧವಾದ ದಾನಗಳನ್ನು ಮಾಡುವವನೂ ಶುಭಫಲಗಳನ್ನು ಹೊಂದುತ್ತಾರೆ.

ಉಮಾ

ಕೃತಂ ದತ್ತಂ ಯಥಾ ಯಾವತ್ ತಸ್ಯ ತಲ್ಲಭತೇ ಫಲಮ್ ।
ಏತನ್ಮೇ ದೇವದೇವೇಶ ತತ್ರ ಕೌತೂಹಲಂ ಮಹತ್ ॥೨೭॥

ಉಮಾ– ಮಾಡಿದ ಸತ್ಕರ್ಮಗಳು ಅಥವಾ ದಾನಗಳು ಎಷ್ಟು ಕಾಲದಲ್ಲಿ ಶುಭ ಫಲವನ್ನು ಕೊಡುತ್ತವೆ? ಎಲೈ ದೇವದೇವೇಶನೇ, ಇದನ್ನು ಹೇಳು. ಇದರಲ್ಲಿ ನನಗೆ ದೊಡ್ಡ ಕುತೂಹಲವಿದೆ.

ಮಹೇಶ್ವರಃ

ಪ್ರೇತ್ಯಭಾವೇ ಶೃಣು ಫಲಂ ದತ್ತಸ್ಯ ಚ ಕೃತಸ್ಯ ಚ ।
ದಾನಂ ಷಡ್ಗುಣಯುಕ್ತಂ ತು ತದರ್ಹಾಯ ಯಥಾವಿಧಿ ।
ಯಥಾವಿಭವತೋ ದಾನಂ ದಾತವ್ಯಮಿತಿ ಮಾನವೈಃ ॥೨೮॥

ಮಹೇಶ್ವರ– ಮರಣಾನಂತರದಲ್ಲಿ ದಾನಗಳಿಂದ ಮತ್ತು ಸತ್ಕರ್ಮಗಳಿಂದ ಉಂಟಾಗುವ ಶುಭಫಲವನ್ನು ಕೇಳು. ಹಿಂದೆ ಹೇಳಿದ ಆರು ಗುಣಗಳಿಂದ ಕೂಡಿದ ದಾನವನ್ನು ವಿಧಿಗೆ ಅನುಗುಣವಾಗಿ, ತನ್ನ ವೈಭವಕ್ಕನುಗುಣವಾಗಿ ದಾನಕ್ಕೆ ಯೋಗ್ಯನಾದವನಿಗೆ ಎಲ್ಲ ಮಾನವರೂ ದಾನವನ್ನು ಮಾಡಬೇಕು.

ಬುದ್ಧಿಮಾಯುಷ್ಯಮಾರೋಗ್ಯಂ ಕುಲಂ ಭಾಗ್ಯಂ ತಥಾऽऽಗಮಮ್ ।
ರೂಪೇಣ ಸಪ್ತಧಾ ಭೂತ್ವಾ ಮಾನುಷ್ಯಂ ಫಲತಿ ಧ್ರುವಮ್ ॥೨೯॥

ಹಾಗೆ ಕೊಟ್ಟ ದಾನವು ಬುದ್ಧಿ, ಆಯುಷ್ಯ, ಆರೋಗ್ಯ, ಕುಲ, ಭಾಗ್ಯ, ರೂಪ ಮತ್ತು ವಿದ್ಯೆ ಎಂದು ಏಳು ಪ್ರಕಾರವಾಗಿ ಮನುಷ್ಯನಿಗೆ ನಿಶ್ಚಿತವಾಗಿ ಫಲವನ್ನು ಕೊಡುತ್ತದೆ.

ಇದಂ ದತ್ತಮಿದಂ ಮೇ ಸ್ಯಾದಿತ್ಯೇವಂ ಫಲಕಾಂಕ್ಷಯಾ ।
ಯದ್ ದತ್ತಂ ತತ್ ತದೇವ ಸ್ಯಾನ್ನ ತು ಕಿಂಚನ ಲಭ್ಯತೇ ॥೩೦॥

ಧ್ರುವಂ ದೇವ್ಯುತ್ತಮೇ ದಾನಂ ಮಧ್ಯಮೇ ತ್ವಧಮಂ ಫಲಮ್ ॥೩೧॥

ಇದನ್ನು ದಾನ ಮಾಡುತ್ತಿದ್ದೇನೆ. ಇದರ ಫಲವು ನನಗೆ ಉಂಟಾಗಬೇಕು ಎಂಬ ಫಲದಾಸೆಯಿಂದ ಮಾಡಿದ ದಾನವು ಎಷ್ಟು ಕೊಟ್ಟಿರುತ್ತದೆಯೋ ಅಷ್ಟೇ ಫಲವು ದೊರಕುವಂತೆ ಮಾಡುತ್ತದೆ. ಅಂತಹ ದಾನದಿಂದ ಅಧಿಕವಾದ ಯಾವುದೂ ಲಭ್ಯವಾಗುವುದಿಲ್ಲ. ಎಲೌ ದೇವಿಯೇ, ಉತ್ತಮಪಾತ್ರರಿಗೆ ಕೊಟ್ಟ ದಾನವು ಶ್ರೇಷ್ಠವಾದುದು. ಮಧ್ಯಮನಿಗೆ ಕೊಟ್ಟ ದಾನದ ಫಲವು ಅಧಮವಾದುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ಅನ್ನದಾನಪ್ರಶಂಸಾ ನಾಮ, ಗೋದಾನಪ್ರಶಂಸಾ ನಾಮ, ಸುವರ್ಣದಾನಪ್ರಶಂಸಾ ನಾಮ ಏಕವಿಂಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಇಪ್ಪತ್ತೆರಡನೆಯ ಅಧ್ಯಾಯ

ಉಮಾ-ಮಹೇಶ್ವರಸಂವಾದ. ಲೌಕಿಕ-ವೈದಿಕಯಜ್ಞಫಲಕಥನ.

ಉಮಾ

ಭಗವನ್ ದೇವದೇವೇಶ ವಿಶಿಷ್ಟಂ ಯಜ್ಞಮುಚ್ಯತೇ ।
ಲೌಕಿಕಂ ವೈದಿಕಂ ಚೈವ ತನ್ಮೇ ಶಂಸಿತುಮರ್ಹಸಿ ॥೧॥

ಉಮಾ- ಪೂಜ್ಯನೇ, ದೇವದೇವೇಶನೇ, ಲೌಕಿಕ ಮತ್ತು ವೈದಿಕ ಯಜ್ಞವು ಶ್ರೇಷ್ಠವೆಂದು ಹೇಳಲ್ಪಡುತ್ತದೆ. ಅದನ್ನು ನನಗೆ ಹೇಳಬೇಕು.

ಮಹೇಶ್ವರಃ

ದೇವತಾನಾಂ ತು ಪೂಜಾ ಯಾ ಯಜ್ಞೇಷ್ವೇವ ಸಮಾಹಿತಾ ।
ಯಜ್ಞಾ ವೇದೇಷ್ವಧೀನಾಶ್ಚ ವೇದಾ ಬ್ರಾಹ್ಮಣಸಂಯುತಾಃ ॥೨॥

ಮಹೇಶ್ವರ- ದೇವತೆಗಳ ಪೂಜೆಯು ಯಜ್ಞಗಳನ್ನು ಅವಲಂಬಿಸಿದೆ. ಈ ಯಜ್ಞಗಳು ವೇದಗಳನ್ನು ಆಶ್ರಯಿಸಿವೆ. ವೇದಗಳು ಬ್ರಾಹ್ಮಣರನ್ನು ಆಶ್ರಯಿಸಿವೆ.

ಇದಂ ತು ಸಕಲಂ ದಿವ್ಯಂ ದಿವಿ ವಾ ಭುವಿ ವಾ ಪ್ರಿಯೇ ।
ಯಜ್ಞಾರ್ಥಂ ವಿದ್ಧಿ ತತ್ಸೃಷ್ಟಂ ಲೋಕಾನಾಂ ಹಿತಕಾಮ್ಯಯಾ ॥೩॥

ಎಲೌ ಪ್ರಿಯೆಯೇ, ಭೂಮಿಯಲ್ಲಿ ಮತ್ತು ಸ್ವರ್ಗಲೋಕದಲ್ಲಿ ಇರುವ ಸಕಲ ದಿವ್ಯವಸ್ತುಗಳು ಲೋಕದ ಹಿತದೃಷ್ಟಿಯಿಂದ ಯಜ್ಞಾರ್ಥವಾಗಿ ಸೃಷ್ಟಿಸಲ್ಪಟ್ಟಿವೆ ಎಂದು ತಿಳಿ.

ಏವಂ ವಿಜ್ಞಾಯ ತತ್ಕರ್ತಾ ಸದಾರಃ ಸತತಂ ದ್ವಿಜಃ ।
ಪ್ರೇತ್ಯಭಾವೇ ಲಭೇಲ್ಲೋಕಾನ್ ಬ್ರಹ್ಮಕರ್ಮಸಮಾಧಿನಾ ॥೪॥

ಹೀಗೆ ಚಿಂತಿಸುವ ಪತ್ನೀಸಹಿತನಾದ ಬ್ರಾಹ್ಮಣನು ಸತತವಾಗಿ ಅಂತಹ ಕಾರ್ಯಗಳನ್ನು ಮಾಡಿ ಭಗವಂತನ ಚಿತ್ತ ಮತ್ತು ಭಗವತ್ಪ್ರೀತಿಕರವಾದ ಕರ್ಮದಿಂದ ಮರಣಾನಂತರದಲ್ಲಿ ಶುಭಲೋಕಗಳನ್ನು ಪಡೆಯುತ್ತಾನೆ.

ಬ್ರಾಹ್ಮಣೇಷ್ವಪಿ ತದ್ ಬ್ರಹ್ಮ ನಿತ್ಯಂ ದೇವಿ ಸಮಾಹಿತಮ್ ।
ತಸ್ಮಾದ್ ವಿಪ್ರೈರ್ಯಥಾಶಾಸ್ತ್ರಂ ವಿಧಿದೃಷ್ಟೇನ ಕರ್ಮಣಾ ॥೫॥

ಯಜ್ಞಕರ್ಮ ಕೃತಂ ಸರ್ವಂ ದೇವತಾ ಅಭಿತರ್ಪಯೇತ್ ।
ಬ್ರಾಹ್ಮಣಾಃ ಕ್ಷತ್ರಿಯಾಶ್ಚೈವ ಯಜ್ಞಾರ್ಹಾಃ ಪ್ರಾಯಶಃ ಸ್ಮೃತಾಃ ॥೬॥

ಎಲೌ ದೇವಿಯೇ, ಬ್ರಾಹ್ಮಣರಲ್ಲಿ ಆ ಬ್ರಹ್ಮನು ನಿತ್ಯವೂ ಸನ್ನಿಹಿತನಾಗಿದ್ದಾನೆ. ಆದ್ದರಿಂದ ಬ್ರಾಹ್ಮಣರು ವೇದವಿಧಿಗೆ ಮತ್ತು ಶಾಸ್ತ್ರವಿಧಿಗೆ ಅನುಸಾರವಾಗಿ ಮಾಡಿದ ಎಲ್ಲ ಯಜ್ಞಾದಿ ಕರ್ಮಗಳು ದೇವತೆಗಳನ್ನು ತೃಪ್ತಿಪಡಿಸುತ್ತವೆ. ಬ್ರಾಹ್ಮಣರು ಮತ್ತು ಕ್ಷತ್ರಿಯರು ಹೆಚ್ಚಾಗಿ ಯಜ್ಞವನ್ನು ಮಾಡಲು ಅರ್ಹರಾದವರು ಎಂದು ಹೇಳಲ್ಪಡುತ್ತಾರೆ.

ಅಗ್ನಿಷ್ಟೋಮಾದಿಭಿರ್ಯಜ್ಞೈರ್ವೇದೇಷು ಪರಿಕಲ್ಪಿತೈಃ ।
ಸುಶುದ್ಧೈರ್ಯಜಮಾನೈಶ್ಚ ಋತ್ವಿಗ್ಭಿಶ್ಚ ಯಥಾವಿಧಿ ।
ಶುದ್ಧೈರ್ದ್ರವ್ಯೋಪಕರಣೈರ್ಯಷ್ಟವ್ಯಮಿತಿ ನಿಶ್ಚಯಃ ॥೭॥

ಅತ್ಯಂತ ಶುದ್ಧನಾದ ಯಜಮಾನನು ಋತ್ವಿಜರು ಶುದ್ಧವಾದ ದ್ರವ್ಯಗಳು ಮತ್ತು ಉಪಕರಣಗಳಿಂದ ಕೂಡಿಕೊಂಡು ವಿಧಿಗೆ ಅನುಸಾರವಾಗಿ, ವೇದವಿಹಿತವಾಗಿ ಅಗ್ನಿಷ್ಟೋಮಾದಿ ಯಜ್ಞಗಳನ್ನು ಮಾಡಬೇಕೆಂಬುದು ನಿಶ್ಚಿತವಾದುದು.

ತಥಾ ಕೃತೇಷು ಯಜ್ಞೇಷು ದೇವಾನಾಂ ತೋಷಣಂ ಭವೇತ್ ।
ತುಷ್ಟೇಷು ದೇವಸಂಘೇಷು ಯಜ್ವಾ ಯಜ್ಞಫಲಂ ಲಭೇತ್ ॥೮॥

ಹಾಗೆ ಯಜ್ಞಗಳನ್ನು ಮಾಡಿದರೆ ದೇವತೆಗಳು ಸಂತುಷ್ಟರಾಗುತ್ತಾರೆ. ದೇವತೆಗಳು ಸಂತುಷ್ಟರಾದರೆ ಯಜ್ಞವನ್ನು ಮಾಡಿದವನು ಯಜ್ಞಫಲವನ್ನು ಹೊಂದುತ್ತಾನೆ.

ದೇವಾಃ ಸಂತೋಷಿತಾ ಯಜ್ಞೈರ್ಲೋಕಾನ್ ಸಂವರ್ಧಯಂತ್ಯುತ ।
ಉಭಯೋರ್ಲೋಕಯೋರ್ಭೂತಿರ್ದೇವಿ ಯಜ್ಞೈಃ ಪ್ರದೃಶ್ಯತೇ ॥೯॥

ಯಜ್ಞಗಳಿಂದ ಸಂತುಷ್ಟರಾದ ದೇವತೆಗಳು ಲೋಕಗಳನ್ನು ಅಭಿವೃದ್ಧಿಪಡಿಸುತ್ತಾರೆ. ಆದ್ದರಿಂದ ಎಲೌ ದೇವಿಯೇ, ಎರಡು ಲೋಕಗಳ ಸಮೃದ್ಧಿಯೂ ಯಜ್ಞಗಳಿಂದ ಉಂಟಾಗುವುದು ಕಂಡು ಬರುತ್ತದೆ.

ತಸ್ಮಾದ್ ಯಜ್ವಾ ದಿವಂ ಗತ್ವಾ ಅಮರೈಃ ಸಹ ಮೋದತೇ ।
ನಾಸ್ತಿ ಯಜ್ಞಸಮಂ ದಾನಂ ನಾಸ್ತಿ ಯಜ್ಞಸಮೋ ನಿಧಿಃ ॥೧೦॥

ಆದ್ದರಿಂದ ಯಾಗವನ್ನು ಮಾಡುವವನು ಸ್ವರ್ಗಕ್ಕೆ ಹೋಗಿ ದೇವತೆಗಳ ಜೊತೆಯಲ್ಲಿ ಸಂತೋಷಪಡುತ್ತಾನೆ. ಯಜ್ಞಕ್ಕೆ ಸಮಾನವಾದ ದಾನವಿಲ್ಲ, ಯಜ್ಞಕ್ಕೆ ಸಮಾನವಾದ ವಿಧಿಯೂ ಇಲ್ಲ.

ಸರ್ವಧರ್ಮಸಮುದ್ದೇಶೋ ದೇವಿ ಯಜ್ಞೇ ಸಮಾಹಿತಃ ।
ಏಷಾ ಯಜ್ಞಕೃತಾ ಪೂಜಾ ಲೌಕಿಕೀಮಪರಾಂ ಶೃಣು ॥೧೧॥

ದೇವಸತ್ಕಾರಮುದ್ದಿಶ್ಯ ಕ್ರಿಯತೇ ಲೌಕಿಕೋತ್ಸವಾಃ ॥೧೨॥

ಎಲೌ ದೇವಿಯೇ, ಯಜ್ಞದಲ್ಲಿ ಎಲ್ಲ ಧರ್ಮಗಳ ಮೇಲನವಿದೆ. ಇದು ಯಜ್ಞದಿಂದ ದೇವತೆಗಳನ್ನು ಪೂಜೆ ಮಾಡುವ ವಿಧಾನ. ಲೌಕಿಕವಾದ ಇನ್ನೊಂದು ವಿಧಿಯನ್ನು ಕೇಳು. ಅದು ದೇವತೆಗಳ ಸತ್ಕಾರವನ್ನು ಉದ್ದೇಶಿಸಿ ಲೌಕಿಕ ಉತ್ಸವವನ್ನು ಮಾಡುವುದು.

ದೇವಗೋಷ್ಠಾನ್ ಹಿ ಸಂಸೃತ್ಯ ಚೋತ್ಸವಂ ಯಃ ಕರೋತಿ ವೈ ।
ಯಾಗಾನ್ ದೇವೋಪಹಾರಾಂಶ್ಚ ಶುಚಿರ್ಭೂತ್ವಾ ಯಥಾವಿಧಿ ।
ದೇವಾನ್ ಸಂತೋಷಯಿತ್ವಾ ಸ ದೇವಿ ಧರ್ಮಮವಾಪ್ನುಯಾತ್ ॥೧೩॥

ದೇವಾಲಯಗಳನ್ನು ಅಲಂಕರಿಸಿ ಯಾವನು ಉತ್ಸವಗಳನ್ನು ಮಾಡಿ, ಶುಚಿಯಾಗಿ, ವಿಧಿಗೆ ಅನುಗುಣವಾಗಿ ವೈಶ್ವದೇವಾದಿಗಳನ್ನು ಮತ್ತು ನೈವೇದ್ಯಗಳನ್ನು ಮಾಡಿ ದೇವತೆಗಳನ್ನು ಸಂತೋಷಪಡಿಸಿ ಧರ್ಮವನ್ನು ಹೊಂದುತ್ತಾನೆಯೋ.

ಗಂಧಮಾಲ್ಯೈಶ್ಚ ವಿವಿಧೈಃ ಪರಮಾನ್ನೇನ ಧೂಪನೈಃ ।
ಬಹುಭಿಃ ಸ್ತುತಿಭಿಶ್ಚೈವ ಸ್ತುವಂತಃ ಪ್ರಯತಾ ನರಾಃ ॥೧೪॥

ವಿವಿಧವಾದ ಗಂಧ-ಮಾಲ್ಯಗಳಿಂದಲೂ, ಧೂಪ-ದೀಪಗಳಿಂದಲೂ, ಪರಮಾನ್ನದಿಂದಲೂ ಪೂಜೆಯನ್ನು ಮಾಡಿ (ಯಾವ) ಮನುಷ್ಯರು ಅನೇಕ ಸ್ತೋತ್ರಗಳಿಂದ ಶ್ರದ್ಧಾಪೂರ್ವಕವಾಗಿ ದೇವತೆಗಳನ್ನು ಸ್ತೋತ್ರ ಮಾಡುತ್ತಾರೆಯೋ.

ನೃತ್ತೈರ್ವಾದ್ಯೈಶ್ಚ ಗಾಂಧರ್ವೈರನ್ಯೈರ್ದೃಷ್ಟಿವಿಲೋಭನೈಃ ।
ದೇವಸತ್ಕಾರಮುದ್ದಿಶ್ಯ ಕುರ್ವತೇ ಯೇ ನರಾ ಭುವಿ ॥೧೫॥

ತೇಷಾಂ ಭಕ್ತಿಕೃತೇನೈವ ಸತ್ಕಾರೇಣಾಭಿಪೂಜಿತಾಃ ।
ತಥೈವ ತೋಷಂ ಸಂಯಾಂತಿ ದೇವಿ ದೇವಾಸ್ತ್ರಿವಿಷ್ಟಪೇ ॥೧೬॥

ಯಾವ ಮನುಷ್ಯರು ಭೂಮಿಯಲ್ಲಿ ದೇವತೆಗಳ ಸತ್ಕಾರವನ್ನು ಉದ್ದೇಶಿಸಿ ನೃತ್ಯ-ವಾದ್ಯ-ಗೀತೆಗಳಿಂದಲೂ, ನಯನ ಮನೋಹರವಾದ ಇನ್ನೂ ಅನೇಕ ವಸ್ತುಗಳಿಂದಲೂ ಪೂಜೆಯನ್ನು ಮಾಡುತ್ತಾರೆಯೋ, ಎಲೌ ದೇವಿಯೇ, ಅವರು ಭಕ್ತಿಯಿಂದ ಮಾಡಿದ ಆ ಸತ್ಕಾರದಿಂದಲೇ ಪೂಜಿತರಾದ ದೇವತೆಗಳು ಸ್ವರ್ಗದಲ್ಲಿ ಸಂತೋಷವನ್ನು ಹೊಂದುತ್ತಾರೆ.

ಮಾನುಷೈರಪರೈರ್ವಾಪಿ ಶುಚಿಭಿಸ್ತತ್ಪರಾಯಣೈಃ ।
ಬ್ರಹ್ಮಚರ್ಯಪರೈರೇತತ್ಕೃತಂ ಧರ್ಮಫಲಂ ಲಭೇತ್ ॥೧೭॥

ಅಥವಾ ಶುಚಿಯಾದ, ದೇವತಾಪರಾಯಣರಾದ, ಬ್ರಹ್ಮಚರ್ಯಾದಿ ನಿಯಮಗಳಿಂದ ಕೂಡಿದ ಮನುಷ್ಯರು ಮಾಡಿದ ಸ್ತೋತ್ರದಿಂದಲೂ ಧರ್ಮಫಲ ಉಂಟಾಗುತ್ತದೆ.

ಕೇವಲೈಃ ಸ್ತುತಿಭಿರ್ದೇವಿ ಗಂಧಮಾಲ್ಯಸಮಾಯುತೈಃ ।
ಪ್ರಯತೈಃ ಶುದ್ಧಗಾತ್ರೈಸ್ತು ಶುದ್ಧದೇಶೇ ಸುಪೂಜಿತಾಃ ।
ಸಂತೋಷಂ ಯಾಂತಿ ವೈ ದೇವಾ ಭಕ್ತೈಃ ಸಂಪೂಜಿತಾಸ್ತಥಾ ॥೧೮॥

ದೇವಾನ್ ಸಂತೋಷಯಿತ್ವೈವ ದೇವಿ ಧರ್ಮಮವಾಪ್ನುಯಾತ್ ॥೧೯॥

ಎಲೌ ದೇವಿಯೇ, ಶ್ರದ್ಧೆಯಿಂದ ಕೂಡಿ, ಶರೀರ ಶುದ್ಧಿಯನ್ನು ಹೊಂದಿ, ಶುದ್ಧವಾದ ದೇಶ-ಕಾಲಗಳಲ್ಲಿ ಗಂಧ-ಮಾಲ್ಯಾದಿಗಳಿಂದಲೂ ಮತ್ತು ಕೇವಲ ಸ್ತೋತ್ರದಿಂದಲೂ ಚೆನ್ನಾಗಿ ಪೂಜಿತರಾದ ದೇವತೆಗಳು ಸಂತೋಷವನ್ನು ಹೊಂದುತ್ತಾರೆ. ಎಲೌ ದೇವಿಯೇ, ದೇವತೆಗಳ ಸಂತೋಷದಿಂದಲೇ ಧರ್ಮವುಂಟಾಗುತ್ತದೆ.

ಉಮಾ

ತ್ರಿವಿಷ್ಟಪಸ್ಥಾ ವೈ ಭೂಮೌ ದೇವಾ ಮಾನುಷಚೇಷ್ಟಿತಮ್ ।
ಕಥಂ ಜ್ಞಾಸ್ಯಂತಿ ವಿಧಿವತ್ ತನ್ಮೇ ಶಂಸಿತುಮರ್ಹಸಿ ॥೨೦॥

ಉಮಾ– ದೇವತೆಗಳಾದರೂ ಸ್ವರ್ಗಲೋಕದಲ್ಲಿರುತ್ತಾರೆ. ಭೂಮಿಯಲ್ಲಿ ಮನುಷ್ಯರು ವಿಧಿಗೆ ಅನುಸಾರವಾಗಿ ಮಾಡಿದ ಕಾರ್ಯವನ್ನು ಅವರು ಹೇಗೆ ತಿಳಿಯುವರೆಂದು ನನಗೆ ಹೇಳಬೇಕು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಯಥಾ ತೈರ್ವಿದ್ಯತೇ ಪ್ರಿಯೇ ।
ಪ್ರಾಣಿನಾಂ ತು ಶರೀರೇಷು ಅಂತರಾತ್ಮಾ ವ್ಯವಸ್ಥಿತಃ ॥೨೧॥

ಮಹೇಶ್ವರ– ಎಲೌ ಪ್ರಿಯೆಯೇ, ಅವರು ಹೇಗೆ ತಿಳಿಯುತ್ತಾರೆಂದು ನಿನಗೆ ನಾನು ಹೇಳುವೆನು. ಪ್ರಾಣಿಗಳ ಶರೀರದಲ್ಲಿ ಅಂತರಾತ್ಮನಾದ ನಾರಾಯಣನು ವ್ಯವಸ್ಥಿತನಾಗಿದ್ದಾನೆ.

ಆತ್ಮಾನಂ ಪರಮಂ ದೇವಮಿತಿ ವಿದ್ಧಿ ಶುಭೇಕ್ಷಣೇ ।
ಆತ್ಮಾ ಮನೋವ್ಯವಸ್ಥಾನಾತ್ ಸರ್ವಂ ವೇತ್ತಿ ಶುಭಾಶುಭಮ್ ॥೨೨॥

ಎಲೌ ಶುಭೇಕ್ಷಣೆಯೇ, ಆ ಅಂತರಾತ್ಮನು ಪರದೇವತೆ ಎಂದು ತಿಳಿ. ಅವನು ಮನಸ್ಸಿನಲ್ಲಿರುವುದರಿಂದ ಮನಸ್ಸಿನಲ್ಲಿ ನಡೆಯುವ ಎಲ್ಲಾ ಶುಭಾಶುಭಗಳನ್ನೂ ತಿಳಿಯುತ್ತಾನೆ.

ಆತ್ಮೈವ ದೇವಾಸ್ತದ್ ವಿದ್ಯುರವ್ಯಗ್ರಮನಸಃ ಕೃತಮ್ ।
ಸತಾಂ ಮನೋವ್ಯವಸ್ಥಾನಾಚ್ಛುಭಂ ಭವತಿ ವೈ ನೃಣಾಮ್ ॥೨೩॥

ದೇವತೆಗಳೂ ಸಹ ಅವ್ಯಗ್ರವಾದ ಮನಸ್ಸಿನಿಂದ ಆ ಅಂತರಾತ್ಮನನ್ನು ಧ್ಯಾನಿಸುತ್ತಾರೆ. ಸಜ್ಜನರ ಮನಸ್ಸಿನಲ್ಲಿಸ್ಥಿತನಾದ ಪರಮಾತ್ಮನೂ, ದೇವತೆಗಳ ಮನಸ್ಸಿನಲ್ಲಿ ಸ್ಥಿತನಾದ ಪರಮಾತ್ಮನೂ (ಒಬ್ಬನೇ ಆದುದರಿಂದ) ಮನುಷ್ಯರಿಗೆ ಶುಭವಾಗುತ್ತದೆ. (ಮನುಷ್ಯರ ಮನೋನಿಯಾಮಕನೂ ದೇವತೆಗಳ ಮನೋನಿಯಾಮಕನಾದ ಪರಮಾತ್ಮನೂ ಒಬ್ಬನೇ ಆದುದರಿಂದ ಅವನ ಅನುಗ್ರಹದಿಂದ ದೇವತೆಗಳು ಮನುಷ್ಯರ ಮನಸ್ಸಿನಲ್ಲಿರುವುದನ್ನು ತಿಳಿಯುತ್ತಾರೆ ಎಂದು ಅಭಿಪ್ರಾಯ).

ತಸ್ಮಾದ್ ದೇವಾಭಿಸಂಪೂಜಾ ಪಿತೃಪೂಜಾ ತಥೈವ ಚ ।
ಯಜ್ಞಾಶ್ಚ ಧರ್ಮಕಾರ್ಯಾಣಿ ಗುರುಪೂಜಾಶ್ಚ ಶೋಭನೇ ॥೨೪॥

ಎಲೌ ಶೋಭನೆಯೇ, ಆದ್ದರಿಂದಲೇ ದೇವತೆಗಳ ಪೂಜೆಯೂ, ಪಿತೃಗಳ ಪೂಜೆಯೂ, ಯಜ್ಞಗಳೂ, ಧರ್ಮಕಾರ್ಯಗಳೂ, ಗುರುಪೂಜೆಯೂ ನಡೆಯುತ್ತವೆ.

ಶುದ್ಧಗಾತ್ರೈರ್ವೃತ್ತಯುಕ್ತೈಸ್ತನ್ಮಯೈಸ್ತತ್ಪರಾಯಣೈಃ ।
ಏವಂ ವ್ಯವಸ್ಥಿತೈರ್ನಿತ್ಯಂ ಕರ್ತವ್ಯಮಿತಿ ನಿಶ್ಚಯಃ ॥೨೫॥

ಇಂತಹ ಕಾರ್ಯಗಳನ್ನು ಶರೀರ ಶುದ್ಧಿಯುಳ್ಳ, ಶುದ್ಧ ಚಾರಿತ್ರವುಳ್ಳ, ಯಾವಾಗಲೂ ಭಗವಂತನನ್ನೇ ಧ್ಯಾನಿಸಿ ಅವನನ್ನು ಆಶ್ರಯಿಸಿದಂತಹ ಪುರುಷರು ಮಾಡಬೇಕೆಂಬುದು ನಿಶ್ಚಿತವಾದುದು.

ಏವಂ ಕೃತ್ವಾ ಶುಭಾಕಾಂಕ್ಷೀ ಪರತ್ರೇಹ ಚ ಮೋದತೇ ।
ಅನ್ಯಥಾ ಮನ ಆವೇಶ್ಯ ಕೃತಂ ನ ಫಲತಿ ಪ್ರಿಯೇ ।
ಋತೇಽಪಿ ತು ಮನೋ ದೇವಿ ಅಶುಭಂ ಫಲತಿ ಧ್ರುವಮ್ ॥೨೬॥

ಶುಭವನ್ನು ಬಯಸುವವನು ಈ ರೀತಿಯ ಕರ್ಮಾನುಷ್ಠಾನವನ್ನು ಮಾಡಿ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸಂತೋಷವನ್ನು ಹೊಂದುತ್ತಾನೆ. ಎಲೌ ಪ್ರಿಯೆಯೇ, ಮನಸ್ಸನ್ನು ಪರಮಾತ್ಮನಲ್ಲಿ ಬಿಟ್ಟು ಬೇರೆ ಕಡೆ ಇಟ್ಟು ಮಾಡಿದ ಕರ್ಮವು ಫಲವನ್ನು ಕೊಡುವುದಿಲ್ಲ. ಆದರೆ ಮನಸ್ಸನ್ನು ಬೇರೆ ಕಡೆ ಇಟ್ಟು ಮಾಡಿದ ಅಶುಭವಾದ ಕರ್ಮವು ಮಾತ್ರ ನಿಶ್ಚಿತವಾಗಿ ಅಶುಭ ಫಲವನ್ನು ಕೊಡುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಪರ್ವಣಿ ಲೌಕಿಕವೈದಿಕಕರ್ಮಫಲವರ್ಣನಂ ನಾಮ ದ್ವಾವಿಂಶತ್ಯುತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಇಪ್ಪತ್ಮೂರನೆಯ ಅಧ್ಯಾಯ

ಉಮಾ-ಮಹೇಶ್ವರಸಂವಾದ. ಶ್ರಾದ್ಧವಿಧಿ.

ಉಮಾ

ಪಿತೃಮೇಧಃ ಕಥಂ ದೇವ ತನ್ಮೇ ಶಂಸಿತುಮರ್ಹಸಿ ।
ಸರ್ವೇಷಾಂ ಪಿತರಃ ಪೂಜ್ಯಾಃ ಸರ್ವಸಂಪತ್ಪ್ರದಾಯಿನಃ ॥೧॥

ಉಮಾ– ಎಲ್ಲರಿಗೂ ಪಿತೃಗಳು ಪೂಜ್ಯರಾದವರು ಮತ್ತು ಸರ್ವಸಂಪತ್ತನ್ನು ಕೊಡುವವರು. ಎಲೈ ದೇವನೇ, ಅಂತಹ ಪಿತೃಮೇಧವನ್ನು (ಶ್ರಾದ್ಧಕರ್ಮವನ್ನು) ಹೇಗೆ ಮಾಡಬೇಕೆಂದು ತಿಳಿಸು.

ಮಹೇಶ್ವರಃ

ಪಿತೃಮೇಧಂ ಪ್ರವಕ್ಷ್ಯಾಮಿ ಯಥಾವತ್ ತನ್ಮನಾಃ ಶೃಣು ।
ದೇಶಕಾಲೌ ವಿಧಾನಂ ಚ ತತ್ಕ್ರಿಯಾಯಾಃ ಶುಭಾಶುಭಮ್ ॥೨॥

ಮಹೇಶ್ವರ– ಪಿತೃಮೇಧವನ್ನೂ, ಅದಕ್ಕೆ ಯೋಗ್ಯವಾದ ದೇಶ-ಕಾಲಗಳನ್ನೂ, ವಿಧಾನವನ್ನೂ, ಆ ಕ್ರಿಯೆಗೆ ಶುಭಾಶುಭ ಫಲಗಳನ್ನೂ ಸರಿಯಾಗಿ ಹೇಳುವೆನು. ಅದರಲ್ಲಿಯೇ ಮನಸ್ಸಿಟ್ಟು ಕೇಳು.

ಲೋಕೇಷು ಪಿತರಃ ಪೂಜ್ಯಾ ದೇವತಾನಾಂ ಚ ದೇವತಾಃ ।
ಶುಚಯೋ ನಿರ್ಮಲಾಃ ಪುಣ್ಯಾ ದಕ್ಷಿಣಾಂ ದಿಶಮಾಶ್ರಿತಾಃ ॥೩॥

ಲೋಕದಲ್ಲಿ ಪಿತೃಗಳು ಪೂಜ್ಯರಾದವರು. ದೇವತೆಗಳಿಗೂ ದೇವತೆಗಳಾದವರು. ಅವರು ಶುಚಿಗಳೂ, ನಿರ್ಮಲರೂ, ಪವಿತ್ರರೂ ಆಗಿ ದಕ್ಷಿಣ ದಿಕ್ಕಿನಲ್ಲಿ ನೆಲೆಸಿರುತ್ತಾರೆ.

ಯಥಾ ವೃಷ್ಟಿಂ ಪ್ರತೀಕ್ಷಂತೇ ಭೂಮಿಷ್ಠಾಃ ಸರ್ವಜಂತವಃ ।
ಪಿತರಶ್ಚ ತಥಾ ಲೋಕೇ ಪಿತೃಮೇಧಂ ಶುಭೇಕ್ಷಣೇ ॥೪॥

ಎಲೌ ಶುಭೇಕ್ಷಣೆಯೇ, ಭೂಮಿಯಲ್ಲಿರುವ ಎಲ್ಲ ಜಂತುಗಳು ಮಳೆಯನ್ನು ನಿರೀಕ್ಷಿಸುವಂತೆ ಪಿತೃಗಳು ಲೋಕದಲ್ಲಿ ಮಾಡುವ ಪಿತೃಮೇಧವನ್ನು ನಿರೀಕ್ಷಿಸುತ್ತಿರುತ್ತಾರೆ.

ತಸ್ಯ ದೇಶಾಃ ಕುರುಕ್ಷೇತ್ರಂ ಗಯಾ ಗಂಗಾ ಸರಸ್ವತೀ ।
ಪ್ರಭಾಸಂ ಪುಷ್ಕರಂ ಚೇತಿ ತೇಷು ದತ್ತಂ ಮಹಾಫಲಮ್ ॥೫॥

ಅದಕ್ಕೆ ಪವಿತ್ರವಾದ ದೇಶವೆಂದರೆ ಕುರುಕ್ಷೇತ್ರ, ಗಯಾ, ಗಂಗಾ, ಸರಸ್ವತೀ, ಪ್ರಭಾಸ ಮತ್ತು ಪುಷ್ಕರಗಳು. ಅಲ್ಲಿ ಮಾಡಿದ ಪಿತೃಮೇಧವು ಮಹಾಫಲವನ್ನು ಕೊಡುತ್ತದೆ.

ತೀರ್ಥಾನಿ ಸರಿತಃ ಪುಣ್ಯಾ ವಿವಿಕ್ತಾನಿ ವನಾನಿ ಚ ।
ನದೀನಾಂ ಪುಲಿನಾನೀತಿ ದೇಶಾಃ ಶ್ರಾದ್ಧಸ್ಯ ಪೂಜಿತಾಃ ॥೬॥

ತೀರ್ಥಕ್ಷೇತ್ರಗಳು, ಪುಣ್ಯನದಿಗಳು, ನಿರ್ಜನವಾದ ವನಗಳು, ನದೀ ತೀರಗಳು ಇವು ಶ್ರಾದ್ಧಕ್ಕಾಗಿ ಪ್ರಶಂಸಿಸಲ್ಪಟ್ಟ ದೇಶಗಳು.

ಮಾಘಪ್ರೌಷ್ಠಪದೌ ಮಾಸೌ ಶ್ರಾದ್ಧಕರ್ಮಣಿ ಪೂಜಿತೌ ।
ಪಕ್ಷಯೋಃ ಕೃಷ್ಣಪಕ್ಷಶ್ಚ ಪೂರ್ವಪಕ್ಷಾತ್ ಪ್ರಶಸ್ಯತೇ ॥೭॥

ಮಾಘ ಮಾಸ ಮತ್ತು ಭಾದ್ರಪದ ಮಾಸಗಳು ಶ್ರಾದ್ಧಕರ್ಮಕ್ಕೆ ಶ್ರೇಷ್ಠವಾದವುಗಳು. ಪಕ್ಷಗಳಲ್ಲಿ ಕೃಷ್ಣಪಕ್ಷವು ಶುಕ್ಲಪಕ್ಷಕ್ಕಿಂತ ಶ್ರಾದ್ಧಕ್ಕೆ ಶ್ರೇಷ್ಠವಾದುದು.

ಅಮಾವಾಸ್ಯಾಂ ತ್ರಯೋದಶ್ಯಾಂ ನವಮ್ಯಾಂ ಪ್ರತಿಪತ್ಸು ಚ ।
ತಿಥಿಷ್ವೇತಾಸು ತುಷ್ಯಂತಿ ದತ್ತೇನೇಹ ಪಿತಾಮಹಾಃ ॥೮॥

ಅಮಾವಾಸ್ಯೆ, ತ್ರಯೋದಶಿ, ನವಮಿ, ಪ್ರತಿಪತ್ - ಈ ತಿಥಿಗಳಲ್ಲಿ ಮಾಡಿದ ಶ್ರಾದ್ಧದಿಂದ ಪಿತಾಮಹರು ಸಂತುಷ್ಟರಾಗುತ್ತಾರೆ.

ಪೂರ್ವಾಹ್ಣೇ ಶುಕ್ಲಪಕ್ಷೇ ಚ ರಾತ್ರೌ ಜನ್ಮದಿನೇಷು ವಾ ।
ಯುಗ್ಮೇಷ್ವಹಸ್ಸು ಚ ಶ್ರಾದ್ಧಂ ನ ಚ ಕುರ್ಮೀತ ಪಂಡಿತಃ ॥೯॥

ಪ್ರಾತಃಕಾಲದಲ್ಲಿ, ಶುಕ್ಲಪಕ್ಷದಲ್ಲಿ, ರಾತ್ರಿಯಲ್ಲಿ, ಜನ್ಮದಿನದಲ್ಲಿ ಮರಣ ಕಾಲದಿಂದ ಆರಂಭಿಸಿ ಸಮಸಂಖ್ಯೆಯ ದಿನಗಳಲ್ಲಿ ವಿವೇಕಿಯಾದವನು ಶ್ರಾದ್ಧವನ್ನು ಮಾಡಬಾರದು. (ಇದು ಕಾಮ್ಯಶ್ರಾದ್ಧಕ್ಕೆ ಸಂಬಂಧಿಸಿದುದು, ಕಾಲಶ್ರಾದ್ಧಕ್ಕಲ್ಲ).

ಏಷ ಕಾಲೋ ಮಯಾ ಪ್ರೋಕ್ತಃ ಪಿತೃಮೇಧಸ್ಯ ಪೂಜಿತಃ ।
ಯಸ್ಮಿನ್ ವಾ ಬ್ರಾಹ್ಮಣಂ ಪಾತ್ರಂ ಪಶ್ಯೇತ್‌ಕಾಲಃ ಸ ಚ ಸ್ಮೃತಃ ॥೧೦॥

ನಾನು ಪಿತೃಮೇಧಕ್ಕೆ ಶ್ರೇಷ್ಠವಾದ ಕಾಲವನ್ನು ಹೇಳಿದ್ದೇನೆ. ಯಾವ ಕಾಲದಲ್ಲಿ ಸತ್ಪಾತ್ರನಾದ ಬ್ರಾಹ್ಮಣನು ದೊರೆಯುತ್ತಾನೆಯೋ ಅದೇ ಶ್ರೇಷ್ಠವಾದ ಕಾಲವೆಂದು ತಿಳಿಯಬೇಕು.

ಅಪಾಂಕ್ತೇಯಾ ದ್ವಿಜಾ ವರ್ಜ್ಯಾ ಗ್ರಾಹ್ಯಾಸ್ತೇ ಪಂಕ್ತಿಪಾವನಾಃ ।
ಪೂಜಯೇದ್ ಯದಿ ಪಾಪಿಷ್ಠಾನ್ ಶ್ರಾದ್ಧೇಷು ನರಕಂ ವ್ರಜೇತ್ ॥೧೧॥

ಶ್ರಾದ್ಧದಲ್ಲಿ ಪಂಕ್ತಿಗೆ ಅಯೋಗ್ಯರಾದ ಬ್ರಾಹ್ಮಣರನ್ನು ವರ್ಜಿಸಬೇಕು. ಪಂಕ್ತಿಪಾವನರನ್ನು ಸ್ವೀಕರಿಸಬೇಕು. ಶ್ರಾದ್ಧದಲ್ಲಿ ಪಾಪಿಷ್ಠರನ್ನು ಪೂಜಿಸಿದರೆ ಯಜಮಾನನು ನರಕಕ್ಕೆ ಹೋಗುತ್ತಾನೆ.

ವೃತ್ತಶ್ರುತಕುಲೋಪೇತಾನ್ ಸಕಳತ್ರಾನ್ ಗುಣಾನ್ವಿತಾನ್ ।
ತದಹರ್ಜಾನ್ ಶ್ರೋತ್ರಿಯಾನ್ ವಿದ್ಧಿ ಬ್ರಾಹ್ಮಣಾನಯುಜಃ ಶುಭೇ ॥೧೨॥

ಎಲೌ ಶುಭಳೇ, ವಿದ್ಯೆ, ಚಾರಿತ್ರ ಮತ್ತು ಕುಲಗಳಿಂದ ಸಂಪನ್ನರಾದ, ಗುಣಾನ್ವಿತರಾದ, ಪತ್ನೀಸಹಿತರಾದ, ಧನರಹಿತರಾದ, ಶ್ರೋತ್ರಿಯರಾದ ಬ್ರಾಹ್ಮಣರನ್ನು ಶ್ರಾದ್ಧಕ್ಕೆ ಅರ್ಹರಾದವರೆಂದು ತಿಳಿ.

ಏತಾನ್ ನಿಮಂತ್ರಯೇದ್ ವಿದ್ವಾನ್ ಪೂರ್ವೇದ್ಯುಃ ಪ್ರಾತರೇವ ವಾ ।
ತತ್ರ ಶ್ರಾದ್ಧಕ್ರಿಯಾಂ ಪಶ್ಚಾದಾರಭೇತ ಯಥಾವಿಧಿ ॥೧೩॥

ವಿವೇಕಿಯಾದವನು ಇವರನ್ನು ಶ್ರಾದ್ಧದ ಹಿಂದಿನ ದಿನ ಅಥವಾ ಶ್ರಾದ್ಧ ದಿನದ ಪ್ರಾತಃಕಾಲದಲ್ಲಿಯೇ ನಿಮಂತ್ರಿಸಬೇಕು. ಅನಂತರ ಶ್ರಾದ್ಧ ಕ್ರಿಯೆಯನ್ನು ಶಾಸ್ತ್ರಕ್ಕೆ ಅನುಸಾರವಾಗಿ ಆರಂಭಿಸಬೇಕು.

ತ್ರೀಣಿ ಶ್ರಾದ್ಧೇ ಪವಿತ್ರಾಣಿ ದೌಹಿತ್ರಃ ಕುತಪಸ್ತಿಲಾಃ ।
ತ್ರೀಣಿ ಚಾತ್ರ ಪ್ರಶಂಸಂತಿ ಶೌಚಮಕ್ರೋಧಮತ್ವರಾಮ್ ॥೧೪॥

ದೌಹಿತ್ರ, ಕುತಪಕಾಲ ಮತ್ತು ಎಳ್ಳು - ಈ ಮೂರು ವಸ್ತುಗಳು ಶ್ರಾದ್ಧದಲ್ಲಿ ಪವಿತ್ರವಾದವುಗಳು. ಶೌಚ, ಅಕ್ರೋಧ ಮತ್ತು ಅತ್ವರೆ (ಅವಸರರಾಹಿತ್ಯ)- ಈ ಮೂರು ಅಲ್ಲಿ ಪ್ರಶಂಸಿಸಲ್ಪಡುತ್ತವೆ.

ಕುತಪಸ್ಯ ಚ ಲೋಮಾನಿ ಕುಶಾ ದರ್ಭಾಸ್ತಿಲಾ ಮಧು ।
ನೀಲಶಾಕಂ ಗಜಚ್ಛಾಯಾ ಪವಿತ್ರಂ ಶ್ರಾದ್ಧಕರ್ಮಸು ॥೧೫॥

ಕುಶ, ದರ್ಭೆಗಳು, ತಿಲ ಮತ್ತು ಮಧು ಇವು ಕುತಪಕಾಲದ ಲೋಮಗಳು. ಶ್ರಾದ್ಧ ಕರ್ಮದಲ್ಲಿ ನೀಲಶಾಕ ಹಾಗಲಕಾಯಿ ಮತ್ತು ಅಪರಾಹ್ಣ ಕಾಲವು ಪವಿತ್ರವಾದವುಗಳು.

ತಿಲಾನವಕಿರೇತ್ ತತ್ರ ನಾನಾವರ್ಣಾನ್ ಸಮಂತತಃ ।
ಅಶುದ್ಧಂ ಪಿತೃಯಜ್ಞೇಷು ತಿಲೈಃ ಶುದ್ಧ್ಯತಿ ಶೋಭನೇ ॥೧೬॥

ಶ್ರಾದ್ಧ ಮಾಡುವ ಪ್ರದೇಶದಲ್ಲಿ ಸುತ್ತಲೂ ನಾನಾವರ್ಣದ ಎಳ್ಳುಗಳನ್ನು ಎರಚಬೇಕು. ಎಲೌ ಶೋಭನೆಯೇ, ಪಿತೃಯಜ್ಞಗಳಲ್ಲಿ ಅಶುದ್ಧವಾದುದೆಲ್ಲವೂ ಎಳ್ಳುಗಳಿಂದ ಶುದ್ಧವಾಗುತ್ತವೆ.

ನೀಲಕಾಷಾಯವಸ್ತ್ರಂ ಚ ಭಿನ್ನಕರ್ಣಂ ನವವ್ರಣಮ್ ।
ಹೀನಾಂಗಮಶುಚಿಂ ವಾऽಪಿ ವರ್ಜಯೇತ್ ತತ್ರ ದೂರತಃ ॥೧೭॥

ಕಪ್ಪು ಅಥವಾ ಕಾಷಾಯ ವಸ್ತ್ರವನ್ನು ಧರಿಸಿದವರನ್ನೂ, ದೇಹದಲ್ಲಿ ಹೊಸದಾದ ವ್ರಣವಿರುವವರನ್ನೂ, ಕರ್ಣದೋಷವಿರುವವರನ್ನೂ, ಅಂಗವಿಕಲರನ್ನೂ ಮತ್ತು ಅಶುಚಿಯಾದವರನ್ನೂ ಶ್ರಾದ್ಧದಲ್ಲಿ ದೂರದಲ್ಲಿಯೇ ತ್ಯಜಿಸಬೇಕು.

ಕುಕ್ಕುಟಾಂಶ್ಚ ವರಾಹಾಂಶ್ಚ ನಗ್ನಂ ಕ್ಲೀಬಂ ರಜಸ್ವಲಾಮ್ ।
ಆಯಸಂ ತ್ರಪು ಸೀಸಂ ಚ ಶ್ರಾದ್ಧಕರ್ಮಣಿ ವರ್ಜಯೇತ್ ॥೧೮॥

ಕೋಳಿಗಳು, ಹಂದಿಗಳು, ನಗ್ನ ಪುರುಷ, ನಪುಂಸಕ, ರಜಸ್ವಲೆ, ಕಬ್ಬಿಣ, ಸೀಸ ಮತ್ತು ತವರದ ಪಾತ್ರೆಗಳು- ಇವುಗಳನ್ನು ಶ್ರಾದ್ಧಕರ್ಮದಲ್ಲಿ ವರ್ಜಿಸಬೇಕು.

ಮಾಂಸೈಃ ಪ್ರೀಣಂತಿ ಪಿತರೋ ಮುದ್ಗಮಾಷಯವೈರಿಹ ।
ಶಶರೌರವಮಾಂಸೇನ ಷಣ್ಮಾಸಂ ತೃಪ್ತಿರಿಷ್ಯತೇ ॥೧೯॥

ಪಿತೃಗಳು ಮಾಂಸದಿಂದಲೂ, ಹೆಸರು, ಉದ್ದು ಮತ್ತು ಗೋಧಿಯಿಂದಲೂ ತೃಪ್ತಿಯನ್ನು ಹೊಂದುತ್ತಾರೆ. ಮೊಲದ ಮತ್ತು ರುರುವಿನ ಮಾಂಸದಿಂದ ಪಿತೃಗಳಿಗೆ ಆರು ತಿಂಗಳ ಕಾಲ ತೃಪ್ತಿಯಾಗುತ್ತದೆ.

ಸಂವತ್ಸರಂ ಚ ಗವ್ಯೇನ ಹವಿಷಾ ಪಾಯಸೇನ ಚ ।
ವಾರ್ಧ್ರಾಣಸಸ್ಯ ಮಾಂಸೇನ ತೃಪ್ತಿರ್ದ್ವಾದಶವಾರ್ಷಿಕೀ ॥೨೦॥

ಗೋವಿನ ಕ್ಷೀರ-ಘೃತಾದಿಗಳು ಮತ್ತು ಪಾಯಸವು ಒಂದು ವರ್ಷದ ಕಾಲ ತೃಪ್ತಿಯನ್ನು ಕೊಡುತ್ತವೆ. ಕಾಡೆಮ್ಮೆಯ ಮಾಂಸದಿಂದ ಹನ್ನೆರಡು ವರ್ಷಗಳ ಕಾಲ ಪಿತೃಗಳಿಗೆ ತೃಪ್ತಿಯುಂಟಾಗುತ್ತದೆ.

ಆನಂತ್ಯಾಯ ಭವೇದ್ ದತ್ತಂ ಖಡ್ಗಮಾಂಸಂ ಪಿತೃಕ್ಷಯೇ ।
ಪಾಯಸಂ ಸತಿಲಂ ಕ್ಷೌದ್ರಂ ಖಡ್ಗಮಾಂಸೇನ ಸಮ್ಮಿತಮ್ ॥೨೧॥

ಶ್ರಾದ್ಧದಲ್ಲಿ ಖಡ್ಗಮೃಗದ ಮಾಂಸವು ಅನಂತಕಾಲದವರೆಗೆ ತೃಪ್ತಿಯನ್ನು ಉಂಟುಮಾಡುತ್ತದೆ. ಪಾಯಸ, ಎಳ್ಳುಗಳು ಮತ್ತು ಜೇನುತುಪ್ಪ ಇವು ಖಡ್ಗಮೃಗದ ಮಾಂಸಕ್ಕೆ ಸಮನಾದವುಗಳು.

ಮಹಾಶಫರಿಣೋ ಮತ್ಸ್ಯಾಶ್ಛಾಗೋ ವಾ ಸರ್ವಲೋಹಿತಃ ।
ಕಾಲಶಾಕಕಮಿತ್ಯೇವ ತದಾನಂತ್ಯಂ ಪ್ರಕೀರ್ತಿತಮ್ ॥೨೨॥

ದೊಡ್ಡ ಮೀನುಗಳು, ಮೀನುಗಳು, ಪೂರ್ಣವಾಗಿ ಕೆಂಪಾದ ಆಡು, ಕಾಲಶಾಕ - ಇವುಗಳು ಅನಂತಕಾಲದವರೆಗೂ ತೃಪ್ತಿಯನ್ನುಂಟು ಮಾಡುತ್ತವೆ.

ಸಾಪೂಪಂ ಸಾಮಿಷಂ ಸ್ನಿಗ್ಧಮಾಹಾರಮುಪಕಲ್ಪಯೇತ್ ।
ಉಪಕಲ್ಪ್ಯ ತದಾಹಾರಂ ಬ್ರಾಹ್ಮಣಾನರ್ಚಯೇತ್ ತತಃ ॥೨೩॥

ಅಪೂಪ, ಮಾಂಸಸಹಿತವಾದ, ಘೃತಾದಿಸಹಿತವಾದ ಆಹಾರವನ್ನು ಸಿದ್ಧ ಪಡಿಸಬೇಕು. ಆಹಾರವು ಸಿದ್ಧವಾದ ನಂತರ ಬ್ರಾಹ್ಮಣರನ್ನು ಪೂಜಿಸಬೇಕು.

ಶ್ಮಶ್ರುಕರ್ಮಶಿರಃಸ್ನಾತಾನ್ ಸಮಾರೋಪ್ಯಾಸನಂ ಕ್ರಮಾತ್ ।
ಸುಗಂಧಮಾಲ್ಯಾಭರಣೈಃ ಸ್ರಗ್ಭಿರೇತಾನ್ ವಿಭೂಷಯೇತ್ ॥೨೪॥

ಶ್ಮಶ್ರುಕರ್ಮವನ್ನು ಮಾಡಿಸಿಕೊಂಡು ಶಿರಃಸ್ನಾತರಾದ ಬ್ರಾಹ್ಮಣರನ್ನು ಆಸನದಲ್ಲಿ ಕುಳ್ಳಿರಿಸಿ ಕ್ರಮವಾಗಿ ಗಂಧ, ಮಾಲ್ಯ , ಆಭರಣ ಮತ್ತು ಹೂಮಾಲೆಗಳಿಂದ ಅವರನ್ನು ಅಲಂಕರಿಸಬೇಕು.

ಅಲಂಕೃತೋಪವಿಷ್ಟಾನ್ ತಾನ್ ಪಿಂಡಾವಾಪಂ ನಿವೇದಯೇತ್ ॥೨೫॥

ಅಲಂಕೃತರಾದ ಬ್ರಾಹ್ಮಣರನ್ನು ಕುರಿತು ಪಿಂಡದಾನಕ್ಕೆ ಅನುಮತಿಯನ್ನು ಕೇಳಬೇಕು.

ತತಃ ಪ್ರಸ್ತೀರ್ಯ ದರ್ಭಾಣಾಂ ಪ್ರಸ್ತರಂ ದಕ್ಷಿಣಾಮುಖಮ್ ।
ತತ್ಸಮೀಪೇSಗ್ನಿಮಿದ್ಧ್ವಾ ಚ ಸ್ವಧಾಂ ಚ ಜುಹುಯಾತ್ ತತಃ ।
ಸಮೀಪೇ ತ್ವಗ್ನೀಷೋಮಾಭ್ಯಾಂ ಪಿತೃಭ್ಯೋ ಜುಹುಯಾತ್ ತದಾ ॥೨೬॥

ಅನಂತರ ಒಂದು ಮುಷ್ಟಿ ದರ್ಭೆಯನ್ನು ದಕ್ಷಿಣೆಗೆ ತುದಿಯಿರುವಂತೆ ಭೂಮಿಯ ಮೇಲೆ ಹರಡಿ, ಅದರ ಸಮೀಪದಲ್ಲಿ ಅಗ್ನಿಯನ್ನು ಉದ್ದೀಪನ ಮಾಡಿ, ಸ್ವಧೆಯನ್ನು ಹೋಮ ಮಾಡಬೇಕು. ದರ್ಭೆಗಳ ಸಮೀಪದಲ್ಲಿಯೇ ಅಗ್ನಿ-ಸೋಮರನ್ನೂ ಮತ್ತು ಪಿತೃಗಳನ್ನೂ ಉದ್ದೇಶಿಸಿ ಹೋಮ ಮಾಡಬೇಕು.

ತಥಾ ದರ್ಭೇಷು ಪಿಂಡಾನ್ ತ್ರೀನ್ ನಿರ್ವಪೇದ್ ದಕ್ಷಿಣಾಮುಖಃ ।
ಅಪಸವ್ಯಮಪಾಂಗುಷ್ಠಂ ನಾಮಧೇಯಪುರಸ್ಕೃತಮ್ ॥೨೭॥

ಅನಂತರ ದಕ್ಷಿಣಾಭಿಮುಖವಾಗಿ ಕುಳಿತು ದರ್ಭೆಗಳ ಮೇಲೆ ಅಪಸವ್ಯದಿಂದ ಅಂಗುಷ್ಠವನ್ನು ಸ್ಪರ್ಶ ಮಾಡಿಸದೆ ಪಿತೃಗಳ ನಾಮವನ್ನು ಹೇಳಿ ಪಿಂಡವನ್ನು ಇಡಬೇಕು.

ಏತೇನ ವಿಧಿನಾ ದತ್ತಂ ಪಿತೄಣಾಮಕ್ಷಯಂ ಭವೇತ್ ।
ತತೋ ವಿಪ್ರಾನ್ ಯಥಾಕಾಮಂ ಪೂಜಯೇನ್ನಿಯತಃ ಶುಚಿಃ ।

ಸದಕ್ಷಿಣಂ ಸಸಂಭಾರಂ ಯಥಾ ತುಷ್ಯಂತಿ ತೇ ದ್ವಿಜಾಃ ॥೨೮॥

ಈ ಪ್ರಕಾರವಾಗಿ ಕೊಟ್ಟ ಅನ್ನವು ಪಿತೃಗಳಿಗೆ ಅಕ್ಷಯವಾಗುತ್ತದೆ. ಅನಂತರ ಬ್ರಾಹ್ಮಣರನ್ನು ಯಥಾಶಕ್ತಿಯಾಗಿ ಶುಚಿಯಾಗಿ ಪೂಜಿಸಬೇಕು. ದಕ್ಷಿಣೆಯನ್ನೂ, ಗೃಹಸಂಭಾರಗಳನ್ನೂ ಕೊಟ್ಟು ಬ್ರಾಹ್ಮಣರು ಸಂತೋಷಗೊಳ್ಳುವಂತೆ ಮಾಡಬೇಕು.

ಯತ್ರ ತತ್ಕ್ರಿಯತೇ ಕರ್ಮ ಪೈತೃಕಂ ಬ್ರಾಹ್ಮಣಾನ್ ಪ್ರತಿ ।
ತತ್ಸರ್ವಮಖಿಲಂ ಕುರ್ಯಾದ್ ವೈಶ್ವದೇವಸ್ಯ ಪೂರ್ವಕಮ್ ॥೨೯॥

ಪಿತೃಶ್ರಾದ್ಧದಲ್ಲಿ ಮೊದಲು ವೈಶ್ವದೇವವನ್ನು ಮಾಡಿ ಅನಂತರ ಬ್ರಾಹ್ಮಣರಿಗೆ ಮಾಡಬೇಕಾದ ಸಕಲ ಉಪಚಾರಗಳನ್ನೂ ಮಾಡಬೇಕು.

ಅಶ್ರೂನ್ನ ಪಾತಯೇತ್ ತತ್ರ ನ ಜಲ್ಪೇನ್ನ ಜಪೇನ್ಮಿಥಃ ।
ನಿಯಮ್ಯ ವಾಚಂ ದೇಹಂ ಚ ಶ್ರಾದ್ಧಕರ್ಮ ಸಮಾರಭೇತ್ ॥೩೦॥

ಶ್ರಾದ್ಧವನ್ನು ಮಾಡುವಾಗ ಕಣ್ಣೀರನ್ನು ಹಾಕಬಾರದು. ಪರಸ್ಪರವಾಗಿ ಮಾತನಾಡಬಾರದು. ಮಾತನ್ನೂ ಮತ್ತು ದೇಹವನ್ನೂ ನಿಯಂತ್ರಿಸಿ ಶ್ರಾದ್ಧಕರ್ಮವನ್ನು ಆರಂಭಿಸಬೇಕು.

ತತೋ ನಿರ್ವಪಣೇ ವೃತ್ತೇ ತಾನ್ ಪಿಂಡಾಂಸ್ತದನಂತರಮ್ ।
ಬ್ರಾಹ್ಮಣೋಽಗ್ನಿರಜೋ ಗೌರ್ವಾ ಭಕ್ಷಯೇದಪ್ಸು ವಾ ಕ್ಷಿಪೇತ್ ॥೩೧॥

ಪಿಂಡದಾನವನ್ನು ಮಾಡಿದ ಮೇಲೆ ಆ ಪಿಂಡವನ್ನು ಬ್ರಾಹ್ಮಣನಾಗಲೀ, ಅಗ್ನಿಯಾಗಲೀ, ಆಡಾಗಲೀ, ಗೋವಾಗಲೀ ತಿನ್ನಬಹುದು ಅಥವಾ ಜಲದಲ್ಲಿಯೂ ವಿಸರ್ಜಿಸಬಹುದು.

ಪತ್ನೀಂ ವಾ ಮಧ್ಯಮಂ ಪಿಂಡಂ ಪುತ್ರಕಾಮೋ ಹಿ ಪ್ರಾಶಯೇತ್ ।
ಆದತ್ತ ಪಿತರೋ ಗರ್ಭಂ ಕುಮಾರಂ ಪುಷ್ಕರಸ್ರಜಮ್ ॥೩೨॥

ಪುತ್ರಕಾಮನಾದವನು ಪತ್ನಿಗೆ ಮಧ್ಯಮಪಿಂಡವನ್ನು ತಿನ್ನಲು ಕೊಡಬೇಕು. ಪಿತೃಗಳು ಪುಷ್ಕರಮಾಲೆಯನ್ನು ಧರಿಸಿದ ಕುಮಾರನನ್ನು ಅವಳ ಗರ್ಭದಲ್ಲಿ ಇಡುತ್ತಾರೆ.

ತೃಪ್ತಾನುತ್ಥಾಪ್ಯ ತಾನ್ ವಿಪ್ರಾನನ್ನಶೇಷಂ ನಿವೇದಯೇತ್ ।
ತಚ್ಚೇಷಂ ಬಹುಭಿಃ ಪಶ್ಚಾತ್ ಸಭೃತ್ಯೋ ಭಕ್ಷಯೇನ್ನರಃ ॥೩೩॥

ತೃಪ್ತರಾದ ಬ್ರಾಹ್ಮಣರನ್ನು ಭೋಜನ ಸ್ಥಳದಿಂದ ಎಬ್ಬಿಸಿ, ಉಳಿದ ಅನ್ನಶೇಷವನ್ನು ಅವರಿಗೆ ನಿವೇದಿಸಬೇಕು. ಅವರ ಅನುಮತಿಯನ್ನು ಪಡೆದು ಅನಂತರ ಆ ಶೇಷವನ್ನು ಅನೇಕ ಭೃತ್ಯರ ಮತ್ತು ಪರಿವಾರದವರ ಜೊತೆಯಲ್ಲಿ ಭಕ್ಷಿಸಬೇಕು.

ಏಷ ಪ್ರೋಕ್ತಃ ಸಮಾಸೇನ ಪಿತೃಯಜ್ಞಃ ಸನಾತನಃ ।
ಪಿತರಸ್ತೇನ ತುಷ್ಯಂತಿ ಕರ್ತಾ ಚ ಫಲಮಾಪ್ನುಯಾತ್ ॥೩೪॥

ಸನಾತನವಾದ ಪಿತೃಯಜ್ಞವನ್ನು ಸಂಕ್ಷೇಪವಾಗಿ ಹೇಳಿದ್ದೇನೆ. ಅದರಿಂದ ಪಿತೃಗಳು ಸಂತೋಷಪಡುತ್ತಾರೆ ಮತ್ತು ಶ್ರಾದ್ಧವನ್ನು ಮಾಡುವವನೂ ಫಲವನ್ನು ಹೊಂದುತ್ತಾನೆ.

ಅಹನ್ಯಹನಿ ವಾ ಕುರ್ಯಾನ್ಮಾಸೇಮಾಸೇऽಥವಾ ಪುನಃ ।
ಸಂವತ್ಸರಂ ದ್ವಿಃ ಕುರ್ಯಾಚ್ಚ ಚತುರ್ವಾऽಪಿ ಚ ಶಕ್ತಿತಃ ॥೩೫॥

ಪ್ರತಿದಿನವೂ ಶ್ರಾದ್ಧವನ್ನು ಮಾಡಬಹುದು ಅಥವಾ ತಿಂಗಳಿಗೊಮ್ಮೆ ಶ್ರಾದ್ಧವನ್ನು ಮಾಡಬಹುದು ಅಥವಾ ಸಂವತ್ಸರದಲ್ಲಿ ಎರಡು ಬಾರಿ ಅಥವಾ ನಾಲ್ಕು ಬಾರಿ ಹೀಗೆ ಶಕ್ತಿ ಇದ್ದಷ್ಟು ಶ್ರಾದ್ಧವನ್ನು ಮಾಡಬಹುದು.

ದೀರ್ಘಾಯುಶ್ಚ ಭವೇತ್ಸ್ವಸ್ಥಃ ಪಿತೃಮೇಧೇನ ಮಾನವಃ ।
ಸಪುತ್ರೋ ಬಹುಭೃತ್ಯಶ್ಚ ಪ್ರಭೂತಧನಧಾನ್ಯವಾನ್ ॥೩೬॥

ಪಿತೃಮೇಧದಿಂದ ಮಾನವನು ದೀರ್ಘಾಯುಷ್ಯವಂತನೂ, ನೀರೋಗಿಯೂ ಆಗುತ್ತಾನೆ. ಪುತ್ರರನ್ನೂ, ಭೃತ್ಯರನ್ನೂ, ಪ್ರಭೂತವಾದ ಧನ-ಧಾನ್ಯಗಳನ್ನೂ ಹೊಂದುತ್ತಾನೆ.

ಶ್ರಾದ್ಧದಃ ಸ್ವರ್ಗಮಾಪ್ನೋತಿ ನಿರ್ಮಲಂ ವಿವಿಧಾತ್ಮಕಮ್ ।
ಅಪ್ಸರೋಗಣಸಂಘುಷ್ಟಂ ವಿರಜಸ್ಕಮನಂತರಮ್ ॥೩೭॥

ಶ್ರಾದ್ಧವನ್ನು ಮಾಡುವವನು ನಿರ್ಮಲವಾದ, ಅನೇಕ ಬಗೆಯಾದ, ಅಪ್ಸರೆಯರ ಗಣದಿಂದ ಕೂಡಿದ, ನಿಷ್ಕಲ್ಮಷವಾದ ಸ್ವರ್ಗವನ್ನು ಪಡೆಯುತ್ತಾನೆ.

ಶ್ರಾದ್ಧಾನಿ ಪುಷ್ಟಿಕಾಮಾ ಯೇ ಪ್ರಕುರ್ವಂತಿ ಚ ಪಂಡಿತಾಃ ।
ತೇಷಾಂ ಪುಷ್ಟಿಂ ಪ್ರಜಾಶ್ಚೈವ ದಾಸ್ಯಂತಿ ಪಿತರಃ ಸದಾ ॥೩೮॥

ಪುಷ್ಟಿಕಾಮರಾದ ವಿವೇಕಿಗಳು ಶ್ರಾದ್ಧವನ್ನು ಮಾಡಿದರೆ ಅವರ ಪಿತೃಗಳು ಪ್ರಸನ್ನರಾಗಿ ಅವರಿಗೆ ಪುಷ್ಟಿಯನ್ನೂ, ಪ್ರಜೆಗಳನ್ನೂ ಕೊಡುತ್ತಾರೆ.

ಧನ್ಯಂ ಯಶಸ್ಯಮಾಯುಷ್ಯಂ ಸ್ವರ್ಗ್ಯಂ ಶತ್ರುವಿನಾಶನಮ್ ।
ಕುಲಸಂಧಾರಣಂ ಚೇತಿ ಶ್ರಾದ್ಧಮಾಹುರ್ಮನೀಷಿಣಃ ॥೩೯॥

ಶ್ರಾದ್ಧಕರ್ಮವು ಧನಪ್ರದವಾದುದು, ಕೀರ್ತಿಪ್ರದವಾದುದು, ಆಯುಷ್ಯ-ಪ್ರದವಾದುದು, ಸ್ವರ್ಗಪ್ರದವಾದುದು, ಶತ್ರುವಿನಾಶಕವಾದುದು ಮತ್ತು ಕುಲವನ್ನು ರಕ್ಷಿಸುವಂತಹದು ಎಂದು ಜ್ಞಾನಿಗಳು ಹೇಳುತ್ತಾರೆ.

ಉಮಾ

ಭಗವನ್ ದೇವದೇವೇಶ ಮೃತಾಸ್ತೇ ಭುವಿ ಜಂತವಃ ।
ನಾನಾಜಾತಿಷು ಜಾಯಂತೇ ಶೀಘ್ರಂ ಕರ್ಮವಶಾತ್ ಪುನಃ ॥೪೦॥

ಉಮಾ– ಪೂಜ್ಯನೇ, ದೇವದೇವೇಶನೇ, ಭೂಮಿಯಲ್ಲಿ ಮೃತರಾದ ಜಂತುಗಳು ಶೀಘ್ರವಾಗಿ ಕರ್ಮವಶದಿಂದ ಪುನಃ ನಾನಾ ಯೋನಿಗಳಲ್ಲಿ ಜನಿಸುತ್ತಾರೆ.

ಪಿತರಸ್ತಿ ತಿ ತೇ ತತ್ರ ಕಥಂ ತಿಷ್ಠಂತಿ ದೇವವತ್ ।
ಪಿತೄಣಾಂ ಕತಮೋ ದೇಶಃ ಪಿಂಡಾನಶ್ನಂತಿ ವೈ ಕಥಮ್ ॥೪೧॥

ಅವರು ದೇವತೆಗಳಂತೆ ಪಿತೃಗಳು ಎಂದು ಕರೆಸಿಕೊಂಡು ಎಲ್ಲಿರುತ್ತಾರೆ? ಪಿತೃಗಳ ದೇಶವು ಯಾವುದು? ಅವರು ಪಿಂಡವನ್ನು ಹೇಗೆ ಭಕ್ಷಿಸುತ್ತಾರೆ?

ಅನ್ನೇ ದತ್ತೇ ಮೃತಾನಾಂ ತು ಕಥಮಾಪ್ಯಾಯನಂ ಭವೇತ್ ।
ಏವಂ ಮಯಾ ಸಂಶಯಿತಂ ಭಗವನ್ ವಕ್ತುಮರ್ಹಸಿ ॥೪೨॥

ಮೃತರಿಗೆ ಅನ್ನವನ್ನು ಕೊಟ್ಟರೆ ಅದು ಅವರಿಗೆ ಹೇಗೆ ಸಂತೋಷವನ್ನುಂಟು ಮಾಡುತ್ತದೆ? ಇದು ನನ್ನ ಸಂಶಯ. ಪೂಜ್ಯನೇ, ಉತ್ತರವನ್ನು ಕೊಡಬೇಕು.

ನಾರದಃ

ಏತದ್ ವಿರುದ್ಧಂ ರುದ್ರಾಣ್ಯಾಂ ಪೃಚ್ಛಂತ್ಯಾಂ ಪರಿಷದ್‌ಭೃಶಮ್ ।
ಬಭೂವ ಸರ್ವಾ ಮುದಿತಾ ಶ್ರೋತುಂ ಪರಮಕಂ ಹಿತಮ್ ॥೪೩॥

ನಾರದ– ಪಾರ್ವತೀ ದೇವಿಯು ಹೀಗೆ ವಿರುದ್ಧವಾಗಿ ತೋರುವ ವಿಷಯದಲ್ಲಿ ಪ್ರಶ್ನೆಯನ್ನು ಮಾಡುತ್ತಿರಲು, ಆ ಋಷಿಗಳ ಪರಿಷತ್ತು ಸಂತೋಷದಿಂದ ಕೂಡಿ ಪರಮಹಿತವಾದ ವಿಷಯವನ್ನು ಕೇಳಲು ಉದ್ಯುಕ್ತವಾಯಿತು.

ಮಹೇಶ್ವರಃ

ಸ್ಥಾನೇ ಸಂಶಯಿತಂ ದೇವಿ ಶೃಣು ಕಲ್ಯಾಣಿ ತತ್ತ್ವತಃ ।
ಗುಹ್ಯಾನಾಂ ಪರಮಂ ಗುಹ್ಯಂ ಹಿತಾನಾಂ ಪರಮಂ ಹಿತಮ್ ॥೪೪॥

ಮಹೇಶ್ವರ– ದೇವಿಯೇ, ಕಲ್ಯಾಣಿಯೇ, ನಿನ್ನ ಸಂಶಯವು ಯೋಗ್ಯವಾಗಿದೆ. ತತ್ತ್ವವನ್ನು ಕೇಳು. ಇದು ರಹಸ್ಯಗಳಲ್ಲಿ ಪರಮರಹಸ್ಯ ಮತ್ತು ಹಿತಗಳಲ್ಲಿ ಪರಮ ಹಿತವಾದುದು.

ಯಥಾ ದೇವಗಣಾ ದೇವಿ ತಥಾ ಪಿತೃಗಣಾಃ ಪ್ರಿಯೇ ।
ದಕ್ಷಿಣಸ್ಯಾಂ ದಿಶಿ ಶುಭೇ ಸರ್ವೇ ಪಿತೃಗಣಾಃ ಸ್ಥಿತಾಃ ॥೪೫॥

ಎಲೌ ದೇವಿಯೇ, ದೇವಗಣಗಳಿರುವಂತೆ ಪಿತೃಗಣಗಳೂ ಸಹ ದಕ್ಷಿಣ ದಿಕ್ಕಿನಲ್ಲಿ ಇರುತ್ತವೆ. ಎಲೌ ಶುಭಳೇ, ಪ್ರಿಯೆಯೇ, ಎಲ್ಲ ಪಿತೃಗಳೂ ಅಲ್ಲಿರುತ್ತಾರೆ.

ಪ್ರೇತಾನುದ್ದಿಶ್ಯ ಯಾ ಪೂಜಾ ಕ್ರಿಯತೇ ಮಾನುಷೈರಿಹ ।
ತೇನ ತುಷ್ಯಂತಿ ಪಿತರೋ ನ ಪ್ರೇತಾಃ ಪಿತರಃ ಸ್ಮೃತಾಃ ॥೪೬॥

ಮೃತರನ್ನು ಉದ್ದೇಶಿಸಿ ಮಾನವರು ಮಾಡುವ ಕ್ರಿಯೆಯಿಂದ ಪಿತೃಗಳು ಸಂತೋಷಪಡುತ್ತಾರೆ. ಮೃತರಾದವರನ್ನು ಪಿತೃಗಳೆಂದು ಹೇಳುವುದಿಲ್ಲ (ಆ ಪಿತೃಗಳು ಮೃತರಾದವರಿಗೆ ಯೋಗ್ಯವಾದ ತೃಪ್ತಿಯನ್ನು ಕೊಡುತ್ತಾರೆ).

ಉತ್ತರಸ್ಯಾಂ ಯಥಾ ದೇವಾ ರಮಂತೇ ಯಜ್ಞಕರ್ಮಭಿಃ ।
ದಕ್ಷಿಣಸ್ಯಾಂ ತಥಾ ತೇ ಚ ತುಷ್ಯಂತಿ ವಿವಿಧೈರ್ಮಖೈಃ ॥೪೭॥

ಹೇಗೆ ದೇವತೆಗಳು ಉತ್ತರದಿಕ್ಕಿನಲ್ಲಿ ಯಜ್ಞಕರ್ಮಗಳಿಂದ ಸಂತೋಷ ಪಡುತ್ತಾರೆಯೋ ಅದರಂತೆ ಪಿತೃಗಳು ದಕ್ಷಿಣದಿಕ್ಕಿನಲ್ಲಿ ವಿವಿಧವಾದ ಶ್ರಾದ್ಧ ಕರ್ಮಗಳಿಂದ ಸಂತೋಷಪಡುತ್ತಾರೆ.

ದ್ವಿವಿಧಂ ಕ್ರಿಯತೇ ಕರ್ಮ ಹವ್ಯಕವ್ಯಸಮಾಶ್ರಿತಮ್ ।
ತಯೋರ್ಹವ್ಯಕ್ರಿಯಾ ದೇವಾನ್ ಕವ್ಯಮಾಪ್ಯಾಯಯೇತ್ ಪಿತೄನ್ ॥

ಹವ್ಯ-ಕವ್ಯ ಎಂಬ ಎರಡು ವಿಧವಾದ ಕ್ರಿಯೆಗಳು ಮಾಡಲ್ಪಡುತ್ತವೆ. ಹವ್ಯಕ್ರಿಯೆಯು ದೇವತೆಗಳನ್ನು ತಲುಪುತ್ತದೆ. ಕವ್ಯಕ್ರಿಯೆಯು ಪಿತೃಗಳಿಗೆ ಸಂತೋಷವನ್ನುಂಟು ಮಾಡುತ್ತದೆ.

ಪ್ರಸವ್ಯಂ ಮಂಗಲೈರ್ದ್ರವ್ಯೈರ್ಹವ್ಯಕರ್ಮ ವಿಧೀಯತೇ ।
ಅಪಸವ್ಯಮಮಂಗಲ್ಯೈಃ ಕವ್ಯಂ ಚಾಪಿ ವಿಧೀಯತೇ ॥೪೯॥

ಹವ್ಯಕ್ರಿಯೆಯನ್ನು ಸವ್ಯದಿಂದ, ಮಂಗಳದ್ರವ್ಯದಿಂದ ಮಾಡುತ್ತಾರೆ. ಕವ್ಯವಾದರೂ ಅಪಸವ್ಯದಿಂದ ಅಮಂಗಳ ದ್ರವ್ಯಗಳಿಂದ ಮಾಡಲ್ಪಡುತ್ತದೆ.

ಸದೇವಾಸುರಗಂಧರ್ವಾಃ ಪಿತೄನಭ್ಯರ್ಚಯಂತಿ ಚ ।
ಆಪ್ಯಾಯಿತಾಶ್ಚ ತೇ ಶ್ರಾದ್ಧೈಃ ಪುನರಾಪ್ಯಾಯಯಂತಿ ತಾನ್ ॥೫೦॥

ದೇವತೆಗಳು, ಅಸುರರು, ಗಂಧರ್ವರು ಎಲ್ಲರೂ ಪಿತೃಗಳನ್ನು ಪೂಜಿಸುತ್ತಾರೆ. ಶ್ರಾದ್ಧದಿಂದ ಸಂತುಷ್ಟರಾದ ಪಿತೃಗಳು ಪುನಃ ಶ್ರಾದ್ಧ ಮಾಡಿದವರನ್ನು ಅಭಿವೃದ್ಧಿಪಡಿಸಿ ಸಂತೋಷಪಡಿಸುತ್ತಾರೆ.

ಅನಿಷ್ಟ್ವಾ ಚ ಪಿತೄನ್ ಪೂರ್ವಂ ಯಃ ಕ್ರಿಯಾಂ ಪ್ರಕರೋತಿ ಚೇತ್ ।
ರಕ್ಷಾಂಸಿ ಚ ಪಿಶಾಚಾಶ್ಚ ಫಲಂ ಭೋಕ್ಷ್ಯಂತಿ ತಸ್ಯ ತತ್ ॥೫೧॥

ಯಾವನು ಮೊದಲು ಪಿತೃಗಳ ಪೂಜೆಯನ್ನು ಮಾಡದೆ ಕ್ರಿಯೆಗಳನ್ನು ಆರಂಭಿಸುತ್ತಾನೆಯೋ ಅಂತಹ ಕ್ರಿಯೆಗಳ ಫಲವನ್ನು ರಾಕ್ಷಸರು ಮತ್ತು ಪಿಶಾಚಿಗಳು ಭೋಗಿಸುತ್ತವೆ.

ಹವ್ಯಕವ್ಯಕ್ರಿಯಾ ತಸ್ಮಾತ್ ಕರ್ತವ್ಯಾ ಭುವಿ ಮಾನುಷೈಃ ।
ಕರ್ಮಕ್ಷೇತ್ರಂ ಹಿ ಮಾನುಷ್ಯಂ ತದನ್ಯತ್ರ ನ ವಿದ್ಯತೇ ॥೫೨॥

ಆದ್ದರಿಂದ ಮನುಷ್ಯರು ಭೂಮಿಯಲ್ಲಿ ಹವ್ಯ-ಕವ್ಯ ಕ್ರಿಯೆಗಳನ್ನು ಮಾಡಬೇಕು. ಮನುಷ್ಯ ಶರೀರವೇ ಕರ್ಮಕ್ಷೇತ್ರವಷ್ಟೆ? ಬೇರೆ ಯೋನಿಯಲ್ಲಿ ಕರ್ಮವನ್ನು ಮಾಡುವ ಸಾಧ್ಯತೆ ಇಲ್ಲ.

ಕವ್ಯೇನ ಸಂತತಿರ್ಧಷ್ಟಾ ಹವ್ಯೇ ಭೂತಿಃ ಪೃಥಗ್ವಿಧಾಃ ।
ಇತಿ ತೇ ಕಥಿತಂ ದೇವಿ ದೇವಗುಹ್ಯಂ ಸನಾತನಮ್ ॥೫೩॥

ಕವ್ಯದಿಂದ ಸಂತತಿಯ ಅಭಿವೃದ್ಧಿಯು ದೃಷ್ಟವಾಗಿದೆ. ಹವ್ಯಕರ್ಮದಿಂದ ಅನೇಕ ವಿಧವಾದ ಸಂಪತ್ತು ಉಂಟಾಗುತ್ತದೆ. ಎಲೌ ದೇವಿಯೇ, ದೇವಗುಹ್ಯವಾದ, ಸನಾತನವಾದ ಈ ತತ್ತ್ವವನ್ನು ನಿನಗೆ ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ಶ್ರಾದ್ಧಪ್ರಶಂಸಾ ನಾಮ ತ್ರಯೋವಿಂಶೋತ್ತರದ್ವಿಶತತಮೋಽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಇಪ್ಪತ್ತಾಲ್ಕನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಧರ್ಮಫಲ ಕಾಲಕಥನ.

ಉಮಾ

ಏವಂ ಕೃತಸ್ಯ ಧರ್ಮಸ್ಯ ಶ್ರೋತುಮಿಚ್ಛಾಮ್ಯಹಂ ಪ್ರಭೋ ।
ಪ್ರಮಾಣಂ ಫಲಮಾನಾನಾಂ ತನ್ಮೇ ಶಂಸಿತುಮರ್ಹಸಿ ॥೧॥

ಉಮಾ- ಪ್ರಭುವೇ, ಹೀಗೆ ಆಚರಿಸಿದ ಧರ್ಮದ ಫಲದ ಕಾಲಮಾನಗಳನ್ನು ಕೇಳಲು ಬಯಸುತ್ತೇನೆ. ಅದನ್ನು ನನಗೆ ಹೇಳಬೇಕು.

ಮಹೇಶ್ವರಃ

ಪ್ರಮಾಣಕಲ್ಪನಾಂ ದೇವಿ ದಾನಸ್ಯ ಶೃಣು ಭಾಮಿನಿ ॥೨॥

ದೇವಿಯೇ, ಭಾಮಿನಿಯೇ, ದಾನಗಳ ಫಲದ ಕಾಲವಿಧಿಯನ್ನು ಹೇಳುತ್ತೇನೆ, ಕೇಳು.

ಯತ್ಸಾರಸ್ತು ನರೋ ಲೋಕೇ ತದ್ದಾನಂ ಚೋತ್ತಮಂ ಸ್ಮೃತಮ್ ।
ಸರ್ವದಾನವಿಧಿಂ ಪ್ರಾಹುಸ್ತದೇವ ಭುವಿ ಶೋಭನೇ ॥೩॥

ಮನುಷ್ಯನಿಗೆ ಎಷ್ಟು ಧನಬಲವಿರುತ್ತದೆಯೋ (ದ್ರವ್ಯಬಲ) ಅದಕ್ಕೆ ಅನುಗುಣವಾದ ದಾನವು ಉತ್ತಮವಾದ ದಾನ ಎಂದು ಹೇಳಲ್ಪಡುತ್ತದೆ. ಎಲೌ ಶೋಭನೆಯೇ, ಭೂಮಿಯಲ್ಲಿ ಸರ್ವದಾನವಿಧಿಗಳಲ್ಲಿ ಅದೇ ಪ್ರಧಾನವಾದುದು.

ಪ್ರಸ್ಥಂ ಸಾರಂ ದರಿದ್ರಸ್ಯ ಶತಂ ಕೋಟಿಧನಸ್ಯ ಚ ।
ಪ್ರಸ್ಥಸಾರಸ್ತು ತತ್ಪ್ರಸ್ಥಂ ದದನ್ಮಹದವಾಪ್ನುಯಾತ್ ॥೪॥

ದರಿದ್ರನಿಗೆ ಒಂದು ಹಿಡಿ ಧಾನ್ಯವೂ ಸಾರವಾಗುತ್ತದೆ. ಕೋಟಿಧನವುಳ್ಳವನಿಗೆ ನೂರಾರು ಖಂಡುಗಗಳಷ್ಟು ಧಾನ್ಯವು ಸಾರವಾಗುತ್ತದೆ. ಒಂದು ಪ್ರಸ್ಥ ಸಾರವನ್ನು ಹೊಂದಿದ ದರಿದ್ರನು ಒಂದು ಪ್ರಸ್ಥ ಧಾನ್ಯವನ್ನು ದಾನ ಮಾಡಿದರೆ ಅದು ಮಹಾದಾನವಾಗುತ್ತದೆ.

ಕೋಟಿಸಾರಸ್ತು ತಾಂ ಕೋಟಿಂ ದದಾನ್ಮಹದವಾಪ್ನುಯಾತ್ ।
ಉಭಯಂ ತನ್ಮಹತ್ ತಚ್ಚ ಫಲೇನೈವ ಸಮಂ ಸ್ಮೃತಮ್ ॥೫॥

ಕೋಟಿಸಾರನಾದವನು ಕೋಟಿಯನ್ನು ದಾನ ಮಾಡಿದರೆ ಮಹಾಫಲವನ್ನು ಹೊಂದುತ್ತಾನೆ. ಅವೆರಡು ದಾನಗಳೂ ಫಲದಲ್ಲಿ ಸಮನಾದವುಗಳು ಎಂದು ಹೇಳಲ್ಪಡುತ್ತದೆ.

ಧರ್ಮಾರ್ಥಕಾಮಭೋಗೇಷು ಶಕ್ಯಂ ದಾನಂ ತು ಮಧ್ಯಮಮ್ ।
ಸ್ವದ್ರವ್ಯಾದತಿಹೀನಂ ತು ತದ್ದಾನಮಧಮಂ ಸ್ಮೃತಮ್ ॥೬॥

ತನ್ನ ಧರ್ಮಾರ್ಥಕಾಮ ಭೋಗಗಳು ಸಾಧ್ಯವಾಗುವಂತೆ (ದ್ರವ್ಯಾದಿಗಳನ್ನು ಇಟ್ಟುಕೊಂಡು) ಮಾಡುವ ದಾನವು ಮಧ್ಯಮ ದಾನ. ತನ್ನ ದ್ರವ್ಯ ಬಲದ ದೃಷ್ಟಿಯಿಂದ ಅತ್ಯಂತ ಹೀನವಾದ ದಾನವು ಅಧಮ ದಾನವೆನಿಸುತ್ತದೆ.

ಶೃಣು ದತ್ತಸ್ಯ ವೈ ದೇವಿ ಪಂಚಧಾ ಫಲಕಲ್ಪನಾಮ್ ।
ಆನಂತ್ಯಂ ಚ ಮಹಚ್ಚೈವ ಸಮಂ ಹೀನಂ ಹಿ ಪಾತಕಮ್ ॥೭॥

ದೇವಿಯೇ, ದಾನದ ಐದುವಿಧವಾದ ಫಲವನ್ನು ಕೇಳು. ದಾನವು ಆನಂತ್ಯ, ಮಹತ್ವ, ಸಾಮ್ಯ, ಹೀನತೆ ಮತ್ತು ಪಾತಕಗಳೆಂಬ ಐದು ಫಲದಿಂದ ಕೂಡಿದೆ.

ತೇಷಾಂ ವಿಶೇಷಾನ್ ವಕ್ಷ್ಯಾಮಿ ಶೃಣು ದೇವಿ ಸಮಾಹಿತಾ ।
ದುಸ್ತ್ಯಜಸ್ಯ ಚ ವೈ ದಾನಂ ಪಾತ್ರ ಆನಂತ್ಯಮುಚ್ಯತೇ ॥೮॥

ಎಲೌ ದೇವಿಯೇ, ಅವುಗಳ ವಿಶೇಷಗಳನ್ನು ಹೇಳುವೆನು. ಸಮಾಧಾನದಿಂದ ಕೇಳು. ದುಸ್ತ್ಯಜವಾದ ವಸ್ತುವನ್ನು ಪಾತ್ರನಲ್ಲಿ ದಾನ ಮಾಡಿದರೆ ಅದು ಅನಂತ ಫಲವೆನಿಸುತ್ತದೆ.

ದಾನಂ ಷಡ್ಗುಣಯುಕ್ತಂ ತು ಮಹದಿತ್ಯಭಿಧೀಯತೇ ।
ಯಥಾಶ್ರದ್ಧಂ ತು ವೈ ದಾನಂ ಯಥಾರ್ಹಂ ಸಮಮುಚ್ಯತೇ ॥೯॥

ಹಿಂದೆ ಹೇಳಿದ ಆರುಗುಣಗಳಿಂದ ಯುಕ್ತವಾದ ದಾನವು ಮಹಾದಾನವೆನಿಸುತ್ತದೆ. ತನ್ನ ಶ್ರದ್ಧೆಗೆ ಅನುಗುಣವಾಗಿ ಮತ್ತು ಪಾತ್ರನಿಗೆ ಅನುಗುಣವಾಗಿ ಮಾಡಿದ ದಾನವು ಸಮದಾನವೆನಿಸುತ್ತದೆ.

ಗುಣತಸ್ತು ತಥಾ ಹೀನಂ ದಾನಂ ಹೀನಮಿತಿ ಸ್ಮೃತಮ್ ।
ದಾನಂ ಪಾತಕಮಿತ್ಯಾಹುಃ ಷಡ್ಗುಣಾನಾಂ ವಿಪರ್ಯಯೇ ॥೧೦॥

ಆರುಗುಣಗಳಿಲ್ಲದೆ ಮಾಡುವ ದಾನವು ಹೀನದಾನವೆನಿಸುತ್ತದೆ. ಆರು ಗುಣಗಳು ವಿಪರೀತವಾಗಿ ದುರ್ಗುಣವೇ ಇದ್ದರೆ ಆ ದಾನವು ಪಾತಕದಾನವೆನಿಸುತ್ತದೆ.

ದೇವಲೋಕೇ ಮಹತ್ಕಾಲಮಾನಂತ್ಯಸ್ಯ ಫಲಂ ವಿದುಃ ।
ಮಹತಸ್ತು ತಥಾ ದಾನಂ ಸ್ವರ್ಗಲೋಕೇ ತು ಪೂಜ್ಯತೇ ॥೧೧॥

ದೇವಲೋಕದಲ್ಲಿ ಬಹುಕಾಲದವರೆಗೆ ವಾಸವು ಆನಂತ್ಯದ ಫಲವೆಂದು ಹೇಳುತ್ತಾರೆ. ಸ್ವರ್ಗಲೋಕದಲ್ಲಿ ಸತ್ಕಾರವು ಮಹಾದಾನದ ಫಲ.

ಸಮಸ್ಯ ತು ತದಾ ದಾನಂ ಮಾನುಷ್ಯಂ ಭೋಗಮಾವಹೇತ್ ।
ದಾನಂ ನಿಷ್ಫಲಮಿತ್ಯಾಹುರ್ವಿಹೀನಂ ಕ್ರಿಯಯಾ ಶುಭೇ ॥೧೨॥

ಸಮದಾನವು ಮನುಷ್ಯಜನ್ಮದಲ್ಲಿ ಭೋಗಗಳನ್ನು ಉಂಟು ಮಾಡುತ್ತದೆ. ಕ್ರಿಯಾ ವಿಹೀನವಾದ ದಾನವನ್ನು ನಿಷ್ಫಲವೆಂದು ಹೇಳುತ್ತಾರೆ.

ಅಥವಾ ಮ್ಲೇಚ್ಛದೇಶೇಷು ತತ್ರ ತತ್ಫಲತಾಂ ವ್ರಜೇತ್ ।
ನರಕಂ ಪ್ರೇತ್ಯ ತಿರ್ಯಕ್ಷು ಗಚ್ಛೇದಶುಭದಾನತಃ ॥೧೩॥

ಅಥವಾ ಆ ದಾನವು ಮ್ಲೇಚ್ಛ ದೇಶಗಳಲ್ಲಿ ಜನ್ಮವನ್ನು ಕೊಟ್ಟು ಫಲವನ್ನು ಕೊಡುತ್ತದೆ. ಅಶುಭದಾನದಿಂದ (ಪಾತಕ ದಾನದಿಂದ) ಮನುಷ್ಯನು ನರಕವನ್ನು ಹೊಂದಿ ಅನಂತರ ನೀಚಯೋನಿಯಲ್ಲಿ ಜನಿಸುತ್ತಾನೆ.

ಉಮಾ

ಅಶುಭಸ್ಯಾಪಿ ದಾನಸ್ಯ ಶುಭಂ ಸ್ಯಾಚ್ಚ ಫಲಂ ಕಥಮ್ ॥೧೪॥

ಉಮಾ– ಅಶುಭವಾದ ದಾನವೂ ಶುಭಫಲವನ್ನು ಕೊಡುವುದು ಹೇಗೆ?

ಮಹೇಶ್ವರಃ

ಮನಸಾ ತತ್ತ್ವತಃ ಶುದ್ಧಮಾನೃಶಂಸ್ಯಪುರಃಸರಮ್ ।
ಪ್ರೀತ್ಯಾ ತು ಸರ್ವದಾನಾನಿ ದತ್ತ್ವಾ ಫಲಮವಾಪ್ನುಯಾತ್ ॥೧೫॥

ಮಹೇಶ್ವರ– ಮನಸ್ಸಿನಿಂದಲೂ ಮತ್ತು ತತ್ತ್ವದಿಂದಲೂ ಶುದ್ಧವಾದ, ದಯಾ ಪುರಸ್ಸರವಾಗಿ ಸಂತೋಷದಿಂದ ಮಾಡಿದ ಎಲ್ಲ ದಾನಗಳಿಗೂ ಫಲವುಂಟಾಗುತ್ತದೆ.

ರಹಸ್ಯಂ ಸರ್ವದಾನಾನಾಮೇತದ್ ವಿದ್ಧಿ ಶುಭೇಕ್ಷಣೇ ।
ಅನ್ಯಾನಿ ಸರ್ವಕಾರ್ಯಾಣಿ ಶೃಣು ಸದ್ಭಿಃ ಕೃತಾನಿ ಚ ॥೧೬॥

ಶುಭೇಕ್ಷಣೆಯೇ, ಇದು ಎಲ್ಲ ದಾನಗಳ ರಹಸ್ಯವೆಂದು ತಿಳಿ. ಸಜ್ಜನರು ಮಾಡುವ ಬೇರೆ ಕಾರ್ಯಗಳನ್ನು ಕೇಳುವವಳಾಗು.

ಆರಾಮಂ ದೇವಗೋಷ್ಠಾನಿ ಸಂಕ್ರಮಾಃ ಕೂಪ ಏವ ಚ ।
ಗೋವಾಟಂ ಚ ತಟಾಕಂ ಚ ಸಭಾಃ ಶಾಲಾಶ್ಚ ಸರ್ವಶಃ ॥೧೭॥

ಭಿಕ್ಷುಕಾವಸಥಾಶ್ಚೈವ ಪಾನೀಯಂ ಗೋತೃಣಾನಿ ಚ ।
ವ್ಯಾಧಿತಾನಾಂ ಚ ಭೈಷಜ್ಯಮನಾಥಾನಾಂ ಚ ಭೋಜನಮ್ ॥೧೮॥

ಅನಾಥಶವಸಂಸ್ಕಾರಸ್ತೀರ್ಥಮಾರ್ಗವಿಶೋಧನಮ್ ।
ವ್ಯಸನಾಭ್ಯವಪತ್ತಿಶ್ಚ ಸರ್ವೇಷಾಂ ಚ ಸ್ವಶಕ್ತಿತಃ ॥೧೯॥

ಏತತ್ಸರ್ವಂ ಸಮಾಸೇನ ಧರ್ಮಕಾರ್ಯಮಿತಿ ಸ್ಮೃತಮ್ ।
ತತ್‌ಕರ್ತವ್ಯಂ ಮನುಷ್ಯೇಣ ಸ್ವಶಕ್ತ್ಯಾ ಶ್ರದ್ಧಯಾ ಶುಭೇ ॥೨೦॥

ವನಗಳ, ದೇವಾಲಯಗಳ, ಮಾರ್ಗಗಳ, ಬಾವಿ, ಗೋಶಾಲೆ, ಕೆರೆ, ಸಭೆಗಳ, ಶಾಲೆಗಳ, ಭಿಕ್ಷುಕರ ವಸತಿಗಳ ನಿರ್ಮಾಣ, ಜಲ, ಗೋವುಗಳಿಗೆ ಹುಲ್ಲು, ರೋಗಗ್ರಸ್ತರಾದವರಿಗೆ ಔಷಧ, ಅನಾಥರಿಗೆ ಭೋಜನ, ಅನಾಥ ಶವಸಂಸ್ಕಾರ, ತೀರ್ಥಮಾರ್ಗಗಳ ಶೋಧನೆ, ವ್ಯಸನದಲ್ಲಿರುವ ಎಲ್ಲರಿಗೂ ತನ್ನ ಶಕ್ತಿ ಇದ್ದಷ್ಟು ಸಹಾಯ - ಇವೆಲ್ಲವೂ ಸಂಕ್ಷೇಪವಾಗಿ ಧರ್ಮಕಾರ್ಯಗಳೆಂದು ಹೇಳಲ್ಪಡುತ್ತವೆ. ಶುಭಳೇ, ಮನುಷ್ಯನು ತನ್ನ ಶಕ್ತಿ ಇದ್ದಷ್ಟು ಅಂತಹ ಕಾರ್ಯಗಳನ್ನು ಶ್ರದ್ಧೆಯಿಂದ ಮಾಡಬೇಕು.

ಪ್ರೇತ್ಯಭಾವೇ ಲಭೇತ್ ಪುಣ್ಯಂ ನಾಸ್ತಿ ತತ್ರ ವಿಚಾರಣಾ ।
ರೂಪಂ ಸೌಭಾಗ್ಯಮಾರೋಗ್ಯಂ ಬಲಂ ಸೌಖ್ಯಂ ಲಭೇನ್ನರಃ ।
ಸ್ವರ್ಗೇ ವಾ ಮಾನುಷೇ ವಾऽಪಿ ತೈಸ್ತೈರಾಪ್ಯಾಯತೇ ಹಿ ಸಃ ॥೨೧॥

ಮರಣವನ್ನು ಹೊಂದಿದ ಮೇಲೆ ಅಂತಹವನು ಪುಣ್ಯಫಲವನ್ನು ಪಡೆಯುವುದರಲ್ಲಿ ಬೇರೆ ವಿಚಾರವಿಲ್ಲ. ಅಂತಹ ಕಾರ್ಯವನ್ನು ಮಾಡುವ ಮಾನವನು ಸ್ವರ್ಗಲೋಕದಲ್ಲಿ ಅಥವಾ ಮನುಷ್ಯಲೋಕದಲ್ಲಿ ರೂಪ, ಸೌಭಾಗ್ಯ, ಆರೋಗ್ಯ, ಬಲ ಮತ್ತು ಸೌಖ್ಯಗಳನ್ನು ಪಡೆದು ಸಂತೋಷಪಡುತ್ತಾನೆ.

ಉಮಾ

ಭಗವನ್ ಲೋಕಪಾಲೇಶ ಧರ್ಮಸ್ತು ಕತಿಭೇದಕಃ ।
ದೃಶ್ಯತೇ ಚರಿತಃ ಸದ್ಭಿಸ್ತನ್ಮೇ ಶಂಸಿತುಮರ್ಹಸಿ ॥೨೨॥

ಉಮಾ– ಭಗವಂತನೇ, ಲೋಕಪಾಲಕರಿಗೆ ಒಡೆಯನೇ, ಸಜ್ಜನರು ಆಚರಿಸುವ ಧರ್ಮವು ಎಷ್ಟು ಪ್ರಭೇದಗಳನ್ನು ಹೊಂದಿದೆ ಎಂದು ನನಗೆ ಹೇಳಬೇಕು.

ಮಹೇಶ್ವರಃ

ಶೃಣು ದೇವಿ ಸಮುದ್ದೇಶಾನ್ನಾನಾತ್ವಂ ಧರ್ಮಸಂಕಟೇ ।
ಧರ್ಮಾ ಬಹುವಿಧಾ ಲೋಕೇ ಶ್ರುತಿಭೇದಮುಖೋದ್ಭವಾಃ ॥೨೩॥

ಸ್ಮೃತಿಧರ್ಮಶ್ಚ ಬಹುಧಾ ಸದ್ಭಿರಾಚಾರ ಇಷ್ಯತೇ ॥೨೪॥

ದೇಶಧರ್ಮಾಶ್ಚ ದೃಶ್ಯಂತೇ ಕುಲಧರ್ಮಾಸ್ತಥೈವ ಚ ।
ಜಾತಿಧರ್ಮಾಶ್ಚ ವೈ ಧರ್ಮಾ ಗಣಧರ್ಮಾಶ್ಚ ಶೋಭನೇ ॥೨೫॥

ಶರೀರಕಾಲವೈಷಮ್ಯಾದಾಪದ್ಧರ್ಮಶ್ಚ ದೃಶ್ಯತೇ ।
ಏತದ್ಧರ್ಮಸ್ಯ ನಾನಾತ್ವಂ ಕ್ರಿಯತೇ ಲೋಕವಾಸಿಭಿಃ ॥೨೬॥

ಮಹೇಶ್ವರ– ದೇವಿಯೇ, ಧರ್ಮಗಳು ಒಟ್ಟುಗೂಡಿದಾಗ ಅವುಗಳ ಸಂಯೋಗವನ್ನೂ ಮತ್ತು ಅನೇಕ ವಿಧತ್ವವನ್ನೂ ಕೇಳು. ಲೋಕದಲ್ಲಿ ಧರ್ಮಗಳು ಬಹುವಿಧವಾಗಿವೆ. ಶ್ರುತಿ ವಿಶೇಷದಿಂದ ಪ್ರಾಪ್ತವಾದ ಧರ್ಮಗಳು, ಸ್ಮೃತಿಯಿಂದ ಪ್ರಾಪ್ತವಾದ ಧರ್ಮಗಳು, ಸಜ್ಜನರ ಬಹುಳಾಚಾರದಿಂದ ಪ್ರಾಪ್ತವಾದ ಧರ್ಮಗಳು ಅಂಗೀಕರಿಸಲ್ಪಡುತ್ತವೆ. ಹಾಗೆಯೇ ದೇಶಧರ್ಮಗಳು, ಕುಲಧರ್ಮಗಳು, ಜಾತಿ ಧರ್ಮಗಳು ಮತ್ತು ಗಣಧರ್ಮಗಳು ಹಾಗೆಯೇ ಶರೀರ ಮತ್ತು ಕಾಲದ ವ್ಯತ್ಯಾಸದಿಂದ ಆಪದ್ಧರ್ಮಗಳು ಇವೆಲ್ಲವೂ ಕಂಡುಬರುತ್ತವೆ. ಆ ಕಾರಣದಿಂದ ಲೋಕದ ಜನರು ನಾನಾ ವಿಧವಾದ ಧರ್ಮಗಳನ್ನು ಆಚರಿಸುತ್ತಾರೆ.

ಕಾರಣಾತ್ ತತ್ರತತ್ರೈವ ಫಲಂ ಧರ್ಮಸ್ಯ ಚೇಷ್ಯತೇ ।
ತತ್ಕಾರಣಸಮಾಯೋಗೇ ಲಭೇತ್ ಕುರ್ವನ್ ಫಲಂ ನರಃ ॥೨೭॥

ಅನ್ಯಥಾ ನ ಲಭೇತ್ ಪುಣ್ಯಮತದರ್ಹಃ ಸಮಾದಿಶನ್ ।
ಏವಂ ಧರ್ಮಸ್ಯ ನಾನಾತ್ವಂ ಫಲಂ ಕುರ್ವಲ್ಲಭೇನ್ನರಃ ॥೨೮॥

ಶ್ರೌತಃ ಸ್ಮಾರ್ತಸ್ತು ಧರ್ಮಾಣಾಂ ಪ್ರಾಕೃತೋ ಧರ್ಮ ಉಚ್ಯತೇ ।
ಇತಿ ತೇ ಕಥಿತಂ ಸರ್ವಂ ಭೂಯಃ ಶ್ರೋತುಂ ಕಿಮಿಚ್ಛಸಿ ॥೨೯॥

ಆಯಾ ಕಾರಣಗಳಿಗೆ ಅನುಸಾರವಾಗಿ ಧರ್ಮದ ಫಲವುಂಟಾಗುತ್ತದೆ. ಕಾರಣಗಳು ಒಂದುಗೂಡಿದಾಗ ಧರ್ಮವನ್ನು ಆಚರಿಸುವ ನರನು ಫಲವನ್ನು

ಹೊಂದುತ್ತಾನೆ. ಪುಣ್ಯವನ್ನು ಪಡೆಯುವ ಯೋಗ್ಯತೆ ಇಲ್ಲದವನು ಆಚರಿಸಿದ ಧರ್ಮಕ್ಕೆ ಫಲವು ದೊರೆಯುವುದಿಲ್ಲ. ಹೀಗೆ ಧರ್ಮವನ್ನು ಆಚರಿಸುವ ನರನು ನಾನಾ ವಿಧವಾದ ಫಲಗಳನ್ನು ಪಡೆಯುತ್ತಾನೆ. ಶ್ರುತಿ-ಸ್ಮೃತಿಗಳಲ್ಲಿ ಹೇಳಲ್ಪಟ್ಟ ಧರ್ಮಗಳು ಪ್ರಾಕೃತ ಧರ್ಮವೆನಿಸುತ್ತವೆ. ಇದೆಲ್ಲವನ್ನೂ ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮಪರ್ವಣಿ ಧರ್ಮಫಲಕಾಕಥನಂ ನಾಮ
ಚತುರ್ವಿಂಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಇಪ್ಪತ್ತಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಇಪ್ಪತ್ತೈದನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಶುಭಕರ್ಮಪ್ರಾಪ್ಯವಾದ ಭೋಗಗಳ ವರ್ಣನೆ.

ಉಮಾ

ಭಗವನ್ ಸರ್ವಭೂತೇಶ ತ್ರಿಪುರಾರ್ದನ ಶಂಕರ ।
ಶ್ರುತಂ ಪಾಪಕೃತಂ ದುಃಖಂ ಯಮಲೋಕೇ ವರಪ್ರದ ॥೧॥

ಉಮಾ– ಭಗವಂತನೇ, ಸರ್ವಭೂತೇಶನೆ, ತ್ರಿಪುರ ಸಂಹಾರಕನೇ, ಶಂಕರನೇ, ವರಪ್ರದನೇ, ಪಾಪದಿಂದ ಯಮಲೋಕದಲ್ಲಿ ಅನುಭವಿಸುವ ದುಃಖವನ್ನು ಕೇಳಿದೆನು.

ಶ್ರೋತುಮಿಚ್ಛಾಮ್ಯಹಂ ದೇವ ನೃಣಾಂ ಸುಕೃತಕರ್ಮಣಾಮ್ ।
ಕಥಂ ತೇ ಭುಂಜತೇ ಭೋಗಾನ್ ಸ್ವರ್ಗಲೋಕೇ ಮಹೇಶ್ವರ ॥೨॥

ಕಥಿತಾಃ ಕೀದೃಶಾ ಲೋಕಾ ನೃಣಾಂ ಸುಕೃತಕಾರಿಣಾಮ್ ।
ಏತನ್ಮೇ ವದ ದೇವೇಶ ಶ್ರೋತುಂ ಕೌತೂಹಲಂ ಹಿ ಮೇ ॥೩॥

ದೇವನೇ, ಸುಕೃತವನ್ನು ಮಾಡಿದವರ ಭೋಗವನ್ನು ಕೇಳಲು ಬಯಸುತ್ತೇನೆ. ಎಲೈ ಮಹೇಶ್ವರನೇ, ಸುಕೃತವನ್ನು ಮಾಡಿದವರು ಸ್ವರ್ಗಲೋಕದಲ್ಲಿ ಎಂತಹ

ಭೋಗಗಳನ್ನು ಅನುಭವಿಸುತ್ತಾರೆ? ಸುಕೃತವನ್ನು ಮಾಡಿದವರಿಗೆ ದೊರಕುವ ಲೋಕಗಳು ಎಂತಹವುಗಳೆಂದು ಹೇಳಲ್ಪಟ್ಟಿವೆ? ದೇವೇಶನೇ, ಇದನ್ನು ನನಗೆ ಹೇಳು. ನನಗೆ ಇದನ್ನು ಕೇಳಲು ಬಹಳ ಕುತೂಹಲವಿದೆ.

ಮಹೇಶ್ವರಃ

ಶೃಣು ಕಲ್ಯಾಣಿ ತತ್ಸರ್ವಂ ಯತ್ತ್ವಮಿಚ್ಛಸಿ ಶೋಭನೇ ।
ವಿವಿಧಾಃ ಪುಣ್ಯಲೋಕಾಸ್ತೇ ಕರ್ಮಕರ್ಮಣ್ಯತಾಂ ಗತಾಃ ॥೪॥

ಮಹೇಶ್ವರ– ಕಲ್ಯಾಣಿಯೇ, ಶೋಭನೆಯೇ, ನೀನು ಬಯಸಿದ ಎಲ್ಲವನ್ನೂ ಕೇಳು. ಕರ್ಮದಿಂದ ಹೊಂದಬಹುದಾದ ಪುಣ್ಯಲೋಕಗಳು ಅನೇಕ ವಿಧವಾಗಿವೆ.

ಮೇರುಂ ಹಿ ಕನಕಾತ್ಮಾನಂ ಪರಿತಃ ಸರ್ವತೋದಿಶಮ್ ।
ಭದ್ರಾಶ್ವಃ ಕೇತುಮಾಲಶ್ಚ ಉತ್ತರಾಃ ಕುರವಸ್ತಥಾ ॥೫॥

ಸುವರ್ಣ ಪರ್ವತವಾದ ಮೇರುವಿನ ಸುತ್ತಲೂ ಎಲ್ಲ ದಿಕ್ಕುಗಳಲ್ಲಿ ಭದ್ರಾಶ್ವ ಕೇತುಮಾದ ಮತ್ತು ಉತ್ತರ ಕುರು ಖಂಡಗಳಿವೆ.

ಜಂಬೂವನಾದಯಃ ಸ್ವರ್ಗಾ ಇತ್ಯೇತೇ ಕರ್ಮವರ್ಜಿತಾಃ ।
ತೇಷು ಭೋಗಾಃ ಸ್ವಯಂಭೂತಾಃ ಪ್ರದೃಶ್ಯಂತೇ ಯತಸ್ತತಃ ॥೬॥

ಜಂಬೂವನ ಮೊದಲಾದ ಸ್ವರ್ಗಸದೃಶವಾದ ಈ ಪ್ರದೇಶಗಳು ಕರ್ಮ ವರ್ಜಿತವಾಗಿವೆ (ಅಲ್ಲಿ ಪುಣ್ಯ-ಪಾಪ ಕರ್ಮಗಳ ಆಚರಣೆಯಿಲ್ಲ). ಅವುಗಳಲ್ಲಿ ಎಲ್ಲೆಲ್ಲಿಯೂ ಸ್ವಾಭಾವಿಕವಾಗಿಯೇ ಭೋಗಗಳು ಕಂಡುಬರುತ್ತವೆ.

ಯೋಜನಾನಾಂ ಸಹಸ್ರಂ ಚ ಏಕೈಕಂ ಮಾನಮಾತ್ರಯಾ ।
ನಿತ್ಯಪುಷ್ಪಫಲೋಪೇತಾಸ್ತತ್ರ ವೃಕ್ಷಾಃ ಸಮಂತತಃ ॥೭॥

ಅವುಗಳಲ್ಲಿ ಒಂದೊಂದು ಪ್ರದೇಶವೂ ಸಹಸ್ರ ಯೋಜನ ವಿಸ್ತಾರವುಳ್ಳದ್ದಾಗಿದೆ. ಅಲ್ಲಿರುವ ವೃಕ್ಷಗಳು ನಿತ್ಯವೂ ಎಲ್ಲ ಕಡೆಗಳಲ್ಲಿಯೂ ಪುಷ್ಪ-ಫಲಭರಿತವಾಗಿರುತ್ತವೆ.

ಆಸಕ್ತವಸ್ತ್ರಾಭರಣಾಃ ಸರ್ವೇ ಕನಕಸನ್ನಿಭಾಃ ।
ದ್ವಿರೇಫಾಶ್ಚಾಂಡಜಾಸ್ತತ್ರ ಪ್ರವಾಳಮಣಿಸನ್ನಿಭಾಃ ।
ವಿಚಿತ್ರಾಶ್ಚ ಮನೋಜ್ಞಾಶ್ಚ ಕೂಜಿತೈಃ ಶೋಭಯಂತಿ ತಾನ್ ॥೮॥

ಸುವರ್ಣವರ್ಣಸದೃಶರಾದ ಸ್ತ್ರೀ-ಪುರುಷರೆಲ್ಲರೂ ವಸ್ತ್ರಾಭರಣಗಳಿಂದ ಅಲಂಕೃತರಾಗಿರುತ್ತಾರೆ. ದುಂಬಿಗಳು ಮತ್ತು ಪಕ್ಷಿಗಳು ಹವಳ ಮತ್ತು ಮಣಿಗಳಂತೆ ಹೊಳೆಯುತ್ತಿರುತ್ತವೆ. ವಿಚಿತ್ರವಾದ ತಮ್ಮ ನಾದಗಳಿಂದ ಆ ಪ್ರದೇಶಗಳಿಗೆ ಶೋಭೆಯನ್ನುಂಟು ಮಾಡುತ್ತಿರುತ್ತವೆ.

ಕುಶೇಶಯವನೈಶ್ಚನ್ನಾ ನಳಿನ್ಯಶ್ಚ ಮನೋರಮಾಃ ।
ತತ್ರ ವಾಂತ್ಯನಿಲಾ ನಿತ್ಯಂ ದಿವ್ಯಗಂಧಾಃ ಸುಖಾವಹಾಃ ॥೯॥

ಕಮಲಸರೋವರಗಳು ಕಮಲವನಗಳಿಂದ ಆವರಿಸಲ್ಪಟ್ಟು ಮನೋಹರವಾಗಿರುತ್ತವೆ. ಅಲ್ಲಿ ವಾಯುವು ದಿವ್ಯಗಂಧವನ್ನೂ, ಸುಖಸ್ಪರ್ಶವನ್ನೂ ಹೊಂದಿ ನಿತ್ಯವೂ ಬೀಸುತ್ತದೆ.

ಸರ್ವೇ ಚಾಮ್ಲಾನಮಾಲ್ಯಾಶ್ಚ ವಿರಜೋಂಬರಸಂವೃತಾಃ ।
ಏವಂ ಬಹುವಿಧಾ ದೇವಿ ದಿವಿ ಭೋಗಾಃ ಸುಖಾವಹಾಃ ॥೧೦॥

ಎಲ್ಲರೂ ಬಾಡದ ಹೂಮಾಲೆಗಳನ್ನೂ, ನಿರ್ಮಲವಾದ ವಸ್ತ್ರಗಳನ್ನೂ ಧರಿಸಿರುತ್ತಾರೆ. ದೇವಿಯೇ, ಹೀಗೆ ಆ ಪ್ರದೇಶಗಳಲ್ಲಿ ಸುಖವನ್ನು ತರುವ ಅನೇಕ ಭೋಗಗಳಿವೆ.

ಸ್ತ್ರಿಯಶ್ಚ ಪುರುಷಾಶ್ಚೈವ ಸರ್ವೇ ಸುಕೃತಕಾರಿಣಃ ।
ರಮಂತೇ ತತ್ರ ಚಾನ್ಯೋನ್ಯಂ ಕಾಮರಾಗಸಮನ್ವಿತಾಃ ।
ದಿವ್ಯಭೂಷಣಸಂಯುಕ್ತಾ ದಿವ್ಯಗಂಧಸಮನ್ವಿತಾಃ ॥೧೧॥

ಸುಕೃತವನ್ನು ಮಾಡಿದ ಸ್ತ್ರೀ-ಪುರುಷರೆಲ್ಲರೂ ಅಲ್ಲಿ ಅನ್ಯೋನ್ಯವಾಗಿ ಕಾಮರಾಗದಿಂದ ಕೂಡಿ ದಿವ್ಯಭೂಷಣಗಳಿಂದಲೂ ಮತ್ತು ದಿವ್ಯಗಂಧಗಳಿಂದಲೂ ಅಲಂಕೃತರಾಗಿ ಸುಖವನ್ನು ಅನುಭವಿಸುತ್ತಾರೆ.

ಮನೋರಮಾ ಮಹಾಭಾಗಾಃ ಸರ್ವೇ ಲಲಿತಕುಂಡಲಾಃ ।
ಏವಂ ತತ್ರಾಗತಾ ಮರ್ತ್ಯಾಃ ಪ್ರಮದಾಃ ಪ್ರಿಯದರ್ಶನಾಃ ॥೧೨॥

ಅಲ್ಲಿಗೆ ಬಂದ ಸ್ತ್ರೀಯರು ಮತ್ತು ಪುರುಷರೆಲ್ಲರೂ ನೋಡಲು ಮನೋಹರರಾಗಿದ್ದು, ಮಹಾಭಾಗ್ಯವಂತರಾಗಿ ಒಳ್ಳೆಯ ಕರ್ಣ-ಕುಂಡಲಗಳನ್ನು ಧರಿಸಿರುತ್ತಾರೆ.

ನಾನಾಭಾವಸಮಾಯುಕ್ತಾ ಯೌವನಸ್ಥಾಃ ಸದೈವ ತು ।
ಕಮನೀಯಾಃ ಕಾಮಯುತಾಃ ಕಾಮಜ್ಞಾ ಲಲಿತಾಸ್ತಥಾ ॥೧೩॥

ನಾನಾ ಅಭಿಪ್ರಾಯವನ್ನು ಹೊಂದಿ, ಯಾವಾಗಲೂ ಯೌವನಸ್ಥರಾಗಿ, ಸುಂದರರಾಗಿ, ಕಾಮವನ್ನು ತಿಳಿದು ಕಾಮಯುಕ್ತರಾಗಿ ಲಲಿತರಾಗಿರುತ್ತಾರೆ.

ಮನೋನುಕೂಲಾ ಮಧುರಾ ಭೋಗಿನಾಮುಪಕಲ್ಪಿತಾಃ ।
ಪ್ರಮದಾಶ್ಚೋದ್ಭವಂತ್ಯೇವ ಸ್ವರ್ಗಲೋಕೇ ಯಥಾ ತಥಾ ॥೧೪॥

ಸ್ತ್ರೀಯರು ಸ್ವರ್ಗಲೋಕದಲ್ಲಿರುವಂತೆ ಪುರುಷರ ಮನಸ್ಸಿಗೆ ಅನುಕೂಲವಾಗಿ, ಮಧುರವಾಗಿ ಭೋಗಿಗಳಾದ ಅವರಿಗೆ ಸಹಾಯಕರಾಗಿರುತ್ತಾರೆ.

ಏವಂವಿಧಾಃ ಸ್ತ್ರಿಯಶ್ಚಾತ್ರ ಪುರುಷಾಶ್ಚ ಪರಸ್ಪರಮ್ ।
ರಮಂತೇ ಚೇಂದ್ರಿಯೈಃ ಸ್ವಸ್ಥೈಃ ಶರೀರೈರ್ಭೋಗಸಂಸ್ಥಿತೈಃ ॥೧೫॥

ಈ ರೀತಿಯಲ್ಲಿ ಅಲ್ಲಿ ಇಂತಹ ಸ್ತ್ರೀಯರು ಮತ್ತು ಪುರುಷರು ಶರೀರ ಭೋಗಗಳಿಂದಲೂ, ಒಳ್ಳೆಯ ಇಂದ್ರಿಯಗಳಿಂದಲೂ ಕೂಡಿದವರಾಗಿ ಸಂತೋಷ ಪಡುತ್ತಾರೆ.

ಕಾಮಹರ್ಷೌ ಗುಣಾವಾಸ್ತಾಂ ನಾನ್ಯೇ ಕ್ರೋಧಾದಯಃ ಪ್ರಿಯೇ ।
ಕ್ಷುತ್ಪಿಪಾಸಾ ನ ಚಾಸ್ಯತ್ರ ಗಾತ್ರಕ್ಲೇಶಾಶ್ಚ ಶೋಭನೇ ॥೧೬॥

ಅಲ್ಲಿ ಕಾಮ ಮತ್ತು ಸಂತೋಷ ಗುಣಗಳು ಮಾತ್ರ ಇರುತ್ತವೆ. ಪ್ರಿಯೆಯೇ, ಅಲ್ಲಿ ಕ್ರೋಧಾದಿಗಳು ಇರುವುದಿಲ್ಲ. ಎಲೌ ಶೋಭನೆಯೇ, ಹಸಿವು - ನೀರಡಿಕೆಗಳಾಗಲೀ, ಶರೀರ ಕ್ಲೇಶವಾಗಲೀ ಇರುವುದಿಲ್ಲ.

ಸರ್ವತೋ ರಮಣೀಯಶ್ಚ ಸರ್ವರ್ತುಕುಸುಮಾನ್ವಿತಮ್ ।
ಯಾವತ್ಪುಣ್ಯಫಲಂ ತಾವದ್ ರಮಂತೇ ತತ್ರ ಸಂಗತಾಃ ।
ನಿರಂತರಂ ಭೋಗಯುತಾ ರಮಂತೇ ಸ್ವರ್ಗವಾಸಿನಃ ॥೧೭॥

ಆ ಪ್ರದೇಶವು ಸರ್ವ ಋತುಗಳಲ್ಲಿಯೂ ಕುಸುಮಭರಿತವಾದ ವೃಕ್ಷಗಳಿಂದ ಎಲ್ಲ ಕಡೆಯಲ್ಲಿಯೂ ರಮಣೀಯವಾಗಿರುತ್ತದೆ. ಅಲ್ಲಿಗೆ ಹೋದ ಜೀವರು ಪುಣ್ಯಫಲ ಇರುವವರೆಗೂ ನಿರಂತರ ಭೋಗಗಳಿಂದ ಕೂಡಿ, ಸ್ವರ್ಗವಾಸಿಗಳಾಗಿ ಸುಖವನ್ನು ಅನುಭವಿಸುತ್ತಾರೆ.

ತತ್ರ ಭೋಗಾನ್ ಯಥಾಯೋಗಂ ಭುಕ್ತ್ವಾ ಪುಣ್ಯಕ್ಷಯಾತ್ ಪುನಃ ।
ನಶ್ಯಂತಿ ಜಾಯಮಾನಾಸ್ತೇ ಶರೀರೈಃ ಸಹಸಾ ಪ್ರಿಯೇ ॥೧೮॥

ಪ್ರಿಯೆಯೇ, ಅಲ್ಲಿ ತಮಗೆ ಯೋಗ್ಯವಾದ ಭೋಗಗಳನ್ನು ಅನುಭವಿಸಿ ಅನಂತರ ಪುಣ್ಯಕ್ಷಯವನ್ನು ಹೊಂದಿ ಆ ಶರೀರಗಳನ್ನು ಬಿಟ್ಟು ತಕ್ಷಣ ಭೂಮಿಯಲ್ಲಿ ಬೇರೆ ಶರೀರಗಳನ್ನು ತೆಗೆದುಕೊಂಡು ಜನಿಸುತ್ತಾರೆ.

ಸ್ವರ್ಗಲೋಕಾತ್ ಪರಿಭ್ರಷ್ಟಾಃ ಜಾಯಂತೇ ಮಾನುಷೇ ಪುನಃ ।
ಪೂರ್ವಪುಣ್ಯಾವಶೇಷೇಣ ವಿಶಿಷ್ಟಾಃ ಸಂಭವಂತಿ ತೇ ॥೧೯॥

ಸ್ವರ್ಗಲೋಕದಿಂದ ಭ್ರಷ್ಟರಾದ ಜೀವರು ಪುನಃ ಮನುಷ್ಯರಾಗಿ ಜನಿಸುತ್ತಾರೆ. ಪೂರ್ವಪುಣ್ಯದ ಅವಶೇಷದಿಂದ ಅಲ್ಲಿಯೂ ಅವರು ಶ್ರೇಷ್ಠರಾಗಿರುತ್ತಾರೆ.

ಏಷಾ ಸ್ವರ್ಗಗತಿಃ ಪ್ರೋಕ್ತಾ ಪೃಚ್ಛಂತ್ಯಾಸ್ತವ ಭಾಮಿನಿ ।
ಅತ ಊರ್ಧ್ವಂ ಪದಾನ್ಯಷ್ಟೌ ಕರ್ಮಣ್ಯಾನಿ ಶೃಣು ಪ್ರಿಯೇ ।
ಭೋಗಯುಕ್ತಾನಿ ಪುಣ್ಯಾನಿ ಉಚ್ಚ್ರಿತಾನಿ ಪರಸ್ಪರಮ್ ॥೨೦॥

ಭಾಮಿನಿಯೇ, ನಿನ್ನ ಪ್ರಶ್ನೆಗೆ ಉತ್ತರವಾಗಿ ಈ ಸ್ವರ್ಗಗತಿಯನ್ನು ಹೇಳಿದೆನು. ಪ್ರಿಯೆಯೇ, ಇದಕ್ಕಿಂತ ಮೇಲ್ಭಾಗದಲ್ಲಿ ಕರ್ಮಪ್ರಾಪ್ಯವಾದ ಭೋಗಯುಕ್ತವಾದ ಪುಣ್ಯಕರವಾದ ಒಂದಕ್ಕಿಂತ ಒಂದು ಎತ್ತರವಾದ ಎಂಟು ಸ್ಥಾನಗಳಿವೆ.

ವಿದ್ಯಾಧರಾಃ ಕಿಂಪುರುಷಾ ಯಕ್ಷಗಂಧರ್ವಕಿನ್ನರಾಃ ।
ಅಪ್ಸರೋ ದಾನವಾ ದೇವಾ ಯಥಾಕ್ರಮಮುದಾಹೃತಾಃ ॥೨೧॥

ಅಲ್ಲಿ ಕ್ರಮವಾಗಿ ವಿದ್ಯಾಧರರೂ, ಕಿಂಪುರುಷರೂ, ಯಕ್ಷರೂ, ಗಂಧರ್ವರೂ, ಕಿನ್ನರರೂ, ಅಪ್ಸರೆಯರೂ, ದಾನವರೂ ಮತ್ತು ದೇವತೆಗಳು ವಾಸಿಸುತ್ತಾರೆ.

ತೇಷು ಸ್ಥಾನೇಷು ಜಾಯಂತೇ ಪ್ರಾಣಿನಃ ಪುಣ್ಯಕರ್ಮಿಣಃ ।
ತೇಷಾಮಪಿ ಚ ಯೇ ಲೋಕಾಃ ಸ್ವರ್ಗಲೋಕೋಪಮಾಃ ಸ್ಮೃತಾಃ ॥೨೨॥

ಪುಣ್ಯಕರ್ಮವನ್ನು ಮಾಡಿದವರು ಆ ಸ್ಥಾನಗಳಲ್ಲಿ ಜನಿಸುತ್ತಾರೆ. ಅವರ ಆ ಲೋಕಗಳೂ ಸಹ ಸ್ವರ್ಗಲೋಕದಂತೆಯೇ ಇರುತ್ತವೆ.

ಸ್ವರ್ಗವತ್ ತತ್ರ ತೇ ಭೋಗಾನ್ ಭುಂಜತೇ ಚ ರಮಂತಿ ಚ ।
ರೂಪಸತ್ವಬಲೋಪೇತಾಃ ಸರ್ವೇ ದೀರ್ಘಾಯುಷಸ್ತಥಾ ॥೨೩॥

ಸ್ವರ್ಗಲೋಕದಲ್ಲಿರುವಂತೆಯೇ ಅವರು ಅಲ್ಲಿ ಭೋಗಗಳನ್ನು ಭೋಗಿಸಿ ಸಂತೋಷಪಡುತ್ತಾರೆ. ಎಲ್ಲರೂ ರೂಪ, ಧೈರ್ಯ, ಬಲಗಳಿಂದ ಕೂಡಿದವರಾಗಿ ದೀರ್ಘಾಯುಷಿಗಳಾಗಿರುತ್ತಾರೆ.

ತೇಷಾಂ ಸರ್ವಕ್ರಿಯಾರಂಭೋ ಮಾನುಷೇಷ್ವೇವ ದೃಶ್ಯತೇ ।
ಅತಿಮಾನುಷಮಾಶ್ಚರ್ಯಮಸ್ತ್ರಮಾಯಾಬಲಾತ್ಕೃತಮ್ ॥೨೪॥

ಅವರೂ ಸಹ ತಾವು ಮನುಷ್ಯರಾಗಿದ್ದಾಗಲೇ ಇಂತಹ ಲೋಕಸಂಪಾದಕವಾದ ಎಲ್ಲಾಕ್ರಿಯೆಗಳನ್ನೂ ಮಾಡಿರುತ್ತಾರೆ. ಅವರಿಗೆ ಅಸ್ತ್ರಬಲ ಮತ್ತು ಮಾಯಾಬಲದಿಂದ ಉಂಟಾದ, ಅತಿಮಾನುಷವಾದ, ಆಶ್ಚರ್ಯಕರವಾದ ಶಕ್ತಿ ಇರುತ್ತದೆ.

ಜರಾಪ್ರಸೂತಿಮರಣಂ ತೇಷು ಸ್ಥಾನೇಷು ದೃಶ್ಯತೇ ।
ಗುಣದೋಷಾಶ್ಚ ಸಂತ್ಯತ್ರ ಆಕಾಶಗಮನಂ ತಥಾ ॥೨೫॥

ಆ ಸ್ಥಾನಗಳಲ್ಲಿ ಮುಪ್ಪು-ಜನನ ಮತ್ತು ಮರಣಗಳು ಕಂಡುಬರುತ್ತವೆ. ಅಲ್ಲಿ ಗುಣಗಳು, ದೋಷಗಳು, ಆಕಾಶ ಸಂಚಾರವೂ ಇರುತ್ತದೆ.

ಅಂತರ್ಧಾನಂ ಬಲಂ ಸರ್ವಮಾಯುಶ್ಚ ಚಿರಜೀವನಮ್ ।
ತಪೋವಿಶೇಷಾಜ್ಜಾಯಂತೇ ಯಥಾ ಕರ್ಮಾಣಿ ಭಾಮಿನಿ ॥೨೬॥

ಎಲೌ ಭಾಮಿನಿಯೇ, ಅಂತರ್ಧಾನಶಕ್ತಿ, ಬಲ, ಪೂರ್ಣವಾದ ಆಯುಸ್ಸು, ಚಿರಜೀವನ- ಇವೆಲ್ಲವೂ ಅವರು ಮಾಡಿದ ಕರ್ಮಕ್ಕನುಗುಣವಾಗಿ ತಪೋವಿಶೇಷದಿಂದ ಉಂಟಾಗುತ್ತವೆ.

ದೇವಲೋಕಪ್ರವೃತ್ತಿಸ್ತು ತೇಷಾಮೇವ ವಿಧೀಯತೇ ।
ನ ತಥಾ ದೇವಲೋಕೋ ಹಿ ತದ್ವಿಶಿಷ್ಟಾಃ ಸುರಾಃ ಸ್ಮೃತಾಃ ॥೨೭॥

ದೇವಲೋಕ ಪ್ರವೃತ್ತಿಯು ದೇವತೆಗಳಿಗೆ ಮಾತ್ರ ಹೇಳಲ್ಪಡುತ್ತದೆ. ದೇವಲೋಕವು ಆ ರೀತಿಯಲ್ಲಿ ಜರಾ-ಮರಣಗಳಿಂದ ಕೂಡಿರುವುದಿಲ್ಲ. ಆದ್ದರಿಂದ ದೇವತೆಗಳನ್ನು ಶ್ರೇಷ್ಠರಾದವರು ಎಂದು ಹೇಳುತ್ತಾರೆ.

ತತ್ರ ಭೋಗಮನಿರ್ದೇಶ್ಯಮಮೃತತ್ವಂ ಚ ವಿದ್ಯತೇ ।
ವಿಮಾನಗಮನಂ ನಿತ್ಯಮಪ್ಸರೋಗಣಸೇವಿತಮ್ ॥೨೮॥

ಅಲ್ಲಿ ಶಬ್ದದಿಂದ ನಿರ್ದೇಶ ಮಾಡಲು ಸಾಧ್ಯವಿಲ್ಲದ ಭೋಗವೂ, ಅಮೃತತ್ವವೂ ಇರುತ್ತದೆ. ನಿತ್ಯವೂ ವಿಮಾನ ಸಂಚಾರವೂ ಮತ್ತು ಅಪ್ಸರೆಯರಗಣದಿಂದ ಸೇವೆಯೂ ಇರುತ್ತದೆ.

ಏವಮನ್ಯಚ್ಚ ತತ್ಕರ್ಮ ದೇವತಾಭ್ಯೋ ವಿಶಿಷ್ಯತೇ ।
ಪ್ರತ್ಯಕ್ಷಂ ತವ ತತ್ಸರ್ವಂ ದೇವಲೋಕಪ್ರವರ್ತನಮ್ ॥೨೯॥

ಈ ರೀತಿಯಲ್ಲಿ ದೇವತೆಗಳಿಗೆ ಅಂತಹ ವಿಶಿಷ್ಟವಾದ ಕರ್ಮಗಳಿರುತ್ತವೆ. ದೇವಲೋಕದ ಪ್ರವೃತ್ತಿಯೆಲ್ಲವೂ ನಿನಗೆ ಪ್ರತ್ಯಕ್ಷವಾದುದು.

ತಸ್ಮಾನ್ನ ವರ್ಣಯೇ ದೇವಿ ವಿದಿತಂ ಚ ತ್ವಯಾ ಶುಭೇ ।
ತತ್ಸರ್ವಂ ಸುಕೃತೇನೈವ ಪ್ರಾಪ್ಯತೇ ಚೋತ್ತಮಂ ಪದಮ್ ॥೩೦॥

ದೇವಿಯೇ, ಆದ್ದರಿಂದ ಅದನ್ನು ನಾನು ವರ್ಣಿಸುವುದಿಲ್ಲ. ಶುಭಳೇ, ನಿನಗೆ ಅದೆಲ್ಲವೂ ತಿಳಿದಿದೆ. ಆ ಉತ್ತಮ ಸ್ಥಾನಗಳೆಲ್ಲವೂ ಪುಣ್ಯಕರ್ಮಗಳಿಂದಲೇ ಹೊಂದಲ್ಪಡುತ್ತವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಪರ್ವಣಿ ಸುಕೃತಿಲೋಕವರ್ಣನಂ ನಾಮ ಪಂಚವಿಂಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಇಪ್ಪತ್ತಾರನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಮಾನುಷರಾಗಿದ್ದಾಗಲೇ ಮುಂದಿನ ಶುಭಾಶುಭಗತಿಯ ಸೂಚನೆಯ ಕಥನ.

ಉಮಾ

ಮಾನುಷೇಷ್ವೇವ ಜೀವತ್ಸು ಗತಿರ್ವಿಜ್ಞಾಯತೇ ನ ವಾ ।
ಯಥಾ ಶುಭಗತಿರ್ಜೀವೋ ನಾಸೌ ತ್ವಶುಭಭಾಗಿತಿ ॥೧॥

ಏತದಿಚ್ಛಾಮ್ಯಹಂ ಶ್ರೋತುಂ ತನ್ಮೇ ಶಂಸಿತುಮರ್ಹಸಿ ॥೨॥

ಉಮಾ– ಮನುಷ್ಯರಾಗಿ ಬದುಕಿದ್ದಾಗಲೇ ಇವನು ಶುಭಗತಿಯನ್ನು ಹೊಂದುವವನು, ಇವನು ಅಶುಭಗತಿಯನ್ನು ಹೊಂದುವವನು ಎಂದು ಅವರಿಗೆ ಮುಂದೆ ಒದಗುವ ಗತಿಯು ತಿಳಿಯುವುದೇ ಇಲ್ಲವೆ? ಇದನ್ನು ತಿಳಿಯಲು ಬಯಸುತ್ತೇನೆ. ಇದನ್ನು ನನಗೆ ಹೇಳಬೇಕು.

ಮಹೇಶ್ವರಃ

ತದಹಂ ತೇ ಪ್ರವಕ್ಷ್ಯಾಮಿ ಜೀವತಾಂ ವಿದ್ಯತೇ ಯಥಾ ।
ದ್ವಿವಿಧಾಃ ಪ್ರಾಣಿನೋ ಲೋಕೇ ದೈವಮಾಸುರಮಾಶ್ರಿತಾಃ ॥೩॥

ಮಹೇಶ್ವರ– ಬದುಕಿರುವಾಗಲೇ ಹೇಗೆ ತಿಳಿಯುತ್ತದೆ ಎಂಬುದನ್ನು ನಾನು ನಿನಗೆ ಹೇಳುವೆನು. ಲೋಕದಲ್ಲಿ ಪ್ರಾಣಿಗಳು ದೈವ ಅಥವಾ ಆಸುರಭಾವವನ್ನು ಹೊಂದಿ ಎರಡು ವಿಧವಾಗಿರುತ್ತಾರೆ.

ಮನಸಾ ಕರ್ಮಣಾ ವಾಚಾ ಪ್ರತಿಕೂಲಾ ಭವಂತಿ ಯೇ ।
ತಾದೃಶಾನಾಸುರಾನ್ ವಿದ್ಧಿ ಮರ್ತ್ಯಾಸ್ತೇ ನರಕಾಲಯಾಃ ॥೪॥

ಯಾವ ಮನುಷ್ಯರು ಮನಸ್ಸಿನಿಂದಲೂ, ಕರ್ಮದಿಂದಲೂ ಮತ್ತು ಮಾತಿನಿಂದಲೂ ಇನ್ನೊಬ್ಬರಿಗೆ ಪ್ರತಿಕೂಲವನ್ನು ಮಾಡುತ್ತಾರೆಯೋ ಅಂತಹವರನ್ನು ನರಕದಲ್ಲಿ ವಾಸಿಸಲಿರುವ ಅಸುರರೆಂದು ತಿಳಿ.

ರಾಗದ್ವೇಷಯುತಾ ಯೇ ತು ನಿರ್ಲಜ್ಜಾ ನಿರಪತ್ರಪಾಃ ।
ದರ್ಪಾಹಂಕಾರಸಂಯುಕ್ತಾ ನರಾ ನರಕಗಾಮಿನಃ ॥೫॥

ರಾಗ-ದ್ವೇಷಯುಕ್ತರಾಗಿ, ನಾಚಿಕೆ ಮತ್ತು ಮಾನವನ್ನು ತೊರೆದು, ದರ್ಪಾಹಂಕಾರದಿಂದ ಕೂಡಿರುವ ಮನುಷ್ಯರು ನರಕಕ್ಕೆ ಹೋಗುವರು.

ನಾಸ್ತಿಕಾಶ್ಚ ಶಠಾ ಘೋರಾಃ ಪರೇಷಾಮುಪತಾಪಿನಃ ।
ಯಥೇಷ್ಟವೃತ್ತಯಶ್ಚೈವ ನರಾ ನರಕಗಾಮಿನಃ ॥೬॥

ನಾಸ್ತಿಕರು, ಶಠರು (ಹಠಮಾರಿಗಳು), ಕ್ರೂರಿಗಳು, ಇನ್ನೊಬ್ಬರಿಗೆ ಹಿಂಸೆಯನ್ನು ಕೊಡುವವರು, ಮನಸ್ಸಿಗೆ ಬಂದಂತೆ ನಡೆದುಕೊಳ್ಳುವವರು- ಇಂತಹ ಮನುಷ್ಯರು ನರಕಕ್ಕೆ ಹೋಗುವವರು.

ದುಷ್ಪತೀಪಮನಾ ಯಸ್ತು ಚಲಚಿತ್ತೋ ನಿರಾಕೃತಿಃ ।
ಶಿಶ್ನೋದರರತಿರ್ಮೂಢೋ ನಿರಯಂ ಯಾತಿ ಸೋಽಧಮಃ ॥೭॥

ಇನ್ನೊಬ್ಬರಿಗೆ ದುಃಖವನ್ನು ಕೊಡಲು ಮತ್ತು ಪ್ರತೀಕಾರವನ್ನು ಮಾಡಲು ಚಿಂತಿಸುತ್ತಾ ಯಾವನು ಚಂಚಲಚಿತ್ತನಾಗಿ, ತನಗೆ ವಿದ್ಯಾದಿ ಯಾವ ಆಕಾರವೂ ಇಲ್ಲದೆ ಕೇವಲ ಶಿಶ್ನೋದರರತನಾಗಿರುತ್ತಾನೆಯೋ ಅಂತಹ ಮೂಢನಾದ ಅಧಮನು ನರಕಕ್ಕೆ ಹೋಗುತ್ತಾನೆ.

ಮಾಂಸಪಾನಪ್ರಿಯಾ ನಿತ್ಯಂ ಕಠೋರಾ ನೀಚವೃತ್ತಯಃ ।
ತಾದೃಶಾನಾಸುರಾನ್ ವಿದ್ಧಿ ಸರ್ವೇ ತೇ ನರಕಾಲಯಾಃ ॥೮॥

ಮಾಂಸ-ಮದ್ಯ ಪ್ರಿಯರಾಗಿ, ಕಠೋರರಾಗಿ, ನೀಚ ನಡತೆಯನ್ನು ಹೊಂದಿದವರನ್ನು ಅಸುರರೆಂದು ತಿಳಿ. ಅವರೆಲ್ಲಾ ನರಕಕ್ಕೆ ಹೋಗುವರು.

ಹಿಂಸಾವಿಹಾರಾ ಯೇ ನಿತ್ಯಂ ನಿರ್ದಯಾಃ ಪ್ರಾಣಿನಾಶನೇ ।
ಸ್ವಧರ್ಮವಿಮುಖಾಶ್ಚೈವ ಪರಸ್ವೇಷ್ವಭಿಕಾಂಕ್ಷಿಣಃ ॥೯॥

ಯುದ್ಧಮಾತ್ಸರ್ಯಸಂಯುಕ್ತಾ ಗ್ರಾಮ್ಯಭೋಗಪರಾಯಣಾಃ ।
ತಾದೃಶಾನಾಸುರಾನ್ ವಿದ್ಧಿ ನರಾನ್ನರಕಗಾಮಿನಃ ॥೧೦॥

ಯಾರಿಗೆ ನಿತ್ಯವೂ ಹಿಂಸೆಯೇ ವಿಹಾರವೋ, ಪ್ರಾಣಿವಧೆಯ ವಿಷಯದಲ್ಲಿ ನಿರ್ದಯರೋ, ಸ್ವಧರ್ಮದಿಂದ ವಿಮುಖರೋ, ಇನ್ನೊಬ್ಬರ ಸ್ವತ್ತನ್ನು

ಅಪೇಕ್ಷಿಸುವವರೋ, ಯುದ್ಧ ಮತ್ತು ಮಾತ್ಸರ್ಯದಿಂದ ಕೂಡಿರುವವರೋ, ಗ್ರಾಮ್ಯ ಭೋಗದಲ್ಲೇ ಆಸಕ್ತರೋ ಅಂತಹ ಮನುಷ್ಯರನ್ನು ನರಕಕ್ಕೆ ಹೋಗುವ ಅಸುರರೆಂದು ತಿಳಿ.

ದರ್ಪೋತ್ಸೇಕಸಮಾಯುಕ್ತಾ ಮೂರ್ಖಾಸ್ತತ್ತ್ವಬಹಿಷ್ಕೃತಾಃ ।
ಶ್ರುತಿವಿದ್ವೇಷಿಣೋ ನಿತ್ಯಂ ತೇ ನರಾ ನರಕಾಲಯಾಃ ॥೧೧॥

ದರ್ಪ-ಅಹಂಕಾರಗಳಿಂದ ಕೂಡಿ ಮೂರ್ಖರಾಗಿ, ತತ್ತ್ವಜ್ಞಾನದಿಂದ ದೂರರಾಗಿ ನಿತ್ಯವೂ ವೇದವನ್ನು ದ್ವೇಷಿಸುವ ಮನುಷ್ಯರು ನರಕಕ್ಕೆ ಹೋಗುವರು.

ನಿತ್ಯಂ ವದಂತಿ ಯೇ ಮೋಹಾದನೃತಂ ಕಟುಕಂ ವಚಃ ।
ಕೃತಘ್ನಾಃ ಪಿಶುನಾ ಘೋರಾ ಭವಂತಿ ನರಕಾಲಯಾಃ ॥೧೨॥

ಯಾರು ನಿತ್ಯವೂ ಮೋಹದಿಂದ ಸುಳ್ಳನ್ನೇ ಮಾತನಾಡುತ್ತಾರೋ ಅಥವಾ ಕ್ರೂರವಾದ ಮಾತುಗಳನ್ನಾಡುತ್ತಾರೋ, ಕೃತಘ್ನರೋ, ಚಾಡಿಕೋರರೋ, ಘೋರರೋ ಅಂತಹವರು ನರಕಕ್ಕೆ ಹೋಗುವರು.

ಹಿಂಸ್ರಾಶ್ಚೋರಾಶ್ಚ ಧೂರ್ತಾಶ್ಚ ಪರದಾರಾಭಿಮರ್ಶಿನಃ ।
ನೀಚಕರ್ಮರತಾ ಯೇ ಚ ಶೌಚಮಂಗಲವರ್ಜಿತಾಃ ॥೧೩॥

ಶುಚಿವಿದ್ವೇಷಿಣಃ ಪಾಪಾ ಲೋಕಚಾರಿತ್ರದೂಷಕಾಃ ।
ಏವಂ ಯುಕ್ತಸಮಾಚಾರಾ ಜೀವಂತೋ ನರಕಾಲಯಾಃ ॥೧೪॥

ಹಿಂಸಕರು, ಚೋರರು, ಧೂರ್ತರು, ಪರಸ್ತ್ರೀಗಾಮಿಗಳು, ನೀಚಕರ್ಮರತರು, ಶೌಚಮಂಗಳಹೀನರು, ಶೌಚವನ್ನು ದ್ವೇಷಿಸುವವರು, ಪಾಪವನ್ನು ಮಾಡುವವರು, ಲೋಕದ ನಡತೆಯನ್ನು ದೂಷಿಸುವವರು- ಇಂತಹ ಆಚಾರದಿಂದ ಕೂಡಿ ಜೀವಿಸುವ ಮನುಷ್ಯರು ನರಕಕ್ಕೆ ಹೋಗುವರು.

ಲೋಕೋದ್ವೇಗಕರಾಶ್ಚಾನ್ಯೇ ಪಶವಶ್ಚ ಸರೀಸೃಪಾಃ ।
ವೃಕ್ಷಾಃ ಕಂಟಕಿನೋ ರೂಕ್ಷಾಸ್ತಾದೃಶಾನ್ ವಿದ್ಧಿ ಚಾಸುರಾನ್ ॥೧೫॥

ಇನ್ನು ಲೋಕಕ್ಕೆ ಭಯವನ್ನುಂಟು ಮಾಡುವ ಬೇರೆ ಪಶುಗಳು, ಸರ್ಪಗಳು, ಮುಳ್ಳಿನ ವೃಕ್ಷಗಳು ಅಂತಹವುಗಳನ್ನು ಅಸುರರೆಂದು ತಿಳಿ.

ಅಪರಾನ್ ದೇವಪಕ್ಷಾಂಸ್ತು ಶೃಣು ದೇವಿ ಸಮಾಹಿತಾ ॥೧೬॥

ದೇವಿಯೇ, ಇದಕ್ಕಿಂತ ಭಿನ್ನವಾದ ದೇವಪಕ್ಷದವರನ್ನು ಸಮಾಧಾನದಿಂದ ಕೇಳು.

ಮನೋವಾಕ್ಕರ್ಮಭಿರ್ನಿತ್ಯಮನುಕೂಲಾ ಭವಂತಿ ಯೇ ।
ತಾದೃಶಾನಮರಾನ್ ವಿದ್ಧಿ ತೇ ನರಾಃ ಸ್ವರ್ಗಗಾಮಿನಃ ॥೧೭॥

ಯಾರು ತಮ್ಮ ಮನೋ-ವಾಕ್-ಕಾಯಕರ್ಮಗಳಿಂದ ನಿತ್ಯವೂ ಇನ್ನೊಬ್ಬರಿಗೆ ಅನುಕೂಲವನ್ನು ಮಾಡುತ್ತಾರೆಯೋ ಅಂತಹವರನ್ನು ದೇವತೆಗಳೆಂದು ತಿಳಿ. ಅಂತಹ ಮನುಷ್ಯರು ಸ್ವರ್ಗಕ್ಕೆ ಹೋಗುವರು.

ಶೌಚಾರ್ಜವಪರಾಧೀನಾಃ ಪರಾರ್ಥಂ ನ ಹರಂತಿ ಯೇ ।
ಯೇ ಸಮಾಃ ಸರ್ವಭೂತೇಷು ತೇ ನರಾಃ ಸ್ವರ್ಗಗಾಮಿನಃ ॥೧೮॥

ಶೌಚ ಮತ್ತು ಋಜುತನದಿಂದ ಕೂಡಿದ ಯಾರು ಇನ್ನೊಬ್ಬರ ಸ್ವತ್ತನ್ನು ಅಪಹರಿಸುವುದಿಲ್ಲವೋ ಮತ್ತು ಸರ್ವಭೂತಗಳಲ್ಲಿಯೂ ಸಮಾನರಾಗಿರುತ್ತಾರೆಯೋ ಅಂತಹ ಮನುಷ್ಯರು ಸ್ವರ್ಗಗಾಮಿಗಳು.

ಭಯಾದ್ವಾ ವೃತ್ತಿಹೇತೋರ್ವಾ ಅನೃತಂ ನ ಬ್ರುವಂತಿ ಯೇ ।
ಸತ್ಯಂ ವದಂತಿ ಸತತಂ ತೇ ನರಾಃ ಸ್ವರ್ಗಗಾಮಿನಃ ॥೧೯॥

ಭಯದಿಂದಾಗಲೀ, ಜೀವನೋಪಾಯದ ಸಲುವಾಗಿಯಾಗಲೀ ಯಾರು ಅನೃತವನ್ನು (ಸುಳ್ಳು) ಮಾತನಾಡುವುದಿಲ್ಲವೋ, ಸತತವಾಗಿ ಸತ್ಯವನ್ನೇ ನುಡಿಯುತ್ತಾರೆಯೋ ಅಂತಹ ಮನುಷ್ಯರು ಸ್ವರ್ಗಗಾಮಿಗಳು.

ಧಾರ್ಮಿಕಾಃ ಶೌಚಸಂಪನ್ನಾಃ ಶುಕ್ಲಾ ಮಧುರವಾದಿನಃ ।
ನಾಕಾರ್ಯಂ ಮನಸೇಚ್ಛಂತಿ ತೇ ನರಾಃ ಸ್ವರ್ಗಗಾಮಿನಃ ॥೨೦॥

ಧಾರ್ಮಿಕರೂ, ಶೌಚಸಂಪನ್ನರೂ, ಶುದ್ಧರೂ, ಮಧುರ ಭಾಷಿಗಳೂ, ಅಕಾರ್ಯವನ್ನು ಮನಸ್ಸಿನಲ್ಲಿಯೂ ಇಚ್ಛಿಸದವರೂ ಆದ ನರರು ಸ್ವರ್ಗಗಾಮಿಗಳು.

ದರಿದ್ರಾ ಅಪಿ ಯೇ ಕೇಚಿದ್ ಯಾಚಿತಾಃ ಪ್ರೀತಿಪೂರ್ವಕಮ್ ।
ದದತ್ಯೇವ ಚ ಯತ್ಕಿಂಚಿತ್ ತೇ ನರಾಃ ಸ್ವರ್ಗಗಾಮಿನಃ ॥೨೧॥

ಯಾರು ತಾವು ದರಿದ್ರರಾದರೂ ಇನ್ನೊಬ್ಬರು ಯಾಚಿಸಿದಾಗ ಪ್ರೀತಿ ಪೂರ್ವಕವಾಗಿ ಏನನ್ನಾದರೂ ಕೊಟ್ಟೇ ಕೊಡುತ್ತಾರೆಯೋ ಅಂತಹ ಮನುಷ್ಯರು ಸ್ವರ್ಗಗಾಮಿಗಳು.

ಆಸ್ತಿಕಾ ಮಂಗಲಪರಾಃ ಸತತಂ ವೃದ್ಧಸೇವಿನಃ ।
ಪುಣ್ಯಕರ್ಮಪರಾ ನಿತ್ಯಂ ತೇ ನರಾಃ ಸ್ವರ್ಗಗಾಮಿನಃ ॥೨೨॥

ಆಸ್ತಿಕರೂ, ಮಂಗಳಪರರೂ, ಸತತವಾಗಿ ಹಿರಿಯರನ್ನು ಸೇವಿಸುವವರೂ, ನಿತ್ಯವೂ ಪುಣ್ಯಕರ್ಮರತರೂ ಆದ ನರರು ಸ್ವರ್ಗಗಾಮಿಗಳು.

ವ್ರತಿನೋ ದಾನಶೀಲಾಶ್ಚ ಸುಖಶೀಲಾಶ್ಚ ಮಾನವಾಃ ।
ಋಜವೋ ಮೃದವೋ ನಿತ್ಯಂ ತೇ ನರಾಃ ಸ್ವರ್ಗಗಾಮಿನಃ ॥೨೩॥

ವ್ರತವನ್ನು ಆಚರಿಸುವವರು, ದಾನಶೀಲರು, ಸುಖಶೀಲರು, ಋಜು (ಸರಳ) ಸ್ವಭಾವದವರು, ಮೃದುಗಳು ಆದ ಮನುಷ್ಯರು ಸ್ವರ್ಗಗಾಮಿಗಳು.

ಗುರುಶುಶ್ರೂಷಣಪರಾ ದೇವಬ್ರಾಹ್ಮಣಪೂಜಕಾಃ ।
ಕೃತಜ್ಞಾಃ ಕೃತವಿದ್ಯಾಶ್ಚ ತೇ ನರಾಃ ಸ್ವರ್ಗಗಾಮಿನಃ ॥೨೪॥

ಗುರುಶುಶ್ರೂಷೆಯಲ್ಲಿ ರತರಾದವರು, ದೇವ-ಬ್ರಾಹ್ಮಣ ಪೂಜಕರು, ಕೃತಜ್ಞರೂ, ವಿದ್ಯಾಸಂಪನ್ನರೂ ಆದ ಮನುಷ್ಯರು ಸ್ವರ್ಗಗಾಮಿಗಳು.

ಜಿತೇಂದ್ರಿಯಾ ಜಿತಕ್ರೋಧಾ ಜಿತಮಾನಮದಸ್ಪೃಹಾಃ ।
ಲೋಭಮಾತ್ಸರ್ಯಹೀನಾ ಯೇ ತೇ ನರಾಃ ಸ್ವರ್ಗಗಾಮಿನಃ ॥೨೫॥

ಇಂದ್ರಿಯಗಳನ್ನು ಜಯಿಸಿ, ಕ್ರೋಧವನ್ನು ಜಯಿಸಿ, ಮಾನ, ಮದ ಮತ್ತು ಆಸೆಗಳನ್ನು ಜಯಿಸಿ, ಲೋಭ-ಮಾತ್ಸರ್ಯಗಳಿಂದ ರಹಿತರಾದ ಜನರು ಸ್ವರ್ಗಗಾಮಿಗಳು.

ನಿರ್ಮಮಾ ನಿರಹಂಕಾರಾಃ ಸಾನುಕ್ರೋಶಾಃ ಸ್ವಬಂಧುಷು ।
ದೀನಾನುಕಂಪಿನೋ ನಿತ್ಯಂ ತೇ ನರಾಃ ಸ್ವರ್ಗಗಾಮಿನಃ ॥೨೬॥

ಅಹಂಕಾರ-ಮಮಕಾರಗಳನ್ನು ತ್ಯಜಿಸಿ, ತಮ್ಮ ಬಂಧುಗಳಲ್ಲಿ ದಯೆಯನ್ನು ಹೊಂದಿ, ದೀನರ ವಿಷಯದಲ್ಲಿ ಯಾವಾಗಲೂ ಅನುಕಂಪವನ್ನು ಹೊಂದಿರುವ ಮನುಷ್ಯರು ಸ್ವರ್ಗಗಾಮಿಗಳು.

ಐಹಿಕೇನ ತು ವೃತ್ತೇನ ಪಾರತ್ರಮನುಮೀಯತೇ ।
ಏವಂವಿಧಾ ನರಾ ಲೋಕೇ ಜೀವಂತಃ ಸ್ವರ್ಗಗಾಮಿನಃ ॥೨೭॥

ಅವರ ಈ ಲೋಕದ ನಡವಳಿಕೆಯಿಂದ ಅವರಿಗೆ ಒದಗಲಿರುವ ಪರಲೋಕವು ಊಹಿಸಲ್ಪಡುತ್ತದೆ. ಲೋಕದಲ್ಲಿ ಈ ರೀತಿಯಲ್ಲಿ ಜೀವಿಸುವ ಮನುಷ್ಯರು ಸ್ವರ್ಗಗಾಮಿಗಳು.

ಯದನ್ಯಚ್ಚ ಶುಭಂ ಲೋಕೇ ಪ್ರಜಾನುಗ್ರಹಕಾರಿ ಚ ।
ಪಶವಶ್ಚೈವ ವೃಕ್ಷಾಶ್ಚ ಪ್ರಜಾನಾಂ ಹಿತಕಾರಿಣಃ ।
ತಾದೃಶಾನ್ ದೇವಪಕ್ಷಸ್ಥಾನಿತಿ ವಿದ್ಧಿ ಶುಭಾನನೇ ॥೨೮॥

ಎಲೌ ಶುಭಾನನೆಯೇ, ಅಲ್ಲದೇ ಲೋಕದಲ್ಲಿರುವ ಶುಭವಾದ ಪ್ರಜೆಗಳಿಗೆ ಅನುಕೂಲವನ್ನು ಮಾಡುವ, ಪಶುಗಳು ವೃಕ್ಷಗಳು - ಅವುಗಳನ್ನು ದೇವಪಕ್ಷಕ್ಕೆ ಸೇರಿದವು ಎಂದು ತಿಳಿ.

ಶುಭಾಶುಭಮಯಂ ಲೋಕೇ ಸರ್ವಂ ಸ್ಥಾವರಜಂಗಮಮ್ ।
ದೈವಂ ಶುಭಮಿತಿ ಪ್ರಾಹುರಾಸುರಂ ಹ್ಯಶುಭಂ ಪ್ರಿಯೇ ॥೨೯॥

ಲೋಕದಲ್ಲಿ ಇರುವ ಸ್ಥಾವರ-ಜಂಗಮವೆಲ್ಲವೂ ಶುಭಾಶುಭಾತ್ಮಕವಾದುವು. ಪ್ರಿಯೆಯೇ, ಶುಭವನ್ನು ದೈವವೆಂದೂ, ಅಶುಭವನ್ನು ಆಸುರವೆಂದೂ ಜ್ಞಾನಿಗಳು ಹೇಳುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಪರ್ವಣಿ ಶುಭಾಶುಭಗತ್ಯನುಮಾನಕಥನಂ ನಾಮ ಷಡ್‌ವಿಂಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಇಪ್ಪತ್ತೇಳನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಪ್ರಾಣತ್ಯಾಗವಿಧಿ.

ಉಮಾ

ಭಗವನ್ಮಾನುಷಾಃ ಕೇಚಿತ್‌ಕಾಲಧರ್ಮಮುಪಸ್ಥಿತಾಃ ।
ಪ್ರಾಣಮೋಕ್ಷಂ ಕಥಂ ಕೃತ್ವಾ ಪರತ್ರ ಹಿತಮಾಪ್ನುಯುಃ ॥೧॥

ಉಮಾ– ಪೂಜ್ಯನೇ, ಮರಣವು ಸನ್ನಿಹಿತರಾದ ಮಾನವರು ಹೇಗೆ ಪ್ರಾಣತ್ಯಾಗವನ್ನು ಮಾಡಿದರೆ ಪರಲೋಕದಲ್ಲಿ ಹಿತವನ್ನು ಹೊಂದುವರು?

ಮಹೇಶ್ವರಃ

ಹಂತ ತೇ ಕಥಯಿಷ್ಯಾಮಿ ಶೃಣು ದೇವಿ ಸಮಾಹಿತಾ ।
ದ್ವಿವಿಧಂ ಮರಣಂ ಲೋಕೇ ಸ್ವಭಾವಾದ್ ಯತ್ನತಸ್ತಥಾ ॥೨॥

ಮಹೇಶ್ವರ– ದೇವಿಯೇ, ಸಂತೋಷ. ನಿನಗೆ ಹೇಳುವೆನು, ಸಮಾಧಾನದಿಂದ ಕೇಳು. ಲೋಕದಲ್ಲಿ ಮರಣವು ಸ್ವಾಭಾವಿಕ ಮತ್ತು ಪ್ರಯತ್ನಜನ್ಯ ಎಂದು ಎರಡು ವಿಧ.

ತಯೋಃ ಸ್ವಭಾವಂ ನಾಪಾಯಂ ಯತ್ನತಃ ಕರಣೋದ್ಭವಮ್ ।
ಏತಯೋರುಭಯೋರ್ದೇವಿ ವಿಧಾನಂ ಶೃಣು ಶೋಭನೇ ॥೩॥

ಅವುಗಳಲ್ಲಿ ಸ್ವಾಭಾವಿಕ ಮರಣವು ಅಪಾಯಕಾರಿಯಲ್ಲ. ಪ್ರಯತ್ನಜನ್ಯ ಮರಣವು ಬೇರೆ ಸಾಧನಗಳಿಂದ ಉಂಟಾಗುತ್ತದೆ. ಎಲೌ ದೇವಿಯೇ, ಶೋಭನೆಯೇ, ಈ ಎರಡು ಮರಣಗಳ ವಿಧಾನವನ್ನು ಕೇಳು.

ಕಲ್ಯಾಕಲ್ಯಶರೀರಸ್ಯ ಯತ್ನಜಂ ದ್ವಿವಿಧಂ ಸ್ಮೃತಮ್ ।
ಯತ್ನಜಂ ನಾಮ ಮರಣಮಾತ್ಮತ್ಯಾಗೋ ಮುಮೂರ್ಷಯಾ ॥೪॥

ಶಕ್ತವಾದ ಮತ್ತು ಅಶಕ್ತವಾದ ಶರೀರಕ್ಕೆ ಪ್ರಯತ್ನಜನ್ಯವಾದ ಮರಣವು ಎರಡು ವಿಧವಾದುದು. ಪ್ರಯತ್ನಜನ್ಯವೆಂದರೆ ಮರಣವನ್ನು ಹೊಂದುವ ಇಚ್ಛೆಯಿಂದ ಪ್ರಾಣತ್ಯಾಗವನ್ನು ಮಾಡುವುದು.

ತತ್ರಾಕಲ್ಯಶರೀರಸ್ಯ ಜರಾ ವ್ಯಾಧಿಶ್ಚ ಕಾರಣಮ್ ।
ಮಹಾಪ್ರಸ್ಥಾನಗಮನಂ ತಥಾ ಪ್ರಾಯೋಪವೇಶನಮ್ ।
ಜಲಾವಗಾಹನಂ ಚೈವ ಅಗ್ನಿಚಿತ್ಯಾಪ್ರವೇಶನಮ್ ॥೫॥

ಅಶಕ್ತ ಶರೀರವುಳ್ಳವನಿಗೆ ಮುಪ್ಪು ಮತ್ತು ವ್ಯಾಧಿಗಳು ಅದಕ್ಕೆ ಕಾರಣ. ಆ ಶರೀರವನ್ನು ತ್ಯಜಿಸಲು ಮಹಾಪ್ರಸ್ಥಾನ ಗಮನ, ಪ್ರಾಯೋಪವೇಶ, ಜಲಪ್ರವೇಶ ಮತ್ತು ಅಗ್ನಿಪ್ರವೇಶವೆಂಬ ನಾಲ್ಕು ವಿಧಿಗಳಿವೆ.

ಏವಂ ಚತುರ್ವಿಧಃ ಪ್ರೋಕ್ತ ಆತ್ಮತ್ಯಾಗೋ ಮುಮೂರ್ಷತಾಮ್ ।
ಏತೇಷಾಂ ಕ್ರಮಯೋಗೇನ ವಿಧಾನಂ ಶೃಣು ಶೋಭನೇ ॥೬॥

ಹೀಗೆ ಪ್ರಾಣತ್ಯಾಗವನ್ನು ಮಾಡಲು ಬಯಸುವ ಮನುಷ್ಯರಿಗೆ ನಾಲ್ಕು ಪ್ರಕಾರಗಳು ಹೇಳಲ್ಪಟ್ಟಿವೆ. ಶೋಭನೆಯೇ, ಅವುಗಳ ವಿಧಾನವನ್ನು ಕ್ರಮವಾಗಿ ಕೇಳು.

ಸ್ವಧರ್ಮಯುಕ್ತಂ ಗಾರ್ಹಸ್ಥ್ಯಂ ಚಿರಮೂಢ್ವಾ ವಿಧಾನತಃ ।
ತತ್ರಾನೃಣ್ಯಂ ಚ ಸಂಪ್ರಾಪ್ಯ ವೃದ್ಧೋ ವಾ ವ್ಯಾಧಿತೋಽಪಿ ವಾ ॥೭॥

ದರ್ಶಯಿತ್ವಾ ಸ್ವದೌರ್ಬಲ್ಯಂ ಸರ್ವಾನೇವಾನುಮಾನ್ಯ ಚ ।
ಸಂವಿಧಾಯ ಸ್ವಬಂಧೂಂಶ್ಚ ಕರ್ಮಣಾಂ ಭರಣೇ ತಥಾ ॥೮॥

ದಾನಾನಿ ವಿಧಿವತ್‌ಕೃತ್ವಾ ಧರ್ಮಕಾರ್ಯಾರ್ಥಮಾತ್ಮನಃ ।
ಅನುಜ್ಞಾಪ್ಯ ಜನಂ ಸರ್ವಂ ವಾಚಾ ಮಧುರಯಾ ಬ್ರುವನ್ ॥೯॥

ಅಹತಂ ವಸ್ತ್ರಮಾಚ್ಛಾದ್ಯ ಬದ್ಧ್ವಾ ತತ್ಕುಶರಜ್ಜುನಾ ।
ಉಪಸ್ಪೃಶ್ಯ ಪ್ರತಿಜ್ಞಾಯ ವ್ಯವಸಾಯಪುರಃಸರಮ್ ॥೧೦॥

ಪರಿತ್ಯಜ್ಯ ತತೋ ಗ್ರಾಮ್ಯಂ ಪಶ್ಚಾತ್ ಕುರ್ಯಾದ್ ಯಥೇಪ್ಸಿತಮ್ ।
ಮಹಾಪ್ರಸ್ಥಾನಮಿಚ್ಛೇಚ್ಚೇತ್‌ಪ್ರತಿಷ್ಠೇತೋತ್ತರಾಂ ದಿಶಮ್ ॥೧೧॥

ಸ್ವಧರ್ಮಯುಕ್ತವಾದ ಗಾರ್ಹಸ್ಥ್ಯ ಧರ್ಮವನ್ನು ಶಾಸ್ತ್ರೋಕ್ತ ರೀತಿಯಿಂದ ಚಿರಕಾಲ ಪಾಲಿಸಿ ಅಲ್ಲಿ ಋಣಮುಕ್ತನಾಗಿ ವೃದ್ಧನಾಗಿ ಅಥವಾ ರೋಗಗ್ರಸ್ತನಾಗಿ ಮರಣವನ್ನು ಬಯಸುವುದಾದರೆ ತನ್ನ ಶರೀರದ ದೌರ್ಬಲ್ಯವನ್ನು ಎಲ್ಲರಿಗೂ ತೋರಿಸಿ ಎಲ್ಲರ

ಅನುಮತಿಯನ್ನೂ ಪಡೆದು, ತನ್ನ ಬಂಧುಗಳನ್ನು ಪೋಷಿಸುವುದಕ್ಕೆ ಮತ್ತು ಅವರ ಕಾರ್ಯಗಳಿಗೆ ಅವಶ್ಯಕವಾದ ಅನುಕೂಲತೆಯನ್ನು ಮಾಡಿ, ತನ್ನ ಧರ್ಮದ ಸಲುವಾಗಿ ವಿಧಿವತ್ತಾಗಿ ದಾನವನ್ನು ಮಾಡಿ, ಮಧುರವಾದ ಮಾತುಗಳನ್ನಾಡಿ, ಎಲ್ಲ ಜನರ ಅನುಮತಿಯನ್ನು ಪಡೆದು, ಖಂಡಿಸದಿದ್ದ ವಸ್ತ್ರವನ್ನು ಉಟ್ಟು ಅದನ್ನು ದರ್ಭೆಯ ಪಾಶದಿಂದ ಬಿಗಿದು ಜಲಸ್ಪರ್ಶವನ್ನು ಮಾಡಿ, ಶುಚಿಯಾಗಿ, ನಿಶ್ಚಯ ಪೂರ್ವಕವಾಗಿ ಪ್ರತಿಜ್ಞೆಯನ್ನು ಮಾಡಿ, ಎಲ್ಲಾ ಗ್ರಾಮ್ಯವಸ್ತುಗಳನ್ನೂ ಪರಿತ್ಯಜಿಸಿ ಅನಂತರ ಹಿಂದೆ ಹೇಳಿದ ನಾಲ್ಕು ವಿಧಾನಗಳಲ್ಲಿ ತನಗೆ ಇಷ್ಟವಾದ ವಿಧಾನವನ್ನು ಅನುಸರಿಸಬೇಕು. ಮಹಾಪ್ರಸ್ಥಾನವನ್ನು ಮಾಡುವುದಾದರೆ ಉತ್ತರ ದಿಕ್ಕನ್ನು ಕುರಿತು ಪ್ರಯಾಣ ಮಾಡುತ್ತಾ ಹೋಗಬೇಕು.

ಭೂತ್ವಾ ತಾವನ್ನಿರಾಹಾರೋ ಯಾವತ್‌ಪ್ರಾಣವಿಮೋಕ್ಷಣಮ್ ।
ಚೇಷ್ಟಾಹಾನೌ ಶಯಿತ್ವಾಽಪಿ ತನ್ಮನಾಃ ಪ್ರಾಣಮುತ್ಸೃಜೇತ್ ।
ಏವಂ ಪುಣ್ಯಕೃತಾಂ ಲೋಕಾನಮಲಾನ್ ಪ್ರತಿಪದ್ಯತೇ ॥೧೨॥

ಪ್ರಾಣತ್ಯಾಗದ ಪರ್ಯಂತವೂ ನಿರಾಹಾರನಾಗಿ, ದೇಹದಿಂದ ಯಾವ ಕ್ರಿಯೆಯನ್ನೂ ಮಾಡಲಾಗದಿದ್ದರೆ ಮಲಗಿಕೊಂಡಾದರೂ ದೇವರನ್ನು ಧ್ಯಾನಿಸಿ ಪ್ರಾಣವನ್ನು ಬಿಡಬೇಕು. ಹೀಗೆ ಮಾಡಿದರೆ ಪುಣ್ಯಕರ್ಮಿಗಳು ಹೊಂದುವ ನಿರ್ಮಲವಾದ ಲೋಕಗಳನ್ನು ಹೊಂದುತ್ತಾನೆ.

ಪ್ರಾಯೋಪವೇಶನಂ ಚೇಚ್ಛೇತ್ ತೇನೈವ ವಿಧಿನಾ ನರಃ ।
ದೇಶೇ ಪುಣ್ಯತಮೇ ಶ್ರೇಷ್ಠೇ ನಿರಾಹಾರಸ್ತು ಸಂವಿಶೇತ್ ॥೧೩॥

ಆಪ್ರಾಣಾಂತಂ ಶುಚಿರ್ಭೂತ್ವಾ ಕುರ್ವನ್ ದಾನಂ ಸ್ವಶಕ್ತಿತಃ ।
ಹರಿಂ ಸ್ಮರಂಸ್ಯಜೇತ್‌ಪ್ರಾಣಾನೇಷ ಧರ್ಮಃ ಸನಾತನಃ ।
ಏವಂ ಕಳೇಬರಂ ತ್ಯಕ್ತ್ವಾ ಸ್ವರ್ಗಲೋಕೇ ಮಹೀಯತೇ ॥೧೪॥

ಪ್ರಾಯೋಪವೇಶವನ್ನು ಮಾಡಲು ಇಚ್ಛಿಸುವುದಾದರೆ ಮನುಷ್ಯನು ಅದೇ ವಿಧಾನದಿಂದ ಪುಣ್ಯತಮವಾದ ಶ್ರೇಷ್ಠ ದೇಶದಲ್ಲಿ ನಿರಾಹಾರನಾಗಿ ಕುಳಿತುಕೊಳ್ಳಬೇಕು. ಪ್ರಾಣಹೋಗುವವರೆಗೆ ಶುಚಿಯಾಗಿ ತನ್ನ ಶಕ್ತಿ ಇದ್ದಷ್ಟು ದಾನವನ್ನು ಮಾಡುತ್ತಾ

ಹರಿಯನ್ನು ಸ್ಮರಿಸುತ್ತಾ ಪ್ರಾಣವನ್ನು ಬಿಡಬೇಕು. ಇದು ಸನಾತನವಾದ ಧರ್ಮ. ಹೀಗೆ ದೇಹತ್ಯಾಗವನ್ನು ಮಾಡಿದವನು ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಅಗ್ನಿಪ್ರವೇಶನಂ ಚೇಚ್ಛೇತ್ತೇನೈವ ವಿಧಿನಾ ಶುಭೇ ।
ಕೃತ್ವಾ ಕಾಷ್ಠಮಯಂ ಚಿತ್ಯಂ ಪುಣ್ಯಕ್ಷೇತ್ರೇ ನದೀಷು ವಾ ॥೧೫॥

ದೈವತೇಭ್ಯೋ ನಮಸ್ಕೃತ್ವಾ ಕೃತ್ವಾ ಚಾಪಿ ಪ್ರದಕ್ಷಿಣಮ್ ।
ಭೂತ್ವಾ ಶುಚಿರ್ವ್ಯವಸಿತಃ ಪ್ರವಿಶೇದಗ್ನಿಸಂಸ್ತರಮ್ ।
ಸೋಽಪಿ ಲೋಕಾನ್ ಯಥಾನ್ಯಾಯಂ ಪ್ರಾಪ್ನುಯಾತ್ ಪುಣ್ಯಕರ್ಮಣಾಮ್ ॥

ಎಲೌ ಶುಭಳೇ, ಅಗ್ನಿಪ್ರವೇಶವನ್ನು ಮಾಡಲು ಬಯಸಿದರೆ ಅದೇ ವಿಧಾನದಿಂದ ಪುಣ್ಯಕ್ಷೇತ್ರದಲ್ಲಿ ಅಥವಾ ನದೀತೀರದಲ್ಲಿ ಕಾಷ್ಠಗಳಿಂದ ಚಿತೆಯನ್ನು ಮಾಡಿ, ದೇವತೆಗಳಿಗೆ ನಮಸ್ಕರಿಸಿ, ಅಗ್ನಿಯನ್ನು ಪ್ರದಕ್ಷಿಣೆಯನ್ನು ಮಾಡಿ, ಶುಚಿಯಾಗಿ, ನಿರ್ಧಾರದೊಂದಿಗೆ ಹಬ್ಬಿದ ಅಗ್ನಿಯಲ್ಲಿ ಪ್ರವೇಶಿಸಬೇಕು. ಅವನೂ ಸಹ ನ್ಯಾಯವಾಗಿಯೇ ಪುಣ್ಯಕರ್ಮಗಳ ಲೋಕವನ್ನು ಪಡೆಯುತ್ತಾನೆ.

ಜಲಾವಗಾಹನಂ ಚೇಚ್ಛೇತ್ತೇನೈವ ವಿಧಿನಾ ಶುಭೇ ।
ಖ್ಯಾತೇ ಪುಣ್ಯತಮೇ ತೀರ್ಥೇ ನಿಮಜ್ಜೇತ್ಸುಕೃತಂ ಸ್ಮರನ್ ।
ಸೋಽಪಿ ಪುಣ್ಯಕೃತಾನ್ ಲೋಕಾನ್ನಿಸರ್ಗಾತ್ ಪ್ರತಿಪದ್ಯತೇ ॥೧೭॥

ಜಲಪ್ರವೇಶವನ್ನು ಮಾಡಲು ಬಯಸುವುದಾದರೆ ಎಲೌ ಶುಭಳೇ, ಅದೇ ವಿಧಾನದಿಂದ ಪ್ರಖ್ಯಾತವಾದ ಪುಣ್ಯತಮವಾದ ತೀರ್ಥದಲ್ಲಿ ಧರ್ಮವನ್ನು ಸ್ಮರಿಸುತ್ತಾ ಮುಳುಗಬೇಕು. ಅಂತಹವನೂ ಸಹ ಪುಣ್ಯಕರ್ಮಿಗಳ ಲೋಕವನ್ನು ಸ್ವಾಭಾವಿಕವಾಗಿಯೇ ಹೊಂದುತ್ತಾನೆ.

ತತಃ ಕಲ್ಯಶರೀರಸ್ಯ ಸಂತ್ಯಾಗಂ ಶೃಣು ತತ್ತ್ವತಃ ॥೧೮॥

ರಕ್ಷಾರ್ಥಂ ಕ್ಷತ್ರಿಯಸ್ಯೇಷ್ಟಃ ಪ್ರಜಾಪಾಲನಕಾರಣಾತ್ ।
ಯೋಧಾನಾಂ ಭರ್ತೃಪಿಂಡಾರ್ಥಂ ಗುರ್ವರ್ಥಂ ಬ್ರಹ್ಮಚಾರಿಣಾಮ್ ।
ಗೋಬ್ರಾಹ್ಮಣಾರ್ಥಂ ಗ್ರಾಮಾರ್ಥಂ ಸರ್ವೇಷಾಂ ಚ ವಿಧೀಯತೇ ॥

ಇನ್ನು ಶಕ್ತವಾದ ಶರೀರವುಳ್ಳವನು ಪ್ರಾಣತ್ಯಾಗ ಮಾಡುವ ವಿಧಾನವನ್ನು ಸರಿಯಾಗಿ ಕೇಳು. ಪ್ರಜಾಪಾಲನ ನಿಮಿತ್ತದಿಂದ ಪ್ರಜೆಗಳನ್ನು ರಕ್ಷಿಸಲು ಕ್ಷತ್ರಿಯನಿಗೆ ಶಕ್ತ ಶರೀರದ ತ್ಯಾಗವು ಇಷ್ಟವಾದುದು. ಭರ್ತೃಋಣವನ್ನು ತೀರಿಸುವುದಕ್ಕಾಗಿ ಯೋಧರಿಗೂ, ಗುರುಗಳ ಹಿತಕ್ಕಾಗಿ ಬ್ರಹ್ಮಚಾರಿಗಳಿಗೂ, ಗೋ-ಬ್ರಾಹ್ಮಣರ ಹಿತದ ಸಲುವಾಗಿ ಮತ್ತು ಗ್ರಾಮದ ಸಲುವಾಗಿ ಎಲ್ಲರಿಗೂ ಶಕ್ತವಾದ ಶರೀರತ್ಯಾಗವು ವಿಧಿಸಲ್ಪಡುತ್ತದೆ.

ಸ್ವರಾಜ್ಯರಕ್ಷಣಾರ್ಥಂ ವಾ ಕುನೃಪೈಃ ಪೀಡಿತಾಃ ಪ್ರಜಾಃ ।
ಮೋಕ್ತುಕಾಮಸ್ತ್ಯಜೇತ್ಪ್ರಾಣಾನ್ ಯುದ್ಧಮಾರ್ಗೇ ಯಥಾವಿಧಿ ॥೨೦॥

ಸುಸನ್ನದ್ಧೋ ವ್ಯವಸಿತಃ ಸಂಪ್ರವಿಶ್ಯಾಪರಾಙ್ಮುಖಃ ।
ಏವಂ ರಾಜಾ ಮೃತಃ ಸದ್ಯಃ ಸ್ವರ್ಗಲೋಕೇ ಮಹೀಯತೇ ॥೨೧॥

ತನ್ನ ರಾಜ್ಯವನ್ನು ರಕ್ಷಿಸುವ ಸಲುವಾಗಿ ಅಥವಾ ಕೆಟ್ಟರಾಜನಿಂದ ಪೀಡಿತರಾದ ಪ್ರಜೆಗಳನ್ನು ಅವನಿಂದ ಮೋಚನೆಗೊಳಿಸುವ ಸಲುವಾಗಿ ಯುದ್ಧಮಾರ್ಗದಲ್ಲಿ ವಿಧಿಗೆ ಅನುಗುಣವಾಗಿ ಶಸ್ತ್ರಸಜ್ಜಿತನಾಗಿ, ನಿರ್ಧಾರದಿಂದ ಕೂಡಿ, ರಣರಂಗವನ್ನು ಪ್ರವೇಶಿಸಿ ಹಿಂದಿರುಗದೆ ಪ್ರಾಣವನ್ನು ಬಿಡಬೇಕು. ಹೀಗೆ ಮರಣ ಹೊಂದಿದ ರಾಜನು ತಕ್ಷಣದಲ್ಲಿಯೇ ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ತಾದೃಶೀ ಸುಗತಿರ್ನಾಸ್ತಿ ಕ್ಷತ್ರಿಯಸ್ಯ ವಿಶೇಷತಃ ।
ಭೃತ್ಯೋ ವಾ ಭರ್ತೃಪಿಂಡಾರ್ಥಂ ಭರ್ತೃಕರ್ಮಣ್ಯುಪಸ್ಥಿತೇ ॥೨೨॥

ಕುರ್ವಂಸ್ತತ್ರ ತು ಸಾಹಾಯ್ಯಮಾತ್ಮಪ್ರಾಣಾನಪೇಕ್ಷಯಾ ।
ಸ್ವಾಮ್ಯರ್ಥಂ ಸಂತ್ಯಜೇತ್ ಪ್ರಾಣಾನ್ ಪುಣ್ಯಾಲ್ಲೋಕಾನ್ ಸ ಗಚ್ಛತಿ ।
ಸ್ಪೃಹಣೀಯಃ ಸುರಗಣೈಸ್ತತ್ರ ನಾಸ್ತಿ ವಿಚಾರಣಾ ॥

ಕ್ಷತ್ರಿಯನಿಗೆ ಅಂತಹ ವಿಶೇಷವಾದ ಸದ್ಗತಿಯು ಬೇರೆ ಯಾವುದರಿಂದಲೂ ಬರುವುದಿಲ್ಲ. ಅಥವಾ ಭೃತ್ಯನಾದರೂ ಸ್ವಾಮಿಯ ಋಣವನ್ನು ತೀರಿಸಲು ಸ್ವಾಮಿಯ ಕಾರ್ಯವು ಪ್ರಾಪ್ತವಾಗಿರುವಾಗ ತನ್ನ ಪ್ರಾಣವನ್ನು ಅಪೇಕ್ಷಿಸದೆ ಸಹಾಯವನ್ನು ಮಾಡುತ್ತಾ , ಸ್ವಾಮಿಯ ಸಲುವಾಗಿ ಪ್ರಾಣವನ್ನು ತ್ಯಜಿಸಿದರೆ ಅವನೂ

ಪುಣ್ಯಲೋಕವನ್ನು ಪಡೆಯುತ್ತಾನೆ. ಅವನು ಅಲ್ಲಿ ದೇವತಾ ಸಮೂಹದಿಂದ ಆಸೆಯಿಂದ ಸ್ವೀಕರಿಸಲ್ಪಡುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಏವಂ ಗೋಬ್ರಾಹ್ಮಣಾರ್ಥಂ ವಾ ದೀನಾರ್ಥಂ ವಾ ತ್ಯಜೇತ್ತನುಮ್ ॥

ಸೋಽಪಿ ಪುಣ್ಯಮವಾಪ್ನೋತಿ ಆನೃಶಂಸ್ಯವ್ಯಪೇಕ್ಷಯಾ ।
ಇತ್ಯೇತೇ ಜೀವಿತತ್ಯಾಗೇ ಮಾರ್ಗಾಸ್ತೇ ಸಮುದಾಹೃತಾಃ ॥೨೫॥

ಹೀಗೆ ಗೋ-ಬ್ರಾಹ್ಮಣರ ಹಿತಕ್ಕಾಗಲೀ ಅಥವಾ ದೀನರ ನಿಮಿತ್ತದಿಂದಾಗಲೀ ದೇಹತ್ಯಾಗವನ್ನು ಮಾಡಬೇಕು. ಅಂತಹವನೂ ಸಹ ದಯಾನಿಮಿತ್ತದಿಂದ ಪುಣ್ಯಲೋಕಗಳನ್ನು ಪಡೆಯುತ್ತಾನೆ. ಇವು ಜೀವನವನ್ನು ತೊರೆಯಲು ಇರುವ ಮಾರ್ಗಗಳು. ಇದನ್ನು ನಿನಗೆ ಹೇಳಿದ್ದೇನೆ.

ಕಾಮಾತ್ ಕ್ರೋಧಾದ್ ಭಯಾದ್ವಾಽಪಿ ಚೇತ್ಸಂತ್ಯಜೇತ್ತನುಮ್ ।
ಸೋಽನಂತಂ ನರಕಂ ಯಾತಿ ಆತ್ಮಹಂತೃತ್ವಕಾರಣಾತ್ ॥೨೬॥

ಕಾಮದಿಂದಾಗಲೀ, ಕ್ರೋಧದಿಂದಾಗಲೀ, ಭಯದಿಂದಾಗಲೀ ದೇಹತ್ಯಾಗವನ್ನು ಮಾಡಿದರೆ ಅವನು ಆತ್ಮಹತ್ಯೆಯನ್ನು ಮಾಡಿಕೊಂಡ ಕಾರಣದಿಂದ ಅನಂತವಾದ ನರಕವನ್ನು ಹೊಂದುತ್ತಾನೆ.

ಸ್ವಭಾವಮರಣಂ ನಾಮ ನ ತು ಚಾತ್ಮೇಚ್ಛಯಾ ಭವೇತ್ ।
ಯಥಾ ಮೃತಾನಾಂ ಯತ್ಕಾರ್ಯಂ ತನ್ಮೇ ಶೃಣು ಯಥಾವಿಧಿ ॥೨೭॥

ಸ್ವಾಭಾವಿಕ ಮರಣವೆಂದರೆ ಅದು ತನ್ನ ಇಚ್ಛೆಯಿಂದ ಉಂಟು ಮಾಡಿಕೊಂಡ ಮರಣವಲ್ಲ. ಇನ್ನು ಮೃತರಿಗೆ ವಿಧಿಗೆ ಅನುಸಾರವಾಗಿ ಯಾವ ಕಾರ್ಯವನ್ನು ಮಾಡಬೇಕೆಂಬುದನ್ನು ನನ್ನಿಂದ ಕೇಳು.

ತತ್ರಾಪಿ ಬೋಧಸಂತ್ಯಾಗಾನ್ಮೂಢತ್ಯಾಗೋ ವಿಶಿಷ್ಯತೇ ।
ಭೂಮೌ ಸಂವೇಶಯೇದ್ ದೇಹಂ ನರಸ್ಯ ವಿನಶಿಷ್ಯತಃ ॥೨೮॥

ಅಲ್ಲಿಯೂ ಜ್ಞಾನವಿರುವವನ ತ್ಯಾಗಕ್ಕಿಂತಲೂ, ಪ್ರಜ್ಞಾನಹೀನನಾದವನ ತ್ಯಾಗವು ವಿಶಿಷ್ಟವಾದುದು. ಸಾಯಲಿರುವ ಮನುಷ್ಯನ ದೇಹವನ್ನು ಭೂಮಿಯಲ್ಲಿ ಮಲಗಿಸಬೇಕು.

ನಿರ್ಹೃವಂ ವೃಣುಯಾತ್ ಸದ್ಯೋ ವಾಸಸಾ ತು ಕಲೇವರಮ್ ।
ಮಾಲ್ಯಗಂಧೈರಲಂಕೃತ್ಯ ಸುವರ್ಣೇನ ಚ ಭಾಮಿನಿ ॥೨೯॥

ಜೀವನು ಹೋದ ತಕ್ಷಣವೇ ಆ ಶರೀರವನ್ನು ವಸ್ತ್ರದಿಂದ ಮುಚ್ಚಬೇಕು. ಎಲೌ ಭಾಮಿನಿಯೇ, ದೇಹವನ್ನು ಮಾಲ್ಯ-ಗಂಧಗಳಿಂದಲೂ, ಸುವರ್ಣದಿಂದಲೂ ಅಲಂಕಾರ ಮಾಡಿ ವಸ್ತ್ರದಿಂದ ಮುಚ್ಚಬೇಕು.

ಶ್ಮಶಾನೇ ದಕ್ಷಿಣೇ ದೇಶೇ ಚಿತಾಗ್ನೌ ಪ್ರದಹೇನ್ಮೃತಮ್ ।
ಅಥವಾ ನಿಕ್ಷಿಪೇದ್ ಭೂಮೌ ಶರೀರಂ ಜೀವವರ್ಜಿತಮ್ ॥೩೦॥

ಸ್ಮಶಾನದಲ್ಲಿ ದಕ್ಷಿಣಭಾಗದಲ್ಲಿ ಚಿತಾಗ್ನಿಯಲ್ಲಿ ಮೃತದೇಹವನ್ನು ದಹಿಸಬೇಕು ಅಥವಾ ಮೃತಶರೀರವನ್ನು ಭೂಮಿಯಲ್ಲೂ ಹೂಳಬಹುದು.

ದಿವಾ ಚ ಶುಕ್ಲಪಕ್ಷಶ್ಚ ಉತ್ತರಾಯಣಮೇವ ಚ ।
ಮುಮೂರ್ಷೂಣಾಂ ಪ್ರಶಸ್ತಾನಿ ವಿಪರೀತಂ ತು ಗರ್ಹಿತಮ್ ॥೩೧॥

ಮರಣವನ್ನು ಹೊಂದುವವರಿಗೆ ಹಗಲು, ಶುಕ್ಲಪಕ್ಷ ಮತ್ತು ಉತ್ತರಾಯಣಗಳು ಪ್ರಶಸ್ತವಾದವುಗಳು. ರಾತ್ರಿ, ಕೃಷ್ಣಪಕ್ಷ ಮತ್ತು ದಕ್ಷಿಣಾಯನಗಳು ನಿಂದಿತವಾದವುಗಳು.

ಔದಕಂ ಚಾಷ್ಟಕಾಶ್ರಾದ್ಧಂ ಬಹುಭಿರ್ಬಹುಶಃ ಕೃತಮ್ ।
ಆಪ್ಯಾಯನಂ ಮೃತಾನಾಂ ತತ್ ಪರಲೋಕೇ ಭವೇಚ್ಛುಭಮ್ ।
ಏತತ್ ಸರ್ವಂ ಮಯಾ ಪ್ರೋಕ್ತಂ ಮಾನುಷಾಣಾಂ ಹಿತಾಯ ಚ ॥

ಅನೇಕ ಜನರು ಅನೇಕ ರೀತಿಯಲ್ಲಿ ಮಾಡಿದ ಉದಕಕ್ರಿಯೆ ಮತ್ತು ಅಷ್ಟಕ ಶ್ರಾದ್ಧಗಳು ಮೃತರಾದವರಿಗೆ ಪರಲೋಕದಲ್ಲಿ ಬಲವೃದ್ಧಿಯನ್ನು ಮತ್ತು ಶುಭವನ್ನುಂಟು ಮಾಡುತ್ತವೆ. ಮನುಷ್ಯರ ಹಿತಕ್ಕಾಗಿ ನಾನು ಇವೆಲ್ಲವನ್ನೂ ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ಪ್ರಾಣತ್ಯಾಗವಿಧಿರ್ನಾಮ ಸಪ್ತವಿಂಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಇಪ್ಪತ್ತೆಂಟನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಮೋಕ್ಷಧರ್ಮದ ಶ್ರೇಷ್ಠತ್ವಕಥನ.

ಉಮಾ

ದೇವದೇವ ನಮಸ್ತೇಽಸ್ತು ಕಾಲಸೂದನ ಶಂಕರ ।
ಲೋಕೇಷು ವಿವಿಧಾ ಧರ್ಮಾಸ್ತ್ವತ್ಪ್ರಸಾದಾನ್ಮಯಾ ಶ್ರುತಾಃ ॥೧॥

ಉಮಾ– ದೇವದೇವನೇ, ಕಾಲಸಂಹಾರಕನೇ, ಶಂಕರನೇ, ನಿನಗೆ ನಮಸ್ಕಾರ. ನಿನ್ನ ಅನುಗ್ರಹದಿಂದ ಲೋಕದ ವಿವಿಧ ಧರ್ಮಗಳನ್ನು ನಾನು ಕೇಳಿದೆನು.

ವಿಶಿಷ್ಟಂ ಸರ್ವಧರ್ಮೇಭ್ಯಃ ಶಾಶ್ವತಂ ಧ್ರುವಮವ್ಯಯಮ್ ।
ಶ್ರೋತುಮಿಚ್ಛಾಮ್ಯಹಂ ಧರ್ಮಂ ತತ್ರ ಮುಹ್ಯತಿ ಮೇ ಮನಃ ॥೨॥

ಎಲ್ಲ ಧರ್ಮಗಳಿಗಿಂತಲೂ ಶ್ರೇಷ್ಠವಾದ, ಶಾಶ್ವತವಾದ, ನಾಶರಹಿತವಾದ ಧರ್ಮವನ್ನು ಕೇಳಲು ಬಯಸುತ್ತೇನೆ. ಆ ವಿಷಯದಲ್ಲಿ ನನ್ನ ಮನಸ್ಸು ಮೋಹಕ್ಕೆ ಒಳಗಾಗಿದೆ.

ಕೇಚಿನ್ಮೋಕ್ಷಂ ಪ್ರಶಂಸಂತಿ ಕೇಚಿದ್ ಯಜ್ಞಫಲಂ ದ್ವಿಜಾಃ ।
ವಾನಪ್ರಸ್ಥಂ ಪುನಃ ಕೇಚಿದ್ ಗಾರ್ಹಸ್ಥ್ಯಂ ಕೇಚಿದಾಶ್ರಮಮ್ ॥೩॥

ಕೆಲವರು ಬ್ರಾಹ್ಮಣರು ಮೋಕ್ಷವನ್ನು ಪ್ರಶಂಸಿಸುತ್ತಾರೆ. ಕೆಲವರು ಯಜ್ಞಫಲವನ್ನು ಪ್ರಶಂಸಿಸುತ್ತಾರೆ. ಕೆಲವರು ವಾನಪ್ರಸ್ಥವನ್ನೂ, ಇನ್ನು ಕೆಲವರು ಗೃಹಸ್ಥಾಶ್ರಮವನ್ನೂ ಪ್ರಶಂಸಿಸುತ್ತಾರೆ.

ರಾಜಧರ್ಮಾಶ್ರಯಂ ಕೇಚಿತ್ ಕೇಚಿತ್ಸ್ವಾಧ್ಯಾಯಮೇವ ಚ ।
ಬ್ರಹ್ಮಚರ್ಯಾಶ್ರಮಂ ಕೇಚಿತ್ ಕೇಚಿದ್ ವಾಕ್ಸಂಯಮಾಶ್ರಯಮ್ ॥೪॥

ಕೆಲವರು ರಾಜಧರ್ಮವನ್ನೂ, ಕೆಲವರು ಸ್ವಾಧ್ಯಾಯವನ್ನೂ, ಕೆಲವರು ಬ್ರಹ್ಮಚರ್ಯಾಶ್ರಮವನ್ನೂ, ಕೆಲವರು ಮೌನವನ್ನೂ ಪ್ರಶಂಸಿಸುತ್ತಾರೆ.

ಮಾತರಂ ಪಿತರಂ ಕೇಚಿತ್ ಸೇವಮಾನಾ ದಿವಂ ಗತಾಃ ।
ಅಹಿಂಸಯಾ ಪರಃ ಸ್ವರ್ಗೇ ಸತ್ಯೇನ ಚ ಮಹೀಯತೇ ॥೫॥

ಕೆಲವರು ತಂದೆ-ತಾಯಿಯರ ಸೇವೆಯನ್ನು ಮಾಡಿ ಸ್ವರ್ಗಕ್ಕೆ ಹೋಗಿದ್ದಾರೆ. ಇನ್ನೊಬ್ಬನು ಅಹಿಂಸೆಯಿಂದಲೂ, ಸತ್ಯದಿಂದಲೂ ಸ್ವರ್ಗದಲ್ಲಿ ಪೂಜಿಸಲ್ಪಡುತ್ತಾನೆ.

ಆಹವೇಽಭಿಮುಖಾಃ ಕೇಚಿನ್ನಿಹತಾಸ್ತ್ರಿದಿವಂ ಗತಾಃ ।
ಕೇಚಿದುಂಛವೃತ್ತೈಃ ಸಿದ್ಧಾಃ ಸ್ವರ್ಗಮಾರ್ಗಂ ಸಮಾಶ್ರಿತಾಃ ॥೬॥

ಕೆಲವರು ಯುದ್ಧದಲ್ಲಿ ಶತ್ರುಗಳಿಗೆ ಅಭಿಮುಖವಾಗಿ ಮಡಿದು ಸ್ವರ್ಗಕ್ಕೆ ಹೋಗಿದ್ದಾರೆ. ಇನ್ನು ಕೆಲವರು ಉಂಛವೃತ್ತಿಯಿಂದ ಸಿದ್ಧರಾಗಿ ಸ್ವರ್ಗಮಾರ್ಗದಲ್ಲಿ ಹೋಗುತ್ತಿದ್ದಾರೆ.

ಆರ್ಜವೇನಾಪರೇ ಯುಕ್ತಾ ಮಹತಾಂ ಪೂಜನೇ ರತಾಃ ।
ಋಜವೋ ನಾಕಪೃಷ್ಠೇ ತು ಶುದ್ಧಾತ್ಮಾನಃ ಪ್ರತಿಷ್ಠಿತಾಃ ॥೭॥

ಇನ್ನು ಕೆಲವರು ಋಜುತ್ವದಿಂದ ಕೂಡಿ, ಮಹಾತ್ಮರ ಪೂಜೆಯಲ್ಲಿ ರತರಾಗಿ ಶುದ್ಧಾತ್ಮರಾಗಿ ಸ್ವರ್ಗದಲ್ಲಿ ನೆಲೆಸಿದ್ದಾರೆ.

ಏವಂ ಬಹುವಿಧೈರ್ಲೋಕೇ ಧರ್ಮದ್ವಾರೈಃ ಸುಸಂವೃತೈಃ ।
ಮಮಾಪಿ ಮತಿರಾವಿದ್ಧಾ ಮೇಘಲೇಖೇವ ವಾಯುನಾ ॥೮॥

ಹೀಗೆ ಲೋಕದಲ್ಲಿ ಬಹುವಿಧವಾದ ಚೆನ್ನಾಗಿ ಸ್ವೀಕರಿಸಿದ ಧರ್ಮದ್ವಾರಗಳಿಂದ ನನ್ನ ಬುದ್ಧಿಯೂ ಸಹ ಗಾಳಿಯಿಂದ ಮೇಘಮಾಲೆಯು ಹೊಯ್ದಾಡಿದಂತೆ ಹೊಯ್ದಾಡುತ್ತಿದೆ.

ಏತಸ್ಮಿನ್ ಸಂಶಯಸ್ಥಾನೇ ಸಂಶಯಚ್ಛೇದಕಾರಿ ಯತ್ ।
ವಚನಂ ಬ್ರೂಹಿ ದೇವೇಶ ನಿಶ್ಚಯಜ್ಞಾನಸಂಜ್ಞಿತಮ್ ॥೯॥

ದೇವೇಶನೇ, ಇಂತಹ ಸಂಶಯವಿರುವಾಗ ನಿಶ್ಚಯಜ್ಞಾನರೂಪವಾದ ಸಂಶಯವನ್ನು ಛೇದಿಸುವ ವಚನವನ್ನು ಹೇಳು.

ನಾರದಃ

ಏವಂ ಪೃಷ್ಟಃ ಸ್ವಯಂ ದೇವ್ಯಾ ಮಹಾದೇವಃ ಪಿನಾಕಧೃಕ್ ।
ಪ್ರೋವಾಚ ಮಧುರಂ ವಾಕ್ಯಂ ಸೂಕ್ಷ್ಮಮಧ್ಯಾತ್ಮಸಂಜ್ಞಿತಮ್ ॥೧೦॥

ಇನ್ನೂರ ಇಪ್ಪತ್ತೆಂಟನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಮೋಕ್ಷಧರ್ಮದ ಶ್ರೇಷ್ಠತ್ವಕಥನ.

ಉಮಾ

ದೇವದೇವ ನಮಸ್ತೇಽಸ್ತು ಕಾಲಸೂದನ ಶಂಕರ ।
ಲೋಕೇಷು ವಿವಿಧಾ ಧರ್ಮಾಸ್ತ್ವತ್ಪ್ರಸಾದಾನ್ಮಯಾ ಶ್ರುತಾಃ ॥೧॥

ಉಮಾ– ದೇವದೇವನೇ, ಕಾಲಸಂಹಾರಕನೇ, ಶಂಕರನೇ, ನಿನಗೆ ನಮಸ್ಕಾರ. ನಿನ್ನ ಅನುಗ್ರಹದಿಂದ ಲೋಕದ ವಿವಿಧ ಧರ್ಮಗಳನ್ನು ನಾನು ಕೇಳಿದೆನು.

ವಿಶಿಷ್ಟಂ ಸರ್ವಧರ್ಮೇಭ್ಯಃ ಶಾಶ್ವತಂ ಧ್ರುವಮವ್ಯಯಮ್ ।
ಶ್ರೋತುಮಿಚ್ಛಾಮ್ಯಹಂ ಧರ್ಮಂ ತತ್ರ ಮುಹ್ಯತಿ ಮೇ ಮನಃ ॥೨॥

ಎಲ್ಲ ಧರ್ಮಗಳಿಗಿಂತಲೂ ಶ್ರೇಷ್ಠವಾದ, ಶಾಶ್ವತವಾದ, ನಾಶರಹಿತವಾದ ಧರ್ಮವನ್ನು ಕೇಳಲು ಬಯಸುತ್ತೇನೆ. ಆ ವಿಷಯದಲ್ಲಿ ನನ್ನ ಮನಸ್ಸು ಮೋಹಕ್ಕೆ ಒಳಗಾಗಿದೆ.

ಕೇಚಿನ್ಮೋಕ್ಷಂ ಪ್ರಶಂಸಂತಿ ಕೇಚಿದ್ ಯಜ್ಞಫಲಂ ದ್ವಿಜಾಃ ।
ವಾನಪ್ರಸ್ಥಂ ಪುನಃ ಕೇಚಿದ್ ಗಾರ್ಹಸ್ಥ್ಯಂ ಕೇಚಿದಾಶ್ರಮಮ್ ॥೩॥

ಕೆಲವರು ಬ್ರಾಹ್ಮಣರು ಮೋಕ್ಷವನ್ನು ಪ್ರಶಂಸಿಸುತ್ತಾರೆ. ಕೆಲವರು ಯಜ್ಞಫಲವನ್ನು ಪ್ರಶಂಸಿಸುತ್ತಾರೆ. ಕೆಲವರು ವಾನಪ್ರಸ್ಥವನ್ನೂ, ಇನ್ನು ಕೆಲವರು ಗೃಹಸ್ಥಾಶ್ರಮವನ್ನೂ ಪ್ರಶಂಸಿಸುತ್ತಾರೆ.

ರಾಜಧರ್ಮಾಶ್ರಯಂ ಕೇಚಿತ್ ಕೇಚಿತ್ಸ್ವಾಧ್ಯಾಯಮೇವ ಚ ।
ಬ್ರಹ್ಮಚರ್ಯಾಶ್ರಮಂ ಕೇಚಿತ್ ಕೇಚಿದ್ ವಾಕ್ಸಂಯಮಾಶ್ರಯಮ್ ॥೪॥

ಕೆಲವರು ರಾಜಧರ್ಮವನ್ನೂ, ಕೆಲವರು ಸ್ವಾಧ್ಯಾಯವನ್ನೂ, ಕೆಲವರು ಬ್ರಹ್ಮಚರ್ಯಾಶ್ರಮವನ್ನೂ, ಕೆಲವರು ಮೌನವನ್ನೂ ಪ್ರಶಂಸಿಸುತ್ತಾರೆ.

ಮಾತರಂ ಪಿತರಂ ಕೇಚಿತ್ ಸೇವಮಾನಾ ದಿವಂ ಗತಾಃ ।
ಅಹಿಂಸಯಾ ಪರಃ ಸ್ವರ್ಗೇ ಸತ್ಯೇನ ಚ ಮಹೀಯತೇ ॥೫॥

ಕೆಲವರು ತಂದೆ-ತಾಯಿಯರ ಸೇವೆಯನ್ನು ಮಾಡಿ ಸ್ವರ್ಗಕ್ಕೆ ಹೋಗಿದ್ದಾರೆ. ಇನ್ನೊಬ್ಬನು ಅಹಿಂಸೆಯಿಂದಲೂ, ಸತ್ಯದಿಂದಲೂ ಸ್ವರ್ಗದಲ್ಲಿ ಪೂಜಿಸಲ್ಪಡುತ್ತಾನೆ.

ಆಹವೇऽಭಿಮುಖಾಃ ಕೇಚಿನ್ನಿಹತಾಸ್ತ್ರಿದಿವಂ ಗತಾಃ ।
ಕೇಚಿದುಂಛವ್ರತೈಃ ಸಿದ್ಧಾಃ ಸ್ವರ್ಗಮಾರ್ಗಂ ಸಮಾಶ್ರಿತಾಃ ॥೬॥

ಕೆಲವರು ಯುದ್ಧದಲ್ಲಿ ಶತ್ರುಗಳಿಗೆ ಅಭಿಮುಖವಾಗಿ ಮಡಿದು ಸ್ವರ್ಗಕ್ಕೆ ಹೋಗಿದ್ದಾರೆ. ಇನ್ನು ಕೆಲವರು ಉಂಛವೃತ್ತಿಯಿಂದ ಸಿದ್ಧರಾಗಿ ಸ್ವರ್ಗಮಾರ್ಗದಲ್ಲಿ ಹೋಗುತ್ತಿದ್ದಾರೆ.

ಆರ್ಜವೇನಾಪರೇ ಯುಕ್ತಾ ಮಹತಾಂ ಪೂಜನೇ ರತಾಃ ।
ಋಜವೋ ನಾಕಪೃಷ್ಠೇ ತು ಶುದ್ಧಾತ್ಮಾನಃ ಪ್ರತಿಷ್ಠಿತಾಃ ॥೭॥

ಇನ್ನು ಕೆಲವರು ಋಜುತ್ವದಿಂದ ಕೂಡಿ, ಮಹಾತ್ಮರ ಪೂಜೆಯಲ್ಲಿ ರತರಾಗಿ ಶುದ್ಧಾತ್ಮರಾಗಿ ಸ್ವರ್ಗದಲ್ಲಿ ನೆಲೆಸಿದ್ದಾರೆ.

ಏವಂ ಬಹುವಿಧೈರ್ಲೋಕೇ ಧರ್ಮದ್ವಾರೈಃ ಸುಸಂವೃತೈಃ ।
ಮಮಾಪಿ ಮತಿರಾವಿದ್ಧಾ ಮೇಘಲೇಖೇವ ವಾಯುನಾ ॥೮॥

ಹೀಗೆ ಲೋಕದಲ್ಲಿ ಬಹುವಿಧವಾದ ಚೆನ್ನಾಗಿ ಸ್ವೀಕರಿಸಿದ ಧರ್ಮದ್ವಾರಗಳಿಂದ ನನ್ನ ಬುದ್ಧಿಯೂ ಸಹ ಗಾಳಿಯಿಂದ ಮೇಘಮಾಲೆಯು ಹೊಯ್ದಾಡಿದಂತೆ ಹೊಯ್ದಾಡುತ್ತಿದೆ.

ಏತಸ್ಮಿನ್ ಸಂಶಯಸ್ಥಾನೇ ಸಂಶಯಚ್ಛೇದಕಾರಿ ಯತ್ ।
ವಚನಂ ಬ್ರೂಹಿ ದೇವೇಶ ನಿಶ್ಚಯಜ್ಞಾನಸಂಜ್ಞಿತಮ್ ॥೯॥

ದೇವೇಶನೇ, ಇಂತಹ ಸಂಶಯವಿರುವಾಗ ನಿಶ್ಚಯಜ್ಞಾನರೂಪವಾದ ಸಂಶಯವನ್ನು ಛೇದಿಸುವ ವಚನವನ್ನು ಹೇಳು.

ನಾರದಃ

ಏವಂ ಪೃಷ್ಟಃ ಸ್ವಯಂ ದೇವ್ಯಾ ಮಹಾದೇವಃ ಪಿನಾಕಧೃಕ್ ।
ಪ್ರೋವಾಚ ಮಧುರಂ ವಾಕ್ಯಂ ಸೂಕ್ಷ್ಮಮಧ್ಯಾತ್ಮಸಂಜ್ಞಿತಮ್ ॥೧೦॥

ನಾರದ– ದೇವಿಯಿಂದ ಸ್ವತಃ ಹೀಗೆ ಕೇಳಲ್ಪಟ್ಟ, ಪಿನಾಕಧಾರಿಯಾದ ಮಹಾದೇವನು ಮಧುರವಾದ ಮಾತುಗಳಿಂದ ಸೂಕ್ಷ್ಮವಾದ ಅಧ್ಯಾತ್ಮ ಶಬ್ದದಿಂದ ಕರೆಸಲ್ಪಡುವ ವಾಕ್ಯಗಳನ್ನು ಮಾತನಾಡಿದನು.

ಮಹೇಶ್ವರಃ

ನ್ಯಾಯತಸ್ತ್ವಂ ಮಹಾಭಾಗೇ ಶ್ರೋತುಕಾಮಾऽಸಿ ನಿಶ್ಚಯಮ್ ।
ಏತದೇವ ವಿಶಿಷ್ಟಂ ತೇ ಯತ್ತ್ವಂ ಪೃಚ್ಛಸಿ ಮಾಂ ಪ್ರಿಯೇ ॥೧೧॥

ಮಹೇಶ್ವರ– ಮಹಾಭಾಗ್ಯವಂತಳೇ, ಪ್ರಿಯೆಯೇ, ನೀನು ನ್ಯಾಯದಿಂದ ಕೇಳಲು ಬಯಸುತ್ತಿದ್ದೀಯೆ ಎಂಬುದು ನಿಶ್ಚಿತವಾದುದು. ನೀನು ನನ್ನನ್ನು ಈ ಪ್ರಶ್ನೆಯನ್ನು ಕೇಳುತ್ತಿರುವುದೇ ಬಹಳ ಶ್ರೇಷ್ಠವಾದುದು.

ಸರ್ವತ್ರ ವಿಹಿತೋ ಧರ್ಮಃ ಸ್ವರ್ಗಲೋಕಫಲಾಶ್ರಿತಃ ।
ಬಹುದ್ವಾರಸ್ಯ ಧರ್ಮಸ್ಯ ನೇಹಾಸ್ತಿ ವಿಫಲಾ ಕ್ರಿಯಾ ॥೧೨॥

ಸ್ವರ್ಗಲೋಕರೂಪವಾದ ಫಲವನ್ನು ಉದ್ದೇಶಿಸಿ ಎಲ್ಲ ಕಡೆಗಳಲ್ಲಿಯೂ ಅನೇಕ ಧರ್ಮಗಳು ಹೇಳಲ್ಪಟ್ಟಿವೆ. ಬಹುದ್ವಾರವುಳ್ಳ ಧರ್ಮದ ಯಾವ ಕ್ರಿಯೆಯೂ ವ್ಯರ್ಥವಲ್ಲ.

ಯಸ್ಮಿನ್ಯಸ್ಮಿಂಶ್ಚ ವಿಷಯೇ ಯೋಯೋ ಯಾತಿ ವಿನಿಶ್ಚಯಮ್ ।
ತಂ ತಮೇವಾಭಿಜಾನಾತಿ ನಾನ್ಯಂ ಧರ್ಮಂ ಶುಚಿಸ್ಮಿತೇ ॥೧೩॥

ಎಲೌ ಶುಚಿಸ್ಮಿತೆಯೇ, ಯಾವ ಯಾವ ವಿಷಯದಲ್ಲಿ ಯಾವ ಯಾವನು ನಿರ್ಧಾರವನ್ನು ಹೊಂದುತ್ತಾನೆಯೋ ಅವನು ಅದನ್ನೇ ಧರ್ಮವೆಂದು ತಿಳಿಯುತ್ತಾನೆ. ಅವನು ಇನ್ನೊಂದು ಧರ್ಮವನ್ನು ತಿಳಿಯುವುದಿಲ್ಲ.

ಶೃಣು ದೇವಿ ಸಮಾಸೇನ ಮೋಕ್ಷದ್ವಾರಮನುತ್ತಮಮ್ ।
ಏತದ್ಧಿ ಸರ್ವಧರ್ಮಾಣಾಂ ವಿಶಿಷ್ಟಂ ಗುಹ್ಯಮವ್ಯಯಮ್ ॥೧೪॥

ದೇವಿಯೇ, ಶ್ರೇಷ್ಠವಾದ ಮೋಕ್ಷದ್ವಾರವನ್ನು ಸಂಕ್ಷೇಪವಾಗಿ ಕೇಳು. ಇದು ಎಲ್ಲ ಧರ್ಮಗಳಿಗಿಂತಲೂ ಶ್ರೇಷ್ಠವಾದುದು, ರಹಸ್ಯವಾದುದು ಮತ್ತು ಅವ್ಯಯವಾದುದು.

ನಾಸ್ತಿ ಮೋಕ್ಷಾತ್ ಪರಂ ದೇವಿ ಮೋಕ್ಷ ಏವ ಪರಾ ಗತಿಃ ।
ಸುಖಮಾತ್ಯಂತಿಕಂ ಶ್ರೇಷ್ಠಮನಿವರ್ತಿ ಚ ತದ್ವಿದುಃ ॥೧೫॥

ದೇವಿಯೇ, ಮೋಕ್ಷಕ್ಕಿಂತಲೂ ಶ್ರೇಷ್ಠವಾದುದು ಯಾವುದೂ ಇಲ್ಲ. ಮೋಕ್ಷವೇ ಶ್ರೇಷ್ಠವಾದ ಗಮ್ಯಸ್ಥಾನ. ಅಲ್ಲಿ ಆತ್ಯಂತಿಕವಾದ ಶ್ರೇಷ್ಠವಾದ ಸುಖವೂ ಮತ್ತು ಅನಿವೃತ್ತಿಯೂ ಇದೆ ಎಂದು ಜ್ಞಾನಿಗಳು ತಿಳಿಯುತ್ತಾರೆ.

ನಾತ್ರ ದೇವಿ ಜರಾಮೃತ್ಯೂ ಶೋಕೋ ವಾ ದುಃಖಮೇವ ವಾ ।
ಅನುತ್ತಮಮಚಿಂತ್ಯಂ ಚ ತದ್ ದೇವಿ ಪರಮಂ ಸುಖಮ್ ॥೧೬॥

ದೇವಿಯೇ, ಅಲ್ಲಿ ಜರಾ-ಮರಣಗಳಾಗಲೀ, ಶೋಕ-ದುಃಖಗಳಾಗಲೀ ಇಲ್ಲ. ದೇವಿಯೇ, ಅಲ್ಲಿಯ ಪರಮಸುಖವು ಅತ್ಯಂತ ಶ್ರೇಷ್ಠವಾದುದು ಮತ್ತು ಚಿಂತನೆಯನ್ನು ಮೀರಿದುದು.

ಜ್ಞಾನಾನಾಮುತ್ತಮಂ ಜ್ಞಾನಂ ಮೋಕ್ಷಜ್ಞಾನಂ ವಿದುರ್ಬುಧಾಃ ।
ಋಷಿಭಿರ್ದೇವಸಂಘೈಶ್ಚ ಪ್ರೋಚ್ಯತೇ ಪರಮಂ ಪದಮ್ ॥೧೭॥

ಎಲ್ಲ ಜ್ಞಾನಗಳಲ್ಲಿ ಮೋಕ್ಷಸಾಧನವಾದ ಜ್ಞಾನವು ಶ್ರೇಷ್ಠವಾದುದೆಂದು ಜ್ಞಾನಿಗಳು ತಿಳಿಯುತ್ತಾರೆ. ಋಷಿಗಳು ಮತ್ತು ದೇವತೆಗಳು ಮೋಕ್ಷವನ್ನು ಪರಮಪದವೆಂದು ಹೇಳುತ್ತಾರೆ.

ನಿತ್ಯಮಕ್ಷರಮಕ್ಷೋಭ್ಯಮಜರಂ ಶಾಶ್ವತಂ ಶಿವಮ್ ।
ಉಶಂತಿ ತತ್ಪದಂ ಪ್ರಾಜ್ಞಾಃ ಸ್ಪೃಹಣೀಯಂ ಸುರೋತ್ತಮೈಃ ॥೧೮॥

ಮೋಕ್ಷವು ನಿತ್ಯವಾದುದು, ವಿಕಾರವನ್ನು ಹೊಂದದಿರುವಂತಹದು, ಅಲುಗಾಡಿಸಲು ಅಸಾಧ್ಯವಾದುದು, ಜರೆಯನ್ನು ಹೊಂದದಿರುವಂತಹದು, ಶಾಶ್ವತವಾದುದು ಮತ್ತು ಮಂಗಳಪ್ರದವಾದುದು. ಸುರಶ್ರೇಷ್ಠರಿಂದ ಬಯಸಲ್ಪಡುವ ಆ ಸ್ಥಾನವನ್ನು ಪ್ರಾಜ್ಞರು ಬಯಸುತ್ತಾರೆ.

ದುಃಖಾದಿ ಚ ದುರಂತಂ ಚ ಸಂಕ್ಷಯಂ ಚ ವಿರೋಧಿ ಚ ।
ಮಿಥಃ ಸತತಕಾರ್ಯಂ ಚ ತ್ರಿವರ್ಗಸುಖಮುಚ್ಯತೇ ॥೧೯॥

ತ್ರಿವರ್ಗದಿಂದ ಉಂಟಾಗುವ ಸುಖವು ಮೊದಲು ದುಃಖದಿಂದ ಕೂಡಿರುತ್ತದೆ. ಕೊನೆಯಲ್ಲೂ ದುಃಖದಿಂದ ಕೂಡಿರುತ್ತದೆ. ನಾಶವನ್ನು ಹೊಂದುತ್ತದೆ. ಶ್ರೇಯಸ್ಸಿಗೆ ವಿರೋಧಿಯಾಗಿರುತ್ತದೆ ಮತ್ತು ಸತತವಾಗಿ ಕಾರ್ಯವನ್ನು ಮಾಡಿಸುತ್ತದೆ.

ತಸ್ಮಾನ್ಮೋಕ್ಷಃ ಪ್ರಧಾನಸ್ತು ತ್ರಿವರ್ಗಾಚ್ಚ ವಿಶೇಷತಃ ।
ಮೋಕ್ಷಸ್ಯ ತಸ್ಯ ಮಾರ್ಗೋ೯ಯಂ ಶ್ರೂಯತಾಂ ಶುಭಲಕ್ಷಣೇ ॥೨೦॥

ಆದ್ದರಿಂದ ಮೋಕ್ಷವು ತ್ರಿವರ್ಗಕ್ಕಿಂತಲೂ ವಿಶೇಷವಾಗಿ ಶ್ರೇಷ್ಠವಾದುದು. ಶುಭಲಕ್ಷಣವುಳ್ಳವಳೇ, ಅಂತಹ ಮೋಕ್ಷದ ಈ ಮಾರ್ಗವನ್ನು ಕೇಳು.

ಬ್ರಹ್ಮಾದಿಸ್ಥಾವರಾಂತಸ್ಯ ಸಂಸಾರೋಯಂ ಪ್ರವರ್ತತೇ ।
ಶೋಕವ್ಯಾಧಿಜರಾದೋಷೈರ್ಮರಣೇನ ಚ ಸಂಯುತಃ ॥೨೧॥

ಬ್ರಹ್ಮಾದಿ ಸ್ಥಾವರಾಂತ ಜೀವರಿಗೆ ಶೋಕ-ವ್ಯಾಧಿ-ಜರಾ-ದೋಷ-ಮರಣಗಳಿಂದ ಕೂಡಿದ ಈ ಸಂಸಾರವು ಪ್ರವೃತ್ತವಾಗುತ್ತದೆ.

ಯಥಾ ಜ್ಯೋತಿರ್ಗಣಾ ವ್ಯೋಮ್ನಿ ನಿವರ್ತಂತೇ ಪುನಃಪುನಃ ।
ಸಂಸಾರೇ ಪ್ರಾಣಿನಃ ಸರ್ವೇ ನಿವರ್ತಂತೇ ಯಥಾ ಪುನಃ ॥೨೨॥

ಆಕಾಶದಲ್ಲಿ ಜ್ಯೋತಿರ್ಗಣಗಳು ಪುನಃ ಪುನಃ ಹಿಂದಕ್ಕೆ ಬರುವಂತೆ ಸಂಸಾರದಲ್ಲಿ ಎಲ್ಲ ಪ್ರಾಣಿಗಳು ಪುನಃ ಪುನಃ ಹಿಂದೆ ಬರುತ್ತವೆ.

ತತ್ರ ಸಂಸಾರಚಕ್ರಸ್ಯ ಮೋಕ್ಷೋ ಜ್ಞಾನೇನ ದೃಶ್ಯತೇ ।
ಅಧ್ಯಾತ್ಮತತ್ತ್ವವಿಜ್ಞಾನಂ ಜ್ಞಾನಮಿತ್ಯಭಿಧೀಯತೇ ॥೨೩॥

ಸಂಸಾರಚಕ್ರದಿಂದ ಬಿಡುಗಡೆಯು ಜ್ಞಾನದಿಂದ ಉಂಟಾಗುವುದು ಕಂಡುಬರುತ್ತದೆ. ಅಧ್ಯಾತ್ಮತತ್ತ್ವಜ್ಞಾನವನ್ನೇ ಜ್ಞಾನವೆಂದು ಹೇಳುತ್ತಾರೆ.

ಜ್ಞಾನಸ್ಯ ಗ್ರಹಣೋಪಾಯಮಾಚಾರಂ ಜ್ಞಾನಿನಸ್ತಥಾ ।
ಯಥಾವತ್ಸಂಪ್ರವಕ್ಷ್ಯಾಮಿ ತತ್ ತ್ವಮೇಕಮನಾಃ ಶೃಣು ॥೨೪॥

ಜ್ಞಾನವನ್ನು ಪಡೆಯುವ ವಿಧಾನ ಶುದ್ಧವಾದ ಆಚಾರ ಮತ್ತು ಜ್ಞಾನಿಗಳಾದ ಗುರುಗಳು. ಅವುಗಳನ್ನು ಸರಿಯಾಗಿ ಹೇಳುವೆನು. ಒಂದೇ ಮನಸ್ಸಿನಿಂದ ಅದನ್ನು ಕೇಳು.

ಬ್ರಾಹ್ಮಣಃ ಕ್ಷತ್ರಿಯೋ ವಾऽಪಿ ಭೂತ್ವಾ ಪೂರ್ವಂ ಗೃಹೇ ಸ್ಥಿತಃ ।
ಆನೃಣ್ಯಂ ಸರ್ವತಃ ಪ್ರಾಪ್ಯ ತತಸ್ತಾನ್ ಸಂತ್ಯಜೇದ್ ಗೃಹಾನ್ ।
ತತಃ ಸಂತ್ಯಜ್ಯ ಗಾರ್ಹಸ್ಥ್ಯಂ ನಿಶ್ಚಿತೋ ವನಮಾಶ್ರಯೇತ್ ॥೨೫॥

ಬ್ರಾಹ್ಮಣನಾಗಲೀ ಅಥವಾ ಕ್ಷತ್ರಿಯನಾಗಲೀ ಮೊದಲು ಗೃಹಸ್ಥನಾಗಿದ್ದು, ಎಲ್ಲ ಋಣಗಳನ್ನೂ ತೀರಿಸಿ ಅನಂತರ ಗೃಹವನ್ನು ಬಿಡಬೇಕು. ಗಾರ್ಹಸ್ಥ್ಯಧರ್ಮವನ್ನು ಪರಿತ್ಯಾಗ ಮಾಡಿ, ನಿಶ್ಚಯಿಸಿ ವನವನ್ನು ಸೇರಬೇಕು.

ವನೇ ಗುರುಸಮಾಜ್ಞಾತೋ ದೀಕ್ಷೇತ ವಿಧಿಪೂರ್ವಕಮ್ ।
ದೀಕ್ಷಾಂ ಪ್ರಾಪ್ಯ ಯಥಾನ್ಯಾಯಂ ಸ್ವವೃತ್ತಂ ಪರಿಪಾಲಯೇತ್ ॥೨೬॥

ವನದಲ್ಲಿ ಗುರುಗಳ ಆಜ್ಞೆಯನ್ನು ಪಡೆದು ವಿಧಿಪೂರ್ವಕವಾಗಿ ದೀಕ್ಷೆಯನ್ನು ಪಡೆದು ಶಾಸ್ತ್ರಕ್ಕೆ ಅನುಗುಣವಾಗಿ ತನ್ನ ನಡತೆಯನ್ನು ರಕ್ಷಿಸಿಕೊಳ್ಳಬೇಕು.

ಗೃಹ್ಣೀಯಾದಪ್ಯುಪಾಧ್ಯಾಯಾನ್ಮೋಕ್ಷಜ್ಞಾನಮನಿಂದಿತಃ ।
ದ್ವಿವಿಧಂ ಚ ಪುನರ್ಮೋಕ್ಷಃ ಸಾಂಖ್ಯೋ ಯೋಗ ಇತಿ ಸ್ಮೃತಃ ॥೨೭॥

ಅನಿಂದಿತನಾಗಿ ಉಪಾಧ್ಯಾಯರಿಂದ ಮೋಕ್ಷಜ್ಞಾನವನ್ನು ಸಂಪಾದಿಸಬೇಕು. ಮೋಕ್ಷಸಾಧಕವಾದ ಜ್ಞಾನವು ಪುನಃ ಸಾಂಖ್ಯ ಮತ್ತು ಯೋಗ ಎಂದು ಎರಡು ವಿಧವಾಗಿದೆ ಎಂದು ಹೇಳಲ್ಪಡುತ್ತದೆ.

ಪಂಚವಿಂಶತಿವಿಜ್ಞಾನಂ ಸಾಂಖ್ಯಮಿತ್ಯಭಿಧೀಯತೇ ।
ಐಶ್ವರ್ಯಂ ದೇವಸಾರೂಪ್ಯಂ ಯೋಗಶಾಸ್ತ್ರಸ್ಯ ನಿರ್ಣಯಃ ।
ತಯೋರನ್ಯತರಂ ಜ್ಞಾನಂ ಶೃಣುಯಾಚ್ಛಿಷ್ಯತಾಂ ಗತಃ ॥೨೮॥

ಇಪ್ಪತ್ತೈದು ತತ್ತ್ವಗಳ ವಿಜ್ಞಾನವು ಸಾಂಖ್ಯವೆಂದು ಹೇಳಲ್ಪಡುತ್ತದೆ. ಅಣಿಮಾದಿ ಐಶ್ವರ್ಯ ಮತ್ತು ದೇವಸಾದೃಶ್ಯ ಇವು ಯೋಗಶಾಸ್ತ್ರದ ಫಲಗಳೆಂದು ನಿರ್ಣಯ. ಗುರುಗಳಿಗೆ ಶಿಷ್ಯನಾಗಿ, ಅವೆರಡರಲ್ಲಿ ಯಾವುದಾದರೂ ಒಂದರ ಜ್ಞಾನವನ್ನು ಶ್ರವಣದಿಂದ ಸಂಪಾದಿಸಬೇಕು.

ನಾಮುಂಡೋ ನಾಪ್ಯಕಾಷಾಯೀ ನಾಪ್ಯಸಂವತ್ಸರೋಷಿತಃ ।
ಸಾಂಖ್ಯಯೋಗೌ ನ ಚ ಶ್ರಾವ್ಯೌ ಗುರುಣಾ ಸ್ನೇಹಪೂರ್ವಕಮ್ ।
ಸಮಃ ಶೀತೋಷ್ಣಹರ್ಷಾದೀನ್ ವಿಷಹೇತ ಸದಾ ಮುನಿಃ ॥೨೯॥

ಶಿರಸ್ಸನ್ನು ಮುಂಡನೆ ಮಾಡಿಕೊಳ್ಳದೆ, ಕಾಷಾಯವಸ್ತ್ರವನ್ನು ಧರಿಸದೆ, ಗುರುಗಳ ಬಳಿಯಲ್ಲಿ ಒಂದು ಸಂವತ್ಸರ ವಾಸವನ್ನು ಮಾಡದೆ ಗುರುಗಳಿಂದ ಸ್ನೇಹಪೂರ್ವಕವಾಗಿ ಸಾಂಖ್ಯಯೋಗಗಳನ್ನು ಶ್ರವಣ ಮಾಡಬಾರದು. ಮುನಿಯಾದವನು ಶೀತೋಷ್ಣ, ಹರ್ಷ-ಶೋಕಗಳಲ್ಲಿ ಸಮನಾಗಿದ್ದು ಎಲ್ಲವನ್ನೂ ಸಹಿಸಬೇಕು.

ಅದೃಷ್ಯಃ ಕ್ಷುತ್ಪಿಪಾಸಾಭ್ಯಾಂ ಭವೇಜ್ಜ್ಞಾನಸಮಾಧಿನಾ ।
ನ ಕುರ್ವೀತಾನ್ಯಮಾರಂಭಮನಿವೇದ್ಯ ಸ್ವಕಂ ಗುರುಮ್ ॥೩೦॥

ಜ್ಞಾನಸಮಾಧಿಯನ್ನು ಹೊಂದಿ ಹಸಿವು, ನೀರಡಿಕೆಗಳಿಂದ ಅಲುಗಾಡಬಾರದು. ತನ್ನ ಗುರುವಿಗೆ ಹೇಳದೆ ಯಾವ ಕಾರ್ಯವನ್ನೂ ಆರಂಭಿಸಬಾರದು.

ಛಾಯಾಭೂತೋಽಪರಿತ್ಯಾಗೀ ನಿತ್ಯಮೇವ ಭವೇದ್ ಗುರೌ ।
ಇಂದ್ರಿಯಾಣೀಂದ್ರಿಯಾರ್ಥೇಭ್ಯ ಉಚಿತೇಭ್ಯೋ ನಿವರ್ತಯೇತ್ ।
ತ್ಯಜೇತ್ ಸಂಕಲ್ಪಜಾನ್ ಗ್ರಂಥೀನ್ ಸದಾ ಧ್ಯಾನಪರೋ ಭವೇತ್ ॥

ಗುರುಗಳನ್ನು ಪರಿತ್ಯಜಿಸದೆ ಯಾವಾಗಲೂ ಛಾಯೆಯಂತೆ ಗುರುಗಳನ್ನು ಅನುಸರಿಸಬೇಕು. ಇಂದ್ರಿಯಗಳನ್ನು ಯೋಗ್ಯವಾದ ತಮ್ಮ ವಿಷಯಗಳಿಂದ ಹಿಂದಕ್ಕೆ ತೆಗೆದುಕೊಳ್ಳಬೇಕು. ಸಂಕಲ್ಪದಿಂದ ಉಂಟಾಗುವ ಕರ್ಮಬಂಧನಗಳನ್ನು ತ್ಯಜಿಸಿ ಸದಾ ಜ್ಞಾನಪರನಾಗಬೇಕು.

ಕುಂಡಿಕಾಂ ಚರ್ಮ ಸಂಶಿಕ್ಯಂ ಛತ್ರಂ ಯಷ್ಟಿಮುಪಾನಹೌ ।
ಚೇಲಮಿತ್ಯೇವ ನೈತೇಷು ಸ್ಥಾಪಯೇತ್ ಸ್ವಾಮ್ಯಮಾತ್ಮನಃ ॥೩೨॥

ಕಮಂಡಲು, ಕೃಷ್ಣಾಜಿನ, ಭಾರವನ್ನು ಹೊರುವ ನೆಲುವು, ಛತ್ರಿ, ದಂಡ, ಪಾದರಕ್ಷೆ, ವಸ್ತ್ರ- ಇವುಗಳಲ್ಲಿ ತನ್ನ ಸ್ವಾಮ್ಯವನ್ನು ಪ್ರತಿಷ್ಠಿಸಬಾರದು.

ಗುರೋಃ ಪೂರ್ವಂ ಸಮುತ್ತಿಷ್ಠೇತ್ ಜನ್ಯಂ ತಸ್ಯ ನ ಸಂವಿಶೇತ್ ।
ನೈವಾವಿಜ್ಞಾಪ್ಯ ಭರ್ತಾರಮಾವಶ್ಯಕಮಪಿ ವ್ರಜೇತ್ ॥೩೩॥

ಗುರುವಿಗಿಂತ ಮೊದಲು ಹಾಸಿಗೆಯಿಂದ ಏಳಬೇಕು. ಅವರಿಗಾಗಿ ಇಟ್ಟ ಆಸನ, ಶಯನಾದಿ ಯಾವ ವಸ್ತುವನ್ನೂ ಉಪಯೋಗಿಸಬಾರದು. ಗುರುಗಳಿಗೆ ತಿಳಿಸದೆ ಆವಶ್ಯಕ ಕಾರ್ಯಗಳಿಗೂ ಹೋಗಬಾರದು.

ದ್ವಿರಹ್ನಾ ಸ್ನಾನಸಾದೇನ ಪ್ರಾಕ್ಸಂಧ್ಯಮಭಿಷೇಚನಮ್ ।
ಏಕಕಾಲಾಶನಂ ಚಾಸ್ಯ ವಿಹಿತಂ ಯತಿಭಿಃ ಪುರಾ ॥೩೪॥

ಹಗಲಿನಲ್ಲಿಯೇ ಎರಡು ಸ್ನಾನವನ್ನು ಮಾಡುವ ಭಯದಿಂದ ಸಂಧ್ಯಾ ಕಾಲದಲ್ಲಿಯೇ ಸ್ನಾನವನ್ನು ಮಾಡಬೇಕು. ಪ್ರಯತ್ನಶೀಲರಾದವರಿಗೆ ಹಿಂದಿನಿಂದಲೂ ಒಂದೇ ಆಹಾರಸ್ವೀಕಾರವು ವಿಹಿತವಾಗಿದೆ (ಲಕ್ಷ್ಯಲಂಕಾರ).

ಭೈಕ್ಷಂ ಸರ್ವತ್ರ ಗೃಹ್ಣೀಯಾಚ್ಚಿಂತಯೇತ್ ಸತತಂ ನಿಶಿ ।
ಕಾರಣೇ ಚಾಪಿ ಸಂಪ್ರಾಪ್ತೇ ನ ಕುಪ್ಯೇತ ಕದಾಚನ ॥೩೫॥

ಎಲ್ಲ ಕಡೆಯಿಂದಲೂ ಭೈಕ್ಷ್ಯವನ್ನು ಸ್ವೀಕರಿಸಬೇಕು. ರಾತ್ರಿಯಲ್ಲಿ ಸತತವಾಗಿ ತತ್ತ್ವಚಿಂತನೆಯನ್ನು ಮಾಡಬೇಕು. ಕೋಪಗೊಳ್ಳುವ ಕಾರಣವಿದ್ದರೂ ಎಂದೂ ಕೋಪಗೊಳ್ಳಬಾರದು.

ಬ್ರಹ್ಮಚರ್ಯಂ ವನೇ ವಾಸಃ ಶೌಚಮಿಂದ್ರಿಯಸಂಯಮಃ ।
ದಯಾ ಚ ಸರ್ವಭೂತೇಷು ತಸ್ಯ ಧರ್ಮಃ ಸನಾತನಃ ॥೩೬॥

ಬ್ರಹ್ಮಚರ್ಯ, ವನವಾಸ, ಶೌಚ, ಇಂದ್ರಿಯನಿಗ್ರಹ, ಸರ್ವಭೂತ ದಯಾ - ಇವುಗಳು ಅವನ ಸನಾತನ ಧರ್ಮಗಳು.

ವಿಮುಕ್ತಃ ಸರ್ವಪಾಪೇಭ್ಯೋ ಲಘ್ವಾಹಾರೋ ಜಿತೇಂದ್ರಿಯಃ ।
ಆತ್ಮಯುಕ್ತಃ ಪರಾಂ ಬುದ್ಧಿಂ ಲಭತೇ ಪಾಪನಾಶಿನೀಮ್ ॥೩೭॥

ಅಂತಹವನು ಅಲ್ಪಹಾರವನ್ನು ಸೇವಿಸಿ, ಜಿತೇಂದ್ರಿಯನಾಗಿ, ಸರ್ವಪಾಪಗಳಿಂದ ಮುಕ್ತನಾಗಿ, ಯಾವಾಗಲೂ ಪರಮಾತ್ಮನ ಚಿಂತನೆಯಿಂದ ಕೂಡಿ, ಪಾಪನಾಶಿನಿಯಾದ ಶ್ರೇಷ್ಠವಾದ ಬುದ್ಧಿಯನ್ನು ಹೊಂದುತ್ತಾನೆ.

ಯದಾ ಭಾವಂ ನ ಕುರುತೇ ಸರ್ವಭೂತೇಷು ಪಾಪಕಮ್ ।
ಕರ್ಮಣಾ ಮನಸಾ ವಾಚಾ ಬ್ರಹ್ಮ ಸಂಪದ್ಯತೇ ತದಾ ॥೩೮॥

ಯಾವಾಗ ಸರ್ವಭೂತಗಳಲ್ಲಿಯೂ ಕರ್ಮದಿಂದಾಗಲೀ, ಮನಸ್ಸಿನಿಂದಾಗಲೀ ಅಥವಾ ಮಾತಿನಿಂದಾಗಲೀ ಪಾಪಬುದ್ಧಿಯನ್ನು ಮಾಡುವುದಿಲ್ಲವೋ ಆಗ ಬ್ರಹ್ಮಪ್ರಾಪ್ತಿಯನ್ನು ಹೊಂದುತ್ತಾನೆ.

ಅನೀರ್ಷ್ಯುರನಹಂಕಾರೋ ನಿರ್ವೇದಂ ಭೃತಕೋ ಯಥಾ ।
ಏತಶೋಕಭಯಾಬಾಧಃ ಪದಂ ಪ್ರಾಪ್ನೋತ್ಯನುತ್ತಮಮ್ ॥೩೯॥

ಅಸೂಯೆಯನ್ನು ಪಡದೆ ಅಹಂಕಾರಶೂನ್ಯನಾಗಿ ಭಾರವನ್ನು ಹೊರುವವನಂತೆ ವೈರಾಗ್ಯವನ್ನು ಹೊಂದಿ, ಶೋಕವನ್ನು ಕಳೆದುಕೊಂಡು, ಭಯದ ಬಾಧೆಯಿಲ್ಲದೆ ಶ್ರೇಷ್ಠವಾದ ಸ್ಥಾನವನ್ನು ಹೊಂದುತ್ತಾನೆ.

ತುಲ್ಯನಿಂದಾಸ್ತುತಿರ್ಮೌನೀ ಸಮಲೋಷ್ಟಾಶ್ಮಕಾಂಚನಃ ।
ಸಮಃ ಶತ್ರೌ ಚ ಮಿತ್ರೇ ಚ ನಿರ್ವಾಣಮಧಿಗಚ್ಛತಿ ॥೪೦॥

ಮೌನವನ್ನು ಮಾಡಿ, ನಿಂದಾ-ಸ್ತುತಿಗಳಲ್ಲಿ ಸಮನಾಗಿದ್ದು, ಲೋಷ್ಟಾಶ್ಮ ಕಾಂಚನಗಳಲ್ಲಿ ಸಮನಾಗಿದ್ದು, ಶತ್ರು-ಮಿತ್ರರಲ್ಲಿ ಸಮನಾಗಿದ್ದು ಮೋಕ್ಷವನ್ನು ಹೊಂದುತ್ತಾನೆ.

ಏವಂ ಯುಕ್ತಸಮಾಚಾರಸ್ತತ್ಪರೋಽಧ್ಯಾತ್ಮಚಿಂತಕಃ ।
ಜ್ಞಾನಾಭ್ಯಾಸೇನ ತೇನೈವ ಪ್ರಾಪ್ನೋತಿ ಪರಮಾಂ ಗತಿಮ್ ॥೪೧॥

ಹೀಗೆ ಯೋಗ್ಯವಾದ ಒಳ್ಳೆಯ ಆಚಾರಗಳಿಂದ ಕೂಡಿ ಭಗವತ್ಪರನಾಗಿ, ಅಧ್ಯಾತ್ಮ ಚಿಂತಕನಾಗಿ ಅದೇ ಜ್ಞಾನ-ಚಿಂತನೆಯಿಂದ ಪರಮಗತಿಯನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಮೋಕ್ಷಧರ್ಮಪ್ರಶಂಸಾ ನಾಮ
ಅಷ್ಟಾವಿಂಶೋತ್ತರದ್ವಿಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ವೈರಾಗ್ಯಕ್ಕೆ ನಿಮಿತ್ತವಾದ ಸಂಸಾರದ ಅಸಾರತ್ವಕಥನ.

ಮಹೇಶ್ವರಃ

ಅನುದ್ವಿಗ್ನಮತೇರ್ಜಂತೋರಸ್ಮಿನ್ ಸಂಸಾರಮಂಡಲೇ ।
ಶೋಕವ್ಯಾಧಿಜರಾದುಃಖೇ ನಿರ್ವಾಣಂ ನೋಪಪದ್ಯತೇ ॥೧॥

ತಸ್ಮಾದುದ್ವೇಗಜನನಂ ಮನೋಽವಸ್ಥಾಪನಂ ತಥಾ ।
ಜ್ಞಾನಂ ತೇ ಸಂಪ್ರವಕ್ಷ್ಯಾಮಿ ತನ್ಮೂಲಮಮೃತಂ ಹಿ ವೈ ॥೨॥

ಮಹೇಶ್ವರ– ಶೋಕ, ವ್ಯಾಧಿ, ಜರಾ (ಮುಪ್ಪು), ದುಃಖದಿಂದ ಕೂಡಿದ ಈ ಸಂಸಾರವೆಂಬ ಮಂಡಲದಲ್ಲಿ ಉದ್ವೇಗ ಹೊಂದದ ಜಂತುವಿಗೆ ಮೋಕ್ಷವು ಉಪಪನ್ನವಾಗುವುದಿಲ್ಲ. ಆದ್ದರಿಂದ ಸಂಸಾರದಲ್ಲಿ ಉದ್ವೇಗವನ್ನುಂಟು ಮಾಡಿ, ಮನಸ್ಸನ್ನು ಒಂದು ಕಡೆ ನೆಲೆಸುವಂತಹ ಜ್ಞಾನವನ್ನು ನಿನಗೆ ಉಪದೇಶ ಮಾಡುವೆನು. ಅಂತಹ ಜ್ಞಾನವು ಮೋಕ್ಷಕ್ಕೆ ಕಾರಣವಾದುದು.

ಶೋಕಸ್ಥಾನಸಹಸ್ರಾಣಿ ಭಯಸ್ಥಾನಶತಾನಿ ಚ ।
ದಿವಸೇದಿವಸೇ ಮೂಢಮಾವಿಶಂತಿ ನ ಪಂಡಿತಮ್ ॥೩॥

ಮೂಢನಾದವನಿಗೆ ಪ್ರತಿನಿತ್ಯವೂ ಶೋಕವನ್ನು ಪಡಲು ಸಾವಿರ ಕಾರಣಗಳೂ, ಭಯವನ್ನು ಹೊಂದಲು ನೂರು ಕಾರಣಗಳೂ ಇರುತ್ತವೆ. ಪಂಡಿತನಿಗೆ ಇರುವುದಿಲ್ಲ.

ನಷ್ಟೇ ಧನೇ ವಾ ದಾರೇ ವಾ ಪುತ್ರೇ ಪಿತರಿ ವಾ ಮೃತೇ ।
ಅಹೋ ದುಃಖಮಿತಿ ಧ್ಯಾಯನ್ ಶೋಕಸ್ಯ ಪದಮಾವ್ರಜೇತ್ ॥೪॥

ಧನವಾಗಲೀ, ಪತ್ನಿಯಾಗಲೀ, ಪುತ್ರನಾಗಲೀ, ಪಿತೃವಾಗಲೀ ಮೃತನಾದರೆ ಅಯ್ಯೋ ದುಃಖ ಎಂದು ಚಿಂತಿಸುತ್ತಾ ಮನುಷ್ಯನು ಶೋಕಕ್ಕೆ ಸಿಲುಕುತ್ತಾನೆ.

ದ್ರವ್ಯೇಷು ಸಮತೀತೇಷು ಯೇ ಗುಣಾಸ್ತಾನ್ನ ಚಿಂತಯೇತ್ ।
ತಾನನಾದ್ರಿಯಮಾಣಸ್ಯ ಶೋಕಬಂಧಃ ಪ್ರಣಶ್ಯತಿ ॥೫॥

ದ್ರವ್ಯಗಳು ಹೊರಟು ಹೋದಮೇಲೆ ಅವುಗಳಲ್ಲಿದ್ದ ಗುಣಗಳನ್ನು ಚಿಂತಿಸಬಾರದು. ಅವುಗಳನ್ನು ಆದರಿಸದಿದ್ದರೆ ಶೋಕಬಂಧವು ನಾಶವನ್ನು ಹೊಂದುತ್ತದೆ.

ಸಂಪ್ರಯೋಗಾದನಿಷ್ಟಸ್ಯ ಏಪ್ರಯೋಗಾತ್ ಪ್ರಿಯಸ್ಯ ಚ ।
ಮಾನುಷಾ ಮಾನಸೈರ್ದುಃಖೈಃ ಸಂಯುಜ್ಯಂತೇऽಲ್ಪಬುದ್ಧಯಃ ॥೬॥

ಅಲ್ಪಬುದ್ಧಿಯುಳ್ಳ ಮನುಷ್ಯರು ಅನಿಷ್ಟ ಪ್ರಾಪ್ತಿಯಿಂದ ಮತ್ತು ಪ್ರಿಯದ ನಿವೃತ್ತಿಯಿಂದ ಮಾನಸ ದುಃಖಗಳನ್ನು ಹೊಂದುತ್ತಾರೆ.

ಮೃತಂ ವಾ ಯದಿ ವಾ ನಷ್ಟಂ ಯೋऽತೀತಮನುಶೋಚತಿ ।
ಸಂತಾಪೇನ ಚ ಯುಜ್ಯೇತ ತಚ್ಚಾಸ್ಯ ನ ನಿವರ್ತತೇ ॥೭॥

ಯಾವನು ಮೃತವಾದ ಅಥವಾ ನಷ್ಟವಾದ ವಸ್ತುವನ್ನು ಕುರಿತು ಶೋಕಪಡುತ್ತಾ ಸಂತಾಪದಿಂದ ಕೂಡಿರುತ್ತಾನೆಯೋ ಅವರಿಗೆ ಆ ವಸ್ತುವು ಹಿಂದೆ ಬರುವುದಿಲ್ಲ.

ಉತ್ಪನ್ನೇ ತ್ವಿಹ ಮಾನುಷ್ಯೇ ಗರ್ಭಪ್ರಭೃತಿ ಮಾನವಮ್ ।
ವಿವಿಧಾನ್ಯುಪವರ್ತಂತೇ ದುಃಖಾನಿ ಚ ಸುಖಾನಿ ಚ ॥೮॥

ಮನುಷ್ಯನಿಗೆ ಗರ್ಭವಾಸದಿಂದ ಹಿಡಿದು ವಿವಿಧವಾದ ದುಃಖಗಳು ಮತ್ತು ಸುಖಗಳು ಬರುತ್ತಿರುತ್ತವೆ.

ತಯೋರೇಕತರೋ ಮಾರ್ಗೋ ಯದ್ಯೇನಮಭಿಸನ್ನಮೇತ್ ।
ಸುಖಂ ಪ್ರಾಪ್ಯ ನ ಸಂಹೃಷ್ಯೇದ್ ದುಃಖಂ ಪ್ರಾಪ್ಯ ನ ಸಂಜ್ವರೇತ್ ॥೯॥

ಅವುಗಳನ್ನು ನಿರ್ವಾಹ ಮಾಡುವುದಕ್ಕೆ ಒಂದೇ ಮಾರ್ಗವಿದೆ. ಸುಖ ಬಂದಾಗ ಹರ್ಷಪಡಬಾರದು, ದುಃಖ ಉಂಟಾದಾಗ ಸಂತಾಪ ಪಡಬಾರದು.

ದೋಷದರ್ಶೀ ಭವೇತ್ ತತ್ರ ಯತ್ರ ಸ್ನೇಹಃ ಪ್ರವರ್ತತೇ ।
ಅನಿಷ್ಟೇನಾನ್ವಿತಂ ಪಶ್ಯೇದ್ ಯಥಾ ಕ್ಷಿಪ್ರಂ ವಿರಜ್ಯತೇ ॥೧೦॥

ಎಲ್ಲಿಸ್ನೇಹವುಂಟಾಗುತ್ತದೆಯೋ ಅಲ್ಲಿರುವ ದೋಷವನ್ನು ನೋಡಬೇಕು. ಅದು ಅನಿಷ್ಟದಿಂದ ಕೂಡಿದೆ ಎಂದು ತಿಳಿದರೆ ಶೀಘ್ರವಾಗಿ ಸ್ನೇಹವು ಹೊರಟು ಹೋಗುತ್ತದೆ.

ಯಥಾ ಕಾಷ್ಠಂ ಚ ಕಾಷ್ಠಂ ಚ ಸಮೇಯಾತಾಂ ಮಹೋದಧೌ ।
ಸಮೇತ್ಯ ಚ ವ್ಯಪೇಯಾತಾಂ ತದ್ವಜ್ಜ್ಞಾತಿಸಮಾಗಮಃ ॥೧೧॥

ಹೇಗೆ ದೊಡ್ಡ ಸಮುದ್ರದಲ್ಲಿ ಎರಡು ಕಾಷ್ಠಗಳು ಪರಸ್ಪರವಾಗಿ ಸೇರುತ್ತವೆಯೋ, ಸೇರಿದ ಮೇಲೆ ಬಿಟ್ಟು ಹೋಗುತ್ತವೆಯೋ ಅದರಂತೆ ಸಂಸಾರದಲ್ಲಿ ಬಂಧುಗಳ ಸಮಾಗಮ.

ಅದರ್ಶನಾದಾಪತಿತಾಃ ಪುನಶ್ಚಾದರ್ಶನಂ ಗತಾಃ ।
ಸ್ನೇಹಸ್ತತ್ರ ನ ಕರ್ತವ್ಯೋ ವಿಪ್ರಯೋಗೋ ಹಿ ತೈರ್ಧ್ರುವಮ್ ॥೧೨॥

ಕಾಣದ ಸ್ಥಳದಿಂದ ಬಂದರು ಪುನಃ ಕಾಣದ ಸ್ಥಳಕ್ಕೆ ಹೊರಟು ಹೋದರು. ಅವರಲ್ಲಿ ಸ್ನೇಹವನ್ನು ಮಾಡಬಾರದು. ಅವರಿಂದ ವಿಯೋಗವನ್ನು ಹೊಂದುವುದು ನಿಶ್ಚಿತವಾದುದು.

ಕುಟುಂಬಂ ಪುತ್ರದಾರಂ ಚ ಶರೀರಂ ಧನಸಂಚಯಃ ।
ಪಾರಕ್ಯಮಧ್ರುವಂ ಸರ್ವಂ ಕಿಂ ಸ್ವಂ ಸುಕೃತದುಷ್ಕೃತೇ ॥೧೩॥

ಕುಟುಂಬ, ಪತ್ನೀ, ಪುತ್ರರು, ಶರೀರ, ಧನರಾಶಿ ಎಲ್ಲವೂ ಅನಿತ್ಯವಾದುದು ಮತ್ತು ಇನ್ನೊಬ್ಬರಿಗೆ ಸೇರಿದುದು. ಇನ್ನು ತನ್ನ ಸುಕೃತ-ದುಷ್ಕೃತಗಳು ಅನಿತ್ಯವಾದವುಗಳು ಎಂದು ಹೇಳಬೇಕಾದುದಿಲ್ಲ.

ಪುತ್ರದಾರಕುಟುಂಬೇಷು ಸಕ್ತಾಃ ಸೀದಂತಿ ಜಂತವಃ ।
ಸರಃಪಂಕಾರ್ಣವೇ ಮಗ್ನಾ ಜೀರ್ಣಾ ಇವ ಮಹಾಗಜಾಃ ॥೧೪॥

ಪತ್ನೀ-ಪುತ್ರ, ಕುಟುಂಬಗಳಲ್ಲಿ ಆಸಕ್ತರಾದ ಮನುಷ್ಯರು ಕೆಸರಿನಲ್ಲಿ ಮುಳುಗಿದ ವೃದ್ಧವಾದ ಮಹಾಗಜಗಳಂತೆ ನಾಶವನ್ನು ಹೊಂದುತ್ತಾರೆ.

ಮಾತಾಪಿತೃಸಹಸ್ರಾಣಿ ಪುತ್ರದಾರಶತಾನಿ ಚ ।
ಅಸಂಖ್ಯೇಯಾನ್ಯತೀತಾನಿ ತಥೈವಾನಾಗತಾನಿ ಚ ॥೧೫॥

ಮಾತಾ-ಪಿತೃ ಸಹಸ್ರಗಳು, ಪತ್ನೀ-ಪುತ್ರ ಶತಗಳು ಅಸಂಖ್ಯೇಯವಾಗಿ ಬಂದು ಹೋಗಿವೆ ಮತ್ತು ಮುಂದೆ ಬರಲಿವೆ.

ನ ತೇಷಾಂ ಚ ಮಯಾ ಕಾರ್ಯಂ ನ ಕಾರ್ಯಂ ಮಮ ತೈರಪಿ ।
ಅತೀತಮನತೀತಂ ತದಿತಿ ಪಶ್ಯನ್ನ ಮುಹ್ಯತಿ ॥೧೬॥

ಅವರಿಗೆ ನನ್ನಿಂದಾಗಬೇಕಾದುದು, ನನಗೆ ಅವರಿಂದಾಗಬೇಕಾದುದು ಏನೂ ಇಲ್ಲ. ಕೆಲವು ಬಂದು ಹೋಗಿವೆ, ಇನ್ನು ಕೆಲವು ಮುಂದೆ ಬರುತ್ತವೆ ಎಂದು ಚಿಂತಿಸುವವನು ಮೋಹಕ್ಕೆ ಒಳಗಾಗುವುದಿಲ್ಲ.

ದುಃಖೋಪಘಾತೇ ಶಾರೀರೇ ಮಾನಸೇ ವಾ ಸಮುತ್ಥಿತೇ ।
ಯಸ್ಮಿನ್ನ ಶಕ್ಯತೇ ಕರ್ತುಂ ಯತ್ನಾತ್ ತನ್ನಾನುಚಿಂತಯೇತ್ ॥೧೭॥

ಶಾರೀರಿಕ ದುಃಖವಾಗಲೀ, ಮಾನಸ ದುಃಖವಾಗಲೀ ಸಂಭವಿಸಿದರೆ ಅದನ್ನು ಪ್ರಯತ್ನದಿಂದ ಪರಿಹರಿಸಲು ಸಾಧ್ಯವಿಲ್ಲದಿದ್ದರೆ ಅದನ್ನು ಕುರಿತು ಚಿಂತಿಸಬಾರದು.

ಯನ್ನಿಮಿತ್ತಂ ಭವೇತ್ ಶೋಕಸ್ತ್ರಾಸೋ ವಾ ದುಃಖಮೇವ ವಾ ।
ಆಯಾಸೋ ವಾ ಯತೋಮೂಲಸ್ತದೇಕಾಂಗಮಪಿ ತ್ಯಜೇತ್ ॥೧೮॥

ಶೋಕವಾಗಲೀ, ಭಯ-ದುಃಖಗಳಾಗಲೀ ಯಾವ ನಿಮಿತ್ತದಿಂದ ಉಂಟಾಗಿವೆಯೋ, ಆಯಾಸವು ಯಾವ ನಿಮಿತ್ತದಿಂದ ಉಂಟಾಗಿದೆಯೋ ಆ ನಿಮಿತ್ತಕ್ಕೆ ಒಂದೇ ಒಂದು ಅವಯವವಿದ್ದರೂ ಅದನ್ನು ತ್ಯಜಿಸಬೇಕು.

ಅನಿತ್ಯಂ ಯೌವನಂ ರೂಪಂ ಜೀವಿತಂ ರತ್ನಸಂಚಯಃ ।
ಐಶ್ವರ್ಯಂ ಸ್ವಸ್ಥತಾ ಚೇತಿ ನ ಮುಹ್ಯೇತ್ ತತ್ರ ಪಂಡಿತಃ ॥೧೯॥

ಯೌವನ, ರೂಪ, ಜೀವನ, ರತ್ನಸಂಗ್ರಹ, ಐಶ್ವರ್ಯ, ಆರೋಗ್ಯ- ಎಲ್ಲವೂ ಅನಿತ್ಯವೆಂದು ತಿಳಿದು ಪಂಡಿತನು ಮೋಹಕ್ಕೆ ಒಳಗಾಗುವುದಿಲ್ಲ.

ಸುಖಮೇಕಾಂತತೋ ನಾಸ್ತಿ ಶಕ್ರಸ್ಯಾಪಿ ತ್ರಿವಿಷ್ಟಪೇ ।
ತತ್ರಾಪಿ ಸುಮಹದ್ ದುಃಖಂ ಸುಖಮಲ್ಪತರಂ ಭವೇತ್ ।
ನ ನಿತ್ಯಂ ಲಭತೇ ದುಃಖಂ ನ ನಿತ್ಯಂ ಲಭತೇ ಸುಖಮ್ ॥೨೦॥

ಸ್ವರ್ಗದಲ್ಲಿ ಇಂದ್ರನಿಗೂ ಸುಖವೇ ಇರುತ್ತದೆ ಎಂಬ ನಿಯಮವಿಲ್ಲ. ಅಲ್ಲಿಯೂ ಬಹಳ ದುಃಖ ಮತ್ತು ಅಲ್ಪ ಸುಖವಿರುತ್ತದೆ. ನಿತ್ಯವಾದ ದುಃಖವಾಗಲೀ, ನಿತ್ಯವಾದ ಸುಖವಾಗಲೀ ಯಾರಿಗೂ ದೊರೆಯುವುದಿಲ್ಲ.

ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಮ್ ।
ಕ್ಷಯಾಂತಾ ನಿಚಯಾಃ ಸರ್ವೇ ಪತನಾಂತಾಃ ಸಮುಚ್ಛ್ರಯಾಃ ॥೨೧॥

ದುಃಖದ ನಂತರದಲ್ಲಿ ಸುಖ, ಸುಖದ ಅನಂತರದಲ್ಲಿ ದುಃಖ. ಎಲ್ಲ ಸಂಚಯಗಳು ಕ್ಷಯದಲ್ಲಿ ಕೊನೆಗೊಳ್ಳುತ್ತವೆ. ಎಲ್ಲ ಔನ್ನತ್ಯಗಳು ಪತನದಲ್ಲಿ ಕೊನೆಗೊಳ್ಳುತ್ತವೆ.

ಸಂಯೋಗಾ ವಿಪ್ರಯೋಗಾಂತಾ ಮರಣಾಂತಂ ಚ ಜೀವಿತಮ್ ।
ಉಚ್ಛ್ರಯಾನ್ ವಿನಿಪಾತಾಂಶ್ಚ ದೃಷ್ಟ್ವಾ ಪ್ರತ್ಯಕ್ಷತಃ ಸ್ವಯಮ್ ।
ಅನಿತ್ಯಮಸುಖಂ ಚೇತಿ ವ್ಯವಸ್ಯೇತ್ ಸರ್ವಮೇವ ಚ ॥೨೨॥

ಸಂಯೋಗಗಳು ವಿಯೋಗದಲ್ಲಿ ಕೊನೆಗೊಳ್ಳುತ್ತವೆ. ಜೀವನವು ಮರಣದಲ್ಲಿ ಕೊನೆಗೊಳ್ಳುತ್ತದೆ. ಔನ್ನತ್ಯಗಳನ್ನೂ ಪತನಗಳನ್ನೂ ಪ್ರತ್ಯಕ್ಷವಾಗಿ ನೋಡಿ, ಎಲ್ಲವೂ ಅನಿತ್ಯ ಮತ್ತು ದುಃಖದಿಂದ ಕೂಡಿವೆ ಎಂದು ನಿರ್ಧರಿಸಬೇಕು.

ಅರ್ಥಾನಾಮಾರ್ಜನೇ ದುಃಖಮಾರ್ಜಿತಾನಾಂ ತು ರಕ್ಷಣೇ ।
ನಾಶೇ ದುಃಖಂ ವ್ಯಯೇ ದುಃಖಂ ಧಿಗರ್ಥಂ ದುಃಖಭಾಜನಮ್ ॥೨೩॥

ಧನವನ್ನು ಗಳಿಸುವುದರಲ್ಲಿ ದುಃಖ, ಗಳಿಸಿದುದನ್ನು ರಕ್ಷಣೆ ಮಾಡಲು ದುಃಖ, ರಕ್ಷಣೆ ಮಾಡಿದುದು ನಾಶವಾದರೆ ದುಃಖ, ಖರ್ಚಾದರೆ ದುಃಖ. ದುಃಖಕ್ಕೆ ಪಾತ್ರವಾದ ಧನಕ್ಕೆ ಧಿಕ್ಕಾರವಿರಲಿ.

ಅರ್ಥವಂತಂ ನರಂ ನಿತ್ಯಂ ಪಂಚ ನಿಘ್ನಂತಿ ಶತ್ರವಃ ।
ರಾಜಾ ತಸ್ಕರದಾಯಾದಾ ಭೂತಾನಿ ಕ್ಷಯ ಏವ ಚ ॥೨೪॥

ಧನವಂತನಾದ ಪುರುಷನನ್ನು ಯಾವಾಗಲೂ ರಾಜ, ಚೋರ, ದಾಯಾದಿಗಳು, ಭೂತಗಳು ಮತ್ತು ವಿನಾಶ ಎಂಬ ಈ ಐದು ಶತ್ರುಗಳು ಕೊಲ್ಲುತ್ತಾರೆ.

ಅರ್ಥ ಏವ ಹ್ಯನರ್ಥಸ್ಯ ಮೂಲಮಿತ್ಯವಧಾರಯ ।
ನ ಹ್ಯನರ್ಥಾಃ ಪ್ರಬಾಧಂತೇ ನರಮರ್ಥವಿವರ್ಜಿತಮ್ ॥೨೫॥

ಅರ್ಥವೇ ಅನರ್ಥಕ್ಕೆ ಮೂಲವಾದುದು ಎಂದು ತಿಳಿ. ಅರ್ಥಹೀನನಾದ ಮನುಷ್ಯನನ್ನು ಅನರ್ಥಗಳು ಬಾಧಿಸುವುದಿಲ್ಲ.

ಅರ್ಥಪ್ರಾಪ್ತಿರ್ಮಹದ್ದುಃಖಮಾಕಿಂಚನ್ಯಂ ಪರಂ ಸುಖಮ್ ।
ಉಪದ್ರವೇಷು ಚಾರ್ಥಾನಾಂ ದುಃಖಂ ಹಿ ನಿಯತಂ ಭವೇತ್ ॥೨೬॥

ಅರ್ಥಪ್ರಾಪ್ತಿಯು ದೊಡ್ಡ ದುಃಖ. ದಾರಿದ್ರ್ಯವು ಪರಮಸುಖ. ಅರ್ಥಗಳಿಗೆ ತೊಂದರೆಯಾದರೆ ದುಃಖವು ನಿಯಮೇನ ಉಂಟಾಗುತ್ತದೆ.

ಧನಲೋಭೇನ ತೃಷ್ಣಾಯಾ ನ ತೃಪ್ತಿರುಪಲಭ್ಯತೇ ।
ಲಬ್ಧಾಶ್ರಯೋ ಏವರ್ಧೇತ ಸಮಿದ್ಭಿರಿವ ಪಾವಕಃ ॥೨೭॥

ಧನಲೋಭದ ನಿಮಿತ್ತದಿಂದಾಗಿ ಆಸೆಗೆ ಎಂದೂ ತೃಪ್ತಿಯುಂಟಾಗುವುದಿಲ್ಲ. ಆಸೆಗೆ ಒಂದು ಆಶ್ರಯವು ದೊರೆತರೆ ಸಮಿತ್ತುಗಳಿಂದ ಅಗ್ನಿಯಂತೆ ಅದು ಅಭಿವೃದ್ಧಿಯನ್ನು ಹೊಂದುತ್ತದೆ.

ಜಿತ್ವಾಽಪಿ ಪೃಥಿವೀಂ ಕೃತ್ಸ್ನಾಂ ಚತುಃಸಾಗರಮೇಖಲಾಮ್ ।
ಸಾಗರಾಣಾಂ ಪುನಃ ಪಾರಂ ಜೇತುಮಿಚ್ಛತ್ಯಸಂಶಯಮ್ ॥೨೮॥

ಚತುಃಸಾಗರಪರ್ಯಂತವಾದ ಸಮಗ್ರವಾದ ಭೂಮಿಯನ್ನು ಮನುಷ್ಯನು ಗೆದ್ದರೂ ಪುನಃ ಸಾಗರದ ಆಚೆದಡವನ್ನು ಜಯಿಸಲು ಇಚ್ಛಿಸುತ್ತಾನೆ.

ಅಲಂ ಪರಿಗ್ರಹೇಣೇಹ ದೋಷವಾನ್ ಹಿ ಪರಿಗ್ರಹಃ ।
ಕೋಶಕಾರಃ ಕೃಮಿರ್ದೇವಿ ಬಧ್ಯತೇ ಹಿ ಪರಿಗ್ರಹಾತ್ ॥೨೯॥

ಪರಿಗ್ರಹವನ್ನು ನಿಲ್ಲಿಸಬೇಕು. ಪರಿಗ್ರಹದಲ್ಲಿ ದೋಷವಿದೆ. ದೇವಿಯೇ, ಕೀಟವು ಪರಿಗ್ರಹದ ಕಾರಣದಿಂದಾಗಿ ಬಂಧನಕ್ಕೆ ಒಳಗಾಗುತ್ತದೆ.

ಯ ಏಕಾಂ ಪೃಥಿವೀಂ ಕೃತ್ಸ್ನಾಮೇಕಚ್ಛತ್ರಾಂ ಪ್ರಶಾಸ್ತಿ ಚ ।
ಏಕಸ್ಮಿನ್ನೇವ ರಾಷ್ಟ್ರೇ ತು ಸ ಚಾಪಿ ನಿವಸೇನ್ನೃಪಃ ॥೩೦॥

ತಸ್ಮಿನ್ ರಾಷ್ಟ್ರೇಽಪಿ ನಗರಮೇಕಮೇವಾಧಿತಿಷ್ಠತಿ ।
ನಗರೇಽಪಿ ಗೃಹಂ ಚೈಕಂ ಭವೇತ್ ತಸ್ಯ ನಿವೇಶನಮ್ ॥೩೧॥

ಏಕ ಏವ ಪ್ರತಿಷ್ಠಾ ಸ್ಯಾದಾವಾಸಂ ತದ್ ಗೃಹೇಽಪಿ ಚ ।
ಆವಾಸೇ ಶಯನಂ ಚೈಕಂ ನಿಶಿ ಯತ್ರ ಪ್ರಲೀಯತೇ ॥೩೨॥

ಶಯನಸ್ಯಾರ್ಧಮೇವಾಸ್ಯ ಸ್ತ್ರಿಯಾಸ್ತ್ವರ್ಧಂ ವಿಧೀಯತೇ ।
ತದನೇನ ಪ್ರಸಂಗೇನ ಸ್ವಲ್ಪೇನೈವ ಹಿ ಯುಜ್ಯತೇ ॥೩೩॥

ಯಾವ ರಾಜನು ಏಕಚಕ್ರಾಧಿಪತಿಯಾಗಿ ಭೂಮಿಯನ್ನೆಲ್ಲಾ ಆಳುತ್ತಾನೆಯೋ ಅವನೂ, ಒಂದೇ ರಾಷ್ಟ್ರದಲ್ಲಿ ವಾಸ ಮಾಡುತ್ತಾನೆ, ಆ ರಾಷ್ಟ್ರದಲ್ಲಿಯೂ ಒಂದು ನಗರದಲ್ಲಿ ವಾಸ ಮಾಡುತಾನೆ, ಆ ನಗರದಲ್ಲಿಯೂ, ಒಂದು ಗೃಹದಲ್ಲಿ ವಾಸ ಮಾಡುತ್ತಾನೆ, ಆ ಗೃಹದಲ್ಲಿಯೂ, ಒಂದೇ ಒಂದು ಆವಾಸ ಸ್ಥಳದಲ್ಲಿ ಅಥವಾ ಕೋಣೆಯಲ್ಲಿ ವಾಸ ಮಾಡುತ್ತಾನೆ, ಆ ಕೋಣೆಯಲ್ಲಿಯೂ, ಒಂದೇ ಹಾಸಿಗೆಯ ಇದ್ದರೆ ರಾತ್ರಿ ಅದರಲ್ಲಿ ಮಲಗುತ್ತಾನೆ. ಆದರೂ ಹಾಸಿಗೆ ಅರ್ಧವೇ ಅವನ ಭಾಗ. ಉಳಿದ ಅರ್ಧ ಅವನ ಪತ್ನಿಯದು (ಸಮಸ್ತ ಭೂಮಿಗೆ ಅಧಿಪತಿಯಾದರೂ ಅವನು ಭೋಗಿಸುವ ಪ್ರದೇಶವು ಅತ್ಯಲ್ಪವಾದುದು). ಈ ದೃಷ್ಟಾಂತದಿಂದ ಸ್ವಲ್ಪದಿಂದಲೇ ತೃಪ್ತಿಯನ್ನು ಹೊಂದಬೇಕು.

ಸರ್ವಂ ಮಮೇತಿ ಸಮ್ಮೂಢೋ ಜನಃ ಪಶ್ಯತಿ ಬಾಲಿಶಃ ।
ಏವಂ ಸರ್ವೋಪಭೋಗೇಷು ಸ್ವಲ್ಪಮಸ್ಯ ಪ್ರಯೋಜನಮ್ ॥೩೪॥

ಎಲ್ಲವೂ ನನಗೆ ಬೇಕು ಎಂದು ಬಾಲಿಶನಾದ ಮೂಢ ಮನುಷ್ಯನು ಚಿಂತಿಸುತ್ತಾನೆ. ಆದರೆ ಎಲ್ಲ ಭೋಗಗಳಲ್ಲಿಯೂ ಅವನ ಭಾಗವು ಸ್ವಲ್ಪವೇ ಇರುತ್ತದೆ.

ತಂಡುಲಪ್ರಸ್ಥಮಾತ್ರೇಣ ಯಾತ್ರಾ ಸ್ಯಾತ್‌ಸರ್ವದೇಹಿನಾಮ್ ।
ತತೋ ಭೂಯಸ್ತರೋ ಭಾಗೋ ದುಃಖಾಯ ತಪನಾಯ ಚ ॥೩೫॥

ಒಂದು ಹಿಡಿ ಅಕ್ಕಿಯಿಂದ ಜೀವನವು ನಡೆಯುತ್ತದೆ. ಅದಕ್ಕಿಂತ ಹೆಚ್ಚಿನ ಭಾಗವು ದುಃಖವನ್ನೂ, ತಾಪವನ್ನೂ ಉಂಟುಮಾಡುತ್ತದೆ.

ನಾಸ್ತಿ ತೃಷ್ಣಾಸಮಂ ದುಃಖಂ ನಾಸ್ತಿ ತ್ಯಾಗಸಮಂ ಸುಖಮ್ ।
ಸರ್ವಾನ್ ಕಾಮಾನ್ ಪರಿತ್ಯಜ್ಯ ಬ್ರಹ್ಮಭೂಯಾಯ ಕಲ್ಪತೇ ॥೩೬॥

ಆಸೆಗೆ ಸಮವಾದ ದುಃಖವಿಲ್ಲ. ತ್ಯಾಗಕ್ಕೆ ಸಮವಾದ ಸುಖವಿಲ್ಲ. ಎಲ್ಲ ಆಸೆಗಳನ್ನೂ ತೊರೆದರೆ ಜೀವನ್ಮುಕ್ತನಾಗುತ್ತಾನೆ.

ಯಾ ದುಸ್ತ್ಯಜಾ ದುರ್ಮತಿಭಿರ್ಯಾ ನ ಜೀರ್ಯತಿ ಜೀರ್ಯತಃ ।
ಯೋಽಸೌ ಪ್ರಾಣಾಂತಿಕೋ ರೋಗಸ್ತಾಂ ತೃಷ್ಣಾಂ ತ್ಯಜತಃ ಸುಖಮ್ ॥

ಯಾವುದನ್ನು ದುರ್ಮತಿಗಳು ಬಿಡಲು ಸಾಧ್ಯವಿಲ್ಲವೋ, ಮುಪ್ಪು ಬಂದರೂ ಯಾವುದಕ್ಕೆ ಮುಪ್ಪು ಬರುವುದಿಲ್ಲವೋ, ಯಾವುದು ಪ್ರಾಣಾಂತಕವಾದುದೋ ಅಂತಹ ಆಸೆಯನ್ನು ತೊರೆದವನಿಗೆ ಸುಖವಾಗುತ್ತದೆ.

ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥೩೮॥

ಕಾಮ್ಯವಸ್ತುಗಳ ಭೋಗದಿಂದ ಆಸೆಯು ಶಾಂತವಾಗುವುದಿಲ್ಲ. ಹವಿಸ್ಸಿನಿಂದ ಅಗ್ನಿಯು ಅಭಿವೃದ್ಧಿಯನ್ನು ಹೊಂದುವಂತೆ ಪುನಃ ಅಭಿವೃದ್ಧಿಯನ್ನೇ ಹೊಂದುತ್ತದೆ.

ಅಲಾಭೇನೈವ ಕಾಮಾನಾಂ ಶೋಕಂ ತ್ಯಜತಿ ಪಂಡಿತಃ ।
ಆಯಾಸವಿಕಟಸ್ತೀವ್ರಃ ಕಾಮಾಗ್ನಿಸ್ತರ್ಷಕಾರಣಃ ।
ಇಂದ್ರಿಯಾರ್ಥೇಷು ಸಮ್ಮೋಹಾತ್ ಪಚತ್ಯಕುಶಲಂ ಜನಮ್ ॥೩೯॥

ಪಂಡಿತನಾದವನು ಕಾಮಗಳನ್ನು ಹೊಂದದೆ ಶೋಕವನ್ನು ತ್ಯಜಿಸುತ್ತಾನೆ. ಆಯಾಸದಿಂದ ತೀವ್ರವಾಗಿ ಜ್ವಲಿಸುವ, ಆಸೆ ಎಂಬ ಸಮಿತ್ತುಗಳನ್ನು ಹೊಂದಿದ, ಕಾಮಾಗ್ನಿಯು ಇಂದ್ರಿಯಾರ್ಥಗಳ ಸಮ್ಮೋಹನಿಮಿತ್ತದಿಂದ ಅವಿವೇಕಿಯಾದ ಮನುಷ್ಯನನ್ನು ಸುಡುತ್ತದೆ.

ಯತ್ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಃ ಸ್ತ್ರಿಯಃ ।
ನಾಲಮೇಕಸ್ಯ ಪರ್ಯಾಪ್ತಮಿತಿ ಪಶ್ಯನ್ನ ಮುಹ್ಯತಿ ॥೪೦॥

ಭೂಮಿಯಲ್ಲಿ ಎಷ್ಟು ವ್ರೀಹಿಯವಾದಿ ಧಾನ್ಯಗಳಿವೆಯೋ, ಎಷ್ಟು ಸುವರ್ಣವಿದೆಯೋ, ಎಷ್ಟು ಪಶುಗಳು ಮತ್ತು ಸ್ತ್ರೀಯರು ಇದ್ದಾರೆಯೋ ಅವೆಲ್ಲವೂ ಒಬ್ಬನ ಭೋಗಕ್ಕೆ ಸಾಕಾಗುವುದಿಲ್ಲ (ಎಲ್ಲವನ್ನೂ ಭೋಗಿಸಿದರೂ ತೃಪ್ತಿ ಉಂಟಾಗುವುದಿಲ್ಲವೆಂದು ತಿಳಿಯುವವನು ಮೋಹಕ್ಕೆ ಸಿಲುಕುವುದಿಲ್ಲ.

ಯಚ್ಚ ಕಾಮಸುಖಂ ಲೋಕೇ ಯಚ್ಚ ದಿವ್ಯಂ ಮಹತ್ಸುಖಮ್ ।
ತೃಷ್ಣಾಕ್ಷಯಸುಖಸ್ಯೈತೇ ನಾರ್ಹತಃ ಷೋಡಶೀಂ ಕಲಾಮ್ ॥೪೧॥

ಲೋಕದಲ್ಲಿರುವ ಕಾಮಸುಖವಾಗಲೀ, ಸ್ವರ್ಗದಲ್ಲಿರುವ ದಿವ್ಯ ಸುಖವಾಗಲೀ ಆಸೆಯ ವಿನಾಶದಿಂದ ಉಂಟಾಗುವ ಸುಖದ ಹದಿನಾರನೆಯ ಒಂದು ಭಾಗಕ್ಕೂ ಸಮನಾಗುವುದಿಲ್ಲ.

ಇಂದ್ರಿಯಾಣೇಂದ್ರಿಯಾರ್ಥೇಷು ನೈವ ಧೀರೋ ನಿಯೋಜಯೇತ್ ।
ಮನಃಷಷ್ಠಾನಿ ಸಂಯಮ್ಯ ನಿತ್ಯಮಾತ್ಮನಿ ಯೋಜಯೇತ್ ॥೪೨॥

ಧೀರನಾದವನು ಇಂದ್ರಿಯಗಳನ್ನು ಅವುಗಳ ವಿಷಯದಲ್ಲಿ ಬಿಡಬಾರದು. ಮನಸ್ಸಿನಿಂದ ಕೂಡಿದ ಆರು ಇಂದ್ರಿಯಗಳನ್ನು ನಿಯಂತ್ರಿಸಿ ಪರಮಾತ್ಮನನ್ನು ಚಿಂತಿಸಬೇಕು.

ಇಂದ್ರಿಯಾಣಾಂ ವಿಸರ್ಗೇಣ ದೋಷಮೃಚ್ಛತ್ಯಸಂಶಯಮ್ ।
ಸನ್ನಿಯಮ್ಯ ನು ತಾನ್ಯೇವ ತತಃ ಸಿದ್ಧಿಮವಾಪ್ನುಯಾತ್ ॥೪೩॥

ಇಂದ್ರಿಯಗಳನ್ನು ಹರಿಯಲು ಬಿಡುವುದರಿಂದ ನಿಸ್ಸಂಶಯವಾಗಿ ದೋಷ ಉಂಟಾಗುತ್ತದೆ. ಅವುಗಳನ್ನೇ ನಿಯಂತ್ರಿಸಿದರೆ ಅದರಿಂದ ಸಿದ್ಧಿಯುಂಟಾಗುತ್ತದೆ.

ಷಣ್ಣಾಮಾತ್ಮನಿ ಯುಕ್ತಾನಾಮೈಶ್ವರ್ಯಂ ಯೋಽಧಿಗಚ್ಛತಿ ।
ನ ಚ ಪಾಪೈರ್ನ ಚಾನರ್ಥೈಃ ಸಂಯುಜ್ಯೇತ ವಿಚಕ್ಷಣಃ ॥೪೪॥

ಪರಮಾತ್ಮನನ್ನು ವಿಷಯೀಕರಿಸುವ ಆರು ಇಂದ್ರಿಯಗಳ ಮೇಲೆ ಯಾವನು ಪ್ರಭುತ್ವವನ್ನು ಹೊಂದುತ್ತಾನೆಯೋ ಅಂತಹ ವಿವೇಕಿಯಾದವನು ಪಾಪಗಳಿಂದಾಗಲೀ, ಅನರ್ಥಗಳಿಂದಾಗಲೀ ಸಂಯೋಗವನ್ನು ಹೊಂದುವುದಿಲ್ಲ.

ಅಪ್ರಮತ್ತಃ ಸದಾ ರಕ್ಷೇದಿಂದ್ರಿಯಾಣಿ ವಿಚಕ್ಷಣಃ ।
ಅರಕ್ಷಿತೇಷು ತೇಷ್ವಾಶು ನರೋ ನರಕಮೇತಿ ಹಿ ॥೪೫॥

ವಿವೇಕಿಯಾದವನು ಜಾಗರೂಕನಾಗಿ, ಯಾವಾಗಲೂ ಇಂದ್ರಿಯಗಳನ್ನು ರಕ್ಷಿಸಬೇಕು. ಇಂದ್ರಿಯಗಳನ್ನು ರಕ್ಷಿಸಿಕೊಳ್ಳದಿದ್ದರೆ ಮನುಷ್ಯನು ಶೀಘ್ರವಾಗಿ ನರಕಕ್ಕೆ ಹೋಗುತ್ತಾನೆ.

ಹೃದಿ ಕಾಮಮಯಶ್ಚಿತ್ರೋ ಮೋಹಸಂಚಯಸಂಭವಃ ।
ಅಜ್ಞಾನರೂಢಮೂಲಸ್ತು ವಿವಿತ್ಸಾಪರಿಷೇಚನಃ ॥೪೬॥

ರೋಷಲೋಭಮಹಾಸ್ಕಂಧಃ ಪುರಾ ದುಷ್ಕೃತಸಾರವಾನ್ ।
ಆಯಾಸವಿಟಪಸ್ತೀವ್ರಃ ಶೋಕಪುಷ್ಪೋ ಭಯಾಂಕುರಃ ॥೪೭॥

ನಾನಾಸಂಕಲ್ಪಪತ್ರಾಢ್ಯಃ ಪ್ರಮಾದಾತ್ ಪರಿವರ್ಧಿತಃ ।
ಮಹತೀಭಿಃ ಪಿಪಾಸಾಭಿಃ ಸಮಂತಾತ್‌ಪರಿವೇಷ್ಟಿತಃ ॥೪೮॥

ಸಂರೋಹತ್ಯಕೃತಪ್ರಜ್ಞೇ ಪಾದಪಃ ಕಾಮಸಂಭವಃ ।
ನೈವ ರೋಹತಿ ತತ್ತ್ವಜ್ಞೇ ರೂಢೋ ವಾ ಛಿದ್ಯತೇ ಪುನಃ ॥೪೯॥

ಮನಸ್ಸಿನಲ್ಲಿ ಕಾಮಮಯವಾದ, ವಿಚಿತ್ರವಾದ, ಮೋಹದ ರಾಶಿಯಲ್ಲಿ ಬೆಳೆದ, ಅಜ್ಞಾನದಲ್ಲಿ ಮೂಲವನ್ನು ಹೊಂದಿದ, ಆಸೆ ಎಂಬ ನೀರಿನಿಂದ ಬೆಳೆಸಿದ, ರೋಷ-ಲೋಭಗಳೆಂಬ ದೊಡ್ಡ ಕೊಂಬೆಯನ್ನು ಹೊಂದಿದ, ಹಿಂದೆ ಮಾಡಿದ ದುಷ್ಕೃತವೆಂಬ ಬಲವನ್ನುಳ್ಳ, ತೀವ್ರವಾದ ಆಯಾಸವೆಂಬ ಸಣ್ಣ ಕೊಂಬೆಗಳನ್ನು ಹೊಂದಿದ, ಶೋಕಪುಷ್ಪಗಳನ್ನೂ, ಭಯಚಿಗುರುಗಳನ್ನೂ ಹೊಂದಿದ, ನಾನಾ ಸಂಕಲ್ಪಗಳೆಂಬ ಪತ್ರಗಳಿಂದ ತುಂಬಿದ, ಪ್ರಮಾದದಿಂದ, ಚೆನ್ನಾಗಿ ಬೆಳೆದ, ದೊಡ್ಡ ಆಸೆಗಳೆಂಬ ಬಿಳಿಲುಗಳಿಂದ ಚೆನ್ನಾಗಿ ಸುತ್ತುವರಿಯಲ್ಪಟ್ಟ, ಕಾಮದಿಂದ ಉಂಟಾದ ದೊಡ್ಡ ವೃಕ್ಷವು ವಿವೇಕಶೂನ್ಯನಾದ ಮನುಷ್ಯನಲ್ಲಿ ಬೆಳೆಯುತ್ತದೆ. ತತ್ತ್ವಜ್ಞಾನಿಯಾದ ಪುರುಷನಲ್ಲಿ ಅದು ಬೆಳೆಯುವುದಿಲ್ಲ. ಬೆಳೆದರೂ ಅದು ಕತ್ತರಿಸಲ್ಪಡುತ್ತದೆ.

ಕೃಚ್ಛ್ರೋಪಾಯೇಷ್ವನಿತ್ಯೇಷು ನಿಃಸಾರೇಷು ಫಲೇಷು ಚ ।
ದುಃಖಾದಿಷು ದುರಂತೇಷು ಕಾಮಯೋಗೇಷು ಕಾ ರತಿಃ ॥೫೦॥

ಕಷ್ಟಮಯವಾದ ಸಾಧನಗಳಿಂದ ಕೂಡಿದ, ನಿಸ್ಸಾರವಾದ ಫಲಗಳಿಂದ ಕೂಡಿದ, ದುಃಖದ ಪ್ರಾರಂಭವನ್ನೂ, ದುಃಖದ ಅಂತ್ಯವನ್ನೂ ಹೊಂದಿರುವ ಕಾಮಯೋಗಗಳಲ್ಲಿ ಯಾವ ರತಿ ಉಂಟಾದೀತು?

ಯೇನ ಸಂವತ್ಸರೋ ದೃಷ್ಟಃ ಸಕೃತ್‌ಕಾಮಶ್ಚ ಸೇವಿತಃ ।
ತೇನ ಸರ್ವಮಿದಂ ದೃಷ್ಟಂ ಪುನರಾವರ್ತಕಂ ಜಗತ್ ॥೫೧॥

ಯಾವನು ಒಂದು ಸಂವತ್ಸರವನ್ನು ನೋಡಿದ್ದಾನೆಯೋ, ಒಂದು ಬಾರಿ ಕಾಮವನ್ನು ಭೋಗಿಸಿದ್ದಾನೆಯೋ ಅವನು ಎಲ್ಲವನ್ನೂ ನೋಡಿದ್ದಾನೆ. ಜಗತ್ತಿನಲ್ಲಿ ಎಲ್ಲವೂ ಪುನಃ ಪುನಃ ಅವೇ ಬರುತ್ತವೆ.

ಭೋಗಾ ಭುಕ್ತಾ ಮನುಷ್ಯೇಣ ಸ್ವಪ್ನಾ ಇವ ಭವಂತಿ ತೇ ।
ಸ್ವಪ್ನೋಪಭೋಗತುಲ್ಯೇಷು ಕಾಮಭೋಗೇಷು ಕಾ ರತಿಃ ॥೫೨॥

ಮನುಷ್ಯನು ಅನುಭವಿಸಿದ ಭೋಗಗಳು ಸ್ವಪ್ನದಂತಾಗುತ್ತವೆ. ಸ್ವಪ್ನಭೋಗ ಸಮಾನವಾದ ಕಾಮಭೋಗಗಳಲ್ಲಿ ಯಾವ ರತಿ?

ಇಂದ್ರಿಯೇಷು ಚ ಜೀರ್ಯತ್ಸು ಛಿದ್ಯಮಾನೇ ತಥಾऽऽಯುಷಿ ।
ಪುರಸ್ತಾಚ್ಚ ಸ್ಥಿತೇ ಮೃತ್ಯೌ ಕಿಂ ಸುಖಂ ಪಶ್ಯತಃ ಶುಭೇ ॥೫೩॥

ಎಲೌ ಶುಭಳೇ, ಇಂದ್ರಿಯಗಳು ಜೀರ್ಣವಾಗುತ್ತಿರುವಾಗ, ಆಯುಸ್ಸು ಕ್ಷೀಣವಾಗುತ್ತಿರುವಾಗ, ಎದುರಿಗೆ ಮೃತ್ಯುವಿರುವಾಗ ಇವುಗಳನ್ನು ನೋಡುವ ಮನುಷ್ಯನಿಗೆ ಯಾವ ಸುಖ?

ವ್ಯಾಧಿಭಿಃ ಪೀಡ್ಯಮಾನಸ್ಯ ನಿತ್ಯಂ ಶಾರೀರಮಾನಸೈಃ ।
ನರಸ್ಯಾಕೃತಕೃತ್ಯಸ್ಯ ಕಿಂ ಸುಖಂ ಭವತಿ ಪ್ರಿಯೇ ॥೫೪॥

ಪ್ರಿಯೆಯೇ, ನಿತ್ಯವೂ ದೈಹಿಕವಾದ ಮತ್ತು ಮಾನಸಿಕವಾದ ವ್ಯಾಧಿಗಳಿಂದ ಪೀಡಿಸಲ್ಪಡುವ, ಕೃತಕೃತ್ಯನಲ್ಲದ ಮನುಷ್ಯನಿಗೆ ಯಾವ ಸುಖವುಂಟಾಗುತ್ತದೆ?

ಸಂಚಿನ್ವಾನಂ ತಮೇವಾರ್ಥಂ ಕಾಮಾನಾಮವಿತೃಪ್ತಕಮ್ ।
ವ್ಯಾಘ್ರಃ ಪಶುಮಿವಾರಣ್ಯೇ ಮೃತ್ಯುರಾದಾಯ ಗಚ್ಛತಿ ॥೫೫॥

ಅದೇ ಧನವನ್ನು ಸಂಪಾದಿಸುತ್ತಾ ಕಾಮಗಳಲ್ಲಿ ತೃಪ್ತಿಯನ್ನು ಹೊಂದದ ಮನುಷ್ಯನನ್ನು ಅರಣ್ಯದಲ್ಲಿ ವ್ಯಾಘ್ರವು ಪಶುವನ್ನು ಎತ್ತಿಕೊಂಡು ಹೋದಂತೆ ಮೃತ್ಯುವು ಎತ್ತಿಕೊಂಡು ಹೋಗುತ್ತದೆ.

ಜನ್ಮಮೃತ್ಯುಜರಾದುಃಖೈಃ ಸತತಂ ಸಮಭಿದ್ರುತಃ ।
ಸಂಸಾರೇ ಪಚ್ಯಮಾನಸ್ತು ಪಾಪಾನ್ನೋದ್ವಿಜತೇ ಜನಃ ॥೫೬॥

ಜನನ-ಮರಣ-ಮುಪ್ಪು-ದುಃಖಗಳು ಇವುಗಳಿಂದ ಸತತವಾಗಿ ಉಪದ್ರವಕ್ಕೆ ಒಳಗಾಗಿ ಸಂಸಾರದಲ್ಲಿ ಬೇಯುವ ಮನುಷ್ಯನು ಪಾಪಕ್ಕೆ ಹೆದರುವುದಿಲ್ಲ.

ಉಮಾ

ಕೇನೋಪಾಯೇನ ಮರ್ತ್ಯಾನಾಂ ನಿವರ್ತ್ಯೇತೇ ಜರಾಂತಕೌ ।
ಯದ್ಯಸ್ತಿ ಭಗವನ್ ಮಹ್ಯಮೇತದಾಚಕ್ಷ್ವ ಮಾಚಿರಮ್ ॥೫೭॥

ತಪಸಾ ವಾ ಸುಮಹತಾ ಕರ್ಮಣಾ ವಾ ಶ್ರುತೇನ ವಾ ।
ರಸಾಯನಪ್ರಯೋಗೈರ್ವಾ ಕೇನಾತ್ಯೇತಿ ಜರಾಂತಕೌ ॥೫೮॥

ಉಮಾ– ಯಾವ ಉಪಾಯದಿಂದ ಮನುಷ್ಯರಿಗೆ ಮುಪ್ಪು-ಸಾವುಗಳು ದೂರವಾಗುತ್ತವೆ? ಭಗವಂತನೇ, ಅಂತಹ ಉಪಾಯವಿದ್ದರೆ ಶೀಘ್ರವಾಗಿ ನನಗೆ ಹೇಳು. ದೊಡ್ಡ ತಪಸ್ಸಿನಿಂದಾಗಲೀ ಅಥವಾ ಕರ್ಮದಿಂದಾಗಲೀ ಅಥವಾ ವಿದ್ಯೆಯಿಂದಾಗಲೀ ಅಥವಾ ವ್ರತ-ದಾನ ಪ್ರಯೋಗದಿಂದಾಗಲೀ ಯಾವುದರಿಂದ ಜರಾ-ಮರಣಗಳನ್ನು ದಾಟಬಹುದು?

ಮಹೇಶ್ವರಃ

ನೈತದಸ್ತಿ ಮಹಾಭಾಗೇ ಜರಾಮೃತ್ಯುನಿವರ್ತನಮ್ ।
ಸರ್ವಲೋಕೇಷು ಜಾನೀಹಿ ಮೋಕ್ಷಾದನ್ಯತ್ರ ಭಾಮಿನಿ ॥೫೯॥

ಮಹೇಶ್ವರ– ಮಹಾಭಾಗ್ಯವಂತಳೇ, ಜರಾ-ಮೃತ್ಯುಗಳು ಇಲ್ಲದಂತೆ ಮಾಡುವ ಯಾವ ಉಪಾಯವೂ ಯಾವ ಲೋಕದಲ್ಲೂ ಇಲ್ಲ. ಭಾಮಿನಿಯೇ, ಮೋಕ್ಷ ಒಂದೇ ಉಪಾಯ. ಅದನ್ನು ಬಿಟ್ಟು ಬೇರೆ ಉಪಾಯವಿಲ್ಲ.

ನ ಧನೇನ ನ ರಾಜ್ಯೇನ ನೋಗ್ರೇಣ ತಪಸಾऽಪಿ ವಾ ।
ಮರಣಂ ನಾತಿತರತೇ ವಿನಾ ಮುಕ್ತ್ಯಾ ಶರೀರಿಣಃ ॥೬೦॥

ಧನದಿಂದಾಗಲೀ, ರಾಜ್ಯದಿಂದಾಗಲೀ, ಉಗ್ರವಾದ ತಪಸ್ಸಿನಿಂದಾಗಲೀ ದೇಹಿಯು ಮೋಕ್ಷ ಒಂದನ್ನು ಬಿಟ್ಟು ಬೇರೆ ಯಾವುದರಿಂದಲೂ ಮರಣವನ್ನು ದಾಟಲಾರ.

ಅಶ್ವಮೇಧಸಹಸ್ರೇಣ ವಾಜಪೇಯಶತೇನ ಚ ।
ನ ತರಂತಿ ಜರಾಮೃತ್ಯೂ ನಿರ್ವಾಣಾಧಿಗಮಾದ್ ವಿನಾ ॥೬೧॥

ಮೋಕ್ಷದ ಪ್ರಾಪ್ತಿಯನ್ನು ಬಿಟ್ಟು ಸಹಸ್ರ ಅಶ್ವಮೇಧಗಳಿಂದಾಗಲೀ, ನೂರು ವಾಜಪೇಯಗಳಿಂದಾಗಲೀ ಜರಾ-ಮರಣಗಳನ್ನು ದಾಟಲು ಸಾಧ್ಯವಿಲ್ಲ.

ಐಶ್ವರ್ಯಂ ಧನಧಾನ್ಯಂ ಚ ವಿದ್ಯಾಲಾಭಸ್ತಪಸ್ತಥಾ ।
ರಸಾಯನಪ್ರಯೋಗಾಶ್ಚ ನ ತರಂತಿ ಜರಾಂತಕೌ ॥೬೨॥

ಐಶ್ವರ್ಯವಾಗಲೀ, ಧನ-ಧಾನ್ಯಗಳಾಗಲೀ, ವಿದ್ಯಾಲಾಭವಾಗಲೀ, ತಪಸ್ಸಾಗಲೀ, ರಸಾಯನ ಪ್ರಯೋಗವಾಗಲೀ ಜರಾ-ಮರಣಗಳನ್ನು ದಾಟಿಸುವುದಿಲ್ಲ.

ದಾನಯಜ್ಞತಪಃಶೀಲಾ ರಸಾಯನವಿದೋಽಪಿ ವಾ ।
ಸ್ವಾಧ್ಯಾಯನಿರತಾ ವಾಽಪಿ ನ ತರಂತಿ ಜರಾಂತಕೌ ॥೬೩॥

ದಾನ-ಯಜ್ಞ-ತಪಶ್ಶೀಲರಾದವರೂ, ರಸಾಯನ ತಿಳಿದವರೂ, ಸ್ವಾಧ್ಯಾಯ ನಿರತರೂ ಸಹ ಜರಾ-ಮರಣಗಳನ್ನು ದಾಟುವುದಿಲ್ಲ.

ದೇವದಾನವಗಂಧರ್ವಕಿನ್ನರೋರಗರಾಕ್ಷಸಾನ್ ।
ಸ್ವವಶೇ ಕುರುತೇ ಕಾಲೋ ನ ಕಾಲಸ್ಯಾಸ್ತ್ಯಗೋಚರಃ ॥೬೪॥

ಕಾಲವು ದೇವ-ದಾನವ-ಗಂಧರ್ವರನ್ನು ತನ್ನ ವಶ ಮಾಡಿಕೊಳ್ಳುತ್ತದೆ. ಕಾಲದ ಪ್ರಭಾವಕ್ಕೆ ಸಿಲುಕದವನು ಯಾವನೂ ಇಲ್ಲ.

ನ ಹ್ಯಹಾನಿ ನಿವರ್ತಂತೇ ನ ಮಾಸಾ ನ ಪುನಃ ಕ್ಷಪಾಃ ।
ಸೋಽಯಂ ಪ್ರಪದ್ಯತೇಽಧ್ವಾನಮಜಸ್ರಂ ಧ್ರುವಮವ್ಯಯಮ್ ॥೬೫॥

ಕಳೆದು ಹೋದ ದಿನಗಳಾಗಲೀ, ಮಾಸಗಳಾಗಲೀ, ರಾತ್ರಿಗಳಾಗಲೀ ಹಿಂದೆ ಬರುವುದಿಲ್ಲ. ಜೀವನು ಸತತವಾಗಿ ಅಂತಹ ಧ್ರುವವಾದ, ನಾಶರಹಿತವಾದ ಕಾಲ ಮಾರ್ಗದಲ್ಲಿ ಮುಂದುವರೆಯುತ್ತಾನೆ.

ಸ್ರವಂತಿ ನ ನಿವರ್ತಂತೇ ಸ್ರೋತಾಂಸಿ ಸರಿತಾಮಿವ ।
ಆಯುರಾದಾಯ ಮರ್ತ್ಯಾನಾಮಹೋರಾತ್ರಾಣಿ ಸಂತತಮ್ ॥೬೬॥

ನದಿಗಳ ಪ್ರವಾಹಗಳು ಹರಿಯುತ್ತವೆ ಮತ್ತು ಹಿಂದೆ ಬರುವುದಿಲ್ಲ. ಅದರಂತೆ ಅಹೋ-ರಾತ್ರಿಗಳು ಸತತವಾಗಿ ಮನುಷ್ಯನ ಆಯುಸ್ಸನ್ನು ತೆಗೆದುಕೊಂಡು ಮುಂದೆ ಹೋಗುತ್ತವೆ. ಹಿಂದೆ ಬರುವುದಿಲ್ಲ.

ಜೀವಿತಂ ಸರ್ವಭೂತಾನಾಮಕ್ಷಯಃ ಕ್ಷಪಯನ್ನಸೌ ।
ಆದಿತ್ಯೋ ಹ್ಯಸ್ತಮಭ್ಯೇತಿ ಪುನಃ ಪುನರುದೇತಿ ಚ ॥೬೭॥

ಕಾಲವು ಸ್ವತಃ ನಾಶರಹಿತವಾಗಿ ಸರ್ವಭೂತಗಳ ಜೀವನವನ್ನು ನಾಶಗೊಳಿಸುತ್ತದೆ. ಸೂರ್ಯನು ಅಸ್ತವನ್ನು ಹೊಂದುತ್ತಾನೆ. ಪುನಃ ಪುನಃ ಉದಯಿಸುತ್ತಾನೆ.

ಯಸ್ಯಾಂ ರಾತ್ರ್ಯಾಂ ವ್ಯತೀತಾಯಾಮಾಯುರಲ್ಪತರಂ ಭವೇತ್ ।
ಗಾಧೋದಕೇ ಮತ್ಸ್ಯ ಇವ ಕಿನ್ನು ತಸ್ಯ ಕುಮಾರತಾ ॥೬೮॥

ಒಂದು ರಾತ್ರಿಯು ಕಳೆದರೆ ಆಯುಸ್ಸು ಕ್ಷೀಣವಾಗುತ್ತದೆ. ಅಲ್ಪ ನೀರಿನಲ್ಲಿರುವ ಮತ್ಸ್ಯದಂತೆ ಮನುಷ್ಯನು ಹುಟ್ಟಿದ ಮೇಲೆ ಅವನು ಹೇಗೆ ಮಾರನಾಗುತ್ತಾನೆ?

ಮರಣಂ ಹಿ ಶರೀರಸ್ಯ ನಿಯತಂ ಧ್ರುವಮೇವ ಚ ।
ತಿಷ್ಠನ್ನೇವ ಕ್ಷಣಂ ಸರ್ವಃ ಕಾಲಸ್ಯೈತಿ ವಶಂ ಪುನಃ ॥೬೯॥

ಶರೀರಕ್ಕೆ ಮರಣವು ನಿಯತವಾದುದು ಮತ್ತು ಧ್ರುವವಾದುದು. ಒಂದು ಕ್ಷಣ ಸಮ್ಮನೆ ಕುಳಿತರೂ ಮನುಷ್ಯನು ಕಾಲವಶನಾಗಿರುತ್ತಾನೆ.

ನ ಮ್ರಿಯೇರನ್ನ ಜೀರ್ಯೇರನ್ ಯದಿ ಸ್ಯುಃ ಸರ್ವದೇಹಿನಃ ।
ನ ಚಾನಿಷ್ಟಂ ಪ್ರವರ್ತೇತ ಶೋಕೋ ವಾ ಪ್ರಾಣಿನಾಂ ಕ್ವಚಿತ್ ॥೭೦॥

ಸರ್ವದೇಹಿಗಳು ಜರಾ-ಮರಣವನ್ನು ಹೊಂದಿರದಿದ್ದರೆ ಪ್ರಾಣಿಗಳಿಗೆ ಅನಿಷ್ಟವಾಗಲೀ, ಶೋಕವಾಗಲೀ ಇರುತ್ತಿರಲಿಲ್ಲ.

ಅಪ್ರಮತ್ತಃ ಪ್ರಮತ್ತೇಷು ಕಾಲೋ ಭೂತೇಷು ತಿಷ್ಠತಿ ।
ಅಪ್ರಮತ್ತಸ್ಯ ಕಾಲಸ್ಯ ಕ್ಷಯಂ ಪ್ರಾಪ್ತೋ ನ ಮುಚ್ಯತೇ ॥೭೧॥

ಕಾಲವು ಮೈಮರೆತ ಪ್ರಾಣಿಗಳಲ್ಲಿ ಎಚ್ಚರವಾಗಿರುತ್ತದೆ. ಅಂತಹ ಜಾಗರೂಕವಾದ ಕಾಲದ ಗೃಹಕ್ಕೆ ಹೋದವನು ಬಿಡುಗಡೆಯನ್ನು ಹೊಂದುವುದಿಲ್ಲ.

ಶ್ವಃ ಕಾರ್ಯಮದ್ಯ ಕುರ್ವೀತ ಪೂರ್ವಾಹ್ಣೇ ಚಾಪರಾಹ್ಣಿಕಮ್ ।
ಕೋ ಹಿ ತದ್ವೇದ ಯತ್ರಾಸೌ ಮೃತ್ಯುನಾ ನಾಭಿವೀಕ್ಷಿತಃ ॥೭೨॥

ನಾಳೆ ಮಾಡುವ ಕಾರ್ಯವನ್ನು ಈ ದಿನವೇ ಮಾಡಬೇಕು. ಮಧ್ಯಾಹ್ನ ಮಾಡುವ ಕಾರ್ಯವನ್ನು ಪ್ರಾತಃಕಾಲದಲ್ಲಿಯೇ ಮಾಡಬೇಕು. ಮನುಷ್ಯನು ಯಾವಾಗ ಮೃತ್ಯುವಿನಿಂದ ನೋಡಲ್ಪಡುವುದಿಲ್ಲವೆಂದು ಯಾರು ತಿಳಿದಿದ್ದಾರೆ?

ವರ್ಷಾಸ್ವಿದಂ ಕರಿಷ್ಯಾಮಿ ಇದಂ ಗ್ರೀಷ್ಮವಸಂತಯೋಃ ।
ಇತಿ ಬಾಲಶ್ಚಿಂತಯತಿ ಅಂತರಾಯಂ ನ ಬುಧ್ಯತೇ ॥೭೩॥

ಇದನ್ನು ಮಳೆಗಾಲದಲ್ಲಿ ಮಾಡುತ್ತೇನೆ, ಇದನ್ನು ಗ್ರೀಷ್ಮ-ವಸಂತದಲ್ಲಿ ಮಾಡುತ್ತೇನೆ ಎಂದು ಬಾಲಕನಂತೆ ಚಿಂತಿಸುತ್ತಾನೆ. ವಿಘ್ನಗಳನ್ನು ಗಮನಿಸುವುದಿಲ್ಲ.

ಇದಂ ಮೇ ಸ್ಯಾದಿದಂ ಮೇ ಸ್ಯಾದಿತ್ಯೇವಂಮನಸೋ ನರಾಃ ।
ಅನವಾಪ್ತೇಷು ಕಾಮೇಷು ಹ್ರಿಯಂತೇ ಮರಣಂ ಪ್ರತಿ ॥೭೪॥

ಮನುಷ್ಯರು ಇದು ನನಗೆ ಬೇಕು, ಇದು ನನಗೆ ಬೇಕು ಎಂದು ಮನಸ್ಸಿನಲ್ಲಿ ಚಿಂತಿಸುತ್ತಾ , ಆ ಕಾಮುಗಳನ್ನು ಹೊಂದದೆಯೇ ಮರಣದ ಕಡೆಗೆ ಎಳೆದೊಯ್ಯಲ್ಪಡುತ್ತಾರೆ.

ಕಾಲಪಾಶೇನ ಬದ್ಧಾನಾಮಹನ್ಯಹನಿ ಜೀರ್ಯತಾಮ್ ।
ಕಾ ಶ್ರದ್ಧಾ ಪ್ರಾಣಿನಾಂ ಮಾರ್ಗೇ ವಿಷಮೇ ಭ್ರಮತಾಂ ಸದಾ ॥೭೫॥

ಕಾಲಪಾಶದಿಂದ ಬದ್ಧರಾಗಿ ದಿನದಿನವೂ ಮುಪ್ಪನ್ನು ಹೊಂದುವ, ವಿಷಮವಾದ ಮಾರ್ಗದಲ್ಲಿ ಸದಾ ಸಂಚರಿಸುವ ಪ್ರಾಣಿಗಳಿಗೆ ಆ ಕಾಮಗಳಲ್ಲಿ ಯಾವ ಆಸೆ?

ಯುವೈವ ಧರ್ಮಶೀಲಃ ಸ್ಯಾದನಿಮಿತ್ತಂ ಹಿ ಜೀವಿತಮ್ ।
ಫಲಾನಾಮಿವ ಪಕ್ವಾನಾಂ ಸದಾ ಹಿ ಪತನಾದ್ ಭಯಮ್ ॥೭೬॥

ಯುವಕನಾಗಿಯೇ ಧರ್ಮಶೀಲನಾಗಬೇಕು. ಜೀವಿತವು ಅನಿಶ್ಚಿತವಾದುದು. ಪಕ್ವವಾದ ಫಲವು ಕೆಳಗೆ ಬೀಳುವಂತೆ ಯಾವಾಗಲೂ ಮರಣರೂಪವಾದ ಪತನದ ಭಯವಿದೆ.

ಮರ್ತ್ಯಸ್ಯ ಕಿಮು ತೈರ್ದಾರೈಃ ಪುತ್ರೈರ್ಭೋಗೈಃ ಪ್ರಿಯೈರಪಿ ।
ಏಕಾಹ್ನಾ ಸರ್ವಮುತ್ಸೃಜ್ಯ ಮೃತ್ಯೋರ್ಹಿ ವಶಮೇಯಿವಾನ್ ॥೭೭॥

ಮನುಷ್ಯನಿಗೆ ಪತ್ನಿಯಿಂದಾಗಲೀ, ಪುತ್ರರಿಂದಾಗಲೀ, ಪ್ರಿಯರಿಂದಾಗಲೀ ಭೋಗದಿಂದಾಗಲೀ ಆಗಬೇಕಾದುದೇನು? ಒಂದು ದಿವಸ ಎಲ್ಲವನ್ನೂ ಬಿಟ್ಟು ಮೃತ್ಯುವಿಗೆ ವಶನಾಗುವನಷ್ಟೆ?

ಜಾಯಾಮಾನಾಂಶ್ಚ ಸಂಪ್ರೇಕ್ಷ್ಯ ಮ್ರಿಯಮಾಣಾಂಸ್ತಥೈವ ಚ ।
ನ ಸಂವೇಗೋಽಸ್ತಿ ಚೇತ್ಪುಂಸಃ ಕಾಷ್ಠಲೋಷ್ಟಸಮೋ ಹಿ ಸಃ ॥೭೮॥

ಜನಿಸುವವರನ್ನೂ ಹಾಗೆಯೇ ಮರಣ ಹೊಂದುವವರನ್ನೂ ನೋಡಿ ಮನುಷ್ಯನಿಗೆ ಸಂಸಾರದ ಭಯ ಉಂಟಾಗದಿದ್ದರೆ ಅವನು ಕಾಷ್ಠ-ಲೋಷ್ಟಗಳಿಗೆ ಸಮನಾದವನು.

ವಿನಾಶಿನೋ ಹ್ಯಧ್ರುವಜೀವಿತಸ್ಯ
ಕಿಂ ಬಂಧುಭಿರ್ಮಿತ್ರಪರಿಗ್ರಹೈಶ್ಚ ।
ವಿಹಾಯ ಯದ್ ಗಚ್ಛತಿ ಸರ್ವಮೇವಂ
ಕ್ಷಣೇನ ಗತ್ವಾ ನ ನಿವರ್ತತೇ ಚ ॥೭೯॥

ವಿನಾಶವನ್ನು ಹೊಂದಲಿರುವ ಅನಿತ್ಯವಾದ ಜೀವಿತವುಳ್ಳ ಮನುಷ್ಯನಿಗೆ ಬಂಧುಗಳಿಂದಾಗಲೀ, ಮಿತ್ರರಿಂದಾಗಲೀ, ಭೋಗ ಸಾಧನಗಳಿಂದಾಗಲೀ ಆಗಬೇಕಾದುದೇನು? ಹೀಗೆ ಎಲ್ಲವನ್ನೂ ಬಿಟ್ಟು ಒಂದು ಕ್ಷಣದಲ್ಲಿ ಅವನು ಹೊರಟು ಹೋಗುತ್ತಾನೆ, ಮತ್ತೆ ಹಿಂದೆ ಬರುವುದಿಲ್ಲ.

ಏವಂ ಚಿಂತಯತೋ ನಿತ್ಯಂ ಸರ್ವಾರ್ಥಾನಾಮನಿತ್ಯತಾಮ್ ।
ಉದ್ವೇಗೋ ಜಾಯತೇ ಶೀಘ್ರಂ ನಿರ್ವಾಣಸ್ಯ ಪುರಸ್ಸರಃ ॥೮೦॥

ಹೀಗೆ ಎಲ್ಲ ಪದಾರ್ಥಗಳೂ ಅನಿತ್ಯವೆಂದು ಯಾವಾಗಲೂ ಚಿಂತಿಸುವ ಮನುಷ್ಯನಿಗೆ ಮೋಕ್ಷಕ್ಕೆ ಪುರಸ್ಸರವಾದ ಸಂಸಾರಭಯವು ಶೀಘ್ರವಾಗಿಯೇ ಉಂಟಾಗುತ್ತದೆ.

ತೇನೋದ್ವೇಗೇನ ಚಾಪ್ಯಸ್ಯ ವಿಮರ್ಶೋ ಜಾಯತೇ ಪುನಃ ।
ವಿಮರ್ಶೇನಾಥ ವೈರಾಗ್ಯಂ ಸರ್ವತ್ರಾಸ್ಯೋಪಜಾಯತೇ ॥೮೧॥

ಆ ಉದ್ವೇಗದಿಂದ ಅವನಿಗೆ ಪುನಃ ವಿಮರ್ಶೆ ಉಂಟಾಗುತ್ತದೆ. ನಂತರ ವಿಮರ್ಶೆಯಿಂದ ಎಲ್ಲವಸ್ತುಗಳಲ್ಲಿಯೂ ವೈರಾಗ್ಯವುಂಟಾಗುತ್ತದೆ.

ವೈರಾಗ್ಯೇಣ ಪರಾಂ ಶಾಂತಿಂ ಲಭಂತೇ ಮಾನವಾಃ ಶುಭೇ ।
ಮೋಕ್ಷಸ್ಯೋಪನಿಷದ್ ದೇವಿ ವೈರಾಗ್ಯಮಿತಿ ನಿಶ್ಚಿತಮ್ ॥೮೨॥

ಎಲೌ ಶುಭಳೇ, ಮನುಷ್ಯರು ವೈರಾಗ್ಯದಿಂದ ಪರಮಶಾಂತಿಯನ್ನು ಪಡೆಯುತ್ತಾರೆ. ದೇವಿಯೇ, ಮೋಕ್ಷಕ್ಕೆ ವೈರಾಗ್ಯವೆಂಬುದು ಇನ್ನೊಂದು ರಹಸ್ಯ ನಾಮ.

ಏತತ್ತೇ ಕಥಿತಂ ದೇವಿ ವೈರಾಗ್ಯೋತ್ಪಾದನಂ ವಚಃ ।
ಏತತ್ ಸರ್ವಂ ಹಿ ಸಂಚಿಂತ್ಯ ಮುಚ್ಯಂತೇ ಹಿ ಮುಮುಕ್ಷವಃ ॥೮೩॥

ದೇವಿಯೇ, ವೈರಾಗ್ಯೋತ್ಪಾದಕವಾದ ಮಾತುಗಳನ್ನು ನಿನಗೆ ಹೇಳಿದ್ದೇನೆ. ಮುಮುಕ್ಷುಗಳಾದವರು ಇದೆಲ್ಲವನ್ನೂ ಚಿಂತಿಸಿ ಮೋಕ್ಷವನ್ನು ಪಡೆಯುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಪರ್ವಣಿ ಸಂಸಾರೋದ್ವೇಗಜನನಂ ನಾಮ ಏಕೋನತ್ರಿಂಶತ್ಯುತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಮೂವತ್ತನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಜ್ಞಾನೋಪದೇಶ.

ಮಹೇಶ್ವರಃ

ಸಾಂಖ್ಯಜ್ಞಾನಂ ಪ್ರವಕ್ಷ್ಯಾಮಿ ಯಥಾವತ್ ತೇ ಶುಚಿಸ್ಮಿತೇ ।
ಯಜ್ಜ್ಞಾತ್ವಾ ನ ಪುನರ್ಮರ್ತ್ಯಃ ಸಂಸಾರೇಷು ಪತೇತ್ ಪುನಃ ॥೧॥

ಮಹೇಶ್ವರ– ಎಲೌ ಶುಚಿಸ್ಮಿತೆಯೇ, ಯಾವ ಜ್ಞಾನವನ್ನು ಸಂಪಾದಿಸಿದರೆ ಮನುಷ್ಯನು ಪುನಃ ಪುನಃ ಸಂಸಾರದಲ್ಲಿ ಬೀಳುವುದಿಲ್ಲವೋ ಅಂತಹ ಸಾಂಖ್ಯಜ್ಞಾನವನ್ನು ಉಪದೇಶ ಮಾಡುವೆನು.

ಜ್ಞಾನೇನೈವ ವಿಮುಕ್ತಾಸ್ತೇ ಸಾಂಖ್ಯಾಃ ಸನ್ನ್ಯಾಸಕೋವಿದಾಃ ।
ಶಾರೀರಂ ತು ತಪೋ ಘೋರಂ ಸಾಂಖ್ಯಾಃ ಪ್ರಾಹುರ್ನಿರರ್ಥಕಮ್ ॥

ಸಂನ್ಯಾಸ ಕುಶಲರಾದ ಸಾಂಖ್ಯರು ಜ್ಞಾನದಿಂದಲೇ ಮೋಕ್ಷ ಹೊಂದಿದರು. ಶಾರೀರಕವಾದ ಘೋರವಾದ ತಪಸ್ಸು ನಿರರ್ಥಕವೆಂದು ಸಾಂಖ್ಯರು ಹೇಳುತ್ತಾರೆ.

ಪಂಚವಿಂಶತಿಕಂ ಜ್ಞಾನಂ ತೇಷಾಂ ಜ್ಞಾನಮಿತಿ ಸ್ಮೃತಮ್ ।
ಮೂಲಪ್ರಕೃತಿರವ್ಯಕ್ತಮವ್ಯಕ್ತಾಜ್ಜಾಯತೇ ಮಹಾನ್ ॥೩॥

ಇಪ್ಪತ್ತೈದು ತತ್ತ್ವಗಳ ಜ್ಞಾನವು ಅವರಿಗೆ ಸಮ್ಮತವಾದ ಜ್ಞಾನವೆಂದು ಹೇಳಲಾಗುತ್ತದೆ. ಮೂಲ ಪ್ರಕೃತಿಯು ಅವ್ಯಕ್ತಸಂಜ್ಞೆಯನ್ನುಳ್ಳದ್ದು. ಅವ್ಯಕ್ತದಿಂದ ಮಹತ್ತತ್ವವು ಜನಿಸುತ್ತದೆ.

ಮಹತೋಽಭೂದಹಂಕಾರಸ್ತಸ್ಮಾತ್ ತನ್ಮಾತ್ರಪಂಚಕಮ್ ।
ಇಂದ್ರಿಯಾಣಿ ದಶೈಕಂ ಚ ತನ್ಮಾತ್ರೇಭ್ಯೋ ಭವಂತ್ಯುತ ॥೪॥

ತೇಭ್ಯೋ ಭೂತಾನಿ ಪಂಚ ಸ್ಯುರಿತಿ ಕ್ಷೇತ್ರಸಮುಚ್ಚಯಃ ।
ಅಸ್ಯ ಕ್ಷೇತ್ರಸ್ಯ ಸಂಕ್ಷೇಪಂ ಚತುರ್ವಿಂಶತಿರಿಷ್ಯತೇ ।
ಪಂಚವಿಂಶತಿರಿತ್ಯಾಹುಃ ಪುರುಷೇಣೇಹ ಸಂಖ್ಯಯಾ ॥೫॥

ಮಹತತ್ತ್ವದಿಂದ ಅಹಂಕಾರತತ್ತ್ವವೂ, ಅಹಂಕಾರತತ್ತ್ವದಿಂದ ಪಂಚತನ್ಮಾತ್ರಗಳೂ, ಏಕಾದಶ ಇಂದ್ರಿಯಗಳೂ ಉಂಟಾಗುತ್ತವೆ. ಆ ಪಂಚತನ್ಮಾತ್ರಗಳಿಂದ ಪಂಚಭೂತಗಳು ಉಂಟಾಗುತ್ತವೆ. ಇದು ಕ್ಷೇತ್ರದ ಸಮೂಹ. ಈ ಕ್ಷೇತ್ರವು ಸಂಕ್ಷೇಪವಾಗಿ ಇಪ್ಪತ್ನಾಲ್ಕು ತತ್ತ್ವಗಳಿಂದ ಕೂಡಿದೆ ಎಂದು ಹೇಳಲಾಗುತ್ತದೆ. ಆ ತತ್ತ್ವಗಳ ಅಭಿಮಾನಿ ದೇವತೆಗಳನ್ನು ಸೇರಿಸಿದರೆ ಇಪ್ಪತ್ತೈದು ತತ್ತ್ವಗಳಾಗುತ್ತವೆ.

ಸತ್ವಂ ರಜಸ್ತಮಶ್ಚೇತಿ ಗುಣಾಃ ಪ್ರಕೃತಿಸಂಭವಾಃ ।
ತೈಃ ಸೃಜತ್ಯಖಿಲಂ ಲೋಕಂ ಪ್ರಕೃತಿಃ ಸ್ವಾತ್ಮಕೈರ್ಗುಣೈಃ ॥೬॥

ಸತ್ವ-ರಜಸ್-ತಮೋಗುಣಗಳು ಪ್ರಕೃತಿಯಿಂದ ಉಂಟಾದವುಗಳು. ಪ್ರಕೃತಿಯು ತನ್ನ ಅಂಶಗಳಾದ ಆ ಗುಣಗಳಿಂದ ಎಲ್ಲ ಲೋಕಗಳನ್ನೂ ಸೃಷ್ಟಿಸುತ್ತದೆ (ಪರಮಾತ್ಮನು ಪ್ರಕೃತಿಯ ಗುಣಗಳನ್ನು ಉಪಾದಾನ ಮಾಡಿಕೊಂಡು ಎಲ್ಲ ಲೋಕಗಳನ್ನೂ ಸೃಷ್ಟಿಸುತ್ತಾನೆ).

ಇಚ್ಛಾ ದ್ವೇಷಃ ಸುಖಂ ದುಃಖಂ ಸಂಘಾತಶ್ಚೇತನಾ ಧೃತಿಃ ।
ವಿಕಾರಾಃ ಪ್ರಕೃತೇಶ್ಚೈತೇ ವೇದಿತವ್ಯಾ ಮನೀಷಿಭಿಃ ॥೭॥

ಇಚ್ಛೆ, ದ್ವೇಷ, ಸುಖ, ದುಃಖ, ಸಂಘಾತ, ಚೇತನಾ, ಧೈರ್ಯ- ಇವೆಲ್ಲವನ್ನೂ ವಿವೇಕಿಗಳು ಪ್ರಕೃತಿಯ ವಿಕಾರವೆಂದು ತಿಳಿಯಬೇಕು.

ಲಕ್ಷಣಂ ಚಾಪಿ ಸರ್ವೇಷಾಂ ವಿಕಲ್ಪಂ ಚಾದಿತಃ ಪೃಥಕ್ ।
ವಿಸ್ತರೇಣ ಪ್ರವಕ್ಷ್ಯಾಮಿ ತಸ್ಯ ವ್ಯಾಖ್ಯಾಮಿಮಾಂ ಶೃಣು ॥೮॥

ಇವೆಲ್ಲದರ ಲಕ್ಷಣವನ್ನು ಮತ್ತು ವಿಭಾಗವನ್ನು ಮೊದಲಿನಿಂದಲೂ ಕೇಳು. ಅದರ ವಿವರಣೆಯನ್ನು ವಿಸ್ತಾರವಾಗಿ ಹೇಳುವೆನು.

ನಿತ್ಯಮೇಕಮಣು ವ್ಯಾಪಿ ಕ್ರಿಯಾಹೀನಮಹೇತುಕಮ್ ।
ಅಗ್ರಾಹ್ಯಮಿಂದ್ರಿಯೈಃ ಸರ್ವೈರೇತದವ್ಯಕ್ತಲಕ್ಷಣಮ್ ॥೯॥

ಅವ್ಯಕ್ತವು, ನಿತ್ಯವಾದುದು ಒಂದೇ. ಬಹಳ ಸೂಕ್ಷ್ಮವಾದುದು (ಅತೀಂದ್ರಿಯವಾದುದು), ಸರ್ವವ್ಯಾಪಕವಾದುದು, ಸ್ವತಃ ಕ್ರಿಯಾಶೂನ್ಯವಾದುದು ಮತ್ತು ಜನ್ಯವಾದುದಲ್ಲ. ಇಂದ್ರಿಯಗಳಿಂದ ಗ್ರಹಿಸಲ್ಪಡುವುದಿಲ್ಲ- ಇವೆಲ್ಲವೂ ಅವ್ಯಕ್ತದ ಲಕ್ಷಣಗಳು.

ಅವ್ಯಕ್ತಂ ಪ್ರಕೃತಿರ್ಮೂಲಂ ಪ್ರಧಾನಂ ಯೋನಿರವ್ಯಯಮ್ ।
ಅವ್ಯಕ್ತಸ್ಯೈವ ನಾಮಾನಿ ಶಬ್ದೈಃ ಪರ್ಯಾಯವಾಚಕೈಃ ॥೧೦॥

ಅವ್ಯಕ್ತ, ಪ್ರಕೃತಿ, ಮೂಲ, ಪ್ರಧಾನ, ಯೋನಿ, ಅವ್ಯಯ ಇವೆಲ್ಲವೂ ಅವ್ಯಕ್ತತತ್ತ್ವವನ್ನು ಹೇಳುವ ಪರ್ಯಾಯ ಶಬ್ದಗಳು.

ತತ್‌ಸೂಕ್ಷ್ಮತ್ವಾದನಿರ್ದೇಶ್ಯಂ ತತ್‌ಸದಿತ್ಯಭಿಧೀಯತೇ ।
ತನ್ಮೂಲಂ ಚ ಜಗತ್ಸರ್ವಂ ತನ್ಮೂಲಾ ಸೃಷ್ಟಿರಿಷ್ಯತೇ ॥೧೧॥

ಸತ್ತ್ವಾದಯಃ ಪ್ರಕೃತಿಜಾ ಗುಣಾಸ್ತಾನ್ ಪ್ರಬ್ರವೀಮ್ಯಹಮ್ ॥೧೨॥

ಸೂಕ್ಷ್ಮವಾಗಿರುವುದರಿಂದ ಅದನ್ನು ಅನಿರ್ದೇಶ್ಯವೆಂದು ಹೇಳುತ್ತಾರೆ. ಅದನ್ನು ಸತ್ ಎಂದೂ ಹೇಳುತ್ತಾರೆ. ಜಗತ್ತೆಲ್ಲವೂ ಅವ್ಯಕ್ತತತ್ತ್ವವನ್ನು ಮೂಲವಾಗಿ ಹೊಂದಿರುವಂತಹದು. ಸೃಷ್ಟಿಯ ಮೂಲವೂ ಸಹ ಅವ್ಯಕ್ತತತ್ತ್ವದಲ್ಲಿದೆ. ಸತ್ವಾದಿಗಳು ಪ್ರಕೃತಿಯ ಗುಣಗಳು. ಅವುಗಳನ್ನು ಹೇಳುತ್ತೇನೆ.

ಸುಖಂ ತುಷ್ಟಿಃ ಪ್ರಕಾಶಶ್ಚ ತ್ರಯಸ್ತೇ ಸಾತ್ವಿಕಾ ಗುಣಾಃ ।
ರಾಗದ್ವೇಷೌ ಸುಖಂ ದುಃಖಂ ಸ್ತಂಭಶ್ಚ ರಜಸೋ ಗುಣಾಃ ।
ಅಪ್ರಕಾಶೋ ಭಯಂ ಮೋಹಸ್ತಂದ್ರೀ ಚ ತಮಸೋ ಗುಣಾಃ ॥೧೩॥

ಸುಖ, ತೃಪ್ತಿ, ಪ್ರಕಾಶ (ಜ್ಞಾನ) - ಈ ಮೂರು ಸಾತ್ವಿಕಗುಣಗಳು. ರಾಗ-ದ್ವೇಷಗಳು, ಸುಖ-ದುಃಖಗಳು, ಅಹಂಕಾರ- ಇವು ರಜೋಗುಣಗಳು. ಅಜ್ಞಾನ, ಭಯ, ಭ್ರಾಂತಿ, ಆಲಸ್ಯ - ಇವು ತಮೋಗುಣಗಳು.

ಶ್ರದ್ಧಾ ಪ್ರಹರ್ಷೋ ವಿಜ್ಞಾನಮಸಮ್ಮೋಹೋ ದಯಾ ಧೃತಿಃ ।
ಸತ್ತ್ವೇ ಪ್ರವೃದ್ಧೇ ವರ್ಧಂತೇ ವಿಪರೀತೇ ವಿಪರ್ಯಯಃ ॥೧೪॥

ಶ್ರದ್ಧೆ, ಸಂತೋಷ, ವಿಜ್ಞಾನ, ಮೋಹಾಭಾವ, ದಯೆ, ಧೈರ್ಯ - ಈ ಗುಣಗಳು ಸತ್ತ್ವಗುಣವು ಅಭಿವೃದ್ಧಿಯನ್ನು ಹೊಂದಿದಾಗ ಅಭಿವೃದ್ಧಿಯನ್ನು ಹೊಂದುತ್ತವೆ. ಸತ್ತ್ವವು ಕ್ಷೀಣವಾದರೆ ಇವೂ ಕ್ಷೀಣಿಸುತ್ತವೆ.

ಕಾಮಕ್ರೋಧೌ ಮನಸ್ತಾಪೋ ದ್ರೋಹೋ ಲೋಭಸ್ತಥಾ ತೃಷಾ ।
ಪ್ರವೃದ್ಧೇ ಪರಿವರ್ಧಂತೇ ರಜಸ್ಯೇತಾನಿ ನಿತ್ಯಶಃ ॥೧೫॥

ಕಾಮ-ಕ್ರೋಧಗಳು, ಮನಸ್ತಾಪ, ದ್ರೋಹ, ಲೋಭ, ಆಸೆ - ಇವುಗಳು ರಜೋಗುಣವು ಪ್ರವೃದ್ಧವಾದಾಗ ನಿತ್ಯವೂ ಅಭಿವೃದ್ಧಿಯನ್ನು ಹೊಂದುತ್ತವೆ.

ವಿಷಾದಃ ಸಂಶಯೋ ಮೋಹಸ್ತಂದ್ರೀ ನಿದ್ರಾ ಭಯಂ ತಥಾ ।
ತಮಸ್ಯೇತಾನಿ ವರ್ಧಂತೇ ಪ್ರವೃದ್ಧೇ ಹೇತ್ವಹೇತುಭಿಃ ॥೧೬॥

ವಿಷಾದ, ಸಂಶಯ, ಅಜ್ಞಾನ, ಆಲಸ್ಯ, ನಿದ್ರೆ, ಭಯ - ಇವುಗಳು ಸಕಾರಣಗಳಿಂದ ಅಥವಾ ನಿಷ್ಕಾರಣವಾಗಿ ತಮೋಗುಣವು ಅಭಿವೃದ್ಧಿಯನ್ನು ಹೊಂದಿದಾಗ ಅಭಿವೃದ್ಧಿಯನ್ನು ಹೊಂದುತ್ತವೆ.

ಏವಮನ್ಯೋನ್ಯಮೇತಾನಿ ವರ್ಧಂತೇ ಚ ಪುನಃಪುನಃ ।
ಹೀಯಂತೇ ಚ ತಥಾ ನಿತ್ಯಮಭಿಭೂತಾನಿ ಭೂರಿಭಿಃ ॥೧೭॥

ಹೀಗೆ ಇವು ಪರಸ್ಪರವಾಗಿ ಅಭಿವೃದ್ಧಿಯನ್ನು ಹೊಂದುತ್ತವೆ ಮತ್ತು ವಿರೋಧಿಯಾದ ಒಂದು ಗುಣವು ಹೆಚ್ಚಾದರೆ ಇನ್ನೊಂದು ಗುಣವು ಕಡಿಮೆಯಾಗುತ್ತದೆ. ಆ ಗುಣಕಾರ್ಯಗಳು ಕಡಿಮೆಯಾಗುತ್ತವೆ.

ತತ್ರ ಯತ್ಪ್ರೀತಿಸಂಯುಕ್ತಂ ಕಾಯೇ ಮನಸಿ ವಾ ಭವೇತ್ ।
ವರ್ತತೇ ಸಾತ್ವಿಕೋ ಭಾವ ಇತ್ಯುಪೇಕ್ಷೇತ ತತ್ತಥಾ ॥೧೮॥

ದೇಹದಲ್ಲಾಗಲೀ, ಮನಸ್ಸಿನಲ್ಲಾಗಲೀ ಸಂತೋಷಜನಕವಾದ ಒಂದು ಘಟನೆಯು ಉಂಟಾದರೆ ಅದನ್ನು ಸಾತ್ವಿಕಭಾವ ಎಂದು ತಿಳಿಯಬೇಕು.

ಯದಾ ಸಂತಾಪಸಂಯುಕ್ತಂ ಚಿತ್ತಕ್ಷೋಭಕರಂ ಭವೇತ್ ।
ವರ್ತತೇ ರಜ ಇತ್ಯೇವ ತದಾ ತದಭಿಚಿಂತಯೇತ್ ॥೧೯॥

ಸಂತಾಪಸಹಿತವಾದ, ಚಿತ್ತಕ್ಷೋಭೆಯನ್ನುಂಟು ಮಾಡುವ ವಿಷಯವು ಸಂಬಂಧಿಸಿದರೆ ಅದನ್ನು ರಜೋಗುಣದ ಕಾರ್ಯವೆಂದು ಚಿಂತಿಸಬೇಕು.

ಯದಾ ಸಮ್ಮೋಹಸಂಯುಕ್ತಂ ಯದ್ ವಿಷಾದಕರಂ ಭವೇತ್ ।
ಅಪ್ರತರ್ಕ್ಯಮವಿಜ್ಞೇಯಂ ತಮಸ್ತದುಪಧಾರಯೇತ್ ॥೨೦॥

ಸಮ್ಮೋಹಯುಕ್ತವಾದ, ವಿಷಾದಕರವಾದ, ಊಹಿಸಲು ಅಸಾಧ್ಯವಾದ ಭಾವ ಉಂಟಾದರೆ ಅದನ್ನು ತಮೋಗುಣದ ಕಾರ್ಯವೆಂದು ತಿಳಿಯಬೇಕು.

ಸಮಾಸಾತ್ ಸಾತ್ವಿಕೋ ಧರ್ಮಃ ಸಮಾಸಾದ್ ರಾಜಸಂ ಧನಮ್ ।
ಸಮಾಸಾತ್ ತಾಮಸಃ ಕಾಮಸ್ತ್ರಿವರ್ಗೇ ತ್ರಿಗುಣಕ್ರಮಾತ್ ॥೨೧॥

ಸಂಕ್ಷೇಪವಾಗಿ ಹೇಳುವುದಾದರೆ ತ್ರಿವರ್ಗದಲ್ಲಿ ಧರ್ಮವು ಸಾತ್ವಿಕವಾದುದು, ಧನವು ರಾಜಸವಾದುದು ಮತ್ತು ಕಾಮವು ತಾಮಸವಾದುದು.

ಬ್ರಹ್ಮಾದಿದೇವಸೃಷ್ಟಿರ್ಯಾ ಸಾತ್ವಿಕೀತಿ ಪ್ರಕೀರ್ತ್ಯತೇ ।
ರಾಜಸೀ ಮಾನವೀ ಸೃಷ್ಟಿಸ್ತಿರ್ಯಗ್ಯೋನಿಸ್ತು ತಾಮಸೀ ॥೨೨॥

ಬ್ರಹ್ಮಾದಿ ದೇವತೆಗಳ ಸೃಷ್ಟಿಯನ್ನು ಸಾತ್ವಿಕ ಸೃಷ್ಟಿ ಎಂದು ಹೇಳಲಾಗುತ್ತದೆ. ಮಾನವರ ಸೃಷ್ಟಿಯು ರಾಜಸ ಸೃಷ್ಟಿ. ತಿರ್ಯಗ್ಯೋನಿಗಳ ಸೃಷ್ಟಿಯು ತಾಮಸ ಸೃಷ್ಟಿ.

ಊರ್ಧ್ವಂ ಗಚ್ಛಂತಿ ಸತ್ವಸ್ಥಾ ಮಧ್ಯೇ ತಿಷ್ಠಂತಿ ರಾಜಸಾಃ ।
ಜಘನ್ಯಗುಣವೃತ್ತಿಸ್ಥಾ ಅಧೋ ಗಚ್ಛಂತಿ ತಾಮಸಾಃ ॥೨೩॥

ಸಾತ್ವಿಕರು ಊರ್ಧ್ವಲೋಕಗಳಿಗೆ ಹೋಗುತ್ತಾರೆ. ರಾಜಸರು ಮಧ್ಯದಲ್ಲಿ ಇರುತ್ತಾರೆ. ಕೊನೆಯದಾದ ತಾಮಸಗುಣವನ್ನು ಹೊಂದಿದ ತಾಮಸರು ಅಧೋಗತಿಯನ್ನು ಹೊಂದುತ್ತಾರೆ.

ದೇವಮಾನುಷತಿರ್ಯಕ್ಷು ಯದ್ಭೂತಂ ಸಚರಾಚರಮ್ ।
ಆದಿಪ್ರಭೃತಿ ಸಂಯುಕ್ತಂ ವ್ಯಾಪ್ತಮೇಭಿಸ್ತ್ರಿಭಿರ್ಗುಣೈಃ ॥೨೪॥

ದೇವ-ಮಾನುಷ-ತಿರ್ಯಕ್ ಪ್ರಾಣಿಗಳಲ್ಲಿ ಯಾವ ಚರಾಚರ ವಸ್ತುಗಳು ಇವೆಯೋ ಅವೆಲ್ಲವೂ ಮೊದಲಿನಿಂದಲೂ ಈ ಮೂರು ಗುಣಗಳಿಂದ ವ್ಯಾಪ್ತವಾಗಿವೆ.

ಅತಃ ಪರಂ ಪ್ರವಕ್ಷ್ಯಾಮಿ ಮಹದಾದೀನಿ ಲಿಂಗತಃ ।
ವಿಜ್ಞಾನಂ ಚ ವಿವೇಕಶ್ಚ ಮಹತೋ ಲಕ್ಷಣಂ ಭವೇತ್ ॥೨೫॥

ಇನ್ನು ಮುಂದೆ ಮಹದಾದಿ ತತ್ತ್ವದ ಲಕ್ಷಣಗಳನ್ನು ಹೇಳುತ್ತೇನೆ. ವಿಜ್ಞಾನ ಮತ್ತು ವಿವೇಕವು ಮಹತತ್ತ್ವದಲಕ್ಷಣ.

ಮಹಾನ್ ಬುದ್ಧಿರ್ಮತಿಃ ಪ್ರಜ್ಞಾ ನಾಮಾನಿ ಮಹತೋ ವಿದುಃ ।
ಮಹದಾದಿಕ್ರಿಯಾಯೋಗೇ ಮಹತ್ತ್ವಂ ಚೋಪಜಾಯತೇ ॥೨೬॥

ಅಭಿಮಾನಃ ಪುನಸ್ತತ್ರ ಮಹತೋ ವೈಕೃತಾದ್ ಭವೇತ್ ।
ಅಹಂಕಾರಃ ಸ ವಿಜ್ಞೇಯೋ ಲಕ್ಷಣೇನ ಸಮಾಸತಃ ॥೨೭॥

ಮಹಾನ್, ಬುದ್ಧಿ, ಮತಿ, ಪ್ರಜ್ಞಾ ಇವು ಮಹತತ್ತ್ವದ ನಾಮಗಳು. ಮಹಾಕಾರ್ಯಗಳನ್ನು ಮಾಡುವಾಗಲೂ ಮಹತ್ವವು ಅಪೇಕ್ಷಿತವಾಗುತ್ತದೆ. ಅವ್ಯಕ್ತ ತತ್ತ್ವದ ವಿಕಾರವಾದ ಮಹತತ್ತ್ವದಿಂದ ಅಭಿಮಾನವು ಉಂಟಾಯಿತು. ಸಂಕ್ಷೇಪವಾಗಿ ಅದನ್ನು ಲಕ್ಷಣಮುಖದಿಂದ ಅಹಂಕಾರವೆಂದು ತಿಳಿಯಬೇಕು.

ಅಹಂಕಾರೇಣ ಭೂತಾನಾಂ ಸರ್ವೇಷಾಂ ಪ್ರಭವಾಪ್ಯಯೌ ।
ಅಹಂಕಾರನಿವೃತ್ತಿರ್ಹಿ ನಿರ್ವಾಣಾಯೋಪಪದ್ಯತೇ ॥೨೮॥

ಎಲ್ಲ ಪ್ರಾಣಿಗಳ ಉತ್ಪತ್ತಿ-ವಿನಾಶಗಳು ಅಹಂಕಾರದಿಂದ ಉಂಟಾಗುತ್ತವೆ. ಅಹಂಕಾರ ನಿವೃತ್ತಿಯೇ ಮೋಕ್ಷಕ್ಕೆ ಕಾರಣವಾಗುತ್ತದೆ.

ಖಂ ವಾಯುರಗ್ನಿಃ ಸಲಿಲಂ ಪೃಥಿವೀ ಚೇತಿ ಪಂಚಮೀ ।
ಮಹಾಭೂತಾನಿ ಭೂತಾನಾಂ ಸರ್ವೇಷಾಂ ಪ್ರಭವಾಪ್ಯಯೌ ॥೨೯॥

ಆಕಾಶ, ವಾಯು, ಅಗ್ನಿ, ಜಲ ಮತ್ತು ಐದನೆಯದಾದ ಪೃಥಿವಿ- ಈ ಮಹಾಭೂತಗಳು ಎಲ್ಲಪ್ರಾಣಿಗಳ ಉತ್ಪತ್ತಿ-ವಿನಾಶಗಳಿಗೆ ಕಾರಣವಾದವುಗಳು.

ಶಬ್ದಃ ಶ್ರೋತ್ರಂ ತಥಾ ಖಾನಿ ತ್ರಯಮಾಕಾಶಸಂಭವಮ್ ।
ಸ್ಪರ್ಶಸ್ತ್ವಕ್ ಪ್ರಾಣಿನಾಂ ಚೇಷ್ಟಾ ಪವನಸ್ಯ ಗುಣಾಃ ಸ್ಮೃತಾಃ ॥೩೦॥

ಶಬ್ದ, ಶ್ರೋತ್ರೇಂದ್ರಿಯ ಮತ್ತು ಇಂದ್ರಿಯಗಳು ಆಕಾಶದಿಂದ ಉಂಟಾದವುಗಳು. ಸ್ಪರ್ಶ, ತ್ವಗಿಂದ್ರಿಯ ಮತ್ತು ಪ್ರಾಣಿಗಳ ಚೇಷ್ಟೆಗಳು ವಾಯುವಿನ ಗುಣವೆಂದು ಹೇಳಲ್ಪಡುತ್ತವೆ.

ರೂಪಂ ಪಾಕೋಽಕ್ಷಿಣೀ ಜ್ಯೋತಿಶ್ಚತ್ವಾರಸ್ತೇಜಸೋ ಗುಣಾಃ ।
ರಸಃ ಸ್ನೇಹಸ್ತಥಾ ಜಿಹ್ವಾ ಶೈತ್ಯಂ ಚ ಜಲಜಾ ಗುಣಾಃ ॥೩೧॥

ರೂಪ, ಪಾಕ, ಚಕ್ಷುಸ್ಸು ಮತ್ತು ಪ್ರಕಾಶ - ಈ ನಾಲ್ಕು ತೇಜಸ್ಸಿನ ಗುಣಗಳು. ರಸ, ಸ್ನೇಹ, ಜಿಹ್ವೇಂದ್ರಿಯ ಮತ್ತು ಶೈತ್ಯ - ಇವು ಜಲದ ಗುಣಗಳು.

ಗಂಧೋ ಘ್ರಾಣಂ ಶರೀರಂ ಚ ಪೃಥಿವ್ಯಾಸ್ತೇ ಗುಣಾಸ್ತ್ರಯಃ ।
ಇತಿ ಸರ್ವಗುಣಾ ದೇವಿ ವಿಖ್ಯಾತಾಃ ಪಾಂಚಭೌತಿಕಾಃ ॥೩೨॥

ಗಂಧ, ಘ್ರಾಣೇಂದ್ರಿಯ, ಶರೀರ - ಈ ಮೂರು ಪೃಥಿವಿಯ ಗುಣಗಳು. ಎಲೌ ದೇವಿಯೇ, ಹೀಗೆ ಸರ್ವಗುಣಗಳು ಪಾಂಚಭೌತಿಕವೆಂದು ಪ್ರಸಿದ್ಧವಾಗಿವೆ.

ಗುಣಾನ್ ಪೂರ್ವಸ್ಯ ಪೂರ್ವಸ್ಯ ಪ್ರಾಪ್ನುವಂತ್ಯುತ್ತರಾಣಿ ತು ।
ತಸ್ಮಾನ್ನೈಕಗುಣಾಶ್ಚೇಹ ದೃಶ್ಯಂತೇ ಭೂತಸೃಷ್ಟಯಃ ॥೩೩॥

ಮೊದಲಿನ ಭೂತಗಳು ಅನಂತರ ಜನಿಸಿದ ಭೂತಗಳಲ್ಲಿ ಕಂಡುಬರುತ್ತವೆ. ಆಕಾಶದ ಗುಣವು ವಾಯುವಿನಲ್ಲಿಯೂ, ಆಕಾಶ ವಾಯು ಗುಣಗಳು ಅಗ್ನಿಯಲ್ಲಿಯೂ,

ಅಗ್ನಿಗಳ ಆಕಾಶವಾಯು ಗುಣಗಳು ಜಲದಲ್ಲಿಯೂ, ಆಕಾಶ ವಾಯು ಅಗ್ನಿ ಜಲದ ಗುಣಗಳು ಪೃಥಿವಿಯಲ್ಲಿಯೂ ಕಂಡುಬರುತ್ತವೆ. ಆದ್ದರಿಂದ ಭೂತಸೃಷ್ಟಿಯಲ್ಲಿ ಅನೇಕ ಗುಣಗಳು ಇರುತ್ತವೆ.

ಉಪಲಭ್ಯಾಪ್ಸು ಯೇ ಗಂಧಂ ಕೇಚಿದ್ ಬ್ರೂಯುರನೈಪುಣಾಃ ।
ಅಪಾಂ ಗಂಧಗುಣಂ ಪ್ರಾಜ್ಞಾ ನೇಚ್ಛಂತಿ ಕಮಲೇಕ್ಷಣೇ ॥೩೪॥

ನೀರಿನಲ್ಲಿ ಗಂಧವನ್ನು ಗಮನಿಸಿ ಅಕೋವಿದರಾದ ಕೆಲವರು ನೀರಿನಲ್ಲಿ ಗಂಧವಿದೆ ಎಂದು ಭಾವಿಸುತ್ತಾರೆ. ಕಮಲನೇತ್ರೆಯೇ, ಪ್ರಾಜ್ಞರು ನೀರಿಗೆ ಗಂಧರೂಪವಾದ ಗುಣವನ್ನು ಬಯಸುವುದಿಲ್ಲ.

ತದ್‌ಗಂಧತ್ವಮಪಾಂ ನಾಸ್ತಿ ಪೃಥಿವ್ಯಾ ಏವ ತದ್ಗುಣಃ ।
ಭೂಮಿರ್ಗಂಧೇ ರಸೇ ಸ್ನೇಹೋ ಜ್ಯೋತಿಶ್ಚಕ್ಷುಷಿ ಸಂಸ್ಥಿತಮ್ ।
ಪ್ರಾಣಾಪಾನಾಶ್ರಯೋಃ ವಾಯುಃ ಖೇಷ್ವಾಕಾಶಃ ಶರೀರಿಣಾಮ್ ॥೩೫॥

ನೀರಿಗೆ ಗಂಧವಿಲ್ಲ. ಅದು ಪೃಥಿವಿಯದೇ ಗುಣ. ಶರೀರಿಗಳಿಗೆ ಗಂಧದಲ್ಲಿ (ಘ್ರಾಣೇಂದ್ರಿಯದಲ್ಲಿ) ಭೂಮಿಯೂ, ರಸದಲ್ಲಿ (ಜಿಹ್ವೆಯಲ್ಲಿ) ಸ್ನೇಹವೂ (ಜಲವೂ), ಚಕ್ಷುಸ್ಸಿನಲ್ಲಿ ಜ್ಯೋತಿಸ್ಸೂ, ಪ್ರಾಣಾಪಾನಗಳಲ್ಲಿ ವಾಯುವೂ, ವಿವರಗಳಲ್ಲಿ ಆಕಾಶವೂ ಸನ್ನಿಹಿತವಾಗಿವೆ.

ಕೇಶಾಸ್ಥಿನಖದಂತತ್ವಕ್ಪಾಣಿಪಾದಶಿರಾಂಸಿ ಚ ।
ಪೃಷ್ಠೋದರಕಟಿಗ್ರೀವಾಃ ಸರ್ವಂ ಭೂಮ್ಯಾತ್ಮಕಂ ಸ್ಮೃತಮ್ ॥೩೬॥

ಕೇಶ, ಅಸ್ಥಿ, ನಖ, ದಂತ, ಚರ್ಮ, ಪಾಣಿ, ಪಾದ, ಶಿರಸ್ಸು, ಪೃಷ್ಠ, ಉದರ, ಕಟಿ, ಗ್ರೀವಾ ಎಲ್ಲವೂ ಪೃಥಿವ್ಯಾತ್ಮಕವೆಂದು ಹೇಳಲ್ಪಡುತ್ತವೆ.

ಯತ್ಕಿಂಚಿದಪಿ ಕಾಯೇಽಸ್ಮಿಂಧಾತುದೋಷಮಲಾಶ್ರಿತಮ್ ।
ತತ್ಸರ್ವಂ ಭೌತಿಕಂ ವಿದ್ಧಿ ದೇಹೇ ನೈವಾಸ್ತ್ಯಭೌತಿಕಮ್ ॥೩೭॥

ಈ ದೇಹದಲ್ಲಿ ಧಾತುದೋಷ ಮತ್ತು ಕಶ್ಮಲಾತ್ಮಕವಾದ ಯಾವ ವಸ್ತುವಿದ್ದರೂ ಅದೆಲ್ಲವನ್ನೂ ಭೌತಿಕವೆಂದು ತಿಳಿ. ದೇಹದಲ್ಲಿ ಅಭೌತಿಕವಾದುದು ಯಾವುದೂ ಇಲ್ಲ.

ಬುದ್ಧೀಂದ್ರಿಯಾಣಿ ಕರ್ಣಸ್ತ್ವಗ್ಭಿ ರ್ಜಿಹ್ವಾಽಥ ನಾಸಿಕಾ ।
ಕರ್ಮೇಂದ್ರಿಯಾಣಿ ವಾಕ್ಪಾಣಿಃ ಪಾದೋ ಮೇಢ್ರಂ ಗುದಂ ತಥಾ ॥೩೮॥

ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗಂಧಶ್ಚ ಪಂಚಮಃ ।
ಬುದ್ಧೀಂದ್ರಿಯಾರ್ಥಾನ್ ಜಾನೀಯಾದ್ ಭೂತೇಭ್ಯಸ್ತ್ವಭಿನಿಃಸೃತಾನ್ ॥

ಬುದ್ಧಿ, ಇಂದ್ರಿಯಗಳು, ಕರ್ಣ, ಚರ್ಮ, ನೇತ್ರಗಳು, ನಾಲಿಗೆ, ನಾಸಿಕ, ಕರ್ಮೇಂದ್ರಿಯಗಳಾದ ವಾಕ್, ಪಾಣಿ, ಪಾದ, ಶಿಶ್ನ, ಗುದ ಮತ್ತು ಜ್ಞಾನೇಂದ್ರಿಯಗಳ ವಿಷಯವಾದ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವುಗಳೆಲ್ಲವೂ ಭೂತಗಳಿಂದ ಉಂಟಾದವುಗಳು ಎಂದು ತಿಳಿಯಬೇಕು.

ವಾಕ್ಯಂ ಕ್ರಿಯಾ ಗತಿಃ ಪ್ರೀತಿರುತ್ಸರ್ಗಶ್ಚೇತಿ ಪಂಚಧಾ ।
ಕರ್ಮೇಂದ್ರಿಯಾರ್ಥಾನ್ ಜಾನೀಯಾತ್ ತೇ ಚ ಭೂತೋದ್ಭವಾ ಮತಾಃ ॥

ಮಾತನಾಡುವುದು, ಕೆಲಸವನ್ನು ಮಾಡುವುದು, ನಡೆಯುವುದು, ಸಂತೋಷ ಪಡುವುದು, ವಿಸರ್ಗವನ್ನು ಮಾಡುವುದು - ಹೀಗೆ ಐದು ಬಗೆಯಾದ ಕರ್ಮೇಂದ್ರಿಯ ವಿಷಯಗಳು ಭೂತದಿಂದ ಉದ್ಭವಿಸಿವೆ ಎಂದು ತಿಳಿಯಬೇಕು.

ಇಂದ್ರಿಯಾಣಾಂ ತು ಸರ್ವೇಷಾಮೀಶ್ವರಂ ಮನ ಉಚ್ಯತೇ ।
ಪ್ರಾರ್ಥನಾಕ್ಷಣಂ ತಚ್ಚ ಇಂದ್ರಿಯಂ ತು ಮನಃ ಸ್ಮೃತಮ್ ॥೪೧॥

ಎಲ್ಲ ಇಂದ್ರಿಯಗಳಿಗೆ ಮನಸ್ಸು ಸ್ವಾಮಿಯಾದುದು. ಸಂಕಲ್ಪರೂಪವಾದ ಇಂದ್ರಿಯಕ್ಕೆ ಮನಸ್ಸು ಎಂದು ಹೆಸರು.

ನಿಯುಂಕ್ತೇ ಚ ಸದಾ ತಾನಿ ಭೂತಾತ್ಮಾ ಮನಸಾ ಸಹ ।
ನಿಯಮೇ ಚ ವಿಸರ್ಗೇ ಚ ಮನಸಃ ಕಾರಣಂ ಪ್ರಭುಃ ॥೪೨॥

ಪ್ರಭುವಾದ ಪರಮಾತ್ಮನು ಮನಸ್ಸಿನ ಜೊತೆಯಲ್ಲಿ ಆ ಎಲ್ಲ ಇಂದ್ರಿಯಗಳನ್ನೂ ಯಾವಾಗಲೂ ನಿಯೋಜಿಸುತ್ತಾನೆ. ಪ್ರಭುವಾದ ಅವನು ನಿಯಂತ್ರಿಸುವುದರಲ್ಲಿ ಅಥವಾ ನಿಯಂತ್ರಣವನ್ನು ಬಿಡುವುದರಲ್ಲಿ ಮನಸ್ಸನ್ನು ನಿಮಿತ್ತ ಮಾಡಿಕೊಳ್ಳುತ್ತಾನೆ.

ಇಂದ್ರಿಯಾಣೇಂದ್ರಿಯಾರ್ಥಾಶ್ಚ ಸ್ವಭಾವಶ್ಚೇತನಾ ಧೃತಿಃ ।
ಭೂತಾಭೂತವಿಕಾರಶ್ಚ ಶರೀರಮಿತಿ ಸಂಜ್ಞಿತಮ್ ॥೪೩॥

ಇಂದ್ರಿಯಗಳು, ಇಂದ್ರಿಯಾರ್ಥಗಳು, ಸ್ವಭಾವ, ಜ್ಞಾನ, ಧೈರ್ಯ, ಭೂತವಿಕಾರಗಳು, ಭೂತವಿಕಾರವಲ್ಲದವು ಎಲ್ಲವೂ ಸೇರಿ ಶರೀರವೆನಿಸುತ್ತದೆ.

ಶರೀರಾಚ್ಚ ಪರೋ ದೇಹೀ ಶರೀರಂ ಚ ವ್ಯಪಾಶ್ರಿತಃ ।
ಶರೀರಿಣಃ ಶರೀರಸ್ಯ ಸೋಽಂತರಂ ವೇತ್ತಿ ವೈ ಮುನಿಃ ॥೪೪॥

ಶರೀರಕ್ಕಿಂತ ಭಿನ್ನನಾದ ಜೀವನು ಶರೀರವನ್ನು ಆಶ್ರಯಿಸಿಕೊಂಡಿದ್ದಾನೆ. ಶರೀರ ಮತ್ತು ಶರೀರಿಗಳ ಭೇದವನ್ನು ಜ್ಞಾನಿಯಾದವನು ತಿಳಿಯುತ್ತಾನೆ.

ಅರಸಸ್ಪರ್ಶಗಂಧಂ ಚ ರೂಪಶಬ್ದವಿವರ್ಜಿತಮ್ ।
ಅಶರೀರಂ ಶರೀರೇಷು ದಿದೃಕ್ಷೇತ ನಿರಿಂದ್ರಿಯಮ್ ॥೪೫॥

ಶರೀರಗಳಲ್ಲಿ ಶರೀರರಹಿತನಾದ, ಶಬ್ದ-ಸ್ಪರ್ಶ-ರೂಪ-ಗಂಧ-ರಸ ವಿವರ್ಜಿತನಾದ, ಪ್ರಾಕೃತಗುಣರಹಿತನಾದ ಪರಮಾತ್ಮನನ್ನು ನೋಡಲು ಬಯಸಬೇಕು.

ಅವ್ಯಕ್ತಂ ಸರ್ವದೇಹೇಷು ಮರ್ತ್ಯೇಷ್ವಮರಮಾಶ್ರಿತಮ್ ।
ಯಃ ಪಶ್ಯೇತ್ ಪರಮಾತ್ಮಾನಂ ಬಂಧನೈಃ ಸ ವಿಮುಚ್ಯತೇ ॥೪೬॥

ಮರಣಶೀಲವಾದ ಸರ್ವದೇಹಗಳಲ್ಲಿ ಅವ್ಯಕ್ತನಾಗಿ, ಮರಣರಹಿತನಾಗಿ ನೆಲೆಸಿರುವ ಪರಮಾತ್ಮನನ್ನು ನೋಡುವವನು ಬಂಧನಗಳಿಂದ ಬಿಡುಗಡೆಯನ್ನು ಹೊಂದುತ್ತಾನೆ.

ನೈವಾಯಂ ಚಕ್ಷುಷಾ ಗ್ರಾಹ್ಯೋ ನಾಪರೈರಿಂದ್ರಿಯೈರಪಿ ।
ಮನಸ್ಯೈವ ಪ್ರದೀಪ್ತೇನ ಮಹಾನಾತ್ಮಾ ಪ್ರದೃಶ್ಯತೇ ॥೪೭॥

ಅವನನ್ನು ಚಕ್ಷುಸ್ಸಿನಿಂದಾಗಲೀ, ಬೇರೆ ಇಂದ್ರಿಯಗಳಿಂದಾಗಲೀ ಗ್ರಹಿಸಲು ಸಾಧ್ಯವಿಲ್ಲ. ಪ್ರದೀಪ್ತವಾದ ಮನಸ್ಸಿಗೆ ಮಾತ್ರ ಆ ಮಹಾತ್ಮನು ಗೋಚರನಾಗುತ್ತಾನೆ.

ಸ ಹಿ ಸರ್ವೇಷು ಭೂತೇಷು ಸ್ಥಾವರೇಷು ಚರೇಷು ಚ ।
ವಸತ್ಯೇಕೋ ಮಹಾವೀರ್ಯೋ ನಾನಾಭಾವಸಮನ್ವಿತಃ ॥೪೮॥

ಸರ್ವೋತ್ತಮನೂ, ಮಹಾಸಾಮರ್ಥ್ಯೋಪೇತನೂ ಆದ ಅವನು ಎಲ್ಲಾ ಜಂಗಮ ಸ್ಥಾವರಗಳಲ್ಲಿ ನಾನಾ ಭಾವಗಳನ್ನು ಹೊಂದಿ ವಾಸ ಮಾಡುತ್ತಾನೆ.

ನೈವ ಚೋರ್ಧ್ವಂ ನ ತಿರ್ಯಕ್ಚ ನಾಧಸ್ತಾನ್ನ ಕುತಶ್ಚನ ।
ಇಂದ್ರಿಯೈರಿವ ಬುದ್ಧ್ಯಾ ವಾ ನ ದೃಶ್ಯೇತ ಕದಾಚನ ॥೪೯॥

ಅವನು ಇಂದ್ರಿಯಗಳಿಂದ ಹೇಗೆ ಕಾಣುವುದಿಲ್ಲವೋ ಹಾಗೆ ಬುದ್ಧಿಯಿಂದಲೂ ಸಹ ಮೇಲ್ಭಾಗದಲ್ಲಾಗಲೀ, ಪಾರ್ಶ್ವದಲ್ಲಾಗಲೀ, ಕೆಳಭಾಗದಲ್ಲಾಗಲೀ ಎಲ್ಲಿಯೂ ಕಂಡುಬರುವುದಿಲ್ಲ.

ನವದ್ವಾರಂ ಪುರಂ ಗತ್ವಾ ಹಂಸೋಽಸೌ ನೀಯತೇ ವಶಮ್ ।
ಈಶ್ವರಃ ಸರ್ವಭೂತೇಷು ಸ್ಥಾವರಸ್ಯ ಚರಸ್ಯ ಚ ॥೫೦॥

ದೋಷದೂರನೂ, ಸಾರರೂಪನೂ ಆದ ಅವನು ನವದ್ವಾರವುಳ್ಳ ಶರೀರವನ್ನು ಪ್ರವೇಶಿಸಿ ಆ ಶರೀರವನ್ನು ತನ್ನ ವಶವನ್ನಾಗಿ ಮಾಡಿಕೊಳ್ಳುತ್ತಾನೆ. ಸ್ಥಾವರ-ಜಂಗಮವಾದ ಎಲ್ಲ ಭೂತಗಳಿಗೂ ಅವನು ಪ್ರಭುವಾಗಿದ್ದಾನೆ.

ತಮೇವಾಹುರಣುಭ್ಯೋಽಣುಂ ಮಹದ್ಭ್ಯಸ್ತು ಮಹತ್ತರಮ್ ।
ಬಹುಧಾ ಸರ್ವಭೂತಾನಿ ವ್ಯಾಪ್ಯ ತಿಷ್ಠತಿ ಶಾಶ್ವತಃ ॥೫೧॥

ಅವನನ್ನು ಅಣುವಿಗಿಂತಲೂ ಅಣುವೆಂದೂ, ಮಹತ್ತರಕ್ಕಿಂತಲೂ ಮಹತ್ತರನೆಂದೂ ಹೇಳುತ್ತಾರೆ. ಶಾಶ್ವತನಾದ ಅವನು ಅನೇಕ ರೂಪಗಳಿಂದ ಎಲ್ಲ ಭೂತಗಳನ್ನೂ ವ್ಯಾಪಿಸಿರುತ್ತಾನೆ.

ಕ್ಷೇತ್ರಜ್ಞಮೇಕತಃ ಕೃತ್ವಾ ಸರ್ವಂ ಕ್ಷೇತ್ರಮಥೈಕತಃ ।
ಏವಂ ಸಂವಿಮೃಶೇಜ್ಜ್ಞಾನೀ ಸಂಯತಃ ಸತತಂ ಸದಾ ॥೫೨॥

ಕ್ಷೇತ್ರಜ್ಞನಾದ ಪರಮಾತ್ಮನು ಒಂದು ಕಡೆ ಮತ್ತು ಎಲ್ಲ ಕ್ಷೇತ್ರಗಳನ್ನು ಇನ್ನೊಂದು ಕಡೆ ಇಟ್ಟು ಜ್ಞಾನಿಯಾದವನು ಮೌನವಾಗಿ ಕ್ಷೇತ್ರವೆಲ್ಲವೂ ಕ್ಷೇತ್ರಜ್ಞನ ಅಧೀನವೆಂದು ಚಿಂತಿಸಬೇಕು.

ಪುರುಷಃ ಪ್ರಕೃತಿಸ್ಥೋ ಹಿ ಭುಂಕ್ತೇ ಪ್ರಕೃತಿಜಾನ್ ಗುಣಾನ್ ।
ಅಕರ್ತಾ ಲೇಪಕೋ ನಿತ್ಯೋ ಮಧ್ಯಸ್ಥಃ ಸರ್ವಕರ್ಮಣಾಮ್ ॥೫೩॥

ಜೀವನು ಪ್ರಕೃತಿಯಲ್ಲಿದ್ದುಪ್ರಕೃತಿಯ ಗುಣಗಳನ್ನು ಭೋಗಿಸುತ್ತಾನೆ. ತಾನು ಫಲದ ಆಸೆಯಿಂದ ಕರ್ಮವನ್ನು ಮಾಡದೆ ಜೀವನಿಗೆ ಕರ್ಮಲೇಪವನ್ನುಂಟು ಮಾಡಿ ಪರಮಾತ್ಮನು ಸರ್ವಕರ್ಮಗಳಲ್ಲಿಯೂ ಯಾವಾಗಲೂ ತಟಸ್ಥನಾಗಿರುತ್ತಾನೆ.

ಕಾರ್ಯಕಾರಣಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ ।
ಪುರುಷಃ ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ ॥೫೪॥

ಕಾರ್ಯ-ಕಾರಣ ಕರ್ತೃತ್ವದ ವಿಷಯದಲ್ಲಿ ಪ್ರಕೃತಿಯು ಕಾರಣವೆಂದು ಹೇಳಲಾಗುತ್ತದೆ. ಸುಖ-ದುಃಖದ ಭೋಕ್ತೃತ್ವದ ವಿಷಯದಲ್ಲಿಪುರುಷನು ಕಾರಣನೆಂದು ಹೇಳಲ್ಪಡುತ್ತದೆ.

ಅಜಯ್ಯೋಽಯಮಚಿಂತ್ಯೋಽಯಮವ್ಯಕ್ತೋಽಯಂ ಸನಾತನಃ ।
ದೇಹೇ ತೇಜೋಮಯೋ ದೇಹೀ ತಿಷ್ಠತೀತ್ಯಪರೇ ವಿದುಃ ॥೫೫॥

ದೇಹದಲ್ಲಿರುವ ಅವ್ಯಕ್ತನೂ, ಸನಾತನನೂ ಆದ ಪರಮಾತ್ಮನು ಜಯಿಸಲು ಅಸಾಧ್ಯನಾದವನು, ಚಿಂತಿಸಲು ಅಸಾಧ್ಯನಾದವನು. ಅವನು ತೇಜೋಮಯನಾಗಿದ್ದಾನೆ. ಅವನೇ ಜೀವನೆಂದು ಕೆಲವರು ತಿಳಿಯುತ್ತಾರೆ.

ಜ್ಞಾನಮೂಷ್ಮಾ ಚ ವಾಯುಶ್ಚ ಶರೀರೇ ಜೀವಸಂಜ್ಞಿತಃ ।
ಇತ್ಯೇಕೇ ನಿಶ್ಚಿತಾ ಬುದ್ಧ್ಯಾ ತತ್ರ ಯೇ ಬುದ್ಧಿಚಿಂತಕಾಃ ॥೫೬॥

ಇನ್ನು ಕೆಲವರು ಬುದ್ಧಿಚಿಂತಕರು ತಮ್ಮ ಬುದ್ಧಿಯಿಂದ ಶರೀರದಲ್ಲಿರುವ ಜ್ಞಾನ, ಉಷ್ಮೆ ಮತ್ತು ವಾಯು ಇವುಗಳು ಒಟ್ಟಾಗಿ ಜೀವ ಎಂಬ ಹೆಸರನ್ನು ಪಡೆಯುತ್ತದೆ ಎಂಬ ನಿಶ್ಚಯವನ್ನು ಹೊಂದಿದ್ದಾರೆ.

ಅಪರೇ ಸರ್ವಲೋಕಾಂಶ್ಚ ವ್ಯಾಪ್ಯ ತಿಷ್ಠಂತಮೀಶ್ವರಮ್ ।
ಬ್ರುವತೇ ಕೇಚಿದತ್ರೈವ ತಿಲೇ ತೈಲವದಾಸ್ಥಿತಮ್ ॥೫೭॥

ಇನ್ನು ಕೆಲವರು ಈಶ್ವರನು ಎಲ್ಲ ಲೋಕಗಳನ್ನೂ ವ್ಯಾಪಿಸಿ ತಿಲದಲ್ಲಿ ತೈಲವಿದ್ದಂತೆ ಇಲ್ಲಿಯೇ ಅದೃಶ್ಯನಾಗಿದ್ದಾನೆ ಎಂದು ಹೇಳುತ್ತಾರೆ.

ಅಪರೇ ನಾಸ್ತಿಕಾ ಮೂಢಾ ಹೀನತ್ವಾತ್ ಸ್ಥೂಲಲಕ್ಷಣೈಃ ।
ನಾಸ್ಯಾತ್ಮೇತಿ ವಿನಿಶ್ಚಿತ್ಯ ಪ್ರಾಹುಸ್ತೇ ನಿರಯಾಲಯಾಃ ॥೫೮॥

ಏವಂ ನಾನಾವಿಧಾನೇನ ವಿಮೃಶಂತಿ ಮಹೇಶ್ವರಮ್ ॥೫೯॥

ಇನ್ನು ಕೆಲವು ನಾಸ್ತಿಕರು ಜ್ಞಾನಶೂನ್ಯರಾದುದರಿಂದ, ಸ್ಥೂಲಲಕ್ಷಣಗಳು ಕಂಡುಬರದಿರುವುದರಿಂದ ಪರಮಾತ್ಮನೇ ಇಲ್ಲ ಎಂದು ಹೇಳುತ್ತಾರೆ. ಅವರು ನರಕಕ್ಕೆ ಹೋಗುವವರು. ಹೀಗೆ ಮಹೇಶ್ವರನನ್ನು ನಾನಾವಿಧದಿಂದ ವಿಮರ್ಶೆ ಮಾಡಿ (ಕೆಲವರು ಸರಿಯಾಗಿ, ಕೆಲವರು ತಪ್ಪಾಗಿ) ತಿಳಿಯುತ್ತಾರೆ.

ಉಮಾ

ಊಹವಾನ್ ಬ್ರಾಹ್ಮಣೋ ಲೋಕೇ ನಿತ್ಯಮವ್ಯಯಮಕ್ಷರಮ್ ।
ಅಸ್ಯಾತ್ಮಾ ಸರ್ವಭೂತೇಷು ಹೇತುಸ್ತತ್ರ ಸುದುರ್ಗಮಃ ॥೬೦॥

ಉಮಾ– ತರ್ಕಶಕ್ತಿಯುಳ್ಳ ಬ್ರಾಹ್ಮಣನು ಲೋಕದಲ್ಲಿ ನಿತ್ಯನೂ, ಅವ್ಯಯನೂ, ವಿಕಾರರಹಿತನೂ ಆದ ಪರಮಾತ್ಮನು ಸರ್ವಭೂತದಲ್ಲಿದ್ದಾನೆ ಎಂಬ ಜ್ಞಾನವನ್ನು ಹೊಂದಿದ್ದಾನೆ. ಆದರೆ ಅವನನ್ನು ನೋಡುವುದು (ತಿಳಿಯುವುದು) ಬಹಳ ಕಷ್ಟವಾದುದು.

ಮಹೇಶ್ವರಃ

ಋಷಿಭಿಶ್ಚಾಪಿ ದೇವೈಶ್ಚ ವ್ಯಕ್ತಮೇಷ ತು ದೃಶ್ಯತೇ ।
ದೃಷ್ಟ್ವಾ ತು ತಂ ಮಹಾತ್ಮಾನಂ ಪುನಸ್ತನ್ನ ನಿವರ್ತತೇ ॥೬೧॥

ಮಹೇಶ್ವರ– ಋಷಿಗಳು, ದೇವತೆಗಳು ಸ್ಪಷ್ಟವಾಗಿಯೇ ಅವನನ್ನು ನೋಡುತ್ತಾರೆ. ಆ ಮಹಾತ್ಮನನ್ನು ನೋಡಿದ ಮೇಲೆ ಪುನಃ ಸಂಸಾರಕ್ಕೆ ಬರುವುದಿಲ್ಲ.

ತಸ್ಮಾತ್ ತದ್‌ದರ್ಶನಾದೇವ ವಿಂದತೇ ಪರಮಾಂ ಗತಿಮ್ ।
ಇತಿ ತೇ ಕಥಿತೋ ದೇವಿ ಸಾಂಖ್ಯಧರ್ಮಃ ಸನಾತನಃ ।
ಕಪಿಲಾದಿಭಿರಾಚಾರ್ಯೈಃ ಸೇವಿತಃ ಪರಮರ್ಷಿಭಿಃ ॥೬೨॥

ಆದ್ದರಿಂದ ಅವನ ದರ್ಶನದಿಂದಲೇ ಶ್ರೇಷ್ಠ ಗತಿಯನ್ನು ಹೊಂದುತ್ತಾರೆ. ದೇವಿಯೇ, ಕಪಿಲಾದಿ ಪರಮಾತ್ಮನ ರೂಪದಿಂದಲೂ, ಪರಮರ್ಷಿಗಳಿಂದಲೂ ಸೇವಿತವಾದ ಪರಮಾರ್ಥವಾದ, ಸನಾತನವಾದ ಸಾಂಖ್ಯಧರ್ಮವನ್ನು ನಿನಗೆ ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಪರ್ವಣಿ ಸಾಂಖ್ಯತತ್ತ್ವೋಪದೇಶೋ ನಾಮ ತ್ರಿಂಶತ್ಯುತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಮೂವತ್ತೊಂದನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಯೋಗವಿಧಿಕಥನ.

ಮಹೇಶ್ವರಃ

ಸಾಂಖ್ಯಜ್ಞಾನೇನ ಯುಕ್ತಾನಾಂ ತದೇತತ್ ಕೀರ್ತಿತಂ ಮಯಾ ।
ಯೋಗಧರ್ಮಂ ಪುನಃ ಕೃತ್ಸ್ನಂ ಕೀರ್ತಯಿಷ್ಯಾಮಿ ತೇ ಶೃಣು ॥೧॥

ಮಹೇಶ್ವರ– ಸಾಂಖ್ಯಜ್ಞಾನಕ್ಕೆ ಸಂಬಂಧಿಸಿದ ಈ ವಿಷಯವೆಲ್ಲವನ್ನೂ ನಾನು ಹೇಳಿದೆನು. ಇನ್ನೂ ಸಮಗ್ರವಾಗಿ ಯೋಗಧರ್ಮವನ್ನು ನಿನಗೆ ಹೇಳುವೆನು. ಅದನ್ನು ಕೇಳು.

ಸ ಚ ಯೋಗೋ ದ್ವಿಧಾ ಭಿನ್ನೋ ಬ್ರಹ್ಮದೇವರ್ಷಿಸಮ್ಮತಃ ।
ಸಮಾನಮುಭಯತ್ರಾಪಿ ವೃತ್ತಂ ಶಾಸ್ತ್ರಪ್ರಚೋದಿತಮ್ ॥೨॥

ಬ್ರಹ್ಮರ್ಷಿಗಳಿಗೆ ಮತ್ತು ದೇವರ್ಷಿಗಳಿಗೆ ಸಮ್ಮತವಾದ ಯೋಗವು ಎರಡು ಬಗೆಯಾದವುಗಳು. ಶಾಸ್ತ್ರವಿಧಿಯಿಂದ ವಿಧಿಸಲ್ಪಟ್ಟ ನಡತೆಯು (ಆಚಾರವು) ಎರಡು ಕಡೆಯಲ್ಲಿಯೂ ಸಮಾನವಾಗಿರುತ್ತವೆ.

ಸ ಚಾಷ್ಟಗುಣಮೈಶ್ವರ್ಯಮಧಿಕೃತ್ಯ ವಿಧೀಯತೇ ।
ಸಾಯುಜ್ಯಂ ಸರ್ವದೇವಾನಾಂ ಯೋಗಧರ್ಮಃ ಪರಃ ಸ್ಮೃತಃ ॥೩॥

ಲೋಕಪಾಲರ ಅಣಿಮಾದಿ ಅಷ್ಟೈಶ್ವರ್ಯವನ್ನು ಉದ್ದೇಶಿಸಿ ಯೋಗವು ವಿಧಿಸಲ್ಪಡುತ್ತದೆ. ಸರ್ವದೇವತೆಗಳ ಸಾಯುಜ್ಯವು ಯೋಗಧರ್ಮದ ಪರಮ ಫಲವಾಗಿದೆ.

ಜ್ಞಾನಂ ಸರ್ವಸ್ಯ ಯೋಗಸ್ಯ ಮೂಲಮಿತ್ಯವಧಾರಯ ।
ವ್ರತೋಪವಾಸನಿಯಮೈಸ್ತೈಸ್ತೈಸ್ತತ್ಪರಿಬೃಂಹಯೇತ್ ॥೪॥

ಜ್ಞಾನವು ಎಲ್ಲ ಯೋಗಗಳಿಗೂ ಮೂಲವೆಂದು ತಿಳಿ. ಆಯಾ ವ್ರತೋಪವಾಸ, ನಿಯಮಗಳಿಂದ ಆ ಜ್ಞಾನವನ್ನು ಪುಷ್ಟೀಕರಿಸಬೇಕು.

ಏಕಾತ್ಮ್ಯಂ ಬುದ್ಧಿಮನಸೋರಿಂದ್ರಿಯಾಣಾಂ ಚ ಸರ್ವಶಃ ।
ಆತ್ಮನ್ಯವ್ಯಯಿನಿ ಪ್ರಾಜ್ಞೇ ಜ್ಞಾನಮೇತತ್ತು ಯೋಗಿನಾಮ್ ॥೫॥

ಬುದ್ಧಿ, ಮನಸ್ಸು ಮತ್ತು ಇಂದ್ರಿಯಗಳನ್ನು ನಾಶರಹಿತನಾದ, ಪ್ರಾಜ್ಞನಾದ ಪರಮಾತ್ಮನ ವಿಷಯಕವನ್ನಾಗಿ ಮಾಡುವುದೇ ಯೋಗ. ಯೋಗಿಗಳಿಗೆ ಇದೇ ಜ್ಞಾನವೆನಿಸುತ್ತದೆ.

ಅರ್ಚಯೇದ್ ಬ್ರಾಹ್ಮಣಾನಗ್ನೀನ್ ದೇವತಾಯತನಾನಿ ಚ ।
ವರ್ಜಯೇದಶಿವಂ ಭಾವಂ ಭವೇತ್ ಸತ್ತ್ವಮುಪಾಶ್ರಿತಃ ॥೬॥

ಬ್ರಾಹ್ಮಣರನ್ನು, ಅಗ್ನಿಗಳನ್ನು, ದೇವತಾ ಪ್ರತಿಮೆಗಳನ್ನು ಪೂಜಿಸಬೇಕು. ಸತ್ತ್ವ ಗುಣವನ್ನು ಆಶ್ರಯಿಸಿ ಮನಸ್ಸಿನ ದುಷ್ಟ ಆಲೋಚನೆಗಳನ್ನು ಬಿಡಬೇಕು.

ದಾನಮಧ್ಯಯನಂ ಶ್ರದ್ಧಾ ವ್ರತಾನಿ ನಿಯಮಾಸ್ತಥಾ ।
ಸತ್ಯಮಾಹಾರಶುದ್ಧಿಶ್ಚ ಶೌಚಮಿಂದ್ರಿಯನಿಗ್ರಹಃ ।
ಏತೈಸ್ತು ವರ್ಧತೇ ತೇಜಃ ಪಾಪಂ ಚಾಪ್ಯವಧೂಯತೇ ॥೭॥

ದಾನ, ಅಧ್ಯಯನ, ಶ್ರದ್ಧೆ, ವ್ರತನಿಯಮಗಳು, ಸತ್ಯವಚನ, ಆಹಾರಶುದ್ಧಿ, ಶೌಚ, ಇಂದ್ರಿಯನಿಗ್ರಹ ಇವುಗಳಿಂದ ತೇಜಸ್ಸು ಅಭಿವೃದ್ಧಿಯನ್ನು ಹೊಂದುತ್ತದೆ ಮತ್ತು ಪಾಪವು ನಾಶವನ್ನು ಹೊಂದುತ್ತದೆ.

ನಿರ್ಧೂತಪಾಪ್ಮಾ ಚ ತೇಜಸ್ವೀ ಲಘ್ವಾಹಾರೋ ಜಿತೇಂದ್ರಿಯಃ ।
ನಿಃಶೋಕೋ ನಿರ್ಮಲೋ ದಾಂತಃ ಪಶ್ಚಾದ್ ಯೋಗಂ ಸಮಾಚರೇತ್॥

ಪಾಪಗಳನ್ನು ಕಳೆದುಕೊಂಡು, ತೇಜಸ್ವಿಯಾಗಿ ಅಲ್ಪಾಹಾರವನ್ನು ಸೇವಿಸಿ, ಜಿತೇಂದ್ರಿಯನಾಗಿ, ಶೋಕರಹಿತನೂ, ನಿರ್ಮಲನೂ, ಇಂದ್ರಿಯನಿಗ್ರಹವುಳ್ಳವನೂ ಆಗಿ ಅನಂತರ ಯೋಗವನ್ನು ಅಭ್ಯಾಸ ಮಾಡಬೇಕು.

ಅವದಧ್ಯಾನ್ಮನಃ ಪೂರ್ವಂ ಮತ್ಸ್ಯಃ ಪಾತಮಿವಾಮಿಷಮ್ ।
ಏಕಾಂತೇ ವಿಜನೇ ದೇಶೇ ಸರ್ವತಃ ಸಂವೃತೇ ಶುಚೌ ।
ಕಲ್ಪಯೇದಾಸನಂ ತತ್ರ ಸಾಸ್ತೀರ್ಣಂ ಮೃದುಭಿಃ ಕುಶೈಃ ॥೯॥

ಮತ್ಸ್ಯವು ಪತನಕ್ಕೆ ಹೇತುವಾದ ಆಮಿಷದಲ್ಲಿ (ಮಾಂಸದಲ್ಲಿ) ಅಥವಾ ಹುಳುವಿನಲ್ಲಿ ಮನಸ್ಸನ್ನು ಇಡುವಂತೆ ಮನಸ್ಸನ್ನು ಒಂದು ಕಡೆ ನೆಲೆಸಬೇಕು. ಏಕಾಂತದಲ್ಲಿ ಎಲ್ಲ ಕಡೆಯಿಂದಲೂ ಮುಚ್ಚಿದ, ಶುಚಿಯಾದ ನಿರ್ಜನ ಪ್ರದೇಶದಲ್ಲಿ ಆಸನವನ್ನು ಕಲ್ಪಿಸಿ ಅದರ ಮೇಲೆ ಮೃದುವಾದ ಕುಶ (ದರ್ಭೆ)ಗಳನ್ನು ಹರಡಬೇಕು.

ಉಪವಿಶ್ಯಾಸನೇ ತಸ್ಮಿನ್ನೃಜುಕಾಯಶಿರೋಧರಃ ।
ಅವ್ಯಗ್ರಃ ಸುಖಮಾಸೀನಃ ಸ್ವಾಂಗಾನಿ ನ ವಿಕಂಪಯೇತ್ ।
ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್ ॥೧೦॥

ಭ್ರುವೋರ್ಮಧ್ಯೇ ಮನಃ ಕೃತ್ವಾ ಚಿಂತಯಿತ್ವಾ ಶರೀರಿಣಮ್ ।
ಯತೋ ಯತೋ ನಿಶ್ಚರತಿ ಮನಶ್ಚಂಚಲಮಸ್ಥಿರಮ್ ।
ತತಸ್ತತೋ ನಿಯಮ್ಯೈತದಾತ್ಮನ್ಯೇವ ಪರಂ ನಯೇತ್ ॥೧೧॥

ಆ ಆಸನದಲ್ಲಿ ಕುಳಿತು ದೇಹ, ಶಿರಸ್ಸು ಮತ್ತು ಕತ್ತುಗಳನ್ನು ನೇರವಾಗಿಟ್ಟುಕೊಂಡು ಸುಖವಾಗಿ ಕುಳಿತು ಅಂಗಗಳನ್ನು ಅಲುಗಾಡಿಸಬಾರದು. ಮೂಗಿನ ತುದಿಯನ್ನು ನೋಡುತ್ತಾ ದಿಕ್ಕುಗಳನ್ನು ನೋಡದೆ ಮನಸ್ಸನ್ನು ಭ್ರೂಮಧ್ಯದಲ್ಲಿ ನಿಲ್ಲಿಸಿ, ಶರೀರ ಸ್ವಾಮಿಯಾದ ನಾರಾಯಣನನ್ನು ಚಿಂತಿಸಬೇಕು. ಚಂಚಲವೂ, ಅಸ್ಥಿರವೂ ಆಗಿರುವ ಮನಸ್ಸು ಬೇರೆ ಬೇರೆ ಕಡೆಗೆ ಹೋದಂತೆಲ್ಲಾ ಅದನ್ನು ಅಲ್ಲಿಂದ ಎಳೆದು ತಂದು ಪರಬ್ರಹ್ಮನಲ್ಲಿಯೇ ಇಡಬೇಕು.

ಮನೋಽವಸ್ಥಾಪನಂ ದೇವಿ ಯೋಗಸ್ಯೋಪನಿಷದ್ ಭವೇತ್ ।
ತಸ್ಮಾತ್ ಸರ್ವಪ್ರಯತ್ನೇನ ಮನೋಽವಸ್ಥಾಪಯೇತ್ ಸದಾ ॥೧೨॥

ದೇವಿಯೇ, ಮನಸ್ಸು ಅಲುಗಾಡಿಸದೆ ಒಂದೇ ಕಡೆ ನಿಲ್ಲಿಸುವುದು ಯೋಗದ ರಹಸ್ಯ. ಆದ್ದರಿಂದ ಸರ್ವಪ್ರಯತ್ನದಿಂದ ಮನಸ್ಸನ್ನು ನಾರಾಯಣನಲ್ಲಿ ನೆಲೆಸಬೇಕು.

ತ್ವಕ್ಶ್ರೋತ್ರಂ ಚ ತತೋ ಜಿಹ್ವಾಂ ಘ್ರಾಣಂ ಚಕ್ಷುಶ್ಚ ಸಂಹರೇತ್ ।
ಪಂಚೇಂದ್ರಿಯಾಣಿ ಸಂಧಾಯ ಮನಸಿ ಸ್ಥಾಪಯೇದ್ ಬುಧಃ ॥೧೩॥

ತ್ವಕ್, ಶ್ರೋತ್ರ, ಜಿಹ್ವಾ, ಘ್ರಾಣ, ಚಕ್ಷುಸ್ - ಈ ಐದು ಇಂದ್ರಿಯಗಳನ್ನು ತಂದು ವಿವೇಕಿಯಾದವನು ಮನಸ್ಸಿನಲ್ಲಿ ನೆಲೆಸುವಂತೆ ಮಾಡಬೇಕು.

ಸರ್ವಂ ಚಾಪೋಹ್ಯ ಸಂಕಲ್ಪಮಾತ್ಮನಿ ಸ್ಥಾಪಯೇನ್ಮನಃ ।
ಯದೈತಾನ್ಯವತಿಷ್ಠಂತೇ ಮನಃಷಷ್ಠಾನಿ ಚಾತ್ಮನಿ ॥೧೪॥

ಪ್ರಾಣಾಪಾನೌ ತದಾ ತಸ್ಯ ಯುಗಪತ್ತಿಷ್ಠತೋ ವಶೇ ।
ಪ್ರಾಣೇ ಹಿ ವಶಮಾಪನ್ನೇ ಯೋಗಸಿದ್ಧಿರ್ಧ್ರುವಾ ಭವೇತ್ ॥೧೫॥

ಮನಸ್ಸಿನ ಎಲ್ಲ ಸಂಕಲ್ಪವನ್ನೂ ತ್ಯಜಿಸಿ ಮನಸ್ಸನ್ನು ಪರಮಾತ್ಮನಲ್ಲಿ ನೆಲೆಸಬೇಕು. ಐದು ಇಂದ್ರಿಯಗಳು ಮತ್ತು ಮನಸ್ಸು ಪರಮಾತ್ಮನಲ್ಲಿ ನಿಂತಾಗ ಪ್ರಾಣಾಪಾನಗಳು ಒಟ್ಟಿಗೆ ಯೋಗಿಗೆ ವಶವಾಗುತ್ತವೆ. ಪ್ರಾಣವಾಯುವು ವಶವಾದರೆ ನಿಶ್ಚಿತವಾಗಿ ಯೋಗಸಿದ್ಧಿ ಉಂಟಾಗುತ್ತದೆ.

ಶರೀರಂ ಚಿಂತಯೇತ್ಸರ್ವಂ ವಿಪಾಟ್ಯ ಚ ಸಮೀಪತಃ ।
ಅಂತರ್ದೇಹಗತಿಂ ಚಾಪಿ ಪ್ರಾಣಾನಾಂ ಪರಿಚಿಂತಯೇತ್ ॥೧೬॥

ಶರೀರವನ್ನು ವಿಶ್ಲೇಷಿಸಿ ಸಮೀಪದಿಂದ ಎಲ್ಲವನ್ನೂ ಚಿಂತಿಸಬೇಕು. ದೇಹದಲ್ಲಿ ಪ್ರಾಣಾದಿ ವಾಯುಗಳು ಸಂಚರಿಸುವ ಗತಿಯನ್ನೂ ಚಿಂತಿಸಬೇಕು.

ತತೋ ಮೂರ್ಧಾನಮಗ್ನಿಂ ಚ ಶರೀರಂ ಪರಿಪಾಲಯನ್ ।
ಪ್ರಾಣೋ ಮೂರ್ಧನಿ ಚಾಗ್ನೌ ಚ ವರ್ತಮಾನೋ ವಿಚೇಷ್ಟತೇ ॥೧೭॥

ಅನಂತರ ಪ್ರಾಣವಾಯುವು ಶಿರಸ್ಸಿನಲ್ಲಿ ಮತ್ತು ಅಗ್ನಿಯಲ್ಲಿದ್ದು ಶಿರಸ್ಸನ್ನೂ, ಶರೀರವನ್ನೂ, ಅಗ್ನಿಯನ್ನೂ (ಜಠರಾಗ್ನಿ) ರಕ್ಷಿಸುತ್ತಾ, ದೇಹದಲ್ಲಿ ವ್ಯಾಪಾರವನ್ನು ಮಾಡುತ್ತದೆ.

ಸ ಜಂತುಃ ಸರ್ವಭೂತಾತ್ಮಾ ಪುರುಷಃ ಸ ಸನಾತನಃ ।
ಮನೋ ಬುದ್ಧಿರಹಂಕಾರೋ ಭೂತಾನಿ ವಿಷಯಾಂಶ್ಚ ಸಃ ॥೧೮॥

ಬಸ್ತಿರ್ಮೂಲಂ ಗುದಂ ಚೈವ ಪಾವಕಂ ಚ ಸಮಾಶ್ರಿತಃ ।
ವಹನ್ಮೂತ್ರಂ ಪುರೀಷಂ ಚ ಸದಾऽಪಾನಃ ಪ್ರವರ್ತತೇ ॥೧೯॥

ಪ್ರಾಣನು ಸನಾತನವಾದ, ಸರ್ವಪ್ರಾಣಿಯ ಅಂತರ್ಯಾಮಿಯಾದ ಪುರುಷ ಜೀವ. ಅವನು ಮನಸ್ಸು, ಬುದ್ಧಿ, ಅಹಂಕಾರ, ಪಂಚಭೂತಗಳ ವಿಷಯಗಳು, ಬಸ್ತಿ, ಮೂಲಾಧಾರ, ಬುದ್ಧಿ, ಅಗ್ನಿ ಇವುಗಳನ್ನು ಆಶ್ರಯಿಸಿಕೊಂಡಿರುತ್ತಾನೆ. ಮೂತ್ರ-ಮಲಗಳನ್ನು ಹೊರಗೆ ಸಾಗಿಸುತ್ತಾ ಅಪಾನನು ಕಾರ್ಯವನ್ನು ಮಾಡುತ್ತಾನೆ. ಅದರಿಂದ ಪ್ರಾಣಿಗಳಲ್ಲಿ ಪ್ರವೃತ್ತಿಯುಂಟಾಗುತ್ತದೆ.

ಅತಃಪ್ರವೃತ್ತಿರ್ದೇಹೇಷು ಕರ್ಮಾಪಾನಸ್ಯ ತನ್ಮತಮ್ ।
ಉದೀರಯನ್ ಸರ್ವಧಾತೂನತ ಊರ್ಧ್ವಂ ಪ್ರವರ್ತತೇ ।
ಉದಾನ ಇತಿ ತಂ ವಿದ್ಯುರಧ್ಯಾತ್ಮಕುಶಲಾ ಜನಾಃ ॥೨೦॥

ವಿಸರ್ಜನೆಯು ಅಪಾನನ ಕಾರ್ಯವೆಂದು ಹೇಳಲ್ಪಟ್ಟಿದೆ. ಉದಾನನು ಶರೀರದ ಧಾತುಗಳನ್ನು ಮೇಲ್ಮುಖವಾಗಿ ಕೊಂಡೊಯ್ಯುತ್ತಾನೆ. ಅಧ್ಯಾತ್ಮ ಕುಶಲರಾದ ಜನರು ಅವನನ್ನು ತಿಳಿಯುತ್ತಾರೆ.

ಸಂಧೌಸಂಧೌ ಸನ್ನಿವಿಷ್ಟಃ ಸರ್ವಚೇಷ್ಟಾಪ್ರವರ್ತಕಃ ।
ಶರೀರೇಷು ಮನುಷ್ಯಾಣಾಂ ವ್ಯಾನ ಇತ್ಯುಪದಿಶ್ಯತೇ ॥೨೧॥

ಮನುಷ್ಯರ ಶರೀರದ ಸಂಧಿ ಸಂಧಿಗಳಲ್ಲಿ ಇದ್ದು ವ್ಯಾನನು ಸರ್ವಚೇಷ್ಟಾ ಪ್ರವರ್ತಕನಾಗಿದ್ದಾನೆ ಎಂದು ಉಪದೇಶಿಸಲ್ಪಡುತ್ತದೆ.

ಧಾತುಷ್ವಗ್ನೌ ಚ ವಿತತಃ ಸಮಾನೋऽಗ್ನಿಃ ಸಮೀರಣಃ ।
ಸ ಏವ ಸರ್ವಚೇಷ್ಟಾನಾಮಂತಕಾಲೇ ನಿವರ್ತಕಃ ॥೨೨॥

ಸಮಾನವಾಯುವು ಶರೀರದ ಸಪ್ತಧಾತುಗಳಲ್ಲಿಯೂ ಮತ್ತು ಅಗ್ನಿಯಲ್ಲಿಯೂ ವ್ಯಾಪ್ತನಾಗಿರುತ್ತಾನೆ. ಅಂತ್ಯಕಾಲದಲ್ಲಿ ಎಲ್ಲ ಚೇಷ್ಟೆಗಳನ್ನು, ಉಪರಮವನ್ನು ಮಾಡುವವನು ಅವನೇ.

ಪ್ರಾಣಾನಾಂ ಸನ್ನಿಪಾತೇಷು ಸಂಸರ್ಗಾದ್ ಯಃ ಪ್ರಜಾಯತೇ ।
ಊಷ್ಮಾ ಸೋಗ್ನಿರಿತಿ ಜ್ಞೇಯಃ ಸೋನ್ನಂ ಪಚತಿ ದೇಹಿನಾಮ್ ॥೨೩॥

ಪ್ರಾಣವಾಯುಗಳ ಪರಸ್ಪರ ಸಂಯೋಗದಿಂದ ಉಂಟಾಗುವ ಉಷ್ಣತೆಗೆ ಅಗ್ನಿ ಎಂದು ಹೆಸರು. ಅಗ್ನಿಯು ದೇಹಿಗಳ ಆಹಾರವನ್ನು ಪಚನ ಮಾಡುತ್ತಾನೆ.

ಅಪಾನಪ್ರಾಣಯೋರ್ಮಧ್ಯೇ ಪ್ರಾಣಾಪಾನಸಮಾಹಿತಃ ।
ಸಮನ್ವಿತಃ ಸಮಾನೇನ ಸಮ್ಯಕ್‌ಪಚತಿ ಪಾವಕಃ ॥೨೪॥

ಅಪಾನ-ಪ್ರಾಣವಾಯುಗಳ ಮಧ್ಯದಲ್ಲಿ ಪ್ರಾಣಾಪಾನರಿಬ್ಬರನ್ನೂ ಆಶ್ರಯಿಸಿ ಸಮಾನವಾಯು ಸಹಿತನಾಗಿ ಅಗ್ನಿಯು ಚೆನ್ನಾಗಿ ಆಹಾರವನ್ನು ಪಚನ ಮಾಡುತ್ತಾನೆ.

ಅಧಸ್ತ್ವಗ್ನಿರಪಾನೇನ ಪ್ರಾಣೇನ ಪರಿಪಾಲ್ಯತೇ ।
ಪೃಷ್ಠತಸ್ತು ಸಮಾನೇನ ಸ್ವಾಂ ಸ್ವಾಂ ಗತಿಮುಪಾಶ್ರಿತಃ ॥೨೫॥

ಶರೀರಮಧ್ಯೇ ನಾಭಿಃ ಸ್ಯಾನ್ನಾಭ್ಯಾಮಗ್ನಿಃ ಪ್ರತಿಷ್ಠಿತಃ ।
ಅಗ್ನೌ ಪ್ರಾಣಾಶ್ಚ ಸಂಸಕ್ತಾಃ ಪ್ರಾಣೇಷ್ವಾತ್ಮಾ ವ್ಯವಸ್ಥಿತಃ ॥೨೬॥

ಅಗ್ನಿಯು ದೇಹದ ಕೆಳಭಾಗದಲ್ಲಿ ಅಪಾನನಿಂದ ರಕ್ಷಿಸಲ್ಪಡುತ್ತಾನೆ. ಪೃಷ್ಠ ಭಾಗದಲ್ಲಿ ಸಮಾನನಿಂದ ರಕ್ಷಿಸಲ್ಪಡುತ್ತಾನೆ. ಸಮಾನನಿಂದ ಶರೀರದಲ್ಲಿ ತನ್ನ ಗತಿಯನ್ನು ಹೊಂದುತ್ತಾನೆ. ಶರೀರಮಧ್ಯದಲ್ಲಿ ನಾಭಿ ಇದೆ. ನಾಭಿಯಲ್ಲಿ ಅಗ್ನಿಯು ಪ್ರತಿಷ್ಠಿತನಾಗಿದ್ದಾನೆ. ಅಗ್ನಿಯಲ್ಲಿ ಪ್ರಾಣಗಳೂ ಸಂಸಕ್ತವಾಗಿವೆ ಮತ್ತು ಪ್ರಾಣಗಳಲ್ಲಿ ಪರಮಾತ್ಮನು ಸ್ಥಿತನಾಗಿದ್ದಾನೆ.

ಪಕ್ವಾಶಯಸ್ತ್ವಧೋ ನಾಭೇರೂರ್ಧ್ವಮಾಮಾಶಯಃ ಸ್ಮೃತಃ ।
ನಾಭಿರ್ಮಧ್ಯೇ ಶರೀರಸ್ಯ ಸರ್ವಪ್ರಾಣಾಸ್ತಮಾಶ್ರಿತಾಃ ॥೨೭॥

ಪಕ್ವವಾದ ಆಹಾರದ ಕೋಶವು ನಾಭಿಯ ಕೆಳಗಿದೆ. ನಾಭಿಯ ಮೇಲ್ಭಾಗದಲ್ಲಿ ಪಕ್ವವಾಗದ ಆಹಾರಕೋಶವಿದೆ. ಶರೀರದಲ್ಲಿ ನಾಭಿಮಧ್ಯದಲ್ಲಿ ಎಲ್ಲ ಪ್ರಾಣಗಳೂ ಪರಮಾತ್ಮನನ್ನು ಆಶ್ರಯಿಸಿಕೊಂಡಿವೆ.

ಸ್ಥಿತಾಃ ಪ್ರಾಣಾದಯಃ ಸರ್ವೇ ತಿರ್ಯಗೂರ್ಧ್ವಮಧಶ್ಚರಾಃ ।
ವಹಂತ್ಯನ್ನರಸಾನ್ನಾಡ್ಯೋ ದಶಪ್ರಾಣಪ್ರಚೋದಿತಾಃ ॥೨೮॥

ದೇಹದಲ್ಲಿರುವ ಪ್ರಾಣಗಳೆಲ್ಲವೂ ಮೇಲ್ಭಾಗದಲ್ಲಿ, ಕೆಳಭಾಗದಲ್ಲಿ ಮತ್ತು ಅಕ್ಕ-ಪಕ್ಕಗಳಲ್ಲಿ ಸಂಚರಿಸುತ್ತವೆ. ಹತ್ತು ಪ್ರಾಣರಿಂದ ಪ್ರಚೋದಿತವಾದ ನಾಡಿಗಳು ಅನ್ನ ರಸಗಳನ್ನು ದೇಹದ ಎಲ್ಲ ಕಡೆಗೂ ಕೊಂಡೊಯ್ಯುತ್ತವೆ (ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕಲ, ದೇವದತ್ತ, ಧನಂಜಯ - ಈ ಹತ್ತು ಮುಖ್ಯಪ್ರಾಣನ ರೂಪಗಳು. ಈ ಹತ್ತನ್ನು ಪ್ರಾಣ ಎಂಬ ಒಂದೇ ಶಬ್ದದಿಂದ ಕರೆಯುವುದುಂಟು).

ಯೋಗಿನಾಮೇಷ ಮಾರ್ಗಸ್ತು ಪಂಚಸ್ವೇತೇಷು ತಿಷ್ಠತಿ ।
ಜಿತಶ್ರಮಃ ಸಮಾಸೀನೋ ಮೂರ್ಧನ್ಯಾತ್ಮಾನಮಾದಧೇತ್ ॥೨೯॥

ಯೋಗಿಗಳ ಮಾರ್ಗವು ಈ ಐದು ಪ್ರಾಣಗಳಲ್ಲಿ ಇರುತ್ತದೆ. ಆಸನದಲ್ಲಿ ಕುಳಿತ ಯೋಗಿಯು ಶ್ರಮವನ್ನು ಜಯಿಸಿ ಆತ್ಮನನ್ನು ಶಿರಸ್ಸಿನಲ್ಲಿ ತಂದಿಡಬೇಕು.

ಮೂರ್ಧನ್ಯಾತ್ಮಾನಮಾಧಾಯ ಭ್ರುವೋರ್ಮಧ್ಯೇ ಮನಸ್ತಥಾ ।
ಸನ್ನಿರುಧ್ಯ ತತಃ ಪ್ರಾಣಾನಾತ್ಮಾನಂ ಚಿಂತಯೇತ್‌ಪರಮ್ ॥೩೦॥

ಆತ್ಮನನ್ನು (ತನ್ನನ್ನು) ಶಿರಸ್ಸಿನಲ್ಲಿಟ್ಟು ಹುಬ್ಬುಗಳ ಮಧ್ಯದಲ್ಲಿ ಮನಸ್ಸನ್ನಿಟ್ಟು ಪ್ರಾಣಗಳನ್ನು ನಿರೋಧ ಮಾಡಿ ಹರಿಯನ್ನು ಚಿಂತಿಸಬೇಕು.

ಪ್ರಾಣೇ ತ್ವಪಾನಂ ಯುಂಜೀತ ಪ್ರಾಣಾಂಶ್ಚಾಪಾನಕರ್ಮಣಿ ।
ಪ್ರಾಣಾಪಾನಗತೀ ರುದ್ಧ್ವಾ ಪ್ರಾಣಾಯಾಮಪರೋ ಭವೇತ್ ॥೩೧॥

ಅಪಾನನನ್ನು ಪ್ರಾಣನ ಅಧೀನನನ್ನಾಗಿ ಮಾಡಬೇಕು. ಪ್ರಾಣನನ್ನು ಅಪಾನನ ಕರ್ಮಗಳಲ್ಲಿ ನಿಯೋಜಿಸಬೇಕು. ಪ್ರಾಣಾಪಾನ ವಾಯುಗಳ ಗತಿಯನ್ನು ತಡೆದು ಪ್ರಾಣಾಯಾಮ ಪರನಾಗಬೇಕು.

ಏವಮಂತಃ ಪ್ರಯುಂಜೀತ ಪಂಚ ಪ್ರಾಣಾನ್ ಪರಸ್ಪರಮ್ ।
ವಿಜನೇ ಸಮ್ಮಿತಾಹಾರೋ ಮುನಿಸ್ತೂಷ್ಣೀಂ ನಿರುಚ್ಛ್ವಸನ್ ॥೩೨॥

ಹೀಗೆ ಐದು ಪ್ರಾಣಗಳನ್ನು ಪರಸ್ಪರವಾಗಿ ದೇಹದೊಳಗೆ ನಿಯೋಜಿಸಬೇಕು (ಚಿಂತಿಸಬೇಕು). ಮುನಿಯು ನಿರ್ಜನ ಪ್ರದೇಶದಲ್ಲಿ ಕುಳಿತು, ಯೋಗ್ಯವಾದ ಆಹಾರವನ್ನು ಸ್ವೀಕರಿಸಿ, ಉಸಿರನ್ನು ಬಿಡದೆ ಮೌನದಿಂದ ಚಿಂತಿಸಬೇಕು.

ಅಶ್ರಾಂತಶ್ಚಿಂತಯೇದ್ ಯೋಗಮುತ್ಥಾಯ ಚ ಪುನಃಪುನಃ ।
ತಿಷ್ಠನ್ ಗಚ್ಛನ್ ಸ್ವಪನ್ ವಾಪಿ ಯುಂಜೀತೈವಮತಂದ್ರಿತಃ ॥೩೩॥

ದಣಿವಾಗದಿದ್ದರೆ ಪುನಃ ಪುನಃ ಇಂತಹ ಯೋಗಚಿಂತನೆಯನ್ನು ಮಾಡಬೇಕು. ನಡೆಯುವಾಗಲೂ, ನಿಲ್ಲುವಾಗಲೂ, ಮಲಗುವಾಗಲೂ ಆಲಸ್ಯವಿಲ್ಲದೆ ಇಂತಹ ಯೋಗವನ್ನು (ಚಿಂತನೆಯನ್ನು) ಮಾಡಬೇಕು.

ಏವಂ ನಿಯುಂಜತಸ್ತಸ್ಯ ಯೋಗಿನೋ ಯುಕ್ತಚೇತಸಃ ।
ಪ್ರಸೀದತಿ ಮನಃ ಕ್ಷಿಪ್ರಂ ಪ್ರಸನ್ನೇ ದೃಶ್ಯತೇ ಪರಮ್ ॥೩೪॥

ಹೀಗೆ ತನ್ನ ಪ್ರಾಣಗಳನ್ನು ನಿಯೋಜಿಸುವ ಮತ್ತು ಭಗವಂತನನ್ನು ಚಿಂತಿಸುವ ಯೋಗಿಗೆ ಶೀಘ್ರವಾಗಿ ಮನಸ್ಸು ಪ್ರಸನ್ನವಾಗುತ್ತದೆ. ಮನಸ್ಸು ಪ್ರಸನ್ನವಾದರೆ ಪರಮಾತ್ಮನು ಕಾಣುತ್ತಾನೆ.

ವಿಧೂಮ ಇವ ದೀಪ್ತೋಽಗ್ನಿರಾದಿತ್ಯ ಇವ ರಶ್ಮಿವಾನ್ ।
ವೈದ್ಯುತೋಽಗ್ನಿರಿವಾಕಾಶೇ ದೃಶ್ಯತೇ ಪುರುಷೋಽವ್ಯಯಃ ॥೩೫॥

ಅವ್ಯಯನಾದ, ಪುರುಷನಾದ ಪರಮಾತ್ಮನು ಧೂಮವಿಲ್ಲದೆ ಜ್ವಲಿಸುವ ಅಗ್ನಿಯಂತೆ, ಕಿರಣಗಳಿಂದ ಕೂಡಿದ ಸೂರ್ಯನಂತೆ, ಆಕಾಶದಲ್ಲಿ ಮಿಂಚಿನಿಂದ ಉಂಟಾದ ಅಗ್ನಿಯಂತೆ ಕಾಣುತ್ತಾನೆ.

ದೃಷ್ಟ್ವಾ ತದಾತ್ಮನೋ ಜ್ಯೋತಿರೈಶ್ವರ್ಯಾಷ್ಟಗುಣೈರ್ಯುತಮ್ ।
ಪ್ರಾಪ್ನೋತಿ ಪರಮಂ ಸ್ಥಾನಂ ಸ್ಪೃಹಣೀಯಂ ಸುರೈರಪಿ ॥೩೬॥

ಅಣಿಮಾದಿ ಅಷ್ಟ ಮಹಿಮೆಯಿಂದ ಕೂಡಿದ, ಜ್ಯೋತೀರೂಪನಾದ ಪರಮಾತ್ಮನನ್ನು ನೋಡಿದವನು ದೇವತೆಗಳಿಂದಲೂ ಪ್ರಾರ್ಥನೀಯವಾದ, ಪರಮಶ್ರೇಷ್ಠವಾದ ಸ್ಥಾನವನ್ನು ಹೊಂದುತ್ತಾನೆ.

ಇಮಾನ್ ಯೋಗಸ್ಯ ದೋಷಾಂಶ್ಚ ದಶೈವ ಪರಿಚಕ್ಷತೇ ।
ದೋಷೈರ್ವಿಘ್ನೋ ವರಾರೋಹೇ ಯೋಗಿನಾಂ ಕವಿಭಿಃ ಸ್ಮೃತಾಃ ॥೩೭॥

ಯೋಗಕ್ಕೆ ಈ ಹತ್ತು ದೋಷಗಳನ್ನು ಹೇಳುತ್ತಾರೆ. ಎಲೌ ಸುಂದರಿಯೇ, ಯೋಗಿಗಳಿಗೆ ಈ ದೋಷಗಳು ಯೋಗವಿಘ್ನವನ್ನು ತರುತ್ತವೆ ಎಂದು ಜ್ಞಾನಿಗಳು ಹೇಳುತ್ತಾರೆ.

ಕಾಮಂ ಕ್ರೋಧಂ ಭಯಂ ಸ್ವಪ್ನಂ ಸ್ನೇಹಮತ್ಯಶನಂ ತಥಾ ।
ವೈಚಿತ್ತ್ಯಂ ವ್ಯಾಧಿಮಾಲಸ್ಯಂ ಲೋಭಂ ಚ ದಶಮಂ ಸ್ಮೃತಮ್ ॥೩೮॥

ಕಾಮ, ಕ್ರೋಧ, ಭಯ, ನಿದ್ರೆ, ಸ್ನೇಹ, ಗುರು (ಬಹಳ) ಭೋಜನ, ಚಿತ್ತ ವಿಕ್ಷೇಪ, ವ್ಯಾಧಿ, ಆಲಸ್ಯ, ಲೋಭ - ಇವು ಆ ಹತ್ತು ದೋಷಗಳು

ಏತೈಸ್ತೇಷಾಂ ಭವೇದ್ ವಿಘ್ನೋ ದಶಭಿರ್ದೇವಕಾರಿತೈಃ ।
ತಸ್ಮಾದೇತಾನಪಾಸ್ಯಾದೌ ಯುಂಜೀತ ಚಪಲಂ ಮನಃ ॥೩೯॥

ದೇವತೆಗಳಿಂದ ಉಂಟುಮಾಡಲ್ಪಟ್ಟ ಈ ಹತ್ತು ದೋಷಗಳಿಂದ ಯೋಗಿಗಳಿಗೆ ವಿಘ್ನ ಉಂಟಾಗುತ್ತದೆ. ಆದ್ದರಿಂದ ಮೊದಲು ಈ ದೋಷಗಳನ್ನು ದೂರ ಮಾಡಿಕೊಂಡು ಅನಂತರ ಚಂಚಲವಾದ ಮನಸ್ಸನ್ನು ಯೋಗರತವನ್ನಾಗಿ ಮಾಡಬೇಕು.

ಇಮಾನಪಿ ಗುಣಾನಷ್ಟೌ ಯೋಗಸ್ಯ ಪರಿಚಕ್ಷತೇ ।
ಗುಣೈಸ್ತೈರಷ್ಟಭಿರ್ದ್ರವ್ಯಮೈಶ್ವರ್ಯಮಧಿಗಮ್ಯತೇ ॥೪೦॥

ಈ ಎಂಟು ವಸ್ತುಗಳನ್ನು ಯೋಗದ ಎಂಟು ಗುಣಗಳೆಂದು ಹೇಳುತ್ತಾರೆ. ಈ ಎಂಟು ಗುಣಗಳಿಂದ ದ್ರವ್ಯವೂ ಮತ್ತು ಐಶ್ವರ್ಯವೂ ಪ್ರಾಪ್ತವಾಗುತ್ತವೆ.

ಅಣಿಮಾ ಮಹಿಮಾ ಚೈವ ಪ್ರಾಪ್ತಿಃ ಪ್ರಾಕಾಶ್ಯಲಾಘವೇ ।
ಈಶಿತ್ವಂ ಚ ವಶಿತ್ವಂ ಚ ಯತ್ರ ಕಾಮಾವಸಾಯಿತಾ ॥೪೧॥

ಅಣಿಮಾ, ಮಹಿಮಾ, ಪ್ರಾಪ್ತಿ, ಪ್ರಾಕಾಶ್ಯ, ಲಾಘವ, ಈಶಿತ್ವ, ವಶಿತ್ವ ಮತ್ತು ಕಾಮಿತವಾದ ವಸ್ತುಪ್ರಾಪ್ತಿ ಇವು ಆ ಎಂಟು ಗುಣಗಳು.

ಏತಾನಷ್ಟೌ ಗುಣಾನ್ ಪ್ರಾಪ್ಯ ಕಥಂಚಿದ್ ಯೋಗಿನಾಂವರಾಃ ।
ಈಶಾಃ ಸರ್ವಸ್ಯ ಲೋಕಸ್ಯ ದೇವಾನಪ್ಯತಿಶೇರತೇ ॥೪೨॥

ಯೋಗಿಗಳಲ್ಲಿ ಶ್ರೇಷ್ಠರಾದವರು ಬಹಳ ಪ್ರಯಾಸದಿಂದ ಈ ಎಂಟು ಗುಣಗಳನ್ನು ಸಂಪಾದಿಸಿ, ಎಲ್ಲ ಲೋಕಕ್ಕೂ ಪ್ರಭುಗಳಾಗಿ ದೇವತೆಗಳನ್ನೂ ಮೀರಿರುತ್ತಾರೆ.

ಯೋಗೋऽಸ್ತಿ ನೈವಾತ್ಯಶಿನೋ ನ ಚೈಕಾಂತಮನಶ್ನತಃ ।
ನ ಚಾತಿಸ್ವಪ್ನಶೀಲಸ್ಯ ನಾತಿಜಾಗರತಸ್ತಥಾ ॥೪೩॥

ಬಹಳ ಊಟವನ್ನು ಮಾಡುವವನಿಗೆ, ಹೆಚ್ಚು ಉಪವಾಸವಿರುವವನಿಗೆ, ಅತಿಯಾಗಿ ನಿದ್ರೆಯನ್ನು ಮಾಡುವವನಿಗೆ, ಯಾವಾಗಲೂ ಎಚ್ಚರದಿಂದಿರುವವನಿಗೆ ಯೋಗವು ಸಿದ್ಧಿಸುವುದಿಲ್ಲ.

ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।
ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥೪೪॥

ಯೋಗ್ಯವಾದ ಆಹಾರ-ವಿಹಾರವನ್ನು ಹೊಂದಿದ, ತನ್ನ ಕರ್ಮಗಳಲ್ಲಿ ಯೋಗ್ಯವಾದ ಚೇಷ್ಟೆಯನ್ನು ಹೊಂದಿದ, ಯೋಗ್ಯವಾದ ಸ್ವಪ್ನ ಮತ್ತು ಪ್ರಬೋಧಗಳನ್ನು ಹೊಂದಿರುವ ಮನುಷ್ಯನಿಗೆ ಯೋಗವು ದುಃಖನಾಶಕವಾಗುತ್ತದೆ.

ಅನೇನೈವ ವಿಧಾನೇನ ಸಾಯುಜ್ಯಂ ತತ್‌ಪ್ರಕಲ್ಪ್ಯತೇ ।
ಸಾಯುಜ್ಯಂ ದೇವಸಾತ್ಕೃತ್ಯ ಪ್ರಯುಂಜೀತಾತ್ಮಭಕ್ತಿತಃ ॥೪೫॥

ಇದೇ ವಿಧಾನದಿಂದಲೇ ದೇವತೆಗಳ ಸಾಯುಜ್ಯವೂ ಲಭ್ಯವಾಗುತ್ತದೆ. ಸಾಯುಜ್ಯವನ್ನು ದೇವತಾಧೀನವನ್ನಾಗಿ ಮಾಡಿ (ಚಿಂತಿಸಿ) ತನ್ನ ಭಕ್ತಿಯಿಂದ ಅದನ್ನು ಪಡೆಯಬೇಕು.

ಅನನ್ಯಮನಸಾ ದೇವಿ ನಿತ್ಯಂ ತದ್ಗತಚೇತಸಾ ।
ಸಾಯುಜ್ಯಂ ಪ್ರಾಪ್ಯತೇ ದೇವೈರ್ಯತ್ನೇನ ಮಹತಾ ಚಿರಾತ್ ॥೪೬॥

ದೇವಿಯೇ, ಮನಸ್ಸಿನಲ್ಲಿ ಬೇರೆ ಏನನ್ನೂ ಯೋಚಿಸದೆ ನಿತ್ಯವೂ ನಾರಾಯಣನನ್ನು ಚಿಂತಿಸಿ, ದೇವತೆಗಳು ಬಹುಕಾಲ ದೊಡ್ಡ ಪ್ರಯತ್ನವನ್ನು ಮಾಡಿ, ಸಾಯುಜ್ಯವನ್ನು ಪಡೆಯುತ್ತಾರೆ.

ಹವಿರ್ಭಿರರ್ಚನೈರ್ಹೋಮೈಃ ಪ್ರಣಾಮೈರ್ನಿತ್ಯಚಿಂತಯಾ ।
ಅರ್ಚಯಿತ್ವಾ ಯಥಾಶಕ್ತಿ ಸ್ವಕಂ ದೇಶಂ ವಿಶಂತಿ ತೇ ॥೪೭॥

ಹವಿಸ್ಸುಗಳಿಂದ, ಅರ್ಚನೆಗಳಿಂದ, ಹೋಮಗಳಿಂದ, ನಮಸ್ಕಾರಗಳಿಂದ ಮತ್ತು ನಿತ್ಯಚಿಂತನೆಯಿಂದ ತಮ್ಮ ಶಕ್ತಿಗನುಗುಣವಾಗಿ ಪರಮಾತ್ಮನನ್ನು ಪೂಜಿಸಿ ತಮ್ಮ ಕ್ಲಪ್ತವಾದ ಸ್ಥಾನಕ್ಕೆ ಹೋಗುತ್ತಾರೆ.

ಸಾಯುಜ್ಯಾನಾಂ ವಿಶಿಷ್ಟೇ ದ್ವೇ ಮಾಮಕಂ ವೈಷ್ಣವಂ ತಥಾ ।
ಮಾಂ ಪ್ರಾಪ್ಯ ನ ನಿವರ್ತಂತೇ ವಿಷ್ಣುಂ ವಾ ಶುಭಲೋಚನೇ ॥೪೮॥

ದೇವಸಾಯುಜ್ಯಗಳಲ್ಲಿ ಎರಡು ಸಾಯುಜ್ಯಗಳು ಶ್ರೇಷ್ಠವಾದವುಗಳು. ಒಂದು ನನ್ನ ಸಾಯುಜ್ಯ ಮತ್ತು ಇನ್ನೊಂದು ವಿಷ್ಣು ಸಾಯುಜ್ಯ . ಎಲೌ ಶುಭಲೋಚನೆಯೇ, ನನ್ನನ್ನಾಗಲೀ, ವಿಷ್ಣುವನ್ನಾಗಲೀ ಹೊಂದಿದವರು ಪುನಃ ಸಂಸಾರವನ್ನು ಹೊಂದುವುದಿಲ್ಲ.

ಇತಿ ತೇ ಕಥಿತೋ ದೇವಿ ಯೋಗಧರ್ಮಃ ಸನಾತನಃ ।
ನ ಸಶಕ್ಯಃ ಪ್ರಷ್ಟುಮನ್ಯೈರ್ಯೋಗಧರ್ಮಸ್ತ್ವಯಾ ವಿನಾ ॥೪೯॥

ದೇವಿಯೇ, ಸನಾತನವಾದ ಯೋಗಧರ್ಮವನ್ನು ಈ ರೀತಿಯಲ್ಲಿ ನಿನಗೆ ಹೇಳಿದ್ದೇನೆ. ನೀನಲ್ಲದೆ ಬೇರೆ ಯಾರೂ ಯೋಗಧರ್ಮದ ವಿಷಯದಲ್ಲಿ ಪ್ರಶ್ನೆಯನ್ನು ಮಾಡಲು ಸಮರ್ಥರಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮಪರ್ವಣಿ ಯೋಗವಿಧಿಕಥನಂ ನಾಮ
ಏಕತ್ರಿಂಶತ್ಯುತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಮೂವತ್ತೆರಡನೆಯ ಅಧ್ಯಾಯ

ಉಮಾ-ಮಹೇಶ್ವರ ಸಂವಾದ. ಪಾಶುಪತಯೋಗಕಥನ.

ಉಮಾ

ತ್ರಿಯಕ್ಷ ತ್ರಿದಶಶ್ರೇಷ್ಠ ತ್ರ್ಯಂಬಕ ತ್ರಿದಶಾಧಿಪ ।
ತ್ರಿಪುರಾಂತಕ ಕಾಮಾಂಗಹರ ತ್ರಿಪಥಗಾಧರ ॥೧॥

ದಕ್ಷಯಜ್ಞಪ್ರಶಮನ ಶೂಲಪಾಣೇऽರಿಸೂದನ ।
ನಮಸ್ತೇ ಲೋಕಪಾಲೇಶ ಲೋಕಪಾಲವರಪ್ರದ ॥೨॥

ಉಮಾ- ತ್ರಿನೇತ್ರನೇ, ದೇವತೆಗಳಲ್ಲಿ ಶ್ರೇಷ್ಠನೇ, ತ್ರ್ಯಂಬಕನೇ, ತ್ರಿದಶಪ್ರಭುವೇ, ತ್ರಿಪುರಾಂತಕನೇ, ಕಾಮಶರೀರನಾಶಕನೇ, ಗಂಗಾಧರನೇ, ದಕ್ಷಯಜ್ಞನಾಶಕನೇ, ಶೂಲಪಾಣಿಯೇ, ಶತ್ರುಸೂದನನೇ, ಲೋಕಪಾಲಕರಿಗೆ ಪ್ರಭುವೇ, ಲೋಕಪಾಲಕರಿಗೆ ವರವನ್ನು ಕೊಡುವವನೇ, ನಿನಗೆ ನಮಸ್ಕಾರ.

ನೈಕಶಾಖಮಪರ್ಯಂತಮಧ್ಯಾತ್ಮಜ್ಞಾನಮುತ್ತಮಮ್ ।
ಅಪ್ರತರ್ಕ್ಯಮವಿಜ್ಞೇಯಂ ಸಾಂಖ್ಯಯೋಗಸಮನ್ವಿತಮ್ ॥೩॥

ಭವತಾ ಪರಿತುಷ್ಟೇನ ಶೃಣ್ವಂತ್ಯಾ ಮಮ ಭಾಷಿತಮ್ ।
ಇದಾನೀಂ ಶ್ರೋತುಮಿಚ್ಛಾಮಿ ಸಾಯುಜ್ಯಂ ತ್ವದ್ಗತಂ ವಿಭೋ ॥೪॥

ಅನೇಕ ಶಾಖೆಗಳಿಂದ ಕೂಡಿದ, ಅಪರಿಮಿತವಾದ, ತಿಳಿಯಲು ಕಷ್ಟವಾದ, ತರ್ಕಕ್ಕೆ ನಿಲುಕದ, ಸಾಂಖ್ಯ-ಯೋಗಸಮನ್ವಿತವಾದ, ಶ್ರೇಷ್ಠವಾದ ಅಧ್ಯಾತ್ಮಜ್ಞಾನವು ಪರಿತುಷ್ಟನಾದ ನಿನ್ನಿಂದ ಕೇಳುವವಳಾದ ನನಗೆ ಉಪದೇಶಿಸಲ್ಪಟ್ಟಿತು. ಎಲ್ಲೆ ವಿಭುವೇ, ಈಗ ನಿನ್ನ ಸಾಯುಜ್ಯವನ್ನು ಕೇಳಲು ಬಯಸುತ್ತೇನೆ.

ಕಥಂ ಪರಿಚರಂತ್ಯೇತೇ ಭಕ್ತಾಸ್ತಾ ತ್ವಂ ಪರಮೇಷ್ಠಿನಮ್ ।
ಆಚಾರಃ ಕೀದೃಶಸ್ತೇಷಾಂ ಕೇನ ತುಷ್ಟೋ ಭವೇದ್ ಭವಾನ್ ।
ವರ್ಣ್ಯಮಾನಂ ತ್ವಯಾ ಸಾಕ್ಷಾತ್ ಪ್ರೀಣಯತ್ಯಧಿಕಂ ಹಿ ಮಾಮ್ ॥೫॥

ನಿನ್ನ ಭಕ್ತರು ಶ್ರೇಷ್ಠನಾದ ನಿನ್ನನ್ನು ಹೇಗೆ ಪರಿಚರಿಸುತ್ತಾರೆ? ಅವರ ಆಚಾರವು ಹೇಗಿರುತ್ತದೆ? ನೀನು ಯಾವುದರಿಂದ ಸಂತುಷ್ಟನಾಗುತ್ತೀಯೆ? ನೀನು ಸಾಕ್ಷಾತ್ತಾಗಿ ಹೇಳುವ ವಿಷಯಗಳು ನನಗೆ ಬಹಳ ಸಂತೋಷವನ್ನುಂಟು ಮಾಡುತ್ತಿವೆ.

ಮಹೇಶ್ವರಃ

ಹಂತ ತೇ ಕಥಯಿಷ್ಯಾಮಿ ಮಮ ಸಾಯುಜ್ಯಮದ್ಭುತಮ್ ।
ಯೇನ ತೇ ನ ನಿವರ್ತಂತೇ ಯುಕ್ತಾಃ ಪರಮಯೋಗಿನಃ ॥೬॥

ಮಹೇಶ್ವರ– ಸಂತೋಷ. ಪರಮಯೋಗಿಗಳು ಯಾವುದನ್ನು ಹೊಂದಿ ಸಂಸಾರಕ್ಕೆ ಹಿಂದಿರುಗುವುದಿಲ್ಲವೋ ಅಂತಹ ಅದ್ಭುತವಾದ ನನ್ನ ಸಾಯುಜ್ಯವನ್ನು ಹೇಳುವೆನು.

ಅವ್ಯಕ್ತೋಽಹಮಚಿಂತ್ಯೋಽಹಂ ಪೂರ್ವೈರಪಿ ಮಹರ್ಷಿಭಿಃ ।
ಸಾಂಖ್ಯಯೋಗೌ ಮಯಾ ಸೃಷ್ಟೌ ಸರ್ವಂ ಚಾಪಿ ಚರಾಚರಮ್ ॥೭॥

ನಾನು ಅವ್ಯಕ್ತನಾದವನು, ಪ್ರಾಚೀನ ಮಹರ್ಷಿಗಳಿಂದಲೂ ಅಚಿಂತ್ಯನಾದವನು. ಸಾಂಖ್ಯ-ಯೋಗಗಳನ್ನೂ ಮತ್ತು ಸರ್ವಚರಾಚರವಾದ ಜಗತ್ತನ್ನೂ ನಾನೇ ಸೃಷ್ಟಿಸಿದ್ದೇನೆ.

ಅರ್ಚನೀಯೋಽಹಮೀಶೋಽಹಮವ್ಯಯೋಽಹಂ ಸನಾತನಃ ।
ಅಹಂ ಪ್ರಸನ್ನೋ ಭಕ್ತಾನಾಂ ದದಾಮ್ಯಮರತಾಮಪಿ ॥೮॥

ನಾನು ಪೂಜಿಸಲ್ಪಡಬೇಕಾದವನು. ನಾನು ಪ್ರಭುವಾದವನು. ನಾನು ನಿತ್ಯನಾದವನು. ಅನಾದಿಯಾದವನು. ಪ್ರಸನ್ನನಾದ ನಾನು ಭಕ್ತರಿಗೆ ಅಮೃತತ್ವವನ್ನೂ ಕೊಡುತ್ತೇನೆ.

ನ ಮಾಂ ವಿದುಃ ಸುರಗಣಾ ಮುನಯಶ್ಚ ತಪೋಧನಾಃ ।
ತತ್ತ್ವೀಯಾರ್ಥಮಹಂ ದೇವಿ ಮದ್ವಿಭೂತಿಂ ಬ್ರವೀಮಿ ತೇ ॥೯॥

ದೇವತಾ ಸಮೂಹವಾಗಲೀ, ತಪೋಧನರಾದ ಋಷಿಗಳಾಗಲೀ ನನ್ನನ್ನು ತಿಳಿದಿಲ್ಲ. ದೇವಿಯೇ, ನಿನ್ನ ಸಂತೋಷಕ್ಕಾಗಿ ನನ್ನ ವಿಭೂತಿಯನ್ನು ನಿನಗೆ ಹೇಳುತ್ತೇನೆ.

ಆಶ್ರಮೇಭ್ಯಶ್ಚತುರ್ಭ್ಯೋಽಹಂ ಚತುರೋ ಬ್ರಾಹ್ಮಣಾನ್ ಶುಭೇ ।
ಮದ್ಭಕ್ತಾನ್ ನಿರ್ಮಲಾನ್ ಪುಣ್ಯಾನ್ ಸಮಾನೀಯ ತಪಸ್ವಿನಃ ॥೧೦॥

ವ್ಯಾಚಖ್ಯೇಽಹಂ ತಥಾ ದೇವಿ ಯೋಗಂ ಪಾಶುಪತಂ ಮಹತ್ ।
ಗೃಹೀತಂ ತಚ್ಚ ತೈಃ ಸರ್ವಂ ಮುಖಾಚ್ಚ ಮಮ ದಕ್ಷಿಣಾತ್ ॥೧೧॥

ಎಲೌ ಶುಭಳೇ, ನಾನು ನಾಲ್ಕು ಆಶ್ರಮಗಳಿಗೆ ಸೇರಿದ ನನ್ನ ಭಕ್ತರಾದ, ನಿರ್ಮಲರಾದ ತಪಸ್ವಿಗಳಾದ, ಪುಣ್ಯಶೀಲರಾದ ಬ್ರಾಹ್ಮಣರನ್ನು ಕರೆದು ಅವರಿಗೆ ಶ್ರೇಷ್ಠವಾದ ಪಾಶುಪತ ಯೋಗವನ್ನು ವ್ಯಾಖ್ಯಾನ ಮಾಡುತ್ತೇನೆ (ವ್ಯಾಖ್ಯಾನ ಮಾಡಿದೆನು). ದೇವಿಯೇ, ನನ್ನ ದಕ್ಷಿಣ ಮುಖದಿಂದ ಬಂದ ಉಪದೇಶವನ್ನು ಅವರೆಲ್ಲರೂ ಗ್ರಹಿಸಿದರು.

ಶ್ರುತ್ವಾ ಚ ತ್ರಿಷು ಲೋಕೇಷು ಸ್ಥಾಪಿತಂ ಚಾಪಿ ತೈಃ ಪುನಃ ।
ಇದಾನೀಂ ಚ ತ್ವಯಾ ಪೃಷ್ಟಸ್ತತ್ತ್ವಯಾರ್ಥಮನಿಂದಿತೇ ।
ತತ್ಸರ್ವಂ ಕಥಯಿಷ್ಯಾಮಿ ತತ್ತ್ವಮೇಕಮನಾಃ ಶೃಣು ॥೧೨॥

ಶ್ರವಣವನ್ನು ಮಾಡಿದ ಅವರು ಮೂರು ಲೋಕಗಳಲ್ಲಿಯೂ ಆ ವಿದ್ಯೆಯನ್ನು ಸ್ಥಾಪಿಸಿದರು. ಎಲೌ ಅನಿಂದಿತೆಯೇ, ಈಗ ನಿನ್ನಿಂದ ಕೇಳಲ್ಪಟ್ಟವನಾಗಿ ನಿನ್ನ ಸಂತೋಷಕ್ಕಾಗಿ ಅವೆಲ್ಲವನ್ನೂ ಹೇಳುವೆನು. ಅದನ್ನು ನೀನು ಒಂದೇ ಮನಸ್ಸಿನಿಂದ ಕೇಳು.

ಅಹಂ ಪಶುಪತಿರ್ನಾಮ ಮದ್ಭಕ್ತಾ ಯೇ ಚ ಮಾನವಾಃ ।
ಸರ್ವೇ ಪಾಶುಪತಾ ಜ್ಞೇಯಾ ಭಸ್ಮದಿಗ್ಧತನೂರುಹಾಃ ॥೧೩॥

ಪಶುಪತಿ ಎಂದು ನನ್ನ ನಾಮ. ನನ್ನ ಭಕ್ತರಾದ ಮಾನವರೆಲ್ಲರೂ ಪಾಶುಪತರೆಂದು ತಿಳಿಯಲ್ಪಡಬೇಕಾದವರು. ಅವರು ದೇಹದಲ್ಲೆಲ್ಲಾ ಭಸ್ಮಲೇಪವನ್ನು ಮಾಡಿಕೊಂಡಿರುತ್ತಾರೆ.

ಹಿಂದಿನ ಅಧ್ಯಾಯದಲ್ಲಿ ವೇದಸಮ್ಮಿತವಾದ ಯೋಗವನ್ನು ವಿಸ್ತಾರವಾಗಿ ಹೇಳಿ, ಈಗ ಹರಿಯ ಆಜ್ಞೆಗೆ ಅನುಗುಣವಾಗಿ ಅಸುರರನ್ನು ಮೋಹಿಸಲು ರುದ್ರದೇವರು 'ಅಹಂ ಪಶುಪತಿರ್ನಾಮ' ಇತ್ಯಾದಿ ವಾಕ್ಯಗಳಿಂದ ತಾವೇ ರಚಿಸಿದ ಪಾಶುಪತ ಶಾಸ್ತ್ರದಲ್ಲಿ ಹೇಳಿದ ತಾಮಸ ಯೋಗವನ್ನು ಹೇಳುತ್ತಾರೆ. ಕಾಪಾಲಿಕರು ಆಚರಿಸುವ ಸರ್ವಾಂಗ ಭಸ್ಮಲೇಪನ, ಕಪಾಲಧಾರಣ, ಭಿಕ್ಷಾಟನ ಮೊದಲಾದುವನ್ನು ವೈದಿಕರು

ಯಾರೂ ಮಾಡುವುದಿಲ್ಲವಾದ್ದರಿಂದಲೂ, ಇಲ್ಲಿ 'ಅಹಂ ಪಶುಪತಿಃ' ಎಂದು ಹೇಳಿ ಪಾಶುಪತಶಾಸ್ತ್ರಪ್ರವರ್ತಕವಾದ ತನ್ನ ರೂಪವಿಶೇಷವನ್ನು ಮೊದಲು ಪ್ರಸ್ತಾವನೆಯನ್ನು ಮಾಡಿರುವುದರಿಂದಲೂ ಇಲ್ಲಿ ಹೇಳುವ ಆಚಾರವು ಪಾಶುಪತ ಶಾಸ್ತ್ರೋಕ್ತವಾದ ಕರ್ಮಕ್ಕೆ ಅಂಗವೇ ಹೊರತು ವೈದಿಕ ಮಾರ್ಗವಲ್ಲ ಎಂದು ತಿಳಿಯಬೇಕು- ಲಕ್ಷಾಲಂಕಾರ.

ರಕ್ಷಾರ್ಥಂ ಮಂಗಲಾರ್ಥಂ ನ ಪವಿತ್ರಾರ್ಥಂ ಚ ಭಾಮಿನಿ ।
ಲಿಂಗಾರ್ಥಂ ಚೈವ ಭಕ್ತಾನಾಂ ಭಸ್ಮ ದತ್ತಂ ಮಯಾ ಪುರಾ ॥೧೪॥

ಭಾಮಿನಿಯೇ, ರಕ್ಷೆಗೋಸ್ಕರ, ಮಂಗಳಕ್ಕೋಸ್ಕರ ಮತ್ತು ಪಾವಿತ್ರ್ಯಕ್ಕೋಸ್ಕರ ಮತ್ತು ಚಿಹ್ನೆಗೋಸ್ಕರ ನಾನು ನನ್ನ ಭಕ್ತರಿಗೆ ಹಿಂದೆ ಭಸ್ಮವನ್ನು ನೀಡಿದೆನು.

ತೇನ ಸಂದಿಗ್ಧಸರ್ವಾಂಗಾ ಭಸ್ಮನಾ ಬ್ರಹ್ಮಚಾರಿಣಃ ।
ಜಟಿಲಾ ಮುಂಡಿತಾ ವಾಪಿ ನಾನಾಕಾರಶಿಖಂಡಿನಃ ॥೧೫॥

ವಿಕೃತಾಃ ಪಿಂಗಲಾಭಾಶ್ಚ ನಗ್ನಾ ನಾನಾಪ್ರಕಾರಿಣಃ ।
ಭೈಕ್ಷಂ ಚರಂತಃ ಸರ್ವತ್ರ ನಿಃಸ್ಪೃಹಾ ನಿಷ್ಪರಿಗ್ರಹಾಃ ॥೧೬॥

ಬ್ರಹ್ಮಚಾರಿಗಳು, ಜಟಿಲರು ಮುಂಡಿತರಾದ ಸಂನ್ಯಾಸಿಗಳು, ನಾನಾಕಾರವಾದ ಶಿಖೆಗಳನ್ನು ಹೊಂದಿದವರು, ವಿಕೃತವಾದ ರೂಪವನ್ನು ಹೊಂದಿದವರು, ಪಿಂಗಲ ವರ್ಣದವರು, ನಾನಾ ಪ್ರಕಾರದಿಂದ ನಗ್ನರಾಗಿರುವವರು ಎಲ್ಲರೂ ಆ ಭಸ್ಮಗಳನ್ನು ಸರ್ವಾಂಗಗಳಲ್ಲಿಯೂ ಲೇಪಿಸಿಕೊಂಡು, ಭಿಕ್ಷಾಟನೆಯನ್ನು ಮಾಡುತ್ತಾ, ಎಲ್ಲ ವಸ್ತುಗಳಲ್ಲಿಯೂ ಆಸೆಯನ್ನು ತೊರೆದು ನಿಷ್ಪರಿಗ್ರಹರಾಗಿರುತ್ತಾರೆ.

ಕಪಾಲಹಸ್ತಾ ಮದ್ಭಕ್ತಾ ಮನ್ನಿವೇಶಿತಬುದ್ಧಯಃ ।
ಚರಂತೋ ನಿಖಿಲಂ ಲೋಕಂ ಮಮ ಹರ್ಷವಿವರ್ಧನಾಃ ॥೧೭॥

ನನ್ನಲ್ಲಿ ಮನಸ್ಸನ್ನು ನಿಲ್ಲಿಸಿ ಕೈಯಲ್ಲಿ ಕಪಾಲವನ್ನು ಹಿಡಿದು ಎಲ್ಲ ಲೋಕಗಳನ್ನು ಸಂಚರಿಸುವ ನನ್ನ ಭಕ್ತರು ನನ್ನ ಸಂತೋಷವನ್ನು ಹೆಚ್ಚಿಸುತ್ತಾರೆ.

ಮಮ ಪಾಶುಪತಂ ದಿವ್ಯಂ ಯೋಗಶಾಸ್ತ್ರಮನುತ್ತಮಮ್ ।
ಸೂಕ್ಷ್ಮಂ ಸರ್ವೇಷು ಲೋಕೇಷು ವಿಮೃಶಂತಶ್ಚರಂತಿ ತೇ ॥೧೮॥

ನಾನು ರಚಿಸಿದ ದಿವ್ಯವೂ, ಶ್ರೇಷ್ಠವೂ ಆದ, ಸೂಕ್ಷ್ಮವಾದ ಪಾಶುಪತ ಯೋಗಶಾಸ್ತ್ರವನ್ನು ವಿಮರ್ಶೆ ಮಾಡುತ್ತಾ ಎಲ್ಲ ಲೋಕಗಳಲ್ಲಿಯೂ ಅವರು ಸಂಚರಿಸುತ್ತಾರೆ.

ಏವಂ ನಿತ್ಯಾಭಿಯುಕ್ತಾನಾಂ ಮದ್ಭಕ್ತಾನಾಂ ತಪಸ್ವಿನಾಮ್ ।
ಉಪಾಯಂ ಚಿಂತಯಾಮ್ಯಾಶು ಯೇನ ಮಾಮುಪಯಾಂತಿ ತೇ ॥೧೯॥

ಹೀಗೆ ನಿತ್ಯವೂ ನನ್ನಲ್ಲಿ ಮನಸ್ಸಿಟ್ಟ ನನ್ನ ತಪಸ್ವಿಗಳಾದ ನನ್ನ ಭಕ್ತರು ನನ್ನನ್ನು ಹೊಂದುವ ಉಪಾಯವೇನು ಎಂದು ನಾನು ಶೀಘ್ರವಾಗಿ ಚಿಂತಿಸುತ್ತೇನೆ (ಚಿಂತಿಸಿದೆನು).

ಸ್ಥಾಪಿತಂ ತ್ರಿಷು ಲೋಕೇಷು ಶಿವಲಿಂಗಂ ಮಯಾ ಪ್ರಿಯೇ ।
ನಮಸ್ಕಾರೇಣ ವಾ ತಸ್ಯ ಮುಚ್ಯಂತೇ ಸರ್ವಕಿಲ್ಬಿಷೈಃ ॥೨೦॥

ಎಲೌ ಪ್ರಿಯೆಯೇ, ನಾನು ಮೂರುಲೋಕಗಳಲ್ಲಿ ಶಿವಲಿಂಗವನ್ನು ಸ್ಥಾಪಿಸಿದೆನು. ಶಿವಲಿಂಗಕ್ಕೆ ನಮಸ್ಕಾರ ಮಾಡುವುದರಿಂದ ಎಲ್ಲ ಪಾಪಗಳಿಂದಲೂ ಮುಕ್ತರಾಗುತ್ತಾರೆ.

ಇಷ್ಟಂ ದತ್ತಮಧೀತಂ ಚ ಯಜ್ಞಾಶ್ಚ ಸಹದಕ್ಷಿಣಾಃ ।
ಶಿವಲಿಂಗಪ್ರಣಾಮಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥೨೧॥

ತಟಾಕಾದಿ ನಿರ್ಮಾಣ, ದಾನ, ಅಧ್ಯಯನ, ದಕ್ಷಿಣಾ ಸಹಿತವಾದ ಯಜ್ಞಗಳು - ಇವು ಯಾವುವೂ ಶಿವಲಿಂಗ ಪ್ರಣಾಮದ ಹದಿನಾರನೆಯ ಒಂದು ಭಾಗದ ಫಲಕ್ಕೆ ಅರ್ಹವಾದವುಗಳಲ್ಲ.

ಅರ್ಚಯಾ ಶಿವಲಿಂಗಸ್ಯ ಪರಿತುಷ್ಯಾಮ್ಯಹಂ ಪ್ರಿಯೇ ।
ಶಿವಲಿಂಗಾರ್ಚನಾಯಾಂ ತು ವಿಧಾನಮಪಿ ಮೇ ಶೃಣು ॥೨೨॥

ಪ್ರಿಯೆಯೇ, ಶಿವಲಿಂಗದ ಅರ್ಚನೆಯಿಂದ ನಾನು ಸಂತುಷ್ಟನಾಗುತ್ತೇನೆ. ಶಿವಲಿಂಗಾರ್ಚನೆಯ ವಿಧಾನವನ್ನು ನನ್ನಿಂದ ಕೇಳು.

ಗೋಕ್ಷೀರನವನೀತಾಭ್ಯಾಮರ್ಚಯೇದ್ ಯಃ ಶಿವಂ ಮಮ ।
ಇಷ್ಟಸ್ಯ ಹಯಮೇಧಸ್ಯ ಯತ್ಫಲಂ ತತ್ಫಲಂ ಭವೇತ್ ॥೨೩॥

ಗೋಕ್ಷೀರ ಮತ್ತು ನವನೀತಗಳಿಂದ ಯಾವನು ನನ್ನ ಲಿಂಗವನ್ನು ಅರ್ಚಿಸುತ್ತಾನೆಯೋ ಅವನಿಗೆ ಅಶ್ವಮೇಧ ಯಾಗವನ್ನು ಮಾಡಿದ ಫಲವುಂಟಾಗುತ್ತದೆ.

ಘೃತಮಂಡೇನ ಯೋ ನಿತ್ಯಮರ್ಚಯೇದ್ಧಿ ಶಿವಂ ಮಮ ।
ಸ ಫಲಂ ಪ್ರಾಪ್ನುಯಾನ್ಮರ್ತ್ಯೋ ಬ್ರಾಹ್ಮಣಸ್ಯಾಗ್ನಿಹೋತ್ರಿಣಃ ॥೨೪॥

ಗಟ್ಟಿಯಾದ ಘೃತದಿಂದ ಯಾವನು ನನ್ನ ಶಿವಲಿಂಗವನ್ನು ಅರ್ಚಿಸುತ್ತಾನೆಯೋ ಅಂತಹವನು ಅಗ್ನಿಹೋತ್ರವನ್ನು ಮಾಡಿದ ಬ್ರಾಹ್ಮಣರ ಫಲವನ್ನು ಹೊಂದುತ್ತಾನೆ.

ಕೇವಲೇನಾಪಿ ತೋಯೇನ ಸ್ನಾಪಯೇದ್ ಯಃ ಶಿವಂ ಮಮ ।
ಸ ಚಾಪಿ ಲಭತೇ ಪುಣ್ಯಂ ಮತ್ಪ್ರಿಯಶ್ಚ ಭವೇನ್ನರಃ ॥೨೫॥

ಕೇವಲ ನೀರಿನಿಂದಲೇ ಯಾವನು ನನ್ನ ಲಿಂಗಕ್ಕೆ ಅಭಿಷೇಕ ಮಾಡುತ್ತಾನೆಯೋ ಅವನೂ ಸಹ ಪುಣ್ಯವನ್ನು ಪಡೆದು ನನಗೆ ಪ್ರಿಯನಾಗುತ್ತಾನೆ.

ಸಘೃತಂ ಗುಗ್ಗುಲಂ ಸಮ್ಯಗ್ ಧೂಪಯೇದ್ ಯಃ ಶಿವಾಂತಿಕೇ ।
ಗೋಸವಸ್ಯ ತು ಯಜ್ಞಸ್ಯ ಯತ್ಫಲಂ ತಸ್ಯ ತದ್ಭವೇತ್ ॥೨೬॥

ಘೃತ ಸಹಿತವಾದ ಗುಗ್ಗುಲ ಧೂಪವನ್ನು ಯಾವನು ನನ್ನ ಬಳಿ ನೀಡುತ್ತಾನೆಯೋ ಅವನಿಗೆ ಗೋಸವ ಯಜ್ಞದ ಫಲವು ಉಂಟಾಗುತ್ತದೆ.

ಯಸ್ತು ಗುಗ್ಗುಲಪಿಂಡೇನ ಕೇವಲೇನಾಪಿ ಧೂಪಯೇತ್ ।
ತಸ್ಯ ರುಗ್ಮಪ್ರದಾನಸ್ಯ ಯತ್ಫಲಂ ತಸ್ಯ ತದ್ಭವೇತ್ ॥೨೭॥

ಯಾವನು ಕೇವಲ ಗುಗ್ಗುಲಪಿಂಡದಿಂದಲೇ ನನಗೆ ಧೂಪಾರತಿಯನ್ನು ಮಾಡುತ್ತಾನೆಯೋ ಅವನಿಗೆ ಸುವರ್ಣದಾನದ ಫಲವು ಉಂಟಾಗುತ್ತದೆ.

ಯಸ್ತು ನಾನಾವಿಧೈಃ ಪುಷ್ಪೈರ್ಮಮ ಲಿಂಗಂ ಸಮರ್ಚಯೇತ್ ।
ಸ ಹಿ ಧೇನುಸಹಸ್ರಸ್ಯ ದತ್ತಸ್ಯ ಫಲಮಾಪ್ನುಯಾತ್ ॥೨೮॥

ಯಾವನು ನಾನಾ ವಿಧವಾದ ಪುಷ್ಪಗಳಿಂದ ನನ್ನ ಲಿಂಗವನ್ನು ಅರ್ಚಿಸುತ್ತಾನೆಯೋ ಅವನಿಗೆ ಸಹಸ್ರ ಗೋದಾನ ಮಾಡಿದ ಫಲವು ಉಂಟಾಗುತ್ತದೆ.

ಯಸ್ತು ದೇಶಾಂತರಂ ಗತ್ವಾ ಶಿವಲಿಂಗಂ ಸಮರ್ಚಯೇತ್ ।
ತಸ್ಮಾತ್ ಸರ್ವಮನುಷ್ಯೇಷು ನಾಸ್ತಿ ಮೇ ಪ್ರಿಯಕೃತ್ತಮಃ ॥೨೯॥

ಯಾವನು ಬೇರೆ ದೇಶಕ್ಕೆ ಹೋಗಿ ಶಿವಲಿಂಗವನ್ನು ಪೂಜಿಸುತ್ತಾನೆಯೋ, ಸರ್ವ ಮನುಷ್ಯರಲ್ಲಿ ನನಗೆ ಅವನಿಗಿಂತ ಹೆಚ್ಚು ಪ್ರಿಯನಾದವನು ಯಾವನೂ ಇಲ್ಲ.

ಏವಂ ನಾನಾವಿಧೈರ್ದ್ರವ್ಯೈಃ ಶಿವಲಿಂಗಂ ಸಮರ್ಚಯೇತ್ ।
ಮತ್ಪ್ರಸಾದಾತ್ ಮನುಷ್ಯೇಷು ನ ಪುನರ್ಜಾಯತೇ ನರಃ ॥೩೦॥

ಹೀಗೆ ನಾನಾ ವಿಧವಾದ ದ್ರವ್ಯಗಳಿಂದ ಶಿವಲಿಂಗವನ್ನು ಪೂಜಿಸುವವನು ನನ್ನ ಅನುಗ್ರಹದಿಂದ ಪುನಃ ಮನುಷ್ಯಯೋನಿಯಲ್ಲಿ ಜನಿಸುವುದಿಲ್ಲ.

ಅರ್ಚನಾಭಿರ್ನಮಸ್ಕಾರೈರುಪಹಾರೈಃ ಸ್ತವೈರಪಿ ।
ಭಕ್ತೋ ಮಾಮರ್ಚಯೇನ್ನಿತ್ಯಂ ಶಿವಲಿಂಗೇಷ್ವತಂದ್ರಿತಃ ॥೩೧॥

ಭಕ್ತನಾದವನು ಆಲಸ್ಯವಿಲ್ಲದೆ ಅರ್ಚನೆಗಳಿಂದ, ನಮಸ್ಕಾರಗಳಿಂದ, ನೈವೇದ್ಯಗಳಿಂದ ಮತ್ತು ಸ್ತೋತ್ರಗಳಿಂದ ಶಿವಲಿಂಗದಲ್ಲಿರುವ ನನ್ನನ್ನು ಅರ್ಚಿಸಬೇಕು.

ಪಲಾಶಬಿಲ್ವಪತ್ರಾಣಿ ರಾಜವೃಕ್ಷಸ್ರಜಸ್ತಥಾ ।
ಅರ್ಕಪುಷ್ಪಾಣಿ ಮೇಧ್ಯಾನಿ ಮತ್ಪ್ರಿಯಾಣಿ ವಿಶೇಷತಃ ॥೩೨॥

ಪಲಾಶ-ಬಿಲ್ವಪತ್ರಗಳು, ರಾಜವೃಕ್ಷ ಪುಷ್ಪಗಳ ಮಾಲೆಗಳು, ಎಕ್ಕದ ಹೂವುಗಳು ನನಗೆ ಪವಿತ್ರವಾದವುಗಳು ಮತ್ತು ವಿಶೇಷವಾಗಿ ಪ್ರಿಯವಾದವುಗಳು.

ಫಲಂ ವಾ ಯದಿ ವಾ ಶಾಕಂ ಪುಷ್ಪಂ ವಾ ಯದಿ ವಾ ಜಲಮ್ ।
ದತ್ತಂ ಸಂಪ್ರೀಣಯೇದ್ ದೇವಿ ಭಕ್ತೈರ್ಮದ್ಗತಮಾನಸೈಃ ॥೩೩॥

ದೇವಿಯೇ, ನನ್ನ ಭಕ್ತರು ನನ್ನಲ್ಲಿಯೇ ಮನಸ್ಸಿಟ್ಟು ನೀಡಿದ ಫಲವಾಗಲೀ, ಶಾಕವಾಗಲೀ, ಪುಷ್ಪವಾಗಲೀ ಅಥವಾ ಜಲವಾಗಲೀ ನನಗೆ ಸಂತೋಷವನ್ನುಂಟು ಮಾಡುತ್ತದೆ.

ಮಮಾಭಿಪರಿತುಷ್ಟಸ್ಯ ನಾಸ್ತಿ ಲೋಕೇ ಸುದುರ್ಲಭಮ್ ।
ತಸ್ಮಾತ್ತೇ ಸತತಂ ಭಕ್ತಾ ಮಾಮೇವಾಭ್ಯರ್ಚಯಂತ್ಯುತ ॥೩೪॥

ನಾನು ಸಂತುಷ್ಟನಾದರೆ ಲೋಕದಲ್ಲಿ ದುರ್ಲಭವಾದುದು ಯಾವುದೂ ಇಲ್ಲ. ಆದ್ದರಿಂದ ನನ್ನ ಭಕ್ತರು ಸತತವಾಗಿ ನನ್ನನ್ನೇ ಪೂಜಿಸುತ್ತಾರೆ.

ಮದ್ಭಕ್ತಾ ನ ವಿನಶ್ಯಂತಿ ಮದ್ಭಕ್ತಾ ವೀತಕಲ್ಮಷಾಃ ।
ಮದ್ಭಕ್ತಾಃ ಸರ್ವಲೋಕೇಷು ಪೂಜನೀಯಾ ವಿಶೇಷತಃ ॥೩೫॥

ನನ್ನ ಭಕ್ತರು ನಾಶವನ್ನು ಹೊಂದುವುದಿಲ್ಲ. ನನ್ನ ಭಕ್ತರು ದೋಷದೂರರಾಗುತ್ತಾರೆ. ನನ್ನ ಭಕ್ತರು ಸರ್ವಲೋಕಗಳಲ್ಲಿ ವಿಶೇಷವಾಗಿ ಪೂಜಿಸಲ್ಪಡಬೇಕಾದವರು.

ಮದ್ದ್ವೇಷಿಣಶ್ಚ ಯೇ ಮರ್ತ್ಯಾ ಮದ್ಭಕ್ತದ್ವೇಷಿಣಸ್ತಥಾ ।
ಯಾಂತಿ ತೇ ನರಕಂ ಕ್ಷಿಪ್ರಮಿಷ್ಟ್ವಾಪಿ ಕ್ರತುಶತೈರಪಿ ॥೩೬॥

ಯಾವ ಮನುಷ್ಯರು ನನ್ನನ್ನು ದ್ವೇಷಿಸುತ್ತಾರೆಯೋ, ಅದರಂತೆ ನನ್ನ ಭಕ್ತರನ್ನು ದ್ವೇಷಿಸುತ್ತಾರೆಯೋ ಅವರು ನೂರು ಯಾಗಗಳನ್ನು ಮಾಡಿದರೂ ಶೀಘ್ರವಾಗಿ ನರಕಕ್ಕೆ ಹೋಗುತ್ತಾರೆ.

ಏತತ್ ತೇ ಸರ್ವಮಾಖ್ಯಾತಂ ಯೋಗಂ ಪಾಶುಪತಂ ಮಮ ।
ಮದ್ಭಕ್ತೈರ್ಮನುಜೈರ್ದೇವಿ ಶ್ರಾವ್ಯಮೇತದ್ ದಿನೇದಿನೇ ॥೩೭॥

ದೇವಿಯೇ, ಸಮಗ್ರವಾದ ಪಾಶುಪತ ಯೋಗವನ್ನು ನಿನಗೆ ಹೇಳಿದ್ದೇನೆ. ನನ್ನ ಭಕ್ತರಾದ ಮನುಷ್ಯರು ಇದನ್ನು ದಿನದಿನವೂ ಕೇಳಬೇಕು.

ಶೃಣುಯಾದ್ ಯಃ ಪಠೇದ್ವಾಪಿ ಮಮೈತಂ ಧರ್ಮನಿಶ್ಚಯಮ್ ।
ಸ್ವರ್ಗಂ ಕೀರ್ತಿಂ ಧನಂ ಧಾನ್ಯಂ ಲಭೇತ ಸ ನರೋತ್ತಮಃ ॥೩೮॥

ಯಾವ ನರೋತ್ತಮನು ಈ ಧರ್ಮನಿಶ್ಚಯಾಖ್ಯಾನವನ್ನು ಕೇಳುತ್ತಾನೆಯೋ ಅಥವಾ ಪಾರಾಯಣ ಮಾಡುತ್ತಾನೆಯೋ ಅವನು ಸ್ವರ್ಗವನ್ನೂ, ಕೀರ್ತಿಯನ್ನೂ, ಧನವನ್ನೂ, ಧಾನ್ಯವನ್ನೂ ಪಡೆಯುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಪರ್ವಣಿ ಪಾಶುಪತಯೋಗಕಥನಂ ನಾಮ ದ್ವಾತ್ರಿಂಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

ಇನ್ನೂರ ಮೂವತ್ಮೂರನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ.
ಉಮಾದೇವಿಗೆ ಸ್ತ್ರೀಧರ್ಮವನ್ನು ಹೇಳುವಂತೆ ಶಿವನ ಒತ್ತಾಯ.

ನಾರದಃ

ಏವಮುಕ್ತ್ವಾ ಮಹಾದೇವಃ ಶ್ರೋತುಕಾಮಃ ಸ್ವಯಂ ಪ್ರಭುಃ ।
ಅನುಕೂಲಾಂ ಪ್ರಿಯಾಂ ಭಾರ್ಯಾಂ ಪಾರ್ಶ್ವಸ್ಥಾಂ ಸಮಭಾಷತ ॥೧॥

ನಾರದ– ಪ್ರಭುವಾದ ಮಹಾದೇವನು ಈ ರೀತಿಯಲ್ಲಿ ಮಾತನಾಡಿ ಸ್ವತಃ ಶ್ರವಣ ಮಾಡಲು ಬಯಸಿ ಪಾರ್ಶ್ವದಲ್ಲಿದ್ದ ಅನುಕೂಲಳಾದ ಪ್ರಿಯಳಾದ ಭಾರ್ಯೆಯನ್ನು ಕುರಿತು ಮಾತನಾಡಿದನು.

ಮಹೇಶ್ವರಃ

ಪರಾವರಜ್ಞೇ ಧರ್ಮಾಣಾಂ ತಪೋವನನಿವಾಸಿನಾಮ್ ।
ದೀಕ್ಷಾವಿಧಿದಮೋಪೇತೇ ಸತತಂ ವ್ರತಚಾರಿಣಿ ।
ಪೃಚ್ಛಾಮಿ ತ್ವಾಂ ವರಾರೋಹೇ ಪೃಷ್ಟಾ ವದ ಮಮೇಪ್ಸಿತಮ್ ॥೨॥

ಮಹೇಶ್ವರ– ತಪೋವನ ನಿವಾಸಿಗಳ ಧರ್ಮಗಳ ಶ್ರೇಷ್ಠ-ಕನಿಷ್ಠತೆಗಳನ್ನು ತಿಳಿದವಳೇ, ದೀಕ್ಷೆ-ದಮಗಳ ವಿಧಾನಗಳನ್ನು ಹೊಂದಿದವಳೇ, ಸತತವಾಗಿ ವ್ರತವನ್ನು ಆಚರಿಸುವವಳೇ, ಸುಂದರಿಯೇ, ನನಗೆ ಇಷ್ಟವಾದುದನ್ನು ನಿನ್ನನ್ನು ಕೇಳುತ್ತೇನೆ. ಅದನ್ನು ನೀನು ಹೇಳು.

ಸಾವಿತ್ರೀ ಬ್ರಹ್ಮಣಃ ಪತ್ನೀ ಕೌಶಿಕಸ್ಯ ಶಚೀ ಶುಭಾ ।
ಲಕ್ಷ್ಮೀರ್ವಿಷ್ಣೋಃ ಪ್ರಿಯಾ ಭಾರ್ಯಾ ಧೃತಿರ್ಭಾರ್ಯಾ ಯಮಸ್ಯ ತು ॥

ಮಾರ್ಕಂಡೇಯಸ್ಯ ಧೂಮಾರ್ಶಾ ಋದ್ಧಿರ್ವೈಶ್ರವಣಸ್ಯ ತು ।
ವರುಣಸ್ಯ ಪ್ರಿಯಾ ಗೌರೀ ಸವಿತುಶ್ಚ ಸುವರ್ಚಲಾ ॥೪॥

ರೋಹಿಣೀ ಶಶಿನೋ ಭಾರ್ಯಾ ಸ್ವಾಹಾ ವಹ್ನೇರನಿಂದಿತಾ ।
ಕಾಶ್ಯಪಸ್ಯಾದಿತಿಶ್ಚೈವ ವಸಿಷ್ಠಸ್ಯಾಪ್ಯರುಂಧತೀ ॥೫॥

ಏತಾಶ್ಚಾನ್ಯಾಶ್ಚ ದೇವ್ಯಸ್ತು ಸರ್ವಾಸ್ತಾಃ ಪತಿದೇವತಾಃ ।
ಶ್ರೂಯಂತೇ ಲೋಕವಿಖ್ಯಾತಾಸ್ತ್ವಯಾ ಚೈವ ಸಹೋಷಿತಾಃ ॥೬॥

ಬ್ರಹ್ಮನ ಪತ್ನಿಯಾದ ಸಾವಿತ್ರೀ, ಇಂದ್ರನ ಪತ್ನಿಯಾದ ಶುಭಳಾದ ಶಚೀ, ವಿಷ್ಣುವಿನ ಪ್ರಿಯ ಭಾರ್ಯೆಯಾದ ಲಕ್ಷ್ಮೀ, ಯಮನ ಭಾರ್ಯೆಯಾದ ಧೃತಿ, ಮಾರ್ಕಂಡೇಯರ ಭಾರ್ಯೆಯಾದ ಧೂಮೋರ್ಣಾ, ಕುಬೇರನ ಭಾರ್ಯೆಯಾದ ಋದ್ಧಿ, ವರುಣನ ಪ್ರಿಯ ಭಾರ್ಯೆಯಾದ ಗಂಗೆ, ಸೂರ್ಯಪ್ರಿಯಭಾರ್ಯೆಯಾದ ಸುವರ್ಚಲಾ, ಚಂದ್ರನ ಭಾರ್ಯೆಯಾದ ರೋಹಿಣಿ, ವಹ್ನಿಯ ಭಾರ್ಯೆಯಾದ ಅನಿಂದಿತಳಾದ ಸ್ವಾಹಾ, ಕಾಶ್ಯಪರ ಭಾರ್ಯೆಯಾದ ಅದಿತಿ, ವಸಿಷ್ಠರ ಭಾರ್ಯೆಯಾದ ಅರುಂಧತೀ ಇವರೂ ಪತಿದೇವತೆಯರಾದ ಇನ್ನೂ ಲೋಕಖ್ಯಾತರಾದ ಎಲ್ಲಾ ದೇವಿಯರೂ ನಿನ್ನ ಜೊತೆಯಲ್ಲಿ ವಾಸಿಸಿದರು ಎಂದು ಕೇಳಿಬರುತ್ತದೆ.

ತಾಭಿಶ್ಚ ಪೂಜಿತಾ ಸಾ ತ್ವಮನುವೃತ್ತ್ಯಾऽನುಭಾಷಣೈಃ ।
ತಸ್ಮಾತ್ ತ್ವಾಂ ಪರಿಪೃಚ್ಛಾಮಿ ಧರ್ಮಜ್ಞೇ ಲೋಕಸಮ್ಮತೇ ॥೭॥

ಅವರು ನಿನ್ನನ್ನು ಅನುವೃತ್ತಿಯಿಂದಲೂ, ಅನುಸರಿಸುವ ಮಾತಿನಿಂದಲೂ ಪೂಜಿಸಿದ್ದಾರೆ. ಆದ್ದರಿಂದ ಎಲೌ ಧರ್ಮಜ್ಞೆಯೇ, ಲೋಕಸಮ್ಮತಳೇ, ನಿನಗೆ ಪ್ರಶ್ನೆಯನ್ನು ಮಾಡುತ್ತಿದ್ದೇನೆ.

ಸ್ತ್ರೀಧರ್ಮಂ ಶ್ರೋತುಮಿಚ್ಛಾಮಿ ತ್ವಯೈವ ಸಮುದಾಹೃತಮ್ ।
ಸಧರ್ಮಚಾರಿಣೀ ಮೇ ತ್ವಂ ಸಮಾನವ್ರತಚಾರಿಣೀ ॥೮॥

ನಿನ್ನ ಮುಖದಿಂದಲೇ ಸ್ತ್ರೀಧರ್ಮವನ್ನು ಕೇಳಲು ಬಯಸುತ್ತೇನೆ. ನೀನು ನನಗೆ ಸಹಧರ್ಮಚಾರಿಣಿಯಾದವಳು ಮತ್ತು ಸಮಾನ ವ್ರತವನ್ನು ಆಚರಿಸುವವಳು.

ಸಮಾನಸಾರಾ ವೀರ್ಯೇಣ ಮಯೈವ ತ್ವಂ ಶುಭಾನನೇ ।
ಮಮೈವಾರ್ಧಾಚ್ಛರೀರಸ್ಯ ನಿರ್ಮಿತಾಸಿ ಪುರಾ ಶುಭೇ ।
ಸುರಕಾರ್ಯಂ ಕರೋಷಿ ತ್ವಂ ಲೋಕಸಂಧಾರಿಣೀ ತಥಾ ॥೯॥

ಅಯಂ ಹಿ ಸ್ತ್ರೀಗಣಸ್ತ್ವಾಂ ತು ಅನುಯಾತಿ ನ ಮುಂಚತಿ ।
ತತ್ತ್ವಪ್ರಸಾದಾದ್ಧಿತಂ ಶ್ರೋತುಂ ಸ್ತ್ರೀವೃತ್ತಂ ಶುಭಲಕ್ಷಣಮ್ ॥೧೦॥

ಶುಭಾನನೆಯೇ, ಸಾಮರ್ಥ್ಯದಿಂದ ನೀನು ನನಗೆ ಸಮಳಾದವಳು. ಶುಭಳೇ, ನೀನು ಹಿಂದೆ ನನ್ನ ಅರ್ಧಶರೀರದಿಂದಲೇ ನಿರ್ಮಿತಳಾಗಿದ್ದೀಯೆ. ನೀನು ದೇವತಾ ಕಾರ್ಯವನ್ನು ಸಾಧಿಸುವವಳು ಮತ್ತು ಲೋಕಗಳನ್ನು ಧರಿಸುವವಳು ಮತ್ತು ಈ ಸ್ತ್ರೀ ಸಮೂಹವು ನಿನ್ನನ್ನು ಯಾವಾಗಲೂ ಹಿಂಬಾಲಿಸುತ್ತದೆ ಮತ್ತು ನಿನ್ನ ಅನುಗ್ರಹದಿಂದ ಸ್ತ್ರೀಯರಿಗೆ ಹಿತವಾದ ಸ್ತ್ರೀಯರ ಶುಭಧರ್ಮವನ್ನು ಕೇಳಲು ನಿನ್ನನ್ನು ಬಿಡುವುದಿಲ್ಲ.

ತ್ವಯಾ ಚೋಕ್ತಂ ವಿಶೇಷೇಣ ಗುರುಭೂತಂ ಹಿ ತಿಷ್ಠತಿ ।
ಸ್ತ್ರಿಯ ಏವ ಸದಾ ಲೋಕೇ ಸ್ತ್ರೀಗಣಸ್ಯ ಗತಿಃ ಪ್ರಿಯೇ ॥೧೧॥

ನೀನು ಹೇಳಿದುದು ವಿಶೇಷವಾಗಿ ಮಹತ್ವವನ್ನು ಹೊಂದುತ್ತದೆ. ಪ್ರಿಯೆಯೇ, ಸ್ತ್ರೀ ಸಮೂಹಕ್ಕೆ ಯಾವಾಗಲೂ ಸ್ತ್ರೀಯರೇ ಗತಿಯಾದವರು.

ಶಶ್ವದ್ ಗೌರ್ಗೋಷು ಗಚ್ಛೇತ ನಾನ್ಯತ್ರ ರಮತೇ ನರಃ ।
ಏವಂ ಲೋಕಗತಿರ್ದೇವಿ ಆದಿಪ್ರಭೃತಿ ವರ್ತತೇ ॥೧೨॥

ಗೋವು ಯಾವಾಗಲೂ ಗೋವುಗಳ ಬಳಿಗೇ ಹೋಗುತ್ತದೆ. ಮನುಷ್ಯನು ಮನುಷ್ಯನನ್ನು ಬಿಟ್ಟು ಬೇರೆಯವರಿಂದ ಸಂತೋಷವನ್ನು ಹೊಂದುವುದಿಲ್ಲ. ದೇವಿಯೇ, ಮೊದಲಿನಿಂದಲೂ ಲೋಕಗತಿಯು ಈ ರೀತಿಯಾಗಿಯೇ ಇದೆ.

ಪ್ರಮದೋಕ್ತಂ ತು ಯತ್ ಕಿಂಚಿತ್ತತ್ ಸ್ತ್ರೀಷು ಬಹು ಮನ್ಯತೇ ।
ನ ತಥಾ ಮನ್ಯತೇ ಸ್ತ್ರೀಷು ಪುರುಷೋಕ್ತಮನಿಂದಿತೇ ॥೧೩॥

ಪ್ರಮದೆಯರು ಏನು ಹೇಳಿದರೂ ಅದು ವನಿತೆಯರಿಗೆ ಬಹುಮಾನ್ಯವಾಗುತ್ತದೆ. ಅನಿಂದಿತೆಯೇ, ಪುರುಷರು ಮಾತನಾಡಿದ ವಿಷಯದಲ್ಲಿ ಸ್ತ್ರೀಯರು ಹಾಗೆ ಭಾವಿಸುವುದಿಲ್ಲ.

ತ್ವಯೈಷ ವಿದಿತೋ ಹ್ಯರ್ಥಃ ಸ್ತ್ರೀಣಾಂ ಧರ್ಮಃ ಸನಾತನಃ ।
ತಸ್ಮಾತ್ ತ್ವಾಂ ಪರಿಪೃಚ್ಛಾಮಿ ಪೃಷ್ಟಾ ವದ ಮಮೇಪ್ಸಿತಮ್ ॥೧೪॥

ಸ್ತ್ರೀಯರ ಸನಾತನವಾದ ಧರ್ಮವನ್ನು ನೀನೇ ತಿಳಿದಿದ್ದೀಯೆ. ಆದ್ದರಿಂದ ನಿನ್ನನ್ನು ಕೇಳುತ್ತಿದ್ದೇನೆ. ನೀನು ನನಗೆ ಇಷ್ಟವಾದುದನ್ನು ಹೇಳು.

ನಾರದಃ

ಏವಮುಕ್ತಾ ತದಾ ದೇವೀ ಮಹಾದೇವೇನ ಶೋಭನಾ ।
ಸೋದ್ವೇಗಾ ಚ ಸಲಜ್ಜಾ ಚ ನಾವದತ್ ತತ್ರ ಕಿಂಚನ ॥೧೫॥

ಪುನಃ ಪುನಸ್ತದಾ ದೇವೋ ದೇವೀಂ ಕಿಮಿತಿ ಚಾಬ್ರವೀತ್ ।
ಬಹುಶಶ್ಚೋದಿತಾ ದೇವೀ ಸವ್ರೀಡಾ ಚೇದಮಬ್ರವೀತ್ ॥೧೬॥

ನಾರದ– ಮಹಾದೇವನಿಂದ ಹೀಗೆ ಹೇಳಲ್ಪಟ್ಟ ಶುಭಳಾದ ಆ ದೇವಿಯು ಭಯ ಮತ್ತು ನಾಚಿಕೆಯಿಂದ ಕೂಡಿ ಏನನ್ನೂ ಮಾತನಾಡಲಿಲ್ಲ. ಆಗ ದೇವನು ದೇವಿಯನ್ನು ಕುರಿತು ಏಕೆ ಮಾತನಾಡುತ್ತಿಲ್ಲ ಎಂದು ಪುನಃ ಪುನಃ ಕೇಳಿದನು. ಬಹಳ ಒತ್ತಾಯ ಪಡಿಸಿದ ಮೇಲೆ ದೇವಿಯು ನಾಚಿಕೆಯಿಂದ ಹೀಗೆ ಹೇಳಿದಳು.

ಉಮಾ

ಭಗವನ್ ದೇವದೇವೇಶ ಸುರಾಸುರನಮಸ್ಕೃತ ।
ತ್ವದಂತಿಕೇ ಮಯಾ ವಕ್ತುಂ ಸ್ತ್ರೀಣಾಂ ಧರ್ಮಃ ಕಥಂ ಭವೇತ್ ॥೧೭॥

ಉಮಾ– ಭಗವಂತನೇ, ದೇವದೇವೇಶನೇ, ಸುರಾಸುರ ನಮಸ್ಕೃತನೇ, ನಿನ್ನ ಸಮೀಪದಲ್ಲಿ ಸ್ತ್ರೀಧರ್ಮವನ್ನು ಹೇಳಲು ನಾನು ಹೇಗೆ ಶಕ್ತಳಾಗುತ್ತೇನೆ?

ಮಹೇಶ್ವರಃ

ಮನ್ನಿಯೋಗಾದವಶ್ಯಂ ತು ವಕ್ತವ್ಯಂ ಹಿ ಮಮ ಪ್ರಿಯೇ ॥೧೮॥

ಮಹೇಶ್ವರ– ನನ್ನ ಪ್ರಿಯೆಯೇ, ನನ್ನ ಆಜ್ಞೆಯಂತೆ ನೀನು ಅವಶ್ಯವಾಗಿ ಹೇಳಬೇಕು.

ಉಮಾ

ಇಮಾ ನದ್ಯೋ ಮಹಾದೇವ ಸರ್ವತೀರ್ಥೋದಕಾನ್ವಿತಾಃ ।
ಉಪಸ್ಪರ್ಶನಹೇತೋಸ್ತ್ವಾಂ ನ ತ್ಯಜಂತಿ ಸಮೀಪತಃ ॥೧೯॥

ಉಮಾ– ಎಲೈ ಮಹಾದೇವನೇ, ಸರ್ವತೀರ್ಥೋದಕದಿಂದ ಕೂಡಿದ ಈ ನದಿಗಳು ನೀನು ಸ್ನಾನ ಮಾಡುವಿಯೆಂಬ ಕಾರಣದಿಂದ ನಿನ್ನ ಸಾಮೀಪ್ಯವನ್ನು ಬಿಟ್ಟು ದೂರ ಹೋಗುವುದಿಲ್ಲ.

ಏತಾಭಿಃ ಸಹ ಸಮ್ಮಂತ್ರ್ಯ ಪ್ರವಕ್ಷ್ಯಾಮಿ ತವೇಪ್ಸಿತಮ್ ।
ಅಯುಕ್ತಂ ಸತ್ಸು ತಜ್ಜ್ಞೇಷು ತಾನತಿಕ್ರಮ್ಯ ಭಾಷಿತುಮ್ ॥೨೦॥

ಮಯಾ ಸಮ್ಮಾನಿತಾಶ್ಚೈವ ಭವಿಷ್ಯಂತಿ ಸರಿದ್ವರಾಃ ॥೨೧॥

ಇವರ ಜೊತೆಯಲ್ಲಿ ಆಲೋಚನೆಯನ್ನು ಮಾಡಿ ನಿನಗೆ ಇಷ್ಟವಾದುದನ್ನು ಹೇಳುವೆನು. ವಿದ್ವಾಂಸರಾದ ಸಜ್ಜನರ ಮುಂದೆ ಅವರನ್ನು ಮೀರಿ ಮಾತನಾಡುವುದು ಯೋಗ್ಯವಾದುದಲ್ಲ. ನಾನು ನದಿಗಳೊಡನೆ ಮಾತನಾಡಿದರೆ ಅದರಿಂದ ಈ ಶ್ರೇಷ್ಠ ನದಿಗಳು ಪೂಜಿಸಲ್ಪಡುತ್ತವೆ.

ನಾರದಃ

ಇತಿ ಮತ್ವಾ ಮಹಾದೇವೀ ನದೀದೇವೀಃ ಸಮಾಹ್ವಯತ್ ।
ವಿಪಾಶಾಂ ಚ ವಿತಸ್ತಾಂ ಚ ಚಂದ್ರಭಾಗಾಂ ಸರಸ್ವತೀಮ್ ॥೨೨॥

ಶತದ್ರುಂ ದೇವಿಕಾಂ ಸಿಂಧುಂ ಗೋಮತೀಂ ಕೌಶಿಕೀಂ ತಥಾ ।
ಯಮುನಾಂ ನರ್ಮದಾಂ ಚೈವ ಕಾವೇರೀಮಥ ನಿಮ್ನಗಾಮ್ ॥೨೩॥

ತಥಾ ದೇವನದೀಂ ಗಂಗಾಂ ಶ್ರೇಷ್ಠಾಂ ತ್ರಿಪಥಗಾಂ ಶುಭಾಮ್ ।
ಸರ್ವತೀರ್ಥೋದಕವಹಾಂ ಸರ್ವಪಾಪವಿನಾಶಿನೀಮ್ ।
ಏತಾ ನದೀಃ ಸಮಾಹೂಯ ಸಮುದ್ವೀಕ್ಷ್ಯೇದಮಬ್ರವೀತ್ ॥೨೪॥

ಮಹಾದೇವಿಯು ಹೀಗೆ ತಿಳಿದು ನದೀದೇವತೆಗಳನ್ನು ಆಹ್ವಾನಿಸಿದಳು. ವಿಪಾಶಾ, ವಿತಸ್ತಾ, ಚಂದ್ರಭಾಗಾ, ಸರಸ್ವತೀ, ಶತದ್ರು, ದೇವಿಕಾ, ಸಿಂಧು, ಗೋಮತೀ, ಕೌಶಿಕೀ, ಯಮುನಾ, ನರ್ಮದಾ, ಕಾವೇರೀ, ಸರ್ವತೀರ್ಥೋದಕಗಳನ್ನು ಹೊಂದಿದ, ಸರ್ವಪಾಪವಿನಾಶಿನಿಯಾದ, ದೇವನದಿಯಾದ, ತ್ರಿಪಥಗಾಮಿನಿಯಾದ, ಶುಭಳಾದ ಶ್ರೇಷ್ಠಳಾದ ಗಂಗೆ - ಈ ನದಿಗಳನ್ನು ಕರೆದು ಅವರನ್ನು ನೋಡಿ ಮಾತನಾಡಿದಳು.

ಉಮಾ

ಹೇ ಹೇ ಪುಣ್ಯಾಃ ಸರಿಚ್ಛ್ರೇಷ್ಠಾಃ ಸರ್ವಪಾಪವಿನೋದಕಾಃ ।
ಜ್ಞಾನವಿಜ್ಞಾನಸಂಪನ್ನಾಃ ಶೃಣುಧ್ವಂ ವಚನಂ ಮಮ ॥೨೫॥

ನಾರದಃ

ಏವಮುಕ್ತಾ ತದಾ ದೇವೀ ಮಹಾದೇವೇನ ಶೋಭನಾ ।
ಸೋದ್ವೇಗಾ ಚ ಸಲಜ್ಜಾ ಚ ನಾವದತ್ ತತ್ರ ಕಿಂಚನ ॥೧೫॥

ಪುನಃ ಪುನಸ್ತದಾ ದೇವೋ ದೇವೀಂ ಕಿಮಿತಿ ಚಾಬ್ರವೀತ್ ।
ಬಹುಶಶ್ಚೋದಿತಾ ದೇವೀ ಸವ್ರೀಡಾ ಚೇದಮಬ್ರವೀತ್ ॥೧೬॥

ನಾರದ– ಮಹಾದೇವನಿಂದ ಹೀಗೆ ಹೇಳಲ್ಪಟ್ಟ ಶುಭಳಾದ ಆ ದೇವಿಯು ಭಯ ಮತ್ತು ನಾಚಿಕೆಯಿಂದ ಕೂಡಿ ಏನನ್ನೂ ಮಾತನಾಡಲಿಲ್ಲ. ಆಗ ದೇವನು ದೇವಿಯನ್ನು ಕುರಿತು ಏಕೆ ಮಾತನಾಡುತ್ತಿಲ್ಲ ಎಂದು ಪುನಃ ಪುನಃ ಕೇಳಿದನು. ಬಹಳ ಒತ್ತಾಯ ಪಡಿಸಿದ ಮೇಲೆ ದೇವಿಯು ನಾಚಿಕೆಯಿಂದ ಹೀಗೆ ಹೇಳಿದಳು.

ಉಮಾ

ಭಗವನ್ ದೇವದೇವೇಶ ಸುರಾಸುರನಮಸ್ಕೃತ ।
ತ್ವದಂತಿಕೇ ಮಯಾ ವಕ್ತುಂ ಸ್ತ್ರೀಣಾಂ ಧರ್ಮಃ ಕಥಂ ಭವೇತ್ ॥೧೭॥

ಉಮಾ– ಭಗವಂತನೇ, ದೇವದೇವೇಶನೇ, ಸುರಾಸುರ ನಮಸ್ಕೃತನೇ, ನಿನ್ನ ಸಮೀಪದಲ್ಲಿ ಸ್ತ್ರೀಧರ್ಮವನ್ನು ಹೇಳಲು ನಾನು ಹೇಗೆ ಶಕ್ತಳಾಗುತ್ತೇನೆ?

ಮಹೇಶ್ವರಃ

ಮನ್ನಿಯೋಗಾದವಶ್ಯಂ ತು ವಕ್ತವ್ಯಂ ಹಿ ಮಮ ಪ್ರಿಯೇ ॥೧೮॥

ಮಹೇಶ್ವರ– ನನ್ನ ಪ್ರಿಯೆಯೇ, ನನ್ನ ಆಜ್ಞೆಯಂತೆ ನೀನು ಅವಶ್ಯವಾಗಿ ಹೇಳಬೇಕು.

ಉಮಾ

ಇಮಾ ನದ್ಯೋ ಮಹಾದೇವ ಸರ್ವತೀರ್ಥೋದಕಾನ್ವಿತಾಃ ।
ಉಪಸ್ಪರ್ಶನಹೇತೋಸ್ತ್ವಾಂ ನ ತ್ಯಜಂತಿ ಸಮೀಪತಃ ॥೧೯॥

ಉಮಾ– ಎಲೈ ಮಹಾದೇವನೇ, ಸರ್ವತೀರ್ಥೋದಕದಿಂದ ಕೂಡಿದ ಈ ನದಿಗಳು ನೀನು ಸ್ನಾನ ಮಾಡುವಿಯೆಂಬ ಕಾರಣದಿಂದ ನಿನ್ನ ಸಾಮೀಪ್ಯವನ್ನು ಬಿಟ್ಟು ದೂರ ಹೋಗುವುದಿಲ್ಲ.

ಏತಾಭಿಃ ಸಹ ಸಮ್ಮಂತ್ರ್ಯ ಪ್ರವಕ್ಷ್ಯಾಮಿ ತವೇಪ್ಸಿತಮ್ ।
ಅಯುಕ್ತಂ ಸತ್ಸು ತಜ್ಜ್ಞೇಷು ತಾನತಿಕ್ರಮ್ಯ ಭಾಷಿತುಮ್ ॥೨೦॥

ಮಯಾ ಸಮ್ಮಾನಿತಾಶ್ಚೈವ ಭವಿಷ್ಯಂತಿ ಸರಿದ್ವರಾಃ ॥೨೧॥

ಇವರ ಜೊತೆಯಲ್ಲಿ ಆಲೋಚನೆಯನ್ನು ಮಾಡಿ ನಿನಗೆ ಇಷ್ಟವಾದುದನ್ನು ಹೇಳುವೆನು. ವಿದ್ವಾಂಸರಾದ ಸಜ್ಜನರ ಮುಂದೆ ಅವರನ್ನು ಮೀರಿ ಮಾತನಾಡುವುದು ಯೋಗ್ಯವಾದುದಲ್ಲ. ನಾನು ನದಿಗಳೊಡನೆ ಮಾತನಾಡಿದರೆ ಅದರಿಂದ ಈ ಶ್ರೇಷ್ಠ ನದಿಗಳು ಪೂಜಿಸಲ್ಪಡುತ್ತವೆ.

ನಾರದಃ

ಇತಿ ಮತ್ವಾ ಮಹಾದೇವೀ ನದೀದೇವೀಃ ಸಮಾಹ್ವಯತ್ ।
ವಿಪಾಶಾಂ ಚ ವಿತಸ್ತಾಂ ಚ ಚಂದ್ರಭಾಗಾಂ ಸರಸ್ವತೀಮ್ ॥೨೨॥

ಶತದ್ರುಂ ದೇವಿಕಾಂ ಸಿಂಧುಂ ಗೋಮತೀಂ ಕೌಶಿಕೀಂ ತಥಾ ।
ಯಮುನಾಂ ನರ್ಮದಾಂ ಚೈವ ಕಾವೇರೀಮಥ ನಿಮ್ನಗಾಮ್ ॥೨೩॥

ತಥಾ ದೇವನದೀಂ ಗಂಗಾಂ ಶ್ರೇಷ್ಠಾಂ ತ್ರಿಪಥಗಾಂ ಶುಭಾಮ್ ।
ಸರ್ವತೀರ್ಥೋದಕವಹಾಂ ಸರ್ವಪಾಪವಿನಾಶಿನೀಮ್ ।
ಏತಾ ನದೀಃ ಸಮಾಹೂಯ ಸಮುದ್ವೀಕ್ಷ್ಯೇದಮಬ್ರವೀತ್ ॥೨೪॥

ಮಹಾದೇವಿಯು ಹೀಗೆ ತಿಳಿದು ನದೀದೇವತೆಗಳನ್ನು ಆಹ್ವಾನಿಸಿದಳು. ವಿಪಾಶಾ, ವಿತಸ್ತಾ, ಚಂದ್ರಭಾಗಾ, ಸರಸ್ವತೀ, ಶತದ್ರು, ದೇವಿಕಾ, ಸಿಂಧು, ಗೋಮತೀ, ಕೌಶಿಕೀ, ಯಮುನಾ, ನರ್ಮದಾ, ಕಾವೇರೀ, ಸರ್ವತೀರ್ಥೋದಕಗಳನ್ನು ಹೊಂದಿದ, ಸರ್ವಪಾಪವಿನಾಶಿನಿಯಾದ, ದೇವನದಿಯಾದ, ತ್ರಿಪಥಗಾಮಿನಿಯಾದ, ಶುಭ್ರಳಾದ ಶ್ರೇಷ್ಠಳಾದ ಗಂಗೆ - ಈ ನದಿಗಳನ್ನು ಕರೆದು ಅವರನ್ನು ನೋಡಿ ಮಾತನಾಡಿದಳು.

ಉಮಾ

ಹೇ ಹೇ ಪುಣ್ಯಾಃ ಸರಿಚ್ಛ್ರೇಷ್ಠಾಃ ಸರ್ವಪಾಪವಿನೋದಕಾಃ ।
ಜ್ಞಾನವಿಜ್ಞಾನಸಂಪನ್ನಾಃ ಶೃಣುಧ್ವಂ ವಚನಂ ಮಮ ॥೨೫॥

ಎಲೌ ಪವಿತ್ರವಾದ ಶ್ರೇಷ್ಠ ನದಿಗಳೇ, ಸರ್ವಪಾಪ ಪರಿಹಾರಕಗಳೇ, ಜ್ಞಾನ ವಿಜ್ಞಾನ ಸಂಪನ್ನರೇ, ನನ್ನ ಮಾತುಗಳನ್ನು ಕೇಳಿ.

ಅಯಂ ಭಗವತಾ ಪ್ರಶ್ನ ಉಕ್ತಃ ಸ್ತ್ರೀಧರ್ಮಮಾಶ್ರಿತಃ ।
ನ ಚೈಕಯಾ ಮಯಾ ಸಾಧ್ಯಸ್ತಸ್ಮಾದ್ವಸ್ತ್ವಾ ನಯಾಮ್ಯಹಮ್ ॥೨೬॥

ಪೂಜ್ಯನು ಸ್ತ್ರೀ ಧರ್ಮದ ಪ್ರಶ್ನೆಯನ್ನು ಮಾಡಿದ್ದಾನೆ. ನಾನೊಬ್ಬಳೇ ಉತ್ತರವನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದ ನಿಮ್ಮೆಲ್ಲರನ್ನೂ ಆಹ್ವಾನಿಸುತ್ತಿದ್ದೇನೆ.

ಯುಷ್ಮಾಭಿಸ್ತದ್ವಿಚಾರ್ಯೈವ ವಕ್ತುಮಿಚ್ಛಾಮಿ ಶೋಭನಾಃ ।
ತತ್ಕಥಂ ದೇವದೇವಾಯ ವಾಚ್ಯಃ ಸ್ತ್ರೀಧರ್ಮ ಉತ್ತಮಃ ॥೨೭॥

ಎಲೌ ಶೋಭನರೇ, ದೇವದೇವನ ಮುಂದೆ ಶ್ರೇಷ್ಠವಾದ ಸ್ತ್ರೀಧರ್ಮವನ್ನು ಹೇಗೆ ಹೇಳುವುದು ಎಂದು ನಿಮ್ಮ ಜೊತೆ ವಿಚಾರವನ್ನು ಮಾಡಿಯೇ ಅನಂತರ ಮಾತನಾಡಲು ಬಯಸುತ್ತೇನೆ.

ನಾರದಃ

ಇತಿ ಪೃಷ್ಟಾಸ್ತಥಾ ದೇವ್ಯಾ ದೇವನದ್ಯಶ್ಚಕಂಪಿರೇ ।
ತಾಸಾಂ ಶ್ರೇಷ್ಠತಮಾ ಗಂಗಾ ವಚನಂ ಚೇದಮಬ್ರವೀತ್ ॥೨೮॥

ನಾರದ– ಹೀಗೆ ದೇವಿಯಿಂದ ಹೇಳಲ್ಪಟ್ಟ ದೇವನದಿಗಳು ನಡುಗಿದವು. ಅವರಲ್ಲಿ ಅತ್ಯಂತ ಶ್ರೇಷ್ಠಳಾದ ಗಂಗೆಯು ಈ ಮಾತನ್ನು ಆಡಿದಳು.

ಧನ್ಯಾಶ್ಚಾನುಗೃಹೀತಾಃ ಸ್ಮ ಅನೇನ ವಚನೇನ ತೇ ।
ಯಾ ತ್ವಂ ಸುರಾಸುರೈರ್ಮಾನ್ಯಾ ನದೀರ್ಮಾನಯಸೇಽನಘೇ ॥೨೯॥

ನಿನ್ನ ಈ ಮಾತಿನಿಂದ ನಾವು ಧನ್ಯರೂ, ಅನುಗೃಹೀತರೂ ಆಗಿದ್ದೇವೆ. ಎಲೌ ಅನಘಳೇ, ಸುರಾಸುರರಿಂದ ಮಾನ್ಯಳಾದ ನೀನು ನಮ್ಮನ್ನು ಗೌರವಿಸುತ್ತಿದ್ದೀಯೆ.

ತವೈವಾರ್ಹಂತಿ ಕಲ್ಯಾಣಿ ಏವಂ ಸಾಂತ್ವಪ್ರಸಾದನಮ್ ।
ಅಶಕ್ಯಮಪಿ ಯೇ ಮೂರ್ಖಾಃ ಸ್ವಾತ್ಮಸಂಭಾವನಾಯುತಾಃ ।
ವಾಕ್ಯಂ ವದಂತಿ ಸಂಸತ್ಸು ಸ್ವಯಮೇವ ಯಥೇಷ್ಟತಃ ॥೩೦॥

ಯಃ ಶಕ್ತಶ್ಚಾನಹಂವಾದೀ ಸುದುರ್ಲಭತಮೋ ಮತಃ ॥೩೧॥

ಎಲೌ ಕಲ್ಯಾಣಿಯೇ, ಇಂತಹ ಸಮಾಧಾನ ಮತ್ತು ಸತ್ಕಾರದ ಮಾತುಗಳು ನಿನಗೇ ಯೋಗ್ಯವಾದವುಗಳು. ಆತ್ಮಸಂಭಾವಿತರಾದ ಮೂರ್ಖರು ಸಭೆಗಳಲ್ಲಿ ತಮಗೆ ಸಾಧ್ಯವಿಲ್ಲದುದನ್ನೂ ತಮ್ಮ ಮನಸ್ಸಿಗೆ ಬಂದಂತೆ ತಾವಾಗಿಯೇ ಮಾತನಾಡುತ್ತಾರೆ. ಯಾವನು ಮಾತನಾಡಲು ಸಮರ್ಥನಾಗಿ ನಿರಹಂಕಾರಿಯಾಗಿರುತ್ತಾನೆಯೋ ಅಂತಹವನು ಲೋಕದಲ್ಲಿ ಅತ್ಯಂತ ದುರ್ಲಭನಾದವನು.

ತ್ವಂ ಹಿ ಶಕ್ತಾ ಸತೀ ದೇವಿ ವಕ್ತುಂ ಪ್ರಶ್ನಮಶೇಷತಃ ।
ವ್ಯಾಹರ್ತುಂ ನೇಚ್ಛಸಿ ಸ್ತ್ರೀತ್ವಾತ್ ಸಂಪೂಜಯಸಿ ನಸ್ತಥಾ ॥೩೨॥

ಎಲೌ ದೇವಿಯೇ, ಪ್ರಶ್ನೆಯನ್ನು ಸಮಗ್ರವಾಗಿ ಉತ್ತರಿಸಲು ನೀನು ಸಮರ್ಥಳಾಗಿದ್ದೀಯೆ. ಸ್ತ್ರೀಯಾದ ಕಾರಣದಿಂದ ನೀನು ಸ್ವತಃ ಮಾತನಾಡಲು ಬಯಸದೆ ನಮ್ಮನ್ನು ಪೂಜಿಸುತ್ತಿದ್ದೀಯೆ.

ತ್ವಂ ಹಿ ದೇವಸಮಾ ದೇವಿ ಊಹಾಪೋಹವಿಶಾರದಾ ।
ದಿವ್ಯಜ್ಞಾನಯುತಾ ದೇವಿ ದಿವ್ಯಜ್ಞಾನೇಂಧನೈಧಿತಾ ॥೩೩॥

ದೇವಿಯೇ, ನೀನು ಮಹಾದೇವನಿಗೆ ಸಮಳಾದವಳು. ಊಹಾಪೋಹಗಳಲ್ಲಿ ಕುಶಲಳಾದವಳು. ದೇವಿಯೇ, ನೀನು ದಿವ್ಯಜ್ಞಾನವನ್ನು ಹೊಂದಿ ಆ ದಿವ್ಯಜ್ಞಾನದ ಇಂಧನದಿಂದ ಜ್ವಲಿಸುತ್ತಿರುವವಳು.

ತ್ವಮೇವಾರ್ಹಸಿ ತದ್ವಕ್ತುಂ ಸ್ತ್ರೀಣಾಂ ಧರ್ಮಂ ಶುಭಾಶುಭಮ್ ।
ಯಾಚಾಮಹೇ ವಯಂ ಶ್ರೋತುಮಮೃತಂ ತ್ವನ್ಮುಖೋದ್ಗತಮ್ ।
ಕುರು ದೇವಿ ಪ್ರಿಯಂ ದೇವಿ ವದ ಸ್ತ್ರೀಧರ್ಮಮುತ್ತಮಮ್ ॥೩೪॥

ಸ್ತ್ರೀಯರ ಶುಭಾಶುಭ ಧರ್ಮಗಳನ್ನು ಹೇಳಲು ನೀನೇ ಶಕ್ತಳಾಗಿದ್ದೀಯೆ. ನಾವು ನಿನ್ನ ಮುಖದಿಂದ ಬಂದ ಅಮೃತವನ್ನು ಕೇಳಲು ನಿನ್ನನ್ನು ಬೇಡುತ್ತಿದ್ದೇವೆ. ದೇವಿಯೇ, ನಮಗೆ ಪ್ರಿಯವನ್ನು ಮಾಡು. ದೇವಿಯೇ, ಶ್ರೇಷ್ಠವಾದ ಸ್ತ್ರೀಧರ್ಮವನ್ನು ಹೇಳು.

ನಾರದಃ

ಏವಂ ಪ್ರಸಾದಿತಾ ದೇವೀ ಗಂಗಯಾ ಲೋಕಪೂಜಿತಾ ।
ಪ್ರಾಹ ಸರ್ವಮಶೇಷೇಣ ಸ್ತ್ರೀಧರ್ಮಂ ಸುರಸುಂದರೀ ॥೩೫॥

ನಾರದ– ಹೀಗೆ ಗಂಗೆಯಿಂದ ಪ್ರಸನ್ನೀಕರಿಸಲ್ಪಟ್ಟ ಲೋಕಪೂಜಿತಳಾದ, ಸುರಸುಂದರಿಯಾದ ಪಾರ್ವತೀದೇವಿಯು ಸಮಗ್ರವಾದ ಸ್ತ್ರೀ ಧರ್ಮವನ್ನು ಹೇಳಿದಳು.

ಉಮಾ

ಭಗವನ್ ದೇವದೇವೇಶ ಸುರೇಶ್ವರ ಮಹೇಶ್ವರ ।
ತ್ವತ್ಪ್ರಸಾದಾತ್ ಸುರಶ್ರೇಷ್ಠ ತವೈವ ಪ್ರಿಯಕಾಮ್ಯಯಾ ।
ತಮಹಂ ಕೀರ್ತಯಿಷ್ಯಾಮಿ ಯಥಾವಚ್ಛ್ರೋತುಮರ್ಹಸಿ ॥೩೬॥

ಉಮಾ– ಭಗವಂತನೇ, ದೇವದೇವೇಶನೇ, ಸುರೇಶ್ವರನೇ, ಮಹೇಶ್ವರನೇ, ಸುರಶ್ರೇಷ್ಠನೇ, ನಿನ್ನ ಅನುಗ್ರಹದಿಂದ ನಿನ್ನ ಪ್ರೀತಿಯನ್ನೇ ಬಯಸಿ ಆ ಧರ್ಮವನ್ನು ನಾನು ಹೇಳುವೆನು. ಸರಿಯಾಗಿ ಕೇಳಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಪರ್ವಣಿ ಉಮಾಯಾಃ ಸ್ತ್ರೀಧರ್ಮಕಥನಾದೇಶೋ ನಾಮ ತ್ರಯಸ್ತ್ರಿಂಶೋತ್ತರದ್ವಿಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಮೂವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಮೂವತ್ನಾಲ್ಕನೆಯ ಅಧ್ಯಾಯ

ಪಾರ್ವತಿಯಿಂದ ಪಾತಿವ್ರತ್ಯಧರ್ಮಕಥನ.

ನಾರದಃ

ಏವಂ ಬ್ರುವಂತ್ಯಾಂ ಸ್ತ್ರೀಧರ್ಮಂ ದೇವ್ಯಾಂ ದೇವಸ್ಯ ಶಾಸನಾತ್ ।
ಋಷಿಗಂಧರ್ವಯಕ್ಷಾಣಾಂ ಯೋಷಿತಶ್ಚಾಪ್ಸರೋಗಣಾಃ ॥೧॥

ನಾಗಭೂತಸ್ತ್ರಿಯಶ್ಚೈವ ನದ್ಯಶ್ಚೈವ ಸಮಾಗತಾಃ ।
ಶ್ರೋತುಕಾಮಾಃ ಪರಂ ವಾಕ್ಯಂ ಸರ್ವಾಃ ಪರ್ಯವತಸ್ಥಿರೇ ॥೨॥

ನಾರದ– ಮಹಾದೇವನ ಶಾಸನದಂತೆ ಪಾರ್ವತಿಯು ಸ್ತ್ರೀಧರ್ಮವನ್ನು ಹೇಳಲು ಉದ್ಯುಕ್ತಳಾಗುತ್ತಿರಲು ಋಷಿ-ಗಂಧರ್ವ-ಯಕ್ಷರ ಪತ್ನಿಯರು, ಅಪ್ಸರೆಯರ ಸಮೂಹಗಳು, ನಾಗಪತ್ನಿಯರು, ಭೂತಪತ್ನಿಯರು, ನದಿಗಳು ಶ್ರೇಷ್ಠವಾದ ಉಪದೇಶವನ್ನು ಕೇಳಲು ಬಯಸಿ ಎಲ್ಲರೂ ಬಂದು ಸೇರಿದರು.

ಉಮಾ ದೇವೀ ಮುದಾ ಯುಕ್ತಾ ಪೂಜ್ಯಮಾನಾಂಗನಾಗಣೈಃ ।
ಆನೃಶಂಸ್ಯಪರಾ ದೇವೀ ಸತತಂ ಸ್ತ್ರೀಗಣಂ ಪ್ರತಿ ॥೩॥

ಸ್ತ್ರೀಗಣಸ್ಯ ಹಿತಾರ್ಥಾಯ ಭವಪ್ರಿಯಚಿಕೀರ್ಷಯಾ ।
ವಕ್ತುಂ ವಚನಮಾರೇಭೇ ಸ್ತ್ರೀಣಾಂ ಧರ್ಮಾಶ್ರಿತಂ ಹಿತಮ್ ॥೪॥

ಸ್ತ್ರೀ ಸಮೂಹದ ಮೇಲೆ ಯಾವಾಗಲೂ ದಯೆಯನ್ನು ಹೊಂದಿದ ಉಮಾದೇವಿಯು ಸ್ತ್ರೀ ಸಮೂಹಗಳಿಂದ ಪೂಜಿಸಲ್ಪಟ್ಟು ಸಂತೋಷದಿಂದ ಯುಕ್ತಳಾಗಿ ಈಶ್ವರನಿಗೆ ಪ್ರಿಯವನ್ನು ಮಾಡಲು ಬಯಸಿ ಸ್ತ್ರೀಯರ ಹಿತಕ್ಕೋಸ್ಕರವಾಗಿ ಸ್ತ್ರೀಧರ್ಮ ಸಂಬಂಧಿಯಾದ ಹಿತವಚನವನ್ನು ಹೇಳಲು ಪ್ರಾರಂಭಿಸಿದಳು.

ಉಮಾ

ಭಗವನ್ ಸರ್ವಧರ್ಮಜ್ಞ ಶ್ರೂಯತಾಂ ವಚನಂ ಮಮ ।
ಋತುಪ್ರಾಪ್ತಾ ಸುಶುದ್ಧಾ ಯಾ ಕನ್ಯಾ ಸೇತ್ಯಭಿಧೀಯತೇ ॥೫॥

ಉಮಾ– ಪೂಜ್ಯನೇ, ಸರ್ವಧರ್ಮಜ್ಞನೇ, ನನ್ನ ಮಾತನ್ನು ಕೇಳು. ಋತುಪ್ರಾಪ್ತಳಾದ, ಶುದ್ಧಳಾದ ಬಾಲಕಿಯು ಕನ್ಯೆ ಎಂದು ಕರೆಯಲ್ಪಡುತ್ತಾಳೆ.

ತಾಂ ತು ಕನ್ಯಾಂ ಪಿತಾ ಮಾತಾ ಭ್ರಾತಾ ಮಾತುಲ ಏವ ವಾ ।
ಪಿತೃವ್ಯಶ್ಚೈವ ಪಂಚೈತೇ ದಾತುಂ ಪ್ರಭವತಾಂ ಗತಾಃ ॥೬॥

ಆ ಕನ್ಯೆಯನ್ನು ದಾನ ಮಾಡಲು ತಂದೆ, ತಾಯಿ, ಸಹೋದರ ಅಥವಾ ಸೋದರಮಾವ ಅಥವಾ ಪಿತೃ ಸಹೋದರರು - ಈ ಐದು ಜನರು ಅಧಿಕಾರವನ್ನು ಹೊಂದಿರುತ್ತಾರೆ.

ವಿವಾಹಾಶ್ಚ ತಥಾ ಪಂಚ ತಾಸಾಂ ಧರ್ಮಾರ್ಥಕಾರಣಾತ್ ।
ಕಾಮತಶ್ಚ ಮಿಥೋ ದಾನಂ ಭಯಾಚ್ಚ ಪ್ರಸಭಾತ್ ತಥಾ ॥೭॥

ಸ್ತ್ರೀಯರ ಧರ್ಮಾರ್ಥಕ್ಕೋಸ್ಕರ ಅವರಿಗೆ ಐದು ವಿಧವಾದ ವಿವಾಹಗಳು ಹೇಳಲ್ಪಟ್ಟಿವೆ. ಪರಸ್ಪರ ಸಮ್ಮತಿಯಿಂದ, ಕಾಮದಿಂದ ಗಂಧರ್ವವಿವಾಹವೂ, ಭಯದಿಂದ ಮತ್ತು ಬಲಾತ್ಕಾರದಿಂದ ನಡೆಯುವ ರಾಕ್ಷಸ ವಿವಾಹವೂ ಇದೆ.

ದತ್ತಾ ಯಸ್ಯ ಭವೇದ್ ಭಾರ್ಯಾ ಏತೇಷಾಂ ಯೇನ ಕೇನಚಿತ್ ।
ದಾತಾರಃ ಸಂವಿಮೃಶ್ಯೈವ ದಾತುಮರ್ಹಂತಿ ನಾನ್ಯಥಾ ॥೮॥

ಈ (ಮೊದಲಿನ) ಐದು ವಿಧಗಳಲ್ಲಿ ಯಾವುದಾದರೂ ಒಂದು ವಿಧಿಯಿಂದ ಕನ್ಯೆಯನ್ನು ಯಾವಾತನಿಗೆ ದಾನ ಮಾಡುತ್ತಾರೋ ಅವಳು ಅವನ ಭಾರ್ಯೆಯಾಗುತ್ತಾಳೆ. ಕನ್ಯಾದಾನವನ್ನು ಮಾಡುವವರು ಚೆನ್ನಾಗಿ ವಿಮರ್ಶೆ ಮಾಡಿ ದಾನ ಮಾಡಬೇಕು. ಬೇರೆ ರೀತಿಯಲ್ಲಿ ಮಾಡಬಾರದು.

ಉತ್ತಮಾನಾಂ ತು ವರ್ಣಾನಾಂ ಮಂತ್ರವತ್ ಪಾಣಿಸಂಗ್ರಹಃ ।
ವಿವಾಹಕರಣಂ ಚಾಹುಃ ಶೂದ್ರಾಣಾಂ ಸಂಪ್ರಯೋಗತಃ ॥೯॥

ಉತ್ತಮ ವರ್ಣದವರಿಗೆ ಮಂತ್ರಪೂರ್ವಕವಾಗಿ ಪಾಣಿಗ್ರಹಣವಾಗುತ್ತದೆ. ಶೂದ್ರರಿಗೆ ಸಮಾಗಮವೇ ವಿವಾಹ ವಿಧಿ.

ಯದಾ ದತ್ತಾ ಭವೇತ್ ಕನ್ಯಾ ತಸ್ಮೈ ಭಾರ್ಯಾರ್ಥಿನೇ ಸ್ವಕೈಃ ।
ತದಾಪ್ರಭೃತಿ ಸಾ ನಾರೀ ದಶರಾತ್ರಂ ವಿವರ್ಜ್ಯ ಚ ।
ಮನಸಾ ಕರ್ಮಣಾ ವಾಚಾ ಹ್ಯನುಕೂಲಾ ಚ ಸಾ ಭವೇತ್ ॥೧೦॥

ಯಾವ ಭಾರ್ಯಾರ್ಥಿಯಾದವನಿಗೆ ಕನ್ಯೆಯ ಬಂಧುಗಳು ಯಾವಾಗ ಕನ್ಯೆಯನ್ನು ಕೊಡುತ್ತಾರೆಯೋ ಆಗಿನಿಂದ ಅವಳು ಹತ್ತು ರಾತ್ರಿಗಳು ಕಳೆದ ಮೇಲೆ ಮನಸ್ಸಿನಿಂದಲೂ, ಕರ್ಮದಿಂದಲೂ ಮತ್ತು ಮಾತಿನಿಂದಲೂ ಪತಿಗೆ ಅನುಕೂಲಳಾಗಿರಬೇಕು.

ಇತಿ ಭರ್ತೃವ್ರತಂ ಕುರ್ಯಾತ್ ಪತಿಮುದ್ದಿಶ್ಯ ಶೋಭನಾ ।
ತದಾಪ್ರಭೃತಿ ಸಾ ನಾರೀ ತತ್ತತ್ ಕುರ್ಯಾತ್ ಪತಿಪ್ರಿಯಮ್ ॥೧೧॥

ಒಳ್ಳೆಯ ಸ್ವಭಾವದ ನಾರಿಯು ಪತಿಯ ಪ್ರೀತಿಯನ್ನುದ್ದೇಶಿಸಿ ಹೀಗೆ ಭರ್ತೃವ್ರತವನ್ನು ಮಾಡಬೇಕು. ಆಗಿನಿಂದ ಆರಂಭಿಸಿ ಆ ನಾರಿಯು ಪತಿಗೆ ಪ್ರಿಯವಾದ ಆಯಾ ಕಾರ್ಯವನ್ನು ಮಾಡಬೇಕು.

ಯದ್ಯದಿಚ್ಛತಿ ವೈ ಭರ್ತಾ ಧರ್ಮಕಾಮಾರ್ಥಕಾರಣಾತ್ ।
ತಥೈವಾನುಪ್ರಿಯಾ ಭೂತ್ವಾ ತಥೈವೋಪಚರೇತ್ ಪತಿಮ್ ।
ಪತಿವ್ರತಾತ್ವಂ ನಾರೀಣಾಮೇತದೇವ ಸಮಾಸತಃ ॥೧೨॥

ಪತಿಯು ಧರ್ಮದ ಸಲುವಾಗಿ, ಕಾಮದ ಸಲುವಾಗಿ ಅಥವಾ ಅರ್ಥದ ಸಲುವಾಗಿ ಏನೇನನ್ನು ಬಯಸುತ್ತಾನೆಯೋ ಹಾಗೆ ತಾನೂ ಬಯಸಿ, ಅವನಿಗೆ ಪ್ರಿಯಳಾಗಿ ಪತಿಯನ್ನು ಉಪಚರಿಸಬೇಕು. ಇದೇ ಸಂಕ್ಷೇಪವಾಗಿ ಪಾತಿವ್ರತ್ಯಧರ್ಮ.

ತಾದೃಶಾ ಸಾ ಭವೇನ್ನಿತ್ಯಂ ಯಾದೃಶಸ್ತು ಭವೇತ್‌ಪತಿಃ ।
ಶುಭಾಶುಭಸಮಾಚಾರೇ ಏತದ್ ವೃತ್ತಂ ಸಮಾಸತಃ ॥೧೩॥

ಶುಭಾಶುಭ ಆಚಾರಗಳಲ್ಲಿ ಪತಿಯು ಹೇಗಿರುತ್ತಾನೆಯೋ ಪತ್ನಿಯೂ ಹಾಗೆಯೇ ಇರಬೇಕು. ಇದು ಸಂಕ್ಷೇಪವಾಗಿ ಪತಿವ್ರತೆಯರ ನಡತೆ.

ದೈವತಂ ಸತತಂ ಸಾಧ್ವೀ ಭರ್ತಾರಂ ಯಾऽನುಪಶ್ಯತಿ ।
ದೈವಮೇವ ಭವೇತ್ ತಸ್ಯಾಃ ಪತಿರಿತ್ಯವಗಮ್ಯತೇ ॥೧೪॥

ಯಾವ ಸಾಧ್ವಿಯು ಪತಿಯನ್ನು ದೇವತಾ ದೃಷ್ಟಿಯಿಂದ ನೋಡುತ್ತಾಳೆಯೋ ಅವಳ ಪಾಲಿಗೆ ಪತಿಯು ದೈವವೇ ಆಗುತ್ತಾನೆ ಎಂದು ತಿಳಿಯುತ್ತದೆ.

ಏತಸ್ಮಿನ್ ಕಾರಣಂ ದೇವ ಪೌರಾಣೇ ಶ್ರೂಯತೇ ಶ್ರುತಿಃ ।
ಕಥಯಾಮಿ ಪ್ರಸಾದಾತ್ ತೇ ಶೃಣು ದೇವ ಸಮಾಹಿತಃ ॥೧೫॥

ದೇವನೇ, ಇದಕ್ಕೆ ಕಾರಣವಾದ ಒಂದು ಪೌರಾಣಿಕ ಕಥೆ ಇದೆ. ನಿನ್ನ ಅನುಗ್ರಹದಿಂದ ಹೇಳುತ್ತೇನೆ. ಸಮಾಧಾನದಿಂದ ಅದನ್ನು ಕೇಳು.

ಕಸ್ಯಚಿತ್ತ್ವಥ ವಿಪ್ರಸ್ಯ ಭಾರ್ಯೇ ಹಿ ದ್ವೇ ಬಭೂವತುಃ ।
ತಯೋರೇಕಾ ಧರ್ಮಕಾಮಾ ದೇವಾನುದ್ದಿಶ್ಯ ಭಕ್ತಿತಃ ॥೧೬॥

ಭರ್ತಾರಮವಮತ್ಯೈವ ದೇವತಾಸು ಸಮಾಹಿತಾ ।
ಚಕಾರ ವಿಪುಲಂ ಧರ್ಮಂ ಪೂಜನಾऽರ್ಚನಯಾऽನ್ವಿತಮ್ ॥೧೭॥

ಯಾವುದೋ ಒಬ್ಬ ಬ್ರಾಹ್ಮಣನಿಗೆ ಇಬ್ಬರು ಪತ್ನಿಯರಿದ್ದರು. ಅವರಲ್ಲಿ ಒಬ್ಬಳು ಧರ್ಮಕಾಮಳಾಗಿ ದೇವತೆಗಳನ್ನುದ್ದೇಶಿಸಿ ಪತಿಯನ್ನು ತಿರಸ್ಕರಿಸಿ, ಯಾವಾಗಲೂ ಭಕ್ತಿಯಿಂದ ದೇವತಾಪೂಜೆಯಲ್ಲಿ ನಿರತಳಾಗಿರುತ್ತಿದ್ದಳು. ಪೂಜನೆ, ಅರ್ಚನೆ ಮೊದಲಾದ ವಿಪುಲ ಧರ್ಮವನ್ನು ಮಾಡಿದಳು.

ಅಪರಾ ಧರ್ಮಕಾಮಾ ಚ ಪತಿಮುದ್ದಿಶ್ಯ ಶೋಭನಾ ।
ಭರ್ತಾರಂ ದೈವತಂ ಕೃತ್ವಾ ಚಕಾರ ಕಿಲ ತತ್ಪ್ರಿಯಮ್ ॥೧೮॥

ಧರ್ಮವನ್ನು ಬಯಸಿದ ಇನ್ನೊಬ್ಬ ಶುಭಳಾದ ಪತ್ನಿಯು ಪತಿಯನ್ನೇ ದೈವತವೆಂದು ತಿಳಿದು ಪತಿಯ ಪ್ರೀತಿಗಾಗಿ ಅವನಿಗೆ ಪ್ರಿಯವಾದುದನ್ನು ಮಾಡಿದಳು.

ಏವಂ ಸಂವರ್ತಮಾನೇ ತು ಯುಗಪನ್ಮರಣೇऽಧ್ವನಿ ।
ಗತೇ ಕಿಲ ಮಹಾದೇವ ತತ್ಕೈಕಾ ಯಾ ಪತಿವ್ರತಾ ।
ದೇವಪ್ರಿಯಾಯಾಂ ತಿಷ್ಠಂತ್ಯಾಂ ಪುಣ್ಯಲೋಕಂ ಜಗಾಮ ಸಾ ॥೧೯॥

ಹೀಗೆ ಕಾಲವು ಕಳೆಯುತ್ತಿರಲು ಅವರಿಬ್ಬರೂ ಮರಣದ ಮಾರ್ಗದಲ್ಲಿ ಒಟ್ಟಿಗೆ ಹೊರಟರು. ಅವರಲ್ಲಿ ಪತಿವ್ರತೆಯಾದವಳು ದೇವಪ್ರಿಯಳಾದ ಮೊದಲನೆಯವಳು ನಿಂತಿರುವಾಗಲೇ ಪುಣ್ಯಲೋಕಗಳಿಗೆ ಹೊರಟು ಹೋದಳು.

ದೇವಪ್ರಿಯಾ ಚ ತಿಷ್ಠಂತೀ ವಿಲಲಾಪ ಸುದುಃಖಿತಾ ।
ತಾಂ ಯಮೋ ಲೋಕಪಾಲಸ್ತು ಬಭಾಷೇ ಪುಷ್ಕಳಂ ವಚಃ ॥೨೦॥

ದೇವಪ್ರಿಯೆಯು ಅಲ್ಲಿಯೇ ನಿಂತು ದುಃಖದಿಂದ ವಿಲಾಪವನ್ನು ಮಾಡಿದಳು. ಲೋಕಪಾಲಕನಾದ ಯಮನು ಅವಳನ್ನು ಕುರಿತು ಪುಷ್ಕಳವಾದ ಮಾತನ್ನಾಡಿದನು.

ಮಾ ಶೋಚೀಸ್ತ್ವಂ ನಿವರ್ತಸ್ವ ನ ಲೋಕಾಃ ಸಂತಿ ತೇ ಶುಭೇ ।
ಸ್ವಧರ್ಮವಿಮುಖಾऽಸಿ ತ್ವಂ ತಸ್ಮಾಲ್ಲೋಕಾ ನ ಸಂತಿ ತೇ ॥೨೧॥

ಎಲೌ ಶುಭಳೇ, ಶೋಕಪಡಬೇಡ. ಹಿಂದಿರುಗಿ ಹೋಗು. ನಿನಗೆ ಲೋಕಗಳಿಲ್ಲ. ನೀನು ನಿನ್ನ ಧರ್ಮದಿಂದ ವಿಮುಖಳಾಗಿದ್ದೀಯೆ. ಆದ್ದರಿಂದ ನಿನಗೆ ಲೋಕಗಳಿಲ್ಲ.

ದೈವತಂ ಹಿ ಪತಿರ್ನಾರ್ಯಾಃ ಸ್ಥಾಪಿತಂ ಸರ್ವದೈವತೈಃ ।
ಅವಮತ್ಯ ಶುಭೇ ತಂ ತ್ವಂ ಕಥಂ ಲೋಕಾನ್ ಗಮಿಷ್ಯಸಿ ॥೨೨॥

ಸರ್ವದೇವತೆಗಳು ಪತಿಯನ್ನು ನಾರಿಯರಿಗೆ ದೈವತವೆಂದು ಕಲ್ಪಿಸಿದ್ದಾರೆ. ಎಲೌ ಶುಭಳೇ, ಅಂತಹ ಪತಿಯನ್ನು ಅವಮಾನಗೊಳಿಸಿ ನೀನು ಹೇಗೆ ಶುಭಲೋಕಗಳಿಗೆ ಹೋಗುವಿ?

ಮೋಹೇನ ತ್ವಂ ವರಾರೋಹೇ ನ ಜಾನೀಷೇ ಸ್ವದೈವತಮ್ ।
ಪತಿಮತ್ಯಾ ಸ್ತ್ರಿಯಾ ಕಾರ್ಯೋ ಧರ್ಮಃ ಪತ್ಯರ್ಪಿತಸ್ತ್ವಿತಿ ॥೨೩॥

ಎಲೌ ಸುಂದರಿಯೇ, ಮೋಹದಿಂದ ನೀನು ನಿನ್ನ ದೈವತವನ್ನು ತಿಳಿದಿಲ್ಲ. ಪತಿಯನ್ನು ಹೊಂದಿದ ಸ್ತ್ರೀಯು ಮಾಡಿದ ಎಲ್ಲ ಧರ್ಮಗಳನ್ನೂ ಪತಿಯ ಮೂಲಕವಾಗಿಯೇ ಅರ್ಪಣೆ ಮಾಡಬೇಕು.

ತಸ್ಮಾತ್ತ್ವಂ ಹಿ ನಿವರ್ತಸ್ವ ಕುರು ಪತ್ಯಾಶ್ರಿತಂ ಹಿತಮ್ ।
ತದಾ ಗಂತಾಸಿ ಲೋಕಾಂಸ್ತಾನ್ ಯಾನ್ ಗಚ್ಛಂತಿ ಪತಿವ್ರತಾಃ ।
ನಾನ್ಯಥಾ ಶಕ್ಯತೇ ಪ್ರಾಪ್ತುಂ ಪತೀನಾಂ ಲೋಕಮುತ್ತಮಮ್ ॥೨೪॥

ಆದ್ದರಿಂದ ನೀನು ಹಿಂದಿರುಗು. ಪತಿಗೆ ಹಿತವನ್ನು ಮಾಡು. ಆಗ ಪತಿವ್ರತೆಯರು ಹೊಂದುವ ಲೋಕಗಳನ್ನು ಹೊಂದುವಿ. ಬೇರೆ ರೀತಿಯಲ್ಲಿ ಶ್ರೇಷ್ಠವಾದ ಪತಿವ್ರತೆಯರ ಲೋಕವನ್ನು ಹೊಂದಲು ಸಾಧ್ಯವಿಲ್ಲ (ಎಂದು ಹೇಳಿದನು).

ಯಮೇನೈವಂವಿಧಂ ಚೋಕ್ತ್ವಾ ನಿವೃತ್ಯ ಪುನರೇವ ಸಾ ।
ಬಭೂವ ಪತಿಮಾಲಂಬ್ಯ ಪತಿಪ್ರಿಯಪರಾಯಣಾ ॥೨೫॥

ಯಮನಿಂದ ಹೀಗೆ ಹೇಳಲ್ಪಟ್ಟ ಅವಳು ಪುನಃ ಹಿಂದಿರುಗಿ ಬಂದು, ಪತಿಪ್ರಿಯ ಪರಾಯಣಳಾಗಿ, ಪತಿಯನ್ನು ಆಶ್ರಯಿಸಿ ಧರ್ಮವನ್ನು ಮಾಡಿದಳು.

ಏವಮೇತನ್ಮಹಾದೇವ ದೈವತಂ ಹಿ ಪತಿಃ ಸ್ತ್ರಿಯಃ ।
ತಸ್ಮಾತ್ ಪತಿಪರಾ ಭೂತ್ವಾ ಪತಿಂ ಪರಿಚರೇದಿತಿ ॥೨೬॥

ಎಲೈ ಮಹಾದೇವನೇ, ಈ ರೀತಿಯಲ್ಲಿ ಸ್ತ್ರೀಗೆ ಪತಿಯೇ ದೇವತೆ. ಆದ್ದರಿಂದ ಪತಿಪರಾಯಣಳಾಗಿ ಪತಿಯನ್ನು ಉಪಚರಿಸಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮಪರ್ವಣಿ ಪತಿವ್ರತಾಧರ್ಮಕಥನಂ ನಾಮ ಚತುಸ್ತ್ರಿಂಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಮೂವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಮೂವತ್ತೈದನೆಯ ಅಧ್ಯಾಯ

ಪಾರ್ವತಿಯಿಂದ ಪಾತಿವ್ರತ್ಯಧರ್ಮಕಥನ.

ಉಮಾ

ಪತಿಮತ್ಯಾ ದಿವಾರಾತ್ರಂ ವೃತ್ತಾಂತಂ ಶ್ರೂಯತಾಂ ಶುಭಮ್ ।
ಪತ್ಯುಃ ಪೂರ್ವಂ ಸಮುತ್ಥಾಯ ಪ್ರಾತಃ ಕರ್ಮ ಸಮಾಚರೇತ್ ॥೧॥

ಉಮಾ– ಪತಿಯನ್ನು ಹೊಂದಿದ ನಾರಿಯು ಹಗಲೂ ಮತ್ತು ರಾತ್ರಿಯೂ ಮಾಡಬೇಕಾದ ಶುಭವಾದ ವೃತ್ತಾಂತವನ್ನು ಕೇಳು. ಪತಿಗಿಂತಲೂ ಮೊದಲು ಎದ್ದು ಪ್ರಾತಃಕರ್ಮಗಳನ್ನು ಮಾಡಬೇಕು.

ಪತ್ಯುರ್ಭಾವಂ ವಿದಿತ್ವಾ ತು ಪಶ್ಚಾತ್ ಸಂಬೋಧಯೇತ್ ಪತಿಮ್ ।
ತತಃ ಪೌರ್ವಾಹ್ಣಿಕಂ ಕಾರ್ಯಂ ಸ್ವಯಂ ಕುರ್ಯಾದ್ ಯಥಾವಿಧಿ ॥೨॥

ಪತಿಯ ಅಭಿಪ್ರಾಯವನ್ನು ತಿಳಿದು ಅನಂತರ ಪತಿಯನ್ನು ಎಬ್ಬಿಸಬೇಕು. ಅನಂತರ ಪ್ರಾತಃಕಾಲದಲ್ಲಿ ಮಾಡಬೇಕಾದ ಕೆಲಸಗಳನ್ನು ವಿಧಿಗೆ ಅನುಗುಣವಾಗಿ ಸ್ವತಃ ಮಾಡಬೇಕು.

ನಿವೇದ್ಯ ಚ ತಥಾऽऽಹಾರಂ ಯಥಾ ಸಂಪದ್ಯತಾಮಿತಿ ।
ತಥೈವ ಕುರ್ಯಾತ್ ತತ್ಸರ್ವಂ ಯಥಾ ಪತ್ಯುಃ ಪ್ರಿಯಂ ಭವೇತ್ ॥೩॥

ಯಥಾ ಪತ್ಯುಸ್ತಥಾ ಭರ್ತುರ್ಗುರೂಣಾಂ ಪ್ರತಿಪದ್ಯತೇ ॥೪॥

ಶುಶ್ರೂಷಾಪೋಷಣವಿಧೌ ಪತಿಪ್ರಿಯಚಿಕೀರ್ಷಯಾ ।
ಭರ್ತುರ್ನಿಷ್ಕ್ರಮಣೇ ಕಾರ್ಯಂ ಸಂಸ್ಮರೇದಪ್ರಮಾದತಃ ॥೫॥

ಅನಂತರ ಆಹಾರವನ್ನು ಹೇಗೆ ಸಿದ್ಧಪಡಿಸಬೇಕು ಎಂದು ಕೇಳಿ ಅದರಂತೆ ಪತಿಗೆ ಸಂತೋಷವಾಗುವಂತೆ ಎಲ್ಲವನ್ನೂ ಮಾಡಬೇಕು. ಶುಶ್ರೂಷೆ ಮತ್ತು ಪೋಷಣ ವಿಷಯದಲ್ಲಿ ಪತಿಗೆ ಪ್ರಿಯವಾಗುವಂತೆ, ಪತಿಯ ವಿಷಯದಲ್ಲಿ ನಡೆದುಕೊಂಡಂತೆ ಪತಿಯ ಹಿರಿಯರ ವಿಷಯದಲ್ಲಿಯೂ ನಡೆದುಕೊಳ್ಳಬೇಕು. ಪತಿಯು ಹೊರಗೆ ಹೋದಾಗ ಮಾಡಬೇಕಾದ ಕಾರ್ಯಗಳನ್ನು ಸ್ಮರಿಸಿಕೊಂಡು ಎಚ್ಚರಿಕೆಯಿಂದ ಮಾಡಬೇಕು.

ಆಗತಂ ತು ಪತಿಂ ದೃಷ್ಟ್ವಾ ಸಹಸಾ ಪರಿಚಾರಕೈಃ ।
ಸ್ವಯಂ ಕುರ್ವೀತ ಸಂಪ್ರೀತ್ಯಾ ಕಾಯಶ್ರಮಹರಂ ಪರಮ್ ॥೬॥

ಪತಿಯು ಮನೆಗೆ ಹಿಂದಿರುಗಿದಾಗ ಪರಿಚಾರಕರ ಜೊತೆಯಲ್ಲಿ ಎದ್ದು, ಅವನ ಶ್ರಮ ಪರಿಹಾರಕವಾದ ಕಾರ್ಯಗಳನ್ನು ಸ್ವತಃ ತಾನೇ ಮಾಡಬೇಕು.

ಪಾದ್ಯಾಸನಾಭ್ಯಾಂ ಶಯನೈರ್ವಾಕ್ಯೈ ಶ್ಚ ಹೃದಯಪ್ರಿಯೈಃ ।
ಅತಿಥೀನಾಮಾಗಮೇನ ಪ್ರೀತಿಯುಕ್ತಾ ಸದಾ ಭವೇತ್ ॥೭॥

ಪಾದ್ಯ, ಆಸನ, ಶಯನ, ಮನಸ್ಸಿಗೆ ಪ್ರಿಯವಾದ ವಾಕ್ಯಗಳಿಂದ ಉಪಚರಿಸಬೇಕು. ಅತಿಥಿಗಳ ಆಗಮನದಿಂದ ಯಾವಾಗಲೂ ಸಂತೋಷಪಡಬೇಕು.

ಕರ್ಮಣಾ ವಚನೇನಾಪಿ ತೋಷಯೇದತಿಥೀನ್ ಸದಾ ।
ಮಂಗಲಂ ಗೃಹಶೌಚಂ ಚ ಸರ್ವೋಪಕರಣಾನಿ ಚ ॥೮॥

ಸರ್ವಕಾಲಮವೇಕ್ಷೇತ ಕಾರಯಂತೀ ಚ ಕುರ್ವತೀ ।
ಧರ್ಮಕಾರ್ಯೇ ತು ಸಂಪ್ರಾಪ್ತೇ ತದ್ವದ್ಧರ್ಮಪರಾ ಭವೇತ್ ॥೯॥

ಕರ್ಮದಿಂದಲೂ ಮತ್ತು ಮಾತಿನಿಂದಲೂ ಯಾವಾಗಲೂ ಅತಿಥಿಗಳನ್ನು ಸಂತೋಷಪಡಿಸಬೇಕು. ಮನೆಯ ಶುದ್ಧಿಯನ್ನೂ, ಮಂಗಳ ದ್ರವ್ಯಗಳನ್ನೂ, ಸರ್ವೋಪಕರಣಗಳನ್ನೂ ಎಲ್ಲ ಕಾಲದಲ್ಲಿಯೂ ನೋಡಿಕೊಂಡು ಕೆಲಸವನ್ನು ತಾನೂ ಮಾಡಿ ಸೇವಕರಿಂದಲೂ ಮಾಡಿಸಬೇಕು. ಧರ್ಮಕಾರ್ಯವು ಪ್ರಾಪ್ತವಾದಾಗ ಪತಿಯಂತೆ ಧರ್ಮಪರಳಾಗಬೇಕು.

ಅರ್ಥಕಾರ್ಯೇ ಪುನರ್ಭರ್ತುಃ ಪ್ರಮಾದಾಲಸ್ಯವರ್ಜಿತಾ ।
ಸಾ ಯತ್ನಂ ಪರಮಂ ಕುರ್ಯಾತ್ ತಸ್ಯ ಸಾಹಾಯ್ಯಕಾರಣಾತ್ ॥೧೦॥

ಪತಿಯ ಅರ್ಥದ ಕಾರ್ಯವು ಉಂಟಾದಾಗ ಪ್ರಮಾದವನ್ನಾಗಲೀ, ಆಲಸ್ಯವನ್ನಾಗಲೀ ಮಾಡದೆ ಅವನಿಗೆ ಸಹಾಯವನ್ನು ಮಾಡಲು ಪರಮ ಪ್ರಯತ್ನವನ್ನು ಮಾಡಬೇಕು.

ಯುಗಂಧರಾ ಭವೇತ್ ಸಾಧ್ವೀ ಪತ್ಯುರ್ಧರ್ಮಾರ್ಥಯೋಃ ಸದಾ ।
ವಿಹಾರಕಾಲೇ ವೈ ಭರ್ತುರ್ಜ್ಞಾತ್ವಾ ಭಾವಂ ಹೃದಿ ಸ್ಥಿತಮ್ ॥೧೧॥

ಅಲಂಕೃತ್ಯ ಯಥಾಯೋಗಂ ಮಂದಹಾಸಸಮನ್ವಿತಾ ।
ವಾಕ್ಯೈರ್ಮಧುರಸಂಯುಕ್ತೈಃ ಸ್ಮಯಂತೀ ತೋಷಯೇತ್ ಪತಿಮ್ ॥೧೨॥

ಸಾಧ್ವಿಯಾದವಳು ಪತಿಯ ಧರ್ಮಾರ್ಥಗಳಲ್ಲಿ ಇನ್ನೊಂದು ವೃಷಭವು ನೊಗವನ್ನು ಹೊರುವಂತೆ ಭಾರವನ್ನು ಹೊರಬೇಕು. ವಿಹಾರಕಾಲದಲ್ಲಿ ಪತಿಯ ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ತಿಳಿದು, ಯಥಾಯೋಗ್ಯವಾಗಿ ಅಲಂಕರಿಸಿಕೊಂಡು, ಮಂದಹಾಸಯುಕ್ತಳಾಗಿ, ಮಧುರವಾಕ್ಯಗಳಿಂದ ಮಾತನಾಡುತ್ತಾ, ನಗುತ್ತಾ ಪತಿಯನ್ನು ಸಂತೋಷಪಡಿಸಬೇಕು.

ಕಠೋರಾಣಿ ನ ವಾಚ್ಯಾನಿ ಅನ್ಯಥಾ ಪ್ರಮದಾಂತರೇ ।
ಯಸ್ಯಾಂ ಕಾಮೀ ಭವೇದ್ ಭರ್ತಾ ತಸ್ಯಾಃ ಪ್ರೀತಿಕರಾ ಭವೇತ್ ॥೧೩॥

ಕಠೋರವಾದ ಮಾತುಗಳನ್ನು ಆಡಬಾರದು. ಹಾಗೆ ಮಾಡಿದರೆ ಪತಿಗೆ ಇನ್ನೊಬ್ಬಳಲ್ಲಿ ಪ್ರೀತಿ ಇದ್ದರೆ ಅವಳಿಗೆ ಸಂತೋಷವಾದೀತು.

ಅಪ್ರಮಾದಂ ಪುರಸ್ಕೃತ್ಯ ಮನಸಾ ಜೋಷಯೇತ್ ಪತಿಮ್ ।
ಅನಂತರಂ ತಥಾಽನ್ಯೇಷಾಂ ಭೋಜನಾವೇಕ್ಷಣಂ ಚರೇತ್ ॥೧೪॥

ಪ್ರಮಾದ ಮಾಡದಿರುವುದನ್ನು ಮುಂದೆ ಮಾಡಿಕೊಂಡು ಮನಃ ಪೂರ್ವಕವಾಗಿ ಪತಿಯನ್ನು ಸೇವಿಸಬೇಕು. ಅನಂತರ ಉಳಿದವರ ಭೋಜನದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಬೇಕು.

ದಾಸೀದಾಸಬಲೀವರ್ದಾಂಶ್ಚಂಡಾಲಾಂಶ್ಚ ಶುನಸ್ತಥಾ ।
ಅನಾಥಾನ್ ಕೃಪಣಾಂಶ್ಚೈವ ಭಿಕ್ಷುಕಾಂಶ್ಚ ತಥೈವ ಚ ।
ಪೂಜಯೇದ್ ಬಲಿಭೈಕ್ಷೇಣ ಪತ್ಯುರ್ಧರ್ಮವಿವರ್ಧಯೇ ॥೧೫॥

ದಾಸಿಯರು, ದಾಸರು, ದುಡಿಯುವ ಎತ್ತುಗಳು, ಚಂಡಾಲರು, ನಾಯಿಗಳು, ಅನಾಥರು, ದರಿದ್ರರು, ಭಿಕ್ಷುಕರು- ಎಲ್ಲರನ್ನೂ ಪತಿಯ ಧರ್ಮದ ಅಭಿವೃದ್ಧಿಗಾಗಿ ಆಹಾರ ಮತ್ತು ಭೈಕ್ಷ್ಯಗಳಿಂದ ಸತ್ಕರಿಸಬೇಕು.

ಕುಪಿತಂ ವಾಽರ್ಥಹೀನಂ ವಾ ಶ್ರಾಂತಂ ವೋಪಚರೇತ್ ಪತಿಮ್ ।
ಯಥಾ ಸ ತುಷ್ಟಃ ಸ್ವಸ್ಥಶ್ಚ ಭವೇತ್ ಸಂತೋಷಯೇತ್ ಪತಿಮ್ ॥೧೬॥

ಪತಿಯು ಕುಪಿತನಾಗಿದ್ದರೂ, ಅರ್ಥಹೀನನಾಗಿದ್ದರೂ, ದಣಿದಿದ್ದರೂ ಅವನು ಪುನಃ ಸಮಾಧಾನಗೊಳ್ಳುವಂತೆ, ಅವನು ಸಂತೋಷಗೊಳ್ಳುವಂತೆ ಉಪಚರಿಸಬೇಕು.

ಯಥಾ ಕುಟುಂಬಚಿಂತಾಯಾಂ ವಿವಾದೇ ವಾಽರ್ಥಸಂಶಯೇ ।
ಆಹೂತಾ ಚ ಸಹಾಯಾರ್ಥಂ ತದಾ ಪ್ರಿಯಹಿತಂ ವದೇತ್ ॥೧೭॥

ಕುಟುಂಬದ ಕ್ಷೇಮಚಿಂತನೆಯ ವಿಷಯದಲ್ಲಿ ಅಥವಾ ವಿವಾದದ ವಿಷಯದಲ್ಲಿ ಅಥವಾ ಅರ್ಥವಿಷಯದ ಸಂಶಯದಲ್ಲಿ ಪತಿಯು ಆಹ್ವಾನಿಸಿದರೆ ಅವನ ಬಳಿಗೆ ಹೋಗಿ ಪ್ರಿಯಹಿತವನ್ನು ಹೇಳಿ ಸಹಾಯವನ್ನು ಮಾಡಬೇಕು.

ಅಪ್ರಿಯಂ ವಾ ಹಿತಂ ಬ್ರೂಯಾತ್ ತಸ್ಯ ಧರ್ಮಾರ್ಥಕಾಂಕ್ಷಯಾ ।
ಏಕಾಂತಚರ್ಯಾಕಥನಂ ಕಲಹಂ ವರ್ಜಯೇತ್ ಪರೈಃ ॥೧೮॥

ಪತಿಯ ಧರ್ಮಾರ್ಥವನ್ನು ಬಯಸಿ ಅಪ್ರಿಯವಾದರೂ ಹಿತವನ್ನು ಹೇಳಬೇಕು. ಇನ್ನೊಬ್ಬರ ಜೊತೆಯಲ್ಲಿ ಏಕಾಂತದಲ್ಲಿರುವುದನ್ನೂ, ಕಲಹವನ್ನೂ ವರ್ಜಿಸಬೇಕು.

ಬಹಿರಾಲೋಕನಂ ಚೈವ ಮೋಹಂ ವ್ರೀಡಾಂ ಚ ಪೈಶುನಮ್ ।
ಬಹ್ವಾಶಿತ್ವಂ ದಿವಾಸ್ವಪ್ನಮೇವಮಾದೀನಿ ವರ್ಜಯೇತ್ ॥೧೯॥

ಯಾವಾಗಲೂ ಹೊರಗೆ ನೋಡುವುದು, ಮೋಹ, ನಾಚುವುದು, ಚಾಡಿ ಹೇಳುವುದು, ಬಹಳ ಊಟ ಮಾಡುವುದು, ಹಗಲಿನಲ್ಲಿ ನಿದ್ದೆ ಮಾಡುವುದು- ಇಂತಹುದನ್ನು ವರ್ಜಿಸಬೇಕು.

ರಹಸ್ಯೇಕಾಸನಂ ಸಾಧ್ವೀ ನ ಕುರ್ಯಾದಾತ್ಮಜೈರಪಿ ।
ಯದ್ಯದ್ ದದ್ಯಾನ್ನಿಧತ್ಸ್ವೇತಿ ನ್ಯಾಸವತ್ ಪರಿಪಾಲಯೇತ್ ॥೨೦॥

ಏಕಾಂತದಲ್ಲಿ ಪುತ್ರರ ಜೊತೆಯಲ್ಲಿಯೂ ಒಂದೇ ಆಸನದಲ್ಲಿ ಕುಳಿತುಕೊಳ್ಳಬಾರದು. ಪತಿಯು ಇಟ್ಟಿರು ಎಂದು ಏನೇನನ್ನು ಕೊಡುತ್ತಾನೆಯೋ ಅವೆಲ್ಲವನ್ನೂ ನ್ಯಾಸದಂತೆ ರಕ್ಷಿಸಬೇಕು.

ವಿಸ್ಮೃತಂ ವಾ ಪತಿದ್ರವ್ಯಂ ಪ್ರತಿಪದ್ಯಾತ್ ಸ್ವಶೌಚತಃ ।
ಯತ್ ಕಿಂಚಿತ್ ಪತಿನಾ ದತ್ತಂ ತಲ್ಲಬ್ಧ್ವಾ ಸುಮುಖೀ ಭವೇತ್ ॥೨೧॥

ಪತಿಯು ಇಟ್ಟು ಮರೆತ ದ್ರವ್ಯವನ್ನು ತನ್ನ ಶುದ್ಧತೆಯಿಂದ ಹುಡುಕಿಕೊಡಬೇಕು. ಪತಿಯು ಏನನ್ನು ಕೊಟ್ಟರೂ ಅದನ್ನು ಸ್ವೀಕರಿಸಿ ಸುಮುಖಿಯಾಗಿರಬೇಕು.

ಅತಿಯಾಂಚಾಮತೀರ್ಷ್ಯಾಂ ಚ ದೂರತಃ ಪರಿವರ್ಜಯೇತ್ ।
ಬಾಲವದ್ ವೃದ್ಧವನ್ನಾರ್ಯಾಃ ಸದೈವಾತುರವತ್ಪತಿಃ ॥೨೨॥

ಅತಿಯಾಗಿ ಬೇಡುವುದನ್ನಾಗಲೀ, ಅಸೂಯೆಯನ್ನು ಪಡುವುದನ್ನಾಗಲೀ ದೂರದಿಂದಲೇ ಪರಿತ್ಯಜಿಸಬೇಕು. ಬಾಲರನ್ನು ನೋಡಿಕೊಂಡಂತೆ, ವೃದ್ಧರನ್ನು ನೋಡಿಕೊಂಡಂತೆ, ರೋಗಿಗಳನ್ನು ನೋಡಿಕೊಂಡಂತೆ ಪತಿಯನ್ನು ಯಾವಾಗಲೂ ನೋಡಿಕೊಳ್ಳಬೇಕು.

ಭಾರ್ಯಾಯಾ ವ್ರತಮಿತ್ಯೇವ ಭರ್ತವ್ಯಃ ಸತತಂ ವಿಭೋ ।
ಏತತ್ಪತಿವ್ರತಾವೃತ್ತಮುಕ್ತಂ ದೇವ ಸಮಾಸತಃ ॥೨೩॥

ಎಲೈ ವಿಭುವೇ, ಇದು ಭಾರ್ಯೆಯ ವ್ರತ ಎಂದು ತಿಳಿದು ಯಾವಾಗಲೂ ಪತಿಯನ್ನು ನೋಡಿಕೊಳ್ಳಬೇಕು. ಇದು ಸಂಕ್ಷೇಪವಾಗಿ ಪತಿವ್ರತೆಯರ ನಡತೆ.

ನ ಚ ಭೋಗೇ ನ ಚೈಶ್ವರ್ಯೇ ನ ಸುಖೇ ನ ಧನೇ ತಥಾ ।
ಸ್ಪೃಹಾ ಯಸ್ಯಾ ಯಥಾ ಪತ್ಯೌ ಸಾ ನಾರೀಣಾಂ ಪತಿವ್ರತಾ ॥೨೪॥

ಯಾವ ನಾರಿಯು ಪತಿಯನ್ನು ಆಸೆಪಡುವಂತೆ ಭೋಗವನ್ನಾಗಲೀ, ಐಶ್ವರ್ಯವನ್ನಾಗಲೀ, ಸುಖವನ್ನಾಗಲೀ, ಧನವನ್ನಾಗಲೀ ಆಸೆಪಡುವುದಿಲ್ಲವೋ ಅವಳೇ ಪತಿವ್ರತೆ.

ಪತಿರ್ಹಿ ದೈವತಂ ಸ್ತ್ರೀಣಾಂ ಪತಿರ್ಬಂಧುಃ ಪತಿರ್ಗತಿಃ ।
ನಾನ್ಯಾಂ ಗತಿಮಹಂ ಪಶ್ಯೇ ಪ್ರಮದಾನಾಂ ಯಥಾ ಪತಿಃ ॥೨೫॥

ಸ್ತ್ರೀಯರಿಗೆ ಪತಿಯೇ ಬಂಧು, ಪತಿಯೇ ಗತಿ. ಸ್ತ್ರೀಯರಿಗೆ ಪತಿಯಂತಹ ಇನ್ನೊಂದು ಗತಿಯನ್ನು ನಾನು ಕಾಣುವುದಿಲ್ಲ.

ಜಾತಿಷ್ವಪಿ ಚ ವೈ ಸ್ತ್ರೈತ್ವಂ ವಿಶಿಷ್ಟಮಿತಿ ಮೇ ಮತಿಃ ।
ಕಾಯಕ್ಲೇಶೇನ ಮಹತಾ ಪುರುಷಃ ಪ್ರಾಪ್ನುಯಾತ್ಫಲಮ್ ।
ತತ್ಸರ್ವಂ ಲಭತೇ ನಾರೀ ಸೇವಂತೀಂದ್ರಿಯಗೋಚರಾನ್ ॥೨೬॥

ಸ್ತ್ರೀ-ಪುರುಷ ಜಾತಿಗಳಲ್ಲಿ ಸ್ತ್ರೀ ಜಾತಿಯು ಶ್ರೇಷ್ಠವಾದುದೆಂದು ನನ್ನ ಅಭಿಪ್ರಾಯ. ಕಾಯಕ್ಲೇಶದಿಂದ ಪುರುಷರು ಯಾವ ಮಹಾಫಲವನ್ನು ಪಡೆಯುತ್ತಾರೆಯೋ ಅವೆಲ್ಲವನ್ನೂ ನಾರಿಯಾದವಳು ಪತಿಪೂಜೆಯನ್ನು ಮಾಡಿ ಅನಾಯಾಸದಿಂದ ಪಡೆಯುತ್ತಾಳೆ. (ಕಣ್ಣಿಗೆ ಕಾಣುವ ಪತಿಯನ್ನು ಮತ್ತು ಪತಿಯ ಹಿರಿಯರನ್ನು ಸೇವಿಸಿ ಪಡೆಯುತ್ತಾಳೆ).

ಯಥಾಸುಖಂ ಪತಿಮತೀ ಸರ್ವಂ ಪತ್ಯನುಕೂಲತಃ ।
ಈದೃಶಂ ಧರ್ಮಸೌಕರ್ಯಂ ಪಶ್ಯಧ್ವಂ ಪ್ರಮದಾಃ ಪ್ರತಿ ।
ಏತದ್ ವಿಸೃಜ್ಯ ಪಚ್ಯಂತೇ ಕುಸ್ತ್ರಿಯಃ ಪಾಪಮೋಹಿತಾಃ ॥೨೭॥

ಪತಿಯನ್ನು ಹೊಂದಿದ ಸ್ತ್ರೀಯು ಪತಿಗೆ ಅನುಕೂಲವನ್ನು ಮಾಡಿ, ಸುಖವಾಗಿ ಎಲ್ಲವನ್ನೂ ಪಡೆಯುತ್ತಾಳೆ. ಸ್ತ್ರೀಯರಿಗಿರುವ ಇಂತಹ ಧರ್ಮಸೌಕರ್ಯವನ್ನು ನೋಡಿ. ಇದನ್ನು ಬಿಟ್ಟು ಕೆಟ್ಟ ಸ್ತ್ರೀಯರು ಪಾಪಮೋಹಿತರಾಗಿ ನರಕದಲ್ಲಿ ಬೇಯಿಸಲ್ಪಡುತ್ತಾರೆ.

ತಪಶ್ಚರ್ಯಾ ಚ ದಾನಂ ಚ ಪತೌ ತಸ್ಯಾಃ ಸಮರ್ಪಿತೌ ।
ರೂಪಂ ಕುಲಂ ಯಶಃ ಸ್ವರ್ಗಃ ಸರ್ವಂ ತಸ್ಮಿನ್ ಪ್ರತಿಷ್ಠಿತಮ್ ॥೨೮॥

ಸ್ತ್ರೀಯರ ತಪಸ್ಸು, ದಾನ ಎಲ್ಲವೂ ಪತಿಯ ಮೂಲಕವಾಗಿಯೇ ಸಮರ್ಪಿಸಲ್ಪಡುತ್ತದೆ. ಅವಳ ರೂಪ, ಕುಲ, ಯಶಸ್ಸು, ಸ್ವರ್ಗ ಎಲ್ಲವೂ ಪತಿಯನ್ನು ಅವಲಂಬಿಸಿವೆ.

ಏವಂ ವೃತ್ತಸಮಾಚಾರಾ ಸ್ವವೃತ್ತೇನೈವ ಶೋಭನಾ ।
ಪತಿನಾ ಚ ಸಮಂ ಗಚ್ಛೇತ್‌ಪುಣ್ಯಲೋಕಾನ್ ಸುಕರ್ಮಣಾ ॥೨೯॥

ಇಂತಹ ಶುಭಾಚಾರಗಳಿಂದ ಕೂಡಿದ ಒಳ್ಳೆಯ ವನಿತೆಯು ತನ್ನ ನಡತೆಯಿಂದಲೇ ಪತಿಯ ಜೊತೆಯಲ್ಲಿ ಪುಣ್ಯಲೋಕಗಳಿಗೆ ಹೋಗುತ್ತಾಳೆ.

ವೃದ್ಧೋ ವಿರೂಪೋ ಬೀಭತ್ಸೋ ಧನವಾನ್ನಿರ್ಧನೋಽಪಿ ವಾ ।
ಏವಂಭೂತೋಽಪಿ ವೈ ಭರ್ತಾ ಸ್ತ್ರೀಣಾಂ ಭೂಷಣಮುತ್ತಮಮ್ ॥

ಪತಿಯು ವೃದ್ಧನಾಗಿರಲಿ, ವಿರೂಪನಾಗಿರಲಿ, ಭಯಂಕರನಾಗಿರಲಿ, ಧನವಂತನಾಗಿರಲಿ ಅಥವಾ ನಿರ್ಧನನಾಗಿರಲಿ ಅವನೇ ಸ್ತ್ರೀಯರಿಗೆ ಶ್ರೇಷ್ಠವಾದ ಭೂಷಣ.

ಆಢ್ಯಂ ವಾ ರೂಪಯುಕ್ತಂ ವಾ ವಿರೂಪಂ ಧನವರ್ಜಿತಮ್ ।
ಯಾ ಪತಿಂ ತೋಷಯೇತ್ ಸಾಧ್ವೀ ಸಾ ನಾರೀಣಾಂ ವಿಶಿಷ್ಯತೇ ॥೩೧॥

ಯಾವ ವನಿತೆಯು ಧನಾಢ್ಯನಾದ ಅಥವಾ ದರಿದ್ರನಾದ, ರೂಪವಂತನಾದ ಅಥವಾ ಕುರೂಪಿಯಾದ ಪತಿಯನ್ನು ಸಂತೋಷಪಡಿಸುತ್ತಾಳೆಯೋ ಅವಳು ನಾರಿಯರಲ್ಲಿ ಶ್ರೇಷ್ಠಳಾದವಳು.

ದರಿದ್ರಾಂಶ್ಚ ವಿರೂಪಾಂಶ್ಚ ಪ್ರಮೂಢಾನ್ ಕುಷ್ಠಸಂಯುತಾನ್ ।
ಏವಂವಿಧಾನ್ ಪತೀನ್ ದೇವ ತೋಷಯಿತ್ವಾ ಪತಿವ್ರತಾ ।
ಉಪರ್ಯುಪರಿ ತಾನ್ ಲೋಕಾನ್ ಪತ್ಯೈವ ಸಹ ಗಚ್ಛತಿ ॥

ಪತಿವ್ರತೆಯಾದವಳು ದರಿದ್ರರೂ, ಕುರೂಪಿಗಳೂ, ಮೂಢರೂ, ಕುಷ್ಠ ರೋಗವಿದ್ದವರೂ ಆದ ಇಂತಹ ಪತಿಯರನ್ನು ಸಂತೋಷಪಡಿಸಿ ಎಲೈ ದೇವನೇ, ಮೇಲೆ ಮೇಲೆ ಇರುವ ಶ್ರೇಷ್ಠ ಲೋಕಗಳಿಗೆ ಪತಿಯರೊಂದಿಗೆ ಹೋಗುತ್ತಾಳೆ.

ಏವಂ ಪ್ರವರ್ತಮಾನಾಯಾಃ ಪತಿಃ ಪೂರ್ವಂ ಮ್ರಿಯೇತ ಚೇತ್ ।
ತದಾऽನುಮರಣಂ ಗಚ್ಛೇತ್ ಪುನರ್ಧರ್ಮಂ ಚರೇತ ವಾ ।
ಏತದೇವಂ ಮಯಾ ಪ್ರೋಕ್ತಂ ಸ್ತ್ರೀಣಾಂ ಧರ್ಮಾಶ್ರಿತಂ ಹಿತಮ್ ॥೩೩॥

ಹೀಗೆ ಧರ್ಮಾಚರಣೆಯನ್ನು ಮಾಡುವ ಸ್ತ್ರೀಗೆ ಪತಿಯೇ ಮೊದಲು ಮೃತನಾದರೆ ಆಗ ಅವಳು ಅನುಮರಣವನ್ನು ಮಾಡಬೇಕು ಅಥವಾ ಪುನಃ ಧರ್ಮಾಚರಣೆಯನ್ನು ಮಾಡಬಹುದು. ಇದೇ ಸ್ತ್ರೀಯರಿಗೆ ಸಂಬಂಧಿಸಿದ ಹಿತವಾದ ಧರ್ಮವಚನ.

ಏವಮೇತನ್ಮಯಾ ಪ್ರೋಕ್ತಂ ಸ್ತ್ರಿಯಸ್ತು ಬಹುಧಾ ಸ್ಮೃತಾಃ ।
ದೇವತಾನಾಗಗಂಧರ್ವಮನುಷ್ಯಾ ಇತಿ ನೈಕಧಾ ॥೩೪॥

ಸೌಮ್ಯಶೀಲಾಃ ಶುಭಾಚಾರಾಃ ಸರ್ವಾಸ್ತಾಃ ಸಂಭವಂತಿ ಚ ।

ನಾನು ಸ್ತ್ರೀಯರ ವಿಷಯದಲ್ಲಿ ಹೀಗೆ ಹೇಳಿದ್ದೇನೆ. ಸ್ತ್ರೀಯರೂ, ದೇವತಾಸ್ತ್ರೀಯರು, ನಾಗಸ್ತ್ರೀಯರು, ಗಂಧರ್ವಸ್ತ್ರೀಯರು, ಮನುಷ್ಯಸ್ತ್ರೀಯರು ಎಂದು ಅನೇಕ ವಿಧವಾಗಿದ್ದಾರೆ. ಅವರೆಲ್ಲರೂ ಸೌಮ್ಯ ಸ್ವಭಾವವುಳ್ಳವರೂ, ಶುಭಾಚಾರ ಉಳ್ಳವರೂ ಆಗಿರುತ್ತಾರೆ.

ಯಥಾ ಶುಭಂ ಪ್ರವಕ್ಷ್ಯಾಮಿ ಸ್ತ್ರೀಣಾಂ ವೃತ್ತಂ ಮಹೇಶ್ವರ ॥೩೫॥

ಆಸುರ್ಯಶ್ಚೈವ ಪೈಶಾಚ್ಯೋ ರಾಕ್ಷಸ್ಯಶ್ಚ ಭವಂತಿ ಯಾಃ ।
ತಾಸಾಂ ವೃತ್ತಮಶೇಷೇಣ ಶ್ರೂಯತಾಂ ಲೋಕಕಾರಣಾತ್ ॥೩೬॥

ಎಲೈ ಮಹೇಶ್ವರನೇ, ಸ್ತ್ರೀಯರ ಶುಭಾಚಾರವನ್ನು ಹೇಳಿದಂತೆ ಆಸುರ್ಯರೂ, ಪಿಶಾಚಿಗಳೂ, ರಾಕ್ಷಸಿಯರೂ ಆದ ಸ್ತ್ರೀಯರ ವೃತ್ತವನ್ನು ಲೋಕದ ದೃಷ್ಟಿಯಿಂದ ಸಮಗ್ರವಾಗಿ ಹೇಳುತ್ತೇನೆ. ಅದನ್ನೂ ಕೇಳು.

ನ್ಯಾಯತೋ ವಾऽನ್ಯಥಾ ಪ್ರೋಕ್ತಾ ಭಾವದೋಷಸಮನ್ವಿತಾಃ ।
ಭರ್ತ್ರಾನುಪಚರಂತ್ಯೇವ ರಾಗದ್ವೇಷಬಲಾತ್ಕೃತಾಃ ॥೩೭॥

ನ್ಯಾಯದಿಂದಾಗಲೀ ಅಥವಾ ಅನ್ಯಾಯದಿಂದಾಗಲೀ ಹೀಗೆ ಹೇಳಿದ ಈ ಸ್ತ್ರೀಯರು ಮನೋದೋಷಯುಕ್ತರಾಗಿ, ರಾಗ-ದ್ವೇಷಗಳಿಗೆ ವಶರಾಗಿ ಪತಿಗಳನ್ನು ಉಪಚರಿಸುತ್ತಾರೆ.

ಸ್ವಧರ್ಮವಿಮುಖಾ ಭೂತ್ವಾ ಪ್ರದೂಷ್ಯಂತಿ ಯತಸ್ತತಃ ।
ಪ್ರವೃದ್ಧವಿಷಯಾ ನಿತ್ಯಂ ಪ್ರತಿಕೂಲಂ ವದಂತಿ ಚ ॥೩೮॥

ತಮ್ಮ ಧರ್ಮದಿಂದ ವಿಮುಖರಾಗಿ ಎಲ್ಲ ಕಡೆಯಲ್ಲಿಯೂ ದೋಷಗಳನ್ನು ತಂದೊಡ್ಡುತ್ತಾರೆ. ಎಷ್ಟು ಸಾಮಗ್ರಿಗಳಿದ್ದರೂ ನಿತ್ಯವೂ ಪ್ರತಿಕೂಲವಾಗಿ ಮಾತನಾಡುತ್ತಾರೆ.

ಅರ್ಥಾನ್ ವಿನಾಶಯಂತ್ಯೇವಂ ನ ಗೃಹ್ಣಂತಿ ಹಿತಂ ಕ್ವಚಿತ್ ।
ಸ್ವಬುದ್ಧಿನಿರತಾ ಭೂತ್ವಾ ಜೀವಂತಿ ಚ ಯಥಾ ತಥಾ ॥೩೯॥

ವಸ್ತುಗಳನ್ನು ಹಾಳು ಮಾಡುತ್ತಾರೆ. ಹಿತವಚನವನ್ನು ಕೇಳುವುದಿಲ್ಲ. ತಮ್ಮ ಬುದ್ಧಿಯಲ್ಲೇ ನಿರತರಾಗಿ ತಮಗೆ ಬೇಕಾದಂತೆ ಜೀವಿಸುತ್ತಾರೆ.

ಗುಣವತ್ಯಃ ಕ್ವಚಿದ್ ಭೂತ್ವಾ ಪತಿಧರ್ಮಪರಾ ಇವ ।
ಪುನರ್ಭವಂತಿ ಪಾಪಿಷ್ಠಾ ವಿಷಮಂ ವೃತ್ತಮಾಶ್ರಿತಾಃ ॥೪೦॥

ಅವರೂ ಸಹ ಒಮ್ಮೊಮ್ಮೆ ಗುಣವತಿಯರಾಗಿ ಎಲ್ಲರಂತೆ ಧರ್ಮಾಚರಣೆಯನ್ನು ಮಾಡುತ್ತಾರೆ. ಆದರೆ ಪುನಃ ವಿಷಮವಾದ ವೃತ್ತದಿಂದ ಪಾಪಿಷ್ಠರಾಗುತ್ತಾರೆ.

ಅನವಸ್ಥಿತಮರ್ಯಾದಾ ಬಹುವೇಷಾ ವ್ಯವಪ್ರಿಯಾಃ ।
ಅಸಂತುಷ್ಟಾಶ್ಚ ಲುಬ್ಧಾಶ್ಚ ಈರ್ಷ್ಯಾಕ್ರೋಧಯುತಾ ಭೃಶಮ್ ॥೪೧॥

ಅವರು ಎಲ್ಲಮರ್ಯಾದೆಗಳನ್ನೂ ಮೀರಿ, ಅನೇಕ ವೇಷಗಳನ್ನು ಧರಿಸಿ ಎಲ್ಲರಿಗೂ ಅಪ್ರಿಯರಾಗಿರುತ್ತಾರೆ. ಎಂದೂ ಸಂತೋಷಪಡುವುದಿಲ್ಲ. ಲೋಭಿಗಳಾಗಿರುತ್ತಾರೆ. ತೀವ್ರವಾದ ಅಸೂಯೆ ಮತ್ತು ಕ್ರೋಧದಿಂದ ಕೂಡಿರುತ್ತಾರೆ.

ಭೋಗಪ್ರಿಯಾ ಹಿತದ್ವೇಷ್ಯಾಃ ಕಾಮಭೋಗಪರಾಯಣಾಃ ।
ಪತೀನ್ ಪರಿಭವಂತ್ಯೇವ ಪ್ರತಿಕೂಲಪರಾಯಣಾಃ ।
ಪ್ರಾಯಶೋಽನೃತಭೂಯಿಷ್ಠಾ ಗುರೂಣಾಂ ಪ್ರತಿಲೋಮಕಾಃ ॥೪೨॥

ಭೋಗಪ್ರಿಯರೂ, ಹಿತದ್ವೇಷಿಗಳೂ, ಕಾಮಭೋಗಪರಾಯಣರೂ, ಪತಿಗೆ ಪ್ರತಿಕೂಲವನ್ನು ಮಾಡುವುದರಲ್ಲೇ ಹಠವನ್ನು ಹಿಡಿದವರೂ ಆಗಿ ಪತಿಗಳನ್ನು ಅವಮಾನಗೊಳಿಸುತ್ತಾರೆ. ಹೆಚ್ಚಾಗಿ ಸುಳ್ಳನ್ನೇ ಮಾತನಾಡಿ ಹಿರಿಯರಿಗೂ ಪ್ರತಿಕೂಲವನ್ನು ಮಾಡುತ್ತಾರೆ.

ಏವಂಯುಕ್ತಸಮಾಚಾರಾ ಆಸುರಂ ಭಾವಮಾಶ್ರಿತಾಃ ।
ಅಪರಾಃ ಪಾಪಕಾರಿಣ್ಯಃ ಸತತಂ ಕಲಹಪ್ರಿಯಾಃ ॥೪೩॥

ಇಂತಹ ಆಚಾರದಿಂದ ಯುಕ್ತರಾದ, ಆಸುರಭಾವದಿಂದ ಕೂಡಿದವರನ್ನು - ಅಸುರ ಸ್ತ್ರೀಯರೆಂದು ತಿಳಿಯಬೇಕು. ಇನ್ನು ಕೆಲವು ಪಾಪಶೀಲೆಯರು ಯಾವಾಗಲೂ ಕಲಹಪ್ರಿಯರಾಗಿರುತ್ತಾರೆ.

ಪರುಷಾ ರೂಕ್ಷವಚನಾ ನಿರ್ಘೃಣಾ ನಿರಪತ್ರಪಾಃ ।
ನಿಃಸ್ನೇಹಾಃ ಕೋಪನಾಶ್ಚೈವ ಭರ್ತೃಪುತ್ರಸ್ವಬಂಧುಷು ॥೪೪॥

ಕ್ರೂರಿಗಳಾಗಿ, ಒರಟು ಮಾತುಗಳನ್ನಾಡುತ್ತಾ, ದಯಾಹೀನರೂ, ಲಜ್ಜಾಹೀನರೂ, ಸ್ನೇಹಹೀನರೂ ಆಗಿ, ಪತಿ-ಪುತ್ರ-ಬಂಧುಗಳಿಗೆ ಕೋಪವುಂಟು ಮಾಡುತ್ತಾರೆ.

ಘೋರಾ ಮಾಂಸಪ್ರಿಯಾ ನಿತ್ಯಂ ಹಸಂತಿ ಚ ರುದಂತಿ ಚ ।
ಪತೀನ್ ವ್ಯಭಿಚರಂತ್ಯೇವಮುನ್ಮಾರ್ಗೇಣ ಯಥಾ ತಥಾ ।
ಬಂಧುಭಿರ್ಭರ್ತ್ಸಿತಾ ಭೂತ್ವಾ ಗೃಹಕಾರ್ಯಾಣಿ ಕುರ್ವತೇ ॥೪೫॥

ಘೋರರೂ, ನಿತ್ಯವೂ ಮಾಂಸಪ್ರಿಯರೂ ಆಗಿ ನಗುತ್ತಾರೆ ಮತ್ತು ಅಳುತ್ತಾರೆ. ತಮಗೆ ಮನಸ್ಸು ಬಂದಂತೆ ದುರ್ಮಾರ್ಗದಲ್ಲಿ ಹೋಗಿ ಪತಿಗಳನ್ನು ಉಲ್ಲಂಘಿಸುತ್ತಾರೆ. ಬಂಧುಗಳು ಗದರಿಸಿದರೆ ಮಾತ್ರ ಗೃಹಕಾರ್ಯವನ್ನು ಮಾಡುತ್ತಾರೆ.

ಅಥವಾ ಭರ್ತ್ಸಿತಾ ದೇವ ನೀಚವೃತ್ತಾಃ ಸ್ವಬಂಧುಷು ।
ತಥೈವಾತ್ಮವಧಂ ಘೋರಂ ವ್ಯವಸ್ಯೇಯುರ್ನ ಸಂಶಯಃ ॥೪೬॥

ಎಲೈ ದೇವನೇ, ಅಥವಾ ತಮ್ಮ ಬಂಧುಗಳಲ್ಲಿ ನೀಚ ನಡವಳಿಕೆಯನ್ನು ಹೊಂದಿದ ಇವರು ಗದರಿಸಲ್ಪಟ್ಟಾಗ ಘೋರವಾದ ಆತ್ಮಹತ್ಯೆಯನ್ನೂ ಮಾಡಿಕೊಳ್ಳಲು ನಿರ್ಧರಿಸುತ್ತಾರೆ. ಇದರಲ್ಲಿ ಸಂಶಯವಿಲ್ಲ.

ನಿರ್ದಯಾ ನಿರನುಕ್ರೋಶಾಃ ಕುಟುಂಬಾರ್ಥವಿಲೋಪನಾಃ ।
ಧರ್ಮಾರ್ಥರಹಿತಾ ಘೋರಾಃ ಸತತಂ ಕುರ್ವತೇ ಕ್ರಿಯಾಃ ॥೪೭॥

ನಿರ್ದಯರಾಗಿ, ಅನುಕಂಪರಹಿತರಾಗಿ ಕುಟುಂಬದ ವಸ್ತುಗಳನ್ನು ಹಾಳು ಮಾಡುತ್ತಾ, ಧರ್ಮಾರ್ಥರಹಿತರಾಗಿ ಸತತವಾಗಿ ಘೋರವಾದ ಕಾರ್ಯಗಳನ್ನು ಮಾಡುತ್ತಾರೆ.

ಅನರ್ಥನಿಪುಣಾಃ ಪಾಪಾಃ ಪರಪ್ರಾಣೇಷು ನಿರ್ದಯಾಃ ।
ಏವಂಯುಕ್ತಸಮಾಚಾರಾಃ ಸ್ತ್ರಿಯಃ ಪೈಶಾಚ್ಯಮಾಶ್ರಿತಾಃ ॥೪೮॥

ಅನರ್ಥವನ್ನು ಉಂಟುಮಾಡುವುದರಲ್ಲಿ ನಿಪುಣರಾಗಿ, ಪಾಪಿಗಳಾಗಿ, ಪರಪ್ರಾಣಗಳಲ್ಲಿ ದಯೆಯನ್ನು ಹೊಂದದೆ ಇಂತಹ ಆಚಾರವನ್ನು ಮಾಡಿದ ಸ್ತ್ರೀಯರು ಪಿಶಾಚಿ ಧರ್ಮವನ್ನು ಆಶ್ರಯಿಸಿದವರಾಗಿರುತ್ತಾರೆ.

ಅಪರಾ ಮೋಹಸಂಯುಕ್ತಾ ನಿರ್ಲಜ್ಜಾ ರೋದನಪ್ರಿಯಾಃ ।
ಅಶುದ್ಧಾ ಮಲದಿಗ್ಧಾಂಗಾಃ ಪಾನಮಾಂಸರತಾ ಭೃಶಮ್ ।
ವದಂತ್ಯನೃತವಾಕ್ಯಾನಿ ಹಸಂತಿ ವಿಲಪಂತಿ ಚ ॥೪೯॥

ಇನ್ನು ಕೆಲವರು ಮೋಹಯುಕ್ತರಾಗಿ, ನಿರ್ಲಜ್ಜರಾಗಿ, ಅಳುವುದರಲ್ಲೇ ನಿರತರಾಗಿ, ಅಶುದ್ಧರಾಗಿ, ದೇಹದಲ್ಲಿ ಕಶ್ಮಲವನ್ನು ಹೊಂದಿ, ಪಾನ-ಮಾಂಸರತರಾಗಿರುತ್ತಾರೆ. ಸುಳ್ಳು ಮಾತುಗಳನ್ನು ಆಡುತ್ತಾರೆ. ನಗುತ್ತಾರೆ ಮತ್ತು ವಿಲಾಪವನ್ನು ಮಾಡುತ್ತಾರೆ.

ದುಷ್ಪ್ರಸಾದಾ ಮಹಾಕ್ರೋಧಾಃ ಸ್ವಪ್ನಶೀಲಾ ನಿರಂತರಮ್ ।
ತಾಮಸ್ಯೋ ನಷ್ಟತತ್ತ್ವಾರ್ಥಾ ಮಂದಶೀಲಾ ಮಹೋದರಾಃ ।
ಭುಂಜಂತಿ ವಿವಿಧಂ ಸಿದ್ಧಂ ಭೋಜನಂ ತೀವ್ರಸಂಭ್ರಮಾಃ ॥೫೦॥

ಸಂತೋಷಗೊಳಿಸಲು ಅಸಾಧ್ಯರಾಗಿ, ಮಹಾಕ್ರೋಧದಿಂದ ಕೂಡಿ, ಯಾವಾಗಲೂ ನಿದ್ರಾಶೀಲರಾದ ತಾಮಸ ಸ್ತ್ರೀಯರು ತತ್ತ್ವಜ್ಞಾನಶೂನ್ಯರಾಗಿ, ಮಂದವಾದ ನಡತೆಯುಳ್ಳವರಾಗಿ, ಮಹೋದರರಾಗಿ ಸಿದ್ಧಪಡಿಸಿದ ವಿವಿಧವಾದ ಅನ್ನವನ್ನು ಬಹಳ ಸಂಭ್ರಮದಿಂದ ಊಟ ಮಾಡುತ್ತಾರೆ.

ಗುಣರೂಪವಯೋಯುಕ್ತಂ ಪತಿಂ ಕಾಮುಕಮುತ್ತಮಮ್ ।
ಹಿತ್ವಾಽನ್ಯಾನೇವ ಗಚ್ಛಂತಿ ಸರ್ವಥಾ ಭೃಶಪಾಪಿಕಾಃ ॥೫೧॥

ಗುಣ-ರೂಪ-ವಯಸ್ಸುಗಳಿಂದ ಕೂಡಿದ, ಒಳ್ಳೆಯ ಕಾಮಪ್ರಜ್ಞೆಯಿಂದ ಕೂಡಿದ ಪತಿಯನ್ನು ಬಿಟ್ಟು ಅತ್ಯಂತ ಪಾಪವನ್ನು ಮಾಡುವ ಅವರು ಇನ್ನೊಬ್ಬರ ಕಡೆಗೆ ಹೋಗುತ್ತಾರೆ.

ನಿರ್ಲಜ್ಜಾ ಧರ್ಮಸಂದಿಗ್ಧಾಃ ಪ್ರತಿಕೂಲಾಃ ಸಮಂತತಃ ।
ಏವಂಯುಕ್ತಸಮಾಚಾರಾಃ ಸ್ತ್ರಿಯೋ ರಾಕ್ಷಸಮಾಶ್ರಿತಾಃ ॥೫೨॥

ನಿರ್ಲಜ್ಜರಾಗಿ, ಧರ್ಮವನ್ನೇ ಆಶ್ರಯಿಸದೆ ಯಾವಾಗಲೂ ಪ್ರತಿಕೂಲ ಆಚಾರವನ್ನು ಹೊಂದಿರುತ್ತಾರೆ. ಇಂತಹ ಸ್ತ್ರೀಯರನ್ನು ರಾಕ್ಷಸಧರ್ಮವನ್ನು ಆಶ್ರಯಿಸಿದವರು ಎಂದು ತಿಳಿಯಬೇಕು.

ಏವಂವಿಧಾನಾಂ ಸರ್ವಾಸಾಂ ನ ಪರತ್ರೇಹ ವಾ ಸುಖಮ್ ।
ಏತಾಸಾಮೇವ ಕುಸ್ತ್ರೀಣಾಂ ಮೃತಾನಾಂ ಚ ಮಹೇಶ್ವರ ॥

ಅಸಂಶಯಂ ಚಿರಂ ಕಾಲಂ ನರಕೇ ವಾಸ ಇಷ್ಯತೇ ।
ನರಕಾದ್ಧಿ ವಿಮುಕ್ತಾನಾಂ ಕಥಂಚಿತ್ ಕಾಲಪರ್ಯಯಾತ್ ॥೫೩॥

ಇಷ್ಯತೇ ಜನ್ಮ ಮಾನುಷ್ಯಂ ಕಷ್ಟಂ ತತ್ರಾಪಿ ಭುಂಜತೇ ।
ತಾಸಾಂ ದುಷ್ಕೃತಸಂಯೋಗಾದ್ ದುಃಖಂ ಜನ್ಮಾಂತರೇಷ್ವಪಿ ॥

ಇಂತಹ ಯಾವ ಸ್ತ್ರೀಯರಿಗೂ ಈ ಲೋಕದಲ್ಲಾಗಲೀ, ಪರಲೋಕದಲ್ಲಾಗಲೀ ಸುಖವಿಲ್ಲ. ಎಲೈ ಮಹೇಶ್ವರನೇ, ಇಂತಹ ಕೆಟ್ಟ ಸ್ತ್ರೀಯರು ಮೃತರಾದ ಮೇಲೆ ನಿಸ್ಸಂಶಯವಾಗಿ ಬಹುಕಾಲ ನರಕದಲ್ಲಿ ವಾಸ ಮಾಡುತ್ತಾರೆ. ಕಾಲದ ಉರುಳುವಿಕೆಯಿಂದ ಹೇಗೋ ನರಕದಿಂದ ಮುಕ್ತರಾಗಿ ಮನುಷ್ಯ ಜನ್ಮವನ್ನು ಪಡೆದರೂ ಅಲ್ಲಿಯೂ ಕಷ್ಟಗಳನ್ನು ಅನುಭವಿಸುತ್ತಾರೆ. ಹಿಂದೆ ಮಾಡಿದ ದುಷ್ಕರ್ಮಗಳ ಸಂಯೋಗದಿಂದ ಜನ್ಮಾಂತರದಲ್ಲಿಯೂ ಅವರಿಗೆ ದುಃಖವೇ ಉಂಟಾಗುತ್ತದೆ.

ದರಿದ್ರಾಃ ಕ್ಲೇಶಭೂಯಿಷ್ಠಾ ವಿರೂಪಾಃ ಕುತ್ಸಿತಾಃ ಪರೈಃ ।
ವಿಧವಾ ದುರ್ಭಗಾ ವಾಽಪಿ ಲಭಂತೇ ದುಃಖಮೀದೃಶಮ್ ॥೫೪॥

ಅಂತಹವರು ದರಿದ್ರರಾಗಿ, ಬಹಳ ಕ್ಲೇಶವನ್ನು ಪಡುವವರಾಗಿ, ಕುರೂಪಿಗಳಾಗಿ, ಪರರಿಂದ ನಿಂದಿತರಾಗಿ, ವಿಧವೆಯರಾಗಿ, ದೌರ್ಭಾಗ್ಯಶಾಲಿಗಳಾಗಿ ಇಂತಹ ದುಃಖಗಳನ್ನು ಅನುಭವಿಸುತ್ತಾರೆ.

ಶತವರ್ಷಸಹಸ್ರಾಂತಮಾತ್ಮಾನಂ ವ್ಯಭಿಚಾರಿಣೀ ।
ನಯೇಜ್ಜಾರಂ ಚ ನಿರಯಂ ಪತಿಂ ಪಾಪೇನ ಯೋಜಯೇತ್ ॥೫೫॥

ವ್ಯಭಿಚಾರಿಣಿಯಾದ ಸ್ತ್ರೀಯು ಒಂದು ಲಕ್ಷ ವರ್ಷಗಳವರೆಗೆ ತನ್ನನ್ನು ಮತ್ತು ತನ್ನ ಜಾರನನ್ನು ನರಕಕ್ಕೆ ತಳ್ಳುತ್ತಾಳೆ ಮತ್ತು ಪತಿಗೆ ಪಾಪಸಂಯೋಗವನ್ನು ಉಂಟು ಮಾಡುತ್ತಾಳೆ.

ಏತದ್ಯದಿ ತು ವಿಜ್ಞಾಯ ಪುನಶ್ಚೇದ್ಧಿತಮಾತ್ಮನಃ ।
ಕುರ್ಯುರ್ಭರ್ತಾರಮಾಶ್ರಿತ್ಯ ತಥಾ ಧರ್ಮಮವಾಪ್ನುಯುಃ ।
ಅಭಿಸಂಯಾಂತಿ ತಾ ಲೋಕಾನ್ ಪುಣ್ಯಾನ್ ಪರಮಶೋಭನಾನ್ ॥

ಇದನ್ನು ತಿಳಿದು, ತನ್ನನ್ನು ತಿದ್ದಿಕೊಂಡು, ತನಗೆ ಹಿತವನ್ನು ಮಾಡಲು ಪುನಃ ಪತಿಯನ್ನು ಆಶ್ರಯಿಸಿ ಧರ್ಮಾಚರಣೆಯನ್ನು ಮಾಡಿದರೆ ಧರ್ಮವನ್ನು ಹೊಂದುತ್ತಾರೆ. ಅಂತಹ ಸ್ತ್ರೀಯರು ಪರಮಶೋಭನವಾದ ಪುಣ್ಯಲೋಕಗಳನ್ನು ಹೊಂದುತ್ತಾರೆ.

ಅವಮತ್ಯ ಚ ಯಾಃ ಪೂರ್ವಂ ಪತಿಂ ದುಷ್ಟೇನ ಚೇತಸಾ ॥೫೭॥

ವರ್ತಮಾನಾಶ್ಚ ಸತತಂ ಭರ್ತೃಣಾಂ ಪ್ರತಿಕೂಲತಾಮ್ ।
ಭರ್ತ್ರಾನುಮರಣಂ ಕಾಲೇ ಯಾಃ ಕುರ್ವಂತಿ ತಥಾವಿಧಾಃ ॥೫೮॥

ಕಾಮಾತ್ ಕ್ರೋಧಾದ್ ಭಯಾನ್ಮೋಹಾದಪಹಾಸ್ಯಾ ಭವಂತಿ ತಾಃ ।
ಆದಿಪ್ರಭೃತಿ ಕುಸ್ತ್ರೀಣಾಂ ತಥಾऽನುಮರಣಂ ವೃಥಾ ॥೫೯॥

ಯಾರು ಮೊದಲಿನಿಂದಲೂ ದುಷ್ಟಮನಸ್ಸಿನಿಂದ ಪತಿಗೆ ಅವಮಾನವನ್ನು ಮಾಡಿ, ಸತತವಾಗಿ ಪತಿಗೆ ಪ್ರತಿಕೂಲರಾಗಿದ್ದು, ಪತಿಯ ಮರಣಕಾಲದಲ್ಲಿ ಅನುಮರಣವನ್ನು ಮಾಡುತ್ತಾರೆಯೋ ಅಂತಹ ಕಾಮದಿಂದಲೂ, ಕ್ರೋಧದಿಂದಲೂ, ಭಯದಿಂದಲೂ, ಮೋಹದಿಂದಲೂ ಕೂಡಿದ ಸ್ತ್ರೀಯರು ಹಾಸ್ಯಾಸ್ಪದರಾಗುತ್ತಾರೆ. ಮೊದಲಿನಿಂದಲೂ ಕೆಟ್ಟ ನಡತೆಯನ್ನು ಹೊಂದಿದ ಸ್ತ್ರೀಯರಿಗೆ ಸಹಗಮನವು ವ್ಯರ್ಥವಾದುದು.

ಆದಿಪ್ರಭೃತಿ ಯಾ ಸಾಧ್ವೀ ಪತ್ಯುಃ ಪ್ರಿಯಪರಾಯಣಾ ।
ಊರ್ಧ್ವಂ ಗಚ್ಛತಿ ಸಾ ತತ್ರ ಭರ್ತ್ರಾನುಮರಣಂ ಗತಾ ॥೬೦॥

ಮೊದಲಿನಿಂದಲೂ ಪತಿಯ ಪ್ರಿಯದಲ್ಲೇ ಆಸಕ್ತಳಾದ ಸಾಧ್ವಿಯಾದ ಸ್ತ್ರೀಯು ಭರ್ತೃವಿನ ಜೊತೆಯಲ್ಲಿ ಸಹಗಮನವನ್ನು ಮಾಡಿ ಊರ್ಧ್ವಲೋಕಗಳಿಗೆ ಹೋಗುತ್ತಾಳೆ.

ಏವಂ ಮೃತಾಯಾ ವೈ ಲೋಕಾನಹಂ ಪಶ್ಯಾಮಿ ಚಕ್ಷುಷಾ ।
ಸ್ಪೃಹಣೀಯಾನ್ ಸುರಗಣೈರ್ಯಾನ್ ಗಚ್ಛಂತಿ ಪತಿವ್ರತಾಃ ॥೬೧॥

ಹೀಗೆ ಮರಣವನ್ನು ಹೊಂದಿದ ಪತಿವ್ರತೆಯರು ಹೋಗುವ, ದೇವತಾ ಗಣಗಳೂ ಬಯಸುವ ಅಂತಹ ಪುಣ್ಯಲೋಕಗಳನ್ನು ನಾನು ಕಣ್ಣಿನಿಂದ ನೋಡುತ್ತಿದ್ದೇನೆ.

ಅಥವಾ ಭರ್ತರಿ ಮೃತೇ ವೈಧವ್ಯಂ ಧರ್ಮಮಾಶ್ರಿತಾ ।
ಮೃತಂ ಚ ಪತಿಮುದ್ದಿಶ್ಯ ಕುರ್ಯುಶ್ಚೈವಂವಿಧಿಂ ತತಃ ॥೬೨॥

ಅಥವಾ ಪತಿಯು ಮರಣ ಹೊಂದಿದಾಗ ವಿಧವೆಯ ಧರ್ಮವನ್ನು ಆಶ್ರಯಿಸಿ ಮೃತನಾದ ಪತಿಯನ್ನು ಉದ್ದೇಶಿಸಿ ಇಂತಹ ಧರ್ಮಾಚರಣೆಯನ್ನು ಮಾಡಬಹುದು.

ಏವಂ ಗಚ್ಛತಿ ಸಾ ನಾರೀ ಪತಿಲೋಕಮನುತ್ತಮಮ್ ।
ರಮಣೀಯಮನಿರ್ದೇಶ್ಯಂ ದುಷ್ಪ್ರಾಪಂ ದೇವಮಾನುಷೈಃ ॥೬೩॥

ಅಂತಹ ನಾರಿಯು ಶ್ರೇಷ್ಠವಾದ, ರಮಣೀಯವಾದ, ನಿರ್ದೇಶಿಸಲು ಅಸಾಧ್ಯವಾದ, ದೇವತೆಗಳಿಂದಲೂ ಮನುಷ್ಯರಿಂದಲೂ ಹೊಂದಲು ಸಾಧ್ಯವಿಲ್ಲದಂತಹ ಶುಭಲೋಕಗಳನ್ನು ಹೊಂದುತ್ತಾಳೆ.

ಪ್ರಾಪ್ನುಯಾತ್ ತಾದೃಶಂ ಲೋಕಂ ಕೇವಲಂ ಯಾ ಪತಿವ್ರತಾ ।
ಇತಿ ತೇ ಕಥಿತಂ ದೇವ ಸ್ತ್ರೀಣಾಂ ಧರ್ಮಮನುತ್ತಮಮ್ ॥೬೪॥

ಕೇವಲ ಪತಿವ್ರತೆಯಾದವಳು ಅಂತಹ ಲೋಕಗಳನ್ನು ಪಡೆಯುತ್ತಾಳೆ. ದೇವನೇ, ಹೀಗೆ ನಾನು ಸ್ತ್ರೀಯರ ಶ್ರೇಷ್ಠವಾದ ಧರ್ಮಗಳನ್ನು ನಿನಗೆ ಹೇಳಿದ್ದೇನೆ.

ತವೈವ ಪ್ರಿಯಕಾಮಿನ್ಯಾ ಯನ್ಮಯೋಕ್ತಂ ತವಾಗ್ರತಃ ।
ಚಾಪಲ್ಯಾನ್ಮಮ ದೇವೇಶ ತದ್ ಭವಾನ್ ಕ್ಷಂತುಮರ್ಹತಿ ॥೬೫॥

ನಿನ್ನ ಪ್ರಿಯವನ್ನೇ ಬಯಸಿ ನಿನ್ನ ಎದುರಿಗೆ ಮಾತನಾಡಿದ ನನ್ನ ಚಾಪಲ್ಯವನ್ನು ದೇವೇಶನೇ, ನೀನು ಕ್ಷಮಿಸಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ಪಾರ್ವತ್ಯಾ ಸ್ತ್ರೀಧರ್ಮಕಥನಂ ನಾಮ
ಪಂಚತ್ರಿಂಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಮೂವತ್ತಾರನೆಯ ಅಧ್ಯಾಯ

ಉಮಾ-ಮಹೇಶ್ವರರ ಸಂವಾದ. ಪಾರ್ವತಿಯಿಂದ ಸ್ತ್ರೀಯರಿಗೆ ಶ್ರೇಷ್ಠಪತಿಲಾಭಕ್ಕೆ ನಿಮಿತ್ತಕಥನ.

ಮಹೇಶ್ವರಃ

ಬ್ರಾಹ್ಮಣಾಃ ಕ್ಷತ್ರಿಯಾಶ್ಚೈವ ಜಾಯಂತೇ ಕೇನ ಕರ್ಮಣಾ ।
ಕಿಂ ಕರ್ಮ ಸುಕೃತಂ ಕೃತ್ವಾ ನಾರೀ ಪ್ರಾಪ್ನೋತಿ ಪಾರ್ವತಿ ॥೧॥

ರಾಜಾನಂ ರಾಜಮಾತ್ರಂ ವಾ ಕೋಶೀ ಧನಪತಿಂ ಪತಿಮ್ ।
ಏತದಿಚ್ಛಾಮಿ ವಿಜ್ಞಾತುಂ ಯಥಾ ತ್ವಂ ಪ್ರಬ್ರವೀಹಿ ಮೇ ॥೨॥

ಮಹೇಶ್ವರ– ಯಾವ ಕರ್ಮದಿಂದ ಬ್ರಾಹ್ಮಣರಾಗಿ ಮತ್ತು ಕ್ಷತ್ರಿಯರಾಗಿ ಜನಿಸುತ್ತಾರೆ? ಎಲೌ ಪಾರ್ವತಿಯೇ, ಯಾವ ಸುಕೃತವನ್ನು ಮಾಡಿ ನಾರಿಯು ರಾಜನನ್ನು, ರಾಜಪುರುಷನನ್ನು, ಕೋಶವುಳ್ಳ ಧನಪತಿಯನ್ನು ಪತಿಯಾಗಿ ಪಡೆಯುತ್ತಾಳೆ? ಇದನ್ನು ತಿಳಿಯಲು ಅಪೇಕ್ಷಿಸುತ್ತೇನೆ. ಅದನ್ನು ನನಗೆ ಸರಿಯಾಗಿ ಹೇಳು.

ಉಮಾ

ಯದಿ ಭರ್ತಾ ಪ್ರವಸತಿ ಕುಟುಂಬಾರ್ಥೇನ ಕೇನಚಿತ್ ।
ವ್ಯಪೇತಮಂಡನಸ್ನಾನಾ ಕ್ಷುಧಾರ್ತಾ ಚ ವಿನಿರ್ಭಯಾ ॥೩॥

ಸ್ವಪತಿಂ ಪತಿತಂ ದೀನಂ ವಿಕಲಂ ವ್ಯಾಧಿಪೀಡಿತಮ್ ।
ನಿರ್ಗುಣಂ ನಿರ್ಧನಂ ವೃದ್ಧಮನಾಥಂ ಮದ್ಯಪಂ ತಥಾ ॥೪॥

ನ ಜಹಾತಿ ರತಾ ಧರ್ಮೇ ಪ್ರಿಯಾ ಪ್ರಿಯತರಾ ಸದಾ ।
ಶುಶ್ರೂಷಮಾಣಾ ಪತ್ಯೌ ತು ಕರೋತ್ಯವಿಮನಾ ಭೃಶಮ್ ॥೫॥

ತೈಸ್ತೈರ್ಯಾ ತು ಪರಿಕ್ಲೇಶೈರ್ಭರ್ತಾರಂ ಪರಿತೋಷಯೇತ್ ।
ಪತಿವ್ರತಾ ಪತಿಮುಖೀ ಪತ್ಯಾವೇಕಮನಾ ಭವೇತ್ ॥೬॥

ಭಕ್ಷ್ಯಾನ್ನಪಾನಭೋಜ್ಯಾನಿ ಕಂದಮೂಲಫಲಂ ತಥಾ ।
ಭರ್ತುರುಚ್ಛೇಷಮಶ್ನಾತಿ ಸ್ವಯಂ ಪೂರ್ವಂ ನ ಖಾದತಿ ॥೭॥

ಏವಂ ಶೀಲಸಮಾಚಾರಾ ಪಾಪೇಭ್ಯಃ ಪರಿಮುಚ್ಯತೇ ।
ಪ್ರಾಪ್ಯ ಲೋಕಾನ್ ಶುಭಾನ್ ದಿವ್ಯಾನ್ ದೈವತೈಃ ಸಹ ಮೋದತೇ ॥೮॥

ಉಮಾ– ಪತಿಯು ಕುಟುಂಬದ ಸಲುವಾಗಿ ಯಾವುದಾದರೂ ಕಾರಣದಿಂದ ಪ್ರವಾಸಕ್ಕೆ ಹೋದಾಗ ಯಾವಳು ಅಲಂಕಾರ, ಅಭ್ಯಂಗವನ್ನು ಮಾಡಿಕೊಳ್ಳದೆ, ಹಸಿವೆಯನ್ನು ತಡೆದುಕೊಂಡು ನಿರ್ಭಯಳಾಗಿರುತ್ತಾಳೆಯೋ ಅಂತಹವಳು ತನ್ನ ಪತಿಯು ಪತಿತನಾಗಲೀ, ದೀನನಾಗಲೀ, ವಿಕಲಾಂಗನಾಗಲೀ, ವ್ಯಾಧಿ

ಪೀಡಿತನಾಗಲೀ, ನಿರ್ಗುಣನಾಗಲೀ, ನಿರ್ಧನನಾಗಲೀ, ವೃದ್ಧನಾಗಲೀ, ಅನಾಥನಾಗಲೀ, ಮದ್ಯಪಾಯಿಯಾಗಲೀ ಅವನನ್ನು ಪರಿತ್ಯಜಿಸದೆ ಧರ್ಮದಲ್ಲಿ ರತಳಾಗಿ ಅವನಿಗೆ ಪ್ರಿಯವನ್ನು ಯಾವಾಗಲೂ ಉಂಟುಮಾಡುತ್ತಾ ಬೇಸರಗೊಳ್ಳದೆ ಅವನನ್ನು ಚೆನ್ನಾಗಿ ಪರಿಚರಿಸುತ್ತಾಳೆಯೋ, ಯಾವಳು ಆಯಾ ಪರಿಕ್ಲೇಶಗಳನ್ನು ಅನುಭವಿಸಿ ಪತಿಯನ್ನು ಸಂತೋಷಪಡಿಸುತ್ತಾಳೆಯೋ, ಪತಿವ್ರತೆಯಾಗಿ ಪತಿಯ ಮುಖವನ್ನೇ ನೋಡುತ್ತಾ ಪತಿಯಲ್ಲಿಯೇ ಮನಸ್ಸಿಟ್ಟಿರುತ್ತಾಳೆಯೋ, ಪತಿಯ ಉಚ್ಛಿಷ್ಟವಾದ ಭಕ್ಷ್ಯ ಭೋಜ್ಯಗಳನ್ನೂ, ಕಂದಮೂಲ ಫಲಗಳನ್ನು ಸೇವಿಸುತ್ತಾಳೆಯೋ, ಸ್ವತಃ ಪತಿಗಿಂತ ಮೊದಲು ಆಹಾರವನ್ನು ಸ್ವೀಕರಿಸುವುದಿಲ್ಲವೋ, ಅಂತಹ ಶೀಲಾಚಾರವುಳ್ಳ ನಾರಿಯು ಪಾಪಗಳಿಂದ ಬಿಡುಗಡೆಯನ್ನು ಹೊಂದುತ್ತಾಳೆ. ದಿವ್ಯವಾದ ಶುಭಲೋಕಗಳನ್ನು ಹೊಂದಿ ದೇವತೆಗಳಿಂದ ಸಂತೋಷಪಡುತ್ತಾಳೆ.

ಸುಕೃತೇನೈವ ಸಾ ನಾರೀ ಜಾಯತೇ ಚಂದ್ರನಿರ್ಮಲಾ ।
ಯದಿ ಚೇನ್ಮಾನುಷೇ ಲೋಕೇ ಕದಾಚಿದುಪಜಾಯತೇ ॥೯॥

ಬ್ರಾಹ್ಮಣಾನಾಂ ಕುಲೇ ಜನ್ಮ ದಿವ್ಯಂ ತಸ್ಯಾ ವಿಧೀಯತೇ ।
ಶ್ರೇಷ್ಠಾನಾಂ ಕ್ಷತ್ರಿಯಾಣಾಂ ವಾ ಕುಲವಂಶೇ ಪ್ರಜಾಯತೇ ॥೧೦॥

ತಾನು ಮಾಡಿದ ಪುಣ್ಯದಿಂದಲೇ ಆ ನಾರಿಯು ಚಂದ್ರನಂತೆ ನಿರ್ಮಲವಾಗಿ ಶೋಭಿಸುತ್ತಾಳೆ. ಮನುಷ್ಯಲೋಕದಲ್ಲಿ ಪುನಃ ಜನಿಸುವುದಾದರೆ ಅವಳಿಗೆ ಬ್ರಾಹ್ಮಣ ಕುಲದಲ್ಲಿ ದಿವ್ಯವಾದ ಜನ್ಮವು ಉಂಟಾಗುತ್ತದೆ. ಅಥವಾ ಶ್ರೇಷ್ಠವಾದ ಕ್ಷತ್ರಿಯ ಕುಲದಲ್ಲಿ ಜನ್ಮವುಂಟಾಗುತ್ತದೆ.

ಸುವರ್ಣಮಣಿಮುಕ್ತಾಶ್ಚ ವಸ್ತ್ರಾಣ್ಯಾಭರಣಾನಿ ಚ ।
ದಾಸೀದಾಸಂ ಧನಂ ಧಾನ್ಯಂ ಭರ್ತಾರಂ ಚ ವಶಾನುಗಮ್ ॥೧೧॥

ಭಕ್ಷ್ಯಭೋಜ್ಯನ್ನಪಾನಾಂಶ್ಚ ಸೋಪಭುಂಕ್ತೇ ನಿಜೇಚ್ಛಯಾ ।
ಮಾನುಷೇಷ್ವೇವ ಭೋಗೇಷು ಸಮಸ್ತಾಸು ಕ್ರಿಯಾಸು ಚ ॥೧೨॥

ಅವಳು ಸುವರ್ಣಮಣಿ ಮುಕ್ತಾಭರಣಗಳಿಂದಲೂ, ವಸ್ತ್ರಾಭರಣಗಳಿಂದಲೂ, ದಾಸೀ-ದಾಸರಿಂದಲೂ, ಧನ-ಧಾನ್ಯಗಳಿಂದಲೂ ಕೂಡಿ ತನ್ನ ವಶವರ್ತಿಯಾದ

ಪತಿಯನ್ನು ಪಡೆಯುತ್ತಾಳೆ. ತನ್ನ ಇಚ್ಛೆಯಿಂದಲೇ ಮಾನುಷ ಭೋಗಗಳಲ್ಲಿಯೂ ಸಮಸ್ತ ಕ್ರಿಯೆಗಳಲ್ಲಿಯೂ ಭಕ್ಷ್ಯಭೋಜ್ಯಗಳನ್ನೂ, ಅನ್ನಪಾನಗಳನ್ನೂ ಅವಳು ಭೋಗಿಸುತ್ತಾಳೆ.

ಭರ್ತುರ್ಹಿ ಯಜಮಾನಸ್ಯ ಯಜ್ಞಪತ್ನೀ ಭವೇದ್ ಧ್ರುವಮ್ ।
ಜ್ಞಾತಿಭ್ಯೋ ಹಿ ಧನಂ ಲಬ್ಧ್ವಾ ಸರ್ವಂ ಭರ್ತುಃ ಪ್ರಯಚ್ಛತಿ ॥೧೩॥

ಯಾಗವನ್ನು ಮಾಡುವ ಯಜಮಾನನಿಗೆ ನಿಶ್ಚಿತವಾಗಿ ಯಪತ್ನಿಯಾಗುತ್ತಾಳೆ. ಜ್ಞಾತಿಗಳಿಂದ ಧನವನ್ನು ತೆಗೆದುಕೊಂಡು ಎಲ್ಲವನ್ನೂ ಪತಿಗೆ ಕೊಡುತ್ತಾಳೆ.

ಪುತ್ರವಕ್ತ್ರಮಿವಾಭೀಕ್ಷ್ಣಂ ಭರ್ತುರ್ವದನಮೀಕ್ಷತೇ ।
ತದ್ಭಾವಗತಸಂಕಲ್ಪಾ ಪತಿಶುಶ್ರೂಷಣೇ ರತಾ ॥೧೪॥

ಮಗನ ಮುಖವನ್ನು ನೋಡುವಂತೆ ಸತತವಾಗಿ ಪತಿಯ ಮುಖವನ್ನು ನೋಡುತ್ತಾಳೆ. ಅವನ ಅಭಿಪ್ರಾಯಕ್ಕೆ ಅನುಗುಣವಾಗಿ ಸಂಕಲ್ಪವನ್ನು ಮಾಡುವವಳಾಗಿ ಪತಿ ಶುಶ್ರೂಷೆಯಲ್ಲಿ ರತಳಾಗಿರುತ್ತಾಳೆ.

ಭರ್ತುರ್ವಚೋऽನುಮನ್ಯೇತ ಕುರ್ವಂತೀ ಪ್ರಿಯವಾದಿನೀ ।
ಭರ್ತುರ್ನ ಪ್ರತಿಕೂಲಾ ಚ ಪತಿಧರ್ಮೇಣ ಯುಜ್ಯತೇ ।
ಏತತ್‌ಪತಿವ್ರತಾಸೂಕ್ತಂ ವ್ರತಂ ದೇವ ಸಮಾಸತಃ ॥೧೫॥

ಪತಿಯ ಮಾತನ್ನು ಅನುಮೋದಿಸುತ್ತಾ ಪತಿಗೆ ಪ್ರಿಯವಾದಿನಿಯಾಗಿರುತ್ತಾಳೆ. ಪತಿಗೆ ಪ್ರತಿಕೂಲವನ್ನು ಮಾಡುವುದಿಲ್ಲ. ಅಂತಹವಳು ಪತಿಧರ್ಮದಿಂದ ಕೂಡಿರುತ್ತಾಳೆ. ಎಲೈ ದೇವನೇ, ಇದು ಪತಿವ್ರತೆಯರಿಗೆ ಹೇಳಲ್ಪಟ್ಟ ವ್ರತದ ಸಂಕ್ಷಿಪ್ತವಾದ ಕಥನ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಷಡ್‌ತ್ರಿಂಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಮೂವತ್ತೇಳನೆಯ ಅಧ್ಯಾಯ

ಸ್ತ್ರೀಯರ ಅನೇಕ ದುಃಖಗಳಿಗೆ ನಿಮಿತ್ತಕಥನ.

ಮಹೇಶ್ವರಃ

ಅನಪತ್ಯಾಃ ಸ್ತ್ರಿಯೋ ದೇವಿ ಜಾಯಂತೇ ಕೇನ ಕರ್ಮಣಾ ।
ಏತದಿಚ್ಛಾಮಿ ವಿಜ್ಞಾತುಂ ತತ್ತ್ವೇನಾಂಬುಜಲೋಚನೇ ॥೧॥

ಮಹೇಶ್ವರ– ದೇವಿಯೇ, ಕಮಲನೇತ್ರೆಯೇ, ಸ್ತ್ರೀಯರು ಯಾವ ಕರ್ಮದಿಂದ ಸಂತತಿಹೀನರಾಗುತ್ತಾರೆಂದು ಕೇಳಲು ಬಯಸುತ್ತೇನೆ.

ಉಮಾ

ಯಾ ನಾರೀ ಕುರುತೇಽನಿಷ್ಟಾಮಪತ್ಯಾನಾಂ ವಿಶೇಷತಃ ।
ತಿರಶ್ಚಾಮೃತುಕಾಲೇಷು ನಾರೀಣಾಮುತ್ಸವೇಷು ಚ ॥೨॥

ಸಾ ಗತ್ವಾ ನರಕಂ ನಾರೀ ತಿರ್ಯಗ್ಯೋನಿಷು ಜಾಯತೇ ।
ತಿರ್ಯಗ್ಯೋನಿಪ್ರಸೂತಾಽಪಿ ಸ್ವಮಪತ್ಯಂ ನ ಪಶ್ಯತಿ ॥೩॥

ಉಮಾ– ಯಾವ ನಾರಿಯು ಋತುಕಾಲದಲ್ಲಿ ಮತ್ತು ನಾರಿಯರ ಉತ್ಸವ ಕಾಲಗಳಲ್ಲಿ ತಿರ್ಯಕ್‌ಪ್ರಾಣಿಗಳ ಶಿಶುಗಳನ್ನು ವಿಶೇಷವಾಗಿ ಕಡೆಗಣಿಸುತ್ತಾಳೆಯೋ ಅವಳು ನರಕವನ್ನು ಅನುಭವಿಸಿ ಅನಂತರ ನೀಚಯೋನಿಗಳಲ್ಲಿ ಜನಿಸುತ್ತಾಳೆ. ನೀಚ ಯೋನಿಯನ್ನು ಹೊಂದಿದಾಗಲೂ ಸಹ ಅವಳು ತನ್ನ ಶಿಶುಗಳನ್ನು ಕಾಣುವುದಿಲ್ಲ.

ದಾಸಭಾವೇ ಚ ಸಾಽವನ್ಯಾಂ ಮಾನುಷ್ಯಂ ಪುನರಾಗತಾ ।
ಏತತ್ ತೇ ಸರ್ವಮಾಖ್ಯಾತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥೪॥

ಅನಂತರ ಈ ಲೋಕದಲ್ಲಿ ಮನುಷ್ಯಯೋನಿಯಲ್ಲಿ ಜನಿಸಿದಾಗಲೂ ಅವಳು ದಾಸಿಯಾಗುತ್ತಾಳೆ. ಇದನ್ನು ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

ಮಹೇಶ್ವರಃ

ಬ್ರಾಹ್ಮಣೇ ಕ್ಷತ್ರಿಯಾ ವೈಶ್ಯಾ ಯಾ ಚಾನ್ಯಾಪಿ ಮಹಾಕುಲಾ ।
ಕೇನ ಕರ್ಮವಿಪಾಕೇನ ದಾಸೀತ್ವಮುಪಗಚ್ಛತಿ ॥೫॥

ಮಹೇಶ್ವರ– ಬ್ರಾಹ್ಮಣ ಸ್ತ್ರೀಯಾಗಲೀ, ಕ್ಷತ್ರಿಯ ಸ್ತ್ರೀಯಾಗಲೀ, ವೈಶ್ಯಸ್ತ್ರೀಯಾಗಲೀ ಅಥವಾ ಮಹಾಕುಲದಲ್ಲಿ ಜನಿಸಿದ ಬೇರೆ ಯಾವ ಸ್ತ್ರೀಯಾಗಲೀ ಯಾವ ಕರ್ಮ ವಿಪಾಕದಿಂದ ದಾಸ್ಯವನ್ನು ಹೊಂದುತ್ತಾರೆ?

ಉಮಾ

ದಾಸೀತ್ವಸ್ಯ ಪರೋ ನಾಸ್ತಿ ದಾಸತ್ವೇऽಪಿ ತಥೈವ ಚ ।
ತಥಾಪಿ ತೇ ಪ್ರವಕ್ಷ್ಯಾಮಿ ಶ್ರೂಯತಾಂ ಗುರುಪುಂಗವ ॥೬॥

ಉಮಾ– ಗುರುಪುಂಗವನೇ, ಸ್ತ್ರೀಯರಿಗಾಗಲೀ, ಪುರುಷರಿಗಾಗಲೀ ದಾಸ್ಯ ಉಂಟಾಗಲು ಕರ್ಮವಿಪಾಕವನ್ನು ಬಿಟ್ಟು ಬೇರೆ ಕಾರಣವಿಲ್ಲ. ಅದನ್ನೂ ನಿನಗೆ ಹೇಳುವೆನು.

ಪ್ರಾಪ್ನುವಂತಿ ಸ್ಮ ದೋಷೇಣ ಪುರಾ ದುಶ್ಚರಿತೈಃ ಸ್ತ್ರಿಯಃ ।
ಮದ್ಯಪಾನರತಾ ನಾರೀ ಸದಾ ಚ್ಛಿದ್ರಗವೇಷಿಣೀ ॥೭॥

ಸುವರ್ಣಮಣಿಮುಕ್ತಾಶ್ಚ ವಸ್ತ್ರಾಣ್ಯಾಭರಣಾನಿ ಚ ।
ಪರೇಷಾಂ ಹರಣಂ ಕೃತ್ವಾ ಯಾ ತುಷ್ಟಿಮುಪಗಚ್ಛತಿ ॥೮॥

ಸ್ತ್ರೀಯರು ಹಿಂದೆ ಮಾಡಿದ ದುಷ್ಕರ್ಮಗಳ ದೋಷದಿಂದ ದಾಸ್ಯವನ್ನು ಹೊಂದುತ್ತಾರೆ. ಮದ್ಯಪಾನರತರಾದ, ಯಾವಾಗಲೂ ಇನ್ನೊಬ್ಬರ ದೋಷವನ್ನು ಹುಡುಕುವ, ಸುವರ್ಣ-ಮಣಿ-ಮುತ್ತುಗಳನ್ನೂ, ವಸ್ತ್ರಗಳನ್ನೂ, ಆಭರಣಗಳನ್ನೂ ಅಪಹರಿಸುವ, ಹೀಗೆ ಪರಸ್ವತ್ತನ್ನು ಅಪಹರಿಸಿ ಸಂತೋಷವನ್ನು ಪಡುವ ನಾರಿಯರು ದಾಸ್ಯವನ್ನು ಹೊಂದುತ್ತಾರೆ.

ಸಾ ಮೃತಾ ನರಕಂ ಯಾತಿ ತಿರ್ಯಗ್ಯೋನೀಶ್ಚ ಗಚ್ಛತಿ ।
ತತ್ರಾಪಕಾರಂ ಕುರ್ವಂತೀ ಮಹಾದೇವ ಪ್ರಸೂತಿಭಿಃ ॥೯॥

ಮೋಹಯತ್ಯಾತ್ಮನಾऽऽತ್ಮಾನಂ ಪರದ್ರವ್ಯಾಪಹಾರಿಣೀ ।
ಅಥ ಮಾನುಷತಾಮೇತಿ ಕದಾಚಿತ್ ಕಾಲಪರ್ಯಯಾತ್ ॥೧೦॥

ಅಂತಹ ಸ್ತ್ರೀಯು ಮೃತಳಾಗಿ ನರಕವನ್ನು ಹೊಂದಿ ತಿರ್ಯಗ್ಯೋನಿಗಳಲ್ಲಿ ಜನಿಸುತ್ತಾಳೆ. ಎಲೈ ಮಹಾದೇವನೇ, ಅಲ್ಲಿಯೂ ತನ್ನಿಂದಲೂ ತನ್ನ ಶಿಶುಗಳಿಂದಲೂ

ಇನ್ನೊಬ್ಬರಿಗೆ ಅಪಕಾರವನ್ನು ಮಾಡಿ ಪುನಃ ಮೋಹಕ್ಕೆ ಒಳಗಾಗುತ್ತಾಳೆ. ಹಿಂದೆ ಪರದ್ರವ್ಯವನ್ನು ಅಪಹರಿಸಿದವಳು ಕಾಲಪರ್ಯಯದಲ್ಲಿ ಒಮ್ಮೆ ಪುನಃ ಮಾನುಷ್ಯವನ್ನು ಹೊಂದುತ್ತಾಳೆ.

ಬ್ರಹ್ಮಕ್ಷತ್ರೇ ಪ್ರಸೂತಾऽಪಿ ದಾಸೀತ್ವಮುಪಗಚ್ಛತಿ ।
ತಸ್ಯಾ ನ ತುಷ್ಯತಿ ಸ್ವಾಮೀ ಕೃತೈಃ ಕರ್ಮಶತೈರಪಿ ॥೧೧॥

ಬ್ರಾಹ್ಮಣ ಕುಲದಲ್ಲಿ ಅಥವಾ ಕ್ಷತ್ರಿಯಕುಲದಲ್ಲಿ ಜನಿಸಿದರೂ ಅವಳು ದಾಸಿಯಾಗುತ್ತಾಳೆ. ಅವಳು ನೂರು ಕರ್ಮಗಳನ್ನು ಮಾಡಿದರೂ ಅವಳ ಸ್ವಾಮಿಯು ಸಂತೋಷಪಡುವುದಿಲ್ಲ.

ನಿತ್ಯಂ ಮೃಷ್ಟಗೃಹಾ ಚೈವ ಭಯೋದ್ವಿಗ್ನಮನಾಃ ಸದಾ ।
ನ ನಿರ್ವೃತಿಮವಾಪ್ನೋತಿ ಸತತಂ ದುಃಖಭಾಗಿನೀ ॥೧೨॥

ಯಾವಾಗಲೂ ಮನೆಯನ್ನು ಸಾರಿಸಿಕೊಂಡು, ಭಯದಿಂದ ಕೂಡಿದ ಮನಸ್ಸುಳ್ಳವಳಾಗಿ, ಸತತವಾಗಿ ದುಃಖವನ್ನು ಹೊಂದಿ, ಸಂತೋಷವನ್ನೇ ಹೊಂದುವುದಿಲ್ಲ.

ಅಜಸ್ರಂ ಕರ್ಮಣಾ ಚೈವ ಪ್ರಸವೋಪಚರೇಣ ಚ ।
ಮೋಕ್ಷಯತ್ಯಾತ್ಮನಾऽऽತ್ಮಾನಂ ಪರದ್ರವ್ಯಾಪಹಾರಿಣೀ ॥೧೩॥

ಪರದ್ರವ್ಯವನ್ನು ಅಪಹರಿಸಿದವಳು ಸತತವಾಗಿ ಹೀಗೆ ಇನ್ನೊಬ್ಬನ ಕರ್ಮವನ್ನು ಮಾಡಿ, ಅವನ ಮಕ್ಕಳನ್ನು ಉಪಚರಿಸಿ, ತಾನು ಹಿಂದೆ ಮಾಡಿದ ಕರ್ಮದಿಂದ ತನ್ನನ್ನು ಬಿಡಿಸಿಕೊಳ್ಳುತ್ತಾಳೆ.

ಮಹೇಶ್ವರಃ

ದಾಸಯೋನಿಪ್ರಸೂತಾನಾಂ ಸೌಖ್ಯಮುತ್ಪದ್ಯತೇ ಕಥಮ್ ॥೧೪॥

ಮಹೇಶ್ವರ– ದಾಸಯೋನಿಯಲ್ಲಿ ಜನಿಸಿದವರಿಗೆ ಹೇಗೆ ಸುಖವುಂಟಾಗುತ್ತದೆ?

ಉಮಾ

ಸುವರ್ಣಮಣಿಮುಕ್ತಾಶ್ಚ ವಸ್ತ್ರಾಣ್ಯಾಭರಣಾನಿ ಚ ।
ಭೋಗಭೂತಾ ವಿಶಿಷ್ಟಾ ಯೇ ಗಂಧಮಾಲ್ಯಾದಯಃ ಶುಭಾಃ ॥೧೫॥

ರತಿರಾಗವಿಧಿಜ್ಞೈಶ್ಚ ಸತತಂ ವಶವರ್ತಿನೀ ।
ರೂಪಾನುರೂಪೈಃ ಪುರುಷೈಃ ರಮತೇ ಶಯನೇ ಶುಭೇ ॥೧೬॥

ಉಮಾ– ದಾಸಿಯಾದವಳು ಭೋಗಸಾಧನಗಳಾದ ಶ್ರೇಷ್ಠವಾದ ಮಣಿ-ಮುತ್ತು, ಸುವರ್ಣಗಳನ್ನೂ ವಸ್ತ್ರಾಭರಣಗಳನ್ನೂ, ಗಂಧ-ಮಾಲ್ಯಗಳನ್ನೂ ಹೊಂದಿ ಸುಂದರರಾದ, ರತಿವಿಶೇಷವನ್ನು ಬಲ್ಲ ಪುರುಷರಿಗೆ ವಶಳಾಗಿ ಅವರ ಜೊತೆಯಲ್ಲಿ ಶ್ರೇಷ್ಠವಾದ ಶಯನದಲ್ಲಿ ಸುಖವನ್ನು ಅನುಭವಿಸುತ್ತಾಳೆ.

ಅಥವಾ ಸಾ ಭವೇದ್ ಭಾರ್ಯಾ ರಾಜ್ಞೋ ರಾಜೋಪಮಸ್ಯ ವಾ ।
ಏತತ್ ತೇ ಸರ್ವಮಾಖ್ಯಾತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥೧೭॥

ಅಥವಾ ಅವಳು ರಾಜನ ಅಥವಾ ರಾಜನಿಗೆ ಸದೃಶನಾದ ಶ್ರೀಮಂತನ ಭಾರ್ಯೆಯಾಗುತ್ತಾಳೆ. ಇದೆಲ್ಲವನ್ನೂ ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

ಮಹೇಶ್ವರಃ

ಉತ್ಪನ್ನಾಶ್ಚಾಂತ್ಯದೇಶೇಷು ಯವನಾದಿಷು ಯೋಷಿತಃ ।
ಕೇನ ಕರ್ಮವಿಪಾಕೇನ ದಾಸೀತ್ವಂ ಯಾಂತಿ ಸುಂದರಿ ॥೧೮॥

ಮಹೇಶ್ವರ– ಎಲೌ ಸುಂದರಿಯೇ, ಯವನಾದಿ ಅಂತ್ಯದೇಶಗಳಲ್ಲಿ ಜನಿಸಿದ ಸ್ತ್ರೀಯರು ಯಾವ ಕರ್ಮವಿಪಾಕದಿಂದ ದಾಸ್ಯವನ್ನು ಹೊಂದುತ್ತಾರೆ?

ಉಮಾ

ಉಚ್ಛಿಷ್ಟಾಹಾರಬಹುಳಾಃ ಸತತಂ ಶೌಚವರ್ಜಿತಾಃ ।
ಭಿಕ್ಷಾಂ ದದತಿ ಚಾಜ್ಞಾನಾಂ ಕುರ್ವಂತಿ ಬಲಿಕರ್ಮ ಚ ॥೧೯॥

ಮದ್ಯಪಾನೇ ಪ್ರಸಕ್ತಾಶ್ಚ ಪರಸ್ವಹರಣೇಷು ಚ ।
ಏತೈಸ್ತು ಕರ್ಮಭಿರ್ನಾರ್ಯೋ ಜಾಯಂತೇ ನಿರಯಾಲಯಾಃ ॥೨೦॥

ಉಮಾ– ಉಚ್ಛಿಷ್ಟ ಆಹಾರವನ್ನೇ ಬಹಳವಾಗಿ ಸೇವಿಸುವುದು, ಸತತವಾಗಿ ಶೌಚ ಹೀನವಾಗಿರುವುದು, ಅಜ್ಞಾನಿಗಳಿಗೆ ಭಿಕ್ಷೆಯನ್ನು ಕೊಡುವುದು, ಶೌಚಾಚಾರವಿಲ್ಲದೆ

ಪೂಜೆಯನ್ನು ಮಾಡುವುದು, ಮದ್ಯಪಾನದಲ್ಲಿ ಮತ್ತು ಪರದ್ರವ್ಯ ಅಪಹಾರದಲ್ಲಿ ಆಸಕ್ತರಾಗುವುದು - ಇಂತಹ ಕರ್ಮಗಳಿಂದ ನಾರಿಯರು ನರಕವಾಸಿಗಳಾಗುತ್ತಾರೆ.

ಯದಿ ಮಾನುಷತಾಂ ಪ್ರಾಪ್ತಾಃ ಕದಾಚಿತ್ ಕರ್ಮಣಃ ಕ್ಷಯಾತ್ ।
ನಾನಾವಿಧೇಷು ಮ್ಲೇಚ್ಛೇಷು ಜನ್ಮ ತಾಸಾಂ ವಿಧೀಯತೇ ॥೨೧॥

ಆ ಕರ್ಮಗಳ ಕ್ಷಯದಿಂದ ಎಂದಾದರೂ ಅವರಿಗೆ ಮನುಷ್ಯಜನ್ಮ ಉಂಟಾದರೆ ಅವರು ನಾನಾ ವಿಧವಾದ ಮ್ಲೇಚ್ಛ ಜಾತಿಗಳಲ್ಲಿ ಜನ್ಮವನ್ನು ಪಡೆಯುತ್ತಾರೆ.

ತಾಃ ಸ್ವದೇಶಾಚ್ಚ್ಯುತಾ ನಾರ್ಯಃ ಪರದೇಶಮುಪಾಗತಾಃ ।
ದಾಸೀತ್ವಮುಪಪದ್ಯಂತೇ ಚೋದಿತಾಃ ಕರ್ಮಭಿಃ ಸ್ವಕೈಃ ॥೨೨॥

ಅಲ್ಲಿಯೂ ಸಹ ಆ ನಾರಿಯರು ತಾವು ಜನಿಸಿದ ದೇಶವನ್ನು ಬಿಟ್ಟು ಹೊರದೇಶಕ್ಕೆ ಹೋಗಿ ತಾವು ಹಿಂದೆ ಮಾಡಿದ ಕರ್ಮಗಳ ಫಲವಾಗಿ ದಾಸೀತ್ವವನ್ನು ಹೊಂದುತ್ತಾರೆ.

ರುದ್ರಃ

ಏತೇಷ್ವೇವ ಚ ಮ್ಲೆಚ್ಛೇಷು ಕರ್ಮಣಾ ಕೇನ ಶೋಭನೇ ।
ಕುಲೀನಾಶ್ಚ ಸಮೃದ್ಧಾಶ್ಚ ಜಾಯಂತೇ ಪ್ರಮದೋತ್ತಮಾಃ ॥೨೩॥

ರುದ್ರ– ಎಲೌ ಶೋಭನೆಯೇ, ಇಂತಹದೇ ಮ್ಲೇಚ್ಛ ಯೋನಿಗಳಲ್ಲಿ ಕುಲೀನರೂ, ಸಮೃದ್ಧರೂ ಆದ ಶ್ರೇಷ್ಠ ಸ್ತ್ರೀಯರು ಕಂಡುಬರುತ್ತಾರೆ. ಯಾವ ಕರ್ಮದಿಂದ ಹೀಗಾಗುತ್ತದೆ?

ಉಮಾ

ಯಾ ನಾರೀ ವಿಪುಳಂ ಭೋಗಂ ಬ್ರಾಹ್ಮಣೇಭ್ಯಃ ಪ್ರಯಚ್ಛತಿ ।
ಆಸನಂ ಶಯನಂ ಯಾನಂ ಭೋಜನೋಪಸ್ಕರಂ ತಥಾ ॥೨೪॥

ರತ್ನಾನಿ ಮಣಿಮುಕ್ತಾಶ್ಚ ವಸ್ತ್ರಾಣ್ಯಾಭರಣಾನಿ ಚ ।
ಗಾಃ ಸುವರ್ಣಂ ಚ ರೂಪ್ಯಂ ಚ ಮಧುರಾಣಾಂ ರಜಸ್ವಲಾ ॥೨೫॥

ಕ್ರೋಧಾವಿಷ್ಟಾ ಚ ಯಾ ದದ್ಯಾತ್ ಶೋಚಂತೀ ವಾಪಿ ದುಃಖಿತಾ ।
ಏವಂವಿಧಾನಾಂ ದಾನಾನಾಂ ಫಲಂ ಮ್ಲೇಚ್ಛೇಷು ಭೋಜ್ಯತೇ ॥೨೬॥

ಉಮಾ– ಯಾವ ನಾರಿಯು ರಜಸ್ವಲೆಯಾಗಿದ್ದಾಗ ಬ್ರಾಹ್ಮಣರಿಗೆ ವಿಪುಲವಾದ ಭೋಗಗಳನ್ನೂ, ಆಸನ-ಶಯನ-ಪಾನ-ಭೋಜನ ಸಾಮಗ್ರಿಗಳನ್ನೂ, ರತ್ನಗಳನ್ನೂ, ಮುತ್ತು-ಮಾಣಿಕ್ಯಗಳನ್ನೂ, ವಸ್ತ್ರಾಭರಣಗಳನ್ನೂ, ಗೋವುಗಳನ್ನೂ, ಸುವರ್ಣ-ರಜತಗಳನ್ನೂ, ಮಧುರವಾದ ಪದಾರ್ಥಗಳನ್ನೂ ಕೊಡುತ್ತಾಳೆಯೋ ಮತ್ತು ಯಾವಳು ಕ್ರೋಧಾವಿಷ್ಟಳಾಗಿ ಅಥವಾ ವ್ಯಯದ ದುಃಖದಿಂದ ಕೂಡಿದವಳಾಗಿ, ಶೋಕಪಡುತ್ತಾ ದಾನಗಳನ್ನು ಮಾಡುತ್ತಾಳೆಯೋ ಅಂತಹ ದಾನಗಳ ಫಲವು ಮ್ಲೇಚ್ಛಯೋನಿಗಳಲ್ಲಿ ಭೋಗಿಸಲ್ಪಡುತ್ತದೆ.

ಸಾಶಿಕಾ ಜಾಯತೇ ಚಾತ್ರ ಮಹಾಕುಲಸಮುದ್ಭವಾ ।
ಕೋಗೀಧನೇಶಂ ಪ್ರಾಪ್ನೋತಿ ಭರ್ತಾರಂ ಸ್ವವಶಾನುಗಮ್ ॥೨೭॥

ಅವಳು ಅಲ್ಲಿ ಮಹಾಕುಲದಲ್ಲಿ ಜನಿಸಿ ಬಹಳ ಭೋಜನವನ್ನು ಮಾಡುವವಳಾಗಿ ತನಗೆ ವಶವರ್ತಿಯಾದ ಧನಿಕನಾದ ಒಬ್ಬ ಪುರುಷನನ್ನು ಪತಿಯಾಗಿ ಪಡೆಯುತ್ತಾಳೆ.

ಮ್ಲೇಚ್ಛಾನಾಂ ತು ಭವೇದ್ ರಾಜ್ಞೋ ಭಾರ್ಯಾ ರಾಜೋಪಮಸ್ಯ ವಾ ।
ಏತತ್ ತೇ ಸರ್ವಮಾಖ್ಯಾತಂ ಕಿಂಭೂಯಃ ಶ್ರೋತುಮಿಚ್ಛಸಿ ॥೨೮॥

ಒಬ್ಬ ಮ್ಲೇಚ್ಛರಾಜನ ಅಥವಾ ರಾಜನಿಗೆ ಸಮಾನನಾದವನ ಭಾರ್ಯೆಯಾಗುತ್ತಾಳೆ. ಇದೆಲ್ಲವನ್ನೂ ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

ಮಹೇಶ್ವರಃ

ಕೇನ ಕರ್ಮವಿಪಾಕೇನ ವೇಶ್ಯಾ ಸ್ತ್ರೀ ಜಾಯತೇ ಪುಮಾನ್ ॥೨೯॥

ಮಹೇಶ್ವರ– ಯಾವ ಕರ್ಮವಿಪಾಕದಿಂದ ಪುರುಷನು ಸ್ತ್ರೀ ಜನ್ಮವನ್ನು ಹೊಂದಿ ವೇಶ್ಯೆಯಾಗುತ್ತಾನೆ?

ಉಮಾ

ಚಿರಂ ಸಾರ್ಥಂಶಯಾ ನಾರೀ ಚಿಂತಯಂತೀ ಬಹೂನ್ ನರಾನ್ ।
ಯುಜ್ಯತೇ ಕಾಲಧರ್ಮೇಣ ವೇಶ್ಯಾಸ್ತ್ರೀ ಸೋಪಪದ್ಯತೇ ॥೩೦॥

ಉಮಾ– ಯಾವಾಗಲೂ ಧನದ ಜೊತೆಯಲ್ಲೇ ಮಲಗಿಕೊಳ್ಳುವ, ಅನೇಕ ಪುರುಷರನ್ನು ಚಿಂತಿಸುವ ನಾರಿಯು ಮರಣವನ್ನು ಹೊಂದಿ ವೇಶ್ಯೆಯಾಗಿ ಜನಿಸುತ್ತಾಳೆ (ಇದು ದೋಷದಿಂದ ಪುರುಷನು ಸ್ತ್ರೀ ಜನ್ಮವನ್ನು ಪಡೆದ ನಾರಿಯ ವಿಚಾರ).

ವೇಶ್ಯಾ ತು ನಿವಸಂತೀ ಯಾ ಸ್ವೇಪ್ಸಿತಂ ಪ್ರಾಪ್ಯ ವೇತನಮ್ ।
ಸುರೂಪೇಪಿ ವಿರೂಪೇ ಚ ಸುಭಗೇ ದುರ್ಭಗೇ ತಥಾ ॥೩೧॥

ಸಮೃದ್ಧೇ ಚ ದರಿದ್ರೇ ಚ ದುಷ್ಕುಲೇ ಚ ಕುಲಾನ್ವಿತೇ ।
ಯೌವನಸ್ಥೇ ಚ ವೃದ್ಧೇ ಚ ವಸ್ತವ್ಯಾऽऽಗಂತುಕೇಷು ಚ ॥೩೨॥

ವೇಶ್ಯೆಯ ಕುಲದಲ್ಲಿ ವಾಸಿಸುವಳು ತಾನು ಬಯಸಿದ ಶುಲ್ಕವನ್ನು ಪಡೆದು ಸುರೂಪನಾದ ಅಥವಾ ಕುರೂಪನಾದ, ಸೌಭಾಗ್ಯವನ್ನು ಹೊಂದಿರುವ ಅಥವಾ ದೌರ್ಭಾಗ್ಯವನ್ನು ಹೊಂದಿರುವ, ಸಮೃದ್ಧನಾದ ಅಥವಾ ದರಿದ್ರನಾದ, ದುಷ್ಕುಲದಲ್ಲಿ ಜನಿಸಿದ ಅಥವಾ ಸತ್ಕುಲದಲ್ಲಿ ಜನಿಸಿದ, ಯುವಕನಾದ ಅಥವಾ ವೃದ್ಧನಾದ ತನ್ನ ಬಳಿಗೆ ಬಂದ ಅಂತಹ ಪುರುಷನ ಜೊತೆಯಲ್ಲಿ ವಾಸಮಾಡಬೇಕು.

ಸಮೋಪಚಾರಾ ಸರ್ವತ್ರ ಸರ್ವೇಷಾಂ ವಶವರ್ತಿನೀ ।
ಏವಂ ಶೀಲಸಮಾಚಾರಾ ದೇವಲೋಕೇ ಮಹೀಯತೇ ॥೩೩॥

ಅವಳು ಎಲ್ಲರಿಗೂ ವಶವರ್ತಿನಿಯಾಗಿದ್ದು, ಎಲ್ಲರಿಗೂ ಒಂದೇ ವಿಧವಾದ ಉಪಚಾರವನ್ನು ಮಾಡಬೇಕು. ಅಂತಹ ಶೀಲ ಮತ್ತು ಆಚಾರವುಳ್ಳ ವೇಶ್ಯೆಯು ಮರಣವನ್ನು ಹೊಂದಿ ದೇವಲೋಕದಲ್ಲಿ ಪೂಜಿಸಲ್ಪಡುತ್ತಾಳೆ.

ಸುಕೃತೇನಾತ್ಮನಃ ಪೂತಾ ಚಂದ್ರವದ್ ಭಾತಿ ನಿರ್ಮಲಾ ।
ಯದಿ ಚೇನ್ಮಾನುಷೇ ಲೋಕೇ ಕದಾಚಿದುಪಪದ್ಯತೇ ॥೩೪॥

ರೂಪವಾನ್ ಸುಭಗಶ್ಚೈವ ಸಮೃದ್ಧೋ ಜಾಯತೇ ಪುಮಾನ್ ।
ಏತತ್ ತೇ ಸರ್ವಮಾಖ್ಯಾತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥೩೫॥

ತನ್ನ ಸತ್ಕರ್ಮದಿಂದ ಪವಿತ್ರಳಾಗಿ, ದೋಷರಹಿತಳಾಗಿ ಚಂದ್ರನಂತೆ ಶೋಭಿಸುತ್ತಾಳೆ. ಮನುಷ್ಯ ಯೋನಿಯಲ್ಲಿ ಯಾವಾಗಲಾದರೂ ಜನ್ಮವನ್ನು ತಾಳಿದರೆ

ರೂಪವನ್ನು ಮತ್ತು ಸೌಭಾಗ್ಯವನ್ನು ಮತ್ತು ಸಮೃದ್ಧಿಯನ್ನು ಪಡೆಯುತ್ತಾಳೆ (ಪುರುಷನು ತನ್ನ ದೋಷಗಳಿಂದ ವೇಶ್ಯೆಯಾಗಿ ಜನಿಸಿದರೆ ಅವನೂ ಇಂತಹ ಧರ್ಮಾಚರಣೆಯಿಂದ ಪುನಃ ರೂಪವಂತನಾದ, ಸೌಭಾಗ್ಯವಂತನಾದ ಪುರುಷನಾಗಿ ಜನಿಸುತ್ತಾನೆ). ನಾನು ನಿನಗೆ ಇದೆಲ್ಲವನ್ನೂ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೇನೆ.

ರುದ್ರಃ

ರಾಜಕಾಪಗಕಾರೀಷು ಲಂಬಿಕಾಸು ನದೀಷು ಚ ।
ಡಾಕಿನೀಷು ವರಾರೋಹೇ ಜಾಯಂತೇ ಯೋಷಿತಃ ಕಥಮ್ ॥೩೬॥

ರುದ್ರ– ಎಲೌ ಸುಂದರಿಯೇ, ಸ್ತ್ರೀಯರು ರಾಜಕಾದಿ (ಅಗಸ) ಯೋನಿಗಳಲ್ಲಿ, ಲಂಬಿಕಾ, ಡಾಕಿನಿ ಮೊದಲಾದ ಭೂತಯೋನಿಗಳಲ್ಲಿ ಮತ್ತು ನದಿಗಳಲ್ಲಿ ಯಾವ ಕಾರಣದಿಂದ ಜನಿಸುತ್ತಾರೆ?

ಪಾರ್ವತೀ

ಮದ್ಯಪಾನರತಾ ನಾರೀ ಪೈಶುನ್ಯಕಲಹಪ್ರದಾ ।
ನ ಶುಶ್ರೂಷತಿ ಭರ್ತಾರಂ ಗೃಹೇಷು ಗೃಹದೇವತಾಃ ॥೩೭॥

ನ ಸಮ್ಮಾರ್ಷ್ಟಿ ಗೃಹಂ ಚೈವ ನ ಕರೋತ್ಯನುಲೇಪನಮ್ ।
ನ ಕರೋತಿ ಬಲಿಂ ಭಿಕ್ಷಾಂ ನ ದದಾತಿ ಕದಾಚನ ॥೩೮॥

ನ ದದ್ಯಾದತಿಥಿಭ್ಯಶ್ಚ ನೃಶಂಸಾ ಶಂಸವರ್ಜಿತಾ ।
ಪ್ರತಿಕೂಲಾ ಚ ಯಾ ಭರ್ತುಃ ಭೃತ್ಯವರ್ಗೇಷು ನಿರ್ಘೃಣಾ ॥೩೯॥

ಆತ್ಮನಃ ಪೋಷಿಕಾ ನಿತ್ಯಂ ಸಂವಿಭಾಗವಿವರ್ಜಿತಾ ।
ಏವಂಶೀಲಸಮಾಚಾರಾ ಸಾ ನಾರೀ ನರಕಂ ವ್ರಜೇತ್ ॥೪೦॥

ಪಾರ್ವತೀ– ಯಾವ ನಾರಿಯು ಮದ್ಯಪಾನರತಳಾಗಿ, ಯಾವಾಗಲೂ ಚಾಡಿ ಹೇಳುವುದರಲ್ಲಿ ರತಳಾಗಿ ಕಲಹವನ್ನುಂಟು ಮಾಡುವಳೋ, ಪತಿಯ ಮಾತನ್ನು ಕೇಳುವುದಿಲ್ಲವೋ, ಮನೆಯಲ್ಲಿ ಗೃಹದೇವತೆಗಳನ್ನು ಪೂಜಿಸುವುದಿಲ್ಲವೋ, ಮನೆಯನ್ನು ಸಾರಿಸಿ ಗುಡಿಸಿ ಶುದ್ಧಮಾಡಿ ಕಾರಣೆಯನ್ನು ತೆಗೆಯುವುದಿಲ್ಲವೋ,

ಪೂಜೆಯನ್ನು ಮಾಡುವುದಿಲ್ಲವೋ, ಯಾರಿಗೂ ಭಿಕ್ಷೆಯನ್ನು ಹಾಕುವುದಿಲ್ಲವೋ, ಯಾವ ಅತಿಥಿಗಳನ್ನೂ ಸತ್ಕರಿಸದೇ ಕ್ರೂರಿಯೂ ನಿಷ್ಠುರಳೂ ಆಗಿ, ಪತಿಗೆ ಪ್ರತಿಕೂಲಳಾಗಿಯೂ, ಭೃತ್ಯವರ್ಗದಲ್ಲಿ ದಯಾಹೀನಳೂ ಆಗಿ ಯಾವುದನ್ನೂ ಹಂಚಿ ಉಪಯೋಗಿಸದೆ, ನಿತ್ಯವೂ ತನ್ನ ಪೋಷಣೆಯಲ್ಲಿಯೂ ನಿರತಳಾಗಿರುತ್ತಾಳೆಯೋ - ಇಂತಹ ಶೀಲಾಚಾರವುಳ್ಳ ನಾರಿಯು ನರಕಕ್ಕೆ ಹೋಗುತ್ತಾಳೆ.

ಯದಿ ಚೇನ್ಮಾನುಷೇ ಲೋಕೇ ಕದಾಚಿದುಪಜಾಯತೇ ।
ಪಾಪಯೋನಿಷು ಜಾಯೇತ ದೈವಪಿತ್ರ್ಯವಿವರ್ಜಿತಾ ॥೪೧॥

ಒಂದು ಪಕ್ಷ ಮನುಷ್ಯ ಲೋಕದಲ್ಲಿ ಜನಿಸಿದರೆ ಅಂತಹವಳು ದೇವ-ಪಿತ್ರರ್ಚನೆಯಿಲ್ಲದ ಪಾಪಯೋನಿಗಳಲ್ಲಿ ಜನಿಸುತ್ತಾಳೆ.

ರಾಜಕಾಪಗಕಾರೀಷು ಲಂಬಿಕಾಸು ನದೀಷು ಚ ।
ಡಾಕಿನೀಷು ಚ ಸರ್ವಾಸು ಜನ್ಮ ತಸ್ಯಾ ವಿಧೀಯತೇ ॥೪೨॥

ಅಗಸಗಿತ್ತಿ, ಶಾಕಿನಿ, ಡಾಕಿನಿ, ಲಂಬಿಕಾ ಮೊದಲಾದ ಭೂತಯೋನಿಗಳಲ್ಲಿ ಅವಳಿಗೆ ಜನ್ಮವುಂಟಾಗುತ್ತದೆ.

ರುದ್ರಃ

ವ್ಯಾಧೀ ವಾ ಗುರುಮಾತಂಗೀ ಚಂಡಾಲೀ ಮಾಂಸಿಕಾಪಿ ವಾ ।
ಜಾಯಂತೇ ಕರ್ಮಣಾ ಕೇನ ಸ್ತ್ರಿಯಃ ಸ್ತ್ರೀಜನಪೂಜಿತೇ ॥೪೩॥

ರುದ್ರ– ಎಲೌ ಸ್ತ್ರೀಯರಿಂದ ಪೂಜಿತಳಾದವಳೇ, ಸ್ತ್ರೀಯರು ಯಾವ ಕರ್ಮದಿಂದ ಬೇಡರ ಜಾತಿಯಲ್ಲಿ, ಮಾದಿಗರ ಜಾತಿಯಲ್ಲಿ, ಚಂಡಾಲರ ಜಾತಿಯಲ್ಲಿ, ಮಾಂಸವನ್ನು ಮಾರುವವರ ಜಾತಿಯಲ್ಲಿ ಜನಿಸುತ್ತಾರೆ?

ಉಮಾ

ಯಾ ನಾರೀ ಪತಿಮುತ್ಸೃಜ್ಯ ಅನ್ಯಸ್ಮಿನ್ ಕುರುತೇ ಮನಃ ।
ಪತ್ಯೌಕಾ ವಿಗತಸ್ನೇಹಾ ಅನ್ಯೇಷು ರಮತೇಽಶುಭಾ ॥೪೪॥

ರಾಜಸ್ನೇಹಾನುರಾಗೇಣ ಭರ್ತಾರಂ ದ್ವೇಷ್ಟಿ ಯಾ ಸ್ವಕಮ್ ।
ಪತಿಂ ವೈಕಲಯೋಗೈರ್ವಾ ವಿಷೈರ್ವಾ ಮೂಲಕರ್ಮಣಾ ॥೪೫॥

ನಿಷ್ಣಾತಾ ಮೃತ್ಯುಭಿಶ್ಚೈತೈರಾಯುಧೈರ್ವಾಪಿ ಪಾತಯೇತ್ ।
ಏವಂಕೃತಿಸ್ತು ಯಾ ಘೋರಾ ನಾರೀ ನರಕನಿರ್ಭಯಾ ।
ಅಗಾಧಮಪ್ಲವಂ ಘೋರಂ ನರಕಂ ಯಾತಿ ಸಾ ಮೃತಾ ॥೪೬॥

ಉಮಾ– ಯಾವ ನಾರಿಯು ಪತಿಯನ್ನು ಬಿಟ್ಟು ಇನ್ನೊಬ್ಬನಲ್ಲಿಯೇ ಮನಸ್ಸನ್ನು ಹೊಂದಿರುತ್ತಾಳೆಯೋ ಅಥವಾ ಪತಿಯ ಮನೆಯಲ್ಲಿಯೇ ಇದ್ದು ಪತಿಯಲ್ಲಿ ಸ್ನೇಹರಹಿತಳಾಗಿ ಬೇರೆಯವರಲ್ಲಿಯೇ ರಮಿಸುತ್ತಾಳೆಯೋ, ರಾಜನಲ್ಲಿ ಅಥವಾ ಧನವಂತನಲ್ಲಿ ಸ್ನೇಹವನ್ನು ಹೊಂದಿ ತನ್ನ ಪತಿಯನ್ನು ತ್ಯಜಿಸುತ್ತಾಳೆಯೋ ಅಥವಾ ವೈಕಲ್ಯವನ್ನುಂಟು ಮಾಡುವ ವಿಷಪ್ರಯೋಗಗಳಲ್ಲಿ ಮತ್ತು ಮೂಲಿಕಾ ಪ್ರಯೋಗಗಳಲ್ಲಿ ಪರಿಣತಳಾಗಿ, ಮೃತ್ಯುಕಾರಕವಾದ ಇಂತಹ ಉಪಾಯಗಳಿಂದ ಅಥವಾ ಆಯುಧಗಳಿಂದಾದರೂ ಪತಿಯನ್ನು ಘಾತಿಸುತ್ತಾಳೆಯೋ - ಅಂತಹ ಘೋರಳಾದ, ನರಕಭಯರಹಿತಳಾದ ನಾರಿಯು ಮರಣವನ್ನು ಹೊಂದಿ ಅಗಾಧವಾದ, ದಾಟಲು ಅಸಾಧ್ಯವಾದ, ಘೋರವಾದ ನರಕವನ್ನು ಹೊಂದುತ್ತಾಳೆ.

ಯದಿ ಚೇನ್ಮಾನುಷೇ ಲೋಕೇ ಜಾಯತೇ ಕರ್ಮಣಃ ಕ್ಷಯಾತ್ ॥೪೭॥

ವ್ಯಾಧೀ ವಾ ಗುರುಮಾತಂಗೀ ಚಂಡಾಲೀ ಮಾಂಸಿಕಾಸು ಚ ।
ಯೋನಿಷ್ವೇವಂ ಪ್ರಕಾರಾಸು ಜನ್ಮ ತಸ್ಯಾ ವಿಧೀಯತೇ ॥೪೮॥

ಕರ್ಮಕ್ಷಯದಿಂದ ಒಂದು ಪಕ್ಷ ಮನುಷ್ಯ ಜನ್ಮವು ಉಂಟಾದರೆ ಅವಳು ಬೇಡರ, ಮಾದಿಗರ, ಚಂಡಾಲರ ಅಥವಾ ಮಾಂಸಿಕರ (ಪ್ರಾಣಿಗಳನ್ನು ಕೊಂದು ಮಾಂಸವನ್ನು ಮಾರುವವರ) ಅಥವಾ ಇಂತಹ ವಿಧವಾದ ಇನ್ನೂ ಅನೇಕ ಯೋನಿಗಳಲ್ಲಿ ಜನ್ಮವನ್ನು ಪಡೆಯುತ್ತಾಳೆ.

ಮಹೇಶ್ವರಃ

ಭರ್ತುರೇವ ಸುತಾನಾಂ ಚ ಭ್ರಾತೄಣಾಮಥವಾ ಪುನಃ ।
ವಧಂ ಬಂಧಂ ಚ ಪಶ್ಯಂತಿ ಕರ್ಮಣಾ ಕೇನ ಯೋಷಿತಃ ॥೪೯॥

ಮಹೇಶ್ವರ– ಸ್ತ್ರೀಯರು ಯಾವ ಕರ್ಮದಿಂದ ಪತಿಯ, ಪುತ್ರರ ಅಥವಾ ಸಹೋದರರ ವಧೆಯನ್ನು ಮತ್ತು ಬಂಧವನ್ನು (ತಮ್ಮ ಕಣ್ಣುಗಳಿಂದ) ನೋಡುತ್ತಾರೆ?

ಉಮಾ

ವಿನಾಪರಾಧಾತ್ ತಿರ್ಯಕ್ಷು ರಂಡಾ ಸಂಯಮ್ಯ ನಿರ್ಘೃಣಾ ।
ಪ್ರಹಾರವ್ಯಥಿತಂ ಕುರ್ಯಾನ್ನಾರೀ ನರಕನಿರ್ಭಯಾ ॥೫೦॥

ಹನ್ಯಮಾನಂ ತಥಾऽऽನ್ಯೈಸ್ತಂ ದೃಷ್ಟ್ವಾ ಚೈವಾಭಿನಂದತಿ ।
ನರಕೇಷು ಚಿರಂ ಸ್ಥಿತ್ವಾ ತಿರ್ಯಗ್ಯೋನಿತ್ವಮೃಚ್ಛತಿ ॥೫೧॥

ಉಮಾ– ವಿಧವೆಯಾದ ಯಾವ ಸ್ತ್ರೀಯು ಅಪರಾಧವನ್ನು ಮಾಡದ ಪ್ರಾಣಿಗಳನ್ನು ಕಟ್ಟಿಹಾಕಿ, ಅವುಗಳಲ್ಲಿ ದಯೆಯನ್ನು ಹೊಂದದೆ, ನರಕಭಯವನ್ನು ತ್ಯಜಿಸಿ ಹೊಡೆದು ಅವುಗಳಿಗೆ ವ್ಯಥೆಯನ್ನುಂಟು ಮಾಡುತ್ತಾಳೆಯೋ ಅಥವಾ ಅಂತಹ ಪ್ರಾಣಿಗಳು ಇನ್ನೊಬ್ಬರಿಂದ ಹೊಡೆಯಲ್ಪಡುವುದನ್ನು ನೋಡಿ ಸಂತೋಷ ಪಡುತ್ತಾಳೆಯೋ ಅವಳು ಬಹುಕಾಲ ನರಕವನ್ನು ಅನುಭವಿಸಿ ತಿರ್ಯಗ್ಯೋನಿಯಲ್ಲಿ ಜನಿಸುತ್ತಾಳೆ.

ವಧಬಂಧಪ್ರಹಾರಾಂಶ್ಚ ತಿರ್ಯಕ್ತ್ವೇ ಚ ಲಭೇತ ಚ ।
ಯದಿ ಚೇನ್ಮಾನುಷೇ ಲೋಕೇ ಕದಾಚಿದುಪಜಾಯತೇ ॥೫೨॥

ವಧಂ ಬಂಧಂ ಚ ಭ್ರಾತೄಣಾಂ ಭರ್ತುಶ್ಚೈವ ಸುತಸ್ಯ ಚ ।
ಮಾತುಃ ಪಿತುಶ್ಚ ಪಶ್ಯಂತಿ ಪುರಾ ದುಶ್ಚರಿತಸ್ತ್ರಿಯಃ ॥೫೩॥

ಆ ತಿರ್ಯಗ್ಯೋನಿಯಲ್ಲಿಯೂ ಸಹ ಅವಳು ವಧೆ, ಬಂಧ ಮತ್ತು ಪ್ರಹಾರಗಳನ್ನು ಹೊಂದುತ್ತಾಳೆ. ಒಂದು ಪಕ್ಷ ಯಾವಾಗಲಾದರೂ ಮನುಷ್ಯಲೋಕದಲ್ಲಿ ಜನಿಸಿದರೆ ಹಿಂದೆ ಅಂತಹ ದುಶ್ಚರಿತ ಮಾಡಿದ ಸ್ತ್ರೀಯರು ತಮ್ಮ ಪತಿಯ, ಪುತ್ರರ, ಸಹೋದರರ, ತಂದೆ-ತಾಯಿಗಳ ವಧೆಯನ್ನು ಮತ್ತು ಬಂಧನವನ್ನೂ ನೋಡುತ್ತಾರೆ.

ತನ್ನಿಮಿತ್ತೋ ಮನಸ್ತಾಪೋ ಅಗ್ನಿದಾಹಸಮಶ್ಚಿರಮ್ ।
ಕರ್ಮಣಃ ಸ್ವಸ್ಯ ಪಾಪಸ್ಯ ವಿಪಾಕೋ ಭುಜ್ಯತೇ ಭುವಿ ॥೫೪॥

ಅದರಿಂದ ಅವರಿಗೆ ಉಂಟಾಗುವ ಮನಸ್ಸಿನ ತಾಪವು ಬಹುಕಾಲದವರೆಗೆ ಅಗ್ನಿದಾಹಕ್ಕೆ ಸಮವಾಗಿರುತ್ತದೆ. ತಾವು ಮಾಡಿದ ಪಾಪಕರ್ಮದ ಫಲವನ್ನು ಅವರು ಭೂಮಿಯಲ್ಲಿ ಅನುಭವಿಸುತ್ತಾರೆ.

ಮಹೇಶ್ವರಃ

ಅಲ್ಪಾಯುಷಃ ಸ್ತ್ರಿಯೋ ದೇವಿ ಜಾಯಂತೇ ಕೇನ ಕರ್ಮಣಾ ।
ವ್ಯಾಧಿಭಿಶ್ಚೈವ ಕ್ಲಿಶ್ಯಂತೇ ಶ್ರೋತುಮಿಚ್ಛಾಮಿ ತತ್ತ್ವತಃ ॥೫೫॥

ಮಹೇಶ್ವರ– ಎಲೌ ದೇವಿಯೇ, ಸ್ತ್ರೀಯರು ಯಾವ ಕರ್ಮದಿಂದ ಅಲ್ಪಾಯುಷಿಗಳಾಗುತ್ತಾರೆ ಮತ್ತು ವ್ಯಾಧಿಗ್ರಸ್ತರಾಗಿ ಕ್ಲೇಶ ಪಡುತ್ತಾರೆ? ಇದನ್ನು ಕೇಳಲು ಬಯಸುತ್ತೇನೆ.

ಉಮಾ

ಸರ್ವಭೂತಾನಿ ಯಾ ನಾರೀ ಸತತಂ ಹಂತಿ ನಿರ್ದಯಾ ।
ಸಾಧುಘ್ನೀ ವಾ ಕೃತಘ್ನೀ ವಾ ನಾರೀ ನರಕನಿರ್ಭಯಾ ॥೫೬॥

ವಿಷದಾ ಗರದಾ ಚೈವ ಸತತಂ ಸಾಹಸಪ್ರಿಯಾ ।
ಗರ್ಭಾನ್‌ನಿಪಾತಯೇಚ್ಚಾಪಿ ಪರಸ್ತ್ರೀಣಾಮಥಾತ್ಮನಃ ॥೫೭॥

ಅಧರ್ಮೇ ರಮತೇ ಚಾಪಿ ಪಾಪಬುದ್ಧಿಸಮನ್ವಿತಾ ।
ನರಕೇ ಸಾ ಚಿರಂ ಸ್ಥಿತ್ವಾ ತಿರ್ಯಗ್ಯೋನಿಷು ಜಾಯತೇ ॥೫೮॥

ಉಮಾ– ಯಾವ ನಾರಿಯು ಸತತ ನಿರ್ದಯಳಾಗಿ ಎಲ್ಲ ಪ್ರಾಣಿಗಳನ್ನೂ ಅವುಗಳು ಸಾಧುಗಳಾಗಿದ್ದರೂ ಹೊಡೆಯುತ್ತಾಳೆಯೋ, ನರಕಭಯರಹಿತಳಾಗಿ ಕೃತಘ್ನಳಾಗಿರುತ್ತಾಳೆಯೋ, ಸತತವೂ ಸಾಹಸಕಾರ್ಯಗಳಲ್ಲಿ ಆಸಕ್ತಳಾಗಿ ಪ್ರಾಣಿಗಳಿಗೆ ವಿಷವನ್ನು ಕೊಡುತ್ತಾಳೆಯೋ, ತನ್ನ ಮತ್ತು ಪರಸ್ತ್ರೀಯರ ಗರ್ಭಪಾತವನ್ನುಂಟು ಮಾಡುತ್ತಾಳೆಯೋ, ಪಾಪಬುದ್ಧಿಯಿಂದ ಕೂಡಿದವಳಾಗಿ ಅಧರ್ಮದಲ್ಲಿಯೇ ಸಂತೋಷಪಡುತ್ತಾಳೆಯೋ ಅಂತಹ ಸ್ತ್ರೀಯು ನರಕದಲ್ಲಿ ಬಹುಕಾಲ ವಾಸಿಸಿ ಅನಂತರ ತಿರ್ಯಗ್ಯೋನಿಯಲ್ಲಿ ಜನಿಸುತ್ತಾಳೆ.

ತಿರ್ಯಗ್ಯೋನೌ ಚ ಸಾ ದೇವ ಯತ್ರ ಯತ್ರೋಪಜಾಯತೇ ।
ತತ್ರ ತತ್ರ ನ ಸಂದೇಹೋ ಜಾತಮಾತ್ರಾ ವಿಯುಜ್ಯತೇ ॥೫೯॥

ಎಲೈ ದೇವನೇ, ತಿರ್ಯಗ್ಯೋನಿಗಳಲ್ಲಿ ಎಲ್ಲೆಲ್ಲಿ ಜನಿಸಿದರೂ ಅವಳು ನಿಸ್ಸಂದೇಹವಾಗಿ ಜನಿಸಿದ ತಕ್ಷಣವೇ ಮರಣವನ್ನು ಹೊಂದುತ್ತಾಳೆ.

ಯದಿ ಚೇನ್ಮಾನುಷೇ ಲೋಕೇ ಕದಾಚಿದುಪಪದ್ಯತೇ ।
ಗರ್ಭೇ ಮೃತ್ಯುಮವಾಪ್ನೋತಿ ಬಾಲ್ಯೇ ವಾऽಪ್ಯಥ ಯೌವನೇ ॥೬೦॥

ವ್ಯತೀತೇ ಯೌವನೇ ವಾಪಿ ಕಾಲಧರ್ಮೇಣ ಯುಜ್ಯತೇ ।
ವ್ಯಾಧಿಭಿಶ್ಚೈವ ಬಹುಭಿಃ ಪುರಾದುಶ್ಚರಿತೈಶ್ಚಿರಮ್ ॥೬೧॥

ಯಾವಾಗಲಾದರೂ ಒಮ್ಮೆ ಮನುಷ್ಯಲೋಕದಲ್ಲಿ ಜನಿಸಿದರೆ ಗರ್ಭದಲ್ಲೇ ಆಗಲಿ ಅಥವಾ ಬಾಲ್ಯದಲ್ಲಾಗಲೀ ಅಥವಾ ಯೌವನದಲ್ಲಾಗಲೀ ಅಥವಾ ಯೌವನವು ಕಳೆದ ತಕ್ಷಣದಲ್ಲಾಗಲೀ ಮರಣವನ್ನು ಹೊಂದುತ್ತಾಳೆ. ಹಿಂದೆ ಬಹುಕಾಲ ಮಾಡಿದ ಅನೇಕ ದುಷ್ಕರ್ಮಗಳಿಂದ, ಅನೇಕ ವ್ಯಾಧಿಗಳಿಂದ ಪೀಡಿಸಲ್ಪಡುತ್ತಾಳೆ.

ಶಯನಾಸನಭೋಗೇಷು ನಿರ್ವೃತಿಂ ಸಾ ನ ವಿಂದತಿ ।
ವೇದನಾರ್ತಾ ವಿಪದ್ಯೇತ ಕಿಂ ಭೂಯಃ ಶ್ರೋತುಮಿಚ್ಛಸಿ ॥೬೨॥

ಶಯನಾಸನ ಭೋಗಗಳಲ್ಲಿ ಸಂತೋಷವನ್ನು ಹೊಂದುವುದಿಲ್ಲ. ರೋಗದಿಂದ ಉಂಟಾದ ವೇದನೆಯಿಂದ ಆರ್ತಳಾಗಿ ಮರಣವನ್ನು ಹೊಂದುತ್ತಾಳೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

ರುದ್ರಃ

ಕೇನ ಕರ್ಮವಿಪಾಕೇನ ಕ್ಲಿಶ್ಯಂತೇ ಕುಲಜಾಃ ಸ್ತ್ರಿಯಃ ।
ಕುಭೋಜನಾಃ ಕುಚೇಲಾಶ್ಚ ದೀನಾಃ ಕೃಪಣಜೀವಕಾಃ ॥೬೩॥

ಪ್ರಾಪ್ನುವಂತಿ ಚ ನಿರ್ವೇದಂ ದುಃಖಿತಾಃ ಪ್ರವ್ರಜಂತಿ ಚ ।
ಪ್ರಾಯೋಪವೇಶನಂ ಚೈವ ರಜ್ಜೂಮಗ್ನಿಪ್ರವೇಶನಮ್ ॥೬೪॥

ಮರುಪ್ರಪತನಂ ಚೈವ ಕಾಂಕ್ಷಂತೇ ಕೇನ ಕರ್ಮಣಾ ।
ಏತದಿಚ್ಛಾಮಿ ವಿಜ್ಞಾತುಂ ಬ್ರೂಹಿ ಮೇ ವರವರ್ಣಿನಿ ॥೬೫॥

ರುದ್ರ– ಸತ್ಕುಲದಲ್ಲಿ ಜನಿಸಿದ ಸ್ತ್ರೀಯರು ಯಾವ ಕರ್ಮದಿಂದ ಕೆಟ್ಟ ಭೋಜನವನ್ನೂ, ಕೆಟ್ಟ ವಸ್ತ್ರಗಳನ್ನೂ ಹೊಂದಿ ದೀನರಾಗಿ ಕಾರ್ಪಣ್ಯದಿಂದ ಜೀವನವನ್ನು ಮಾಡುತ್ತಾರೆ? ಜೀವನದಲ್ಲಿ ನಿರಾಸೆಯನ್ನು ಹೊಂದಿ ದುಃಖಿತರಾಗಿ ಮನೆಯನ್ನು ಬಿಟ್ಟು ಹೊರಟು ಹೋಗುತ್ತಾರೆ? ಅಥವಾ ಪರಪುರುಷನಾಗಲೀ, ಹಗ್ಗದಿಂದ ಗೃಹ

ಬಂಧನವನ್ನಾಗಲೀ, ಅಗ್ನಿಪ್ರವೇಶವನ್ನಾಗಲೀ, ಮರುಭೂಮಿಯಲ್ಲಿ ದೇಹತ್ಯಾಗವನ್ನಾಗಲೀ ಯಾವ ಕರ್ಮದಿಂದ ಬಯಸುತ್ತಾರೆ? ಎಲೌ ಸುಂದರಿಯೇ, ಇದನ್ನು ತಿಳಿಯಲು ಬಯಸುತ್ತೇನೆ. ಇದನ್ನು ನನಗೆ ಹೇಳು.

ಉಮಾ

ಕೂಟಕಾ ಪಟಿಕಾ ನಾರೀ ಸತ್ಯಾರ್ಜವವಿವರ್ಜಿತಾ ।
ಧರ್ಮವಿದ್ವೇಷಿಣೀ ನಿತ್ಯಂ ದಾನವ್ಯಾ ಘಾತಕಾರಿಕಾ ॥೬೬॥

ವ್ರತೋಪವಾಸಹೀನಾ ಚ ದೈವಪೈತ್ರವಿವರ್ಜಿತಾ ।
ಉಚ್ಛಿಂದಕಂ ಯಾಚಿತಕಂ ನ್ಯಾಸಂ ನಿಕ್ಷೇಪಮೇವ ಚ ॥೬೭॥

ಶಕ್ತಿದ್ವಯಾದ್(?) ವಾ ಶಾಠ್ಯಾದ್ ವಾ ಲೋಭಾನ್ಮೋಹಾತ್ ತಥಾಪಿ ವಾ ।
ಯಾಚಮಾನಾ ಸ್ವಕಂ ದ್ರವ್ಯಂ ನ ತದ್ ದಾಪಯತೀಹ ಸಾ ।
ಅನೇನ ಕರ್ಮಣಾ ನಾರೀ ಜಾಯತೇ ನರಕಾಲಯಾ ॥೬೮॥

ಉಮಾ– ಯಾವ ನಾರಿಯು ಸತ್ಯ ಮತ್ತು ಋಜುತನದಿಂದ ರಹಿತಳಾಗಿ ಮೋಸದಲ್ಲಿಯೇ ಆಸಕ್ತಳಾಗಿ ನಿತ್ಯವೂ ಧರ್ಮವನ್ನು ನಿರ್ದೇಶಿಸುತ್ತಾ ದಾನಗಳಿಗೆ ವಿರೋಧವನ್ನುಂಟು ಮಾಡುತ್ತಾಳೆಯೋ, ವ್ರತೋಪವಾಸ ಹೀನಳಾಗಿ, ದೇವ-ಪಿತೃಗಳ ಆರಾಧನೆಯಿಂದ ರಹಿತಳಾಗಿ, ತನ್ನ ಬಳಿ ಇಟ್ಟ ನ್ಯಾಸವನ್ನಾಗಲೀ ನಿಕ್ಷೇಪವನ್ನಾಗಲೀ ತನ್ನ ಶಕ್ತಿಯಿಂದ ಅಥವಾ ಶಾಠ್ಯದಿಂದ ಅಥವಾ ಲೋಭ-ಮೋಹಗಳಿಂದ ಅಪಹರಿಸಿ ಅದನ್ನು ಇಟ್ಟವರು ಯಾಚಿಸಿದರೂ ಅವರ ದ್ರವ್ಯವನ್ನು ಹಿಂದೆ ಕೊಡುವುದಿಲ್ಲವೋ ಅಥವಾ ಇನ್ನೊಬ್ಬರಿಂದ ಹಿಂದೆ ಕೊಡುಸುವುದಿಲ್ಲವೋ ಅಂತಹ ನಾರಿಯು ಆ ಕರ್ಮದಿಂದ ನರಕವಾಸಿಯಾಗುತ್ತಾಳೆ.

ಯದಿ ಚೇನ್ಮಾನುಷೇ ಲೋಕೇ ಕದಾಚಿದುಪಪದ್ಯತೇ ॥೬೯॥

ಕ್ಷೀಣದ್ರವ್ಯೇ ತಥಾ ನಾರೀ ಸಂಭೂತಾऽಥ ಮಹಾಕುಲೇ ।
ಪ್ರಾಪ್ನೋತ್ಯಪಿ ಚ ಭರ್ತಾರಂ ದರಿದ್ರಂ ಕ್ಲೇಶಭಾಗಿನಮ್ ॥೭೦॥

ಅವಳು ಒಂದು ಪಕ್ಷ ಮನುಷ್ಯಜನ್ಮವನ್ನು ಹೊಂದಿದರೆ ದ್ರವ್ಯಹೀನವಾದ ಒಂದು ಮಹಾಕುಲದಲ್ಲಿ ಜನಿಸಿ, ದರಿದ್ರನೂ ಕ್ಲೇಶಭಾಗಿಯೂ ಆದ ಪತಿಯನ್ನು ಪಡೆಯುತ್ತಾಳೆ.

ಏವಂ ದರಿದ್ರತಾಂ ಪ್ರಾಪ್ಯ ಕ್ಲಿಶ್ಯತೇ ಹಿ ಕುಲಾಂಗನಾ ।
ಕ್ರಂದನಾ ಚ ಕುಚೇಲಾ ಚ ಕುಲಕರ್ಮಾಸಮಾಶ್ರಿತಾ ॥೭೧॥

ಹೀಗೆ ಕುಲಾಂಗನೆಯಾದ ಅವಳು ದಾರಿದ್ರ್ಯವನ್ನು ಹೊಂದಿ ಅಳುತ್ತಾ ಕೆಟ್ಟ ವಸ್ತ್ರಗಳನ್ನು ಧರಿಸಿ ಕುಲಕರ್ಮಗಳನ್ನು ಮಾಡದೆ ಕ್ಲೇಶಗಳನ್ನು ಅನುಭವಿಸುತ್ತಾಳೆ.

ಪರೇಷಾಂ ಗೃಹಮಾಸಾದ್ಯ ಪರಪಿಂಡೋಪಜೀವಿಕಾ ।
ಪ್ರಾಪ್ನೋತಿ ಕ್ಲೇಶಮಖಿಲಂ ಕ್ಷಪಂತೀ ಶೀಲಮಾತ್ಮನಃ ॥೭೨॥

ಇನ್ನೊಬ್ಬರ ಮನೆಯನ್ನು ಸೇರಿ ಅವರ ಅನ್ನವನ್ನು ಉಪಜೀವಿಸಿ ತನ್ನ ಶೀಲವನ್ನು ಕಳೆದುಕೊಳ್ಳುತ್ತಾ ಅಖಿಲ ಕ್ಲೇಶವನ್ನು ಹೊಂದುತ್ತಾಳೆ.

ಅಶೌಚದಾಸಭಾವೇನ ಪರಚ್ಛಂದಾನುವರ್ತಿನೀ ।
ಮಾತಾಪಿತೃವಿಯೋಗೇನ ಭರ್ತುಶ್ಚ ಮರಣೇನ ಚ ॥೭೩॥

ದಾರಿದ್ರ್ಯೇಣ ಚ ಕ್ಲಿಶ್ಯಂತೀ ಅಪತ್ಯಮರಣೇನ ಚ ।
ದೌರ್ಭಾಗ್ಯವಧಬಂಧೇನ ಈರ್ಷ್ಯಾಕ್ರೋಧವಶೇನ ಚ ॥೭೪॥

ದುಃಖೈರಿಹೈವಚಾನ್ಯೈಶ್ಚ ಯದಾ ನಿರ್ವೇದಮಾಗತಾ ।
ತದಾ ಪ್ರವ್ರಜಿತಾ ನಾರೀ ಪ್ರವಿಶೇದ್ವಾ ಹುತಾಶನಮ್ ॥೭೫॥

ಶೌಚವಿಲ್ಲದ ದಾಸಭಾವವನ್ನು ಹೊಂದಿ ಇನ್ನೊಬ್ಬರ ಮನಸ್ಸಿಗೆ ಅನುಗುಣವಾಗಿ ವರ್ತಿಸುತ್ತಾ, ಮಾತಾ-ಪಿತೃಗಳನ್ನು ಕಳೆದುಕೊಂಡು, ಪತಿಯು ಮರಣವನ್ನು ಹೊಂದಿ ದಾರಿದ್ರ್ಯದಿಂದ ಕ್ಲೇಶ ಪಡುತ್ತಾ, ಮಕ್ಕಳ ಸಾವಿನಿಂದ ಅಥವಾ ದೌರ್ಭಾಗ್ಯದಿಂದ ಅಥವಾ ವಧೆ ಮತ್ತು ಬಂಧನಗಳಿಂದ, ಅಸೂಯೆ ಮತ್ತು ಕ್ರೋಧಗಳಿಗೆ ವಶಳಾಗಿ ಇಂತಹ ಮತ್ತು ಇನ್ನೂ ಅನೇಕ ದುಃಖಗಳಿಂದ ಪೀಡಿತಳಾಗಿ ಜೀವನದಲ್ಲಿ ವೈರಾಗ್ಯವನ್ನು ಹೊಂದಿ ಮನೆಯನ್ನು ಬಿಟ್ಟುಹೋಗುತ್ತಾಳೆ ಅಥವಾ ಅಗ್ನಿಪ್ರವೇಶವನ್ನು ಮಾಡುತ್ತಾಳೆ.

ಕುರ್ಯಾತ್ ಪ್ರಾಯೋಪವೇಶಂ ವಾ ಮರುಪ್ರಪತನಂ ತಥಾ ।
ರಜ್ಜುಂ ವಾಪ್ಯಥ ಗೃಹ್ಣಾತಿ ಮೃತ್ಯುಂ ವಾಽನ್ಯಂ ಸಮಾಶ್ರಯೇತ್ ॥೭೬॥
ಏವಮೇತಾನ್ಯವಾಪ್ಯಂತೇ ದುಃಖಾನ್ಯಮರನಂದನ ॥೭೭॥

ಪ್ರಾಯೋಪವೇಶವನ್ನಾಗಲೀ ಅಥವಾ ಮರುಭೂಮಿಯಲ್ಲಿ ಪ್ರಪತನವನ್ನಾಗಲೀ ಅಥವಾ ಹಗ್ಗದಿಂದ ನೇಣುಹಾಕಿಕೊಳ್ಳುವುದನ್ನಾಗಲೀ ಅಥವಾ ಬೇರೆ ಯಾವುದಾದರೂ ಮರಣಸಾಧನವನ್ನಾಗಲೀ ಆಶ್ರಯಿಸುತ್ತಾಳೆ. ಎಲೈ ಅಮರನಂದನನೇ, ಹೀಗೆ ಅವಳು ಇಂತಹ ದುಃಖಗಳನ್ನು ಹೊಂದುತ್ತಾಳೆ.

ಈಶ್ವರಃ

ನಾರೀಣಾಂ ದೇಹವೈಕಲ್ಯಂ ಕರ್ಮಣಾ ಕೇನ ಜಾಯತೇ ।
ಸರ್ವಮರ್ಹಸಿ ಮೇ ವಕ್ತುಂ ಸರ್ವದೇವನಮಸ್ಕೃತೇ ॥೭೮॥

ಈಶ್ವರ– ಎಲೌ ಸರ್ವದೇವತೆಗಳಿಂದ ನಮಸ್ಕೃತಳಾದವಳೇ, ಯಾವ ಕರ್ಮದಿಂದ ನಾರಿಯರಿಗೆ ದೇಹವೈಕಲ್ಯ ಉಂಟಾಗುತ್ತದೆ? ಅದೆಲ್ಲವನ್ನೂ ನನಗೆ ಹೇಳಬೇಕು.

ಉಮಾ

ಯಾ ವದತ್ಯನೃತಂ ನಾರೀ ಸತ್ಯಾರ್ಜವವಿವರ್ಜಿತಾ ।
ಮಾನಸ್ತಬ್ಧಾವನಾಶ್ಚೈವ ಭರ್ತಾರಂ ಚಾವಮನ್ಯತೇ ॥೭೯॥

ಪತಿಮಭ್ಯಾಗತಂ ದೃಷ್ಟ್ವಾ ಬ್ರಾಹ್ಮಣಂ ಶ್ವಶುರಂ ತಥಾ ।
ನ ಸಮಭ್ಯೇತಿ ಯಾ ನಾರೀ ಪ್ರದದಾತಿ ನ ಚಾಸನಮ್ ॥೮೦॥

ಸುಖೋಪವಿಷ್ಟಾ ತೂಷ್ಣೀಂಶ್ಚ ರೂಪಯೌವನಗರ್ವಿತಾ ।
ಭರ್ತ್ರಾ ಚಾಪಿ ವಿರುದ್ಧ್ಯೇತ ನಿತ್ಯಮಪ್ರಿಯವಾದಿನೀ ॥೮೧॥

ಯದಾ ಸುರವಿರುದ್ಧಾ ಚ ಸತತಂ ಕಲಹಪ್ರಿಯಾ ।
ಏವಂಶೀಲಸಮಾಚಾರಾ ಕ್ಷಿಪ್ರಂ ನರಕಮಾವ್ರಜೇತ್ ॥೮೨॥

ಉಮಾ– ಯಾವ ನಾರಿಯು ಸತ್ಯ ಮತ್ತು ಋಜುತನದಿಂದ ರಹಿತಳಾಗಿ ಸುಳ್ಳನ್ನೇ ನುಡಿಯುತ್ತಾ, ಅಹಂಕಾರದಿಂದ ಸ್ತಬ್ಧಳಾಗಿ ಪತಿಯನ್ನು ಮನಸ್ಸಿನಲ್ಲಿಯೂ ಚಿಂತಿಸದೆ ಪತಿಗೆ ಅವಮಾನ ಮಾಡುತ್ತಾಳೆಯೋ, ಪತಿಯಾಗಲೀ, ಬ್ರಾಹ್ಮಣನಾಗಲೀ, ಮಾವನಾಗಲೀ ಬಂದಾಗ ಎದ್ದು ಎದುರಿಗೆ ಹೋಗಿ ಅವರಿಗೆ ಆಸನವನ್ನು ಕೊಡುವುದಿಲ್ಲವೋ, ರೂಪ-ಯೌವನಗಳಿಂದ ಗರ್ವವನ್ನು ಹೊಂದಿ ಮಾತನಾಡದೆ ಅಂತಹ ಸಂದರ್ಭದಲ್ಲಿ ಸುಖವಾಗಿ ಕುಳಿತಿರುತ್ತಾಳೆಯೋ, ಪತಿಗೆ ನಿತ್ಯವೂ

ಅಪ್ರಿಯವಾದುದನ್ನೇ ಮಾತನಾಡುತ್ತಾ ಅವನಿಗೆ ವಿರೋಧವನ್ನು ಮಾಡುತ್ತಾಳೆಯೋ, ಬ್ರಾಹ್ಮಣರಿಗೆ ವಿರುದ್ಧವಾಗಿ ನಡೆದುಕೊಂಡು ಸತತವಾಗಿ ಕಲಹಪ್ರಿಯಳಾಗಿರುತ್ತಾಳೆಯೋ ಅಂತಹ ಶೀಲಸಮಾಚಾರವುಳ್ಳವಳು ಶೀಘ್ರವಾಗಿ ನರಕಕ್ಕೆ ಹೋಗುತ್ತಾಳೆ.

ಯದಿ ಚೇನ್ಮಾನುಷೇ ಲೋಕೇ ಕದಾಚಿದುಪಪದ್ಯತೇ ।
ದೇಹವೈಕಲ್ಯಮಾಪ್ನೋತಿ ರಂಡಾ ಷಂಡಾಪಿ ವಾ ಭವೇತ್ ॥೮೩॥

ಮನುಷ್ಯಯೋನಿಯಲ್ಲಿ ಒಂದು ಪಕ್ಷ ಜನಿಸಿದರೆ ದೇಹವೈಕಲ್ಯವನ್ನು ಹೊಂದುತ್ತಾಳೆ, ವಿಧವೆಯಾಗುತ್ತಾಳೆ ಅಥವಾ ನಪುಂಸಕಳಾಗುತ್ತಾಳೆ.

ಜಡಾಂಧಬಧಿರಾ ಮೂಕಾ ಏಕಪಕ್ಷಹತಾಪಿ ವಾ ।
ಕರಾಳದಂತೀ ಲಂಬೋಷ್ಠೀ ಚಾಪಿ ವಾಽವ್ಯಕ್ತಭಾಷಿಣೀ ॥೮೪॥

ವಿಕಲಾಂಗಾ ವಿರೂಪಾ ಚ ಕುಬ್ಜಾ ಚ ವಿಕಲಾನನಾ ।
ಅಥವಾ ನಾಸಿಕೋಷ್ಠಸ್ಯ ದೀನೇಚ್ಛೇದನಮಾಪ್ನುಯಾತ್ ॥೮೫॥

ಬುದ್ಧಿಮಾಂದ್ಯವುಳ್ಳವಳಾಗಿ, ಕುರುಡಿಯಾಗಿ, ಕಿವುಡಿಯಾಗಿ, ಮೂಕಿಯಾಗಿ ಅಥವಾ ಪಾರ್ಶ್ವವಾಯು ಪೀಡಿತಳಾಗಿ, ಕಪ್ಪಾದ ಹಲ್ಲುಗಳನ್ನು ಹೊಂದಿದವಳಾಗಿ, ಇಳಿ ಬಿದ್ದ ತುಟಿಯನ್ನು ಹೊಂದಿ, ಅಸ್ಪಷ್ಟವಾಗಿ ಮಾತನಾಡುವವಳಾಗಿ, ಅಂಗವೈಕಲ್ಯವನ್ನು ಹೊಂದಿ, ಕುರೂಪಿಯಾಗಿ, ಕುಬ್ಜೆಯಾಗಿ, ಸೊಟ್ಟ ಬಾಯಿ ಉಳ್ಳವಳಾಗಿ ಅಥವಾ ಮೊಲದಂತೆ ಮೂರು ತುಟಿಯುಳ್ಳವಳಾಗಿ ಜನಿಸುತ್ತಾಳೆ.

ಮಹೇಶ್ವರಃ

ಅಲಂಕಾರಮಹಂ ಸ್ತ್ರೀಣಾಂ ಶ್ರೋತುಮಿಚ್ಛಾಮಿ ಶೋಭನೇ ।
ಉತ್ಸವೇ ವ್ಯಸನೇ ಚ ಸ್ಯಾದ್ ಯೇನ ನಿತ್ಯಮಲಂಕೃತಾ ॥೮೬॥

ಉಮಾ

ಸುವರ್ಣಮಣಿಮುಕ್ತಾಶ್ಚ ವಸ್ತ್ರಾಣ್ಯಾಭರಣಾನಿ ಚ ।
ಆನೀಯಮೇತದ್ ಭವತಿ ಭಗವನ್ ಸ್ತ್ರೀಜನಸ್ಯ ತು ॥೮೭॥

ಪೂಜ್ಯನೇ, ಸ್ತ್ರೀಜನಕ್ಕೆ ಸುವರ್ಣ, ಮುತ್ತು ಮತ್ತು ವಸ್ತ್ರಾಭರಣಗಳನ್ನು ತಂದುಕೊಡಬೇಕಾಗುತ್ತದೆ.

ವಿಭೂಷಣಂ ರಕ್ಷಣೀಯಂ ಚೋರೇಭ್ಯಃ ಸರ್ವತೋ ಭಯಾತ್ ।
ಭೂಷಣಾನಾಂ ತು ಸರ್ವೇಷಾಂ ಶೃಣು ಭೂಷಣಮುತ್ತಮಮ್ ॥೮೮॥

ಒಡವೆಗಳನ್ನು ಯಾವಾಗಲೂ ಚೋರರ ಭಯದಿಂದ ರಕ್ಷಿಸಬೇಕು. ಎಲ್ಲ ಭೂಷಣಗಳಲ್ಲಿಯೂ ಉತ್ತಮವಾದ ಭೂಷಣವನ್ನು ಹೇಳುತ್ತೇನೆ, ಕೇಳು.

ವ್ರತಂ ಚ ಭೂಷಣಂ ಸ್ತ್ರೀಣಾಂ ಸುಶೀಲಶ್ಚ ವಿಭೂಷಣಮ್ ।
ವೃದ್ಧೋ ವಿರೂಪೋ ಬೀಭತ್ಸೋ ನಿರ್ಧನೋ ವಿಗುಣಸ್ತಥಾ ॥೮೯॥

ನಿರ್ಗುಣಸ್ತು ತಥೈವ ಸ್ಯಾತ್ ಸ್ತ್ರೀಣಾಂ ಭೂಷಣಮುತ್ತಮಮ್ ।
ವೈಧವ್ಯಸದೃಶಂ ದುಃಖಂ ಸ್ತ್ರೀಣಾಂ ಚೈವ ನ ವಿದ್ಯತೇ ॥೯೦॥

ಪಾತಿವ್ರತ್ಯವು ಸ್ತ್ರೀಯರಿಗೆ ಭೂಷಣ. ಒಳ್ಳೆಯ ನಡತೆಯು ವಿಶೇಷವಾಗಿ ಭೂಷಣ. ಪತಿಯು ವೃದ್ಧನಾಗಿರಲಿ, ವಿರೂಪನಾಗಿರಲಿ, ಭಯಂಕರನಾಗಿ ಕಾಣಲಿ, ನಿರ್ಧನನಾಗಿರಲಿ ಅಥವಾ ಗುಣಶೂನ್ಯನಾಗಿರಲಿ, ಏನೇ ಆದರೂ ಪತಿಯೇ ಸ್ತ್ರೀಯರಿಗೆ ಶ್ರೇಷ್ಠವಾದ ಭೂಷಣ. ಸ್ತ್ರೀಯರಿಗೆ ವೈಧವ್ಯಕ್ಕೆ ಸದೃಶವಾದ ಇನ್ನೊಂದು ದುಃಖವು ಇರುವುದಿಲ್ಲ.

ರತ್ನಂ ಗಂಧಶ್ಚ ಪುಷ್ಪಂ ಚ ಸೌಖ್ಯಂ ಬಹುವಿಧಂ ತಥಾ ।
ಭರ್ತ್ರಾ ವೈ ವಿಪ್ರಯುಕ್ತಾನಾಂ ಸ್ತ್ರೀಣಾಂ ತಜ್ಜಾಯತೇ ವಿಷಮ್ ॥೯೧॥

ರತ್ನಗಳು, ಗಂಧ-ಪುಷ್ಪಗಳು, ಹಾಗೆಯೇ ಬಹುವಿಧ ಸೌಖ್ಯ- ಎಲ್ಲವೂ ಪತಿಹೀನಳಾದ ಸ್ತ್ರೀಗೆ ವಿಷವಾಗುತ್ತದೆ.

ಮದದರ್ಪಮನಾಯಾಸಂ ರೂಪಂ ವರ್ಣಂ ವಪುಃ ಶುಭಮ್ ।
ನಿತ್ಯಂ ದಾಸಜನಸ್ಯೇಕ್ಷಾ ಧೈರ್ಯಮಪ್ರತಿಯೋಷಿತಾಮ್ ॥೯೨॥

ತಾಸಾಂ ಪುತ್ರೇಷು ಪೌತ್ರೇಷು ಮಾತುಲಭ್ರಾತೃಗೌರವಮ್ ।
ತಥೈವ ಪ್ರತ್ಯಯಸ್ನೇಹೋ ವೈಧವ್ಯೇನ ಪ್ರಣಶ್ಯತಿ ॥೯೩॥

ಮದ, ಅಹಂಕಾರ, ಆಯಾಸರಾಹಿತ್ಯ, ರೂಪ, ದೇಹದ ಬಣ್ಣ ಮತ್ತು ಕಾಂತಿ, ದಾಸಜನರ ಮೇಲ್ವಿಚಾರಣೆ, ಧೈರ್ಯ, ಅನುಕೂಲವಾದ ಸ್ತ್ರೀಯ ಮಕ್ಕಳು ಮೊಮ್ಮಕ್ಕಳು ಮತ್ತು ಸೋದರಮಾವ ಮತ್ತು ಸಹೋದರ ರೂಪರಾದ ಸಂಬಂಧಿಕರಲ್ಲಿ ಇರುವ ನಂಬಿಕೆ ಮತ್ತು ಸ್ನೇಹ ಇವೆಲ್ಲವೂ ವೈಧವ್ಯದಿಂದ ನಾಶವನ್ನು ಹೊಂದುತ್ತವೆ.

ಸಂಯೋಗೇ ಸಹವಾಸೇ ಚ ಬಂಧುವರ್ಗಸುಹೃಜ್ಜನೇ ।
ಪ್ರೀತಿಃ ಶಿಥಿಲತಾಂ ಯಾತಿ ವಿಸ್ರಂಭಃ ಪ್ರಣಯಸ್ತಥಾ ॥೯೪॥

ಇನ್ನೊಬ್ಬರ ಜೊತೆಯಲ್ಲಿ ವಾಸ ಮಾಡುವುದಕ್ಕೆ ಬಂಧುವರ್ಗದಲ್ಲಿ ಮತ್ತು ಸುಹೃಜ್ಜನರಲ್ಲಿ ಇರಬೇಕಾದ ಪ್ರೀತಿಯು ಶಿಥಿಲವಾಗುತ್ತದೆ. ಇನ್ನೊಬ್ಬರಲ್ಲಿರುವ ಸ್ನೇಹವೂ, ವಿಶ್ವಾಸವೂ ಕ್ಷೀಣವಾಗುತ್ತದೆ.

ಏವಮಾದಿಷು ದುಃಖೇಷು ಖಿದ್ಯಂತೇ ವಿಧವಾಃ ಸ್ತ್ರಿಯಃ ।
ನಾನ್ಯದ್ ದುಃಖತರಂ ಸ್ತ್ರೀಣಾಂ ವೈಧವ್ಯೇನ ಸಮಂ ಭವೇತ್ ॥೯೫॥

ವಿಧವೆಯರಾದ ಸ್ತ್ರೀಯರು ಇಂತಹ ದುಃಖಗಳಲ್ಲಿ ಬಳಲುತ್ತಾರೆ. ಸ್ತ್ರೀಯರಿಗೆ ವೈಧವ್ಯಕ್ಕೆ ಸಮವಾದ ಇನ್ನೊಂದು ದುಃಖವಿಲ್ಲ.

ಯದಿ ಕೋಟೀಧನಾ ನಾರೀ ಪುತ್ರೈಶ್ಚ ಬಹುಭಿರ್ಯುತಾ ।
ಭರ್ತ್ರಾ ವೈ ವಿಪ್ರಯುಕ್ತಾಯಾ ಜೀವಿತಂ ಮರಣಂ ಸ್ಮೃತಮ್ ॥೯೬॥

ಸ್ತ್ರೀಗೆ ಕೋಟಿಯಷ್ಟು ಧನವಿದ್ದರೂ, ಅನೇಕ ಪುತ್ರ-ಪೌತ್ರರಿದ್ದರೂ ಪತಿಯ ವಿಯೋಗ ಉಂಟಾದರೆ ಅವಳ ಜೀವನವು ಮರಣಕ್ಕೆ ಸಮಾನವಾಗಿರುತ್ತದೆ.

ಗಂಧಮಾಲ್ಯೈರಲಂಕಾರೈರ್ವಸ್ತ್ರಾಭರಣಭೂಷಣೈಃ ।
ಮಹದ್ಭಿರ್ವಾಪಿ ರತ್ನೌಘೈಃ ವಿಧವಾ ಕಿಂ ಕರಿಷ್ಯತಿ ॥೯೭॥

ಗಂಧ-ಮಾಲ್ಯಗಳಿಂದಾಗಲೀ, ಅಲಂಕಾರದಿಂದಾಗಲೀ, ವಸ್ತ್ರಾಭರಣ ಭೂಷಣಗಳಿಂದಾಗಲೀ, ಮಹಾರತ್ನ ಸಮೂಹಗಳಿಂದಾಗಲೀ ವಿಧವೆಯು ಏನು ಮಾಡುತ್ತಾಳೆ?

ವ್ಯಪೇತಮಂಡನಸ್ನಾನಾ ಪುಷ್ಪಭೂಷಣವರ್ಜಿತಾ ।
ಶ್ರಿಯಂ ಸಖೀನಾಂ ಪಶ್ಯಂತೀ ಜೀವಲೋಕೇ ಮೃತೋಪಮಾ ॥೯೮॥

ಮಂಗಳಸ್ನಾನವಿಲ್ಲದೆ ಪುಷ್ಪಗಳ ಅಲಂಕಾರರಹಿತಳಾಗಿ ಸಖಿಯರ ಸೌಭಾಗ್ಯವನ್ನು ನೋಡುತ್ತಾ ಜೀವಲೋಕದಲ್ಲಿ ಶವದಂತಿರುತ್ತಾಳೆ.

ನಾತಂತ್ರೀ ವಾದ್ಯತೇ ವೀಣಾ ನಾಚಕ್ರೋ ವರ್ತತೇ ರಥಃ ।
ನಾಪತಿಃ ಸುಖಮೇಧೇತ ನಾರೀ ಬಂಧುಶತೈರಪಿ ॥೯೯॥

ತಂತಿಯಿಲ್ಲದ ವೀಣೆಯು ನುಡಿಯುವುದಿಲ್ಲ. ಚಕ್ರವಿಲ್ಲದ ರಥವು ಚಲಿಸುವುದಿಲ್ಲ. ಅದರಂತೆ ನೂರು ಬಾಂಧವರಿದ್ದರೂ ಪತಿಯಿಲ್ಲದ ನಾರಿಯು ಸುಖವನ್ನು ಹೊಂದುವುದಿಲ್ಲ.

ನಹಿ ಸ್ವಚ್ಛಂದತೋ ದ್ರವ್ಯಂ ಗೃಹಂ ಮಾತೃಕಪೈತೃಕಮ್ ।
ಉಪಭೋಕ್ತುಂ ಸ್ತ್ರಿಯೋಽರ್ಹಂತಿ ದಾತುಂ ವಾಪ್ಯಥ ಕಸ್ಯಚಿತ್ ॥೧೦೦॥

ನಾರಿಯರು ತಮ್ಮ ಮನಸ್ಸಿಗೆ ಬಂದಂತೆ ತಂದೆ-ತಾಯಿಯರ ಧನವನ್ನಾಗಲೀ, ಗೃಹವನ್ನಾಗಲೀ ಭೋಗಿಸಲು ಅಥವಾ ಯಾರಿಗಾದರೂ ದಾನ ಮಾಡಲು ಸಮರ್ಥರಾಗುವುದಿಲ್ಲ.

ಸ್ವಚ್ಛಂದಭೋಗ್ಯಂ ನಾರೀಣಾಂ ಭರ್ತುರೇವ ಧನಂ ಭವೇತ್ ।
ದ್ರವ್ಯಂ ವಾ ಯದಿ ವಾ ಧಾನ್ಯಮ್ ಋಣಂ ವಾಪಿ ಚ ಯದ್ಭವೇತ್ ॥

ಪತಿಯ ಧನವು ಮಾತ್ರ ಅವಳ ಸ್ವಚ್ಛಂದಭೋಗಕ್ಕೆ ಅರ್ಹವಾದುದು. ಪತಿಯ ದ್ರವ್ಯವಾಗಲೀ ಅಥವಾ ಧಾನ್ಯವಾಗಲೀ ಅಥವಾ ಋಣವಾಗಲೀ ಅವಳು ಅದರ ಭೋಗಕ್ಕೆ ಅರ್ಹಳಾಗುತ್ತಾಳೆ, ಬಾಧ್ಯತೆಯನ್ನು ಹೊಂದುತ್ತಾಳೆ.

ಮಿತಂ ದದಾತಿ ಹಿ ಪಿತಾ ಮಿತಂ ಮಾತಾ ಮಿತಂ ಸುತಾಃ ।
ಅಮಿತಸ್ಯ ಚ ದಾತಾರಂ ಕಾ ಪತಿಂ ನಾಭಿನಂದತಿ ॥೧೦೨॥

ತಂದೆಯು ಮಿತವಾದ ಸುಖವನ್ನೇ ಕೊಡುತ್ತಾನೆ. ತಾಯಿಯಾಗಲೀ, ಪುತ್ರರಾಗಲೀ ಮಿತವಾದ ಸುಖವನ್ನೇ ಕೊಡುತ್ತಾರೆ. ಅಮಿತವಾದ (ಈ ಲೋಕದ ಮತ್ತು ಪರಲೋಕದ) ಸುಖವನ್ನು ಕೊಡುವ ಪತಿಯನ್ನು ಯಾವ ನಾರಿಯು ಅಭಿನಂದಿಸುವುದಿಲ್ಲ?

ತಸ್ಮಾದ್ ಭರ್ತೃವಿಹೀನಾನಾಂ ಶ್ರೇಯಾನ್ ಮೃತ್ಯುರ್ನ ಜೀವಿತಮ್ ।
ಏವಮೇತೇ ಮಯಾ ಪ್ರೋಕ್ತಾಃ ಸ್ತ್ರೀಧರ್ಮಾಸ್ತ್ರಿದಶೇಶ್ವರ ॥೧೦೩॥

ಆದ್ದರಿಂದ ಪತಿಯನ್ನು ಕಳೆದುಕೊಂಡ ನಾರಿಯರಿಗೆ ಮರಣವು ಒಳ್ಳೆಯದು. ಬದುಕುವುದು ಒಳ್ಳೆಯದಲ್ಲ. ಎಲೈ ದೇವತೆಗಳಿಗೆ ಒಡೆಯನೇ, ನಾನು ಹೀಗೆ ಸ್ತ್ರೀ ಧರ್ಮಗಳನ್ನು ಹೇಳಿದ್ದೇನೆ.

ನಾರದಃ

ಏವಂ ವದಂತೀಂ ರುದ್ರಾಣೀಂ ಲಜ್ಜಾಭಾವಸಮನ್ವಿತಾಮ್ ।
ತೋಷಯಾಮಾಸ ದೇವೇಶೋ ವಾಚಾ ಸಂಜನಯನ್ ಪ್ರಿಯಮ್ ॥

ನಾರದ– ಹೀಗೆ ಮಾತನಾಡುತ್ತಾ ಲಜ್ಜೆಯಿಂದ ಕೂಡಿದ ಪಾರ್ವತಿಯನ್ನು ಕುರಿತು ದೇವೇಶನಾದ ಮಹೇಶ್ವರನು ಮಾತಿನಿಂದ ಅವಳಿಗೆ ಪ್ರಿಯವನ್ನುಂಟು ಮಾಡುತ್ತಾ ಸಂತೋಷಪಡಿಸಿದನು.

ಋಷಯೋ ದೇವಗಂಧರ್ವಾಃ ಸಸುರಾಶ್ಚ ಸರಾಕ್ಷಸಾಃ ।
ದೇವತಾಪ್ರಮದಾಶ್ಚಾಪಿ ದೇವನದ್ಯಶ್ಚ ಸಂಗತಾಃ ॥೧೦೫॥

ಪ್ರಣಮ್ಯ ಶಿರಸಾ ದೇವೀಂ ಸ್ತುತಿಭಿಶ್ಚಾಭಿತುಷ್ಟುವುಃ ।
ಪೂಜಯಾಮಾಸುರಪರೇ ದೇವದೇವಂ ಮುದಾಯುತಾಃ ॥೧೦೬॥

ಅಲ್ಲಿನೆರೆದಿದ್ದ ಋಷಿಗಳೂ, ದೇವತೆಗಳೂ, ಗಂಧರ್ವರೂ, ರಾಕ್ಷಸರೂ, ದೇವತಾ ಸ್ತ್ರೀಯರೂ, ದೇವನದಿಗಳೂ ದೇವಿಯಾದ ಪಾರ್ವತಿಗೆ ಶಿರಸಾ ಪ್ರಣಾಮವನ್ನು ಮಾಡಿ ಅನೇಕ ಸ್ತೋತ್ರಗಳಿಂದ ಸ್ತೋತ್ರ ಮಾಡಿದರು. ಇನ್ನು ಕೆಲವರು ಸಂತೋಷದಿಂದ ಕೂಡಿದವರಾಗಿ ದೇವದೇವನಾದ ಮಹೇಶ್ವರನನ್ನು ಪೂಜಿಸಿದರು.

ಅಪಾರವಿಸ್ಮಯಾನ್ಯೂಚುಸ್ತಮರ್ಥಮಭಿಚಿಂತ್ಯ ಚ ।
ಸಂಹೃಷ್ಟಮನಸಃ ಸರ್ವೇ ಸಂವಾದಂ ಚಿಂತಯನ್ ಮುಹುಃ ॥೧೦೭॥

ಆ ಸಂವಾದವನ್ನು ಕೇಳಿದವರೆಲ್ಲಾ ಅದನ್ನು ಪುನಃ ಪುನಃ ಚಿಂತಿಸುತ್ತಾ ಸಂತೋಷದಿಂದ ಕೂಡಿದ ಮನಸ್ಸುಳ್ಳವರಾಗಿ ಈ ಸಂವಾದವು ಅಪಾರವಾದ ಅರ್ಥವನ್ನು ಹೊಂದಿದುದು ಮತ್ತು ಆಶ್ಚರ್ಯಕರವಾದುದು ಎಂದು ಹೇಳಿದರು.

ತತ್ರ ತಸ್ಮಿನ್ ಕ್ಷಣೇ ದೇವೋ ದೇವೀಂ ವಚನಮಬ್ರವೀತ್ ॥೧೦೮॥

ಅಲ್ಲಿ ಆ ಕ್ಷಣದಲ್ಲಿ ಮಹೇಶ್ವರನು ಪಾರ್ವತಿಯನ್ನು ಕುರಿತು ಹೇಳಿದನು.

ಶೃಣು ಕಲ್ಯಾಣಿ ಮದ್ವಾಕ್ಯಂ ಯದಿದಂ ತು ತ್ವಯಾ ಮಯಾ ।
ಕೃತಂ ಸಂವಾದಮಭವತ್ ತ್ರೈಲೋಕ್ಯಂ ತದ್ ಭವಿಷ್ಯತಿ ॥೧೦೯॥

ಖ್ಯಾತಂ ಪುಣ್ಯಂ ಪವಿತ್ರಂ ಚ ಭವಿತಾ ಚ ನ ಸಂಶಯಃ ।
ಯ ಇದಂ ಶ್ರಾವಯೇದ್ ವಿಪ್ರಾನ್ ಸಂವಾದಂ ಚಾವಯೋಃ ಪ್ರಿಯೇ ॥

ಶುಚಿರ್ಭೂತ್ವಾ ನರಃ ಪ್ರಾಪ್ಯ ಯಜ್ಞಸ್ಯ ಫಲಮಾಪ್ನುಯಾತ್ ।
ಯತ್ನತಃ ಶೃಣುಯಾನ್ನಿತ್ಯಂ ಧರ್ಮಂ ತದ್ಗತಮಾನಸಃ ॥೧೧೧॥

ಕಲ್ಯಾಣಿಯೇ, ಇದನ್ನು ಕೇಳು. ನನಗೆ ಮತ್ತು ನಿನಗೆ ನಡೆದ ಈ ಸಂವಾದವೇನಿದೆಯೋ ಅದು ಮೂರುಲೋಕಗಳಲ್ಲಿಯೂ ಹರಡುತ್ತದೆ. ಇದು ಪ್ರಖ್ಯಾತವಾಗಿಯೂ, ಪುಣ್ಯಪ್ರದವಾಗಿಯೂ, ಪವಿತ್ರವಾಗಿಯೂ ಆಗುವುದರಲ್ಲಿ ಸಂಶಯವಿಲ್ಲ. ಎಲೌ ಪ್ರಿಯೆಯೇ, ಯಾವ ಮಾನವನು ವಿಪ್ರರನ್ನು ಸಮೀಪಿಸಿ ಶುಚಿಯಾಗಿ ಈ ನಮ್ಮ ಸಂವಾದವನ್ನು ಶ್ರವಣ ಮಾಡಿಸುತ್ತಾನೆಯೋ ಅವನು ಯಜ್ಞದ ಫಲವನ್ನು ಹೊಂದುತ್ತಾನೆ. ಮನುಷ್ಯನು ಶಿವ-ಪಾರ್ವತಿಯರಲ್ಲೇ ಮನಸ್ಸನ್ನು ಇಟ್ಟು ನಿತ್ಯವೂ ಈ ಧರ್ಮದ ಆಖ್ಯಾನವನ್ನು ಪ್ರಯತ್ನ ಪೂರ್ವಕವಾಗಿ ಕೇಳಬೇಕು.

ಶ್ರವಣಾದೇವ ತೇಷಾಂ ತು ಮಹದ್ ಧರ್ಮಫಲಂ ಲಭೇತ್ ।
ಕಥಯೇಚ್ಛೃಣುಯಾದ್ ವಾಪಿ ಯತ್ಕಿಂಚಿನ್ನಿತ್ಯಮೈಹಿಕಮ್ ।
ಸ ಭವೇತ್ ಮತ್ಪ್ರಿಯೋ ದೇವಿ ತಂ ಸ್ಮರಾಮಿ ದಿನೇ ದಿನೇ ॥೧೧೨॥

ಈ ಸಂವಾದದ ಶ್ರವಣದಿಂದಲೇ ದೊಡ್ಡ ಫಲವುಂಟಾಗುತ್ತದೆ. ದೇವಿಯೇ, ಯಾರು ಈ ಸಂವಾದದ ಸ್ವಲ್ಪಭಾಗವನ್ನಾದರೂ ನಿತ್ಯವೂ ಹೇಳುತ್ತಾರೆಯೋ ಅಥವಾ ಕೇಳುತ್ತಾರೆಯೋ ಅವರು ನನಗೆ ಪ್ರಿಯರಾಗುತ್ತಾರೆ. ಅವರನ್ನು ನಾನು ದಿನದಿನದಲ್ಲಿ ಸ್ಮರಿಸುತ್ತೇನೆ.

ಯ ಇದಂ ಪಠತೇ ನಿತ್ಯಂ ಸಂವಾದಂ ಚಾವಯೋಃ ಶುಭಮ್ ।
ಕೀರ್ತಿಮಾಯುಷ್ಯಮಾರೋಗ್ಯಂ ಪರತ್ರೇಹ ಚ ವಿಂದತಿ ॥೧೧೩॥

ಯಾವ ಮನುಷ್ಯನು ನಮ್ಮಿಬ್ಬರ ಈ ಶುಭವಾದ ಸಂವಾದವನ್ನು ನಿತ್ಯವೂ ಪಠಿಸುತ್ತಾನೆಯೋ ಅವನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಕೀರ್ತಿ, ಆಯುಷ್ಯ ಮತ್ತು ಆರೋಗ್ಯಗಳನ್ನು ಹೊಂದುತ್ತಾನೆ.

ಶ್ರುತ್ವಾ ಚೈವ ಪ್ರಯೋಕ್ತಾ ತು ಕಥಂ ಸ ನ ಭವೇನ್ಮಹಾನ್ ।
ಇತ್ಯುಕ್ತ್ವಾ ಸ ತು ದೇವೇಶಃ ಪ್ರತಿಗೃಹ್ಯ ಗಿರೇಃ ಸುತಾಮ್ ॥೧೧೪॥

ಇದನ್ನು ಕೇಳಿ ಅನುಷ್ಠಾನವನ್ನು ಮಾಡುವವನು ಹೇಗೆ ದೊಡ್ಡ ವ್ಯಕ್ತಿಯಾಗದೆ ಇದ್ದಾನು? ದೇವೇಶನಾದ ಮಹೇಶ್ವರನು ಹೀಗೆ ಮಾತನಾಡಿ ಪರ್ವತಪುತ್ರಿಯಾದ ಪಾರ್ವತಿಯನ್ನು ಕರೆದುಕೊಂಡು (ಅಲ್ಲಿಂದ ಹೊರಟನು).

ಭೀಷ್ಮಃ

ಏತಾವದುಕ್ತ್ವಾ ದೇವರ್ಷಿರ್ನಾರದೋ ವಿರರಾಮ ಹ ।
ತದದ್ಯ ನಿಖಿಲಂ ಸರ್ವಂ ಕಥಿತಂ ತೇ ಯುಧಿಷ್ಠಿರ ॥೧೧೫॥

ಭೀಷ್ಮ– ದೇವರ್ಷಿಗಳಾದ ನಾರದರು ಇಷ್ಟು ಮಾತುಗಳನ್ನು ಹೇಳಿ ಅನಂತರ ಸುಮ್ಮನಾದರು. ಎಲೈ ಯುಧಿಷ್ಠಿರನೇ, ಅದೆಲ್ಲವನ್ನೂ ನಿನಗೆ ಈ ದಿನ ಸಂಪೂರ್ಣವಾಗಿ ಹೇಳಿದ್ದೇನೆ.

ವೈಶಂಪಾಯನಃ

ಧರ್ಮರಾಜಸ್ತು ತಚ್ಛ್ರುತ್ವಾ ಭ್ರಾತೃಭಿರ್ಮುದಿತೋಽಭವತ್ ।
ತತ್ಸರ್ವಂ ನಿಖಿಲಂ ಚೋಕ್ತಂ ತವೇಹ ಜನಮೇಜಯ ॥೧೧೬॥

ವೈಶಂಪಾಯನ– ಧರ್ಮರಾಜನಾದರೂ ತನ್ನ ತಮ್ಮಂದಿರ ಜೊತೆಯಲ್ಲಿ ಆ ಸಂವಾದವನ್ನು ಕೇಳಿ ಸಂತೋಷವನ್ನು ಹೊಂದಿದನು. ಎಲೈ ಜನಮೇಜಯನೇ, ಅದೆಲ್ಲವನ್ನೂ ನಿನಗೆ ಪೂರ್ಣವಾಗಿ ಹೇಳಿದ್ದೇನೆ.

ಶೂದ್ರಜಾತ್ಯಾಂ ಪ್ರಸೂತಸ್ಯ ಜಿಹ್ವಾಗ್ರೇ ಯಸ್ಯ ತಿಷ್ಠತಿ ।
ಶಾಂತಿಪರ್ವಚತುರ್ಥಾಭಿಃ ಶೂದ್ರಃ ಸಂಪದ್ಯತೇ ದ್ವಿಜಃ ॥೧೧೭॥

ಶೂದ್ರಜಾತಿಯಲ್ಲಿ ಹುಟ್ಟಿದವನೂ ಸಹ ಈ ಸಂವಾದವನ್ನು ಕೇಳಿದರೆ ಶ್ರೇಯಸ್ಸನ್ನು ಹೊಂದುತ್ತಾನೆ. ಶಾಂತಿಪರ್ವವನ್ನೂ ಸೇರಿಸಿ ನಾಲ್ಕು ಪರ್ವಗಳನ್ನು ಶ್ರವಣ ಮಾಡುವುದರಿಂದ ಶೂದ್ರನು ಮುಂದೆ ಬ್ರಾಹ್ಮಣ ಜನ್ಮವನ್ನು ಪಡೆಯುತ್ತಾನೆ.

ವೇದಾನಾಂ ಇತಿಹಾಸಸ್ಯ ಸೋಪವೇದಾಂಗಪಾರಗಃ ।
ಸ ಹಿ ಮಾನ್ಯಶ್ಚ ಪೂಜ್ಯಶ್ಚ ಯಥಾ ವಿಪ್ರಃ ಷಡಂಗವಿತ್ ॥೧೧೮॥

ಅವನು ವೇದಾಂಗಗಳಲ್ಲಿ ಪಾರಂಗತನಾಗಿ ಇತಿಹಾಸ ಜ್ಞಾನವನ್ನು ಪಡೆಯುತ್ತಾನೆ ಮತ್ತು ಷಡಂಗವನ್ನು ತಿಳಿದ ಬ್ರಾಹ್ಮಣನಂತೆ ಮಾನ್ಯನೂ, ಪೂಜ್ಯನೂ ಆಗುತ್ತಾನೆ.

ಧರ್ಮೇಣ ಶೃಣುಯಾದ್ ಯೋ ಹಿ ಪೂಜ್ಯಃ ಶೂದ್ರೋಽಪಿ ಶೀಲವಾನ್ ।
ಅಕ್ಷಯಂ ಲಭತೇ ಧರ್ಮಂ ಶೂದ್ರಃ ಶೀಲಗುಣಾನ್ವಿತಃ ॥೧೧೯॥

ಯಾವ ಶೂದ್ರನು ಶೀಲವಂತನಾಗಿ ಧರ್ಮದಿಂದ ಭಾರತವನ್ನು ಕೇಳುತ್ತಾನೆಯೋ ಅವನು ಪೂಜ್ಯನಾಗುತ್ತಾನೆ ಮತ್ತು ಅಕ್ಷಯವಾದ ಧರ್ಮವನ್ನು ಹೊಂದುತ್ತಾನೆ.

ಶಾಂತಿಪರ್ವಾಧಿಯಾನಸ್ಯ ಶ್ರೂಯತಾಂ ತಸ್ಯ ಯಾ ಗತಿಃ ।
ಕೋಟೀಶತಸಹಸ್ರಸ್ಯ ವರ್ಷಾಣಾಂ ದಿವಿ ತಿಷ್ಠತಿ ॥೧೨೦॥

ಶಾಂತಿಪರ್ವವನ್ನು ಅಧ್ಯಯನ ಮಾಡುವವನಿಗೆ ಮುಂದೆ ಆಗುವ ಗತಿಯನ್ನು ಕೇಳು. ಅವನು ಲಕ್ಷ-ಕೋಟಿ ವರ್ಷಗಳವರೆಗೆ ಸ್ವರ್ಗದಲ್ಲಿ ವಾಸಿಸುತ್ತಾನೆ.

ಯದಿ ಚೇನ್ಮಾನುಷೇ ಲೋಕೇ ಕದಾಚಿದುಪಪದ್ಯತೇ ।
ಜ್ಞಾನವಿಜ್ಞಾನಸಂಪನ್ನೋ ಭಾರತಜ್ಞೋ ಭವಿಷ್ಯತಿ ।
ತಸ್ಮಾತ್ ಸರ್ವೇಷು ಲೋಕೇಷು ನ ಭಾರತಸಮಾ ಶ್ರುತಿಃ ॥೧೨೧॥

ಯಾವಾಗಲಾದರೂ ಮಾನುಷಲೋಕದಲ್ಲಿ ಜನಿಸಿದರೆ ಜ್ಞಾನ-ವಿಜ್ಞಾನಸಂಪನ್ನನೂ ಭಾರತಾರ್ಥವನ್ನು ತಿಳಿದವನೂ ಆಗುತ್ತಾನೆ. ಆದ್ದರಿಂದ ಎಲ್ಲ ಲೋಕಗಳಲ್ಲಿ ಭಾರತ ಶ್ರವಣಕ್ಕೆ ಸಮವಾದ ಶ್ರವಣವಿಲ್ಲ.

ಜನಮೇಜಯಃ

ಇಮೇ ಹಿ ವಿಪ್ರಾಃ ಸತತಂ ವೇದಾಧ್ಯಯನತತ್ಪರಾಃ ।
ಕಿನ್ನು ವೇದಶ್ರುತಿಃ ಪುಣ್ಯಾ ಭಾರತಂ ವಾ ಮಹಾದ್ವಿಜ ॥೧೨೨॥

ಊನತುಲ್ಯಾಧಿಕತ್ವಂ ವಾ ವೇದಾನಾಂ ಭಾರತಸ್ಯ ವಾ ।
ಏತದಿಚ್ಛಾಮಿ ವಿಜ್ಞಾತುಂ ಭಗವನ್ ವಕ್ತುಮರ್ಹಸಿ ॥೧೨೩॥

ಎಲೈ ಶ್ರೇಷ್ಠ ಬ್ರಾಹ್ಮಣರೇ, ಇಲ್ಲಿ ನೆರೆದಿರುವ ಬ್ರಾಹ್ಮಣರೆಲ್ಲರೂ ಸತತವಾಗಿ ವೇದಾಧ್ಯಯನ ತತ್ಪರರಾದವರು. ವೇದ ಮತ್ತು ಭಾರತಗಳಲ್ಲಿ ಯಾವುದು ಹೆಚ್ಚು ಪುಣ್ಯಪ್ರದವಾದುದು? ಎಲೈ ಪೂಜ್ಯರೇ, ಇದನ್ನು ತಿಳಿಯಲು ಬಯಸುತ್ತೇನೆ. ಇದನ್ನು ನನಗೆ ಹೇಳಬೇಕು.

ವೈಶಂಪಾಯನಃ

ಕಿಂ ವಾ ತ್ವಂ ಮನ್ಯಸೇ ರಾಜನ್ ದೇವೇಭ್ಯೋ ಭಾರತಂ ಹವಿಃ ।
ಭಾರತಂ ಪಂಚಮೋ ವೇದ ಇತಿಹಾಸ ಇತಿ ಶ್ರುತಿಃ ॥೧೨೪॥

ವೈಶಂಪಾಯನ– ಎಲೈ ರಾಜನೇ, ನಿನ್ನ ಅಭಿಪ್ರಾಯವೇನು? ದೇವತೆಗಳಿಗೆ ಭಾರತವು ಹವಿಸ್ಸಿನಂತೆ ಪ್ರಿಯವಾದುದು. ಭಾರತ ರೂಪವಾದ ಇತಿಹಾಸವು ಐದನೆಯ ವೇದವೆಂದು ವೇದದಲ್ಲಿಯೇ ಹೇಳಲ್ಪಟ್ಟಿದೆ.

ಅನುಗ್ರಹಾರ್ಥಂ ವರ್ಣಾನಾಂ ವ್ಯಾಸೇನಾಮಿತತೇಜಸಾ ।
ಜ್ಞಾನಮುತ್ಪಾದಿತಂ ಹ್ಯೇತತ್ ಸರ್ವಜ್ಞೇನೋತ್ತಮಂ ಭುವಿ ॥೧೨೫॥

ಸರ್ವಜ್ಞರೂ, ಅಮಿತತೇಜಸ್ವಿಗಳೂ ಆದ ವ್ಯಾಸರು ನಾಲ್ಕು ವರ್ಣಗಳಿಗೆ ಸೇರಿದ ಪ್ರಜೆಗಳ ಅನುಗ್ರಹಕ್ಕಾಗಿ ಉತ್ತಮವಾದ ಈ ಗ್ರಂಥವನ್ನು ಭೂಮಿಯಲ್ಲಿ ರಚಿಸಿದರು.

ಜ್ಞಾತ್ವಾ ತು ಸರ್ವಧರ್ಮಾಂಶ್ಚ ಜ್ಞಾಸ್ಯತೇ ನಿಶ್ಚಿತಾಂ ಮತಿಮ್ ।
ಸರ್ವವರ್ಣಾ ಗಮಿಷ್ಯಂತಿ ತತ್ರ ಮೇ ನಾಸ್ತಿ ಸಂಶಯಃ ॥೧೨೬॥

ಈ ಗ್ರಂಥದಿಂದ ಎಲ್ಲ ವರ್ಣದವರೂ ಎಲ್ಲ ಧರ್ಮಗಳನ್ನೂ ತಿಳಿದು ನಿಶ್ಚಿತವಾದ ಜ್ಞಾನವನ್ನು ಹೊಂದುತ್ತಾರೆ ಎಂಬ ವಿಷಯದಲ್ಲಿ ನನಗೆ ಸಂಶಯವಿಲ್ಲ.

ಸರ್ವೇ ಹಿ ಚೈಕತೋ ವೇದಾ ಭಾರತಂ ಚೈಕಮೇಕತಃ ।
ಪುರಾ ದೇವೈಶ್ಚ ದೈತ್ಯೈಶ್ಚ ಸಮೇತೈಸ್ತುಲಯಾ ಧೃತಮ್ ॥೧೨೭॥

ಹಿಂದೆ ದೇವತೆಗಳು, ದೈತ್ಯರೂ ಎಲ್ಲರೂ ಸೇರಿ ಒಂದು ಕಡೆ ವೇದಗಳನ್ನೂ, ಇನ್ನೊಂದು ಕಡೆ ಭಾರತವನ್ನೂ ಇಟ್ಟು ತಕ್ಕಡಿಯಲ್ಲಿ ತೂಗಿದರು.

ಸರಹಸ್ಯೈಸ್ತು ವಿಸ್ತೀರ್ಣೈರತೀತಾನಾಗತೈಸ್ತಥಾ ।
ಯಸ್ಮಾಚ್ಚ್ರುತಿಜನೈರನ್ಯೈರ್ವ್ಯಾಸಾತ್ಮಗುಣವಿಸ್ತರೈಃ ॥೧೨೮॥

ಅತೀತ್ಯ ಚತುರೋ ವೇದಾನ್ ಗುರುಂ ಜಾನೀಹಿ ಭಾರತಮ್ ।
ತಸ್ಮಾತ್ ತ್ರಿಷ್ವಪಿ ಲೋಕೇಷು ಮಹಾಭಾರತಮುಚ್ಯತೇ ॥೧೨೯॥

ವ್ಯಾಸರ ಜ್ಞಾನಗುಣದಿಂದ ಕೂಡಿ ಶ್ರುತಿಮೂಲವನ್ನು ಹೊಂದಿದ್ದ ವಿಸ್ತಾರವಾದ ರಹಸ್ಯ ಸಹಿತವಾದ, ಅತೀತ ಮತ್ತು ಅನಾಗತವಾದ ಎಲ್ಲ ಗ್ರಂಥಗಳಿಗಿಂತಲೂ ಮತ್ತು ನಾಲ್ಕು ವೇದಗಳಿಗಿಂತಲೂ ಭಾರತವು ಹೆಚ್ಚು ಭಾರವನ್ನು ಹೊಂದಿದುದು ಎಂದು ತಿಳಿ. ಆ ಕಾರಣದಿಂದ ಮೂರುಲೋಕಗಳಲ್ಲಿಯೂ ಮಹಾಭಾರತವೆಂದು ಕರೆಯಲ್ಪಡುತ್ತದೆ.

ಸಾಂಗೋಪಾಂಗೇಷು ವೇದೇಷು ಶಾಸ್ತ್ರೇಷು ವಿವಿಧೇಷು ಚ ।
ಪ್ರದೃಶ್ಯಮಾನೇಷ್ವಿಹ ನ ಭಾರತಸಮಾ ಶ್ರುತಿಃ ॥೧೩೦॥

ಸಾಂಗೋಪಾಂಗ ಸಹಿತವಾದ ವೇದಗಳನ್ನು ಮತ್ತು ವಿವಿಧ ಶಾಸ್ತ್ರಗಳನ್ನು ಪರಿಶೀಲನೆ ಮಾಡಿದರೂ ಭಾರತಕ್ಕೆ ಸಮಾನವಾದ ಇನ್ನೊಂದು ಗ್ರಂಥವಿಲ್ಲ.

ಸದೇವಯಕ್ಷಗಂಧರ್ವೈಃ ಸಕಿನ್ನರಮಹೋರಗೈಃ ।
ತ್ರೈಲೋಕ್ಯೇ ನ ತದಪ್ಯಸ್ತಿ ಭಾರತೇ ಯನ್ನ ವಿದ್ಯತೇ ॥೧೩೧॥

ಭಾರತದಲ್ಲಿ ಯಾವ ವಿಷಯವಿಲ್ಲವೋ ಅದು ದೇವ-ಯಕ್ಷ-ಗಂಧರ್ವರಿಂದ, ಕಿನ್ನರ-ಉರಗಗಳಿಂದ ಸಹಿತವಾದ ಮೂರುಲೋಕಗಳಲ್ಲಿಯೂ ಇಲ್ಲ.

ಶ್ರುತೀನಾಮಾಕರೋ ಹ್ಯೇಷ ರತ್ನಾನಾಮಿವ ಸಾಗರಃ ।
ಜ್ಞಾನಾನಾಂ ಪರಮಂ ಹ್ಯೇತತ್ ಪವಿತ್ರಂ ಶೌಚಮುತ್ತಮಮ್ ॥೧೩೨॥

ರತ್ನಗಳಿಗೆ ಸಾಗರವು ಆಶ್ರಯವಾದಂತೆ ಭಾರತವು ಶ್ರುತ್ಯರ್ಥಗಳಿಗೆ ಆಶ್ರಯವಾಗಿದೆ. ಇದು ಜ್ಞಾನಗಳಲ್ಲಿ (ಜ್ಞಾನಜನಕವಾದ ಗ್ರಂಥಗಳಲ್ಲಿ) ಶ್ರೇಷ್ಠವಾದುದು, ಶುದ್ಧವಾದುದು ಮತ್ತು ಪವಿತ್ರವಾದುದು.

ಯಾಂ ಯಾಂ ಶ್ರುತಿಂ ಪ್ರಾರ್ಥಯತೇ ಮನಸಾ ಕೃತನಿಶ್ಚಯಃ ।
ಪ್ರವಿಶ್ಯ ಭಾರತಂ ರಾಜನ್ ತಾಂ ತಾಂ ಶ್ರುತಿಮವಾಪ್ನುಯಾತ್ ॥೧೩೩॥

ಎಲೈ ರಾಜನೇ, ಮನಸ್ಸಿನಲ್ಲಿ ಯಾವ ಯಾವ ಶ್ರುತಿಗಳನ್ನು ತಂದುಕೊಳ್ಳುತ್ತಾನೆಯೋ ಭಾರತವನ್ನು ಪ್ರವೇಶಿಸಿದವನು ಆಯಾ ಶ್ರುತಿಗಳ ಅರ್ಥವನ್ನು ಇಲ್ಲಿ ಕಾಣುತ್ತಾನೆ.

ಅಬುದ್ಧಿಶೋಧನಂ ಹ್ಯೇತದ್ ಬುಧಾನಾಂ ಬುದ್ಧಿವರ್ಧನಮ್ ।
ಶಾಂತಿಪರ್ವ ವಿಶೇಷೇಣ ಕ್ಷೀರಾದ್ ಘೃತಮಿವೋದ್ಧೃತಮ್ ॥೧೩೪॥

ಪರ್ವಣಾಂ ತಸ್ಯ ಸರ್ವೇಷಾಂ ಸಾರಭೂತಂ ಪ್ರಕೀರ್ತಿತಮ್ ॥೧೩೫॥

ಏತತ್ ತೇ ಕಥಿತಂ ಸರ್ವಂ ಪರಿಪೃಷ್ಟಂ ತು ಯತ್ ತ್ವಯಾ ॥೧೩೬॥

ಇದು ಬುದ್ಧಿಹೀನರಿಗೆ ಬುದ್ಧಿಯನ್ನು ಶೋಧಿಸುವಂತಹದು. ಬುದ್ಧಿಯುಳ್ಳವರಿಗೆ ಬುದ್ಧಿಯನ್ನು ಅಭಿವೃದ್ಧಿಪಡಿಸುವಂತಹದು. ಕ್ಷೀರದಿಂದ ಘೃತವನ್ನು ತೆಗೆದಂತೆ ಶಾಂತಿ ಪರ್ವವು ವಿಶೇಷವಾಗಿ ಉದ್ಧರಿಸಲ್ಪಟ್ಟಿದೆ. ಅದು ಎಲ್ಲ ಪರ್ವಗಳ ಸಾರಭೂತವಾದ ಭಾಗವೆಂದು ಹೇಳಲ್ಪಡುತ್ತದೆ. ಎಲೈ ರಾಜನೇ, ನೀನು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ನಾನು ಉತ್ತರವನ್ನು ಹೇಳಿದ್ದೇನೆ.

ಶ್ರದ್ದಧಾನೋ ನರೋ ಯಸ್ತು ಸಂವಾದಂ ಪುಣ್ಯವರ್ಧನಮ್ ।
ಸಮಾಹಿತಮನಾ ನಿತ್ಯಂ ಶೃಣುಯಾದ್ ಶ್ರಾವಯೇತ ವಾ ॥೧೩೭॥

ನಾಂಧೋ ನ ಬಧಿರೋ ರೋಗೀ ನೋನ್ಮತ್ತಶ್ಚೈವ ಜಾಯತೇ ।
ಭಾರತಂ ಯೋ ನ ಜಾನಾತಿ ಸೋಽಂಧಃ ಪಾಪೋ ನರೋ ಭುವಿ ॥

ಈ ಪುಣ್ಯವರ್ಧನವಾದ ಸಂವಾದವನ್ನು ಶ್ರದ್ಧೆ ಮತ್ತು ಸಮಾಧಾನಗಳಿಂದ ಯಾವನು ಹೇಳುತ್ತಾನೆಯೋ ಅಥವಾ ಕೇಳುತ್ತಾನೆಯೋ ಅವನು ಎಂದೂ ಕುರುಡನಾಗುವುದಿಲ್ಲ, ಕಿವುಡನಾಗುವುದಿಲ್ಲ, ರೋಗಿಯಾಗುವುದಿಲ್ಲ, ಉನ್ಮತ್ತನಾಗುವುದಿಲ್ಲ. ಭಾರತವನ್ನು ತಿಳಿಯದಿದ್ದ ನರನು ಭೂಮಿಯಲ್ಲಿ ಕುರುಡನೂ ಮತ್ತು ಪಾಪಿಯೂ ಆಗುವನು.

ಸರ್ವಭೂತಹಿತೋ ನಿತ್ಯಂ ದೇಶಿಕಃ ಸರ್ವಕರ್ಮಣಾಮ್ ।
ವೇದೋಽಯಂ ಗುಣಕೃದ್ ರಾಜನ್ ಸರ್ವಪಾಪಪ್ರಣಾಶನಃ ॥೧೩೯॥

ಎಲೈ ರಾಜನೇ, ಪಂಚಮವೇದವಾದ ಈ ಭಾರತವು ಸರ್ವಭೂತ ಹಿತವಾದುದು, ನಿತ್ಯವಾದುದು, ಸರ್ವಕರ್ಮಗಳ ಉಪದೇಶವನ್ನು ಮಾಡುವಂತಹದು, ಸರ್ವ

ಪಾಪಗಳನ್ನು ಪರಿಹರಿಸುವಂತಹದು ಮತ್ತು ಸರ್ವ ಸದ್ಗುಣಗಳನ್ನೂ ಉಂಟು ಮಾಡುವಂತಹದು.

ಯಾನಿ ಕಾನ್ಯಪಿ ಶಾಸ್ತ್ರಾಣಿ ಕರಿಷ್ಯಂತೇ ಕೃತಾನಿ ವಾ ।
ವೇದಶ್ರೇಷ್ಠಂ ಮಹಚ್ಚೇದಂ ಸತ್ಯಂ ಸತ್ಯಂ ವದಾಮ್ಯಹಮ್ ॥೧೪೦॥

ಇದುವರೆಗೆ ಎಷ್ಟು ಶಾಸ್ತ್ರಗಳು ರಚಿಸಲ್ಪಟ್ಟಿವೆಯೋ ಮತ್ತು ಮುಂದೆ ರಚಿಸಲ್ಪಡುತ್ತವೆಯೋ ಅವುಗಳೆಲ್ಲದಕ್ಕಿಂತಲೂ ಮತ್ತು ವೇದಗಳಿಗಿಂತಲೂ ಈ ಮಹಾಭಾರತವು ಶ್ರೇಷ್ಠವಾದುದೆಂದು ನಾನು ಹೇಳುತ್ತೇನೆ. ಇದು ಸತ್ಯ , ಸತ್ಯ .

ನಾಶ್ರುತಾಯ ಪ್ರದಾತವ್ಯಂ ನ ಸುತಾಯಾಹಿತಾಯ ವಾ ।
ನಾಶ್ರುತಾಯ ಪ್ರದಾತವ್ಯಂ ನ ಚಾನದಿಷ್ಟಕಾರಿಣೇ ॥೧೪೧॥

ಇದನ್ನು ವೇದಜ್ಞಾನವಿಲ್ಲದವನಿಗಾಗಲೀ, ಅಪ್ರಿಯನಾದ ಪುತ್ರನಿಗಾಗಲೀ ಉಪದೇಶಿಸಬಾರದು. ಆದೇಶವನ್ನು ಪಾಲಿಸದಿರುವ ವ್ಯಕ್ತಿಗೂ ಹೇಳಬಾರದು.

ಇದಂ ಜ್ಯೇಷ್ಠಾಯ ಪುತ್ರಾಯ ಇದಂ ಶಿಷ್ಯಾಯ ಚಾರ್ಥಿನೇ ।
ಏತದರ್ಥಂ ಚ ಶುಶ್ರೂಷಾಂ ಕರೋತ್ವವಿಮನಾ ಇವ ॥೧೪೨॥

ಇದನ್ನು ಈ ಅರ್ಥವನ್ನು ಕೇಳಲು ಬಯಸುವ ಜ್ಯೇಷ್ಠ ಪುತ್ರನಿಗೂ ಮತ್ತು ಶಿಷ್ಯನಿಗೂ ಹೇಳಬೇಕು. ಅದಕ್ಕಾಗಿ ಅವನು ಬೇಸರವಿಲ್ಲದೆಯೇ ಗುರುಸೇವೆಯನ್ನು ಮಾಡಬೇಕು.

ಶ್ರದ್ದಧಾನಸ್ತು ಯಶ್ಚೇದಂ ಶೃಣುಯಾಚ್ಚ್ರಾವಯೇತ ವಾ ।
ವಿಮುಕ್ತಃ ಸರ್ವಪಾಪೇಭ್ಯಃ ಸರ್ವಂ ಸ್ವಗೃಹವದ್ ವ್ರಜೇತ್ ॥೧೪೩॥

ಯಾವನು ಶ್ರದ್ಧೆಯಿಂದ ಮಹಾಭಾರತವನ್ನು ಕೇಳುತ್ತಾನೆಯೋ ಮತ್ತು ಹೇಳುತ್ತಾನೆಯೋ ಅವನು ಎಲ್ಲ ಪಾಪಗಳಿಂದಲೂ ಮುಕ್ತನಾಗಿ, ಎಲ್ಲ ಶುಭ ಲೋಕಗಳಿಗೂ ತನ್ನ ಮನೆಗೆ ಹೋದಂತೆ ಹೋಗುತ್ತಾನೆ.

ಪಾರಣಂ ಸರ್ವವೇದಾನಾಂ ಸರ್ವತೀರ್ಥಾವಗಾಹನಮ್ ।
ಯಶ್ಚೇದಂ ಶೃಣುಯಾನ್ನಿತ್ಯಂ ಸಮಮೇತನ್ನ ಸಂಶಯಃ ॥೧೪೪॥

ಎಲ್ಲ ವೇದಗಳ ಪಾರಾಯಣ ಮತ್ತು ಸರ್ವತೀರ್ಥಗಳಲ್ಲಿ ಸ್ನಾನ- ಇವುಗಳಿಗೆ ಭಾರತ ಶ್ರವಣದಿಂದ ಉಂಟಾದ ಪುಣ್ಯವು ಸಮವಾದುದು. ಇದರಲ್ಲಿ ಸಂಶಯವಿಲ್ಲ.

ಸುವರ್ಣದಾನಂ ಗೋದಾನಂ ಭೂಮಿದಾನಂ ದದಾತಿ ಚ ।
ಪಠೇದಿಮಂ ಚ ಯೋ ನಿತ್ಯಂ ಸಮಾವೇತೌ ನೃಪೋತ್ತಮ ॥೧೪೫॥

ಎಲೈ ನೃಪೋತ್ತಮನೇ, ಯಾವನು ನಿತ್ಯವೂ ಮಹಾಭಾರತವನ್ನು ಪಠಿಸುತ್ತಾನೆಯೋ ಅವನಿಗೆ ಅದರಿಂದ ಉಂಟಾದ ಪುಣ್ಯವು ಸುವರ್ಣದಾನ, ಗೋದಾನ ಮತ್ತು ಭೂಮಿದಾನಗಳಿಂದ ಉಂಟಾದ ಪುಣ್ಯಕ್ಕೆ ಸಮವಾದುದು.

ಶ್ರದ್ಧೇಯಮೇತತ್ ಪರಮಂ ಸಂಭಾವ್ಯಂ ಚ ನರೈಃ ಸದಾ ।
ಪ್ರಯತ್ನೇನ ಗೃಹೀತವ್ಯಮಿದಂ ಶಾಸ್ತ್ರಮನುತ್ತಮಮ್ ॥೧೪೬॥

ಈ ಶ್ರೇಷ್ಠವಾದ ಶಾಸ್ತ್ರದಲ್ಲಿ ಮಾನವರು ಶ್ರದ್ಧೆಯನ್ನು ಮಾಡಬೇಕು. ಇದನ್ನು ಯಾವಾಗಲೂ ಪೂಜಿಸಬೇಕು ಮತ್ತು ಪ್ರಯತ್ನಪೂರ್ವಕವಾಗಿ ಅರ್ಥಜ್ಞಾನವನ್ನು ಸಂಪಾದಿಸಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಪತಿವ್ರತಾ ಉಮಾಮಹೇಶ್ವರಸಂವಾದೇ
ಪತಿವ್ರತಾಧರ್ಮವಿಚಾರೇ ಮಹಾಭಾರತಪ್ರಶಂಸಾನಾಮ
ಸಪ್ತತ್ರಿಂಶತ್ಯುತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಮೂವತ್ತೇಳನೆಯ ಅಧ್ಯಾಯ ಮುಗಿಯಿತು.

॥ ಇತ್ಯುಮಾಮಹೇಶ್ವರಯೋಃ ಸಂವಾದಃ ಸಮಾಪ್ತಃ ॥

★ ★ ★ ★ ★

ಇನ್ನೂರ ಮೂವತ್ತೆಂಟನೆಯ ಅಧ್ಯಾಯ

ಸರ್ವಪಾಪಪರಿಹಾರೋಪಾಯದ ಮತ್ತು ಜ್ಞಾನಪ್ರಾಪ್ತಿಯ ಉಪಾಯದ ಕಥನ.

ಯುಧಿಷ್ಠಿರಃ

ಕ ಉಪಾಯೋ ವರಪ್ರಾಪ್ತೌ ಸರ್ವೇಷಾಂ ಪಾಪಕರ್ಮಣಾಮ್ ।
ಜ್ಞಾನಸ್ಯ ಚ ಪರಸ್ಯೇಹ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ಎಲ್ಲ ಪಾಪಕರ್ಮಗಳ ಫಲವನ್ನು ಕಳೆದುಕೊಂಡು ಶ್ರೇಷ್ಠವಾದುದನ್ನು ಪಡೆಯಲು ಯಾವ ಉಪಾಯ? ಅದರಂತೆ ಜ್ಞಾನವನ್ನು ಪಡೆಯಲು ಯಾವ ಉಪಾಯವೆಂದು ನನಗೆ ಹೇಳು.

ಭೀಷ್ಮಃ

ಉಪಾಯೋಽಯಂ ವರಪ್ರಾಪ್ತೌ ಪರಮಃ ಪರಿಕೀರ್ತಿತಃ ।
ನಾರಾಯಣಸ್ಯ ತು ಧ್ಯಾನಮರ್ಚನಂ ಯಜನಂ ಸ್ತುತಿಃ ॥೨॥

ಭೀಷ್ಮ– ಪಾಪ ಪರಿಹಾರಪೂರ್ವಕವಾಗಿ ಶ್ರೇಷ್ಠವಾದ ಎಲ್ಲವನ್ನೂ ಪಡೆಯಲು ನಾರಾಯಣನ ಧ್ಯಾನ, ಅರ್ಚನೆ, ಪೂಜೆ, ಸ್ತೋತ್ರಗಳು ಶ್ರೇಷ್ಠವಾದ ಉಪಾಯಗಳು ಎಂದು ಹೇಳಲ್ಪಡುತ್ತವೆ.

ಶ್ರವಣಂ ತತ್ಕಥಾನಾಂ ಚ ವಿದ್ವತ್ಸಂರಕ್ಷಣಂ ತಥಾ ।
ವಿದ್ವಚ್ಛುಶ್ರೂಷಣಪ್ರೀತಿರುಪದೇಶಾನುಪಾಲನಮ್ ॥೩॥

ಅದರಂತೆಯೇ ನಾರಾಯಣನ ಕಥೆಗಳ ಶ್ರವಣ, ವಿದ್ವಾಂಸರ ಸಂರಕ್ಷಣೆ, ವಿದ್ವಾಂಸರ ಸೇವೆ, ವಿದ್ವಾಂಸರಲ್ಲಿ ಪ್ರೀತಿ ಮತ್ತು ವಿದ್ವಾಂಸರ ಮಾತುಗಳನ್ನು ಪಾಲಿಸುವುದು ಇದು ಉಪಾಯ.

ಸಂಧ್ಯಾನೇನ ಜಪೇನಾಶು ಮುಚ್ಯತೇ ಪ್ರಾಕೃತೋಽಪಿ ಚ ।
ಜಪಶ್ಚತುರ್ವಿಧಃ ಪ್ರೋಕ್ತೋ ವೈದಿಕಸ್ತಾಂತ್ರಿಕೋಽಪಿ ಚ ।
ಪೌರಸ್ತಿಕೋಽಥೋ ವಿದ್ವದ್ಭಿಃ ಕಥಿತಃ ಸ್ಮಾರ್ತ ಏವ ಚ ॥೪॥

ನಾರಾಯಣನ ಸಮೀಚೀನವಾದ ಧ್ಯಾನ ಮತ್ತು ಜಪಗಳಿಂದ ಸಾಧಾರಣನಾದ ಮಾನವನೂ ಸಹ ಶೀಘ್ರವಾಗಿ ಪಾಪಗಳಿಂದ ನಿರ್ಮುಕ್ತನಾಗುತ್ತಾನೆ. ಜಪವು ವೈದಿಕ, ತಾಂತ್ರಿಕ, ಅನಾದಿಕಾಲದಿಂದಲೂ ಅನುವೃತ್ತವಾದುದು ಮತ್ತು ಸ್ಮಾರ್ತ ಎಂದು ನಾಲ್ಕು ವಿಧವಾದುದು ಎಂದು ಹೇಳಲ್ಪಡುತ್ತದೆ.

ದ್ವಿಜಶುಶ್ರೂಷಯಾ ಜ್ಞಾನಂ ವಿದ್ವತ್ಸಂರಕ್ಷಣೇನ ವಾ ।
ನಾಸಾಧ್ಯಂ ಜ್ಞಾನಿನಾಂ ಕಿಂಚಿತ್ ತಸ್ಮಾದ್ ರಕ್ಷ್ಯಾ ದ್ವಿಜಾಸ್ತ್ವಯಾ ॥೫॥

ಬ್ರಾಹ್ಮಣರ ಸೇವೆಯಿಂದ ಅಥವಾ ವಿದ್ವಾಂಸರ ಸಂರಕ್ಷಣೆಯಿಂದಲೂ ಜ್ಞಾನ ಉಂಟಾಗುತ್ತದೆ. ಜ್ಞಾನಿಗಳಿಗೆ ಅಸಾಧ್ಯವಾದುದು ಯಾವುದೂ ಇಲ್ಲ. ಆದ್ದರಿಂದ ನೀನು ಬ್ರಾಹ್ಮಣರನ್ನು ರಕ್ಷಿಸಬೇಕು.

ಸುವ್ರತಾ ಬಂಧುಹೀನೈಕಾ ವನೇ ಪೂರ್ವಂ ಯಮೇನ ತು ।
ಆಸೀದಾಶ್ವಾಸಿತಾ ವಿದ್ವತ್ಸಂರಕ್ಷಣಫಲಾತ್ ಕಿಲ ॥೬॥

ಹಿಂದೆ ಕಾಡಿನಲ್ಲಿ ಬಂಧುಹೀನಳಾಗಿ, ಒಳ್ಳೆಯ ವ್ರತವನ್ನು ಧರಿಸಿ ತಪಸ್ಸನ್ನು ಮಾಡುತ್ತಿದ್ದ ಒಬ್ಬ ಸ್ತ್ರೀಯು ವಿದ್ವತ್ ಸಂರಕ್ಷಣೆಯ ಫಲವನ್ನು ಹೇಳಿ ಯಮನಿಂದ ಸಮಾಧಾನ ಪಡಿಸಲ್ಪಟ್ಟಳಷ್ಟೆ?

ವಿಪ್ರಸ್ಯ ಮರಣೇ ಹೇತುಸ್ತತ್ಪತ್ನೀಪಿತೃಶೋಕದಾ ।
ವೈಶ್ಯಾ ತ್ವಮತಿಲಾಭೋಽಯಂ ವಿಪ್ರಕನ್ಯೇತಿ ಸಾಂಪ್ರತಮ್ ॥೭॥

ಹಿಂದಿನ ಜನ್ಮದಲ್ಲಿ ವೈಶ್ಯಳಾಗಿ ಒಬ್ಬ ಬ್ರಾಹ್ಮಣನ ಮರಣಕ್ಕೆ ಕಾರಣಳಾಗಿ ಬ್ರಾಹ್ಮಣನ ಪತ್ನಿ ಮತ್ತು ಪಿತೃಗಳಿಗೆ ಶೋಕವನ್ನುಂಟು ಮಾಡಿದ ನಿನಗೆ ಈ ವಿಪ್ರಕನ್ಯೆಯ ಜನ್ಮವು ಶ್ರೇಷ್ಠವಾದ ಲಾಭವಾಗಿದೆ (ಎಂದು ಯಮನು ಹೇಳಿದನು).

ಇತ್ಯುಕ್ತಾಶ್ವಾಸಿತಾಪೃಚ್ಛತ್ ಕೇನೈವಂ ಪಾಪಸಂಯುತಾ ।
ಜಾತಾ ವಿಪ್ರಕುಲೇ ಸಮ್ಯಕ್ ಶ್ರೇಯಶ್ಚಾಪಿ ಬ್ರವೀಹಿ ಮೇ ॥೮॥

ಯಮನಿಂದ ಹೀಗೆ ಹೇಳಲ್ಪಟ್ಟ ಆ ಕನ್ಯೆಯು- ಅಂತಹ ಪಾಪವನ್ನು ಮಾಡಿದ ನಾನು ಯಾವ ನಿಮಿತ್ತದಿಂದ ಇಂತಹ ಶ್ರೇಷ್ಠವಾದ ಬ್ರಾಹ್ಮಣ ಕುಲದಲ್ಲಿ ಜನ್ಮವನ್ನು ಪಡೆದೆನು ಎಂದು ಹೇಳು ಎಂದು ಕೇಳಿದಳು.

ಯಮಃ

ಅನ್ಯಜನ್ಮನಿ ವಿದ್ವಾಂಸಂ ಪ್ರಹಾರೈರಭಿಪೀಡಿತಮ್ ।
ಚೋರಶಂಕಾವಿಮೋಕ್ಷೇಣ ಮೋಕ್ಷಯಿತ್ವಾ ಸುಜನ್ಮಿಕಾ ॥೯॥

ಯಮ– ನೀನು ಇನ್ನೊಂದು ಜನ್ಮದಲ್ಲಿ ಕಳ್ಳನೆಂಬ ಶಂಕೆಯಿಂದ ಹೊಡೆದು ಹಿಂಸಿಸಲ್ಪಡುತ್ತಿದ್ದ ಒಬ್ಬ ವಿದ್ವಾಂಸನನ್ನು ಬಿಡಿಸಿ ಇಂತಹ ಒಳ್ಳೆಯ ಜನ್ಮವನ್ನು ಪಡೆದಿದ್ದೀಯೆ.

ಇತ್ಯುಕ್ತಾಷ್ಟಾಕ್ಷರಧ್ಯಾನಜಪಾದಿಶ್ರೇಯಸಾ ತು ಸಾ ।
ಯಮೇನಾನುಗೃಹೀತಾऽಭೂತ್ ಪುಣ್ಯಲೋಕನಿವಾಸಿನೀ ॥೧೦೦॥

ಯಮನು ಹೀಗೆ ಹೇಳಿ, ಅವಳಿಗೆ ನಾರಾಯಣಾಷ್ಟಾಕ್ಷರ ಧ್ಯಾನ-ಜಪಾದಿಗಳನ್ನು ಉಪದೇಶಿಸಿ ಅನುಗ್ರಹಿಸಿದನು. ಆ ಶ್ರೇಯಸ್ಸಿನ ಅನುಷ್ಠಾನದಿಂದ ಅವಳು ಪುಣ್ಯ ಲೋಕನಿವಾಸಿನಿಯಾದಳು.

ಭೀಷ್ಮಃ

ತನ್ನಿತ್ಯಂ ವಿದುಷಾಂ ರಕ್ಷಾತತ್ಪರೋ ಭವ ಭೂಪತೇ ।
ತೇಷಾಂ ಸಂರಕ್ಷಣಾತ್ ತುಷ್ಟಃ ಸರ್ವಪಾಪೈಃ ಪ್ರಮುಚ್ಯತೇ ॥೧೧॥

ಭೀಷ್ಮ- ಎಲೈ ರಾಜನೇ, ಆದ್ದರಿಂದ ಯಾವಾಗಲೂ ವಿದ್ವಾಂಸರ ರಕ್ಷಣೆಯಲ್ಲಿ ತತ್ಪರನಾಗಿರು. ಅವರ ರಕ್ಷಣೆಯಿಂದ ಸರ್ವಪಾಪಗಳಿಂದಲೂ ನಿರ್ಮುಕ್ತನಾಗಿ ಸಂತೋಷವನ್ನು ಹೊಂದುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ವೈಶ್ಯಕನ್ಯಾ-ಸುವ್ರತಾಖ್ಯಾನಂ ನಾಮ
ಅಷ್ಟತ್ರಿಂಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಮೂವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಮೂವತ್ತೊಂಬತ್ತನೆಯ ಅಧ್ಯಾಯ

ವಿಷ್ಣುಸಹಸ್ರನಾಮಸ್ತೋತ್ರ

ವೈಶಂಪಾಯನಃ

ಶ್ರುತ್ವಾ ಧರ್ಮಾನಶೇಷೇಣ ಪಾವನಾನಿ ಚ ಸರ್ವಶಃ ।
ಯುಧಿಷ್ಠಿರಃ ಶಾಂತನವಂ ಪುನರೇವಾಭ್ಯಭಾಷತ ॥೧॥

ವೈಶಂಪಾಯನ- ಯುಧಿಷ್ಠಿರನು ಪವಿತ್ರವಾದ ಎಲ್ಲಾ ಧರ್ಮಗಳನ್ನೂ ಸಂಪೂರ್ಣವಾಗಿ ಕೇಳಿ, ಶಂತನುಪುತ್ರರಾದ ಭೀಷ್ಮರನ್ನು ಕುರಿತು ಮಾತನಾಡಿದನು.

ಕಿಮೇಕಂ ದೈವತಂ ಲೋಕೇ ಕಿಂ ವಾಪ್ಯೇಕಂ ಪರಾಯಣಮ್ ।
ಸ್ತುವಂತಃ ಕಂ ಕಮರ್ಚಂತಃ ಪ್ರಾಪ್ನುಯುರ್ಮಾನವಾಃ ಶುಭಮ್ ॥೨॥

ಲೋಕದಲ್ಲಿ ಮುಖ್ಯವಾದ ದೇವನು ಯಾರು? ಶ್ರೇಷ್ಠವಾದ ಆಶ್ರಯವು ಯಾವುದು? ಯಾರನ್ನು ಸ್ತೋತ್ರ ಮಾಡಿ, ಅರ್ಚಿಸಿ ಮಾನವರು ಶುಭವನ್ನು ಪಡೆಯುವರು?

ಕೋ ಧರ್ಮಃ ಸರ್ವಧರ್ಮಾಣಾಂ ಭವತಃ ಪರಮೋ ಮತಃ ।
ಕಿಂ ಜಪನ್ಮುಚ್ಯತೇ ಜಂತುರ್ಜನ್ಮಸಂಸಾರಬಂಧನಾತ್ ॥೩॥

ಎಲ್ಲ ಧರ್ಮಗಳಲ್ಲಿ ಯಾವ ಧರ್ಮವು ಶ್ರೇಷ್ಠವೆಂದು ಹೇಳಲ್ಪಡುತ್ತದೆ? ಯಾವ ಜಪವನ್ನು ಮಾಡಿದರೆ ಜೀವನು ಸಂಸಾರಬಂಧನದಿಂದ ಮುಕ್ತನಾಗುತ್ತಾನೆ?

ಭೀಷ್ಮಃ

ಜಗತ್ಪ್ರಭುಂ ದೇವದೇವಮನಂತಂ ಪುರುಷೋತ್ತಮಮ್ ।
ಸ್ತುವನ್ನಾಮಸಹಸ್ರೇಣ ಪುರುಷಃ ಸತತೋತ್ಥಿತಃ ॥೪॥

ತಮೇವ ಚಾರ್ಚಯನ್ನಿತ್ಯಂ ಭಕ್ತ್ಯಾ ಪುರುಷಮವ್ಯಯಮ್ ।
ಧ್ಯಾಯನ್ ಸ್ತುವನ್ ನಮಸ್ಯಂಶ್ಚ ಯಜಮಾನಸ್ತಮೇವ ಚ ॥೫॥

ಅನಾದಿನಿಧನಂ ವಿಷ್ಣುಂ ಸರ್ವಲೋಕಮಹೇಶ್ವರಮ್ ।
ಲೋಕಾಧ್ಯಕ್ಷಂ ಸ್ತುವನ್ ನಿತ್ಯಂ ಸರ್ವದುಃಖಾತಿಗೋ ಭವೇತ್ ॥೬॥

ಬ್ರಹ್ಮಣ್ಯಂ ಸರ್ವಧರ್ಮಜ್ಞಂ ಲೋಕಾನಾಂ ಕೀರ್ತಿವರ್ಧನಮ್ ।
ಲೋಕನಾಥಂ ಮಹದ್ಭೂತಂ ಸರ್ವಭೂತಭವೋದ್ಭವಮ್ ॥೭॥

ಭೀಷ್ಮ– ಜಗತ್ಪ್ರಭುವೂ, ದೇವದೇವನೂ, ಅನಂತನೂ, ಪುರುಷೋತ್ತಮನೂ, ಬ್ರಾಹ್ಮಣ ವತ್ಸಲನೂ, ಸರ್ವಧರ್ಮಜ್ಞನೂ, ಲೋಕಗಳಿಗೆ ಕೀರ್ತಿವರ್ಧನನೂ, ಲೋಕನಾಥನೂ, ಮಹದ್ಭೂತನೂ, ಸರ್ವಭೂತಗಳಿಗೆ ಉತ್ಪತ್ತಿ ಕಾರಣನೂ, ಆದ್ಯಂತ ಶೂನ್ಯನೂ, ಸರ್ವಲೋಕಮಹೇಶ್ವರನೂ, ಲೋಕಾಧ್ಯಕ್ಷನೂ ಆದ ವಿಷ್ಣುವನ್ನು ಸತತವಾಗಿ ಶ್ರದ್ಧಾಯುಕ್ತನಾಗಿ ಸಹಸ್ರನಾಮದಿಂದ ಸ್ತೋತ್ರವನ್ನು ಮಾಡುವವನು ಎಲ್ಲ ದುಃಖಗಳನ್ನೂ ದಾಟುತ್ತಾನೆ.

ಏಷ ಮೇ ಸರ್ವಧರ್ಮಾಣಾಂ ಧರ್ಮೋಽಧಿಕತಮೋ ಮತಃ ।
ಯದ್ಭಕ್ತ್ಯಾ ಪುಂಡರೀಕಾಕ್ಷಂ ಸ್ತವೈರರ್ಚೇನ್ನರಃ ಸದಾ ॥೮॥

ಪುಂಡರೀಕಾಕ್ಷನನ್ನು ಭಕ್ತಿಯಿಂದ ಸ್ತೋತ್ರಗಳಿಂದ ಪೂಜಿಸುವುದೇ ಮನುಷ್ಯನು ಆಚರಿಸಬೇಕಾದ ಎಲ್ಲ ಧರ್ಮಗಳಲ್ಲಿ ಅತ್ಯಧಿಕವಾದ ಧರ್ಮ ಎಂದು ನನ್ನ ಅಭಿಪ್ರಾಯ.

ಪರಮಂ ಯೋ ಮಹತ್ತೇಜಃ ಪರಮಂ ಯೋ ಮಹತ್ತಪಃ ।
ಪರಮಂ ಯೋ ಮಹದ್ಬ್ರಹ್ಮ ಪರಮಂ ಯಃ ಪರಾಯಣಮ್ ॥೯॥

ಪವಿತ್ರಾಣಾಂ ಪವಿತ್ರಂ ಯೋ ಮಂಗಲಾನಾಂ ಚ ಮಂಗಲಮ್ ।
ದೈವತಂ ದೇವತಾನಾಂ ಚ ಭೂತಾನಾಂ ಯೋಽವ್ಯಯಃ ಪಿತಾ ॥೧೦॥

ಯತಃ ಸರ್ವಾಣಿ ಭೂತಾನಿ ಭವಂತ್ಯಾದಿಯುಗಾಗಮೇ ।
ಯಸ್ಮಿಂಶ್ಚ ಪ್ರಲಯಂ ಯಾಂತಿ ಪುನರೇವ ಯುಗಕ್ಷಯೇ ॥೧೧॥

ತಸ್ಯ ಲೋಕಪ್ರಧಾನಸ್ಯ ಜಗನ್ನಾಥಸ್ಯ ಭೂಪತೇ ।
ವಿಷ್ಣೋರ್ನಾಮಸಹಸ್ರಂ ಮೇ ಶೃಣು ಪಾಪಭಯಾಪಹಮ್ ॥೧೨॥

ಯಾವನು ಶ್ರೇಷ್ಠವಾದ ಮಹಾತೇಜೋರೂಪಿಯೋ, ಪರಮ ಜ್ಞಾನರೂಪಿಯೋ, ಯಾವನು ಪರಮಮಹದ್ಬ್ರಹ್ಮನೋ, ಯಾವನು ಶ್ರೇಷ್ಠವಾದ ಆಶ್ರಯನೋ, ಪವಿತ್ರ ವಸ್ತುಗಳಿಗೆ ಪಾವಿತ್ರ್ಯವನ್ನುಂಟು ಮಾಡುವವನೋ, ಮಂಗಳವಾದ ವಸ್ತುಗಳಿಗೆ ಮಾಂಗಲ್ಯವನ್ನು ಕೊಡುವವನೋ, ದೇವತೆಗಳಿಗೂ ಆರಾಧ್ಯದೈವತೆಯೋ, ಎಲ್ಲ ಜೀವರಿಗೂ ಶಾಶ್ವತನಾದ ತಂದೆಯೋ, ಯಾವನಿಂದ ಸೃಷ್ಟಿಯ ಆದಿಯಲ್ಲಿ ಎಲ್ಲ ಭೂತಗಳೂ ಜನಿಸುತ್ತವೆಯೋ, ಪುನಃ ಪ್ರಳಯಕಾಲದಲ್ಲಿ ಯಾವನಲ್ಲಿ ಲಯವನ್ನು ಹೊಂದುತ್ತವೆಯೋ ಎಲೈ ರಾಜನೇ, ಅಂತಹ ಲೋಕಪ್ರಧಾನನಾದ, ಜಗನ್ನಾಥನಾದ ವಿಷ್ಣುವಿನ ಪಾಪಗಳನ್ನು ಪರಿಹರಿಸುವ ಸಹಸ್ರನಾಮಗಳನ್ನು ನನ್ನಿಂದ ಕೇಳು.

ಯಾನಿ ನಾಮಾನಿ ಗೌಣಾನಿ ವಿಖ್ಯಾತಾನಿ ಮಹಾತ್ಮನಃ ।
ಋಷಿಭಿಃ ಪರಿಗೀತಾನಿ ತಾನಿ ವಕ್ಷ್ಯಾಮಿ ಭೂತಯೇ ॥೧೩॥

ಮಹಾತ್ಮನಾದ ಯಾವನ ಗುಣಪ್ರತಿಪಾದಕವಾದ ನಾಮಗಳು ವಿಶ್ವವೆಲ್ಲ ಹರಡಿ ಋಷಿಗಳಿಂದ ಹಾಡಲ್ಪಟ್ಟಿವೆಯೋ ಅಂತಹ ನಾಮಗಳನ್ನು ನಿನ್ನ (ನನ್ನ) ಶ್ರೇಯಸ್ಸಿಗೆ ಹೇಳುವೆನು.

(ಗೌಣ ಎಂದರೆ ಅಮುಖ್ಯ ಎಂದು ಅರ್ಥವಲ್ಲ. ವಿಶ್ವಾದಿ ಶಬ್ದಗಳು ವಿಷ್ಣುವಿನಲ್ಲಿ ಅಮುಖ್ಯ ಎನ್ನುವುದು ವ್ಯಾಹತವಾದುದು).

ವಿಶ್ವಂ ವಿಷ್ಣುರ್ವಷಟ್‌ಕಾರೋ ಭೂತಭವ್ಯಭವತ್ಪ್ರಭುಃ ।
ಭೂತಕೃದ್ಭೂತಭೃದ್‌ಭಾವೋ ಭೂತಾತ್ಮಾ ಭೂತಭಾವನಃ ॥೧೪॥

ವಿಶ್ವಂ= ವಿಶೇಷವಾದ ಜ್ಞಾನರೂಪನು, ವಿಷ್ಣುವಿನ ಪರಬ್ರಹ್ಮತ್ವವನ್ನು ಸೂಚಿಸುವುದಕ್ಕೆ ನಪುಂಸಕ ಲಿಂಗವಿದೆ. ಅಥವಾ ಎಲ್ಲ ಜೀವರಿಗೆ ಪ್ರವರ್ತಕನಾದವನು. ಅಥವಾ ಹೃದಯದಲ್ಲಿ ಪ್ರತಿಷ್ಠಿತನಾದವನು ಅಥವಾ ಸರ್ವಗುಣಪೂರ್ಣನಾದವನು. ಈ ವಿಶ್ವ ಶಬ್ದವು ಸರ್ವನಾಮ ಶಬ್ದವಲ್ಲ. ವಿಶ್ವ ಶಬ್ದವು ಸರ್ವನಾಮ ಶಬ್ದವಾಗಿದ್ದರೆ ಆ ಶಬ್ದವು ಮಂಗಳವಾದ ಮತ್ತು ಅಮಂಗಳವಾದ ಎಲ್ಲ ವಸ್ತುಗಳನ್ನೂ ಹೇಳುವುದರಿಂದ ಸ್ತೋತ್ರದಲ್ಲಿ ಪಠನೀಯವೇ ಆಗುತ್ತಿರಲಿಲ್ಲ. '**ವಿಷ್ಣೋಃ ಸಹಸ್ರನಾಮಾನಿ**' ಎಂದು ಉಪಕ್ರಮ ಮಾಡಿರುವುದರಿಂದ ಅದು ವಿಷ್ಣುವಿನ ಹೆಸರೇ ಆಗಿದೆ. ವಿಷ್ಣುವನ್ನು ವಿಶ್ವಾತ್ಮಕ, ವಿಶ್ವದಿಂದ ಅಭಿನ್ನ ಎಂದು ಹೇಳಬಾರದು. ವಿಶ್ವದಲ್ಲಿ ಎಲ್ಲವೂ ಸೇರಿರುವುದರಿಂದ ಜಡಾಭೇದವು ಯಾವ ವಾದಿಗೂ ಸಮ್ಮತವಲ್ಲವಾದ್ದರಿಂದ ಹಾಗೆ ಹೇಳಬಾರದು. ಏಕೆಂದರೆ '**ಭೂತಭವ್ಯಭವತ್ಪ್ರಭುಃ, ಮುಕ್ತಾನಾಂ ಪರಮಾ ಗತಿಃ**' ಎಂದು ಜೀವ-ಜಡಾತ್ಮಕ ವಸ್ತುಗಳಿಗೆ ಸ್ವಾಮಿ ಎಂದೂ ಮತ್ತು ಮುಕ್ತ ಜೀವರಿಗೆ ಒಡೆಯನೆಂದೂ ಹೇಳಿರುವುದರಿಂದ ಅದರ ವಿರೋಧ ಉಂಟಾಗುತ್ತದೆ.

ವಿಷ್ಣುಃ= ವ್ಯಾಪ್ತನಾದವನು. ಬಲಪ್ರೇರಕನಾದವನು.

ವಷಟ್‌ಕಾರಃ= ಪೂರ್ಣಜ್ಞಾನಾದಿ ಆರು ಗುಣಗಳೇ ಆಕಾರವಾಗಿ ಉಳ್ಳವನು. ಯಜ್ಞದಲ್ಲಿ ವಷಟ್ ಎಂಬ ಶಬ್ದದಿಂದ ಕರೆಯಲ್ಪಡುವವನು ಅಥವಾ ಜ್ಞಾನಾರ್ಥವಾಗಿ ಇತಿಹಾಸ-ಪುರಾಣಗಳಿಂದ ಸೇರಿದ ಐದು ವೇದಗಳನ್ನು ಮತ್ತು ನಿರ್ಣಾಯಕವಾದ ಬ್ರಹ್ಮಸೂತ್ರಗಳನ್ನು ರಚಿಸುವವನು.

ಭೂತಭವ್ಯಭವತ್ಪ್ರಭುಃ= ಹಿಂದೆ ಆಗಿ ಹೋದ, ಮುಂದೆ ಆಗಲಿರುವ ಮತ್ತು ಈಗ ಇರುವ ಜಗತ್ತುಗಳಿಗೆ ಒಡೆಯನಾಗಿರುವವನು.

ಭೂತಕೃತ್ = ಬ್ರಹ್ಮಾದಿ ಚೇತನರನ್ನು ಸೃಷ್ಟಿಸುವವನು.

ಭೂತಭೃತ್ = ಬ್ರಹ್ಮಾದಿ ಚೇತನರನ್ನು ಪೋಷಿಸುವವನು

ಭಾವಃ= ಸೃಷ್ಟಿ-ಸ್ಥಿತಿ-ಸಂಹಾರ ಇವುಗಳನ್ನು ನಡೆಸುವವನು

ಭೂತಾತ್ಮಾ= ಸಕಲ ಚೇತನರಿಗೂ ಆಕಾಶಾದಿ ಭೂತಪದಾರ್ಥಗಳಿಗೂ ಅಂತರ್ಯಾಮಿ.

ಭೂತಭಾವನಃ= ಚೇತನರಿಗೆ ಆಹಾರಾದಿಗಳನ್ನು ಕೊಟ್ಟು ಅವರನ್ನು ರಕ್ಷಿಸುವವನು.

ಪೂತಾತ್ಮಾ ಪರಮಾತ್ಮಾ ಚ ಮುಕ್ತಾನಾಂ ಪರಮಾ ಗತಿಃ ।
ಅವ್ಯಯಃ ಪುರುಷಃ ಸಾಕ್ಷೀ ಕ್ಷೇತ್ರಜ್ಞೋऽಕ್ಷರ ಏವ ಚ ॥೧೫॥

ಪೂತಾತ್ಮಾ= ನಿರ್ದುಷ್ಟನಾದ ಆತ್ಮ, ನಿರ್ದುಷ್ಟವಾದ ದೇಹವುಳ್ಳವನು, ನಿರ್ದುಷ್ಟವಾದ ಮನಸ್ಸುಳ್ಳವನು, ಪವಿತ್ರನಾದ ಆತ್ಮ.

ಪರಮಾತ್ಮಾ= ಉತ್ತಮನು, ಜಗತ್ತಿನ ಒಡೆಯನಾಗಿ ಎಲ್ಲ ಪದಾರ್ಥಗಳನ್ನೂ ತನ್ನದಾಗಿ ಸ್ವೀಕರಿಸುವವನು.

ಮುಕ್ತಾನಾಂ ಪರಮಾಗತಿಃ= ಮುಕ್ತರಿಂದ ಪ್ರಾಪ್ಯನಾದವನು ಮತ್ತು ಮುಕ್ತರಿಗೆ ಆಶ್ರಯನಾದವನು.

ಅವ್ಯಯಃ= ಯಾವ ವಿಕಾರವೂ ಇಲ್ಲದವನು.

ಪುರುಷಃ= ಜೀವರ ಶರೀರಗಳಲ್ಲಿ, ಹೃದಯ ಎಂಬ ಪಟ್ಟಣಗಳಲ್ಲಿ ನೆಲೆಸಿರುವವನು. ಅಸಾಧಾರಣ ಪುರುಷತ್ವವುಳ್ಳವನು. ಅತ್ಯಧಿಕವಾದ ಕ್ರಿಯಾಶೀಲನು.

ಸಾಕ್ಷೀ= ದೇಶ, ಕಾಲ ಅಥವಾ ವಸ್ತುಗಳ ವ್ಯವಧಾನವಿಲ್ಲದೆ ಎಲ್ಲವನ್ನೂ ಪ್ರತ್ಯಕ್ಷವಾಗಿ ನೋಡುವವನು.

ಕ್ಷೇತ್ರಜ್ಞಃ= ಅವ್ಯಕ್ತತತ್ತ್ವವೇ ಮೊದಲಾದ ಇಪ್ಪತ್ನಾಲ್ಕು ತತ್ತ್ವಗಳನ್ನು ಮತ್ತು ಅದರ ಅಭಿಮಾನಿಗಳನ್ನು ಪ್ರೇರಿಸುತ್ತಾ, ನಿತ್ಯವೂ ನಿರ್ದುಷ್ಟವಾದ ಚಕ್ಷುಸ್ಸಿನಿಂದ ನೋಡುತ್ತಿರುವವನು.

ಅಕ್ಷರಃ= ಯಾವುದೇ ರೀತಿಯ ನಾಶವಿಲ್ಲದವನು.

ಯೋಗೋ ಯೋಗವಿದಾಂ ನೇತಾ ಪ್ರಧಾನಪುರುಷೇಶ್ವರಃ ।
ನಾರಸಿಂಹವಪುಃ ಶ್ರೀಮಾನ್ ಕೇಶವಃ ಪುರುಷೋತ್ತಮಃ ॥೧೬॥

ಯೋಗಃ= ಸಕಲ ಗುಣಗಳನ್ನು ಹೊಂದಿದವನು.

ಯೋಗವಿದಾಂ ನೇತಾ= ಮನೋನಿಗ್ರಹರೂಪವಾದ ಯೋಗವನ್ನು, ಜ್ಞಾನ-ಯೋಗವನ್ನು, ಭಕ್ತಿಯೋಗವನ್ನು ಹೊಂದಿರುವವರನ್ನು ವಿಶೇಷವಾಗಿ ಪ್ರೇರಿಸುವವನು ಅಥವಾ ಮೋಕ್ಷಕ್ಕೆ ಕರೆದೊಯ್ಯುವವನು.

ಪ್ರಧಾನಪುರುಷೇಶ್ವರಃ= ಪ್ರಕೃತಿ ಮತ್ತು ಬ್ರಹ್ಮದೇವರಿಗೆ ಒಡೆಯನು.

ನಾರಸಿಂಹವಪುಃ= ಭಕ್ತರ ದೋಷಗಳನ್ನು ಹಿಂಸಿಸುವವನು (ನಾಶ ಮಾಡುವವನು), ಭಕ್ತರ ದೋಷಗಳನ್ನು ನಾಶ ಮಾಡುವ ದೇಹವುಳ್ಳವನು, ಮನುಷ್ಯ ದೇಹ ಮತ್ತು ಸಿಂಹದ ಶಿರಸ್ಸುಳ್ಳವನು.

ಶ್ರೀಮಾನ್= ಸರ್ವಾಧಿಕವಾದ ಸ್ವರೂಪಕಾಂತಿಯನ್ನು ಯಾವಾಗಲೂ ಪಡೆದಿರುವವನು.

ಕೇಶವಃ= ಬ್ರಹ್ಮ-ರುದ್ರರನ್ನು ಪ್ರವರ್ತಿಸುವವನು, ಉತ್ಕೃಷ್ಟವಾದ ಕೇಶವನ್ನು ಹೊಂದಿರುವವನು.

ಪುರುಷೋತ್ತಮಃ= ಪುರುಷರೆನಿಸುವ ಎಲ್ಲಾ ಚೇತನರಿಗಿಂತಲೂ ಉತ್ತಮನಾದವನು.

ಸರ್ವಃ ಶರ್ವಃ ಶಿವಃ ಸ್ಥಾಣುರ್ಭೂತಾದಿರ್ನಿಧಿರವ್ಯಯಃ ।
ಸಂಭವೋ ಭಾವನೋ ಭರ್ತಾ ಪ್ರಭವಃ ಪ್ರಭುರೀಶ್ವರಃ ॥೧೭॥

ಸರ್ವಃ= ಹಿಂದೆ ಹೋಗಿ ದೈತ್ಯಸಮೂಹವನ್ನು ನಾಶ ಮಾಡುವವನು, ಗುಣ ಪೂರ್ಣನಾದವನು.

ಶರ್ವಃ= ದೈತ್ಯರ ಮರಣಾನಂತರದಲ್ಲಿಯೂ ಅವರಿಗೆ ಸುಖವನ್ನು ನಿವಾರಣೆ ಮಾಡುವವನು.

ಶಿವಃ= ಶೋಭನನಾದವನು, ನಿರ್ವಿಕಾರಾನಂದ ಸ್ವರೂಪನು.

ಸ್ಥಾಣುಃ= ಸ್ಥಿರನಾದವನು. ಶಿವಾದಿಗಳ ಎಲ್ಲ ನಾಮಗಳೂ ಭಗವಂತನ ನಾಮಗಳೇ. ಶಿವಾದಿ ದೇವತೆಗಳೆಲ್ಲರೂ ದೇವರ ನಾಮವನ್ನೇ ಧರಿಸಿದ್ದಾರೆ ಎಂದು ಸೂಚಿಸುವುದಕ್ಕೆ

ಹೀಗೆ ಹೇಳಲಾಗಿದೆ. '**ಯೋ ದೇವಾನಾಂ**' ಎಂಬ ಋಗ್ವೇದದ ಮಂತ್ರವು ಎಲ್ಲ ದೇವತೆಗಳು ದೇವರ ಹೆಸರನ್ನೇ ಧರಿಸಿದ್ದಾರೆಂದು ಹೇಳುತ್ತದೆ.

ಭೂತಾದಿಃ= ಸಕಲ ಭೂತಗಳಿಗೂ ಕಾರಣನು.

ನಿಧಿಃ= ಚೆನ್ನಾಗಿ ಧರಿಸುವವನು. ಸಜ್ಜನರಿಂದ ಹೃದಯದಲ್ಲಿ ಚೆನ್ನಾಗಿ ಧರಿಸಲ್ಪಟ್ಟವನು.

ಅವ್ಯಯಃ= ಯಾವುದೇ ವಿಕಾರಕ್ಕೆ ಒಳಗಾಗದವನು.

ಸಂಭವಃ= ಜಗತ್ತಿನ ಉತ್ಪತ್ತಿಯನ್ನು ಚೆನ್ನಾಗಿ ಮಾಡುವವನು.

ಭಾವನಃ= ಮೂರು ವಿಧವಾದ ಜೀವರಿಗೂ ಅವರ ಸ್ವಭಾವವನ್ನು ಹೊಂದಿಸುವವನು, ರಕ್ಷಿಸುವವನು.

ಭರ್ತಾ= ಎಲ್ಲವನ್ನೂ ಧರಿಸಿದವನು, ಎಲ್ಲವನ್ನೂ ಪೋಷಿಸುವವನು.

ಪ್ರಭವಃ= ಎಲ್ಲವನ್ನೂ ಸೃಷ್ಟಿಸುವವನು, ಎಲ್ಲ ಶುಭಗಳಿಗೆ ಕಾರಣನಾದವನು.

ಪ್ರಭುಃ= ಸರ್ವಸಮರ್ಥ.

ಈಶ್ವರಃ= ಈಶರೆನಿಸುವ ಲಕ್ಷ್ಮೀ, ಬ್ರಹ್ಮ, ರುದ್ರ, ಶೇಷ ಮೊದಲಾದ ದೇವತೆಗಳಿಗಿಂತಲೂ ಉತ್ತಮನು.

ಸ್ವಯಂಭೂಃ ಶಂಭುರಾದಿತ್ಯಃ ಪುಷ್ಕರಾಕ್ಷೋ ಮಹಾಸ್ವನಃ ।
ಅನಾದಿನಿಧನೋ ಧಾತಾ ವಿಧಾತಾ ಧಾತುರುತ್ತಮಃ ॥೧೮॥

ಸ್ವಯಂಭೂಃ= ಸ್ವತಂತ್ರ, ತನ್ನಿಂದ ತಾನೇ ಅವತರಿಸುವವನು, ಸ್ವತಂತ್ರನಾಗಿ ಎಲ್ಲವನ್ನೂ ತಿಳಿದವನು.

ಶಂಭುಃ= ಸುಖಕ್ಕೆ ಆಶ್ರಯನಾದವನು.

ಆದಿತ್ಯಃ= ವಾಮನ ರೂಪದಿಂದ ಅದಿತಿಯಲ್ಲಿ ಜನಿಸಿದವನು.

ಪುಷ್ಕರಾಕ್ಷಃ= ಕಮಲದಂತೆ ಕಣ್ಣುಳ್ಳವನು.

ಮಹಾಸ್ವನಃ= ಗಂಭೀರವಾದ ಧ್ವನಿಯುಳ್ಳವನು.

ಅನಾದಿನಿಧನಃ= ಜನನ-ಮರಣ ರಹಿತನು.

ಧಾತಾ= ಜಗತ್ತಿಗೆ ಧಾರಕ ಮತ್ತು ಪೋಷಕನು.

ವಿಧಾತಾ= ವಿಶಿಷ್ಟವಾಗಿ ಧಾರಣೆ-ಪೋಷಣೆಯನ್ನು ಮಾಡುವವನು. ವಿಚಿತ್ರವಾದ ಜೀವರನ್ನು ವಿಶೇಷವಾಗಿ ಪೋಷಿಸುವವನು.

ಧಾತುರುತ್ತಮಃ= ಚತುರ್ಮುಖ ಬ್ರಹ್ಮನಿಗಿಂತಲೂ ಶ್ರೇಷ್ಠನಾದವನು.

ಅಪ್ರಮೇಯೋ ಹೃಷೀಕೇಶಃ ಪದ್ಮನಾಭೋऽಮರಪ್ರಭುಃ ।
ವಿಶ್ವಕರ್ಮಾ ಮನುಸ್ತ್ವಷ್ಟಾ ಸ್ಥವಿಷ್ಠಃ ಸ್ಥವಿರೋ ಧ್ರುವಃ ॥೧೯॥

ಅಪ್ರಮೇಯಃ= ಚೆನ್ನಾಗಿ ತಿಳಿದುಕೊಳ್ಳಲು ಅಸಾಧ್ಯನಾದವನು.

ಹೃಷೀಕೇಶಃ= ಇಂದ್ರಿಯಗಳಿಗೆ ಅಧಿಪತಿ, ಹರ್ಷರೂಪವಾದ ಕೇಶವುಳ್ಳವನು.

ಪದ್ಮನಾಭಃ= ನಾಭಿಯಲ್ಲಿ ಪದ್ಮವನ್ನು ಹೊಂದಿದವನು.

ಅಮರಪ್ರಭುಃ= ದೇವತೆಗಳಿಗೆ ಒಡೆಯನಾದವನು.

ವಿಶ್ವಕರ್ಮಾ= ಚೇತನರ ಪುಣ್ಯ-ಪಾಪಾದಿ ಕರ್ಮಗಳಿಗೆ ಪ್ರೇರಕನಾದವನು. ಜಗತ್ತಿಗೆ ಸಂಬಂಧಿಸಿದ ಎಲ್ಲ ಕರ್ಮಗಳನ್ನೂ ಮಾಡುವವನು.

ಮನುಃ= ಸರ್ವಜ್ಞ.

ತ್ವಷ್ಟಾ= ಹದಿನಾಲ್ಕು ಭುವನಗಳನ್ನು ಸೃಷ್ಟಿಸುವವನು (ಜಗತ್ತನ್ನು ಸೃಷ್ಟಿಸುವ ಬಡಿಗ) ಅಥವಾ ಪ್ರಳಯದಲ್ಲಿ ಜಗತ್ತನ್ನು ಕ್ಷಯಗೊಳಿಸುವವನು.

ಸ್ಥವಿಷ್ಠಃ= ಅನಾದಿಕಾಲದಿಂದ ಇರುವುದರಿಂದ ಬಹಳ ವಯಸ್ಸಾದವನು.

ಸ್ಥವಿರಃ= ಸ್ಥಿರವಾದ ಜಗತ್ತಿನಲ್ಲಿ ವಿಶೇಷವಾಗಿ ಶೋಭಿಸುವವನು, ವಿಶೇಷವಾದ ಸುಖರೂಪನಾದವನು.

ಧ್ರುವಃ= ಸ್ಥಿರನಾದವನು.

ಅಗ್ರಾಹ್ಯಃ ಶಾಶ್ವತಃ ಕೃಷ್ಣೋ ಲೋಹಿತಾಕ್ಷಃ ಪ್ರತರ್ದನಃ ।
ಪ್ರಭೂತಸ್ತ್ರಿಕಕುಬ್ಧಾಮ(ದ್ಧಾ)ಮ ಪವಿತ್ರಂ ಮಂಗಲಂ ಪರಮ್ ॥೨೦॥

ಅಗ್ರಾಹ್ಯಃ= ಸಮಗ್ರವಾಗಿ ತಿಳಿಯಲ್ಪಡಲು ಅಶಕ್ಯನಾದವನು, ಇಂದ್ರಿಯಗಳಿಗೆ ಅಗೋಚರನಾದವನು.

ಶಾಶ್ವತಃ= ಯಾವಾಗಲೂ ಒಂದೇ ರೀತಿ ಇರುವವನು.

ಕೃಷ್ಣಃ= ತನ್ನಸೌಂದರ್ಯಾದಿ ಗುಣಗಳಿಂದ ಎಲ್ಲರನ್ನೂ ತನ್ನಕಡೆಗೆ ಎಳೆಯುವವನು.

ಲೋಹಿತಾಕ್ಷಃ= ಕೆಂಪಾದ ಕಣ್ಣುಳ್ಳವನು.

ಪ್ರತರ್ದನಃ= ದುಷ್ಟರನ್ನು ಚೆನ್ನಾಗಿ ಭಯಪಡಿಸುವವನು.

ಪ್ರಭೂತಃ= ಭೂಮಿಯಲ್ಲಿ ಚೆನ್ನಾಗಿ ವ್ಯಾಪ್ತನಾದವನು.

ತ್ರಿಕಕುತ್= ವರಾಹಾವತಾರದಲ್ಲಿ ಎರಡು ಭುಜಗಳು ಮತ್ತು ಸ್ಕಂಧಮೂಲ ಈ ಮೂರು ಉನ್ನತ ಪ್ರದೇಶಗಳನ್ನು ಹೊಂದಿದವನು.

ಧಾಮ= ಆಧಾರರೂಪನು, ತೇಜೋರೂಪಿಯಾದವನು.

ತ್ರಿಕಕುದ್ಧಾಮ= ಸ್ವರೂಪಾನಂದವನ್ನು ಕೊಡುವ ಶ್ವೇತದ್ವೀಪ-ಅನಂತಾಸನ ಮತ್ತು ವೈಕುಂಠ ಲೋಕಗಳಲ್ಲಿ ವಾಸಿಸುವವನು.

ಪವಿತ್ರಂ= ಪರಿಶುದ್ಧನಾದವನು, ಪವಿತ್ರೀಕರಿಸುವವನು.

ಮಂಗಲಂ= ಶುಭಸ್ವರೂಪನು.

ಪರಂ= ನಿರ್ದುಷ್ಟಗುಣಪರಿಪೂರ್ಣ, ಸರ್ವೋತ್ತಮ.

ಈಶಾನಃ ಪ್ರಾಣದಃ ಪ್ರಾಣೋ ಜ್ಯೇಷ್ಠಃ ಶ್ರೇಷ್ಠಃ ಪ್ರಜಾಪತಿಃ ।
ಹಿರಣ್ಯಗರ್ಭೋ ಭೂಗರ್ಭೋ ಮಾಧವೋ ಮಧುಸೂದನಃ ॥೨೧॥

ಈಶಾನಃ= ಲೋಕಕ್ಕೆ ಒಡೆಯರಾದ ಬ್ರಹ್ಮ-ರುದ್ರಾದಿಗಳಿಗೂ ಚೇಷ್ಟಕ.

ಪ್ರಾಣದಃ= ಇಂದ್ರಿಯಗಳನ್ನು ನೀಡುವವನು ಅಥವಾ ನಾಶ ಮಾಡುವವನು.

ಪ್ರಾಣಃ= ಶ್ರೇಷ್ಠವಾದ ಯಜ್ಞಾದಿ ಪ್ರವರ್ತಕ, ಪ್ರಕೃಷ್ಟವಾದ ಸುಖವನ್ನು ಹೊಂದಿದವನು.

ಜ್ಯೇಷ್ಠಃ= ವಯಸ್ಸಿನಿಂದ ಬಹಳ ದೊಡ್ಡವನು.

ಶ್ರೇಷ್ಠಃ= ಅತಿಶಯವಾದ ಮಹಿಮೆಯನ್ನು ಹೊಂದಿದವನು, ಅತಿಶಯವಾಗಿ ಪ್ರಶಂಸೆಗೆ ಅರ್ಹನಾದವನು.

ಪ್ರಜಾಪತಿಃ= ಪ್ರಜೆಗಳಿಗೆ ಒಡೆಯ.

ಹಿರಣ್ಯಗರ್ಭಃ= ಲೋಕಕ್ಕೆ ಹಿತವಾದ, ರಮಣೀಯವಾದ ಉದರವುಳ್ಳವನು.

ಭೂಗರ್ಭಃ= ಭೂಮಿಯನ್ನು ಉದರದಲ್ಲಿ ಹೊಂದಿದವನು.

ಮಾಧವಃ= ಲಕ್ಷ್ಮೀಪತಿ.

ಮಧುಸೂದನಃ= ಸುಖ ಸಾಧನಗಳಾದ ವಿಷಯಗಳನ್ನು ನಾಶ ಮಾಡುವವನು.

ಈಶ್ವರೋ ವಿಕ್ರಮೀ ಧನ್ವೀ ಮೇಧಾವೀ ವಿಕ್ರಮಃ ಕ್ರಮಃ ।
ಅನುತ್ತಮೋ ದುರಾಧರ್ಷಃ ಕೃತಜ್ಞಃ ಕೃತಿರಾತ್ಮವಾನ್ ॥೨೨॥

ಈಶ್ವರಃ= ಒಡೆಯ, ಸಮರ್ಥ.

ವಿಕ್ರಮಃ= ತ್ರಿವಿಕ್ರಮ ಅವತಾರದಲ್ಲಿ ವಿಶೇಷವಾದ ಪಾದವಿಕ್ಷೇಪವನ್ನು ಮಾಡಿದವನು.

ಧನ್ವೀ= ಶ್ರೇಷ್ಠವಾದ ಧನುಸ್ಸನ್ನು ಹೊಂದಿದವನು.

ಮೇಧಾವೀ= ಧಾರಣಶಕ್ತಿಯಿಂದ ಕೂಡಿದ ನಿರವಧಿಕವಾದ ಬುದ್ಧಿಯನ್ನು ಹೊಂದಿದವನು.

ವಿಕ್ರಮೀ= ವಿಶೇಷವಾದ ತಾರತಮ್ಯಕ್ಕೆ ನಿಯಾಮಕನಾದವನು, ತನ್ನ ರೂಪದಲ್ಲಿ ತಾರತಮ್ಯವಿಲ್ಲದವನು.

ಕ್ರಮಃ= ಲಕ್ಷ್ಮಿಯನ್ನು ಪರಿಚಾರಿಕೆಯಾಗಿ ಹೊಂದಿದವನು.

ಅನುತ್ತಮಃ= ಸರ್ವಶ್ರೇಷ್ಠನಾದವನು.

ದುರಾಧರ್ಷಃ= ಸೋಲಿಸಲು ಅಸಾಧ್ಯನಾದವನು, ಅವಮಾನಿಸಲು ಅಶಕ್ಯನಾದವನು.

ಕೃತಜ್ಞಃ= ಜೀವರ ಪುಣ್ಯ-ಪಾಪ ಕರ್ಮಗಳನ್ನು ತಿಳಿದವನು.

ಕೃತಿಃ= ದುಃಖವನ್ನು ಛೇದಿಸುವವನು.

ಆತ್ಮವಾನ್= ಪ್ರಶಸ್ತವಾದ ಶರೀರವನ್ನು ಯಾವಾಗಲೂ ಹೊಂದಿರುವವನು.

ಸುರೇಶಃ ಶರಣಂ ಶರ್ಮ ವಿಶ್ವರೇತಾಃ ಪ್ರಜಾಭವಃ ।
ಅಹಃ ಸಂವತ್ಸರೋ ವ್ಯಾಲಃ ಪ್ರತ್ಯಯಃ ಸರ್ವದರ್ಶನಃ ॥೨೩॥

ಸುರೇಶಃ= ದೇವತೆಗಳಿಗೆ ಒಡೆಯ.

ಶರಣಂ= ಸಂಸಾರಭೀತರಿಗೆ ಮತ್ತು ಭಕ್ತರಿಗೆ ಆಶ್ರಯ.

ಶರ್ಮ= ಪರಮಾನಂದ ಸ್ವರೂಪಿ.

ವಿಶ್ವರೇತಾಃ= ವಿಶ್ವಕ್ಕೆ ಕಾರಣವಾದ ರೇತಸ್ಸುಳ್ಳವನು.

ಪ್ರಜಾಭವಃ= ಪ್ರಜೆಗಳ ಉತ್ಪತ್ತಿಗೆ ಕಾರಣನಾದವನು.

ಅಹಃ= ಹೇಯನಲ್ಲದವನು.

ಸಂವತ್ಸರಃ= ಭಕ್ತರನ್ನು ಶಿಶುಗಳಂತೆ ಚೆನ್ನಾಗಿ ರಕ್ಷಿಸುವವನು.

ವ್ಯಾಲಃ= ವಿಶಿಷ್ಟ ವಿಷಯಗಳನ್ನು ಚೆನ್ನಾಗಿ ಆಸ್ವಾದಿಸುವವನು ಅಥವಾ ಜಗತ್ತಿಗೆ ಕ್ಷಯಕಾರಕನು. ವಿಶೇಷವಾಗಿ ಪ್ರಕಾಶಮಾನನಾದವನು. ವಿಶೇಷವಾಗಿ ಎಲ್ಲ ಕಡೆಯಲ್ಲಿಯೂ ಸನ್ನಿಹಿತನಾದವನು.

ಪ್ರತ್ಯಯಃ= ಪ್ರತಿ ವಿಷಯವನ್ನೂ ತಿಳಿದವನು.

ಸರ್ವದರ್ಶನಃ= ಸರ್ವವನ್ನೂ ಸಾಕ್ಷಾತ್ತಾಗಿ ನೋಡುವವನು.

ಅಜಃ ಸರ್ವೇಶ್ವರಃ ಸಿದ್ಧಃ ಸಿದ್ಧಿಃ ಸರ್ವಾದಿರಚ್ಯುತಃ ।
ವೃಷಾಕಪಿರಮೇಯಾತ್ಮಾ ಸರ್ವಯೋಗವಿನಿಃಸೃತಃ ॥೨೪॥

ಅಜಃ= ಸ್ವರಾಕೃತ ಶರೀರ ಸಂಬಂಧ ರೂಪವಾದ ಜನನವಿಲ್ಲದವನು.

ಸರ್ವೇಶ್ವರಃ= ಎಲ್ಲರಿಗೂ ಒಡೆಯನಾದವನು.

ಸಿದ್ಧಃ= ಸ್ವಾಭಾವಿಕವಾದ, ನಿರವಧಿಕವಾದ ಅಣಿಮಾದಿ ಸಿದ್ಧಿಯನ್ನು ಹೊಂದಿದವನು.

ಸಿದ್ಧಿಃ= ತನ್ನಲ್ಲಿ ಸ್ನೇಹಬಂಧವನ್ನು ಹೊಂದಿರುವವನು.

ಸರ್ವಾದಿಃ= ಎಲ್ಲದಕ್ಕೂ ಕಾರಣನಾದವನು ಅಥವಾ ಎಲ್ಲವನ್ನೂ ಸ್ವೀಕರಿಸುವವನು ಅಥವಾ ಎಲ್ಲವನ್ನೂ ಭಕ್ಷಿಸುವವನು.

ಅಚ್ಯುತಃ= ಸ್ವರೂಪದಿಂದ, ಗುಣದಿಂದ ಅಥವಾ ಕ್ರಿಯೆಯಿಂದ ಚ್ಯುತಿ ಇಲ್ಲದವನು.

ವೃಷಾಕಪಿಃ= ಸುಖದ ಮಳೆಯನ್ನು ಸುರಿಸುವವನು ಮತ್ತು ದುಃಖವನ್ನು ನಾಶ ಮಾಡುವವನು.

ಅಮೇಯಾತ್ಮಾ= ಸಮಗ್ರವಾಗಿ ತಿಳಿಯಲು ಅಶಕ್ಯವಾದ ಸ್ವರೂಪವುಳ್ಳವನು.

ಸರ್ವಯೋಗವಿನಿಃ ಸೃತಃ= ಎಲ್ಲದರ ಸಂಬಂಧವನ್ನು ಕಳೆದುಕೊಂಡಿರುವವನು.

ವಸುರ್ವಸುಮನಾಃ ಸತ್ಯಃ ಸಮಾತ್ಮಾ ಸಮ್ಮಿತಃ ಸಮಃ ।
ಅಮೋಘಃ ಪುಂಡರೀಕಾಕ್ಷೋ ವೃಷಕರ್ಮಾ ವೃಷಾಕೃತಿಃ ॥೨೫॥

ವಸುಃ= ಎಲ್ಲಕಡೆಯಲ್ಲಿಯೂ ವಾಸ ಮಾಡುವವನು, ಶ್ರೇಷ್ಠವಾದ ಸುಖ ಉಳ್ಳವನು.

ವಸುಮನಾಃ= ಶ್ರೇಷ್ಠವಾದ ತನ್ನ ಐಶ್ವರ್ಯಧನದಲ್ಲಿ ಮನಸ್ಸುಳ್ಳವನು.

ಸತ್ಯಃ= ಸಮೀಚೀನವಾದ ಆನಂದಜ್ಞಾನವುಳ್ಳವನು, ಮುಕ್ತಾಮುಕ್ತ ನಿಯಾಮಕನು.

ಸಮಾತ್ಮಾ= ನೀಚೋಚ್ಚಪ್ರಾಣಿಗಳಲ್ಲಿಯೂ ಸಮನಾಗಿರುವವನು, ಜ್ಞಾನಾನಂದಾದಿ ಗುಣಗಳಲ್ಲಿ ಒಂದೇ ಪ್ರಕಾರವುಳ್ಳವನು. ಒಂದೇ ಪ್ರಕಾರವಾದ ಸ್ವರೂಪವನ್ನು ಹೊಂದಿರುವವನು.

ಸಮ್ಮಿತಃ= ಸರಿಯಾಗಿ ತಿಳಿಯಲ್ಪಡುವವನು.

ಸಮಃ= ಲಕ್ಷ್ಮಿಯಿಂದ ಸಹಿತನಾದವನು.

ಅಮೋಘಃ= ನಿರರ್ಥಕವಾದ ಸಂಕಲ್ಪವಾಗಲೀ, ಮಾತಾಗಲೀ, ಚೇಷ್ಟೆಯಾಗಲೀ ಇಲ್ಲದವನು.

ಪುಂಡರೀಕಾಕ್ಷಃ= ಹೃದಯಭಾಗದಲ್ಲಿ ವ್ಯಾಪಿಸಿರುವವನು.

ವೃಷಕರ್ಮಾ= ಈಶ್ವರನ ವಾಹನವಾದ ನಂದಿಯಲ್ಲಿ ಗಮನಾಗಮನವನ್ನು ಮಾಡುವವನು.

ವೃಷಾಕೃತಿಃ= ನಂದಿಯಂತೆ ಭಯಂಕರವಾದ ಆಕಾರವುಳ್ಳವನು.

ರುದ್ರೋ ಬಹುಶಿರಾ ಬಭ್ರುರ್ವಿಶ್ವಯೋನಿಃ ಶುಚಿಶ್ರವಾಃ ।
ಅಮೃತಃ ಶಾಶ್ವತಃ ಸ್ಥಾಣುರ್ವರಾರೋಹೋ ಮಹಾತಪಾಃ ॥೨೬॥

ರುದ್ರಃ= ರೋಗವನ್ನು ಪರಿಹರಿಸುವವನು

ಬಹುಶಿರಾಃ= ಅನೇಕ ಶಿರಸ್ಸುಗಳನ್ನು ಹೊಂದಿರುವವನು.

ಬಭ್ರುಃ= ಕಪಿಲವರ್ಣನು. ಪೋಷಿಸುವ ಸ್ವಭಾವದವನು. ಬಂಧಕವಾದ ಭ್ರೂಮಂಡಲವುಳ್ಳವನು.

ವಿಶ್ವಯೋನಿಃ= ಪ್ರಪಂಚಕ್ಕೆ ನೇರವಾಗಿ ಕಾರಣನಾದವನು.

ಶುಚಿಶ್ರವಾಃ= ಶುದ್ಧವಾದ ಶ್ರವಣವುಳ್ಳವನು (ಯಾವನ ಮಹಿಮೆಯ ಶ್ರವಣವು ಶುದ್ಧಿಯನ್ನು ತಂದುಕೊಡುತ್ತದೋ ಅಂತಹವನು).

ಅಮೃತಃ= ಎಂದಿಗೂ ಮರಣವನ್ನು ಹೊಂದದವನು.

ಶಾಶ್ವತಃ= ಯಾವಾಗಲೂ ಒಂದೇ ರೀತಿಯಾಗಿ ಇರುವವನು.

ಸ್ಥಾಣುಃ= ಅಣುವಾಗಿ ಎಲ್ಲ ಕಡೆಯಲ್ಲಿಯೂ ಇರುವವನು.

ವರಾರೋಹಃ= ಉತ್ತಮವಾದ ವೈಕುಂಠಾದಿ ಲೋಕಗಳಿಗೆ ಸಾಧಕರನ್ನು ಏರುವಂತೆ ಮಾಡುವವನು.

ಮಹಾತಪಾಃ= ಶ್ರೇಷ್ಠವಾದ, ಜ್ಞಾನರೂಪವಾದ ತಪಸ್ಸುಳ್ಳವನು.

ಸರ್ವಗಃ ಸರ್ವವಿದ್‌ಭಾನುರ್ವಿಷ್ವಕ್ಸೇನೋ ಜನಾರ್ದನಃ ।
ವೇದೋ ವೇದವಿದವ್ಯಂಗೋ ವೇದಾಂಗೋ ವೇದವಿತ್ಕವಿಃ ॥೨೭॥

ಸರ್ವಗಃ= ಎಲ್ಲವನ್ನೂ ಪ್ರವೇಶಿಸಿರುವವನು.

ಸರ್ವವಿತ್= ಎಲ್ಲವನ್ನೂ ವಿಶೇಷವಾಗಿ ತಿಳಿದಿರುವವನು.

ಭಾನುಃ= ಪ್ರಕಾಶಶೀಲನಾದವನು.

ವಿಷ್ವಕ್ಸೇನಃ= ಎಲ್ಲ ಕಡೆಯಲ್ಲಿಯೂ ತನ್ನ ಭಟರ ಸೈನ್ಯವನ್ನು ಹೊಂದಿದವನು.

ಜನಾರ್ದನಃ= ದುಷ್ಟ ಜನರನ್ನು ಅರ್ದಿಸುವವನು, ಭಕ್ತರ ಜನನವನ್ನು ಅರ್ದಿಸುವವನು.

ವೇದಃ= ಜ್ಞಾನಸ್ವರೂಪಿಯಾದವನು.

ವೇದವಿತ್= ವೇದವನ್ನು ಚೆನ್ನಾಗಿ ತಿಳಿದವನು.

ಅವ್ಯಂಗಃ= ಯಾವಾಗಲೂ ಸಕಲ ಅಂಗಗಳಿಂದ ಕೂಡಿದವನು.

ವೇದಾಂಗಃ= ತನ್ನ ಅಂಗಗಳಲ್ಲಿ ವೇದಗಳಿಗೆ ಆಶ್ರಯವನ್ನು ನೀಡಿದವನು.

ವೇದವಿತ್= ವೇದಗಳಿಂದ ತಿಳಿಯಲ್ಪಡುವವನು, ವೇದಗಳಿಂದ ಹೊಂದಲ್ಪಡುವವನು.

ಕವಿಃ= ಸರ್ವಜ್ಞನಾದವನು.

ಲೋಕಾಧ್ಯಕ್ಷಃ ಸುರಾಧ್ಯಕ್ಷೋ ಧರ್ಮಾಧ್ಯಕ್ಷಃ ಕೃತಾಕೃತಃ ।
ಚತುರಾತ್ಮಾ ಚತುರ್ವ್ಯೂಹಶ್ಚತುರ್ದಂಷ್ಟ್ರಶ್ಚತುರ್ಭುಜಃ ॥೨೮॥

ಲೋಕಾಧ್ಯಕ್ಷಃ= ಸಕಲ ಲೋಕಗಳಿಗೂ ಅಧಿಪತಿಯಾದವನು.

ಸುರಾಧ್ಯಕ್ಷಃ= ದೇವತೆಗಳಿಗೆ ಅಧಿಪತಿಯಾದವನು.

ಧರ್ಮಾಧ್ಯಕ್ಷಃ= ಧರ್ಮಕ್ಕೆ ಅಧಿಪತಿಯಾದವನು.

ಕೃತಾಕೃತಃ= ಅಕೃತವೆನಿಸುವ ಮೋಕ್ಷಕ್ಕೆ ಕಾರಣನಾದವನು. ನಿತ್ಯವಾದ ಕಾಲಾಕಾಶಾದಿಗಳಿಗೆ ಪರಾಧೀನವಾದ ವಿಶೇಷಾ ವಾಪ್ತಿರೂಪವಾದ ಸೃಷ್ಟಿಯನ್ನು ಉಂಟು ಮಾಡುವವನು.

ಚತುರಾತ್ಮಾ= ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧ ಎಂಬ ನಾಲ್ಕು ರೂಪವುಳ್ಳವನು.

ಚತುರ್ವ್ಯೂಹಃ= ಜಗತ್ತಿನ ಸೃಷ್ಟಿ, ಪಾಲನೆ, ಸಂಹಾರ ಮತ್ತು ಯೋಗ್ಯರಿಗೆ ಮೋಕ್ಷ ಎಂಬ ನಾಲ್ಕು ಚಟುವಟಿಕೆಗಳಿಗಾಗಿ ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣ ಮತ್ತು ವಾಸುದೇವ ಎಂಬ ವಿಭಾಗವನ್ನು ಹೊಂದಿರುವವನು.

ಚತುರ್ದಂಷ್ಟ್ರಃ= ನಾಲ್ಕು ಕೋರೆ ಹಲ್ಲುಗಳನ್ನುಳ್ಳವನು.

ಚತುರ್ಭುಜಃ= ನಾಲ್ಕು ಭುಜಗಳನ್ನು ಹೊಂದಿದವನು.

ಭ್ರಾಜಿಷ್ಣುರ್ಭೋಜನಂ ಭೋಕ್ತಾ ಸಹಿಷ್ಣುರ್ಜಗದಾದಿಜಃ ।
ಅನಘೋ ವಿಜಯೋ ಜೇತಾ ವಿಶ್ವಯೋನಿಃ ಪುನರ್ವಸುಃ ॥೨೯॥

ಭ್ರಾಜಿಷ್ಣುಃ= ಸ್ವಭಾವತಃ ಪ್ರಕಾಶರೂಪನಾಗಿರುವವನು.

ಭೋಜನಂ= ಭಕ್ತರಿಗೆ ಸುಖಭೋಗವನ್ನು ಕೊಡುವವನು, ಎಲ್ಲರಿಂದಲೂ ಉಪಜೀವಿಸಲ್ಪಡುವವನು.

ಭೋಕ್ತಾ= ಸರ್ವಸಾರವನ್ನು ಭೋಗಿಸುವವನು.

ಸಹಿಷ್ಣುಃ= ಭಕ್ತರು ಮಾಡುವ ಅಪರಾಧವನ್ನು ವಿಶೇಷವಾಗಿ ಸಹಿಸಿಕೊಳ್ಳುವವನು.

ಜಗದಾದಿಜಃ= ಜಗತ್ತಿನ ಸೃಷ್ಟಿಯ ಆದಿಯಲ್ಲಿ ಪುರುಷ ರೂಪದಿಂದ ವ್ಯಕ್ತನಾದವನು.

ಅನಘಃ= ಪಾಪರಹಿತನು.

ವಿಜಯಃ= ವಿಶೇಷವಾದ ಉತ್ಕರ್ಷವನ್ನು ಹೊಂದಿದವನು.

ಜೇತಾ= ಪ್ರತಿಯೊಂದು ಗುಣದ ವಿಷಯದಲ್ಲಿಯೂ ಎಲ್ಲರನ್ನೂ ಸ್ವಾಭಾವಿಕವಾಗಿ ಜಯಿಸಿರುವವನು.

ವಿಶ್ವಯೋನಿಃ= ಅಸ್ವತಂತ್ರರಲ್ಲಿ ಪೂರ್ಣಗುಣಳಾದ ಲಕ್ಷ್ಮಿಯನ್ನು ಭಾರ್ಯೆಯಾಗಿ ಹೊಂದಿದವನು.

ಪುನರ್ವಸುಃ= ಭಕ್ತರಿಗೆ ಪುನಃ ಪುನಃ ಜ್ಞಾನ, ದ್ರವ್ಯ ಸಂಪತ್ತನ್ನು ಕೊಡುವವನು.

ಉಪೇಂದ್ರೋ ವಾಮನಃ ಪ್ರಾಂಶುರಮೋಘಃ ಶುಚಿರೂರ್ಜಿತಃ ।
ಅತೀಂದ್ರಃ ಸಂಗ್ರಹಃ ಸರ್ಗೋ ಧೃತಾತ್ಮಾ ನಿಯಮೋ ಯಮಃ ॥೩೦॥

ಉಪೇಂದ್ರಃ= ಉತ್ಕೃಷ್ಟನಾದವನು, ತನ್ನಸ್ವರೂಪವನ್ನು ಪ್ರತ್ಯಕ್ಷವಾಗಿ ತಿಳಿಯುವವನು.

ವಾಮನಃ= ಬಲಿಯನ್ನು ಪಾತಾಳಕ್ಕೆ ತಳ್ಳಿದವನು.

ಪ್ರಾಂಶುಃ= ನಿಯತನಾಗಿರುವವನು.

ಅಮೋಘಃ= ತನ್ನ ಸ್ಮರಣೆ, ಕೀರ್ತನೆ, ಪ್ರಣಾಮ, ಆರಾಧನೆ ಮೊದಲಾದವುಗಳನ್ನು ನಿರರ್ಥಕವಾಗಿ ಮಾಡದವನು.

ಶುಚಿಃ= ಶುದ್ಧನಾದವನು.

ಊರ್ಜಿತಃ= ಅತಿಶಯವಾದ ಚೇಷ್ಟೆಯುಳ್ಳವನು. ಅತಿಶಯವಾದ ಬಲವುಳ್ಳವನು. ಅತಿಶಯವಾದ ಉತ್ಸಾಹವುಳ್ಳವನು.

ಅತೀಂದ್ರಃ= ಶಚೀಪತಿಯಾದ ಇಂದ್ರನನ್ನು ಮೀರಿಸಿದವನು.

ಸಂಗ್ರಹಃ= ಎಲ್ಲವನ್ನೂ ತನ್ನ ವಶದಲ್ಲಿಟ್ಟುಕೊಳ್ಳುವವನು.

ಸರ್ಗಃ= ಸೃಷ್ಟಿಯನ್ನು ಮಾಡುವವನು.

ಧೃತಾತ್ಮಾ= ಬ್ರಹ್ಮಾದಿ ದೇವರನ್ನು ಧರಿಸಿರುವವನು ಮತ್ತು ಪೋಷಿಸುವವನು.

ನಿಯಮಃ= ಚೆನ್ನಾಗಿ ನಿಯಂತ್ರಿಸುವವನು.

ಯಮಃ= ಸಂಹಾರಕನಾದವನು.

ವೇದ್ಯೋ ವೈದ್ಯಃ ಸದಾಯೋಗೀ ವೀರಹಾ ಮಾಧವೋ ಮಧುಃ ।
ಅತೀಂದ್ರಿಯೋ ಮಹಾಮಾಯೋ ಮಹೋತ್ಸಾಹೋ ಮಹಾಬಲಃ ॥

ವೇದ್ಯಃ= ತಿಳಿದುಕೊಳ್ಳಲು ಅರ್ಹನಾದವನು, ಸಕಲ ವಿದ್ಯೆಗಳನ್ನು ಬಲ್ಲವನು.

ವೈದ್ಯಃ= ವಿದ್ಯಾಸಂಬಂಧಿ, ವೇದಪ್ರತಿಪಾದ್ಯ

ಸದಾಯೋಗೀ= ಯಾವಾಗಲೂ ಜೀವನ ಸಂಬಂಧವುಳ್ಳವನು, ಲಕ್ಷ್ಮೀದೇವಿಯಲ್ಲಿ ನಿತ್ಯ ಸಂಬಂಧವುಳ್ಳವನು.

ವೀರಹಾ= ವಿಶೇಷ ಪ್ರೇರಕನಾದ ಮುಖ್ಯಪ್ರಾಣನಲ್ಲಿ ಇರುವವನು.

ಮಾಧವಃ= ಲಕ್ಷ್ಮೀಪತಿ, ಬ್ರಹ್ಮವಿದ್ಯೆಗೆ ಅಧಿಪತಿ, ಮನನ ಮತ್ತು ಧ್ಯಾನಗಳಿಗೆ ಗೋಚರನಾದವನು.

ಮಧುಃ= ಮಧುಕುಲದಲ್ಲಿ ಜನಿಸಿದವನು, ಮಧುರನಾದವನು.

ಅತೀಂದ್ರಿಯಃ= ಇಂದ್ರಿಯಗಳಿಗೆ ಗೋಚರಿಸದವನು.

ಮಹಾಮಾಯಃ= ಶ್ರೇಷ್ಠವಾದ ಮಹಿಮೆಯುಳ್ಳವನು, ಶ್ರೇಷ್ಠವಾದ ಜ್ಞಾನವುಳ್ಳವನು, ಶ್ರೇಷ್ಠವಾದ ಇಚ್ಛೆಯುಳ್ಳವನು.

ಮಹೋತ್ಸಾಹಃ= ಸೃಷ್ಟ್ಯಾದಿ ಕ್ರಿಯೆಗಳಲ್ಲಿ ಬಹಳ ಉತ್ಸಾಹವುಳ್ಳವನು.

ಮಹಾಬಲಃ= ಶ್ರೇಷ್ಠವಾದ ಬಲವುಳ್ಳವನು.

ಮಹಾಬುದ್ಧಿರ್ಮಹಾವೀರ್ಯೋ ಮಹಾಶಕ್ತಿರ್ಮಹಾದ್ಯುತಿಃ ।
ಅನಿರ್ದೇಶ್ಯವಪುಃ ಶ್ರೀಮಾನಮೇಯಾತ್ಮಾ ಮಹಾದ್ರಿಧೃಕ್ ॥೩೨॥

ಮಹಾಬುದ್ಧಿಃ= ಮಹತ್ತಾದ ಜ್ಞಾನವುಳ್ಳವನು.

ಮಹಾವೀರ್ಯಃ= ಮಹಾಪ್ರಭಾವವುಳ್ಳವನು.

ಮಹಾಶಕ್ತಿಃ= ಮಹತ್ತಾದ, ಸ್ವರೂಪಾತ್ಮಕವಾದ ಮತ್ತು ಬಾಹ್ಯವಾದ ಶಕ್ತಿ ಉಳ್ಳವನು.

ಮಹಾದ್ಯುತಿಃ= ಮಹಾಪ್ರಭೆಯುಳ್ಳವನು.

ಅನಿರ್ದೇಶ್ಯವಪುಃ= ಹೀಗೆಯೇ ಇದೆ ಎಂದು ಸ್ಪಷ್ಟವಾಗಿ ನಿರೂಪಿಸಲಾಗದ ದೇಹವುಳ್ಳವನು.

ಶ್ರೀಮಾನ್= ಸದಾ ಲಕ್ಷ್ಮಿಯಿಂದ ಕೂಡಿದವನು.

ಅಮೇಯಾತ್ಮಾ= ಅಳೆಯಲು ಬಾರದ ಸ್ವರೂಪವುಳ್ಳವನು.

ಮಹಾದ್ರಿಧೃಕ್= ಸಮುದ್ರಮಥನದ ಕಾಲದಲ್ಲಿ ದೊಡ್ಡ ಮಂದರಪರ್ವತವನ್ನು ಎತ್ತಿದವನು.

ಮಹೇಷ್ವಾಸೋ ಮಹೀಭರ್ತಾ ಶ್ರೀನಿವಾಸಃ ಸತಾಂ ಗತಿಃ ।
ಅನಿರುದ್ಧಃ ಸುರಾನಂದೋ ಗೋವಿಂದೋ ಗೋವಿದಾಂ ಪತಿಃ ॥೩೩॥

ಮಹೇಷ್ವಾಸಃ= ಮಹತ್ತಾದ ಧನುಸ್ಸುಳ್ಳವನು, ಮಹತ್ತಾದ ಬಾಣಪ್ರಯೋಗ ಉಳ್ಳವನು.

ಮಹೀಭರ್ತಾ= ತನ್ನ ಕಕ್ಷೆಯಿಂದ ಬೀಳುತ್ತಿದ್ದ ಭೂಮಿಯನ್ನು ಧರಿಸಿದವನು.

ಶ್ರೀನಿವಾಸಃ= ಶ್ರೀಯನ್ನು ಧರಿಸಿದವನು. ತನ್ನ ಸೌಂದರ್ಯಕ್ಕೆ ಎಂದೂ ಎಲ್ಲಿಯೂ ವಿಯೋಗ ಬರದಂತೆ ಆಶ್ರಯನಾಗಿರುವವನು.

ಸತಾಂ ಗತಿಃ= ಸಜ್ಜನರಿಗೆ ಆಶ್ರಯನಾಗಿರುವವನು.

ಅನಿರುದ್ಧಃ= ತನ್ನ ಕ್ರಿಯೆಗಳಲ್ಲಿ ಯಾರಿಂದಲೂ ತಡೆಯಲ್ಪಡದವನು.

ಸುರಾನಂದಃ= ದೇವತೆಗಳನ್ನು ಆನಂದಪಡಿಸುವವನು.

ಗೋವಿಂದಃ= ಪಾತಾಳಕ್ಕೆ ಕುಸಿದ ಭೂಮಿಯನ್ನು ಪಡೆದಿರುವವನು, ವೇದವಾಣಿಯನ್ನು ಚೆನ್ನಾಗಿ ಬಲ್ಲವನು, ಗೋವುಗಳಿಗೆ ಒಡೆಯನಾದವನು.

ಗೋವಿದಾಂಪತಿಃ= ವೇದಜ್ಞರಿಗೆ ಪಾಲಕನಾದವನು.

ಮರೀಚಿರ್ದಮನೋ ಹಂಸಃ ಸುಪರ್ಣೋ ಭುಜಗೋತ್ತಮಃ ।
ಹಿರಣ್ಯನಾಭಃ ಸುತಪಾಃ ಪದ್ಮನಾಭಃ ಪ್ರಜಾಪತಿಃ ॥೩೪॥

ಮರೀಚಿಃ= ಮೋಡವು ಚಲಿಸುವಂತೆ ಮಾಡುವವನು, ಶಾಸ್ತ್ರದಲ್ಲಿ ಪ್ರತೀತವಾದ ಪ್ರಕಾಶವುಳ್ಳವನು.

ದಮನಃ= ದುಷ್ಟರನ್ನು ನಿಗ್ರಹಿಸುವವನು.

ಹಂಸಃ= ಸರ್ವೋತ್ತಮವಾದ, ಪೂರ್ಣವಾದ ಎಲ್ಲವನ್ನೂ ಹೊಂದಿರುವವನು.

ಸುಪರ್ಣಃ= ಚೆನ್ನಾಗಿ ಪೂರ್ಣನಾದವನು, ಪೂರ್ಣಾನಂದ ಉಳ್ಳವನು.

ಭುಜಗೋತ್ತಮಃ= ಶೇಷನನ್ನು ಇಂದ್ರಾದಿಗಳಿಗಿಂತ ಉತ್ತಮನಾಗಿರುವಂತೆ ಅನುಗ್ರಹಿಸುವವನು.

ಹಿರಣ್ಯನಾಭಃ= ಹಿರಣ್ಯಮಯವಾದ ಬ್ರಹ್ಮಾಂಡವನ್ನು ನಾಭಿಯಲ್ಲಿ ಧರಿಸಿದವನು.

ಸುತಪಾಃ= ಶೋಭನವಾದ ಜ್ಞಾನವುಳ್ಳವನು.

ಪದ್ಮನಾಭಃ= ನಾಭಿಯಲ್ಲಿ ಪದ್ಮವನ್ನು ಧರಿಸಿದವನು, ಪಾದದಲ್ಲಿ ಲಕ್ಷ್ಮಿಯನ್ನು ಹೊಂದಿದವನು. ಅತಿಶಯವಾಗಿ ಶತ್ರುಗಳನ್ನು ಸಹಿಸಿಕೊಳ್ಳುವವನು.

ಪ್ರಜಾಪತಿಃ= ಜೀವರಿಗೆ ಒಡೆಯನಾದವನು.

ಅಮೃತ್ಯುಃ ಸರ್ವದೃಕ್ ಸಿಂಹಃ ಸಂಧಾತಾ ಸಂಧಿಮಾನ್ ಸ್ಥಿರಃ ।
ಅಜೋ ದುರ್ಮರ್ಷಣಃ ಶಾಸ್ತಾ ವಿಶ್ರುತಾತ್ಮಾ ಸುರಾರಿಹಾ ॥೩೫॥

ಅಮೃತ್ಯುಃ= ಮೃತ್ಯುರಹಿತನು.

ಸರ್ವದೃಕ್= ಎಲ್ಲವನ್ನೂ ಎಲ್ಲರನ್ನೂ ನೋಡುವವನು.

ಸಿಂಹಃ= ಸಿಂಹದಂತೆ ಗಂಭೀರನು.

ಸಂಧಾತಾ= ಚೆನ್ನಾಗಿ ಧಾರಣೆ ಪೋಷಣೆಗಳನ್ನು ಮಾಡುವವನು.

ಸಂಧಿಮಾನ್= ಅಕ್ಷರದ್ವಯಸಮಾಹಾರರೂಪವಾದ ಸಂಧಿಯಿಂದ ಪ್ರತಿಪಾದ್ಯನಾದವನು.

ಸ್ಥಿರಃ= ಸ್ವರೂಪತಃ ನಿರ್ವಿಕಾರನಾದವನು. ಮನಸ್ಸಿಗೆ ಚಾಂಚಲ್ಯವಿಲ್ಲದವನು.

ಅಜಃ= 'ಅ' ಎಂಬ ಸ್ವಾಭಾವಿಕ ನಾಮವನ್ನು ಹೊಂದಿದವನು.

ದುರ್ಮರ್ಷಣಃ= ಯಾರಿಂದಲೂ ಎದುರಿಸಲು ಅಶಕ್ಯನಾದವನು.

ಶಾಸ್ತಾ= ಆದೇಶಿಸುವವನು.

ವಿಶ್ರುತಾತ್ಮಾ= ಪ್ರಸಿದ್ಧನಾದ ಸ್ವಾಮಿ.

ಸುರಾರಿಹಾ= ದೇವತೆಗಳ ಶತ್ರುಗಳನ್ನು ಸಂಹರಿಸುವವನು.

ಗುರುರ್ಗುರುತಮೋ ಧಾಮ ಸತ್ಯಃ ಸತ್ಯಪರಾಕ್ರಮಃ ।
ನಿಮೇಷೋಽನಿಮಿಷಃ ಸ್ರಗ್ವೀ ವಾಚಸ್ಪತಿರುದಾರಧೀಃ ॥೩೬॥

ಗುರುಃ= ಉದ್ಯೋಗದೆಶೆಯಲ್ಲಿಡುವವನು, ಅಜ್ಞಾನವನ್ನು ಹೋಗಲಾಡಿಸುವವನು.

ಗುರುತಮಃ= ಉತ್ಕೃಷ್ಟನಾದ ಗುರು.

ಧಾಮ= ಎಲ್ಲವನ್ನೂ ಧರಿಸಿದ ಭೂಮಿಯನ್ನು ಸಹಾಯವಾಗಿ ಉಳ್ಳವನು. ಭೂಮಿಯಲ್ಲಿ ವಾಸಿಸುವವನು.

ಸತ್ಯಃ= ಯಾವಾಗಲೂ ಯಥಾರ್ಥಜ್ಞಾನವನ್ನು ಹೊಂದಿದವನು, ಜಗತ್ತನ್ನು ಸೃಷ್ಟಿಸುವವನು.

ಸತ್ಯಪರಾಕ್ರಮಃ= ಪ್ರತಿಬಂಧ, ಅನಿತ್ಯತ್ವ, ಅಪೂರ್ಣತೆ, ಅದಾರ್ಢ್ಯ ಮೊದಲಾದ ದೋಷಗಳಿಂದ ರಹಿತವಾದ ಶೋಭೆಯುಳ್ಳವನು. ಸಫಲವಾದ ಪ್ರವೃತ್ತಿಯುಳ್ಳವನು.

ನಿಮೇಷಃ= ಪ್ರಳಯಕಾಲದಲ್ಲಿ ಯೋಗನಿದ್ರೆಯಲ್ಲಿರುವವನು.

ಅನಿಮಿಷಃ= ಪ್ರಳಯ ಕಾಲದಲ್ಲಿಯೂ ಮುಖ್ಯಪ್ರಾಣನಿಂದ ನೋಡಲ್ಪಡುವವನು.

ಸ್ರಗ್ವೀ= ಶ್ರೇಷ್ಠವಾದ ವನಮಾಲೆ ಮೊದಲಾದ ಮಾಲೆಗಳನ್ನು ನಿತ್ಯವೂ ಧರಿಸಿರುವವನು.

ವಾಚಸ್ಪತಿಃ= ವೇದವಾಣಿಗೆ ಒಡೆಯನಾಗಿರುವವನು.

ಉದಾರಧೀಃ= ಉತ್ಕೃಷ್ಟವಾದ ಬುದ್ಧಿಯುಳ್ಳವನು, ಔದಾರ್ಯದಿಂದ ಸಹಿತವಾದ ಬುದ್ಧಿಯುಳ್ಳವನು.

ಅಗ್ರಣೀರ್ಗ್ರಾಮಣೀಃ ಶ್ರೀಮಾನ್ ನ್ಯಾಯೋ ನೇತಾ ಸಮೀರಣಃ ।
ಸಹಸ್ರಮೂರ್ಧಾ ವಿಶ್ವಾತ್ಮಾ ಸಹಸ್ರಾಕ್ಷಃ ಸಹಸ್ರಪಾತ್ ॥೩೭॥

ಅಗ್ರಣೀಃ= ಪ್ರಥಮ ಪ್ರವರ್ತಕನಾದವನು. ಯೋಗ್ಯರನ್ನು ಮುಕ್ತಿಗೆ ಕರೆದೊಯ್ಯುವವನು. ಭಕ್ತರನ್ನು ತನಗಿಂತ ಮುಂದೆ ನಡೆಸುವವನು.

ಗ್ರಾಮಣೀಃ= ಶ್ರೇಷ್ಠನಾಗಿರುವವನು. ಗ್ರಾಮಗಳಿಗೆ ನೇತಾರನಾಗಿರುವವನು.

ಶ್ರೀಮಾನ್= ವಿದ್ಯಾಸಂಪತ್ತನ್ನು ಅತ್ಯಧಿಕವಾಗಿ ಹೊಂದಿರುವವನು.

ನ್ಯಾಯಃ= ಚೆನ್ನಾದ ಲಾಭವುಳ್ಳವನು. ಜೀವರಿಗೆ ಅವರವರ ಫಲಗಳನ್ನು ಭುಂಜಿಸುವವನು.

ನೇತಾ= ಎಲ್ಲರಿಗೂ ಪ್ರಭುವಾಗಿರುವವನು, ಸಮಸ್ತ ಪ್ರಪಂಚವನ್ನು ಭೇದಿಸುವವನು.

ಸಮೀರಣಃ= ಚೆನ್ನಾಗಿ ಪ್ರೇರಿಸುವವನು.

ಸಹಸ್ರಮೂರ್ಧಾ= ಸಾವಿರಾರು ಶಿರಸ್ಸುಗಳನ್ನುಳ್ಳವನು.

ವಿಶ್ವಾತ್ಮಾ= ಪೂರ್ಣನಾದ ಆತ್ಮ, ಪೂರ್ಣನಾದ ಸ್ವಾಮಿ.

ಸಹಸ್ರಾಕ್ಷಃ= ಸಾವಿರಾರು ಕಣ್ಣುಗಳುಳ್ಳವನು.

ಸಹಸ್ರಪಾತ್ = ಸಾವಿರಾರು ಪಾದಗಳನ್ನುಳ್ಳವನು.

ಆವರ್ತನೋ ನಿವೃತ್ತಾತ್ಮಾ ಸಂವೃತಃ ಸಂಪ್ರಮರ್ದನಃ ।
ಅಹಃ ಸಂವರ್ತಕೋ ವಹ್ನಿರನಿಲೋ ಧರಣೀಧರಃ ॥೩೮॥

ಆವರ್ತಃ= ಜಗಚ್ಚಕ್ರವನ್ನು ತಿರುಗಿಸುವವನು.

ನಿವೃತ್ತಾತ್ಮಾ= ಸಂಸಾರ ಬಂಧನದಿಂದ ದೂರವಾದ ಸ್ವರೂಪವುಳ್ಳವನು.

ಸಂವೃತಃ= ಪ್ರಳಯಕಾಲದಲ್ಲಿ ಕತ್ತಲೆಯಿಂದ ಆವೃತನಾಗಿರುವವನು. ತನ್ನ ಗುಣಗಳನ್ನು ಸಂಸಾರಿ ಜೀವರಿಗೆ ಕಾಣದಂತೆ ಮುಚ್ಚಿಕೊಳ್ಳುವವನು.

ಸಂಪ್ರಮರ್ದನಃ= ಪ್ರಳಯಕಾಲದಲ್ಲಿ ಎಲ್ಲವನ್ನೂ ಸಂಹರಿಸುವವನು.

ಅಹಃ= ಎಂದೂ ನಾಶವನ್ನು ಹೊಂದದವನು.

ಸಂವರ್ತಕಃ= ಚೆನ್ನಾಗಿ ಪ್ರವರ್ತಿಸುವವನು.

ವಹ್ನಿಃ= ಖಾಂಡವವನವನ್ನು ಹಿಂಸೆ ಮಾಡುವವನು.

ಅನಿಲಃ= ಇತರರನ್ನು ಆಶ್ರಯಿಸದವನು. ತಾನೇ ತನಗೆ ಆಶ್ರಯನಾದವನು.

ಧರಣೀಧರಃ= ಭೂದೇವಿಯನ್ನು ಧರಿಸಿಕೊಂಡಿರುವವನು.

ಸುಪ್ರಸಾದಃ ಪ್ರಸನ್ನಾತ್ಮಾ ವಿಶ್ವಧೃಗ್ ವಿಶ್ವಭುಗ್ ವಿಭುಃ ।
ಸತ್ಕರ್ತಾ ಸತ್ಕೃತಿಃ ಸಾಧುರ್ಜಹ್ನುರ್ನಾರಾಯಣೋ ನರಃ ॥೩೯॥

ಸುಪ್ರಸಾದಃ= ಶೋಭನವಾದ ಅನುಗ್ರಹವುಳ್ಳವನು.

ಪ್ರಸನ್ನಾತ್ಮಾ= ಸದಾ ಪ್ರಸನ್ನ ಸ್ವರೂಪನು. ಸದಾ ಪ್ರಸನ್ನವಾದ ಮನಸ್ಸುಳ್ಳವನು.

ವಿಶ್ವಧೃಕ್ = ವಿಶ್ವದಲ್ಲಿ ತಲೆ ಎತ್ತಿ ನಿಲ್ಲುವವನು. ನಿರ್ಭೀತನಾಗಿರುವವನು.

ವಿಶ್ವಭುಕ್ = ಸಮಸ್ತವನ್ನೂ ಭೋಗಿಸುವವನು.

ವಿಭುಃ= ಸರ್ವತ್ರವ್ಯಾಪಕನು.

ಸತ್ಕರ್ತಾ= ಸ್ವತಂತ್ರನಾದ ಕರ್ತೃ .

ಸತ್ಕೃತಿಃ= ನಿರ್ದುಷ್ಟವಾದ ಕೃತಿಯುಳ್ಳವನು. ನಿರ್ದುಷ್ಟವಾದ ಆಕೃತಿಯುಳ್ಳವನು.

ಸಾಧುಃ= ಶ್ರೇಷ್ಠನೆಂದು ನಿರ್ಧರಿಸಿಕೊಳ್ಳಲು ಯೋಗ್ಯನಾದವನು.

ಜಹ್ನುಃ= ಜನರಿಗೆ ಹುಂಕಾರವನ್ನು ಮಾಡುವವನು. ಜನಿಸಿದ ವಸ್ತುವನ್ನು ಸಂಹರಿಸುವವನು.

ನಾರಾಯಣಃ= ಸರ್ವಗುಣಪರಿಪೂರ್ಣನಾದವನು.

ನರಃ= ಕ್ಷಯವನ್ನು ಹೊಂದದವನು.

ಅಸಂಖ್ಯೇಯೋऽಪ್ರಮೇಯಾತ್ಮಾ ವಿಶಿಷ್ಟಃ ಶಿಷ್ಟಕೃಚ್ಛುಚಿಃ ।
ಸಿದ್ಧಾರ್ಥಃ ಸಿದ್ಧಸಂಕಲ್ಪಃ ಸಿದ್ಧಿದಃ ಸಿದ್ಧಿಸಾಧನಃ ॥೪೦॥

ಅಸಂಖ್ಯೇಯಃ= ಗುಣಕರ್ಮರೂಪಾದಿಗಳನ್ನು ಎಣಿಸಲು ಅಶಕ್ಯನಾದವನು.

ಅಪ್ರಮೇಯಾತ್ಮಾ= ಸಮಗ್ರವಾಗಿ ತಿಳಿಯಲು ಅಸಾಧ್ಯವಾದ ಸ್ವರೂಪವುಳ್ಳವನು.

ವಿಶಿಷ್ಟಃ= ಎಲ್ಲರಿಗಿಂತಲೂ ಅತಿಶಯವನ್ನು ಹೊಂದಿದವನು. ವಿಶೇಷವಾಗಿ ಶಾಸ್ತ್ರದಿಂದ ಪ್ರತಿಪಾದ್ಯನಾದವನು.

ಶಿಷ್ಟಕೃತ್ = ಸ್ವತಂತ್ರವಾಗಿ ಸರ್ವರಿಗೂ ಶಾಸನವನ್ನು ಮಾಡುವವನು.

ಶುಚಿಃ= ತನ್ನ ಭಕ್ತರಿಗೆ ತನ್ನ ಸ್ವರೂಪವನ್ನು ಪ್ರಕಾಶಪಡಿಸುವವನು.

ಸಿದ್ಧಾರ್ಥಃ= ಸಹಜವಾಗಿಯೇ ಈಡೇರಿರುವ ಪ್ರಯೋಜನವುಳ್ಳವನು.

ಸಿದ್ಧಸಂಕಲ್ಪಃ= ಈಡೇರಿದ ಸಂಕಲ್ಪವುಳ್ಳವನು.

ಸಿದ್ಧಿದಃ= ಕ್ರಿಯಾನಿಷ್ಪತ್ತಿರೂಪವಾದ ಅಥವಾ ಫಲನಿಷ್ಪತ್ತಿ ರೂಪವಾದ ಸಿದ್ಧಿಯನ್ನು ನೀಡುವವನು.

ಸಿದ್ಧಿಸಾಧನಃ= ಕಾರ್ಯನಿಷ್ಪತ್ತಿಯನ್ನು ಸಾಧಿಸುವವನು. ಮೋಕ್ಷವನ್ನು ಸಾಧಿಸುವವನು. ಮೋಕ್ಷಕ್ಕೆ ಸಾಧನವಾದ ಜ್ಞಾನವನ್ನು ಸಾಧಿಸುವವನು.

ವೃಷಾಹೀ ವೃಷಭೋ ವಿಷ್ಣುರ್ವೃಷಪರ್ವಾ ವೃಷೋದರಃ ।
ವರ್ಧನೋ ವರ್ಧಮಾನಶ್ಚ ವಿವಿಕ್ತಃ ಶ್ರುತಿಸಾಗರಃ ॥೪೧॥

ವೃಷಾಹೀ= ವೃಷಭಾಸುರನನ್ನು ಚೆನ್ನಾಗಿ ಹಿಂಸಿಸುವವನು.

ವೃಷಭಃ= ಶ್ರೇಷ್ಠನಾದವನು.

ವಿಷ್ಣುಃ= ಕಾಲಿಯನಾಗನ ವಿಷವನ್ನು ನಾಶ ಮಾಡುವವನು.

ವೃಷಪರ್ವಾ=ಭಕ್ತರ ಅಭೀಷ್ಟವನ್ನು ಸುರಿಸುವ ಐದು ಪರ್ವಗಳನ್ನುಳ್ಳವನು.

ವೃಷೋದರಃ= ಭಕ್ತರ ಕಾಮನೆಗಳನ್ನು ಸುರಿಸುವ ಉದರವುಳ್ಳವನು.

ವರ್ಧನಃ= ಭಕ್ತರನ್ನು ಅಭಿವೃದ್ಧಿಪಡಿಸುವವನು.

ವರ್ಧಮಾನಃ= ನಿತ್ಯವೂ ಪೂರ್ಣನಾಗಿರುವವನು.

ವಿವಿಕ್ತಃ= ಜೀವ-ಜಡ ಪ್ರಪಂಚಕ್ಕಿಂತಲೂ ಭಿನ್ನನಾದವನು.

ಶ್ರುತಿಸಾಗರಃ= ಅನಂತ ಶ್ರುತಿಗಳನ್ನು ಪಡೆದು ಅಂತಹ ಶ್ರುತಿಗಳಿಂದ ಸಾಗರದಂತೆ ಇರುವವನು.

ಸುಭುಜೋ ದುರ್ಧರೋ ವಾಗ್ಮೀ ಮಹೇಂದ್ರೋ ವಸುದೋ ವಸುಃ ।
ನೈಕರೂಪೋ ಬೃಹದ್ರೂಪಃ ಶಿಪಿವಿಷ್ಟಃ ಪ್ರಕಾಶನಃ ॥೪೨॥

ಸುಭುಜಃ= ಸುಂದರವಾದ ಭುಜಗಳುಳ್ಳವನು. ಆನಂದವನ್ನು ಭೋಗಿಸುವವನು. ಚೆನ್ನಾಗಿ ಪಾಲಿಸುವವನು.

ದುರ್ಧರಃ= ಯಾರಿಂದಲೂ ಧರಿಸಲು ಅಶಕ್ಯನಾದವನು.

ವಾಗ್ಮೀ= ಪ್ರಶಸ್ತವಾದ ಮಾತುಳ್ಳವನು. ವೇದವಚನದಿಂದಲೇ ತಿಳಿಯಲ್ಪಡುವವನು.

ಮಹೇಂದ್ರಃ= ತೇಜಸ್ವಿಯಾದವನು. ಪರಮಶ್ರೇಯಸ್ಸಂಪನ್ನನಾದವನು.

ವಸುದಃ= ದ್ರವ್ಯರೂಪವಾದ ಧನವನ್ನು ನೀಡುವವನು. ವಿದ್ಯಾರೂಪವಾದ ಧನವನ್ನು ನೀಡುವವನು.

ವಸುಃ= ದಿಕ್ಪಾಲಕರನ್ನು ಅವರವರ ಸ್ಥಾನದಲ್ಲಿ ವಾಸ ಮಾಡಿಸುವವನು.

ನೈಕರೂಪಃ= ಅನೇಕ ರೂಪವುಳ್ಳವನು.

ಬೃಹದ್ರೂಪಃ= ಗುಣಪೂರ್ಣವಾದ ರೂಪವುಳ್ಳವನು.

ಶಿಪಿವಿಷ್ಟಃ= ವಸುಗಳಲ್ಲಿ ಆಯಾ ಹೆಸರುಗಳಿಂದ ಪ್ರವೇಶಿಸಿರುವವನು. ಗರುಡಾರೂಢನಾದವನು. ಕಾಷ್ಠಗಳಲ್ಲಿ ಅಗ್ನಿಯ ಅಂತರ್ಯಾಮಿಯಾಗಿ ಪ್ರವೇಶಿಸಿರುವವನು.

ಪ್ರಕಾಶನಃ= ಬೆಳಗಿಸುವವನು.

ಓಜಸ್ತೇಜೋದ್ಯುತಿಧರಃ ಪ್ರಕಾಶಾತ್ಮಾ ಪ್ರತಾಪನಃ ।
ಋದ್ಧಃ ಸ್ಪಷ್ಟಾಕ್ಷರೋ ಮಂತ್ರಶ್ಚಂದ್ರಾಂಶುರ್ಭಾಸ್ಕರದ್ಯುತಿಃ ॥೪೩॥

ಓಜಸ್ತೇಜೋ ದ್ಯುತಿಧರಃ= ಇತರರನ್ನು ಪರಾಭವಗೊಳಿಸುವ ಸಾಮರ್ಥ್ಯ, ಪ್ರತಾಪ ಮತ್ತು ಪ್ರಕಾಶವನ್ನು ಧರಿಸಿರುವವನು.

ಪ್ರಕಾಶಾತ್ಮಾ= ಪ್ರಕಾಶಿಸುವ ಸ್ವರೂಪವುಳ್ಳವನು.

ಪ್ರತಾಪನಃ= ಚೆನ್ನಾಗಿ ತಾಪವನ್ನುಂಟು ಮಾಡುವವನು.

ಋದ್ಧಃ= ಸ್ವಾಭಾವಿಕವಾಗಿಯೇ ಯಾವಾಗಲೂ ಪರಿಪೂರ್ಣನಾದವನು.

ಅಷ್ಟಾಕ್ಷರಃ= ನಾರಾಯಣಾಷ್ಟಾಕ್ಷರ ಮಂತ್ರದಿಂದ ಪ್ರತಿಪಾದ್ಯನಾದವನು.

ಸ್ಪಷ್ಟಾಕ್ಷರಃ= ಓಂಕಾರವೇ ಮೊದಲಾದವುಗಳನ್ನು ವ್ಯಕ್ತಪಡಿಸುವವನು. ವೇದವನ್ನು ಅಭಿವ್ಯಕ್ತಿಗೊಳಿಸುವವನು.

ಮಂತ್ರಃ= ಮನನಶೀಲನಾದವನು. ಜ್ಞಾನವನ್ನು ನೀಡಿ ರಕ್ಷಿಸುವವನು.

ಚಂದ್ರಾಂಶುಃ= ಚಂದ್ರನ ಕಿರಣಗಳಂತಹ ಆಹ್ಲಾದಕರವಾದ ಕಿರಣಗಳನ್ನು ಹೊಂದಿದವನು.

ಭಾಸ್ಕರದ್ಯುತಿಃ= ಸಾವಿರಾರು ಸೂರ್ಯರ ಪ್ರಕಾಶವನ್ನು ಹೊಂದಿರುವವನು.

ಅಮೃತಾಂಶೂದ್ಭವೋ ಭಾನುಃ ಶಶಬಿಂದುಃ ಸುರೇಶ್ವರಃ ।
ಔಷಧಂ ಜಗತಃ ಸೇತುಃ ಸತ್ಯಧರ್ಮಪರಾಕ್ರಮಃ ॥೪೪॥

ಅಮೃತಾಂಶೂದ್ಭವಃ= ನಾಶ ಹೊಂದದ ಕಿರಣಗಳುಳ್ಳವನು ಮತ್ತು ಉತ್ಕೃಷ್ಟನಾಗಿರುವವನು. ಚಂದ್ರನ ಉತ್ಪತ್ತಿಗೆ ಕಾರಣನಾದವನು.

ಭಾನುಃ= ಸೂರ್ಯಾದಿಗಳ ಪ್ರಕಾಶವನ್ನು ಎಲ್ಲ ಕಡೆಗಳಲ್ಲಿಯೂ ತಲುಪಿಸುವವನು.

ಶಶಬಿಂದುಃ= ಅತಿಶಯವಾದ ಸುಖವೇ ಲಕ್ಷಣವಾಗಿ ಉಳ್ಳವನು.

ಸುರೇಶ್ವರಃ= ದೇವತೆಗಳಿಗೆ ಒಡೆಯನಾದವನು.

ಔಷಧಂ= ವ್ಯಾಧಿಗಳ ತಾಪದಿಂದ ದಗ್ಧರಾದ ಜೀವರನ್ನು ಧನ್ವಂತರಿರೂಪದಿಂದ ಧರಿಸುವವನು.

ಜಗತಃ ಸೇತುಃ= ಚರಾಚರ ಪ್ರಪಂಚಕ್ಕೆ ಆಶ್ರಯನಾದವನು.

ಸತ್ಯಧರ್ಮಪರಾಕ್ರಮಃ= ಪಾರಮಾರ್ಥಿಕ ಸತ್ಯಗಳಾದ ಧರ್ಮ ಮತ್ತು ಪರಾಕ್ರಮಗಳನ್ನುಳ್ಳವನು.

ಭೂತಭವ್ಯಭವನ್ನಾಥಃ ಪವನಃ ಪಾವನೋಽನಲಃ ।
ಕಾಮಹಾ ಕಾಮಕೃತ್ಕಾಂತಃ ಕಾಮಃ ಕಾಮಪ್ರದಃ ಪ್ರಭುಃ ॥೪೫॥

ಭೂತಭವ್ಯಭವನ್ನಾಥಃ= ಭೂತ-ಭವಿಷ್ಯತ್-ವರ್ತಮಾನ ಕಾಲದ ಜೀವರೆಲ್ಲರನ್ನೂ ಯಾಚಕರನ್ನಾಗಿ ಹೊಂದಿರುವವನು.

ಪವನಃ= ಚಕ್ರವರ್ತಿ ಸಮೂಹವನ್ನು ಭಾಗ್ಯದಾನದಿಂದ ಭಜಿಸುವವನು.

ಪಾವನಃ= ಶುದ್ಧಗೊಳಿಸುವವನು.

ಅನಲಃ= ಭಕ್ತಾಭೀಷ್ಟಧನದಲ್ಲಿ ಅಲಂಬುದ್ಧಿ ಇಲ್ಲದವನು.

ಕಾಮಹಾ= ದುರ್ಜನರ ಕಾಮವನ್ನು ಪರಿಹರಿಸುವವನು.

ಕಾಮಕೃತ್= ಇಚ್ಛೆಯನ್ನು ಉಂಟುಮಾಡುವವನು (ಕಾಮ= ಮನ್ಮಥ ಜನಕನಾದವನು).

ಕಾಂತಃ= ಸ್ವಾಭಾವಿಕವಾಗಿಯೇ ಪ್ರಧಾನನಾಗಿ ಪ್ರಿಯನಾಗಿರುವವನು.

ಕಾಮಃ= ಎಲ್ಲರಿಂದಲೂ ಬಯಸಲ್ಪಡುವವನು.

ಕಾಮಪ್ರದಃ= ಅಭಿದೇಶಿತ ಕಾಮಗಳನ್ನು ಚೆನ್ನಾಗಿ ಮಾಡುವವನು.

ಪ್ರಭುಃ= ನಿರ್ವಿಕಾರನಾಗಿ ಇರುವವನು, ಸರ್ವಜ್ಞನಾದವನು.

ಯುಗಾದಿಕೃದ್ ಯುಗಾವರ್ತೋ ನೈಕಮಾಯೋ ಮಹಾಶನಃ ।
ಅದೃಶ್ಯೋ ವ್ಯಕ್ತರೂಪಶ್ಚ ಸಹಸ್ರಜಿದನಂತಜಿತ್ ॥೪೬॥

ಯುಗಾದಿಕೃತ್= ಯುಗಗಳನ್ನು ಆರಂಭಿಸುವವನು. ಯುಗವೇ ಮೊದಲಾದ ಕಾಲವಿಶೇಷಗಳನ್ನು ಸೃಷ್ಟಿಸುವವನು.

ಯುಗಾವರ್ತಃ= ಕೃತಾದಿ ಯುಗಗಳು ಪುನಃ ಪುನಃ ಬರುವಂತೆ ಮಾಡುವವನು.

ನೈಕಮಾಯಃ= ಅನಂತ ಶಕ್ತಿಯುಳ್ಳವನು. ಅನಂತ ಮಹಿಮೆಯುಳ್ಳವನು. ಅನಂತ ಜ್ಞಾನವುಳ್ಳವನು. ಅನಂತ ಇಚ್ಛೆಯುಳ್ಳವನು.

ಮಹಾಶನಃ= ಮಹತ್ತಾದ ಮತ್ತು ಉತ್ತಮವಾದ ಭೋಜನವುಳ್ಳವನು.

ಅದೃಶ್ಯಃ= ಸಮಗ್ರವಾಗಿ ಜ್ಞಾನಗೋಚರವಾದ ಪದಾರ್ಥಗಳಿಗಿಂತ ಭಿನ್ನನಾದವನು.

ವ್ಯಕ್ತರೂಪಃ= ತನ್ನ ಶಕ್ತಿಯಿಂದ ಭಕ್ತರಿಗೆ ಕಾಣಿಸುವ ರೂಪವುಳ್ಳವನು. ಬ್ರಹ್ಮಾಂಡಕ್ಕೆ ರೂಪವನ್ನು ಕೊಟ್ಟವನು.

(ಅ)ವ್ಯಕ್ತರೂಪಃ= ಸ್ವಾಭಾವಿಕವಾಗಿ ಅವ್ಯಕ್ತವಾದ ರೂಪವನ್ನು ಹೊಂದಿದವನು.

ಸಹಸ್ರಜಿತ್= ವಿಷ್ಣುಸಹಸ್ರನಾಮದಿಂದ ಮತ್ತು ಬೃಹತೀ ಸಹಸ್ರದಿಂದ ಪ್ರತಿಪಾದ್ಯವಾದ ಅನಂತ ರೂಪವುಳ್ಳವನು. ಸಾವಿರಾರು ಅಸುರರನ್ನು ಸೋಲಿಸುವವನು.

ಅನಂತಜಿತ್= ಅನಂತಗುಣಗಳನ್ನು ಹೊಂದಿರುವವನು. ದೇಶ-ಕಾಲಗಳಿಂದ ಅನಂತವಾದ ಶ್ರೀತತ್ವವನ್ನು ಜಯಿಸುವವನು. ಅನೇಕಾನೇಕ ದೈತ್ಯರನ್ನು ಸೋಲಿಸುವವನು.

ಇಷ್ಟೋ ವಿಶಿಷ್ಟಃ ಶಿಷ್ಟೇಷ್ಟಃ ಶಿಖಂಡೀ ನಹುಷೋ ವೃಷಃ ।
ಕ್ರೋಧಹಾ ಕ್ರೋಧಕೃತ್ ಕರ್ತಾ ವಿಶ್ವಬಾಹುರ್ಮಹೀಧರಃ ॥೪೭॥

ಇಷ್ಟಃ= ಸಹಜವಾಗಿ ಮತ್ತು ಮುಖ್ಯವಾಗಿ ಪ್ರಿಯನಾಗಿರುವವನು.

ವಿಶಿಷ್ಟಃ= ಪ್ರಳಯಕಾಲದಲ್ಲಿ ವಿಶೇಷವಾಗಿ ಉಳಿಯುವವನು.

ಶಿಷ್ಟೇಷ್ಟಃ= ಜ್ಞಾನಿಗಳಿಗೆ ಪ್ರಿಯನಾದವನು. ಪ್ರಿಯರಾದ ಜ್ಞಾನಿಗಳನ್ನು ಹೊಂದಿರುವವನು.

ಶಿಖಂಡೀ= ಕೃಷ್ಣಾವತಾರದಲ್ಲಿ ತಲೆಯ ಮೇಲೆ ಶಿಖೆಯನ್ನು ಧರಿಸಿದವನು. ನವಿಲುಗರಿಯನ್ನು ಧರಿಸಿದವನು. ನಿದ್ರೆಯನ್ನು ಜಯಿಸಿದವನು.

ನಹುಷಃ= ಸಂಸಾರದಲ್ಲಿ ಜೀವರನ್ನು ಬಂಧಿಸಿ ಜ್ಞಾನವನ್ನು ಕೊಟ್ಟು ಬಂಧನವನ್ನು ಪರಿಹರಿಸುವವನು.

ವೃಷಃ= ಯಾವಾಗಲೂ ಜ್ಞಾನೈಶ್ವರ್ಯಾದಿ ಷಡ್ಗುಣಗಳನ್ನು ಹೊಂದಿದವನು.

ಕ್ರೋಧಹಾ= ಕ್ರೋಧವನ್ನು ಪರಿಹರಿಸುವವನು.

ಕ್ರೋಧಕೃತ್= ಚಿದಾನಂದಾತ್ಮಕವಾದ ತನ್ನ ಕ್ರೋಧವನ್ನು ಅಭಿವ್ಯಕ್ತಿ ಪಡಿಸುವವನು. ಕ್ರೋಧವನ್ನು ನಾಶಮಾಡುವವನು. ಪ್ರಕೃತಿಯ ಗುಣದಿಂದ ಕ್ರೋಧವನ್ನು ಉಂಟು ಮಾಡುವವನು.

ಕರ್ತಾ= ಪ್ರಳಯಕಾಲದಲ್ಲಿ ಎಲ್ಲರನ್ನೂ ಸಂಹರಿಸುವವನು. ಸಂಸಾರಪಾಶವನ್ನು ಛೇದಿಸುವವನು.

ವಿಶ್ವಬಾಹುಃ= ಅನಂತಬಾಹುಗಳುಳ್ಳವನು. ಗುಣಪೂರ್ಣಗಳಾದ ಬಾಹುಗಳುಳ್ಳವನು. ವಾಯುದೇವರಿಗೆ ಆಧಾರನಾಗಿರುವವನು.

ಮಹೀಧರಃ= ಕೂರ್ಮರೂಪದಿಂದ ಭೂಮಿಯನ್ನು ಧರಿಸಿದವನು. ತನ್ನ ಮಹಿಮೆಯಿಂದ ಲಕ್ಷ್ಮಿಯನ್ನು ಧರಿಸಿದವನು. ವರಾಹರೂಪದಿಂದ ಭೂಮಿಯನ್ನು ಉದ್ಧರಿಸಿದವನು.

ಅಚ್ಯುತಃ ಪ್ರಥಿತಃ ಪ್ರಾಣಃ ಪ್ರಾಣದೋ ವಾಸವಾನುಜಃ ।
ಅಪಾಂ ನಿಧಿರಧಿಷ್ಠಾನಮಪ್ರಮತ್ತಃ ಪ್ರತಿಷ್ಠಿತಃ ॥೪೮॥

ಅಚ್ಯುತಃ= ತನ್ನ ಸ್ಥಾನದಿಂದ ಎಂದೂ ಭ್ರಷ್ಟನಾಗದವನು. ತನ್ನ ಪ್ರಭುತ್ವದಿಂದ ಎಂದೂ ಭ್ರಷ್ಟನಾಗದವನು.

ಪ್ರಥಿತಃ= ಶಾಸ್ತ್ರದಲ್ಲಿ ಪ್ರಸಿದ್ಧನಾಗಿರುವವನು.

ಪ್ರಾಣಃ= ತನ್ನ ಭಕ್ತರನ್ನು ವೈಕುಂಠಾದಿ ಲೋಕಗಳಿಗೆ ಕರೆದೊಯ್ಯುವವನು.

ಪ್ರಾಣದಃ= ಮುಕ್ತಿಯೋಗ್ಯರಿಗೆ ಮುಖ್ಯಪ್ರಾಣನನ್ನು ಗುರುವಾಗಿ ನೀಡುವವನು. ಪ್ರಕೃಷ್ಟನಾಗಿರುವವನು ಮತ್ತು ಚೆನ್ನಾಗಿ ಸುಖವನ್ನು ನೀಡುವವನು.

ವಾಸವಾನುಜಃ= ದೇವತೆಗಳ ಪ್ರಾರ್ಥನೆಯನ್ನು ಅನುಸರಿಸಿ ಅವತರಿಸುವವನು. ಇಂದ್ರನ ತಮ್ಮನಾಗಿ ಅವತರಿಸಿದವನು.

ಅಪಾಂ ನಿಧಿಃ= ಚೆನ್ನಾಗಿ ಪೂರ್ಣರಾದ ಅಥವಾ ಪಾಲಿಸುವ ದೇವತೆಗಳಿಗೆ ಆಶ್ರಯನಾಗಿರುವವನು.

ಅಧಿಷ್ಠಾನಃ= ಎಲ್ಲಾ ಜಗತ್ತಿಗೂ ಮೂಲಾಧಾರನಾಗಿರುವವನು.

ಅಪ್ರಮತ್ತಃ= ಪ್ರಮಾದಕ್ಕೆ ಒಳಗಾಗದವನು. ಪ್ರಮಾದಕ್ಕೆ ಒಳಗಾಗುವ ಜೀವನಿಗಿಂತ ಅತ್ಯಂತ ಭಿನ್ನನಾದವನು.

ಪ್ರತಿಷ್ಠಿತಃ= ತನ್ನ ಮಹಿಮೆಯನ್ನೇ ಆಧರಿಸಿಕೊಂಡಿರುವವನು.

ಸ್ಕಂದಃ ಸ್ಕಂದಧರೋ ಧುರ್ಯೋ ವರದೋ ವಾಯುವಾಹನಃ ।
ವಾಸುದೇವೋ ಬೃಹದ್ಭಾನುರಾದಿದೇವಃ ಪುರಂದರಃ ॥೪೯॥

ಸ್ಕಂದಃ= ಭಕ್ತರಿಗೆ ಜ್ಞಾನವನ್ನು ಮತ್ತು ಸುಖವನ್ನು ಕೊಡುವವನು. ದುರ್ಜನರ ಹೃದಯದಿಂದ ಹೊರಗೆ ಬರುವವನು.

ಸ್ಕಂದಧರಃ= ಷಣ್ಮುಖನನ್ನು ಧರಿಸುವವನು.

ಧುರ್ಯಃ= ಎಲ್ಲರ ಹೊಣೆಯನ್ನೂ ಹೊತ್ತಿರುವವನು

ವರದಃ= ವರಗಳನ್ನು ನೀಡುವವನು

ವಾಯುವಾಹನಃ= ವಾಯುದೇವನನ್ನು ವಾಹನವಾಗಿ ಹೊಂದಿದವನು. ವಾಯುವಾಹರಾದ ಜೀವರನ್ನು ಪ್ರೇರಿಸುವವನು.

ವಾಸುದೇವಃ= ಎಲ್ಲವನ್ನೂ ತಿಳಿದಿರುವವನು. ಉತ್ಪಾದಿಸುವವನು ಹಾಗೂ ಕಳಿಸುವವನು.

ಬೃಹದ್ಭಾನುಃ= ಮಹಾಕಾಂತಿಯನ್ನು ಹೊಂದಿದವನು.

ಆದಿದೇವಃ= ಎಲ್ಲದಕ್ಕೂ ಕಾರಣನಾಗಿರುವವನು ಮತ್ತು ಪ್ರಕಾಶಿಸುವವನು.

ಪುರಂದರಃ= ಸಂಸಾರರೂಪವಾದ ಪುರಗಳನ್ನು ಸೀಳುವವನು.

ಅಶೋಕಸ್ತಾರಣಸ್ತಾರಃ ಶೂರಃ ಶೌರಿರ್ಜನೇಶ್ವರಃ ।
ಅನುಕೂಲಃ ಶತಾವರ್ತಃ ಪದ್ಮೀ ಪದ್ಮನಿಭೇಕ್ಷಣಃ ॥೫೦॥

ಅಶೋಕಃ= ಶೋಕವಿಲ್ಲದವನು.

ತಾರಣಃ= ಸಂಸಾರ ಸಾಗರವನ್ನು ದಾಟಿಸುವವನು.

ತಾರಃ= ಸೃಷ್ಟಿಸಲ್ಪಟ್ಟ ಜಗತ್ತಿನ ಒಳಗೆ ಇರುವವನು. ಅಲ್ಲಿಯೂ ಸಂಸಾರದಿಂದ ಉತ್ತೀರ್ಣನಾದವನು. ಪ್ರಣವ ಪ್ರತಿಪಾದ್ಯನಾದವನು.

ಶೂರಃ= ವಿಕ್ರಮಶಾಲಿಯಾಗಿರುವವನು.

ಶೌರಿಃ= ಪರಾಕ್ರಮಶಾಲಿಯಾಗಿರುವುದರಿಂದ ಶೂರನೆನಿಸುವ ವಾಯುದೇವರ ಪುತ್ರನಂತೆ ಇರುವವನು.

ಜನೇಶ್ವರಃ= ಜೀವರಿಗೆ ಪ್ರಭುವಾಗಿರುವವನು.

ಅನುಕೂಲಃ= ಸಜ್ಜನರಿಗೆ ಹಿತಕಾರಿಯಾಗಿರುವವನು.

ಶತಾವರ್ತಃ= ಅಮೃತಪಾನಯೋಗ್ಯರಾದ ನೂರು ದೇವತೆಗಳನ್ನು ತತ್ತ್ವದೇವತಾ ರೂಪದಿಂದ ಪ್ರವರ್ತಿಸುವವನು.

ಪದ್ಮೀ= ಚತುರ್ಮುಖನನ್ನು ಪುತ್ರನನ್ನಾಗಿ ಪಡೆದವನು.

ಪದ್ಮನಿಭೇಕ್ಷಣಃ= ಪದ್ಮದಂತೆ ಕಣ್ಣುಳ್ಳವನು. ಪದ್ಮದಂತೆ ಅರಳಿದ ಜ್ಞಾನವುಳ್ಳವನು.

ಪದ್ಮನಾಭೋऽರವಿಂದಾಕ್ಷಃ ಪದ್ಮಗರ್ಭಃ ಶರೀರಭೃತ್ ।
ಮಹರ್ದ್ಧಿರೃದ್ಧೋ ವೃದ್ಧಾತ್ಮಾ ಮಹಾಕ್ಷೋ ಗರುಡಧ್ವಜಃ ॥೫೧॥

ಪದ್ಮನಾಭಃ= ವೇದಪ್ರತಿಪಾದ್ಯರಾದವರಿಗೆ ಶ್ರೇಷ್ಠನಾದವನು. ಕಲ್ಪಾಂತ್ಯದಲ್ಲಿ ಚತುರ್ಮುಖನನ್ನೂ ಸಂಹರಿಸುವವನು.

ಅರವಿಂದಾಕ್ಷಃ= ಹೃದಯರಂಗದಲ್ಲಿ ವ್ಯಾಪಿಸಿಕೊಂಡಿರುವವನು. ಜ್ಞಾನಾತ್ಮಕವಾದ ಕಣ್ಣುಳ್ಳವನು.

ಪದ್ಮಗರ್ಭಃ= ಜಗತ್ಕಾರಣವಾದ ಪದ್ಮವನ್ನು ಗರ್ಭದಲ್ಲಿ ಹೊಂದಿದವನು.

ಶರೀರಭೃತ್= ಅಮೋಘವಾದ ಶರವುಳ್ಳವನು, ಪ್ರೇರಕನಾದವನು ಮತ್ತು ಧಾರಕನಾದವನು. ಶರಾಕಾರವುಳ್ಳ ಮುಖ್ಯಪ್ರಾಣನನ್ನು ಧರಿಸುವವನು. ಪ್ರಳಯ ಕಾಲದಲ್ಲಿ ತನ್ನ ಶರೀರದೊಳಗೆ ಜಗತ್ತನ್ನು ಧರಿಸುವವನು.

ಮಹರ್ದ್ಧಿಃ= ಮಹತ್ತ್ವಪೂರ್ಣವಾದ ಸಮೃದ್ಧಿಯನ್ನು ಹೊಂದಿರುವವನು.

ಋದ್ಧಃ= ವೇದಗಳನ್ನು ಧರಿಸಿಕೊಂಡವನು. ಮುಕ್ತರಿಗೆ ಧಾರಕನಾದವನು.

ವೃದ್ಧಾತ್ಮಾ= ಗುಣಸಮೃದ್ಧವಾದ ಸ್ವರೂಪವುಳ್ಳವನು.

ಮಹಾಕ್ಷಃ= ಮಹತ್ತ್ವಪೂರ್ಣವಾದ ಕಣ್ಣುಳ್ಳವನು. ಮಹತ್ತ್ವಪೂರ್ಣವಾದ ಇಂದ್ರಿಯಗಳುಳ್ಳವನು.

ಗರುಡಧ್ವಜಃ= ಗರುಡನನ್ನು ಧ್ವಜವಾಗಿ ಉಳ್ಳವನು. ಗರುಡನ ಬೆನ್ನ ಮೇಲೆ ಸಂಚರಿಸುವವನು.

ಅತುಲಃ ಶರಭೋ ಭೀಮಃ ಸಮಯಜ್ಞೋ ಹವಿರ್ಹರಿಃ ।
ಸರ್ವಲಕ್ಷಣಲಕ್ಷಣ್ಯೋ ಲಕ್ಷ್ಮೀವಾನ್ ಸಮಿತಿಂಜಯಃ ॥೫೨॥

ಅತುಲಃ= ಅಸದೃಶನಾದವನು.

ಶರಭಃ= ಶತ್ರುಗಳ ಶರವನ್ನು ಭಂಜಿಸುವವನು. ತ್ರಿಪುರರನ್ನು ಸಂಹಾರ ಮಾಡುವ ಶರದ ತುದಿಯಲ್ಲಿ ವಾಸಿಸುವವನು.

ಭೀಮಃ= ಅವಮುಕ್ತರಿಗೆ, ವಿಶೇಷವಾಗಿ ಅಜ್ಞಾನಿಗಳಿಗೆ ಭಯವನ್ನುಂಟು ಮಾಡುವವನು.

ಸಮಯಜ್ಞಃ= ವೈದಿಕ ಸಿದ್ಧಾಂತವನ್ನು ಬಲ್ಲವನು. ಆಚಾರಗಳನ್ನು ಬಲ್ಲವನು.

ಹವಿರ್ಹರಿಃ= ಯಜ್ಞಗಳಲ್ಲಿ ನೀಡುವ ಹವಿಸ್ಸನ್ನು ಪಡೆಯುವವನು.

ಸರ್ವಲಕ್ಷಣಲಕ್ಷಣ್ಯಃ= ಸಕಲ ಶುಭಲಕ್ಷಣಗಳಿಂದ ಗುರುತಿಸಲು ಸಾಧ್ಯವಾಗುವವನು.

ಲಕ್ಷ್ಮೀವಾನ್= ನಿತ್ಯವೂ ಲಕ್ಷ್ಮೀದೇವಿಯೊಡನೆ ಕೂಡಿರುವವನು.

ಸಮಿತಿಂಜಯಃ= ಯುದ್ಧದಲ್ಲಿ ಗೆಲ್ಲುವವನು. ವಿದ್ವತ್ಸಭೆಯಲ್ಲಿ ಗೆಲ್ಲುವವನು.

ವಿಕ್ಷರೋ ರೋಹಿತೋ ಮಾರ್ಗೋ ಹೇತುರ್ದಾಮೋದರಃ ಸಹಃ ।
ಮಹೀಧರೋ ಮಹಾಭಾಗೋ ವೇಗವಾನಮಿತಾಶನಃ ॥೫೩॥

ವಿಕ್ಷರಃ= ಭಕ್ತರಿಗೆ ವಿಶೇಷವಾಗಿ ಸಕಲ ಉಪಯುಕ್ತ ಪದಾರ್ಥಗಳನ್ನೂ ಸತತವಾಗಿ ನೀಡುವವನು. ಯಾವುದೇ ರೀತಿಯ ನಾಶವಿಲ್ಲದವನು.

ರೋಹಿತಃ= ಸುವರ್ಣವರ್ಣವುಳ್ಳವನು.

ಮಾರ್ಗಃ= ಸಂಸಾರವನ್ನು ನಾಶಪಡಿಸಿ ಮೋಕ್ಷವನ್ನು ಹೊಂದಿಸುವವನು.

ಹೇತುಃ= ಎಲ್ಲದಕ್ಕೂ ಕಾರಣನಾದವನು.

ದಾಮೋದರಃ= ಉದರದಲ್ಲಿ ಲೋಕಗಳನ್ನು ಇಟ್ಟುಕೊಂಡವನು. ಯಶೋದೆಯಿಂದ ಹಗ್ಗದಿಂದ ಉದರದಲ್ಲಿ ಕಟ್ಟಲ್ಪಟ್ಟವನು.

ಸಹಃ= ನಿಷ್ಠುರವನ್ನು ಸಹಿಸಿಕೊಳ್ಳುವ ಸಾಮರ್ಥ್ಯರೂಪನಾದವನು.

ಮಹೀಧರಃ= ಭೂದೇವಿಯು ಜಗತ್ತನ್ನು ಧರಿಸುವಂತೆ ಅನುಗ್ರಹಿಸಿದವನು.

ಮಹಾಭಾಗಃ= ಮಹತ್ವಪೂರ್ಣವಾದ ಸ್ವರೂಪಾಂಶವನ್ನುಳ್ಳವನು.

ವೇಗವಾನ್= ಸರ್ವಾತಿಶಯವಾದ, ಪ್ರಶಂಸನೀಯವಾದ ವೇಗವನ್ನು ನಿತ್ಯವೂ ಪಡೆದಿರುವವನು.

ಅಮಿತಾಶನಃ= ಅಪರಿಮಿತವಾದ ತನ್ನಸ್ವರೂಪವನ್ನೂ, ಗುಣಗಳನ್ನೂ, ಆನಂದವನ್ನೂ ಅನುಭವಿಸುತ್ತಿರುವವನು.

ಉದ್ಭವಃ ಕ್ಷೋಭಣೋ ದೇವಃ ಶ್ರೀಗರ್ಭಃ ಪರಮೇಶ್ವರಃ ।
ಕರಣಂ ಕಾರಣಂ ಕರ್ತಾ ವಿಕರ್ತಾ ಗಹನೋ ಗುಹಃ ॥೫೪॥

ಉದ್ಭವಃ= ಉತ್ಪಾದಿಸುವವನು.

ಕ್ಷೋಭಣಃ= ಪ್ರಕೃತಿಯಲ್ಲಿ ಸೃಷ್ಟಿಗೆ ಬೇಕಾದ ಕ್ಷೋಭೆಯನ್ನು ಉಂಟುಮಾಡುವವನು.

ದೇವಃ= ಪ್ರಕಾಶಿಸುವವನು.

ಶ್ರೀಗರ್ಭಃ= ಲಕ್ಷ್ಮಿಯಲ್ಲಿ ಗರ್ಭಾಧಾನವನ್ನು ಮಾಡುವವನು.

ಪರಮೇಶ್ವರಃ= ಉತ್ತಮನಾದ ಒಡೆಯನು.

ಕರಣಂ= ಪ್ರತಿಯೊಂದು ಕಾರ್ಯಕ್ಕೂ ಮುಖ್ಯಸಾಧನವಾಗಿರುವವನು.

ಕಾರಣಂ= ಎಲ್ಲದಕ್ಕೂ ಕಾರಣನಾಗಿರುವವನು.

ಕರ್ತಾ= ಎಲ್ಲವನ್ನೂ ಸ್ವತಂತ್ರವಾಗಿ ಮಾಡುವವನು. ಎಲ್ಲರಿಂದಲೂ ಮಾಡಿಸುವವನು.

ವಿಕರ್ತಾ= ಅದ್ಭುತವಾಗಿ ಅಥವಾ ವಿಶಿಷ್ಟವಾಗಿ ಅಥವಾ ವೈವಿಧ್ಯಪೂರ್ಣವಾಗಿ ಜಗತ್ತನ್ನು ನಿರ್ಮಿಸಿದವನು.

ಗಹನಃ= ಸಮಗ್ರವಾಗಿ ಯಾರಿಗೂ ತಿಳಿಯದವನು.

ಗುಹಃ= ತನ್ನನ್ನು ತಾನು ಆಚ್ಛಾದಿಸಿಕೊಳ್ಳುವವನು. ಎಲ್ಲರನ್ನೂ ರಕ್ಷಿಸುವವನು.

ವ್ಯವಸಾಯೋ ವ್ಯವಸ್ಥಾನಃ ಸಂಸ್ಥಾನಃ ಸ್ಥಾನದೋ ಧ್ರುವಃ ।
ಪರರ್ದ್ಧಿಃ ಪರಮಃ ಸ್ಪಷ್ಟಸ್ತುಷ್ಟಃ ಪುಷ್ಟಃ ಶುಭೇಕ್ಷಣಃ ॥೫೫॥

ವ್ಯವಸಾಯಃ= ನಿಶ್ಚಯಜ್ಞಾನರೂಪನಾದವನು.

ವ್ಯವಸ್ಥಾನಃ= ದೈತ್ಯರಿಗೆ ವಿರುದ್ಧವಾಗಿ ನಿಲ್ಲುವವನು.

ಸಂಸ್ಥಾನಃ= ದೇವತೆಗಳಿಗೆ ಚೆನ್ನಾಗಿ ಅನುಕೂಲವಾಗಿ ನಿಲ್ಲುವವನು.

ಸ್ಥಾನದಃ= ತ್ರಿವಿಧ ಜೀವರಿಗೆ ಪುನರಾವೃತ್ತಿ ರಹಿತವಾದ, ಅವರವರಿಗೆ ಯೋಗ್ಯವಾದ ಸ್ಥಾನವನ್ನು ಕೊಡುವವನು.

ಧ್ರುವಃ= ಧಾರಣಶೀಲರಾದ ದೇವತೆಗಳನ್ನು ಪ್ರವರ್ತಿಸುವವನು. ಶಾಶ್ವತನು.

ಪರರ್ದ್ಧಿಃ= ಶ್ರೇಷ್ಠವಾದ ಸಮೃದ್ಧಿಯುಳ್ಳವನು.

ಪರಮಃ= ಸರ್ವೋತ್ತಮನಾದವನು.

ಸ್ಪಷ್ಟಃ= ತನಗೆ ತಾನು ಯಾವಾಗಲೂ ಅಭಿವ್ಯಕ್ತನಾದವನು.

ತುಷ್ಟಃ= ಪರಮಾನಂದದಿಂದ ಸಂತುಷ್ಟನು.

ಪುಷ್ಟಃ= ಸಮೃದ್ಧನಾದವನು.

ಶುಭೇಕ್ಷಣಃ= ಶುಭದರ್ಶನನಾದವನು.

ರಾಮೋ ವಿರಾಮೋ ವಿರಜೋ ಮಾರ್ಗೋ ನೇಯೋ ನಯೋನಯಃ ।
ವೀರಃ ಶಕ್ತಿಮತಾಂ ಶ್ರೇಷ್ಠೋ ಧರ್ಮೋ ಧರ್ಮವಿದುತ್ತಮಃ ॥೫೬॥

ರಾಮಃ= ನಿತ್ಯವಾದ ಮತ್ತು ಪೂರ್ಣವಾದ ಸುಖಜ್ಞಾನಸ್ವರೂಪನು.

ವಿರಾಮಃ= ವಿಶೇಷವಾಗಿ ರಮಿಸುವವನು. ಆರಬ್ಧ ಕಾರ್ಯವನ್ನು ಮುಗಿಸುವವನು.

ವಿರಜಃ= ದೋಷದೂರನಾದವನು.

ಮಾರ್ಗಃ= ಕಾಮನನ್ನು ವಕ್ರನಾಮ ಅಸುರನ ವಧೆಗಾಗಿ ತನ್ನ ಉದರದಿಂದ ಹೊರಗೆ ತರುವವನು.

ನೇಯಃ= ಶಿಷ್ಯಾದಿಗಳಲ್ಲಿ ವ್ಯಾಖ್ಯಾನದಿಂದ ನಿರ್ಣಯಿಸಲ್ಪಡುವವನು.

ನಯಃ= ನೀತಿಯುಳ್ಳವನು.

ಅನಯಃ= ಮಧ್ವರೂಪಿಯಾದ ಮುಖ್ಯಪ್ರಾಣನನ್ನು ಭೂಲೋಕಕ್ಕೆ ಕಳುಹಿಸುವವನು.

ವೀರಃ= ಪರಾಕ್ರಮಶಾಲಿಯಾದವನು.

ಶಕ್ತಿಮತಾಂಶ್ರೇಷ್ಠಃ= ಪ್ರಶಸ್ತವಾದ ಶಕ್ತಿಸಂಪನ್ನರಾದವರಿಗೆಲ್ಲಾ ಶ್ರೇಷ್ಠನಾಗಿರುವವನು.

ಧರ್ಮಃ= ಸಕಲ ಜಗತ್ತನ್ನೂ ಧರಿಸಿದವನು.

ಧರ್ಮವಿದುತ್ತಮಃ= ಧರ್ಮವನ್ನು ತಿಳಿದವರಲ್ಲಿ ಶ್ರೇಷ್ಠನಾದವನು.

ವೈಕುಂಠಃ ಪುರುಷಃ ಪ್ರಾಣಃ ಪ್ರಾಣದಃ ಪ್ರಣವಃ ಪೃಥುಃ ।
ಹಿರಣ್ಯಗರ್ಭಃ ಶತ್ರುಘ್ನೋ ವ್ಯಾಪ್ತೋ ವಾಯುರಧೋಕ್ಷಜಃ ॥೫೭॥

ವೈಕುಂಠಃ= ಕುಂಠಿತವಾಗದ ದೇಹಸುಖಜ್ಞಾನವುಳ್ಳವನು.

ಪುರುಷಃ= ಪೂರ್ಣವಾದ ಷಡ್ಗುಣಗಳುಳ್ಳವನು.

ಪ್ರಾಣಃ= ಪ್ರಕೃಷ್ಟವಾಗಿ ದೇವತೆಗಳಿಂದ ಶಿಷ್ಯರಲ್ಲಿ ಉಪದೇಶದಿಂದ ತಿಳಿಯಲ್ಪಡುವವನು.

ಪ್ರಾಣದಃ= ಉತ್ಪತ್ತಿ ಸಮಯದಲ್ಲಿ ಪ್ರಾಣವನ್ನು ಕೊಡುವವನು. ಮರಣ ಸಮಯದಲ್ಲಿ ಪ್ರಾಣವನ್ನು ಸಂಹರಿಸುವವನು.

ಪ್ರಣವಃ= ಪ್ರಕೃಷ್ಟವಾಗಿ ಯಾವಾಗಲೂ ಹೊಸಹೊಸದಾಗಿರುವವನು.

ಪೃಥುಃ= ವಿಸ್ತಾರವಾಗಿರುವವನು.

ಹಿರಣ್ಯಗರ್ಭಃ= ಗರ್ಭದಲ್ಲಿ ಸುವರ್ಣಮಯವಾದ ಬ್ರಹ್ಮಾಂಡವನ್ನು ಧರಿಸಿದವನು.

ಶತ್ರುಘ್ನಃ= ಒಳಗಿನ ಮತ್ತು ಹೊರಗಿನ ಶತ್ರುಗಳನ್ನು ಸಂಹರಿಸುವವನು.

ವ್ಯಾಪ್ತಃ= ಸರ್ವತ್ರ ವ್ಯಾಪಿಸಿರುವವನು.

ವಾಯುಃ= ಬಲಸ್ವರೂಪಿ ಮತ್ತು ಸರ್ವತ್ರ ಸಂಚರಿಸುವವನು. ಅಂಗಗಳಲ್ಲಿ ಸುಖ ಸಂಗವನ್ನು ಮತ್ತು ನಿರವಧಿಕವಾದ ಆಯುಸ್ಸನ್ನು ಹೊಂದಿದವನು.

ಅಧೋಕ್ಷಜಃ= ಪ್ರತ್ಯಕ್ಷರೂಪವಾದ ಜ್ಞಾನಕ್ಕೆ ವಿಷಯನಾಗದವನು.

ಋತುಃ ಸುದರ್ಶನಃ ಕಾಲಃ ಪರಮೇಷ್ಠೀ ಪರಿಗ್ರಹಃ ।
ಉಗ್ರಃ ಸಂವತ್ಸರೋ ದಕ್ಷೋ ವಿಶ್ರಾಮೋ ವಿಶ್ವದಕ್ಷಿಣಃ ॥೫೮॥

ಋತುಃ= ಮಹಾಪ್ರಯತ್ನವುಳ್ಳವನು.

ಸುದರ್ಶನಃ= ಶೋಭನವಾದ ದರ್ಶನವುಳ್ಳವನು.

ಕಾಲಃ= ಸದ್ಗುಣಗಳಿಂದ ಸಂಬದ್ಧನಾದವನು, ಸರ್ವಸಂಹಾರಕನು.

ಪರಮೇಷ್ಠೀ= ಆಯಾ ರೂಪಗಳಲ್ಲಿ ಉತ್ತಮವೆನಿಸುವ ಪದಾರ್ಥಗಳಲ್ಲಿ ಇರುವವನು.

ಪರಿಗ್ರಹಃ= ಭಕ್ತರನ್ನು ತನ್ನವರನ್ನಾಗಿ ಸ್ವೀಕರಿಸುವವನು.

ಉಗ್ರಃ= ಉತ್ಕೃಷ್ಟರಾದ ಜೀವರನ್ನು ರಮಿಸುವವನು.

ಸಂವತ್ಸರಃ= ಚೆನ್ನಾಗಿ ವತ್ಸರಗಳನ್ನು ಪ್ರವರ್ತಿಸುವವನು. ಸಮೀಚೀನವಾದ ಕಂಠ ಮಾಲೆಯನ್ನು ಉಳ್ಳವನು.

ದಕ್ಷಃ= ನಿಪುಣನಾದವನು.

ವಿಶ್ರಾಮಃ= ಕಾರ್ಯಗಳಲ್ಲಿ ಶ್ರಮವಿಲ್ಲದವನು.

ವಿಶ್ವದಕ್ಷಿಣಃ= ಎಲ್ಲ ಕಾರ್ಯಗಳಲ್ಲಿಯೂ ಕುಶಲನಾದವನು.

ವಿಸ್ತಾರಃ ಸ್ಥಾವರಃ ಸ್ಥಾಣುಃ ಪ್ರಮಾಣಂ ಬೀಜಮವ್ಯಯಃ ।
ಅರ್ಥೋಽನರ್ಥೋ ಮಹಾಕೋಶೋ ಮಹಾಭೋಗೋ ಮಹಾಧನಃ ॥

ವಿಸ್ತಾರಃ= ವ್ಯಾಪ್ತನಾದವನು.

ಸ್ಥಾವರಃ= ತನಗಿಂತ ಅವರರಾದ ಸತ್ಯಾದಿ ಲೋಕದಲ್ಲಿ ಇರುವ ದೇವತೆಗಳನ್ನು ಹೊಂದಿದವನು.

ಸ್ಥಾಣುಃ= ಪರಮಾಣುಗಳಲ್ಲಿ ಇರುವವನು.

ಪ್ರಮಾಣಂ= ಪ್ರಕೃಷ್ಟವಾದ ಪರಿಮಾಣವುಳ್ಳವನು.

ಬೀಜಃ= ಜಗತ್ತಿನ ಅಭಿವ್ಯಕ್ತಿಗೆ ಕಾರಣನಾದವನು.

ಅವ್ಯಯಂ (ಅವ್ಯಯಃ)= ನಿರ್ವಿಕಾರನಾದವನು. ಮೇಷರೂಪನಾದ ಶಂಕರನನ್ನು ಏರಿ ಯೋಗಿನಿಯ ಜೊತೆಯಲ್ಲಿ ಯುದ್ಧಕ್ಕೆ ಹೋಗುವವನು.

ಅರ್ಥಃ= ಸಕಲ ವೇದಗಳ ಅರ್ಥನಾದವನು.

ಅನರ್ಥಃ= ದೈತ್ಯರಿಗೆ ಅನರ್ಥವನ್ನು ಉಂಟುಮಾಡುವವನು. ಜಗತ್ ಸೃಷ್ಟ್ಯಾದಿಗಳಲ್ಲಿ ತನಗೆ ಪ್ರಯೋಜನವಿಲ್ಲದವನು.

ಮಹಾಕೋಶಃ= ಮಹತ್ತ್ವಪರಿಮಾಣವನ್ನು ಹೊಂದಿದವನು ಮತ್ತು ಸುಖ ಇಚ್ಛಾ ಸ್ವರೂಪನು.

ಮಹಾಭೋಗಃ= ಉತ್ತಮವಾದ ಸುಖವುಳ್ಳವನು. ಉತ್ತಮ ಸುಖಸ್ವರೂಪನು.

ಮಹಾಧನಃ= ಉತ್ತಮವಾದ ಸಂಪತ್ತುಳ್ಳವನು. ಭಕ್ತರಿಗೆ ಚೆನ್ನಾದ ಸಂಪತ್ತನ್ನು ಕರುಣಿಸುವವನು.

ಅನಿರ್ವಿಣ್ಣಃ ಸ್ಥವಿಷ್ಠೋ ಭೂರ್ಧರ್ಮಯೂಪೋ ಮಹಾಮಖಃ ।
ನಕ್ಷತ್ರನೇಮಿರ್ನಕ್ಷತ್ರೀ ಕ್ಷಮಃ ಕ್ಷಾಮಃ ಸಮೀಹನಃ ॥೬೦॥

ಅನಿರ್ವಿಣ್ಣಃ= ಭಕ್ತರ ಅಭೀಷ್ಟವನ್ನು ಕೊಡುವುದರಲ್ಲಿ ಬೇಸರಗೊಳ್ಳದವನು.

ಸ್ಥವಿಷ್ಠಃ= ಅತಿಶಯವಾಗಿ ಸ್ಥೂಲನಾದವನು ಅಥವಾ ಅತಿಶಯನಾಗಿ ಸ್ಥಿರನಾದವನು.

ಭೂಃ= ಯಾವಾಗಲೂ ಇರುವವನು.

ಧರ್ಮಯೂಪಃ= ಧರ್ಮವನ್ನು ಅಧಿಷ್ಠಾನವಾಗಿ ಹೊಂದಿದವನು.

ಮಹಾಮಖಃ= ಶ್ರೇಷ್ಠವಾದ ಪೂಜೆಯುಳ್ಳವನು. ಶ್ರೇಷ್ಠವಾದ ಯಜ್ಞಗಳಿಗೆ ಆಶ್ರಯನಾದವನು.

ನಕ್ಷತ್ರನೇಮಿಃ= ಜ್ಯೋತಿರ್ಮಂಡಲವನ್ನು ತನ್ನ ಚಕ್ಷುಃಸ್ಥಾನದಲ್ಲಿ ಹೊಂದಿದವನು. ಶಿಂಶುಮಾರ ರೂಪದಿಂದ ಜ್ಯೋತಿರ್ಮಂಡಲವನ್ನು ಪ್ರವರ್ತಿಸುವವನು ಎಂದು ಅರ್ಥ.

ನಕ್ಷತ್ರೀ= ಬ್ರಾಹ್ಮಣ ಪ್ರಿಯನು.

ಕ್ಷಮಃ= ಸಮರ್ಥನಾದವನು.

ಕ್ಷಾಮಃ= ಕ್ಷಮೆಯನ್ನು ಹೊಂದಿದವನು. ಭೂಮಿಯನ್ನು ಧರಿಸಿದವನು.

ಸಮೀಹನಃ= ಚೆನ್ನಾಗಿ ಕ್ರಿಯೆಗಳನ್ನು ನಡೆಸುವವನು.

ಯಜ್ಞ ಇಜ್ಯೋ ಮಹೇಜ್ಯಶ್ಚ ಕ್ರತುಃ ಸತ್ರಂ ಸತಾಂಗತಿಃ ।
ಸರ್ವದರ್ಶೀ ವಿಮುಕ್ತಾತ್ಮಾ ಸರ್ವಜ್ಞೋ ಜ್ಞಾನಮುತ್ತಮಮ್ ॥೬೧॥

ಯಜ್ಞಃ= ಲೀಲೆಯಿಂದ ಯಜ್ಞವನ್ನು ಮಾಡುವವನು. ಪಾತಾಳಾದಿ ಲೋಕಗಳಿಗೆ ಅನ್ಯೋನ್ಯ ಸಂಬಂಧವನ್ನುಂಟು ಮಾಡುವವನು. ಭಕ್ತರ ಅಭೀಷ್ಟವನ್ನು ಕೊಡುವವನು.

ಇಜ್ಯಃ= ಯಜ್ಞದಿಂದ ಪೂಜಿಸಿಕೊಳ್ಳಲು ಯೋಗ್ಯನಾದವನು.

ಮಹೇಜ್ಯಃ= ಪೂಜನೀಯರಲ್ಲಿ ಉತ್ತಮನಾದವನು.

ಕ್ರತುಃ= ಕ್ರಿಯಾಶೀಲನಾದವನು.

ಸತ್ರಂ= ಜಗತ್ಪಾಲನೆಯಿಂದ ಕೂಡಿದವನು.

ಸತಾಂಗತಿಃ= ಇರುವವರಿಗೆಲ್ಲ ಆಶ್ರಯನಾದವನು. ಇರುವ ವಸ್ತುಗಳನ್ನೆಲ್ಲಾ ತಿಳಿದವನು.

ಸರ್ವದರ್ಶೀ= ಎಲ್ಲಾ ಅಮಾವಾಸ್ಯೆಗಳಲ್ಲೂ ಪೂಜನೀಯನಾದವನು.

ವಿಮುಕ್ತಾತ್ಮಾ= ವಿಶೇಷವಾಗಿ ಮುಕ್ತವಾದ ಸ್ವರೂಪವುಳ್ಳವನು.

ಸರ್ವಜ್ಞಃ= ಎಲ್ಲವನ್ನೂ ಚೆನ್ನಾಗಿ ಬಲ್ಲವನು. ಸರ್ವನೆನಿಸುವ ತನ್ನನ್ನು ಚೆನ್ನಾಗಿ ತಿಳಿದವನು.

ಜ್ಞಾನಮುತ್ತಮಮ್= ಉತ್ತಮವಾದ ಜ್ಞಾನಸ್ವರೂಪನು.

ಸುವ್ರತಃ ಸುಮುಖಃ ಸೂಕ್ಷ್ಮಃ ಸುಘೋಷಃ ಸುಖದಃ ಸುಹೃತ್ ।
ಮನೋಹರೋ ಜಿತಕ್ರೋಧೋ ವೀರಬಾಹುರ್ವಿದಾರಣಃ ॥೬೨॥

ಸುವ್ರತಃ= ಭಕ್ತರ ರಕ್ಷಣೆ ಮುಂತಾದ ಶೋಭನವಾದ ನಿಯಮವುಳ್ಳವನು.

ಸುಮುಖಃ= ಶೋಭನವಾದ ಮುಖವುಳ್ಳವನು. ಆನಂದರೂಪವಾದ ಮುಖ ಉಳ್ಳವನು.

ಸೂಕ್ಷ್ಮಃ= ಬಹಳ ಸೂಕ್ಷ್ಮನಾದವನು.

ಸುಘೋಷಃ= ಶೋಭನವಾದ ವೇದಾದಿಗಳ ಘೋಷವುಳ್ಳವನು.

ಸುಖದಃ= ಸುಖವನ್ನು ನೀಡುವವನು.

ಸುಹೃತ್= ಯಾವುದೇ ರೀತಿಯ ಪ್ರತ್ಯುಪಕಾರವನ್ನು ಅಪೇಕ್ಷಿಸದೆ ಉಪಕಾರ ಮಾಡುವವನು.

ಮನೋಹರಃ= ಜೀವರ ಮನಸ್ಸನ್ನು ವಿಷಯಗಳ ಕಡೆಗೆ ಒಯ್ಯುವವನು.

ಜಿತಕ್ರೋಧಃ= ಎಲ್ಲರ ಕ್ರೋಧವನ್ನೂ ನಿಯಮಿಸುವವನು.

ವೀರಬಾಹುಃ= ವಿಶೇಷವಾಗಿ ಪ್ರೇರಿಸುವ ಬಾಹುಗಳುಳ್ಳವನು.

ವಿದಾರಣಃ= ಶಾಸ್ತ್ರಾದಿಗಳ ಮೂಲಕ ಅಜ್ಞಾನವನ್ನು ನಾಶ ಮಾಡುವವನು.

ಸ್ವಾಪನಃ ಸ್ವವಶೋ ವ್ಯಾಪೀ ನೈಕಾತ್ಮಾ ನೈಕಕರ್ಮಕೃತ್ ।
ವತ್ಸರೋ ವತ್ಸಲೋ ವತ್ಸೀ ರತ್ನಗರ್ಭೋ ಧನೇಶ್ವರಃ ॥೬೩॥

ಸ್ವಾಪನಃ= ಜೀವರ ಸ್ವಪ್ನಾವಸ್ಥೆಯನ್ನು ಸುಷುಪ್ತ್ಯವಸ್ಥೆಯನ್ನು ಪ್ರೇರಿಸುವವನು.

ಸ್ವವಶಃ= ಸ್ವತಂತ್ರನಾದವನು.

ವ್ಯಾಪೀ= ಸದಾ ಸರ್ವತ್ರ ವ್ಯಾಪ್ತನಾದವನು.

ನೈಕಾತ್ಮಾ= ಜೀವರಿಂದ ಅಭೇದವನ್ನು ಹೊಂದದವನು.

ನೈಕಕರ್ಮಕೃತ್= ಸೃಷ್ಟಿಮೊದಲಾದ ಅನಂತ ಕ್ರಿಯೆಗಳನ್ನು ನಡೆಸುವವನು.

ವತ್ಸರಃ= ಕೃಷ್ಣಾವತಾರದಲ್ಲಿ ಕರುಗಳ ಜೊತೆಯಲ್ಲಿ ಸಂತೋಷ ಪಡುವವನು.

ವತ್ಸಲಃ= ವಾತ್ಸಲ್ಯವುಳ್ಳವನು.

ವತ್ಸೀ= ಶ್ರೀವತ್ಸಚಿಹ್ನೆಯನ್ನು ಹೊಂದಿದವನು.

ರತ್ನಗರ್ಭಃ= ಸುಖವನ್ನು ಅಭಿವ್ಯಕ್ತಿಪಡಿಸುವವನು.

ಜನೇಶ್ವರಃ= ಮಿಥ್ಯಾರೂಪವಾದ ಮತ್ತು ಬಾಹ್ಯ ಸಂಪತ್ತಿನ ಒಡೆಯನಾದವನು.

ಧರ್ಮಗುಬ್ಧರ್ಮಕೃದ್ಧರ್ಮೀ ಸದಸತ್ಕ್ಷರಮಕ್ಷರಮ್ ।
ಅವಿಜ್ಞಾತಾ ಸಹಸ್ರಾಂಶುರ್ವಿಧಾತಾ ಕೃತಲಕ್ಷಣಃ ॥೬೪॥

ಧರ್ಮಗುಬ್(ಪ್)= ಧರ್ಮಗಳನ್ನು ರಕ್ಷಿಸುವವನು.

ಧರ್ಮಕೃತ್= ಧರ್ಮಗಳನ್ನು ನಿರ್ಮಿಸುವವನು. ಧರ್ಮವನ್ನು ಆಚರಿಸುವವನು. ವಾಯುದೇವರನ್ನು ಸೃಷ್ಟಿಸಿದವನು.

ಧರ್ಮೀ= ಧರ್ಮನಿಯಾಮಕನಾದವನು.

ಸದಸತ್= ನಿರ್ದುಷ್ಟನಾದವನು ಮತ್ತು ನಾಶವನ್ನು ಹೊಂದಲು ಅನರ್ಹನಾದವನು.

ಕ್ಷರಂ= ಜಗತ್ತನ್ನು ನಾಶ ಮಾಡುವವನು.

ಅಕ್ಷರಂ= ಸ್ವಯಂ ನಾಶವಿಲ್ಲದವನು.

ಅವಿಜ್ಞಾತಾ= ತನ್ನನ್ನು ವಿಶೇಷವಾಗಿ ಬಲ್ಲವನು ಯಾವನೂ ಇಲ್ಲದವನು.

ಸಹಸ್ರಾಂಶುಃ= ಸಾವಿರಾರು ಕಿರಣಗಳುಳ್ಳವನು.

ವಿಧಾತಾ= ಗರುಡನನ್ನು ಪೋಷಿಸುವವನು. ಗರುಡವಾಹನನಾದವನು.

ಕೃತಲಕ್ಷಣಃ= ಗುಣಗಳಿಂದ ಪ್ರಸಿದ್ಧನಾದವನು.

ಗಭಸ್ತಿನೇಮಿಃ ಸತ್ತ ಸ್ಥಃ ಸಿಂಹೋ ಭೂತಮಹೇಶ್ವರಃ ।
ಆದಿದೇವೋ ಮಹಾದೇವೋ ದೇವೇಶೋ ದೇವಭೃದ್ಗುರುಃ ॥೬೫॥

ಗಭಸ್ತಿನೇಮಿಃ= ತನ್ನ ಕಾಂತಿಯನ್ನೇ ಚಕ್ರದಂತೆ ಸುತ್ತಲೂ ಹೊಂದಿದವವನು. ಸಹಸ್ರೋಲ್ಕ.

ಸತ್ತ ಸ್ಥಃ= ಜೀವರಲ್ಲಿ ಇರುವವನು. ಸತ್ವಗುಣದಲ್ಲಿ ಇರುವವನು.

ಸಿಂಹಃ= ನರಸಿಂಹಾವತಾರದಲ್ಲಿ ಸಿಂಹದ ಮುಖವುಳ್ಳವನು.

ಭೂತಮಹೇಶ್ವರಃ= ಸಕಲ ಭೂತಗಳಿಗೂ ಶ್ರೇಷ್ಠನಾದ ಈಶ್ವರನಾಗಿರುವವನು.

ಆದಿದೇವಃ= ಕಾರಣಗಳಲ್ಲಿ ನಿಯಾಮಕನಾಗಿ ಪ್ರವೇಶಿಸಿರುವವನು.

ಮಹಾದೇವಃ= ದೇವೋತ್ತಮನಾದವನು.

ದೇವೇಶಃ= ದೇವತೆಗಳಿಗೆ ಒಡೆಯನಾದವನು.

ದೇವಭೃದ್ಗುರುಃ= ದೇವತೆಗಳನ್ನು ಪೋಷಿಸುವ ಚತುರ್ಮುಖನಿಗೂ ಗುರುವಾಗಿರುವವನು.

ಉತ್ತರೋ ಗೋಪತಿರ್ಗೋಪ್ತಾ ಜ್ಞಾನಗಮ್ಯಃ ಪುರಾತನಃ ।
ಶರೀರೀ ಭೂತಭೃದ್ಭೋಕ್ತಾ ಕಪೀಂದ್ರೋ ಭೂರಿದಕ್ಷಿಣಃ ॥೬೬॥

ಉತ್ತರಃ= ಅತಿಶಯವಾಗಿ ಉತ್ಕೃಷ್ಟನಾಗಿರುವವನು.

ಗೋಪತಿಃ= ಜ್ಞಾನದ ರಕ್ಷಕ-ಅಧಿಪತಿ.

ಗೋಪ್ತಾ= ಸಂರಕ್ಷಿಸುವವನು.

ಜ್ಞಾನಗಮ್ಯಃ= ಬ್ರಹ್ಮ-ವಾಯುಗಳಿಂದ ವಿಶೇಷವಾಗಿ ತಿಳಿಯಲ್ಪಡುವವನು ಅಥವಾ ಹೊಂದಲ್ಪಡುವವನು.

ಪುರಾತನಃ= ಪ್ರಾಚೀನನಾದವನು.

ಶರೀರೀ= ಪ್ರಶಸ್ತವಾದ ಶರೀರವುಳ್ಳವನು.

ಭೂತಭೃದ್= ಭೂತಗಳನ್ನು ಧರಿಸಿರುವವನು.

ಭೋಕ್ತಾ= ಪೂರ್ಣ ಸರ್ವಗುಣಾತ್ಮಕವಾದ ತನ್ನ ಸ್ವರೂಪವನ್ನು ಸರ್ವದಾ ಅನುಭವಿಸುವವನು.

ಕಪೀಂದ್ರಃ= ಮುಕ್ತರಿಗೆ ಒಡೆಯನಾದವನು. ರಾಮಾವತಾರದಲ್ಲಿ ಕಪಿಗಳಿಗೆ ಒಡೆಯನಾದವನು.

ಭೂರಿದಕ್ಷಿಣಃ= ಅತಿಯಾಗಿ ದಾನ ಮಾಡುವವನು. ಅತ್ಯಂತ ಸಮೃದ್ಧನಾದವನು.

ಸೋಮಪೋऽಮೃತಪಃ ಸೋಮಃ ಪುರುಜಿತ್ ಪುರುಸತ್ತಮಃ ।
ವಿನಯೋ ಜಯಃ ಸತ್ಯಸಂಧೋ ದಾಶಾರ್ಹಃ ಸಾತ್ವತಾಂಪತಿಃ ॥೬೭॥

ಸೋಮಪಃ= ಸೋಮರಸವನ್ನು ಪಾನ ಮಾಡುವವನು.

ಅಮೃತಪಃ= ದೇವತೆಗಳನ್ನು ವಿಶೇಷವಾಗಿ ರಕ್ಷಿಸುವವನು. ದೇವತೆಗಳಿಗೆ ಅಮೃತವನ್ನು ಕುಡಿಸಿದವನು.

ಸೋಮಃ= ಆನಂದಾನುಭವ ರೂಪವಾದ ಸೌಮ್ಯಗುಣವುಳ್ಳವನು.

ಪುರುಜಿತ್= ಬಹುಗುಣಗಳನ್ನು ಹೊಂದಿರುವವನು. ಬಹಳ ಶತ್ರುಗಳನ್ನು ಜಯಿಸಿರುವವನು.

ಪುರುಸತ್ತಮಃ= ಅಧಿಕವಾದ ನಿರ್ದುಃಖಾನಂದವುಳ್ಳ ಮುಕ್ತರನ್ನು ಸೃಷ್ಟಿಸುವವನು.

ವಿನಯಃ= ವಿಶಿಷ್ಟನಾದ ನಾಯಕನಾಗಿರುವವನು. ತನಗೆ ಇನ್ನೊಬ್ಬ ನಾಯಕನು ಇಲ್ಲದಿರುವವನು.

ಜಯಃ= ಉತ್ಕೃಷ್ಟನಾದವನು. ಎಲ್ಲರನ್ನೂ ಅತಿಕ್ರಮಿಸಿ ಇರುವವನು.

ಸತ್ಯಸಂಧಃ= ಸತ್ಯವಾದ ಪ್ರತಿಜ್ಞೆಯುಳ್ಳವನು.

ದಾಶಾರ್ಹಃ= ಎಲ್ಲ ದಾನಕ್ಕೂ ಅರ್ಹನಾದವನು. ದಾಶಾರ್ಹಗಣದಲ್ಲಿ ಅವತರಿಸಿರುವವನು.

ಸಾತ್ವತಾಂಪತಿಃ= ಒಳ್ಳೆಯವರಿಗೆ ಒಡೆಯನಾದವನು.

ಜೀವೋ ವಿನಯಿತಾ ಸಾಕ್ಷೀ ಮುಕುಂದೋಽಮಿತವಿಕ್ರಮಃ ।
ಅಂಭೋನಿಧಿರನಂತಾತ್ಮಾ ಮಹೋದಧಿಶಯೋಂತಕಃ ॥೬೮॥

ಜೀವಃ= ಇಂದ್ರಿಯಗಳಿಗೆ ಆಧಾರನಾದವನು.

ವಿನಯಿತಾ= ಕಾಲೀಯ ಸರ್ಪನ ಹೆಡೆಗಳನ್ನು ಬಗ್ಗಿಸುವವನು.

ಸಾಕ್ಷೀ= ಎಲ್ಲವನ್ನೂ ಸಾಕ್ಷಾತ್ತಾಗಿ ನೋಡಿದವನು .

ಮುಕುಂದಃ= ಮೋಕ್ಷವನ್ನು ಕೊಡುವವನು.

ಅಮಿತವಿಕ್ರಮಃ= ಅಪರಿಮಿತವಾದ ಶಕ್ತಿಯುಳ್ಳವನು.

ಅಂಭೋನಿಧಿಃ= ಅಂಭಸ್ ಎನಿಸುವ ಸ್ವರ್ಗ ಮತ್ತು ಮೇಲಿನ ಲೋಕಗಳಿಗೆ ಆಶ್ರಯನಾದವನು.

ಅನಂತಾತ್ಮಾ= ದೇಶ-ಕಾಲ-ಗುಣಗಳಿಂದ ಅಂತವಿಲ್ಲದ ಸ್ವರೂಪವುಳ್ಳವನು.

ಮಹೋದಧಿಶಯಃ= ಪ್ರಳಯೋದಕದಲ್ಲಿ ಅಥವಾ ಕ್ಷೀರಸಾಗರದಲ್ಲಿ ಪವಡಿಸಿರುವವನು.

ಅಂತಕಃ= ಎಲ್ಲವನ್ನೂ ಸಂಹರಿಸುವವನು.

ಅಜೋ ಮಹಾರ್ಹಃ ಸ್ವಾಭಾವ್ಯೋ ಜಿತಾಮಿತ್ರಃ ಪ್ರಮೋದನಃ ।
ಆನಂದೋ ನಂದನೋ ನಂದಃ ಸತ್ಯಧರ್ಮಾ ತ್ರಿವಿಕ್ರಮಃ ॥೬೯॥

ಅಜಃ= ಜಡವಲ್ಲ, ಜೀವನಲ್ಲ ಎಂಬ ನಿಷೇಧದಿಂದ ತಿಳಿಯಲ್ಪಡುವವನು.

ಮಹಾರ್ಹಃ= ಉತ್ತಮ ಪೂಜ್ಯನಾಗಿರುವವನು.

ಸ್ವಾಭಾವ್ಯಃ= ಸ್ವತಂತ್ರನೂ, ಸುಖರೂಪಿಯೂ ಆಗಿ ತನ್ನ ಅನುಗ್ರಹದಿಂದಲೇ ಪೂಜಿಸಲ್ಪಡುವವನು.

ಜಿತಾಮಿತ್ರಃ= ಶತ್ರುಗಳನ್ನು ತನ್ನ ಅಧೀನರಾಗಿ ಹೊಂದಿರುವವನು. ಶತ್ರುಗಳನ್ನು ಪರಾಜಯಗೊಳಿಸುವವನು.

ಪ್ರಮೋದನಃ= ಸರ್ವದಾ ಶ್ರೇಷ್ಠವಾದ ಸುಖರೂಪನಾದವನು.

ಆನಂದಃ= ಆನಂದಸ್ವರೂಪನು.

ನಂದನಃ= ಆನಂದಗೊಳಿಸುವವನು, ಆನಂದಸ್ವರೂಪಿ ಮತ್ತು ಸರ್ವಪ್ರೇರಕನು.

ನಂದಃ= ಸಮೃದ್ಧನಾಗಿರುವವನು. ಸಂಸಾರಬಂಧನವನ್ನು ಪರಿಹರಿಸುವವನು.

ಸತ್ಯಧರ್ಮಾಃ= ಸದ್ಗುಣಗಳನ್ನು ಹೊಂದಿದವನು. ಸತ್ಯವಾದ ಜಗತ್ತನ್ನು ಧರಿಸಿದವನು.

ತ್ರಿವಿಕ್ರಮಃ= ಮೂರುವೇದಗಳನ್ನು, ಮೂರು ಕಾಲಗಳನ್ನು, ಮೂರು ಗುಣಗಳನ್ನು ಅತಿಕ್ರಮಿಸಿ ಇರುವವನು.

ಮಹರ್ಷಿಃ ಕಪಿಲಾಚಾರ್ಯಃ ಕೃತಜ್ಞೋ ಮೇದಿನೀಪತಿಃ ।
ತ್ರಿಪದಸ್ತ್ರಿದಶಾಧ್ಯಕ್ಷೋ ಮಹಾಶೃಂಗಃ ಕೃತಾಂತಕೃತ್ ॥೭೦॥

ಮಹರ್ಷಿಃ= ಶ್ರೇಷ್ಠಜ್ಞಾನಿಯಾಗಿರುವವನು.

ಕಪಿಲಾಚಾರ್ಯಃ= ಕಪಿಲಾದಿ ರೂಪಗಳಿಂದ ಶಾಸ್ತ್ರಾರ್ಥವನ್ನು ವ್ಯಾಖ್ಯಾನ ಮಾಡುವವನು.

ಕೃತಜ್ಞಃ= ಪೌರುಷೇಯ ಗ್ರಂಥಗಳನ್ನು ತಿಳಿದವನು.

ಮೇದಿನೀಪತಿಃ= ಭೂಮಿಗೆ ಒಡೆಯನಾದವನು.

ತ್ರಿಪದಃ= ಶ್ವೇತದ್ವೀಪ-ಅನಂತಾಸನ ಮತ್ತು ವೈಕುಂಠವೆಂಬ ಮೂರು ಸ್ಥಾನಗಳನ್ನು ಹೊಂದಿದವನು. ಭೂಮಿ-ಆಕಾಶ-ಪಾತಾಳಗಳನ್ನು ವ್ಯಾಪಿಸಿದವನು.

ತ್ರಿದಶಾಧ್ಯಕ್ಷಃ= ದೇವತೆಗಳಿಗೆ ಒಡೆಯನಾದವನು.

ಮಹಾಶೃಂಗಃ= ಮತ್ಸ್ಯಾವತಾರದಲ್ಲಿ ದೊಡ್ಡ ಕೊಂಬನ್ನು ಹೊಂದಿದವನು.

ಕೃತಾಂತಕೃತ್= ಯಮನನ್ನು ಸೃಷ್ಟಿಸುವವನು. ಸಂಹಾರಕಾಲದಲ್ಲಿ ಯಮನನ್ನೂ ಸಂಹರಿಸುವವನು.

ಮಹಾವರಾಹೋ ಗೋವಿಂದಃ ಸುಷೇಣಃ ಕನಕಾಂಗದೀ ।
ಗುಹ್ಯೋ ಗಭೀರೋ ಗಹನೋ ಗುಪ್ತಶ್ಚಕ್ರಗದಾಧರಃ ॥೭೧॥

ಮಹಾವರಾಹಃ= ಪೂಜ್ಯನಾದವನು ಮತ್ತು ಶ್ರೇಷ್ಠರಿಂದ ವಂದ್ಯನಾದವನು. ಶ್ರೇಷ್ಠ ವರಾಹರೂಪನಾದವನು.

ಗೋವಿಂದಃ= ಸೂರ್ಯನನ್ನು ಪ್ರತೀಕವಾಗಿ ಹೊಂದಿದವನು.

ಸುಷೇಣಃ= ಜೀವರನ್ನು ಸಂಸಾರ ಪಾಶದಿಂದ ಚೆನ್ನಾಗಿ ಬಂಧಿಸುವವನು. ಒಳ್ಳೆಯ ಸೈನ್ಯವನ್ನು ಹೊಂದಿದವನು. ಒಳ್ಳೆಯ ದಾನವನ್ನು ಮಾಡುವವನು.

ಕನಕಾಂಗದೀ= ದೀಪ್ತವಾದ ಭುಜಕೀರ್ತಿಯನ್ನು ನಿತ್ಯವೂ ಧರಿಸಿರುವವನು.

ಗುಹ್ಯಃ= ಅಯೋಗ್ಯರಿಗೆ ತಿಳಿಯದವನು. ಹೃದಯ ಗುಹೆಯಲ್ಲಿ ವಾಸಿಸುವವನು.

ಗಭೀರಃ= ಜ್ಞಾನೈಶ್ವರ್ಯಾದಿ ಗುಣಗಳಿಂದ ಗಂಭೀರನಾದವನು.

ಗಹನಃ= ಎಲ್ಲವನ್ನೂ ಸಂಹರಿಸುವವನು.

ಗುಪ್ತಃ= ಸಾಧಕರಿಂದ ತಮ್ಮ ಹೃದಯದಲ್ಲಿ ರಕ್ಷಿಸಲ್ಪಡುವವನು.

ಚಕ್ರಗದಾಧರಃ= ಸುದರ್ಶನ ಚಕ್ರ ಮತ್ತು ಕೌಮೋದಕೀ ಗದೆಗಳನ್ನು ಧರಿಸಿದವನು.

ವೇಧಾಃ ಸ್ವಾಂಗೋಽಜಿತಃ ಕೃಷ್ಣೋ ದೃಢಃ ಸಂಕರ್ಷಣೋಽಚ್ಯುತಃ ।
ವರುಣೋ ವಾರುಣೋ ವೃಕ್ಷಃ ಪುಷ್ಕರಾಕ್ಷೋ ಮಹಾಮನಾಃ ॥೭೨॥

ವೇಧಾಃ= ವಿಶೇಷವಾಗಿ ಧಾರಣೆ, ಪೋಷಣೆಗಳನ್ನು ಮಾಡುವವನು.

ಸ್ವಾಂಗಃ= ಚೆನ್ನಾಗಿ ವ್ಯಾಪ್ತವಾದ ಅಂಗಗಳನ್ನು ಹೊಂದಿದವನು.

ಅಜಿತಃ= ಯಾರಿಂದಲೂ ಜಯಿಸಲ್ಪಡದವನು.

ಕೃಷ್ಣಃ= ಎಲ್ಲರನ್ನೂ ಆಕರ್ಷಿಸುವವನು. ಪೂರ್ಣಸುಖವುಳ್ಳವನು.

ದೃಢಃ= ಶಕ್ತನಾದವನು.

ಸಂಕರ್ಷಣಃ= ಸಂಹಾರಕಾಲದಲ್ಲಿ ಸಕಲಭೂತಗಳನ್ನೂ ತನ್ನೆಡೆಗೆ ಸೆಳೆದು ಕೊಳ್ಳುವವನು.

ಅಚ್ಯುತಃ= ಹಾನಿಯಿಲ್ಲದ ಗುಣ-ಕ್ರಿಯಾದಿಗಳನ್ನು ಹೊಂದಿದವನು.

ವರುಣಃ= ದೈತ್ಯರಿಗೆ ಅಮೃತವನ್ನು ಕೊಡದವನು. ದೇವತೆಗಳಿಗೆ ಅಮೃತವನ್ನು ಕೊಡುವವನು.

ವಾರುಣಃ= ನೀರಿಗೆ ಉತ್ಪಾದಕನಾದವನು.

ವೃಕ್ಷಃ= ದೈತ್ಯರನ್ನು ನಾಶಪಡಿಸುವವನು.

ಪುಷ್ಕರಾಕ್ಷಃ= ಭಕ್ತರನ್ನು ಪೋಷಿಸುವ ಕಣ್ಣುಳ್ಳವನು.

ಮಹಾಮನಾಃ= ಶ್ರೇಷ್ಠವಾದ ಮನಸ್ಸುಳ್ಳವನು.

ಭಗವಾನ್ ಭಗಹಾ ನಂದೀ ವನಮಾಲೀ ಹಲಾಯುಧಃ ।
ಆದಿತ್ಯೋ ಜ್ಯೋತಿರಾದಿತ್ಯಃ ಸಹಿಷ್ಣುರ್ಗತಿಸತ್ತಮಃ ॥೭೩॥

ಭಗವಾನ್= ಭಗ ಎನಿಸುವ ಸಮಗ್ರ ಪ್ರಭುತ್ವ, ಸಮಗ್ರ ಪರಾಕ್ರಮ, ಸಮಗ್ರ ಯಶಸ್ಸು, ಸಮಗ್ರ ಸಂಪತ್ತು , ಸಮಗ್ರ ಜ್ಞಾನ ಹಾಗೂ ಸಮಗ್ರ ವೈರಾಗ್ಯವನ್ನು ನಿತ್ಯವೂ ಪೂರ್ಣವಾಗಿ ಹೊಂದಿರುವವನು.

ಭಗಹಾ= ದೈತ್ಯರ ಭಾಗ್ಯವನ್ನು ನಾಶಪಡಿಸುವವನು. ಸೂರ್ಯ-ಚಂದ್ರರ ಸಮೀಪಕ್ಕೆ ಹೋಗುವ ರಾಹುವನ್ನು ನಾಶಪಡಿಸುವವನು.

ನಂದೀ= ಆನಂದರೂಪನಾದವನು.

ವನಮಾಲೀ= ಪ್ರಶಸ್ತವಾದ ವನಮಾಲೆಯನ್ನು ಸರ್ವದಾ ಧರಿಸಿರುವವನು.

ಹಲಾಯುಧಃ= ನೇಗಿಲನ್ನು ಆಯುಧವನ್ನಾಗಿ ಧರಿಸಿರುವವನು.

ಆದಿತ್ಯಃ= ಅನಾದಿಕಾಲದಿಂದಲೂ ಆನಂದ-ಜ್ಞಾನಗಳನ್ನು ಹೊಂದಿದವನು. ಭಕ್ಷಣಶೀಲರಾದ ದೈತ್ಯರನ್ನು ತ್ಯಜಿಸುವವನು.

ಜ್ಯೋತಿರಾದಿತ್ಯಃ= ಸೂರ್ಯ-ಅಗ್ನಿ-ನಕ್ಷತ್ರ ಮೊದಲಾದ ಪ್ರಕಾಶರೂಪವಾದ ಪದಾರ್ಥಗಳಲ್ಲಿ ಇರುವವನು.

ಸಹಿಷ್ಣುಃ= ಎಲ್ಲರನ್ನೂ ಸೋಲಿಸುವವನು.

ಗತಿಸತ್ತಮಃ= ಜ್ಞಾನದಿಂದ ನಿರ್ದುಷ್ಟರಾದವರಿಂದ ಬಯಸಲ್ಪಡುವವನು.

ಸುಧನ್ವಾ ಖಂಡಪರಶುರ್ದಾರುಣೋ ದ್ರವಿಣಪ್ರದಃ ।
ದಿವಃಸ್ಪೃಕ್ಸರ್ವದೃಗ್ವ್ಯಾಸೋ ವಾಚಸ್ಪತಿರಯೋನಿಜಃ ॥೭೪॥

ಸುಧನ್ವಾ= ಶೋಭನವಾದ ಶಾರ್ಙ್ಗಧನುಸ್ಸುಳ್ಳವನು.

ಖಂಡಪರಶುಃ= ಶತ್ರುಗಳನ್ನು ಖಂಡಿಸುವ ಪರಶು ಉಳ್ಳವನು.

ದಾರುಣಃ= ಜೀವಸ್ವರೂಪಾಚ್ಛಾದಕವಾದ ಅಜ್ಞಾನವನ್ನು ನಾಶಪಡಿಸುವವನು.

ದ್ರವಿಣಪ್ರದಃ= ಜ್ಞಾನರೂಪವಾದ ಮತ್ತು ಬಾಹ್ಯವಾದ ಧನವನ್ನು ಚೆನ್ನಾಗಿ ನೀಡುವವನು.

ದಿವಃಸ್ಪೃಕ್= ವೈಕುಂಠಾದಿ ಲೋಕಗಳಲ್ಲಿ ಇರುವವನು.

ಸರ್ವದೃಕ್= ಸರ್ವವೇದಗಳಿಂದ ಪ್ರತಿಪಾದ್ಯನಾದವನು. ಸರ್ವವೇದ ವ್ಯಾಖ್ಯಾತೃವಾದವನು.

ವ್ಯಾಸಃ= ವಿಶೇಷವಾಗಿ ಬದರಿಕಾಶ್ರಮದಲ್ಲಿ ವಾಸಿಸುವವನು. ವೇದರಾಶಿಯನ್ನು ವಿಭಜಿಸಿದವನು.

ವಾಚಸ್ಪತಿಃ= ವೇದವಾಙ್ಮಯಕ್ಕೆ ಒಡೆಯನಾದವನು.

ಅಯೋನಿಜಃ= ನಿತ್ಯವಾದ ವೇದಗಳಿಂದ ಅಭಿವ್ಯಕ್ತನಾಗುವವನು.

ತ್ರಿಸಾಮಾ ಸಾಮಗಃ ಸಾಮ ನಿರ್ವಾಣಂ ಭೇಷಜಂ ಭಿಷಕ್ ।
ಸಂನ್ಯಾಸಕೃಚ್ಛಮಃ ಶಾಂತೋ ನಿಷ್ಠಾ ಶಾಂತಿಃ ಪರಾಯಣಮ್ ॥೭೫॥

ತ್ರಿಸಾಮಾ= ನಿಧನ, ಉದ್ಗೀಥ ಮತ್ತು ಪ್ರತಿಹಾರಗಳೆಂಬ ಪ್ರಿಯವಾದ ಸಾಮಗಳನ್ನು ಹೊಂದಿದವನು.

ಸಾಮಗಃ= ಸಂಧಿಗಾಗಿ ಸಾಮವಚನಗಳಿಂದ ಕೌರವರ ಸಭೆಗೆ ಹೋದವನು.

ಸಾಮಃ= ಚೆನ್ನಾಗಿ ಗುಣಾದಿ ಸಂಬಂಧವುಳ್ಳವನು.

ನಿರ್ವಾಣಂ= ಪ್ರಾಕೃತ ಶರೀರದವನಾದವನಿಂದ ಭೇದಿಸಲಾರದೆ ಹಿಂದಿರುಗಿದ ಬಾಣವುಳ್ಳವನು.

ಭೇಷಜಂ= ಸಂಸಾರರೂಪವಾದ ವ್ಯಾಧಿಗೆ ಔಷಧನಾದವನು.

ಭಿಷಕ್= ದುರ್ಜನರನ್ನು ಭಯದಿಂದ ನಾಶವನ್ನು ಹೊಂದುವಂತೆ ಮಾಡುವವನು.

ಸಂನ್ಯಾಸಕೃತ್= ಚೆನ್ನಾಗಿ ದೋಷಗಳನ್ನು ದೂರದಲ್ಲಿಡುವವನು.

ಶಮಃ= ಶಮಗುಣವನ್ನು ಹೊಂದಿರುವವನು.

ಶಾಂತಃ= ವೇದೋಕ್ತವಾದ ಶತಗುಣದ ಆನಂದದ ತುದಿಯಲ್ಲಿ ಇರುವವನು. ನಿರವಧಿಕ ಆನಂದರೂಪೀ.

ನಿಷ್ಠಾ= ದೇವತೆಗಳಲ್ಲಿ ಚೆನ್ನಾಗಿ ಇರುವ ನಾರಾಯಣೀ ಮೂರ್ತಿಯುಳ್ಳವನು.

ಶಾಂತಿಃ= ಸುಖದ ಪರಾಕಾಷ್ಠೆಯಾದವನು.

ಪರಾಯಣಮ್ = ಮುಕ್ತರಿಗೆ ಆಶ್ರಯನಾದವನು.

ಶುಭಾಂಗಃ ಶಾಂತಿದಃ ಸ್ರಷ್ಟಾ ಕುಮುದಃ ಕುವಲೇಶಯಃ ।
ಗೋಹಿತೋ ಗೋಪತಿರ್ಗೋಪ್ತಾ ವೃಷಭಾಕ್ಷೋ ವೃಷಪ್ರಿಯಃ ॥೭೬॥

ಶುಭಾಂಗಃ= ಮಂಗಳಾತ್ಮಕವಾದ ಶರೀರವುಳ್ಳವನು.

ಶಾಂತಿದಃ= ಯೋಗ್ಯರಿಗೆ ತನ್ನ ವಿಷಯದಲ್ಲಿ ನಿಷ್ಠೆಯನ್ನು ನೀಡುವವನು.

ಸ್ರಷ್ಟಾ= ಪ್ರಕೃತಿಯಿಂದ ಜಡಗಳನ್ನು ನಿರ್ಮಿಸುವವನು.

ಕುಮುದಃ= ಭೂಮಿಯಲ್ಲಿಯೂ ಪೂರ್ಣಸಂತೋಷದಿಂದ ಇರುವವನು.

ಕುವಲೇಶಯಃ= ಭೂಮಿಯ ಬಲಕ್ಕಾಗಿ ಶ್ವೇತದ್ವೀಪದಲ್ಲಿ ಪವಡಿಸಿರುವವನು. ಜೀವರ ಹೃದಯಗುಹೆಯಲ್ಲಿ ವಾಸಿಸುವವನು.

ಗೋಹಿತಃ= ಭೂಮಿಗೆ ಹಿತಕಾರಿಯಾಗಿರುವವನು.

ಗೋಪತಿಃ= ಕಿರಣಗಳಿಗೆ ಅಧಿಪತಿಯಾದವನು.

ಗೋಪ್ತಾ= ತನ್ನನ್ನು ಆಚ್ಛಾದಿಸಿಕೊಳ್ಳುವವನು. ವೇದಗಳಲ್ಲಿ ನಿಂತು ರಕ್ಷಿಸುವವನು.

ವೃಷಭಾಕ್ಷಃ= ಎತ್ತುಗಳಲ್ಲಿ ಎತ್ತಿನ ರೂಪದಿಂದ ವ್ಯಾಪಿಸಿರುವವನು.

ವೃಷಪ್ರಿಯಃ= ಧರ್ಮಪ್ರಿಯನಾದವನು.

ಅನಿವರ್ತೀ ನಿವೃತ್ತಾತ್ಮಾ ಸಂಕ್ಷೇಪ್ತಾ ಕ್ಷೇಮಕೃಚ್ಛಿವಃ ।
ಶ್ರೀವತ್ಸವಕ್ಷಾಃ ಶ್ರೀವಾಸಃ ಶ್ರೀಪತಿಃ ಶ್ರೀಮತಾಂವರಃ ॥೭೭॥

ಅನಿವರ್ತೀ= ಯುದ್ಧದಿಂದ ಹಿಂದಿರುಗದವನು.

ನಿವೃತ್ತಾತ್ಮಾ= ದುರ್ಜನರ ಹೃದಯದಿಂದ ಹಿಂದೆ ಬಂದವನು.

ಸಂಕ್ಷೇಪ್ತಾ= ರಾಮಾವತಾರದಲ್ಲಿ ದುಂದುಭಿಯ ದೇಹವನ್ನು ಪಾದಾಂಗುಷ್ಠದಿಂದ ಸೀಳಿದವನು. ಕೃಷ್ಣಾವತಾರದಲ್ಲಿ ಗೋಪ-ಗೋಪಿಯರ ಪ್ರೀತಿಗಾಗಿ ಬಾಹುಗಳನ್ನು ಎತ್ತಿದವನು.

ಕ್ಷೇಮಕೃಚ್ಛಿವಃ= ಭಕ್ತರಿಗೆ ಕ್ಷೇಮವನ್ನುಂಟು ಮಾಡುವ ಮಂಗಳಸ್ವರೂಪೀ.

ಶ್ರೀವತ್ಸವಕ್ಷಾಃ= ಶ್ರೀವತ್ಸಕ್ಕೆ ಅಭಿಮಾನಿನಿಯಾದ ಲಕ್ಷ್ಮಿಯನ್ನು ಎದೆಯಲ್ಲಿ ಹೊಂದಿದವನು.

ಶ್ರೀವಾಸಃ= ಲಕ್ಷ್ಮೀದೇವಿಗೆ ಆಶ್ರಯನಾದವನು.

ಶ್ರೀಪತಿಃ= ಲಕ್ಷ್ಮಿಗೆ ವಲ್ಲಭನಾದವನು.

ಶ್ರೀಮತಾಂವರಃ= ಸಂಪತ್ತಿನಿಂದ ಕೂಡಿರುವವರಲ್ಲಿ ಶ್ರೇಷ್ಠನಾದವನು.

ಶ್ರೀದಃ ಶ್ರೀಶಃ ಶ್ರೀನಿವಾಸಃ ಶ್ರೀನಿಧಿಃ ಶ್ರೀವಿಭಾವನಃ ।
ಶ್ರೀಧರಃ ಶ್ರೀಕರಃ ಶ್ರೇಯಃ ಶ್ರೀಮಾಲ್ಲೋಕತ್ರಯಾಶ್ರಯಃ ॥೭೮॥

ಶ್ರೀದಃ= ಭಕ್ತರಿಗೆ ಲಕ್ಷ್ಮಿಯನ್ನು ಅಭೀಷ್ಟಪ್ರದನಾಗಿ ನೀಡುವವನು.

ಶ್ರೀಶಃ= ಲಕ್ಷ್ಮೀದೇವಿಗೆ ಸುಖವನ್ನು ಅನುಗ್ರಹಿಸುವವನು. ಭಾರತೀದೇವಿಗೆ ವಾಯುದೇವನನ್ನು ಪತಿಯಾಗಿ ಅನುಗ್ರಹಿಸಿರುವವನು.

ಶ್ರೀನಿವಾಸಃ= ತನ್ನ ದೇಹದ ಗಂಧದಿಂದ ಲಕ್ಷ್ಮಿಯನ್ನು ಪರಿಮಳ ಯುಕ್ತಳನ್ನಾಗಿ ಮಾಡುವವನು.

ಶ್ರೀನಿಧಿಃ= ಲಕ್ಷ್ಮೀದೇವಿ ಮತ್ತು ಅವಳಿಂದ ಅಭಿಮನ್ಯವಾದ ಸಂಪತ್ತಿಗೆ ಚೆನ್ನಾದ ಆಶ್ರಯನಾದವನು.

ಶ್ರೀವಿಭಾವನಃ= ಲಕ್ಷ್ಮೀದೇವಿಯು ಉಳಿದ ಜೀವರಿಗಿಂತಲೂ ವಿಲಕ್ಷಣಳಾಗಿರುವಂತೆ, ವಿಶಿಷ್ಟಳಾಗಿರುವಂತೆ ಮತ್ತು ವಿವಿಧ ರೂಪಗಳನ್ನು ಧರಿಸಿರುವಂತೆ ಪ್ರೇರಿಸುವವನು.

ಶ್ರೀಧರಃ= ಲಕ್ಷ್ಮಿಯ ಶ್ರೀರೂಪವನ್ನು ತೊಡೆಯ ಮೇಲೆ ಧರಿಸಿರುವವನು.

ಶ್ರೀಕರಃ= ಸಂಪತ್ತನ್ನು ಉಂಟುಮಾಡುವವನು.

ಶ್ರೇಯಃ= ಅತಿಶಯವಾಗಿ ಪ್ರಶಸ್ತನಾದವನು.

ಶ್ರೀಮಾನ್= ಪ್ರಶಸ್ತವಾದ ಸಂಪತ್ತು-ಕಾಂತಿಗಳನ್ನು ಸರ್ವದಾ ಹೊಂದಿರುವವನು.

ಲೋಕತ್ರಯಾಶ್ರಯಃ= ಭೂಲೋಕ, ಅಂತರಿಕ್ಷ ಮತ್ತು ದೇವಲೋಕಗಳಿಗೆ ಆಶ್ರಯನಾಗಿರುವವನು.

ಸ್ವಕ್ಷಃ ಸ್ವಂಗಃ ಶತಾನಂದೋ ನಂದಿರ್ಜ್ಯೋತಿರ್ಗಣೇಶ್ವರಃ ।
ವಿಜಿತಾತ್ಮಾ ವಿಧೇಯಾತ್ಮಾ ಸತ್ಕೀರ್ತಿಶ್ಛಿನ್ನಸಂಶಯಃ ॥೭೯॥

ಸ್ವಕ್ಷಃ= ಶೋಭನವಾದ ಕಣ್ಣುಳ್ಳವನು.

ಸ್ವಂಗಃ= ಶೋಭನವಾದ, ಸುಖಾತ್ಮಕವಾದ ಅಂಗಗಳುಳ್ಳವನು.

ಶತಾನಂದಃ= ಅಪರಿಮಿತ ಆನಂದರೂಪನಾದವನು.

ನಂದಿಃ= ಜ್ಞಾನರೂಪವಾದ ನೇತ್ರವನ್ನು ಕೊಡುವವನು.

ಜ್ಯೋತಿರ್ಗಣೇಶ್ವರಃ= ಪ್ರಕಾಶಮಾನವಾದ ಪದಾರ್ಥಗಳ ಸಮುದಾಯಕ್ಕೆ ಒಡೆಯನಾದವನು.

ವಿಜಿತಾತ್ಮಾ= ಭಕ್ತರಿಂದ ವಿಜಿತವಾದ ಸ್ವರೂಪವುಳ್ಳವನು.

ವಿಧೇಯಾತ್ಮಾ= ಜ್ಞಾನಿಗಳು ತಮ್ಮ ಹೃದಯದಲ್ಲಿ ಧರಿಸಲು ಯೋಗ್ಯವಾದ ಸ್ವರೂಪವುಳ್ಳವನು.

ಅವಿಧೇಯಾತ್ಮಾ= ಯಾರಿಗೂ ವಿಧೇಯವಾಗದ ಸ್ವರೂಪವುಳ್ಳವನು.

ಸತ್ಕೀರ್ತಿಃ= ಉತ್ತಮವಾದ, ನಿರ್ದುಷ್ಟವಾದ ಮತ್ತು ಮಾನ್ಯವಾದ ಕೀರ್ತಿಯುಳ್ಳವನು.

ಛಿನ್ನಸಂಶಯಃ= ಯಾವ ವಿಷಯದಲ್ಲಿಯೂ ಸಂಶಯವಿಲ್ಲದವನು.

ಉದೀರ್ಣಃ ಸರ್ವತಶ್ಚಕ್ಷುರನೀಶಃ ಶಾಶ್ವತಃ ಸ್ಥಿರಃ ।
ಭೂಶಯೋ ಭೂಷಣೋ ಭೂತಿರ್ವಿಶೋಕಃ ಶೋಕನಾಶನಃ ॥೮೦॥

ಉದೀರ್ಣಃ= ಉತ್ಕೃಷ್ಟನಾದವನು.

ಸರ್ವತಶ್ಚಕ್ಷುಃ= ಎಲ್ಲೆಡೆ ಕಣ್ಣುಳ್ಳವನು. ಅನಂತ ಕಣ್ಣುಳ್ಳವನು.

ಅನೀಶಃ= ತನಗೆ ಇನ್ನೊಬ್ಬ ಒಡೆಯನಿಲ್ಲದವನು.

ಶಾಶ್ವತಃ ಸ್ಥಿರಃ (ಶಾಶ್ವತ ಸ್ಥಿರಃ) = ಶಾಶ್ವತವೆನಿಸುವ ಪದಾರ್ಥಗಳು ನಿರ್ವಿಕಾರವಿರುವಂತೆ ಮಾಡುವವನು.

ಭೂಶಯಃ= ಭೂಮಿಯಲ್ಲಿ ಪವಡಿಸಿದವನು.

ಭೂಷಣಃ= ಪ್ರಪಂಚಕ್ಕೆ ಭೂಷಣಪ್ರಾಯನಾದವನು.

ಭೂತಿಃ= ಸಂಪತ್‌ಸ್ವರೂಪನಾದವನು.

ವಿಶೋಕಃ= ಶೋಕದೂರನಾದವನು.

ಶೋಕನಾಶನಃ= ಭಕ್ತರ ಶೋಕವನ್ನು ಪರಿಹರಿಸುವವನು.

ಅರ್ಚಿಷ್ಮಾನರ್ಚಿತಃ ಕುಂಭೋ ವಿಶುದ್ಧಾತ್ಮಾ ವಿಶೋಧನಃ ।
ಅನಿರುದ್ಧೋऽಪ್ರತಿರಥಃ ಪ್ರದ್ಯುಮ್ನೋऽಮಿತವಿಕ್ರಮಃ ॥೮೧॥

ಅರ್ಚಿಷ್ಮಾನ್= ಪ್ರಶಸ್ತವಾದ ಕಿರಣಗಳನ್ನು ನಿತ್ಯವೂ ಹೊಂದಿರುವವನು.

ಅರ್ಚಿತಃ= ಸಕಲರಿಂದಲೂ ಸರ್ವದಾ ಪೂಜಿತನಾದವನು.

ಕುಂಭಃ= ಭೂಮಿಯನ್ನು ಪ್ರಕಾಶಿಸುವವನು.

ವಿಶುದ್ಧಾತ್ಮಾ= ನಿರ್ಮಲವಾದ ಸ್ವರೂಪವುಳ್ಳವನು. ವಿಶುದ್ಧರಾದವರಲ್ಲಿ ವ್ಯಾಪಿಸಿರುವವನು.

ವಿಶೋಧನಃ= ವಿಶೇಷವಾಗಿ ಶುದ್ಧಿಎನಿಸುವವನು.

ಅನಿರುದ್ಧಃ= ಮುಖ್ಯಪ್ರಾಣರ ಭಕ್ತರಿಂದ ಒಲಿಸಿಕೊಳ್ಳಲ್ಪಡುವವನು.

ಅಪ್ರತಿರಥಃ= ಎದುರಾಳಿ ಇಲ್ಲದವನು.

ಪ್ರದ್ಯುಮ್ನಃ= ಪ್ರಕೃಷ್ಟವಾದ ಪ್ರಕಾಶರೂಪನಾದವನು.

ಅಮಿತವಿಕ್ರಮಃ= ವಾಯುದೇವರೇ ಮೊದಲಾದವರಿಗೆ ಸಾಮಾನ್ಯರಿಂದ ತಿಳಿಯಲು ಅಶಕ್ಯವಾದ ಪರಾಕ್ರಮವನ್ನು ಅನುಗ್ರಹಿಸಿರುವವನು.

ಕಾಲನೇಮಿನಿಹಾ ವೀರಃ ಶೂರಃ ಶೌರಿರ್ಜನೇಶ್ವರಃ ।
ತ್ರಿಲೋಕಾತ್ಮಾ ತ್ರಿಲೋಕೇಶಃ ಕೇಶವಃ ಕೇಶಿಹಾ ಹರಿಃ ॥೮೨॥

ಕಾಲನೇಮಿನಿಹಾ= ಕಾಲನೇಮಿ ಅಸುರನನ್ನು ಚೆನ್ನಾಗಿ ಸಂಹರಿಸಿದವನು.

ವೀರಃ= ವಿಶೇಷವಾದ ಜ್ಞಾನ, ಇಚ್ಛೆ ಮತ್ತು ಸುಖಗಳನ್ನು ಹೊಂದಿದವನು.

ಶೌರಿಃ= ಸುಖಸ್ವಭಾವನಾದ ತನ್ನಲ್ಲೇ ಅತಿಶಯವಾಗಿ ಕ್ರೀಡಿಸುವವನು.

ಶೂರಜನೇಶ್ವರಃ= ಪರಾಕ್ರಮಿಗಳಾದ ಜನರಿಗೆ ಒಡೆಯನಾದವನು.

ತ್ರಿಲೋಕಾತ್ಮಾ= ಭೂ, ಭುವಃ, ಸ್ವಃ- ಎಂಬ ಮೂರು ಲೋಕಗಳಿಗೆ ಒಡೆಯನಾದವನು.

ತ್ರಿಲೋಕೇಶಃ= ಸಾತ್ವಿಕ, ರಾಜಸ, ತಾಮಸರೆಂಬ ಮೂರುವಿಧ ಜೀವರಿಗೂ ಒಡೆಯನಾದವನು.

ಕೇಶವಃ= ಕೃಷ್ಣ, ಕೇಶರೂಪದಿಂದ ಜಗತ್ತಿನಲ್ಲಿರುವವನು. ಕೇಶದಿಂದ ಭಕ್ತರಿಗೆ ಅನುಗ್ರಹವನ್ನು ಮಾಡುವವನು.

ಕೇಶಿಹಾ= ಕೇಶಿ ಎಂಬ ವಾಯುದೇವರ ರೂಪದಲ್ಲಿ ರಕ್ಷಕನಾಗಿ ಪ್ರವೇಶಿಸುವವನು.

ಹರಿಃ= ದೈತ್ಯರನ್ನು ಸಂಹಾರ ಮಾಡುವವನು.

ಕಾಮದೇವಃ ಕಾಮಪಾಲಃ ಕಾಮೀ ಕಾಂತಃ ಕೃತಾಗಮಃ ।
ಅನಿರ್ದೇಶ್ಯವಪುರ್ವಿಷ್ಣುರ್ವೀರೋऽನಂತೋ ಧನಂಜಯಃ ॥೮೩॥

ಕಾಮದೇವಃ= ಮನ್ಮಥನನ್ನು ಜಯಿಸಿರುವವನು.

ಕಾಮಪಾಲಃ= ಇಚ್ಛೆಗಳನ್ನು ಪಾಲಿಸುವವನು.

ಕಾಮೀ= ಪ್ರಶಂಸನೀಯವಾದ ಇಚ್ಛೆಯುಳ್ಳವನು.

ಕಾಂತಃ= ದೈತ್ಯಸುಖವನ್ನು ನಾಶಮಾಡುವವನು.

ಕೃತಾಗಮಃ= ವೇದಗಳನ್ನು ನಿತ್ಯವೂ ಧ್ಯಾನಿಸುವವನು.

ಅನಿರ್ದೇಶ್ಯ ವಪುಃ= ಯಾರಿಂದಲೂ ಆಜ್ಞಾಪಿಸಿಕೊಳ್ಳಲು ಅರ್ಹನಾಗದವನು.

ವಿಷ್ಣುಃ= ನದಿಗಳ ಜಲವು ಪ್ರವಹಿಸುವಂತೆ ಮಾಡುವವನು.

ವೀರಃ= ಪಕ್ಷಿಯಾದ ಗರುಡನಲ್ಲಿ ಸಂತೋಷದಿಂದ ಇರುವವನು. ವಿಶೇಷವಾಗಿ ಪ್ರಕಾಶಿಸುವವನು.

ಅನಂತಃ= ದೇಶ-ಕಾಲ-ಗುಣಗಳ ಪರಿಧಿ ಇಲ್ಲದವನು.

ಧನಂಜಯಃ= ಎಲ್ಲ ರೀತಿಯ ಸಂಪತ್ತುಗಳನ್ನು ಅಧೀನದಲ್ಲಿ ಇಟ್ಟುಕೊಂಡವನು.

ಬ್ರಹ್ಮಣ್ಯೋ ಬ್ರಹ್ಮಕೃದ್ ಬ್ರಹ್ಮಾ ಬ್ರಹ್ಮ ಬ್ರಹ್ಮವಿವರ್ಧನಃ ।
ಬ್ರಹ್ಮವಿದ್ ಬ್ರಾಹ್ಮಣೋ ಬ್ರಹ್ಮೀ ಬ್ರಹ್ಮಜ್ಞೋ ಬ್ರಾಹ್ಮಣಪ್ರಿಯಃ ॥೮೪॥

ಬ್ರಹ್ಮಣ್ಯಃ= ಬ್ರಾಹ್ಮಣ ವತ್ಸಲನು.

ಬ್ರಹ್ಮಕೃದ್= ಚತುರ್ಮುಖ ಬ್ರಹ್ಮನನ್ನು ಸೃಷ್ಟಿಸುವವನು.

ಬ್ರಹ್ಮಾ= ಗುಣಪರಿಪೂರ್ಣನು.

ಬ್ರಹ್ಮ= ಗುಣಪೂರ್ಣಳಾದ ಲಕ್ಷ್ಮ್ಯಯೇ ಪತಿಯಾಗಿ ಉಳ್ಳವನು.

ಬ್ರಹ್ಮವಿವರ್ಧನಃ= ವೇದವನ್ನು ಚೆನ್ನಾಗಿ ಪ್ರಚಾರ ಮಾಡುವವನು.

ಬ್ರಹ್ಮವಿದ್= ವೇದಗಳನ್ನು ಚೆನ್ನಾಗಿ ಅರಿತವನು.

ಬ್ರಾಹ್ಮಣಃ= ವೇದಪಾಠಕಾರನಾದವನು.

ಬ್ರಹ್ಮೀ= ಬ್ರಾಹ್ಮಣಸ್ವಾಮಿ. ಚತುರ್ಮುಖನನ್ನು ಉದರದಲ್ಲಿ ಧರಿಸಿದವನು. ಅನಂತ ವೇದರಾಶಿಯನ್ನು ಹೊಂದಿದವನು.

ಬ್ರಹ್ಮಜ್ಞಃ= ವೇದಗಳನ್ನು ತಿಳಿಸಿಕೊಡುವವನು. ಬ್ರಹ್ಮನಿಂದ ತಿಳಿಯಲ್ಪಡುವವನು.

ಬ್ರಾಹ್ಮಣಪ್ರಿಯಃ= ಬ್ರಹ್ಮ-ವಾಯುಗಳಿಗೆ ಪ್ರಿಯನಾದವನು. ಬ್ರಹ್ಮಜ್ಞಾನಿಗಳಿಗೆ ಪ್ರಿಯನಾದವನು.

ಮಹಾಕ್ರಮೋ ಮಹಾಕರ್ಮಾ ಮಹಾತೇಜಾ ಮಹೋರಗಃ ।
ಮಹಾಕ್ರತುರ್ಮಹಾಯಜ್ವಾ ಮಹಾಯಜ್ಞೋ ಮಹಾಹವಿಃ ॥೮೫॥

ಮಹಾಕ್ರಮಃ= ಜೀವರಲ್ಲಿ ಶ್ರೇಷ್ಠವಾದ ತಾರತಮ್ಯವಿರುವಂತೆ ಮಾಡುವವನು.

ಮಹಾಕರ್ಮಾ= ಶ್ರೇಷ್ಠ ಕ್ರಿಯೆಗಳುಳ್ಳವನು.

ಮಹಾತೇಜಾಃ= ಶ್ರೇಷ್ಠಳಾದ ಲಕ್ಷ್ಮೀದೇವಿಯ ಜನನಕ್ಕೆ ಕಾರಣನಾದವನು. ಉತ್ತಮವಾದ ತೇಜಸ್ಸನ್ನು ಹೊಂದಿದವನು.

ಮಹೋರಗಃ= ನಾಗರಾಜನನ್ನು ಹಾಸಿಗೆಯಾಗಿ ಹೊಂದಿದವನು. ಮಹಾತ್ಮರ ಹೃದಯದಲ್ಲಿ ನೆಲೆಸಿರುವವನು.

ಮಹಾಕ್ರತುಃ= ಅಗ್ನಿಷ್ಟೋಮ ಮೊದಲಾದ ಶ್ರೇಷ್ಠ ಯಜ್ಞಗಳಿಗೆ ಉತ್ಪಾದಕನಾದವನು.

ಮಹಾಯಜ್ವಾ= ಶ್ರೇಷ್ಠನಾದ ಯಜ್ಞಪ್ರವರ್ತಕನಾದವನು.

ಮಹಾಯಜ್ಞಃ= ಶ್ರೇಷ್ಠವಾದ ಯಜ್ಞಗಳನ್ನು ನಡೆಸುವವನು.

ಮಹಾಹವಿಃ= ಶ್ರೇಷ್ಠನಾದವನು ಮತ್ತು ಸಂಹಾರಕಾಲದಲ್ಲಿ ಸರ್ವ ಜಗತ್ತನ್ನೂ ತನ್ನಲ್ಲಿ ಹೋಮಿಸಿಕೊಳ್ಳುವವನು.

ಸ್ತವ್ಯಃ ಸ್ತವಪ್ರಿಯಃ ಸ್ತೋತ್ರಂ ಸ್ತುತಿಃ ಸ್ತೋತಾ ರಣಪ್ರಿಯಃ ।
ಪೂರ್ಣಃ ಪೂರಯಿತಾ ಪುಣ್ಯಃ ಪುಣ್ಯಕೀರ್ತಿರನಾಮಯಃ ॥೮೬॥

ಸ್ತವ್ಯಃ= ಸ್ತುತಿಸಲು ಯೋಗ್ಯನಾದವನು.

ಸ್ತವಪ್ರಿಯಃ= ತನ್ನ ಸ್ತುತಿ ಮಾತ್ರದಿಂದ ಪ್ರೀತಿಯನ್ನು ಹೊಂದುವವನು.

ಸ್ತೋತ್ರಮ್= ಸ್ತೋತ್ರ ಮಾಡುವವನಲ್ಲಿ ಸಂತೋಷವನ್ನು ಹೊಂದುವವನು.

ಸ್ತುತಿಃ= ವೇದಾದಿ ಸಚ್ಛಾಸ್ತ್ರಗಳಿಂದ ಸ್ತುತಿಸಲ್ಪಡುವವನು.

ಸ್ತೋತಾ= ಸ್ತುತಿರೂಪವಾದ ಇತಿಹಾಸ-ಪುರಾಣಗಳನ್ನು ರಚಿಸುವವನು.

ರಣಪ್ರಿಯಃ= ಭಕ್ತರ ಸ್ತುತಿರೂಪವಾದ ಶಬ್ದಗಳಲ್ಲಿ ಪ್ರೀತಿಯುಳ್ಳವನು.

ಪೂರ್ಣಃ= ಗುಣಾದಿ ವಿಷಯಗಳಲ್ಲಿ ಪೂರ್ಣನಾಗಿರುವವನು.

ಪೂರಯಿತಾ= ಸಾಧಕರನ್ನು ಭಕ್ತಿ-ಜ್ಞಾನಾದಿಗಳಿಂದ ತುಂಬಿಸುವವನು.

ಪುಣ್ಯಃ= ತನ್ನ ಪ್ರಭೆಯಿಂದ ಸಕಲ ಪುರುಷರನ್ನೂ ಧಿಕ್ಕರಿಸುವವನು.

ಪುಣ್ಯಕೀರ್ತಿಃ= ಪವಿತ್ರವಾದ ಕೀರ್ತಿಯುಳ್ಳವನು.

ಅನಾಮಯಃ= ಸಂಸಾರವೆಂಬ ಮಹಾವ್ಯಾಧಿಗೆ ವಿರೋಧಿಯಾಗಿರುವವನು.

ಮನೋಜವಸ್ತೀರ್ಥಕರೋ ವಸುರೇತಾ ವಸುಪ್ರದಃ ।
ವಸುಪ್ರದೋ ವಾಸುದೇವೋ ವಸುರ್ವಸುಮನಾ ಹರಿಃ(ಹವಿಃ) ॥೮೭॥

ಮನೋಜವಃ= ಮನಸ್ಸಿನ ವೇಗದಂತೆ ವೇಗವುಳ್ಳವನು.

ತೀರ್ಥಕರಃ= ಗಂಗಾದಿ ತೀರ್ಥಗಳನ್ನು ನಿರ್ಮಿಸಿರುವವನು.

ವಸುರೇತಾಃ= ಸುವರ್ಣಮಯವಾದ ಅಥವಾ ಎಲ್ಲರ ವಾಸಕ್ಕೆ ಅರ್ಹವಾದ ಬ್ರಹ್ಮಾಂಡವನ್ನು ರೇತಸ್ಸಾಗಿ ಹೊಂದಿರುವವನು.

ವಸುಪ್ರದಃ= ಬಾಹ್ಯಸಂಪತ್ತನ್ನು, ಆಂತರಿಕ ಸಂಪತ್ತನ್ನು ಚೆನ್ನಾಗಿ ನೀಡುವವನು.

ವಸುಪ್ರದಃ= ದೇವತೆಗಳನ್ನು ಚೆನ್ನಾಗಿ ರಕ್ಷಿಸುವವನು.

ವಾಸುದೇವಃ= ಎಲ್ಲರನ್ನೂ ತನ್ನಲ್ಲಿ ವಾಸಿಸಿಕೊಳ್ಳುವವನು ಮತ್ತು ಕ್ರೀಡಾದಿ ಗುಣವುಳ್ಳವನು.

ವಸುಃ= ತನ್ನ ಗುಣಗಳನ್ನು ಆಚ್ಛಾದಿಸಿಕೊಳ್ಳುವವನು.

ವಸುಮನಾಃ= ವಸುರೂಪನಾದ ಭೀಷ್ಮನಿಗೆ ಜ್ಞಾನವನ್ನು ನೀಡಿದವನು.

ಹವಿಃ (ಹರಿಃ)= ಹದಿನಾರು ಸಾವಿರ ಕನ್ಯೆಯರನ್ನು ಕರೆದು ತಂದವನು. ಕೌರವರ ಸೇನೆಯ ಆಯುಸ್ಸನ್ನು ದೃಷ್ಟಿಯಿಂದಲೇ ಹರಣಮಾಡಿದವನು.

ಸದ್ಗತಿಃ ಸತ್ಕೃತಿಃ ಸತ್ತಾ ಸದ್ಭೂತಿಃ ಸತ್ಪರಾಯಣಃ ।
ಶೂರಸೇನೋ ಯದುಶ್ರೇಷ್ಠಃ ಸನ್ನಿವಾಸಃ ಸುಯಾಮುನಃ ॥೮೮॥

ಸದ್ಗತಿಃ= ಸಜ್ಜನರಿಗೆ ಆಶ್ರಯನಾದವನು. ಒಳ್ಳೆಯ ಆಶ್ರಯನಾದವನು.

ಸತ್ಕೃತಿಃ= ಸಮೀಚೀನವಾದ ಕರ್ತೃತ್ವವುಳ್ಳವನು.

ಸತ್ತಾ= ನಿರ್ದುಃಖಾನಂದ ಸ್ವರೂಪನಾದವನು.

ಸದ್ಭೂತಿಃ= ಸಜ್ಜನರ ಐಶ್ವರ್ಯಕ್ಕೆ ಕಾರಣನಾದವನು.

ಸತ್ಪರಾಯಣಃ= ಸಜ್ಜನರಿಗೆ ಶ್ರೇಷ್ಠನಾದ ಆಶ್ರಯನಾದವನು.

ಶೂರಸೇನಃ= ಶೂರರಿಗೆ ಶ್ರೇಷ್ಠನಾದ ಒಡೆಯ.

ಯದುಶ್ರೇಷ್ಠಃ= ಯದುವಂಶದಲ್ಲಿ ಶ್ರೇಷ್ಠನಾದವನು. ಜ್ಞಾನವನ್ನು ನೀಡುವ, ಸಂರಕ್ಷಿಸುವ ಗುರುಗಳಲ್ಲಿ ಶ್ರೇಷ್ಠನಾದವನು.

ಸನ್ನಿವಾಸಃ= ಸಜ್ಜನರಿಗೆ ಆವಾಸಸ್ಥಾನನಾದವನು.

ಸುಯಾಮುನಃ= ವಿಷವನ್ನು ಪರಿಹರಿಸಿ ಯಮುನೆಯನ್ನು ಶುದ್ಧಗೊಳಿಸಿದವನು.

ಭೂತಾವಾಸೋ ವಾಸುದೇವೋ ಸರ್ವಾಸುನಿಲಯೋನಲಃ ।
ದರ್ಪಹಾ ದರ್ಪದೋ ದೃಪ್ತೋ ದುರ್ಧರೋಽಥಾಪರಾಜಿತಃ ॥೮೯॥

ಭೂತಾವಾಸಃ= ಸಕಲ ಭೂತಗಳಿಗೂ ಆವಾಸಸ್ಥಾನನಾದವನು.

ವಾಸುದೇವಃ= ಮುಕ್ತಿಯೋಗ್ಯರಿಗೆ ತನ್ನ ಸ್ವರೂಪವನ್ನು ತಿಳಿಸುವವನು. ಅವರನ್ನು ಮುಕ್ತರನ್ನಾಗಿ ಮಾಡುವವನು. ಮುಕ್ತಿಯಲ್ಲಿ ಅವರಿಗೆ ಆನಂದವನ್ನು ಕೊಡುವವನು.

ಸರ್ವಾಸುನಿಲಃ= ಎಲ್ಲರ ಪ್ರಾಣಗಳಿಗೆ ಆಧಾರನಾದವನು.

ಅನಲಃ= ಮುಖ್ಯಪ್ರಾಣನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಲಾಲಿಸುವವನು.

ದರ್ಪಹಾ= ಗರ್ವವನ್ನು ಅಡಗಿಸುವವನು.

ದರ್ಪದಃ= ಅಯೋಗ್ಯರಿಗೆ ಅಹಂಕಾರವನ್ನು ಕೊಡುವವನು.

ದೃಪ್ತಃ= ಸ್ವರೂಪಾನಂದದಿಂದ ಪರಿಪೂರ್ಣನಾದವನು.

ದುರ್ಧರಃ= ಜೀವಾತ್ಮರು ದುಃಖವನ್ನು ಧರಿಸಿಕೊಳ್ಳುವಂತೆ ಮಾಡುವವನು.

ಅಪರಾಜಿತಃ= ಯಾರಿಂದಲೂ ಪರಾಜಯವನ್ನು ಹೊಂದದವನು.

ವಿಶ್ವಮೂರ್ತಿರ್ಮಹಾಮೂರ್ತಿರ್ದೀಪ್ತಮೂರ್ತಿರಮೂರ್ತಿಮಾನ್ ।
ಅನೇಕಮೂರ್ತಿರವ್ಯಕ್ತಃ ಶತಮೂರ್ತಿಃ ಶತಾನನಃ ॥೯೦॥

ವಿಶ್ವಮೂರ್ತಿಃ= ದೇಶ-ಕಾಲ-ಗುಣಗಳಿಂದ ಪರಿಪೂರ್ಣವಾದ ಆಕಾರವನ್ನು ಹೊಂದಿದವನು.

ಮಹಾಮೂರ್ತಿಃ= ಉತ್ತಮವಾದ ದೇಹವುಳ್ಳವನು.

ದೀಪ್ತಮೂರ್ತಿಃ= ಚೆನ್ನಾಗಿ ಪ್ರಕಾಶಿಸುವ ದೇಹವುಳ್ಳವನು.

ಅಮೂರ್ತಿಮಾನ್= ಪ್ರಾಕೃತ ದೇಹವಿಲ್ಲದವನು.

ಅನೇಕಮೂರ್ತಿಃ= ಅನಂತ ದೇಹಗಳುಳ್ಳವನು.

ಅವ್ಯಕ್ತಃ= ತನ್ನ ಅನುಗ್ರಹದ ಹೊರತಾಗಿ ಕಾಣಿಸಿಕೊಳ್ಳದವನು.

ಶತಮೂರ್ತಿಃ= ನಾರಾಯಣಾದಿ ಪುರಾತನಾಂತವಾದ ನೂರು ರೂಪಗಳನ್ನು ಧರಿಸಿದವನು.

ಶತಾನನಃ= ನೂರಾರು ಮುಖವುಳ್ಳವನು.

ಏಕೋ ನೈಕಃ ಸವಃ ಕಃ ಕಿಂ ಯತ್ತತ್ಪದಮನುತ್ತಮಮ್ ।
ಲೋಕಬಂಧುರ್ಲೋಕನಾಥೋ ಮಾಧವೋ ಭಕ್ತವತ್ಸಲಃ ॥೯೧॥

ಏಕಃ= ಪ್ರಧಾನನಾದವನು.

ನೈಕಃ= ಮುಕ್ತಾಮುಕ್ತರ ಜೊತೆಯಲ್ಲಿ ಅಭಿನ್ನನಾಗದವನು.

ಸವಃ= ಜಗತ್ ಪ್ರಸವಕರ್ತಾ.

ಕಃ= ಸುಖರೂಪನಾದವನು. ಶ್ರುತಿ-ಸ್ಮೃತಿಯಲ್ಲಿ ವಿಚಾರಿಸಲ್ಪಡುವವನು.

ಕಿಮ್= ಅತಿಶಯ ಸುಖರೂಪನಾದವನು.

ಯತ್= ಜ್ಞಾನರೂಪೀ.

ತತ್= ವ್ಯಾಪ್ತನಾದವನು.

ಪದಮ್= ಮುಕ್ತರಿಂದ ಪ್ರಾಪ್ಯನಾದವನು.

ಅನುತ್ತಮಮ್= ಸರ್ವೋತ್ತಮನಾದವನು.

ಲೋಕಬಂಧುಃ= ಸಕಲ ಜನರಿಗೂ ಬಂಧುವಾಗಿರುವವನು.

ಲೋಕನಾಥಃ= ಲೋಕಗಳಿಗೆ ಒಡೆಯ. ಜೀವರಿಗೆ ಒಡೆಯ.

ಮಾಧವಃ= ಲಕ್ಷ್ಮೀಪತಿ.

ಭಕ್ತವತ್ಸಲಃ= ಭಕ್ತರಲ್ಲಿ ವಾತ್ಸಲ್ಯವುಳ್ಳವನು.

ಸುವರ್ಣವರ್ಣೋ ಹೇಮಾಂಗೋ ವರಾಂಗಶ್ಚಂದನಾಂಗದೀ ।
ವೀರಹಾ ವಿಷಮಃ ಶೂನ್ಯೋ ಘೃತಾಶೀರಚಲಶ್ಚಲಃ ॥೯೨॥

ಸುವರ್ಣವರ್ಣಃ= ಚಿನ್ನದಂತಹ ಬಣ್ಣವುಳ್ಳವನು.

ಹೇಮಾಂಗಃ= ಚಿನ್ನದಂತಹ ಅವಯವವುಳ್ಳವನು.

ವರಾಂಗಃ= ಜ್ಞಾನಾನಂದಾತ್ಮಕವಾದ ಶರೀರವುಳ್ಳವನು.

ಚಂದನಾಂಗದೀ= ಆಹ್ಲಾದಕರವಾದ ಭುಜಾಭರಣವುಳ್ಳವನು.

ವೀರಹಾ= ವಿರುದ್ಧವಾದ ಜ್ಞಾನವುಳ್ಳವನನ್ನು ಅಂಧಂತಮಸ್ಸಿನಲ್ಲಿ ನೆಲೆಸುವಂತೆ ಮಾಡುವವನು.

ವಿಷಮಃ= ಶುಭಾಶುಭ ನಿಯಂತೃತ್ವ ರೂಪವಾದ ವೈಷಮ್ಯವನ್ನು ಹೊಂದಿದವನು.

ಶೂನ್ಯಃ= ದುರ್ಜನರ ಸುಖವನ್ನು ಊನಮಾಡುವವನು.

ಘೃತಾಶೀಃ= ಹವಿಸ್ಸಿನ ರೂಪವಾದ ಘೃತವನ್ನು ಸ್ವೀಕರಿಸುವವನು.

ಅಚಲಃ= ಪ್ರಾಕೃತವಾದ ಚರ ಪದಾರ್ಥವಿಲ್ಲದವನು.

ಚಲಃ= ಸ್ವತಂತ್ರವಾಗಿ ಎಲ್ಲ ಕಡೆಯಲ್ಲಿಯೂ ಯಾವಾಗಲೂ ಚಲಿಸುವವನು.

ಅಮಾನೀ ಮಾನದೋ ಮಾನ್ಯೋ ಲೋಕಸ್ವಾಮೀ ತ್ರಿಲೋಕಧೃಕ್ ।
ಸುಮೇಧಾ ಮೇಧಜೋ ಧನ್ಯಃ ಸತ್ಯಮೇಧಾ ಧರಾಧರಃ ॥೯೩॥

ಅಮಾನೀ= ಪ್ರಾಕೃತ ಗುಣಸಂಬಂಧದಿಂದ ಅಭಿಮಾನವನ್ನು ಹೊಂದದವನು.

ಮಾನದಃ= ಜ್ಞಾನವನ್ನು ನೀಡುವವನು.

ಮಾನ್ಯಃ= ಸರ್ವೇಶ್ವರನಾಗಿರುವುದರಿಂದ ಎಲ್ಲರಿಂದಲೂ ಪೂಜ್ಯನಾಗಿರುವವನು.

ಲೋಕಸ್ವಾಮೀ= ಸಕಲ ಭೂಮಿಗಳಿಗೂ ಒಡೆಯ.

ತ್ರಿಲೋಕಧೃಕ್= ಭೂ, ಭುವಃ, ಸ್ವಃ ಎಂಬ ಮೂರುಲೋಕಗಳನ್ನು ಧರಿಸಿರುವವನು.

ಸುಮೇಧಾಃ= ಒಳ್ಳೆಯ ಧಾರಣಾಶಕ್ತಿ ಸಂಪನ್ನವಾದ ಬುದ್ಧಿಯುಳ್ಳವನು.

ಮೇಧಜಃ= ಯಜ್ಞದಿಂದ ಅಭಿವ್ಯಕ್ತನಾಗುವವನು. ಮೇಧಾಶಕ್ತಿಗೆ ವಿಷಯನಾಗುವವನು.

ಧನ್ಯಃ= ಗುಣಗಳಿಂದ ಪೂರ್ಣನಾಗಿ ಯಾವುದರ ಅಪೇಕ್ಷೆಯೂ ಇಲ್ಲದವನು.

ಸತ್ಯಮೇಧಾಃ= ಸಮೀಚೀನವಾದ ಜ್ಞಾನವುಳ್ಳವನು.

ಧರಾಧರಃ= ಧರಾದೇವಿಯನ್ನು ಧರಿಸಿಕೊಂಡಿರುವವನು.

ತೇಜೋ ವೃಷೋ ದ್ಯುತಿಧರಃ ಸರ್ವಶಸ್ತ್ರಭೃತಾಂವರಃ ।
ಪ್ರಗ್ರಹೋ ನಿಗ್ರಹೋ ವ್ಯಗ್ರೋ ನೈಕಶೃಂಗೋ ಗದಾಗ್ರಜಃ ॥೯೪॥

ತೇಜಃ= ತೇಜೋರೂಪಿಯಾದವನು.

ವೃಷಃ= ಶ್ರೇಷ್ಠನಾದವನು.

ದ್ಯುತಿಧರಃ= ಶೋಭೆಯಿಂದ ಕೂಡಿದವನು.

ಸರ್ವಶಸ್ತ್ರಭೃತಾಂ ವರಃ= ಸಕಲ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾಗಿರುವವನು.

ಪ್ರಗ್ರಹಃ= ಪ್ರಕೃಷ್ಟರಾದವರನ್ನು ಸ್ವೀಕರಿಸುವವನು.

ನಿಗ್ರಹಃ= ನೀಚರನ್ನು ನಿಗ್ರಹಿಸುವವನು.

ವ್ಯಗ್ರಃ= ವಿಶೇಷವಾಗಿ ಅಧಿಕನಾಗಿರುವವನು.

ನೈಕಶೃಂಗಃ= ಅಗ್ನಿಯ ಅಂತರ್ಯಾಮಿಯಾಗಿ ಅನೇಕ ಶೃಂಗಗಳನ್ನು ಹೊಂದಿದವನು. ವೃಷಭಾವತಾರದಲ್ಲಿ ಎರಡು ಶೃಂಗಗಳನ್ನು ಹೊಂದಿದವನು.

ಗದಾಗ್ರಜಃ= ಕೃಷ್ಣಾವತಾರದಲ್ಲಿ ಗದನ ಅಣ್ಣನಾದವನು.

ಚತುರ್ಮೂರ್ತಿಶ್ಚತುರ್ಬಾಹುಶ್ಚತುರ್ವ್ಯೂಹಶ್ಚತುರ್ಗತಿಃ ।
ಚತುರಾತ್ಮಾ ಚತುರ್ಭಾವಶ್ಚತುರ್ವೇದವಿದೇಕಪಾತ್ ॥೯೫॥

ಚತುರ್ಮೂರ್ತಿಃ= ಚತುರ್ಮುಖನನ್ನು ಮುಖ್ಯ ಪ್ರವರ್ತಕನನ್ನಾಗಿ ಹೊಂದಿರುವವನು.

ಚತುರ್ಬಾಹುಃ= ಮುಕ್ತರು ನಾಲ್ಕು ತೋಳುಗಳನ್ನು ಹೊಂದುವಂತೆ ಅನುಗ್ರಹಿಸುವವನು.

ಚತುರ್ವ್ಯೂಹಃ= ನಾಲ್ಕು ವೇದಗಳಿಂದ ವಿಚಾರಿಸಲ್ಪಡುವವನು.

ಚತುರ್ಗತಿಃ= ನಾಲ್ಕು ವೇದಗಳಿಂದಲೂ ತಿಳಿಯಲ್ಪಡುವವನು.

ಚತುರಾತ್ಮಾ= ನಿಪುಣನಾದ ಸ್ವಾಮಿ.

ಚತುರ್ಭಾವ= ನಾಲ್ಕು ವಿಧದ ಭಕ್ತಿ ಯಾರನ್ನು ಕುರಿತು ಹೊರಟಿದೆಯೊ ಅವನು.

ಚತುರ್ವೇದವಿತ್= ನಾಲ್ಕು ವೇದಗಳನ್ನೂ ಸ್ವತಂತ್ರವಾಗಿ ತಾತ್ಪರ್ಯ ಪೂರ್ವಕವಾಗಿ ಬಲ್ಲವನು.

ಏಕಪಾತ್= ಸ್ವರೂಪಕ್ಕಿಂತ ಅಭಿನ್ನವಾದ ಅಂಶವುಳ್ಳವನು.

ಸಮಾವರ್ತೋ ನಿವೃತ್ತಾತ್ಮಾ ದುರ್ಜಯೋ ದುರತಿಕ್ರಮಃ ।
ದುರ್ಲಭೋ ದುರ್ಗಮೋ ದುರ್ಗೋ ದುರಾವಾಸೋ ದುರಾರಿಹಾ ॥

ಸಮಾವರ್ತಃ= ಸಮವಾಗಿ ಎಲ್ಲ ಕಡೆಗಳಲ್ಲಿಯೂ ವ್ಯಾಪ್ತನಾದವನು.

ನಿವೃತ್ತಾತ್ಮಾ= ಸಮಸ್ತ ವಿಷಯಗಳಲ್ಲಿಯೂ ಪ್ರವೃತ್ತಿ ಹೊಂದುವ ಅಂತಃಕರಣ ಉಳ್ಳವನು.

ದುರ್ಜಯಃ= ಯಾರಿಂದಲೂ ಜಯಿಸಲಾಗದವನು.

ದುರತಿಕ್ರಮಃ= ಯಾರಿಂದಲೂ ದಾಟಲಾಗದವನು.

ದುರ್ಲಭಃ= ಅಯೋಗ್ಯರಿಗೆ ದುರ್ಲಭನು.

ದುರ್ಗಮಃ= ತಿಳಿಯಲು ಅಶಕ್ಯನು.

ದುರ್ಗಃ= ಅಯೋಗ್ಯರಿಂದ ತಿಳಿಯಲಾಗದವನು.

ದುರಾವಾಸಃ= ಭಕ್ತರಿಂದ ಅತಿಪ್ರಯಾಸಪಟ್ಟು ತಮ್ಮ ಹೃದಯದಲ್ಲಿ ನೆಲೆಸುವಂತೆ ಮಾಡುವವನು.

ದುರಾರಿಹಾ= ಎಲ್ಲೆಡೆಯೂ ನಿಂತು ಶತ್ರುಗಳನ್ನು ಸದೆಬಡಿಯುವವನು.

ಶುಭಾಂಗೋ ಲೋಕಸಾರಂಗಃ ಸುತಂತುಸ್ತಂತುವರ್ಧನಃ ।
ಇಂದ್ರಕರ್ಮಾ ಮಹಾಕರ್ಮಾ ಕೃತಕರ್ಮಾ ಕೃತಾಗಮಃ ॥೯೭॥

ಶುಭಾಂಗಃ=ಮಂಗಳಾತ್ಮಕಗಳಾದ ವಾಸುದೇವಾದಿ ರೂಪಗಳೇ ತನ್ನ ಅಂಗಗಳಾಗಿ ಉಳ್ಳವನು.

ಲೋಕಸಾರಂಗಃ= ಶ್ರೇಷ್ಠಧಾಮತ್ರಯಗಳಲ್ಲಿ ಪದ್ಮನಾಭ, ಅನಂತಾಸನ, ವೈಕುಂಠ ರೂಪನಾಗಿರುವವನು.

ಸುತಂತುಃ= ಶೋಭನವಾದ ಶಾಸ್ತ್ರಪ್ರಪಂಚವನ್ನು ವಿಸ್ತರಿಸುವವನು.

ತಂತುವರ್ಧನಃ= ಶಾಸ್ತ್ರಜ್ಞಾನವನ್ನು ಭಕ್ತರ ಪಾಲಿಗೆ ಅನುಗ್ರಹಿಸುವವನು.

ಇಂದ್ರಕರ್ಮಾ= ವಾಯುದೇವನನ್ನು ಸೃಷ್ಟಿಸುವವನು.

ಮಹಾಕರ್ಮಾ= ಶ್ರೇಷ್ಠವಾದ ಪುಣ್ಯಕರ್ಮ ಪ್ರವರ್ತಕನು.

ಕೃತಕರ್ಮಾ= ಸಕಲ ಕರ್ಮಗಳನ್ನು ನಡೆಸುವವನು.

ಕೃತಾಗಮಃ= ತನ್ನಿಂದ ಸೃಷ್ಟವಾದ ಜಗತ್ತನ್ನು ಚೆನ್ನಾಗಿ ಬಲ್ಲವನು.

ಉದ್ಭವಃ ಸುಂದರಃ ಸುಂದೋ ರತ್ನನಾಭಃ ಸುಲೋಚನಃ ।
ಅರ್ಕೋ ವಾಜಸನಃ ಶೃಂಗೀ ಜಯಂತಃ ಸರ್ವವಿಜ್ಜಯೀ ॥೯೮॥

ಉದ್ಭವಃ= ಜಗತ್ತಿನ ಉತ್ಪತ್ತಿಗೆ ಕಾರಣನಾದವನು.

ಸುಂದರಃ= ಪರಮ ಸುಂದರನಾದವನು.

ಸುಂದಃ= ಸುಖವನ್ನು ಕೊಡುವವನು.

ರತ್ನನಾಭಃ= ರತ್ನದಂತೆ ಶೋಭಿಸುವ ನಾಭಿ ಉಳ್ಳವನು.

ಸುಲೋಚನಃ= ಶೋಭನವಾದ ದರ್ಶನವುಳ್ಳವನು.

ಅರ್ಕಃ= ಪ್ರಕಾಶರೂಪನಾದವನು.

ವಾಜಸನಃ= ಅನ್ನವನ್ನು ಕೊಡುವವನು.

ಶೃಂಗೀ= ಗೋವರ್ಧನ ಪರ್ವತದ ಶೃಂಗವನ್ನು ಧರಿಸಿದವನು. ಶೃಂಗವೆಂಬ ವಾದ್ಯವನ್ನು ಧರಿಸಿದವನು.

ಜಯಂತಃ= ಸಜ್ಜನರ ಬಾಹ್ಯ ಮತ್ತು ಆಂತರಿಕ ಶತ್ರುಗಳನ್ನು ಅತಿಶಯವಾಗಿ ಜಯಿಸುವವನು.

ಸರ್ವವಿತ್= ಸರ್ವಳೆನಿಸುವ ಲಕ್ಷ್ಮಿಯನ್ನು ಪತ್ನಿಯಾಗಿ ಹೊಂದಿರುವವನು.

ಜಯೀ= ಪ್ರತಿಯೊಂದು ಗುಣದ ವಿಷಯದಲ್ಲೂ ಎಲ್ಲವನ್ನೂ ಸ್ವಭಾವತಃ ಜಯಿಸಿರುವವನು.

ಸುವರ್ಣಬಿಂದುರಕ್ಷೋಭ್ಯಃ ಸರ್ವವಾಗೀಶ್ವರೇಶ್ವರಃ ।
ಮಹಾಹ್ರದೋ ಮಹಾಗರ್ತೋ ಮಹಾಭೂತೋ ಮಹಾನಿಧಿಃ ॥೯೯॥

ಸುವರ್ಣಬಿಂದುಃ= ಶೋಭನ ವರ್ಣಗಳುಳ್ಳ ವೇದಗಳನ್ನು ಸ್ವತಂತ್ರವಾಗಿ ಬಲ್ಲವನು. ಚಿನ್ನದಂತಹ ಅವಯವಗಳನ್ನು ಹೊಂದಿರುವವನು.

ಅಕ್ಷೋಭ್ಯಃ= ವಿಕಾರಕ್ಕೆ ಒಳಗಾಗದವನು. ಕಳವಳಕ್ಕೆ ಒಳಗಾಗದವನು.

ಸರ್ವವಾಗೀಶ್ವರೇಶ್ವರಃ= ಸರ್ವಜ್ಞಳಾದ ಸರಸ್ವತೀದೇವಿಗೆ ಒಡೆಯನಾದ ಚತುರ್ಮುಖನಿಗೂ ಒಡೆಯನಾದವನು.

ಮಹಾಹ್ರದಃ= ಉತ್ತಮವಾದ ಹರ್ಷವುಳ್ಳವನು.

ಮಹಾಗರ್ತಃ= ಉತ್ತಮವಾದ ಹೃದಯಾಕಾಶವನ್ನು ತನ್ನ ಆವಾಸವಾಗಿ ಹೊಂದಿರುವವನು.

ಮಹಾಭೂತಃ= ಉತ್ತಮವಾದ ಅಸ್ತಿತ್ವವನ್ನು ಹೊಂದಿರುವವನು.

ಮಹಾನಿಧಿಃ= ಶ್ರೇಷ್ಠ ನಿಧಿಯಾದವನು.

ಕುಮುದಃ ಕುಂದರಃ ಕುಂದಃ ಪರ್ಜನ್ಯಃ ಪಾವನೋऽನಲಃ ।
ಅಮೃತಾಂಶೋऽಮೃತವಪುಃ ಸರ್ವಜ್ಞಃ ಸರ್ವತೋಮುಖಃ ॥೧೦೦॥

ಕುಮುದಃ= ಅಯೋಗ್ಯರಿಗೆ ಕೆಟ್ಟ ಆನಂದವನ್ನೇ ಕೊಡುವವನು.

ಕುಂದರಃ= ಕುತ್ಸಿತವಾದ ಸಂಸಾರವನ್ನು ನಾಶ ಮಾಡುವವನು.

ಕುಂದಃ= ಕುತ್ಸಿತವಾದ ಕರ್ಮಗಳನ್ನು, ಪಾಪಗಳನ್ನು ನಾಶ ಮಾಡುವವನು.

ಪರ್ಜನ್ಯಃ= ಉತ್ತಮವಾದ ಸಸ್ಯಗಳನ್ನು ಹುಟ್ಟಿಸುವವನು.

ಪಾವನಃ= ಪವಿತ್ರನಾದವನು.

ಅನಲಃ= ಆಲಸ್ಯವಿಲ್ಲದವನು.

ಅಮೃತಾಂಶಃ= ಮುಕ್ತವಾದ ತನ್ನ ಎಲ್ಲಾ ಸ್ವರೂಪಗಳನ್ನು ಹೊಂದಿದವನು. ಮರಣರಹಿತವಾದ ಮತ್ಸ್ಯಾದಿ ಅಂಶಗಳನ್ನು ಹೊಂದಿದವನು.

ಅಮೃತಾಶಃ= ಯೋಗ್ಯಜೀವರು ಮುಕ್ತಿಯನ್ನು ಅನುಭವಿಸುವಂತೆ ಮಾಡುವವನು.

ಅಮೃತವಪುಃ= ಮರಣವಿಲ್ಲದ ಶರೀರವುಳ್ಳವನು.

ಸರ್ವಜ್ಞಃ= ಸರ್ವಜೀವರ ಉತ್ಪತ್ತಿಗೆ ಕಾರಣನಾದವನು.

ಸರ್ವತೋಮುಖಃ= ಎಲ್ಲರಿಗಿಂತಲೂ ಪ್ರಧಾನನಾದವನು.

ಸುಲಭಃ ಸುವ್ರತಃ ಸಿದ್ಧಃ ಶತ್ರುಜಿಚ್ಛತ್ರುತಾಪನಃ ।
ನ್ಯಗ್ರೋಧೋದುಂಬರೋಶ್ವತ್ಥಶ್ಚಾಣೂರಾಂಧ್ರನಿಷೂದನಃ ॥೧೦೧॥

ಸುಲಭಃ= ಭಕ್ತರಿಂದ ಅನಾಯಾಸವಾಗಿ ಪ್ರಾಪ್ಯನಾಗುವವನು.

ಸುವ್ರತಃ= ನರ-ನಾರಾಯಣ, ಪರಶುರಾಮಾದಿ ಅವತಾರಗಳಲ್ಲಿ ಶೋಭನವಾದ ತಪಶ್ಚರ್ಯವೇ ಮೊದಲಾದ ವ್ರತವುಳ್ಳವನು.

ಸಿದ್ಧಃ= ಎಲ್ಲೆಡೆ ಇರುವವನು.

ಶತ್ರುಜಿತ್= ತನ್ನ ಬಾಹ್ಯ ಶತ್ರುಗಳಂತಿರುವ ಅಸುರ, ದೈತ್ಯ-ದಾನವರನ್ನೂ, ಆಂತರಿಕ ಶತ್ರುಗಳಂತಿರುವ ಕಾಮ-ಕ್ರೋಧಾದಿಗಳನ್ನು ವಶಪಡಿಸಿಕೊಂಡಿರುವವನು.

ಶತ್ರುತಾಪನಃ= ತನ್ನ ಶತ್ರುಗಳನ್ನು ಸಂತಾಪಕ್ಕೆ ಒಳಪಡಿಸುವವನು.

ನ್ಯಗ್ರೋಧಃ= ಹೀನರು ಸದ್ಗತಿಯನ್ನು ಹೊಂದದಂತೆ ತಡೆಯುವವನು.

ಉದುಂಬರಃ= ಅತಿಶಯೇನ ಉತ್ಕೃಷ್ಟವಾದ ಬ್ರಹ್ಮಾದಿ ಜೀವಸಮೂಹವನ್ನು ಸ್ವೀಕರಿಸುವವನು.

ಅಶ್ವತ್ಥಃ= ಭೋಜನಪ್ರಿಯರಲ್ಲಿ ನಿಲ್ಲದವನು. ಹಯಗ್ರೀವ ರೂಪದಿಂದ ಅಶ್ವರೂಪವನ್ನು ಹೊಂದಿದವನು.

ಚಾಣೂರಾಂಧ್ರ(ಧ)ನಿಷೂದನಃ= ದಾನಶೀಲರಾದ ಮತ್ತು ಉತ್ಕೃಷ್ಟವಾದ ಸಂಪತ್ತನ್ನು ಅನುಗ್ರಹಿಸುವ ಹಾಗೂ ಆನಂದಸ್ವರೂಪಿಯಾದ ಭಗವಂತನನ್ನು ತಮ್ಮ ಹೃದಯದಲ್ಲಿ ಧರಿಸಿಕೊಂಡಿರುವ ಭಕ್ತರನ್ನು ನಾಶಪಡಿಸುವ ದುಷ್ಟಶಕ್ತಿಗಳನ್ನು ಪರಿಹರಿಸುವವನು. ಚಾಣೂರ ಎಂಬ ಆಂಧ್ರಜಾತಿಯ ಮಲ್ಲನನ್ನು ಸಂಹರಿಸಿದವನು.

ಸಹಸ್ರಾರ್ಚಿಃ ಸಪ್ತಜಿಹ್ವಃ ಸಪ್ತೈಧಾಃ ಸಪ್ತವಾಹನಃ ।
ಅಮೂರ್ತಿರನಘೋऽಚಿಂತ್ಯೋ ಭಯಕೃದ್ ಭಯನಾಶನಃ ॥೧೦೨॥

ಸಹಸ್ರಾರ್ಚಿಃ= ಅಗ್ನ್ಯಂತರ್ಗತ ರೂಪಗಳಿಂದ ಸಹಸ್ರಾರು ಜ್ವಾಲೆಗಳನ್ನು ಹೊಂದಿದವನು.

ಸಪ್ತಜಿಹ್ವಃ= ಅಗ್ನ್ಯಂತರ್ಗತ ನಾರಾಯಣ ರೂಪದಲ್ಲಿ ಕಾಳೀ, ಕರಾಳೀ ಮೊದಲಾದ ಏಳು ನಾಲಿಗೆಗಳನ್ನು ಹೊಂದಿದವನು.

ಸಪ್ತೈಧಾಃ= ಸಪ್ತ ಸಮಿತ್ತುಗಳನ್ನು ಸ್ವೀಕರಿಸುವವನು (ಅಗ್ನಿ, ಔದುಂಬರ, ಶಮೀ, ಉಲ್ಕಪಥ, ಅಶನ್ಯಕ, ಪುಷ್ಕರ ಮತ್ತು ಪರ್ಣ. ಈ ಏಳು ವೃಕ್ಷಗಳ ಸಮಿತ್ತುಗಳನ್ನು ಹೊಂದುವವನು).

ಸಪ್ತವಾಹನಃ= ಏಳು ಯಾಗಗಳನ್ನು ನಿರ್ವಹಿಸುವವನು.

ಅಮೂರ್ತಿಃ= ಪರಿಮಾಣದ ಮಿತಿ ಇಲ್ಲದವನು.

ಅನಘಃ= ಭಕ್ತರಿಗೆ ಆಪತ್ತುಗಳು ಬರದಂತೆ ಮಾಡುವವನು.

ಅಚಿಂತ್ಯಃ= ಸಮಗ್ರವಾಗಿ ಚಿಂತಿಸಲು ಅಶಕ್ಯನಾದವನು.

ಭಯಕೃತ್= ಭಯವನ್ನು ಉಂಟುಮಾಡುವವನು. ಭಯವನ್ನು ಪರಿಹರಿಸುವವನು.

ಭಯನಾಶನಃ= ಭಯಾತ್ಮಕವಾದ ಸಂಸಾರವನ್ನು ಪರಿಹರಿಸುವವನು.

ಅಣುರ್ಬೃಹತ್ಕೃಶಃ ಸ್ಥೂಲೋ ಗುಣಭೃನ್ನಿರ್ಗುಣೋ ಮಹಾನ್ ।
ಅಧೃತಃ ಸ್ವಧೃತಃ ಸ್ವಾಸ್ಯಃ ಪ್ರಾಗ್ವಂಶೋ ವಂಶವರ್ಧನಃ ॥೧೦೩॥

ಅಣುಃ= ಅತ್ಯಂತ ಸೂಕ್ಷ್ಮನಾಗಿರುವವನು.

ಬೃಹತ್= ಗುಣಪೂರ್ಣನಾದವನು.

ಕೃಶಃ= ಪ್ರಳಯಕಾಲದಲ್ಲಿ ಜಗತ್ತನ್ನು ಸೂಕ್ಷ್ಮರೂಪವನ್ನು ತಾಳುವಂತೆ ಮಾಡುವವನು.

ಸ್ಥೂಲಃ= ಅಪ್ರಾಕೃತವಾದ ಸ್ಥೌಲ್ಯವುಳ್ಳವನು.

ಗುಣಭೃತ್= ಜ್ಞಾನಾನಂದಾದಿ ಗುಣಗಳನ್ನು ಧರಿಸಿರುವವನು.

ನಿರ್ಗುಣಃ= ಪ್ರಾಕೃತ ಗುಣರಹಿತನಾದವನು.

ಮಹಾನ್= ದೇಶದಿಂದ, ಕಾಲದಿಂದ ಮತ್ತು ಗುಣದಿಂದ ಉತ್ತಮನಾಗಿರುವವನು.

ಅಧೃತಃ= ಇನ್ನೊಬ್ಬರಿಂದ ಧರಿಸಲ್ಪಡದವನು.

ಸ್ವಧೃತಃ= ತನ್ನನ್ನು ತಾನೇ ಧರಿಸಿರುವವನು.

ಸ್ವಾಸ್ಯಃ= ಶೋಭನವಾದ ಮುಖವುಳ್ಳವನು.

ಪ್ರಾಗ್ವಂಶಃ= ದೇವಾಸುರ ವಂಶಗಳಿಗಿಂತಲೂ ಮೊದಲು ಇರುವವನು. ಪ್ರಾಕೃತವಾದ ಮುರಳಿಯನ್ನು ಹೊಂದಿದವನು.

ವಂಶವರ್ಧನಃ= ಸಂತಾನವನ್ನು ಬೆಳೆಸುವವನು. ವೇದವ್ಯಾಸ ರೂಪದಿಂದ ಕುರುವಂಶವನ್ನು ಬೆಳೆಸಿದವನು.

ಭಾರಭೃತ್ ಕಥಿತೋ ಯೋಗೀ ಯೋಗೀಶಃ ಸರ್ವಕಾಮದಃ ।
ಆಶ್ರಮಃ ಶ್ರಮಣಃ ಕ್ಷಾಮಃ ಸುಪರ್ಣೋ ವಾಯುವಾಹನಃ ॥೧೦೪॥

ಭಾರಭೃತ್= ಭಾರವನ್ನು ಧರಿಸಿರುವವನು.

ಕಥಿತಃ= ವೇದ-ಇತಿಹಾಸ-ಪುರಾಣಗಳಲ್ಲಿ, ಸಕಲ ವಿದ್ಯೆಗಳಲ್ಲಿ ಸಮಸ್ತ ದೋಷ ದೂರ ಮತ್ತು ಗುಣಪರಿಪೂರ್ಣನೆಂದು ಪ್ರತಿಪಾದಿತನಾಗಿರುವವನು.

ಯೋಗೀ= ಪ್ರಶಂಸನೀಯವಾದ ಅತಿಶಯವಾದ ಸಾಮರ್ಥ್ಯವನ್ನು ನಿತ್ಯವೂ ಹೊಂದಿರುವವನು.

ಯೋಗೀಶಃ= ಯೋಗಿಗಳಿಗೆ ಒಡೆಯನಾದವನು. ಯೋಗಿಗಳಿಗೆ ಜ್ಞಾನ-ಸುಖಗಳನ್ನು ಅನುಗ್ರಹಿಸುವವನು.

ಸರ್ವಕಾಮದಃ= ಎಲ್ಲಾ ಇಷ್ಟಗಳನ್ನೂ ನೀಡುವವನು.

ಆಶ್ರಮಃ= ಸನತ್ಕುಮಾರ, ಕೃಷ್ಣ, ನರಸಿಂಹ, ವ್ಯಾಸಾದಿ ರೂಪಗಳಿಂದ ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಗಳನ್ನೂ ಹೊಂದಿರುವವನು.

ಶ್ರಮಣಃ= ಸಂಸಾರ ಶ್ರಮವನ್ನು ಪರಿಹರಿಸುವವನು.

ಕ್ಷಾಮಃ= ಯಾವ ರೀತಿಯ ಕ್ಷಯವೂ ಇಲ್ಲದವನು.

ಸುಪರ್ಣಃ= ಪ್ರಳಯಕಾಲದಲ್ಲಿ ವಟಪತ್ರವನ್ನು ಶಯನವಾಗಿ ಹೊಂದಿದವನು. ಅತ್ಯಂತ ಪೂರ್ಣವಾದ ಆನಂದವುಳ್ಳವನು.

ವಾಯುವಾಹನಃ= ಜೀವೋತ್ಕ್ರಮಣ ಸಮಯದಲ್ಲಿ ವಾಯುವನ್ನೇ ವಾಹನವನ್ನಾಗಿ ಮಾಡಿಕೊಳ್ಳುವವನು.

ಧನುರ್ಧರೋ ಧನುರ್ವೇದೋ ದಂಡೋ ದಮಯಿತಾ ದಮಃ ।
ಅಪರಾಜಿತಃ ಸರ್ವಸಹೋ ನಿಯಂತಾ ನಿಯಮೋ ಯಮಃ ॥೧೦೫॥

ಧನುರ್ಧರಃ= ರಾಮ-ಪರಶುರಾಮ ಮೊದಲಾದ ರೂಪದಲ್ಲಿ ಬಿಲ್ಲನ್ನು ಧರಿಸಿದವನು.

ಧನುರ್ವೇದಃ= ರಣರಂಗದಲ್ಲಿ ತನ್ನ ಧನುಸ್ಸಿನ ಕೌಶಲವನ್ನು ತೋರಿಸುವವನು.

ದಂಡಃ= ಶಿಕ್ಷೆಯನ್ನು ನೀಡುವವನು.

ದಮಯಿತಾ= ಭಕ್ತರ ಆಂತರಿಕ ಮತ್ತು ಬಾಹ್ಯಶತ್ರುಗಳನ್ನು ನಿಗ್ರಹಿಸುವವನು.

ದಮಃ= ಇಂದ್ರಿಯ ನಿಗ್ರಹಕ್ಕೆ ನಿಯಾಮಕನಾದವನು.

ಅಪರಾಜಿತಃ= ಎಂದೂ ಯಾರಿಂದಲೂ ಪರಾಜಿತನಾಗದವನು.

ಸರ್ವಸಹಃ= ಸರ್ವಾಭಿಮಾನಿಯಾದ ಲಕ್ಷ್ಮಿಯನ್ನು ಮತ್ತು ಜಡಪ್ರಕೃತಿಯನ್ನು ಸೋಲಿಸಿ ಅವರನ್ನು ಸಹಿಸುವವನು.

ನಿಯಂತಾ= ಚೆನ್ನಾಗಿ ಅರ್ಜುನನ ಸಾರಥ್ಯವನ್ನು ಮಾಡುವವನು.

ನಿಯವಃ= ಪರಕೀಯರು ಪ್ರಯೋಗಿಸಿದ ಬ್ರಹ್ಮಾಸ್ತ್ರಾದಿಗಳನ್ನು ನಿಯಂತ್ರಿಸುವವನು.

ಯಮಃ= ಕ್ಷಣ-ಕ್ಷಣದಲ್ಲಿ ಅರ್ಜುನನ ಸದ್ಬುದ್ಧಿಯನ್ನು ನಿಯಂತ್ರಿಸುವವನು.

ಸತ್ತ್ವವಾನ್ ಸಾತ್ತ್ವಿಕಃ ಸತ್ಯಃ ಸತ್ಯಧರ್ಮಪರಾಯಣಃ ।
ಅಭಿಪ್ರಾಯಃ ಪ್ರಿಯಾರ್ಹೋಽರ್ಹಃ ಪ್ರಿಯಕೃತ್ ಪ್ರೀತಿವರ್ಧನಃ ॥

ಸತ್ತ್ವವಾನ್= ಯಾವಾಗಲೂ ಸದ್ಗುಣಗಳಿಂದ ಪೂರ್ಣನಾದವನು.

ಸಾತ್ತ್ವಿಕಃ= ಸಮಸ್ತ ಗುಣಪೂರ್ಣತೆಯನ್ನು ಹೊಂದಲು ಅರ್ಹನಾಗಿರುವವನು.

ಸತ್ಯಃ= ಸಜ್ಜನರಿಗೆ ಪ್ರಿಯನಾದವನು.

ಸತ್ಯಧರ್ಮಪರಾಯಣಃ= ಸತ್ಯ ಮತ್ತು ಧರ್ಮಗಳಿಗೆ ಶ್ರೇಷ್ಠನಾದ ಆಶ್ರಯನಾದವನು.

ಅಭಿಪ್ರಾಯಃ= ಎಲ್ಲ ರೀತಿಯಿಂದಲೂ ಪ್ರಕೃಷ್ಟವಾದ ಆನಂದಾದಿ ಲಾಭವನ್ನು ಹೊಂದಿರುವವನು.

ಪ್ರಿಯಾರ್ಹಃ= ಪ್ರಿಯವಾದವುಗಳನ್ನು ಸಮರ್ಪಿಸಲು ಯೋಗ್ಯನಾದವನು.

ಅರ್ಹಃ= ಎಲ್ಲರಿಂದಲೂ ಎಲ್ಲ ದೇಶ-ಕಾಲದಿಂದಲೂ ಪೂಜಿಸಲ್ಪಡುವವನು. ತನ್ನಿಂದಲೇ ತಾನು ಪೂಜಿಸಲ್ಪಡುವವನು.

ಪ್ರಿಯಕೃತ್= ಜೀವಾತ್ಮರಿಗೆ ಪತ್ನೀ-ಪುತ್ರಾದಿಗಳು ಪ್ರಿಯರೆನಿಸುವಂತೆ ಮಾಡುವವನು.

ಪ್ರೀತಿವರ್ಧನಃ= ಭಕ್ತರಿಗೆ ತನ್ನ ವಿಷಯದಲ್ಲಿ ಪ್ರೀತಿಯುಂಟಾಗುವಂತೆ ಮಾಡುವವನು.

ವಿಹಾಯಸಗತಿರ್ಜ್ಯೋತಿಃ ಸುರುಚಿರ್ಹುತಭುಗ್ ವಿಭುಃ ।
ರವಿರ್ವಿರೋಚನಃ ಸೂರ್ಯಃ ಸವಿತಾ ರವಿಲೋಚನಃ ॥೧೦೭॥

ವಿಹಾಯಸಗತಿಃ= ಗರುಡವಾಹನನಾಗಿ ಆಕಾಶದಲ್ಲಿ ಸಂಚರಿಸುವವನು.

ಜ್ಯೋತಿಃ= ಬುದ್ಧಿಯನ್ನು ಬೆಳಗಿಸುವವನು. ಶ್ರೇಷ್ಠವಾದ ಸಂತತಿಯನ್ನು ಹೊಂದಿರುವವನು.

ಸುರುಚಿಃ= ಶೋಭನವಾದ ಕಾಂತಿಯುಳ್ಳವನು.

ಹುತಭುಗ್= ಯಜ್ಞಗಳಲ್ಲಿ ಸಮರ್ಪಿತವಾದ ಹವಿಸ್ಸನ್ನು ಸ್ವೀಕರಿಸುವವನು.

ವಿಭುಃ= ಸ್ವಾಭಾವಿಕವಾಗಿ ಜ್ಞಾನಿಯಾಗಿರುವವನು ಅಥವಾ ಬಲಿಷ್ಠನಾಗಿರುವವನು.

ರವಿಃ= ರಮಿಸುವವನು ಮತ್ತು ವಿಶಿಷ್ಟನಾಗಿರುವವನು.

ವಿರೋಚನಃ= ಪ್ರಕಾಶನಶೀಲನಾದವನು.

ಸೂರ್ಯಃ= ಸೂರಿಗಳಿಂದ ಪ್ರಾಪ್ಯನಾದವನು.

ಸವಿತಾ= ಜಲಪ್ರಸವವನ್ನು ಉಂಟುಮಾಡುವವನು.

ರವಿಲೋಚನಃ= ಸೂರ್ಯನಿಗೆ ಆಶ್ರಯವಾದ ಕಣ್ಣುಳ್ಳವನು.

ಅನಂತೋ ಹುತಭುಗ್ ಭೋಕ್ತಾ ಸುಖದೋ ನೈಕದೋऽಗ್ರಜಃ ।
ಅನಿರ್ವಿಣ್ಣಃ ಸದಾಮರ್ಷೀ ಲೋಕಾಧಿಷ್ಠಾನಮದ್ಭುತಃ ॥೧೦೮॥

ಅನಂತಃ= ಯಾವ ವಿಷಯದಲ್ಲಿಯೂ ಕೊನೆಯವನಲ್ಲದಿರುವವನು, ಅಥವಾ ನಾಶವಿಲ್ಲದವನು.

ಹುತಭುಗ್= ಹಿರಣ್ಯಕಶಿಪುವಿನ ಕೋಪಾಗ್ನಿಯಲ್ಲಿ ಬೆಂದ ಪ್ರಹ್ಲಾದನನ್ನು ಪಾಲಿಸುವವನು.

ಭೋಕ್ತಾ= ಎಲ್ಲರನ್ನೂ ಪಾಲಿಸುವವನು.

ಸುಖದಃ= ಭಕ್ತರಿಗೆ ಸುಖವನ್ನು ಕೊಡುವವನು. ಅಭಕ್ತರಿಗೆ ಸುಖವನ್ನು ನಾಶ ಮಾಡುವವನು.

ನೈಕಜಃ= ಯಾರೊಬ್ಬರಿಂದಲೂ ಜನಿಸದವನು.

ನೈಕದಃ= ಭಕ್ತರಿಗೆ ಅನೇಕ ವಸ್ತುಗಳನ್ನು ಕೊಡುವವನು.

ಅಗ್ರಜಃ= ಜಗತ್ತಿನ ಸೃಷ್ಟಿಗಿಂತಲೂ ಮೊದಲು ಅಭಿವ್ಯಕ್ತನಾದವನು.

ಅನಿರ್ವಿಣ್ಣಃ= ಎಂದೂ ದುಃಖಿತನಾಗದವನು. ಎಂದೂ ಪೂರ್ಣವಾಗಿ ತಿಳಿಯಲ್ಪಡದವನು.

ಸದಾಮರ್ಷೀ= ಸಜ್ಜನರನ್ನು ಚೆನ್ನಾಗಿ ಕ್ಷಮಿಸುವ ಸ್ವಭಾವವುಳ್ಳವನು.

ಲೋಕಾಧಿಷ್ಠಾನಮ್ = ಲೋಕಗಳಿಗೆ ಮೂಲಾಧಾರನಾದವನು.

ಅದ್ಭುತಃ= ಸರ್ವಾಶ್ಚರ್ಯ ಸ್ವರೂಪನು.

ಸನಾತ್ ಸನಾತನತಮಃ ಕಪಿಲಃ ಕಪಿಲರವ್ಯಯಃ ।
ಸ್ವಸ್ತಿದಃ ಸ್ವಸ್ತಿಕೃತ್ ಸ್ವಸ್ತಿ ಸ್ವಸ್ತಿಭುಕ್ ಸ್ವಸ್ತಿದಕ್ಷಿಣಃ ॥೧೦೯॥

ಸನಾತ್ = ಸದಾವಿದ್ಯಮಾನನಾದವನು.

ಸನಾತನತಮಃ= ಅತಿಶಯವಾಗಿ ಸನಾತನನಾದವನು.

ಕಪಿಲಃ= ಕಪಿಲಾವತಾರದಲ್ಲಿ ಕಪಿಲನಾಮಕನಾದವನು. ಸೀತೆಯ ಚೂಡಾರತ್ನವನ್ನು ತಂದ ಕಪಿಯಾದ ಹನುಮಂತನನ್ನು ಲಾಲಿಸುವವನು.

ಕಪಿಃ= ಅಪರಿಮಿತವಾದ ಸುಖವನ್ನು ಅನುಭವಿಸುವವನು.

ಅವ್ಯಯಃ= ಕೃಷ್ಣಾವತಾರದಲ್ಲಿ ಕುರಿಗಳ ಜೊತೆಯಲ್ಲಿ ಸಂಚರಿಸುವವನು. ಜರಾಸಂಧನ ಜೊತೆಯಲ್ಲಿ ಮಾಡಿದ ಯುದ್ಧದಲ್ಲಿ ಒಂದು ರೋಮವನ್ನೂ ಕಳೆದುಕೊಳ್ಳದವನು.

ಸ್ವಸ್ತಿದಃ= ಶಾಶ್ವತವಾದ ಸುಖವನ್ನು ಅನುಗ್ರಹಿಸುವವನು.

ಸ್ವಸ್ತಿಕೃತ್ = ಯೋಗ್ಯರಿಗೆ ಶಾಶ್ವತವಾದ ಸುಖವನ್ನು ಕೊಡುವವನು.

ಸ್ವಸ್ತಿ= ಶೋಭನವಾದ, ಸ್ವತಂತ್ರವಾದ ಅಸ್ತಿತ್ವವುಳ್ಳವನು.

ಸ್ವಸ್ತಿಭುಕ್ = ಶೋಭನವಾದ ಹವಿಸ್ಸನ್ನು ಭೋಗಿಸುವವನು.

ಸ್ವಸ್ತಿದಕ್ಷಿಣಃ= ದಕ್ಷಿಣಾ ಎನಿಸುವ ಲಕ್ಷ್ಮಿಗೆ ಶೋಭನವಾದ ಅಸ್ತಿತ್ವವನ್ನು ಉಂಟು ಮಾಡುವವನು.

ಅರೌದ್ರಃ ಕುಂಡಲೀ ಚಕ್ರೀ ವಿಕ್ರಮ್ಯೂರ್ಜಿತಶಾಸನಃ ।
ಶಬ್ದಾತಿಗಃ ಶಬ್ದಸಹಃ ಶಿಶಿರಃ ಶರ್ವರೀಕರಃ ॥೧೧೦॥

ಅರೌದ್ರಃ= ಎಲ್ಲರಿಗೂ ಅಧಿಕವಾಗಿ ಭಯಂಕರನಾಗಿರುವವನು. ಕ್ರೂರನೆನಿಸದಿರುವವನು.

ಕುಂಡಲೀ= ಸುಂದರವಾದ ಕರ್ಣಾಭರಣಗಳನ್ನು ಧರಿಸಿಕೊಂಡಿರುವವನು.

ಚಕ್ರೀ= ಚಕ್ರರೂಪದಲ್ಲಿರುವ ದುರ್ಗಾದೇವಿಯನ್ನು ಪತ್ನಿಯಾಗಿ ಹೊಂದಿರುವವನು.

ವಿಕ್ರಮೀ= ಅತಿಶಯವಾದ ಪರಾಕ್ರಮವನ್ನು ಹೊಂದಿರುವವನು.

ಊರ್ಜಿತಶಾಸನಃ= ಶ್ರೇಷ್ಠವಾದ ಆದೇಶವುಳ್ಳವನು.

ಶಬ್ದಾತಿಗಃ= ವೇದಗಳನ್ನು ಮೀರಿದವನು.

ಶಬ್ದಸಹಃ= ಧ್ವನ್ಯಾತ್ಮಕ-ವರ್ಣಾತ್ಮಕವಾದ ಎಲ್ಲ ಶಬ್ದಗಳಿಂದಲೂ ಹೇಳಲ್ಪಡಲು ಸಮರ್ಥನಾದವನು.

ಶಿಶಿರಃ= ಅತಿಶಯಿತ ಸುಖಿಸ್ವರೂಪೀ.

ಶರ್ವರೀಕರಃ= ರಾತ್ರಿಯನ್ನು ನಿರ್ಮಿಸುವವನು. ದುರ್ಗೆಯನ್ನು ರಾತ್ರಿಗೆ ಅಭಿಮಾನಿನಿಯನ್ನಾಗಿ ಮಾಡಿದವನು.

ಅಕ್ರೂರಃ ಪೇಶಲೋ ದಕ್ಷೋ ದಕ್ಷಿಣಃ ಕ್ಷಮಿಣಾಂ ವರಃ ।
ವಿದ್ವತ್ತಮೋ ವೀತಭಯಃ ಪುಣ್ಯಶ್ರವಣಕೀರ್ತನಃ ॥೧೧೧॥

ಅಕ್ರೂರಃ= ಕ್ರೂರನಲ್ಲದವನು.

ಪೇಶಲಃ= ಪರಮಸುಂದರನಾದವನು.

ದಕ್ಷಃ= ಎಲ್ಲೆಡೆ ಸಂಚರಿಸುವವನು. ಎಲ್ಲವನ್ನೂ ಬಲ್ಲವನು.

ದಕ್ಷಿಣಃ= ಚತುರನಾದವನು. ಉದಾರನಾದವನು.

ಕ್ಷಮಿಣಾಂವರಃ= ಸಹನಶೀಲರಲ್ಲಿ ಶ್ರೇಷ್ಠನಾದವನು.

ವಿದ್ವತ್ತಮಃ= ಜ್ಞಾನಿಗಳಲ್ಲಿ ಶ್ರೇಷ್ಠನಾದವನು.

ವೀತಭಯಃ= ಭಯವಿಲ್ಲದವನು. ಭಯವಿಲ್ಲದಂತೆ ಮಾಡುವವನು.

ಪುಣ್ಯಶ್ರವಣಕೀರ್ತನಃ= ಶ್ರವಣದಿಂದ ಪುಣ್ಯವುಂಟಾಗುವ ನಾಮ ಚರಿತಾದಿ ಕೀರ್ತನೆಯುಳ್ಳವನು.

ಉತ್ತಾರಣೋ ದುಷ್ಕೃತಿಹಾ ಪುಣ್ಯೋ ದುಃಸ್ವಪ್ನನಾಶನಃ ।
ವೀರಹಾ ರಕ್ಷಣಃ ಸಂತೋ ಜೀವನಃ ಪರ್ಯವಸ್ಥಿತಃ ॥೧೧೨॥

ಉತ್ತಾರಣಃ= ಸಂಸಾರ ಸಾಗರದಿಂದ ದಾಟಿಸುವವನು.

ದುಷ್ಕೃತಿಹಾ= ಪಾಪಶೀಲರಾದ ಪಾತಕಿಗಳನ್ನು ಅಂಧಂತಮಸ್ಸಿನಲ್ಲಿ ಹಾಕಿ ಅಲ್ಲಿಯೇ ಇರುವಂತೆ ಮಾಡುವವನು.

ಪುಣ್ಯಃ= ಸತ್ಕರ್ಮಗಳ ಮೂಲಕ ಪುಣ್ಯವನ್ನು ಉಂಟುಮಾಡುವವನು.

ದುಃಸ್ವಪ್ನನಾಶನಃ= ಕೆಟ್ಟ ಸ್ವಪ್ನಗಳು ಬೀಳದಂತೆ ಮಾಡುವವನು. ಕೆಟ್ಟ ಸ್ವಪ್ನಗಳ ದುಷ್ಪರಿಣಾಮವನ್ನು ಪರಿಹರಿಸುವವನು.

ವೀರಹಾ= ವೇದವ್ಯಾಸಾವತಾರದಲ್ಲಿ ವಿರುದ್ಧ ಮಾತುಗಳುಳ್ಳ ಮತಗಳನ್ನು ನಿರಾಕರಿಸಿರುವವನು.

ರಕ್ಷಣಃ= ರಕ್ಷಿಸುವವನು.

ಸಂತಃ= ಚೆನ್ನಾಗಿ ವ್ಯಾಪಿಸಿರುವವನು.

ಜೀವನಃ= ಜೀವರು ಬದುಕುವಂತೆ ಮಾಡುವವನು.

ಪರ್ಯವಸ್ಥಿತಃ= ಸುತ್ತಲೂ ಇರುವವನು.

ಅನಂತರೂಪೋಽನಂತಶ್ರೀರ್ಜಿತಮನ್ಯುರ್ಭಯಾಪಹಃ ।
ಚತುರಸ್ರೋ ಗಭೀರಾತ್ಮಾ ವಿದಿಶೋ ವ್ಯಾದಿಶೋ ದಿಶಃ ॥೧೧೩॥

ಅನಂತರೂಪಃ= ಅಸಂಖ್ಯಾತವಾದ ರೂಪವುಳ್ಳವನು,

ಅನಂತಶ್ರೀಃ= ದೇಶ-ಕಾಲದಿಂದ ಅಂತಶೂನ್ಯಳಾದ ಲಕ್ಷ್ಮಿಯನ್ನು ಪತ್ನಿಯನ್ನಾಗಿ ಪಡೆದವನು.

ಜಿತಮನ್ಯುಃ= ಕ್ರೋಧವನ್ನು ಜಯಿಸಿದವನು.

ಭಯಾಪಹಃ= ಸಕಲ ವಿಧವಾದ ಭಯವನ್ನೂ ಪರಿಹರಿಸುವವನು.

ಚತುರಸ್ರಃ= ಸರ್ವಸಮರ್ಥನಾಗಿರುವವನು ಹಾಗೂ ಸುಖಾಸಕ್ತನಾಗಿಯೇ ಇರುವವನು.

ಗಭೀರಾತ್ಮಾ= ಉಳಿದವರು ಸಮಗ್ರವಾಗಿ ತಿಳಿಯಲು ಅಶಕ್ಯವಾದ ಸ್ವರೂಪ ಉಳ್ಳವನು.

ವಿದಿಶಃ= ಅಸಜ್ಜನರಿಗೆ ವಿರುದ್ಧವಾದ ಗತಿಯನ್ನು ಕೊಡುವವನು.

ವ್ಯಾದಿಶಃ= ಸಜ್ಜನರಿಗೆ ವಿಶಿಷ್ಟವಾದ ತತ್ತ್ವೋಪದೇಶವನ್ನು ಮಾಡುವವನು.

ದಿಶಃ= ಮುಕ್ತರಿಗೆ ಸುಖವನ್ನು ಕೊಡುವವನು.

ಅನಾದಿರ್ಭೂರ್ಭುವೋ ಲಕ್ಷ್ಮ್ಯೀಃ ಸುವೀರೋ ರುಚಿರಾಂಗದಃ ।
ಜನನೋ ಜನಜನ್ಮಾದಿರ್ಭೀಮೋ ಭೀಮಪರಾಕ್ರಮಃ ॥೧೧೪॥

ಅನಾದಿಃ= ಸ್ವರೂಪ, ದೇಹ, ಇಂದ್ರಿಯ, ಕ್ರಿಯೆ ಗುಣಗಳಲ್ಲಿ ಆದಿರಹಿತನಾದವನು.

ಭೂಃ= ಪೂರ್ಣನಾದವನು.

ಭುವಃ= ಭೂಮಿಯಲ್ಲಿರುವವನು.

ಲಕ್ಷ್ಮ್ಯೀಃ= ಲಕ್ಷ್ಮ್ಯಯನ್ನು ಪತ್ನಿಯಾಗಿ ಹೊಂದಿರುವವನು.

ಸುವೀರಃ= ಚೆನ್ನಾಗಿ ಪರಾಕ್ರಮಶಾಲಿಯಾದವನು.

ರುಚಿರಾಂಗದಃ= ಮನೋಹರವಾದ ಅಂಗದಗಳನ್ನು ಧರಿಸಿರುವವನು.

ಜನನಃ= ಜೀವರಿಗೆ ದೇಹಸಂಬಂಧವನ್ನುಂಟು ಮಾಡುವವನು.

ಜನ್ಮಾದಿಃ= ಜೀವರ ಜನ್ಮಕ್ಕೆ ಕಾರಣನಾದವನು.

ಭೀಮಃ= ದುರ್ಜನರಿಗೆ ಭಯವನ್ನೂ, ಸಜ್ಜನರಿಗೆ ಮೋಕ್ಷವನ್ನು ಕೊಡುವವನು.

ಭೀಮಪರಾಕ್ರಮಃ= ಶತ್ರುಗಳಿಗೆ ಭಯವನ್ನುಂಟು ಮಾಡುವ ಪರಾಕ್ರಮ ಉಳ್ಳವನು.

ಆಧಾರನಿಲಯೋ ಧಾತಾ ಪುಷ್ಪಹಾಸಃ ಪ್ರಜಾಗರಃ ।
ಊರ್ಧ್ವಗಃ ಸತ್ಪಥಾಚಾರಃ ಪ್ರಾಣದಃ ಪ್ರಣವಃ ಪಣಃ ॥೧೧೫॥

ಆಧಾರನಿಲಯಃ= ಎಲ್ಲರಿಗೂ ಧಾರಕನೂ, ಆವಾಸಸ್ಥಾನನೂ ಆಗಿರುವವನು.

ಧಾತಾ= ಅನಿರುದ್ಧರೂಪದಿಂದ ಗರ್ಭವನ್ನು ಧರಿಸುವವನು.

ಪುಷ್ಪಹಾಸಃ= ಪುಷ್ಪದಂತೆ ಮನೋಹರವಾದ ಹಾಸವುಳ್ಳವನು.

ಪ್ರಜಾಗರಃ= ಯಾವಾಗಲೂ ಚೆನ್ನಾಗಿ ಎಚ್ಚೆತ್ತಿರುವವನು.

ಊರ್ಧ್ವಗಃ= ಎಲ್ಲರಿಗಿಂತಲೂ ಎತ್ತರದಲ್ಲಿ ಇರುವವನು.

ಸತ್ಪಥಾಚಾರಃ= ಸನ್ಮಾರ್ಗದಲ್ಲಿ ನಡೆಯುವವನು.

ಪ್ರಾಣದಃ= ರಾಮಾವತಾರದಲ್ಲಿ ಮೃತವಾದ ಕಪಿಸೈನ್ಯಕ್ಕೆ ಪುನಃ ಪ್ರಾಣವನ್ನು ಕೊಟ್ಟವನು.

ಪ್ರಣವಃ= ಪ್ರಣವ ಪ್ರತಿಪಾದ್ಯನು. ಚೆನ್ನಾಗಿ ಸ್ತುತ್ಯನಾದವನು.

ಪಣಃ= ಚಕ್ರವರ್ತಿಗಳನ್ನು ನಡೆಸುವವನು.

ಪ್ರಮಾಣಂ ಪ್ರಾಣನಿಲಯಃ ಪ್ರಾಣಕೃ(ಭೃ)ತ್ ಪ್ರಾಣಜೀವನಃ ।
ತತ್ತ್ವಂ ತತ್ತ್ವವಿದೇಕಾತ್ಮಾ ಜನ್ಮಮೃತ್ಯುಜರಾತಿಗಃ ॥೧೧೬॥

ಪ್ರಮಾಣಂ= ಧರ್ಮಾಧರ್ಮ ವಿಷಯದಲ್ಲಿ ಸರಿಯಾದ ಜ್ಞಾನವನ್ನು ಉಂಟು ಮಾಡುವವನು. ಸಕಲ ಪ್ರಮಾಣವೇದ್ಯನಾದವನು.

ಪ್ರಾಣನಿಲಯಃ= ಮುಖ್ಯಪ್ರಾಣನನ್ನು ನಿವಾಸಸ್ಥಾನವಾಗಿ ಹೊಂದಿದವನು.

ಪ್ರಾಣಕೃತ್= ಪ್ರಾಣನಿಗೆ ಶರೀರವನ್ನು ಉಂಟುಮಾಡುವವನು.

ಪ್ರಾಣಭೃತ್= ಮುಖ್ಯಪ್ರಾಣನನ್ನು ಧರಿಸಿರುವವನು.

ಪ್ರಾಣಜೀವನಃ= ಪ್ರಾಣನ ಮೂಲಕ ಜೀವರನ್ನು ಬದುಕಿಸುವವನು.

ತತ್ತ್ವಮ್= ಸ್ವತಂತ್ರ ತತ್ತ್ವನಾದವನು.

ತತ್ತ್ವವಿತ್= ಸ್ವತಂತ್ರ ಮತ್ತು ಅಸ್ವತಂತ್ರ ತತ್ತ್ವವನ್ನು ತಿಳಿದವನು.

ಏಕಾತ್ಮಾ= ಪ್ರಧಾನನಾದ ಸ್ವಾಮಿ.

ಜನ್ಮಮೃತ್ಯುಜರಾತಿಗಃ= ಜನ್ಮ-ಮೃತ್ಯು-ಜರೆಗಳನ್ನು ಮೀರಿದವನು. ಭಕ್ತರಿಗೆ ಜನ್ಮ-ಮೃತ್ಯು-ಜರೆಗಳನ್ನು ಮೀರಿಸುವವನು.

ಭೂರ್ಭುವಃ ಸ್ವಸ್ತರುಸ್ತಾರಃ ಸವಿತಾ ಪ್ರಪಿತಾಮಹಃ ।
ಯಜ್ಞೋ ಯಜ್ಞಪತಿರ್ಯಜ್ವಾ ಯಜ್ಞಾಂಗೋ ಯಜ್ಞವಾಹನಃ ॥೧೧೭॥

ಭೂರ್ಭುವಃ ಸ್ವಃ= ಭೂರ್ಭುವಸ್ವಃ ಲೋಕಕರ್ತಾ.

ತರುಃ= ಭಕ್ತರಿಗೆ ಕಲ್ಪತರುವಾದವನು.

ತಾರಃ= ಸಂಸಾರದಲ್ಲಿ ಬಳಲಿದ ಭಕ್ತರನ್ನು ಸ್ವೀಕರಿಸುವವನು.

ಸವಿತಾ= ಜಗತ್ತನ್ನು ಪ್ರಸವಿಸುವವನು.

ಪ್ರಪಿತಾಮಹಃ= ಜಗತ್ತಿಗೆ ಮುತ್ತಜ್ಜನಾದವನು (ಪಿತಾಮಹರಾದ ಬ್ರಹ್ಮದೇವರ ಪಿತೃವಾದವನು).

ಯಜ್ಞಃ= ಯಜನ ಯೋಗನಾದವನು.

ಯಜ್ಞಪತಿಃ= ಯಜ್ಞಗಳನ್ನು ರಕ್ಷಿಸುವವನು. ಯಜ್ಞಗಳಿಗೆ ಒಡೆಯನಾದವನು.

ಯಜ್ವಾ= ಯಜಮಾನನಲ್ಲಿದ್ದು ತಾನೇ ಯಜ್ಞವನ್ನು ಮಾಡುವವನು.

ಯಜ್ಞಾಂಗಃ= ಯಜ್ಞಾಂಗಗಳನ್ನು ತನ್ನ ಯಜ್ಞವರಾಹರೂಪದ ಅಂಗಗಳಿಂದ ಸೃಷ್ಟಿಸಿದವನು.

ಯಜ್ಞವಾಹನಃ= ಯಜ್ಞಗಳನ್ನು ನಿರ್ವಹಿಸುವವನು.

ಯಜ್ಞಭೃದ್ ಯಜ್ಞಕೃದ್ ಯಜ್ಞೀ ಯಜ್ಞಭುಗ್ ಯಜ್ಞಸಾಧನಃ ।
ಯಜ್ಞಾಂತಕೃದ್ ಯಜ್ಞಗುಹ್ಯಮನ್ನಮನ್ನಾದ ಏವ ಚ ॥೧೧೮॥

ಯಜ್ಞಭೃದ್= ಯಜ್ಞಗಳನ್ನು ಧರಿಸುವವನು. ಯಜ್ಞಗಳನ್ನು ಪೋಷಿಸುವವನು.

ಯಜ್ಞಕೃತ್= ಯಜ್ಞಗಳನ್ನು ಮಾಡುವವನು.

ಯಜ್ಞೀ= ನಿರ್ವಾಹಕನಾಗಿ, ಕರ್ತೃವಾಗಿ, ಭೋಕ್ತೃವಾಗಿ ಯಜ್ಞವನ್ನು ಹೊಂದಿದವನು.

ಯಜ್ಞಭುಗ್= ಯಜ್ಞಫಲವನ್ನು ಅನುಭವಿಸುವವನು.

ಯಜ್ಞಸಾಧನಃ= ಯಜ್ಞವನ್ನು ಅಥವಾ ವಿಹಿತಕರ್ಮಗಳನ್ನು ನಡೆಸುವವನು.

ಯಜ್ಞಾಂತಕೃತ್= ಯಜ್ಞದ ಅಥವಾ ಸತ್ಕರ್ಮಗಳ ನಿರ್ಣಯವನ್ನು ಮಾಡಿದವನು.

ಗುಹ್ಯಂ= ಯಜ್ಞಗುಹ್ಯನು. ಯಜ್ಞಕ್ಕೆ ಸಂಬಂಧಿಸಿದ ರಹಸ್ಯ ತತ್ತ್ವವಾದವನು.

ಅನ್ನಂ= ಪ್ರಳಯಕಾಲದಲ್ಲಿ ಎಲ್ಲರನ್ನೂ ಸಂಹರಿಸುವವನು. ಎಲ್ಲರಿಗೂ ತೃಪ್ತಿಯನ್ನು ಕೊಡುವವನು.

ಅನ್ನಾದಃ= ಭೋಗ್ಯವಾದ ಪದಾರ್ಥದ ಸಾರವನ್ನು ಭೋಗಿಸುವವನು.

ಆತ್ಮಯೋನಿಃ ಸ್ವಯಂಜಾತೋ ವೈಖಾನಃ ಸಾಮಗಾಯನಃ ।
ದೇವಕೀನಂದನಃ ಸ್ರಷ್ಟಾ ಕ್ಷಿತೀಶಃ ಪಾಪನಾಶನಃ ॥೧೧೯॥

ಆತ್ಮಯೋನಿಃ= ತನಗೆ ತಾನೇ ಕಾರಣನಾದವನು.

ಸ್ವಯಂಜಾತಃ= ತಾನಾಗಿಯೇ ತನ್ನಿಂದ ಜನಿಸಿದವನು.

ವೈಖಾನಃ= ಮುಕ್ತರಿಗೆ ಒಡೆಯನಾದವನು.

ಸಾಮಗಾಯನಃ= ಸಾಮಗಾನವನ್ನು ಮಾಡುವ ಚತುರ್ಮುಖನನ್ನು ಪಡೆದವನು.

ದೇವಕೀನಂದನಃ= ದೇವತೆಗಳಿಗೆ ಸಂತೋಷವನ್ನು ಕೊಡುವ ಲಕ್ಷ್ಮಿಯನ್ನು ಆನಂದಪಡಿಸುವವನು.

ಸ್ರಷ್ಟಾ= ದೇವತೆಗಳಿಗೆ ಮೋಕ್ಷವನ್ನು ಕೊಡುವವನು.

ಕ್ಷಿತೀಶಃ= ಭೂಮಿಗೆ ಒಡೆಯನಾದವನು. ರಾಜರಲ್ಲಿ ರಾಜರಾಜೇಶ್ವರ ರೂಪದಿಂದ ಇರುವವನು.

ಪಾಪನಾಶನಃ= ಪಾಪವನ್ನು ಪರಿಹರಿಸುವವನು. ಪಾಪವನ್ನು ಮಾಡಿದವರಿಗೆ ನಾಶವನ್ನು ಉಂಟು ಮಾಡುವವನು.

ಶಂಖಭೃನ್ನಂದಕೀ ಚಕ್ರೀ ಶಾರ್ಙ್ಗಧನ್ವಾ ಗದಾಧರಃ ।
ರಥಾಂಗಪಾಣಿರಕ್ಷೋಭ್ಯಃ ಸರ್ವಪ್ರಹರಣಾಯುಧಃ ॥೧೨೦॥

ಶಂಖಭೃತ್= ಶಂಖ ಸ್ವರೂಪಳಾದ ಶ್ರೀದೇವಿಯನ್ನು ಧರಿಸಿಕೊಂಡಿರುವವನು.

ನಂದಕೀ= ನಂದಕವೆಂಬ ಖಡ್ಗವನ್ನು ಧರಿಸಿರುವವನು.

ಚಕ್ರೀ= ಸುದರ್ಶನ ಚಕ್ರವನ್ನು ಧರಿಸಿದವನು.

ಶಾರ್ಙ್ಗಧನ್ವಾ= ಶಾರ್ಙ್ಗಧನುಸ್ಸನ್ನು ಧರಿಸಿದವನು.

ಗದಾಧರಃ= ಕೌಮೋದಕೀ ಗದೆಯನ್ನು ಧರಿಸಿರುವವನು.

ರಥಾಂಗಪಾಣಿಃ= ಹಸ್ತದಲ್ಲಿ ಯಾವಾಗಲೂ ಸುದರ್ಶನವನ್ನು ಧರಿಸಿರುವವನು.

ಅಕ್ಷೋಭ್ಯಃ= ತನ್ನ ಮಹಿಮೆಯಿಂದ ಎಂದೂ ವಿಚಲಿತನಾಗದವನು.

ಸರ್ವಪ್ರಹರಣಾಯುಧಃ= ಎಲ್ಲ ದುಷ್ಟರನ್ನೂ ಹೊಡೆಯಬಲ್ಲ ಸಕಲ ಆಯುಧಗಳನ್ನು ಹೊಂದಿರುವವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಿಕೇ ಪರ್ವಣಿ ದಾನಧರ್ಮೇ ಶ್ರೀಮದ್ವಾದಿರಾಜತೀರ್ಥಪೂಜ್ಯಚರಣ
ವಿರಚಿತಲಕ್ಷಾಂಕಾರಾಖ್ಯಟೀಕಾಯಾಂ ವಿಷ್ಣೋರ್ದಿವ್ಯಸಹಸ್ರನಾಮವ್ಯಾಖ್ಯಾನಂ ಸಂಪೂರ್ಣಮ್ ॥

ಭೀಷ್ಮಃ

ಇತೀದಂ ಕೀರ್ತನೀಯಸ್ಯ ಕೇಶವಸ್ಯ ಮಹಾತ್ಮನಃ ।
ನಾಮ್ನಾಂ ಸಹಸ್ರಂ ದಿವ್ಯಾನಾಮಶೇಷೇಣ ಪ್ರಕೀರ್ತಿತಮ್ ॥೧೨೧॥

ಭೀಷ್ಮ– ಹೀಗೆ ನಾನು ಕೀರ್ತನೀಯನಾದ, ಮಹಾತ್ಮನಾದ ಕೇಶವನ ದಿವ್ಯ ಸಹಸ್ರನಾಮಗಳ ಕೀರ್ತನೆಯನ್ನು ಹೇಳಿದ್ದೇನೆ.

ಯ ಇದಂ ಶೃಣುಯಾನ್ನಿತ್ಯಂ ಯಶ್ಚಾಪಿ ಪರಿಕೀರ್ತಯೇತ್ ।
ನಾಶುಭಂ ಪ್ರಾಪ್ನುಯಾತ್ ಕಿಂಚಿತ್ ಸೋಮುತ್ರೇಹ ಚ ಮಾನವಃ ॥

ಯಾವ ಮಾನವನು ಇದನ್ನು ಕೇಳುತ್ತಾನೆಯೋ ಅಥವಾ ಕೀರ್ತಿಸುತ್ತಾನೆಯೋ ಅವನು ಈ ಲೋಕದಲ್ಲಾಗಲೀ, ಪರಲೋಕದಲ್ಲಾಗಲೀ ಯಾವ ಅಶುಭವನ್ನೂ ಹೊಂದುವುದಿಲ್ಲ.

ವೇದಾಂತಗೋ ಬ್ರಾಹ್ಮಣಃ ಸ್ಯಾತ್‌ಕ್ಷತ್ರಿಯೋ ವಿಜಯೀ ಭವೇತ್ ।
ವೈಶ್ಯೋ ಧನಸಮೃದ್ಧಃ ಸ್ಯಾಚ್ಛೂದ್ರಃ ಸುಖಮವಾಪ್ನುಯಾತ್ ॥೧೨೩॥

ಬ್ರಾಹ್ಮಣನು ವೇದಾದಿ ಜ್ಞಾನಸಂಪನ್ನನಾಗುತ್ತಾನೆ. ಕ್ಷತ್ರಿಯನು ವಿಜಯಶಾಲಿ ಆಗುತ್ತಾನೆ. ವೈಶ್ಯನು ಧನಸಮೃದ್ಧಿಯನ್ನು ಹೊಂದುತ್ತಾನೆ. ಶೂದ್ರನು ಸುಖವನ್ನು ಹೊಂದುತ್ತಾನೆ.

ಧರ್ಮಾರ್ಥೀ ಪ್ರಾಪ್ನುಯಾದ್ ಧರ್ಮಮರ್ಥಾರ್ಥೀ ಚಾರ್ಥಮಾಪ್ನುಯಾತ್।
ಕಾಮಾನವಾಪ್ನುಯಾತ್ ಕಾಮೀ ಪ್ರಜಾರ್ಥೀ ಚಾಪ್ನುಯಾತ್ ಪ್ರಜಾಃ ॥

ಧರ್ಮವನ್ನು ಬಯಸುವವನು ಧರ್ಮವನ್ನು ಪಡೆಯುತ್ತಾನೆ. ಧನವನ್ನು ಬಯಸುವವನು ಧನವನ್ನು ಪಡೆಯುತ್ತಾನೆ. ಭೋಗವನ್ನು ಬಯಸುವವನು ಭೋಗವನ್ನು ಪಡೆಯುತ್ತಾನೆ. ಸಂತತಿಯನ್ನು ಬಯಸುವವನು ಸಂತತಿಯನ್ನು ಪಡೆಯುತ್ತಾನೆ.

ಭಕ್ತಿಮಾನ್ ಯಃ ಸದೋತ್ಥಾಯ ಶುಚಿಸ್ತದ್ಗತಮಾನಸಃ ।
ಸಹಸ್ರಂ ವಾಸುದೇವಸ್ಯ ನಾಮ್ನಾಮೇತತ್ ಪ್ರಕೀರ್ತಯೇತ್ ॥೧೨೫॥

ಯಶಃ ಪ್ರಾಪ್ನೋತಿ ವಿಪುಲಂ ಜ್ಞಾತಿಪ್ರಾಧಾನ್ಯಮೇವ ಚ ।
ಅಚಲಾಂ ಶ್ರಿಯಮಾಪ್ನೋತಿ ಶ್ರೇಯಶ್ಚಾಪ್ನೋತ್ಯನುತ್ತಮಮ್ ॥೧೨೬॥

ಯಾವನು ಯಾವಾಗಲೂ ಶ್ರದ್ಧಾಯುಕ್ತನಾಗಿ ಶುಚಿಯಾಗಿ ವಿಷ್ಣುವನ್ನೇ ಧ್ಯಾನಿಸುತ್ತಾ ಭಕ್ತಿಯಿಂದ ವಾಸುದೇವನ ಈ ಸಹಸ್ರನಾಮವನ್ನು ಕೀರ್ತಿಸುತ್ತಾನೆಯೋ ಅವನು ವಿಪುಲವಾದ ಯಶಸ್ಸನ್ನು ಹೊಂದುತ್ತಾನೆ. ಬಂಧುಗಳಲ್ಲಿ ಶ್ರೇಷ್ಠತೆಯನ್ನು ಹೊಂದುತ್ತಾನೆ. ಅಚಲವಾದ ಸಂಪತ್ತನ್ನು ಹೊಂದುತ್ತಾನೆ. ಶ್ರೇಷ್ಠವಾದ ಶ್ರೇಯಸ್ಸನ್ನು ಪಡೆಯುತ್ತಾನೆ.

ನ ಭಯಂ ಕ್ವಚಿದಾಪ್ನೋತಿ ವೀರ್ಯಂ ತೇಜಶ್ಚ ವಿಂದತಿ ।
ಭವತ್ಯರೋಗೋ ದ್ಯುತಿಮಾನ್ ಬಲರೂಪಗುಣಾನ್ವಿತಃ ॥೧೨೭॥

ಎಂದೂ ಭಯವನ್ನು ಹೊಂದುವುದಿಲ್ಲ. ಪರಾಕ್ರಮವನ್ನು ಮತ್ತು ತೇಜಸ್ಸನ್ನು ಪಡೆಯುತ್ತಾನೆ. ರೋಗನಿವೃತ್ತಿಯನ್ನು ಹೊಂದಿ, ಬಲ-ರೂಪ-ಕಾಂತಿಗಳನ್ನು ಹೊಂದುತ್ತಾನೆ.

ರೋಗಾರ್ತೋ ಮುಚ್ಯತೇ ರೋಗಾದ್ ಬದ್ಧೋ ಮುಚ್ಯೇತ ಬಂಧನಾತ್ ।
ಭಯಾನ್ಮುಚ್ಯೇತ ಭೀತಶ್ಚ ಮುಚ್ಯೇತಾಪನ್ನ ಆಪದಃ ॥೧೨೮॥

ರೋಗಾರ್ತನಾದವನು ರೋಗದಿಂದ ಮುಕ್ತನಾಗುತ್ತಾನೆ. ಬಂಧನಕ್ಕೆ ಒಳಗಾದವನು ಬಂಧನದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಭೀತನಾದವನು ಭಯದಿಂದ ಮುಕ್ತನಾಗುತ್ತಾನೆ. ಆಪತ್ತಿಗೆ ಸಿಲುಕಿದವನು ಆಪತ್ತಿನ ಪರಿಹಾರವನ್ನು ಹೊಂದುತ್ತಾನೆ.

ದುರ್ಗಾಣ್ಯತಿತರತ್ಯಾಶು ಪುರುಷಃ ಪುರುಷೋತ್ತಮಮ್ ।
ಸ್ತುವನ್ನಾಮಸಹಸ್ರೇಣ ನಿತ್ಯಂ ಭಕ್ತಿಸಮನ್ವಿತಃ ॥೧೨೯॥

ನಿತ್ಯವೂ ಭಕ್ತಿಸಹಿತನಾಗಿ ಸಹಸ್ರನಾಮಗಳಿಂದ ಪುರುಷೋತ್ತಮನನ್ನು ಸ್ತುತಿಸುವ ಪುರುಷನು ಸಮಸ್ತ ಕಷ್ಟಗಳನ್ನೂ ದಾಟುತ್ತಾನೆ.

ವಾಸುದೇವಾಶ್ರಯೋ ಮರ್ತ್ಯೋ ವಾಸುದೇವಪರಾಯಣಃ ।
ಸರ್ವಪಾಪವಿಶುದ್ಧಾತ್ಮಾ ಯಾತಿ ಬ್ರಹ್ಮ ಸನಾತನಮ್ ॥೧೩೦॥

ವಾಸುದೇವನನ್ನು ಆಶ್ರಯಿಸಿ, ವಾಸುದೇವನನ್ನೇ ಶ್ರೇಷ್ಠವಾದ ಆಶ್ರಯವೆಂದು ತಿಳಿದು ಸರ್ವಪಾಪಗಳಿಂದಲೂ ದೂರನಾಗಿ, ವೇದಪ್ರತಿಪಾದ್ಯನಾದ ಬ್ರಹ್ಮನ ಪ್ರಾಪ್ತಿಯನ್ನು ಹೊಂದುತ್ತಾನೆ.

ನ ವಾಸುದೇವಭಕ್ತಾನಾಮಶುಭಂ ವಿದ್ಯತೇ ಕ್ವಚಿತ್ ।
ಜನ್ಮಮೃತ್ಯುಜರಾವ್ಯಾಧಿಭಯಂ ನೈವೋಪಜಾಯತೇ ॥೧೩೧॥

ವಾಸುದೇವನ ಭಕ್ತರಿಗೆ ಯಾವ ಅಶುಭವೂ ಉಂಟಾಗುವುದಿಲ್ಲ. ಜನ್ಮ-ಮರಣ-ಜರಾ-ವ್ಯಾಧಿಗಳ ಭಯ ಉಂಟಾಗುವುದಿಲ್ಲ.

ಇಮಂ ಸ್ತವಮಧೀಯಾನಃ ಶ್ರದ್ಧಾಭಕ್ತಿಸಮನ್ವಿತಃ ।
ಯುಜ್ಯೇತಾತ್ಮಸುಖಕ್ಷಾಂತಿಶ್ರೀಧೃತಿಸ್ಮೃತಿಕೀರ್ತಿಭಿಃ ॥೧೩೨॥

ಶ್ರದ್ಧಾಭಕ್ತಿ ಸಮನ್ವಿತನಾಗಿ ಈ ಸ್ತೋತ್ರವನ್ನು ಅಧ್ಯಯನ ಮಾಡುವವನು ಆತ್ಮಸುಖ, ಕ್ಷಮೆ, ಸಂಪತ್ತು , ಧೈರ್ಯ, ಸ್ಮೃತಿ ಮತ್ತು ಕೀರ್ತಿಗಳನ್ನು ಹೊಂದುತ್ತಾನೆ.

ನ ಕ್ರೋಧೋ ನ ಚ ಮಾತ್ಸರ್ಯಂ ನ ಲೋಭೋ ನಾಶುಭಾ ಮತಿಃ ।
ಭವಂತಿ ಕೃತಪುಣ್ಯಾನಾಂ ಭಕ್ತಾನಾಂ ಪುರುಷೋತ್ತಮೇ ॥೧೩೩॥

ಪುರುಷೋತ್ತಮನಲ್ಲಿ ಭಕ್ತಿಯನ್ನು ಹೊಂದಿದ ಪುಣ್ಯವಂತರಿಗೆ ಕ್ರೋಧವಾಗಲೀ, ಮಾತ್ಸರ್ಯವಾಗಲೀ, ಲೋಭವಾಗಲೀ, ಅಶುಭವಾದ ಮತಿಯಾಗಲೀ ಉಂಟಾಗುವುದಿಲ್ಲ.

ದ್ಯೌಃ ಸಚಂದ್ರಾರ್ಕನಕ್ಷತ್ರಾ ಖಂ ದಿಶೋ ಭೂರ್ಮಹೋದಧಿಃ ।
ವಾಸುದೇವಸ್ಯ ವೀರ್ಯೇಣ ವಿಧೃತಾನಿ ಮಹಾತ್ಮನಃ ॥೧೩೪॥

ಚಂದ್ರ-ಸೂರ್ಯ-ನಕ್ಷತ್ರಗಳಿಂದ ಸಹಿತವಾದ ಅಂತರಿಕ್ಷಲೋಕ, ಆಕಾಶ, ದಿಕ್ಕುಗಳು, ಭೂಮಿ, ಸಮುದ್ರ ಎಲ್ಲವೂ ಮಹಾತ್ಮನಾದ ವಾಸುದೇವನ ವೀರ್ಯದಿಂದ ಧರಿಸಲ್ಪಟ್ಟಿವೆ.

ಸಸುರಾಸುರಗಂಧರ್ವಂ ಸಯಕ್ಷೋರಗರಾಕ್ಷಸಮ್ ।
ಜಗದ್ವಶೇ ವರ್ತತೇದಂ ಕೃಷ್ಣಸ್ಯ ಸಚರಾಚರಮ್ ॥೧೩೫॥

ಸುರಾಸುರಗಂಧರ್ವರಿಂದ ಸಹಿತವಾದ, ಯಕ್ಷೋರಗರಾಕ್ಷಸರಿಂದ ಸಹಿತವಾದ ಚರಾಚರ ಸಹಿತವಾದ ಈ ಜಗತ್ತು ಕೃಷ್ಣನ ವಶದಲ್ಲಿದೆ.

ಇಂದ್ರಿಯಾಣಿ ಮನೋ ಬುದ್ಧಿಃ ಸತ್ತ್ವಂ ತೇಜೋ ಬಲಂ ಧೃತಿಃ ।
ವಾಸುದೇವಾತ್ಮಕಾನ್ಯಾಹುಃ ಕ್ಷೇತ್ರಂ ಕ್ಷೇತ್ರಜ್ಞ ಏವ ಚ ॥೧೩೬॥

ಇಂದ್ರಿಯಗಳು, ಮನಸ್ಸು, ಬುದ್ಧಿ, ಸತ್ತ್ವ, ತೇಜಸ್ಸು, ಬಲ, ಧೈರ್ಯ, ಪಂಚ ಮಹಾಭೂತಗಳು, ಜೀವ- ಎಲ್ಲರೂ ವಾಸುದೇವನಿಗೆ ಅಧೀನರಾದವರು ಎಂದು ಜ್ಞಾನಿಗಳು ಹೇಳುತ್ತಾರೆ.

ಸರ್ವಾಗಮಾನಾಮಾಚಾರಃ ಪ್ರಥಮಂ ಪರಿಕಲ್ಪ್ಯತೇ ।
ಆಚಾರಪ್ರಭವೋ ಧರ್ಮೋ ಧರ್ಮಸ್ಯ ಪ್ರಭುರಚ್ಯುತಃ ॥೧೩೭॥

ಎಲ್ಲಾ ಆಗಮಗಳಲ್ಲಿಯೂ ಮೊದಲು ಆಚಾರವು ಹೇಳಲ್ಪಡುತ್ತದೆ. ಆಚಾರದಿಂದ ಧರ್ಮವುಂಟಾಗುತ್ತದೆ. ಅಚ್ಯುತನು ಧರ್ಮಕ್ಕೆ ಪ್ರಭುವಾದವನು.

ಋಷಯಃ ಪಿತರೋ ದೇವಾ ಮಹಾಭೂತಾನಿ ಧಾತವಃ ।
ಜಂಗಮಾಜಂಗಮಂ ಚೇದಂ ಜಗನ್ನಾರಾಯಣೋದ್ಭವಮ್ ॥೧೩೮॥

ಋಷಿಗಳು, ಪಿತೃಗಳು, ದೇವತೆಗಳು, ಪಂಚಮಹಾಭೂತಗಳು, ಸುವರ್ಣಾದಿ ಧಾತುಗಳು, ಸ್ಥಿರ-ಚರವಾದ ಈ ಜಗತ್ತೆಲ್ಲವೂ ನಾರಾಯಣನಿಂದ ಜನಿಸಿದೆ.

ಯೋಗೋ ಜ್ಞಾನಂ ತಥಾ ಸಾಂಖ್ಯಂ ವಿದ್ಯಾಃ ಶಿಲ್ಪಾನಿ ಕರ್ಮ ಚ ।
ವೇದಾಃ ಶಾಸ್ತ್ರಾಣಿ ವಿಜ್ಞಾನಮೇತತ್ಸರ್ವಂ ಜನಾರ್ದನಾತ್ ॥೧೩೯॥

ಯೋಗ, ಜ್ಞಾನ, ಸಾಂಖ್ಯ , ವಿದ್ಯೆಗಳು, ಕುಶಲ ಕಲೆಗಳು, ಕರ್ಮಗಳು, ವೇದಗಳು, ಶಾಸ್ತ್ರಗಳು, ವಿಜ್ಞಾನ- ಎಲ್ಲವೂ ಜನಾರ್ದನನಿಂದ ಜನಿಸಿವೆ.

ಏಕೋ ವಿಷ್ಣುರ್ಮಹದ್ಭೂತಂ ಪೃಥಗ್ಭೂತಾನ್ಯನೇಕಶಃ ।
ತ್ರೀಲ್ಲೋಕಾನ್ವ್ಯಾಪ್ಯ ಭೂತಾತ್ಮಾ ಭುಂಕ್ತೇ ವಿಶ್ವಭುಗವ್ಯಯಃ ॥೧೪೦॥

ವಿಷ್ಣುವು ಪ್ರಧಾನನಾದ ದೊಡ್ಡದಾದ ಚೇತನ. ವಿಶ್ವಭೋಜನನೂ, ಅವ್ಯಯನೂ ಆದ ಅವನು ಮೂರುಲೋಕಗಳನ್ನು ವ್ಯಾಪಿಸಿ ಸರ್ವಭೂತಾಂತರ್ಯಾಮಿಯಾಗಿ ಆ ಭೂತಗಳು (ಜೀವರು) ಅನುಭವಿಸುವ ಭೋಗಗಳ ಸಾರಭಾಗವನ್ನು ಭೋಗಿಸುತ್ತಾನೆ.

ಇಮಂ ಸ್ತವಂ ಭಗವತೋ ವಿಷ್ಣೋರ್ವ್ಯಾಸೇನ ಕೀರ್ತಿತಮ್ ।
ಪಠೇದ್ ಯ ಇಚ್ಛೇತ್ ಪುರುಷಃ ಶ್ರೇಯಃ ಪ್ರಾಪ್ತುಂ ಸುಖಾನಿ ಚ ॥

ಯಾವ ಪುರುಷನು ಶ್ರೇಯಸ್ಸನ್ನೂ, ಸುಖವನ್ನೂ ಹೊಂದಲು ಬಯಸುವನೋ ಅವನು ವೇದವ್ಯಾಸರು ಹೇಳಿದ ಭಗವಂತನ ಈ ಸ್ತೋತ್ರವನ್ನು ಪಠಿಸಬೇಕು.

ವಿಶ್ವೇಶ್ವರಮಜಂ ದೇವಂ ಜಗತಃ ಪ್ರಭವಾಪ್ಯಯಮ್ ।
ಭಜಂತಿ ಯೇ ಪುಷ್ಕರಾಕ್ಷಂ ನ ತೇ ಯಾಂತಿ ಪರಾಭವಮ್ ॥೧೪೨॥

ವಿಶ್ವೇಶ್ವರನೂ, ಜನನ ರಹಿತನೂ, ಕ್ರೀಡಾದಿ ಗುಣವಿಶಿಷ್ಟನೂ, ಜಗತ್ತಿನ ಉತ್ಪತ್ತಿ-ಸಂಹಾರಗಳಿಗೆ ಕಾರಣನೂ ಆದ ಪುಂಡರೀಕಾಕ್ಷನನ್ನು ಭಜಿಸುವವನು ಎಂದೂ ಪರಾಭವವನ್ನು ಹೊಂದುವುದಿಲ್ಲ.

ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯ ಚ ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥೧೪೩॥

ಬ್ರಾಹ್ಮಣರಲ್ಲಿ ವತ್ಸಲನಾದ, ದೇವನಾದ, ಗೋ-ಬ್ರಾಹ್ಮಣಹಿತನಾದ, ಜಗತ್ತಿಗೆ ಹಿತನಾದ, ವೇದಪ್ರತಿಪಾದ್ಯನಾದ ಕೃಷ್ಣನಿಗೆ ನಮಸ್ಕಾರ, ನಮಸ್ಕಾರ, ನಮಸ್ಕಾರ.

ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಮ್ ।
ಸರ್ವದೇವನಮಸ್ಕಾರಃ ಕೇಶವಂ ಪ್ರತಿ ಗಚ್ಛತಿ ॥೧೪೪॥

ಆಕಾಶದಿಂದ ಬಿದ್ದ ನೀರು ಸಮುದ್ರವನ್ನು ಸೇರುವಂತೆ ಎಲ್ಲ ದೇವತೆಗಳಿಗೆ ಮಾಡಿದ ನಮಸ್ಕಾರವು ಅಂತರ್ಯಾಮಿಯಾದ ಕೇಶವನನ್ನು ಹೋಗಿ ಸೇರುತ್ತದೆ.

ಸರ್ವವೇದೇಷು ಯತ್ಪುಣ್ಯಂ ಸರ್ವತೀರ್ಥೇಷು ಯತ್ಫಲಮ್ ।
ತತ್ಫಲಂ ಪುರುಷ ಆಪ್ನೋತಿ ಸ್ತುತ್ವಾ ದೇವಂ ಜನಾರ್ದನಮ್ ॥೧೪೫॥

ಕ್ರೀಡಾದಿ ಗುಣವಿಶಿಷ್ಟನಾದ ಜನಾರ್ದನನನ್ನು ಸ್ತೋತ್ರ ಮಾಡುವವನು ಎಲ್ಲ ವೇದಗಳ ಅಧ್ಯಯನದ ಪುಣ್ಯವನ್ನೂ ಎಲ್ಲ ತೀರ್ಥಗಳ ಸ್ನಾನದ ಫಲವನ್ನೂ ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ವಿಷ್ಣೋಃ ಸಹಸ್ರನಾಮಕೀರ್ತನಂ ನಾಮ
ಏಕೋನಚತ್ವಾರಿಂಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಮೂವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ನಲವತ್ತನೆಯ ಅಧ್ಯಾಯ

ಬ್ರಾಹ್ಮಣಪ್ರಶಂಸೆ

ಯುಧಿಷ್ಠಿರಃ

ಕೇ ಪೂಜ್ಯಾಃ ಕೇ ನಮಸ್ಕಾರ್ಯಾಃ ಕಥಂ ವರ್ತೇತ ಕೇಷು ಚ ।
ಕಿಮಾಚಾರಃ ಕೀದೃಶೇಷು ಪಿತಾಮಹ ನ ರಿಷ್ಯತೇ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ಪೂಜ್ಯರಾದವರು ಯಾರು? ನಮಸ್ಕಾರಕ್ಕೆ ಅರ್ಹರಾದವರು ಯಾರು? ಯಾರಲ್ಲಿ ಹೇಗೆ ನಡೆದುಕೊಳ್ಳಬೇಕು? ಯಾರಲ್ಲಿ ಎಂತಹ ಆಚಾರವು ನಾಶವನ್ನು ಹೊಂದುವುದಿಲ್ಲ?

ಭೀಷ್ಮಃ

ಬ್ರಾಹ್ಮಣಾನಾಂ ಪರಿಭವಃ ಸಾದಯೇದಪಿ ದೇವತಾಃ ।
ಬ್ರಾಹ್ಮಣಾನಾಂ ನಮಸ್ಕರ್ತಾ ಯುಧಿಷ್ಠಿರ ನ ರಿಷ್ಯತೇ ॥೨॥

ಭೀಷ್ಮ– ಬ್ರಾಹ್ಮಣರಿಗೆ ಅವಮಾನವನ್ನು ಮಾಡಿದರೆ ದೇವತೆಗಳಿಗೂ ವಿನಾಶವುಂಟಾದೀತು. ಎಲೈ ಯುಧಿಷ್ಠಿರನೇ, ಬ್ರಾಹ್ಮಣರಿಗೆ ನಮಸ್ಕಾರ ಮಾಡುವವನು ಕ್ಷಯವನ್ನು ಹೊಂದುವುದಿಲ್ಲ.

ತೇ ಪೂಜ್ಯಾಸ್ತೇ ನಮಸ್ಕಾರ್ಯಾ ವರ್ತೇಥಾಸ್ತೇಷು ಪುತ್ರವತ್ ।
ತೇ ಹಿ ಲೋಕಾನಿಮಾನ್ ಸರ್ವಾನ್ ಧಾರಯಂತಿ ಮನೀಷಿಣಃ ॥೩॥

ಅವರೇ ಪೂಜೆಗೆ ಅರ್ಹರಾದವರು. ನಮಸ್ಕಾರಕ್ಕೆ ಅರ್ಹರಾದವರು. ಅವರಲ್ಲಿ ಮಕ್ಕಳಂತೆ ನಡೆದುಕೊ. ಜ್ಞಾನಿಗಳಾದ ಅವರು ಈ ಎಲ್ಲಾ ಲೋಕಗಳನ್ನೂ ಧರಿಸುವವರು.

ಬ್ರಾಹ್ಮಣಾಃ ಸರ್ವಲೋಕಾನಾಂ ಮಹಾಂತೋ ಧರ್ಮಸೇತವಃ ।
ಧನತ್ಯಾಗಾಭಿರಾಮಾಶ್ಚ ವಾಕ್ಸಂಯಮರತಾಶ್ಚ ಯೇ ॥೪॥

ಬ್ರಾಹ್ಮಣರು ಎಲ್ಲ ಲೋಕಗಳಿಗೂ ದೊಡ್ಡ ಧರ್ಮ ಸೇತುವೆಗಳು. ಧನತ್ಯಾಗವನ್ನು ಮಾಡಿ ಸಂತೋಷದಿಂದ ಕೂಡಿರುತ್ತಾರೆ. ಮೌನವ್ರತದಲ್ಲಿ ರತರಾಗಿರುತ್ತಾರೆ.

ರಮಣೀಯಾಶ್ಚ ಭೂತಾನಾಂ ನಿಧಾನಂ ಚ ಧೃತವ್ರತಾಃ ।
ಪ್ರಣೇತಾರಶ್ಚ ಲೋಕಾನಾಂ ಶಾಸ್ತ್ರಾಣಾಂ ಚ ಯಶಸ್ವಿನಃ ॥೫॥

ಎಲ್ಲ ಪ್ರಾಣಿಗಳಿಗೂ ಮನೋಹರರಾಗಿರುತ್ತಾರೆ. ಆಶ್ರಯರಾಗಿರುತ್ತಾರೆ. ವ್ರತಗಳನ್ನು ಧರಿಸಿರುತ್ತಾರೆ. ಲೋಕಗಳನ್ನು ಮತ್ತು ಶಾಸ್ತ್ರಗಳನ್ನು ಕೀರ್ತಿವಂತರಾದ ಅವರು ಮುಂದೆ ನಡೆಸಿಕೊಂಡು ಹೋಗುತ್ತಾರೆ.

ತಪೋ ಯೇಷಾಂ ಧನಂ ನಿತ್ಯಂ ವಾಕ್ ಚೈವ ವಿಪುಲಂ ಬಲಮ್ ।
ಪ್ರಭವಶ್ಚಾಪಿ ಧರ್ಮಾಣಾಂ ಧರ್ಮಜ್ಞಾಃ ಸೂಕ್ಷ್ಮದರ್ಶಿನಃ ॥೬॥

ಅವರಿಗೆ ನಿತ್ಯವೂ ತಪಸ್ಸೇ ಧನ. ವಾಣಿಯೇ ವಿಪುಲವಾದ ಬಲ. ಧರ್ಮಜ್ಞರೂ, ಸೂಕ್ಷ್ಮದರ್ಶಿಗಳೂ ಆದ ಅವರು ಧರ್ಮಗಳ ಉಗಮಸ್ಥಾನರಾಗಿರುತ್ತಾರೆ.

ಧರ್ಮಕಾಮಾಃ ಸ್ಥಿತಾ ಧರ್ಮೇ ಸುಕೃತೈರ್ಧರ್ಮಸೇತವಃ ।
ಯಾನುಪಾಶ್ರಿತ್ಯ ಜೀವಂತಿ ಪ್ರಜಾಃ ಸರ್ವಾಶ್ಚತುರ್ವಿಧಾಃ ॥೭॥

ಧರ್ಮಕಾಮರಾಗಿರುತ್ತಾರೆ. ಧರ್ಮದಲ್ಲಿಯೇ ಇರುತ್ತಾರೆ. ತಮ್ಮ ಸತ್ಕರ್ಮಗಳಿಂದ ಧರ್ಮಸೇತುವೆಗಳಾಗಿರುತ್ತಾರೆ. ಅವರನ್ನು ಉಪಜೀವಿಸಿ ನಾಲ್ಕು ವಿಧವಾದ ಎಲ್ಲಾ ಪ್ರಜೆಗಳೂ ಜೀವಿಸುತ್ತಾರೆ.

ಪಂಥಾನಃ ಸರ್ವನೇತಾರೋ ಯಜ್ಞವಾಹಾಃ ಸನಾತನಾಃ ।
ಪಿತೃಪೈತಾಮಹೀಂ ಗುರ್ವೀಮುದ್ವಹಂತಿ ಧುರಂ ಸದಾ ॥೮॥

ಅವರು ಮಾರ್ಗರಾದವರು. ಮಾರ್ಗದರ್ಶಕರಾದವರು. ಯಜ್ಞವನ್ನು ನಿರ್ವಹಿಸುವವರು. ವೇದಪ್ರತಿಪಾದ್ಯರು. ಪಿತೃ-ಪಿತಾಮಹರಿಂದ ಬಂದ ದೊಡ್ಡ ಧರ್ಮರಕ್ಷಣೆಯ ಭಾರವನ್ನು ಹೊತ್ತಿರುತ್ತಾರೆ.

ಧುರಿ ಯೇ ನಾವಸೀದಂತಿ ವಿಷಮೇ ಸದ್ಗವಾ ಇವ ।
ಪಿತೃದೇವಾತಿಥಿಮುಖಾ ಹವ್ಯಕವ್ಯಾಗ್ರಭೋಜಿನಃ ॥೯॥

ವಿಷಮ ಪರಿಸ್ಥಿತಿಯಲ್ಲಿ ಸಿಲುಕಿದ ಅವರು ಎತ್ತುಗಳಂತೆ ಭಾರವನ್ನು ಸಂಕಟ ಒದಗಿದಾಗ ವಿಷಾದ ಪಡುವುದಿಲ್ಲ. ಪಿತೃಗಳನ್ನು, ದೇವತೆಗಳನ್ನು ಮತ್ತು ಅತಿಥಿಗಳನ್ನು ಪೂಜಿಸುತ್ತಾ ಹವ್ಯ-ಕವ್ಯಗಳ ಅಗ್ರಭೋಜಿಗಳಾಗಿರುತ್ತಾರೆ.

ಭೋಜನಾದೇವ ಯೇ ಲೋಕಾನ್ ತ್ರಾಯಂತೇ ಮಹತೋ ಭಯಾತ್।
ದೀಪಾಃ ಸರ್ವಸ್ಯ ಲೋಕಸ್ಯ ಚಕ್ಷುಶ್ಚಕ್ಷುಷ್ಮತಾಮಪಿ ॥೧೦॥

ಕೇವಲ ಭೋಜನದಿಂದಲೇ ಅವರು ಲೋಕಗಳನ್ನು ದೊಡ್ಡ ಭಯದಿಂದ ರಕ್ಷಿಸುತ್ತಾರೆ. ಅವರು ಎಲ್ಲ ಲೋಕಗಳಿಗೂ ದೀಪಪ್ರಾಯರಾದವರು. ಕಣ್ಣುಗಳುಳ್ಳವರಿಗೂ ಕಣ್ಣಿನಂತಿರುವವರು.

ಸರ್ವಶಿಲ್ಪಾದಿನಿಧಯೋ ನಿಪುಣಾಃ ಸೂಕ್ಷ್ಮದರ್ಶಿನಃ ।
ಗತಿಜ್ಞಾಃ ಸರ್ವಭೂತಾನಾಮಧ್ಯಾತ್ಮಗತಿಚಿಂತಕಾಃ ॥೧೧॥

ಎಲ್ಲ ಕಲಾ ವಿದ್ಯೆಗಳಿಗೆ ಆಶ್ರಯರಾದವರು. ನಿಪುಣರು. ಸೂಕ್ಷ್ಮದರ್ಶಿಗಳು. ಎಲ್ಲ ಪ್ರಾಣಿಗಳ ಗತಿಯನ್ನು ತಿಳಿದವರು. ಅಧ್ಯಾತ್ಮ ಗತಿಯನ್ನು ಚಿಂತಿಸುವವರು.

ಆದಿಮಧ್ಯಾವಸಾನಾನಾಂ ಜ್ಞಾತಾರಶ್ಚಿನ್ನಸಂಶಯಾಃ ।
ಪರಾವರವಿಶೇಷಜ್ಞಾ ಗಂತಾರಃ ಪರಮಾಂ ಗತಿಮ್ ॥೧೨॥

ಸೃಷ್ಟಿ-ಸ್ಥಿತಿ-ಸಂಹಾರಗಳನ್ನು ತಿಳಿದವರು. ಸಂಶಯರಹಿತರು. ತಾರತಮ್ಯ ವಿಶೇಷ ಜ್ಞಾನವುಳ್ಳವರು. ಶ್ರೇಷ್ಠವಾದ ಗತಿಯನ್ನು ಹೊಂದುವವರು.

ವಿಮುಕ್ತಾ ಧೂತಪಾಪ್ಮಾನೋ ನಿರ್ದ್ವಂದ್ವಾ ನಿಷ್ಪರಿಗ್ರಹಾಃ ।
ಮಾನಾರ್ಹಾ ಮಾನಿತಾ ನಿತ್ಯಂ ಜ್ಞಾನವಿದ್ಭಿರ್ಮಹಾತ್ಮಭಿಃ ॥೧೩॥

ಸಂಸಾರದ ತಾಪತ್ರಯದಿಂದ ಬಿಡುಗಡೆಯನ್ನು ಹೊಂದಿದವರು. ಪಾಪಗಳಿಂದ ನಿರ್ಮುಕ್ತರಾದವರು. ದ್ವಂದ್ವಾತೀತರು. ಪರಿಗ್ರಹಶೂನ್ಯರು. ಸನ್ಮಾನಕ್ಕೆ ಅರ್ಹರಾದವರು. ನಿತ್ಯವೂ ಜ್ಞಾನವನ್ನು ಗುರುತಿಸುವ ಮಹಾತ್ಮರಿಂದ ಸಮ್ಮಾನಿತರಾದವರು.

ಚಂದನೇ ಮಲಪಂಕೇ ಚ ಭೋಜನೇऽಭೋಜನೇ ಸಮಾಃ ।
ಸಮಂ ಯೇಷಾಂ ದುಕೂಲಂ ಚ ಶಾಣಕ್ಷೌಮಾಜಿನಾನಿ ಚ ॥೧೪॥

ಚಂದನಗಳಲ್ಲಿ ಮತ್ತು ಕಶ್ಮಲಗಳಲ್ಲಿ, ಹಾಗೆಯೇ ಭೋಜನಗಳಲ್ಲಿ ಮತ್ತು ಉಪವಾಸ (ನಿರಾಹಾರ)ಗಳಲ್ಲಿ ಸಮರಾದವರು. ಅವರಿಗೆ ರೇಷ್ಮೆವಸ್ತ್ರಗಳು, ನಾರು-ಮಡಿ ಕೃಷ್ಣಾಜಿನಗಳು ಸಮಾನವಾದವುಗಳು.

ತಿಷ್ಠೇಯುರಪ್ಯಭುಂಜಾನಾ ಬಹೂನಿ ದಿವಸಾನ್ಯಪಿ ।
ಶೋಷಯೇಯುಶ್ಚ ಗಾತ್ರಾಣಿ ಸ್ವಾಧ್ಯಾಯೈಃ ಸಂಯತೇಂದ್ರಿಯಾಃ ॥೧೫॥

ಅನೇಕ ದಿವಸಗಳವರೆಗೆ ಭೋಜನವನ್ನು ಮಾಡದೆ ಹಾಗೆಯೇ ಇರುತ್ತಾರೆ. ಇಂದ್ರಿಯ ಜಯವನ್ನು ಹೊಂದಿ ಸ್ವಾಧ್ಯಾಯಗಳಿಂದ ಶರೀರವನ್ನು ಶೋಷಿಸುತ್ತಾರೆ.

ಅದೈವಂ ದೈವತಂ ಕುರ್ಯುರ್ದೈವತಂ ಚಾಪ್ಯದೈವತಮ್ ।
ಲೋಕಾನನ್ಯಾನ್ ಸೃಜೇಯುಶ್ಚ ಲೋಕಪಾಲಾಂಶ್ಚ ಕೋಪಿತಾಃ ॥೧೬॥

ದೇವತೆಯಲ್ಲದವರನ್ನು ದೇವತೆಯಾಗಿ ಮಾಡಿಯಾರು! ದೇವತೆಯನ್ನು ಅದೇವತೆಯನ್ನಾಗಿ ಮಾಡಿಯಾರು! ಕೋಪಗೊಂಡ ಅವರು ಲೋಕಗಳನ್ನೂ, ಲೋಕಪಾಲಕರನ್ನೂ ಸೃಷ್ಟಿಸಿಯಾರು.

ಅಪೇಯಃ ಸಾಗರೋ ಯೇಷಾಮಭಿಶಾಪಾನ್ಮಹಾತ್ಮನಾಮ್ ।
ಯೇಷಾಂ ಕೋಪಾಗ್ನಿರದ್ಯಾಪಿ ದಂಡಕೇ ನೋಪಶಾಮ್ಯತಿ ॥೧೭॥

ಆ ಮಹಾತ್ಮರ ಶಾಪದಿಂದ ಸಾಗರದ ಜಲವು ಪಾನಕ್ಕೆ ಅನರ್ಹವಾಗಿದೆ. ಅವರ ಕೋಪಾಗ್ನಿಯು ದಂಡಕಾರಣ್ಯದಲ್ಲಿ ಇಂದಿಗೂ ಶಾಂತವಾಗಿಲ್ಲ.

ದೇವಾನಾಮಪಿ ಯೇ ದೇವಾಃ ಕಾರಣಂ ಕಾರಣಸ್ಯ ಚ ।
ಪ್ರಮಾಣಸ್ಯ ಪ್ರಮಾಣಂ ಚ ಕಸ್ತಾನಭಿಭವೇದ್ ಬುಧಃ ॥೧೮॥

ಅವರು ದೇವತೆಗಳಿಗೂ ದೇವತೆಗಳು. ಕಾರಣಗಳಿಗೆ ಕಾರಣರು. ಪ್ರಮಾಣಗಳಿಗೆ ಪ್ರಮಾಣರಾದವರು. ಯಾವ ವಿವೇಕಿಯಾದವನು ಅವರನ್ನು ಅವಮಾನಗೊಳಿಸಿಯಾನು?

ಯೇಷಾಂ ವೃದ್ಧಶ್ಚ ಬಾಲಶ್ಚ ಸರ್ವಃ ಸಮ್ಮಾನಮರ್ಹತಿ ।
ತಪೋವಿದ್ಯಾವಿಶೇಷಾತ್ ತು ಮಾನಯಂತಿ ಪರಸ್ಪರಮ್ ॥೧೯॥

ಅವರಲ್ಲಿ ವೃದ್ಧರೂ, ಬಾಲರೂ ಎಲ್ಲರೂ ಸನ್ಮಾನಕ್ಕೆ ಅರ್ಹರಾಗುತ್ತಾರೆ. ತಪಸ್ಸು ಮತ್ತು ವಿದ್ಯೆಯ ವಿಷಯಗಳಲ್ಲಿ ಅವರೇ ಪರಸ್ಪರವಾಗಿ ಸಮ್ಮಾನ ಮಾಡುತ್ತಾರೆ.

ಅವಿದ್ವಾನ್ ಬ್ರಾಹ್ಮಣೋ ದೇವಃ ಪಾತ್ರಂ ವೈ ಪಾವನಂ ಮಹತ್ ।
ವಿದ್ವಾನ್ ಭೂಯಸ್ತರೋ ದೇವಃ ಪೂರ್ಣಸಾಗರಸನ್ನಿಭಃ ॥೨೦॥

ವಿದ್ವಾಂಸನಲ್ಲದ ಬ್ರಾಹ್ಮಣನೂ ದೇವತೆಯೇ. ಬಹಳ ಪವಿತ್ರನಾದ ಪಾತ್ರನೂ ಹೌದು. ವಿದ್ವಾಂಸನಾದವನಂತೂ ಪೂರ್ಣಸಾಗರದಂತಿರುವ ಇನ್ನೂ ಶ್ರೇಷ್ಠವಾದ ದೇವತೆ.

ಅವಿದ್ವಾಂಶ್ಚೈವ ವಿದ್ವಾಂಶ್ಚ ಬ್ರಾಹ್ಮಣೋ ದೈವತಂ ಮಹತ್ ।
ಪ್ರಣೀತಶ್ಚಾಪ್ರಣೀತಶ್ಚ ಯಥಾಗ್ನಿರ್ದೈವತಂ ಮಹತ್ ॥೨೧॥

ಬ್ರಾಹ್ಮಣನು ವಿದ್ವಾಂಸನಾಗಿರಲಿ, ಅವಿದ್ವಾಂಸನಾಗಿರಲಿ, ಅವನು ಪ್ರಣೀತವಾದ ಅಥವಾ ಪ್ರಣೀತವಲ್ಲದ ಅಗ್ನಿಯು ದೊಡ್ಡ ದೇವತೆಯಾಗುವಂತೆ ಬ್ರಾಹ್ಮಣನೂ ದೊಡ್ಡ ದೇವತೆಯೇ.

ಶ್ಮಶಾನೇ ಹ್ಯಪಿ ತೇಜಸ್ವೀ ಪಾವಕೋ ನೈವ ದುಷ್ಯತಿ ।
ಹವಿರ್ಯಜ್ಞೇಷು ಚ ವಹನ್ ಭೂಯ ಏವಾಭಿಶೋಭತೇ ॥೨೨॥

ತೇಜಸ್ವಿಯಾದ ಅಗ್ನಿಯು ಸ್ಮಶಾನದಲ್ಲಿಯೂ ದೋಷಭಾಗಿಯಾಗುವುದಿಲ್ಲ. ಯಜ್ಞಗಳಲ್ಲಿ ಹವಿಸ್ಸನ್ನು ಸ್ವೀಕರಿಸುತ್ತಾ ಇನ್ನೂ ಹೆಚ್ಚು ಶೋಭಿಸುತ್ತಾನೆ.

ಏವಂ ಯದ್ಯಪ್ಯನಿಷ್ಟೇಷು ವರ್ತತೇ ಸರ್ವಕರ್ಮಸು ।
ಸರ್ವಥಾ ಬ್ರಾಹ್ಮಣೋ ಮಾನ್ಯೋ ದೈವತಂ ವಿದ್ಧಿ ತತ್ಪರಮ್ ॥೨೩॥

ಹಾಗೆಯೇ ಬ್ರಾಹ್ಮಣನು ಅನಿಷ್ಟಕರ್ಮಗಳಲ್ಲಿ ಕಂಡುಬಂದರೂ ಅವನು ಸರ್ವಥಾ ಮಾನ್ಯನಾದವನು. ಅವನನ್ನು ಶ್ರೇಷ್ಠವಾದ ದೇವತೆ ಎಂದು ತಿಳಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಬ್ರಾಹ್ಮಣಮಾಹಾತ್ಮ್ಯಕಥನಂ ನಾಮ
ಚತ್ವಾರಿಂಶೋತ್ತರದ್ವಿಶತತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ನಲವತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ನಲವತ್ತೊಂದನೆಯ ಅಧ್ಯಾಯ

ಕಾರ್ತವೀರ್ಯಾರ್ಜುನ ಮತ್ತು ವಾಯುವಿನ ಸಂವಾದ

ಯುಧಿಷ್ಠಿರಃ

ಕಾಂ ತು ಬ್ರಾಹ್ಮಣಪೂಜಾಯಾಂ ವೃಷ್ಟಿಂ ದೃಷ್ಟ್ವಾ ಜನಾಧಿಪ ।
ಕಂ ವಾ ಕರ್ಮೋದಯಂ ಮತ್ವಾ ತಾನರ್ಚಸಿ ಮಹಾಮತೇ ॥೧॥

ಯುಧಿಷ್ಠಿರ– ಎಲೈ ಜನಾಧಿಪನೇ, ಮಹಾಮತಿಯೇ ಬ್ರಾಹ್ಮಣರ ಪೂಜೆಯನ್ನು ಮಾಡುವುದರಲ್ಲಿ ಯಾವ ಸಮೃದ್ಧಿಯನ್ನು ನೋಡಿ ಅಥವಾ ಯಾವ ಕರ್ಮದ ಸಾಫಲ್ಯವನ್ನು ನೋಡಿ ನೀನು ಬ್ರಾಹ್ಮಣರನ್ನು ಅರ್ಚಿಸುತ್ತೀಯೆ?

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಪವನಸ್ಯ ಚ ಸಂವಾದಮರ್ಜುನಸ್ಯ ಚ ಭಾರತ ॥೨॥

ಭೀಷ್ಮ– ಎಲೈ ಭಾರತನೇ, ಈ ವಿಷಯದಲ್ಲಿಯೂ ಕಾರ್ತವೀರ್ಯಾರ್ಜುನನಿಗೂ ಮತ್ತು ವಾಯುವಿಗೂ ನಡೆದ ಈ ಪುರಾತನ ಇತಿಹಾಸವನ್ನು ಹೇಳುತ್ತಾರೆ.

ಸಹಸ್ರಭುಜಭೃಚ್ಛ್ರೀಮಾನ್ ಕಾರ್ತವೀರ್ಯೋಽಭವತ್ ಪ್ರಭುಃ ।
ಅಸ್ಯ ಲೋಕಸ್ಯ ಸರ್ವಸ್ಯ ಮಾಹಿಷ್ಮತ್ಯಾಂ ಮಹಾಬಲಃ ॥೩॥

ಸಹಸ್ರ ಭುಜಗಳುಳ್ಳ, ಕಾಂತಿಯುಕ್ತನಾದ, ಮಹಾಬಲನಾದ ಕಾರ್ತವೀರ್ಯನು ಈ ಎಲ್ಲಾ ಲೋಕಕ್ಕೆ ಪ್ರಭುವಾಗಿ ಮಾಹಿಷ್ಮತಿಯಲ್ಲಿ ಆಳುತ್ತಿದ್ದನು.

ಸ ತು ರತ್ನಾಕರವತೀಂ ಸದ್ವೀಪಾಂ ಸಾಗರಾಂಬರಾಮ್ ।
ಶಶಾಸ ಸರ್ವಾಂ ಪೃಥಿವೀಂ ಹೈಹಯಃ ಸತ್ಯವಿಕ್ರಮಃ ॥೪॥

ಹೈಹಯ ಕುಲದಲ್ಲಿ ಜನಿಸಿದ, ಸತ್ಯವಿಕ್ರಮನಾದ ಆವನು ಸಾಗರಾಂಬರವಾದ, ದ್ವೀಪಸಹಿತವಾದ, ರತ್ನಗಳಿಗೆ ಆಶ್ರಯವಾದ ಭೂಮಿ ಎಲ್ಲವನ್ನೂ ಆಳಿದನು.

ಸ್ವವಿತ್ತಂ ತೇನ ದತ್ತಂ ತು ದತ್ತಾತ್ರೇಯಾಯ ಕಾರಣೇ ।
ಕ್ಷತ್ರಧರ್ಮಂ ಪುರಸ್ಕೃತ್ಯ ವಿನಯಂ ಶ್ರುತಮೇವ ಚ ॥೫॥

ಅವನು ಯಜ್ಞದ ಕಾರಣದಿಂದಾಗಿ ದತ್ತಾತ್ರೇಯರಿಗೆ ತನ್ನ ಕ್ಷತ್ರಿಯ ಧರ್ಮವನ್ನೂ, ವಿನಯವನ್ನೂ ಮತ್ತು ವಿದ್ಯೆಯನ್ನೂ ಪುರಸ್ಕರಿಸಿ ತನ್ನ ಧನವನ್ನು ಕೊಟ್ಟನು.

ಆರಾಧಯಾಮಾಸ ಚ ತಂ ಕೃತವೀರ್ಯಾತ್ಮಜೋ ಮುನಿಮ್ ।
ನ್ಯಮಂತ್ರಯತ ಸಂಹೃಷ್ಟಃ ಸ ದ್ವಿಜಶ್ಚ ವರೈಸ್ತ್ರಿಭಿಃ ॥೬॥

ಕೃತವೀರ್ಯನ ಪುತ್ರನಾದ ಕಾರ್ತವೀರ್ಯಾರ್ಜುನನು ದತ್ತಾತ್ರೇಯರನ್ನು ಆರಾಧಿಸಿದನು. ಸಂತುಷ್ಟರಾದ, ಬ್ರಾಹ್ಮಣರಾದ ದತ್ತಾತ್ರೇಯರು ಮೂರು ವರಗಳನ್ನು ಕೇಳುವಂತೆ ಅವನನ್ನು ನಿಮಂತ್ರಿಸಿದರು.

ಸ ವರೈಶ್ಛಂದಿತಸ್ತೇನ ನೃಪೋ ವಚನಮಬ್ರವೀತ್ ।
ಸಹಸ್ರಬಾಹುರ್ಭೂಯಾಂ ವೈ ಚಮೂಮಧ್ಯೇ ಗೃಹೇಽನ್ಯಥಾ ॥೭॥

ಮಮ ಬಾಹುಸಹಸ್ರಂ ತು ಪಶ್ಯಂತಾಂ ಸೈನಿಕಾ ರಣೇ ।
ವಿಕ್ರಮೇಣ ಮಹೀಂ ಕೃತ್ಸ್ನಾಂ ಜಯೇಯಂ ವಿಪುಲವ್ರತ ।
ತಾಂ ಚ ಧರ್ಮೇಣ ಸಂಪ್ರಾಪ್ಯ ಪಾಲಯೇಯಮತಂದ್ರಿತಃ ॥೮॥

ವರವನ್ನು ಬೇಡು ಎಂದು ಹೇಳಿದಾಗ ರಾಜನು ಅವರನ್ನು ಕುರಿತು, ನಾನು ಸೈನ್ಯದ ಮಧ್ಯದಲ್ಲಿ ಸಹಸ್ರಬಾಹುಗಳನ್ನು ಹೊಂದಿರಬೇಕು. ಗೃಹದಲ್ಲಿ ಬೇರೆ ರೀತಿಯಲ್ಲಿಯೇ (ಎರಡು ಬಾಹುಗಳನ್ನು ಹೊಂದಿ) ಇರಬೇಕು. ಯುದ್ಧದಲ್ಲಿ ಸೈನಿಕರು ನನ್ನ ಸಹಸ್ರ ಬಾಹುಗಳನ್ನು ನೋಡಬೇಕು. ಎಲೈ ವಿಪುಲವ್ರತನೇ, ನಾನು ನನ್ನ ಪರಾಕ್ರಮದಿಂದ ಸಮಗ್ರವಾದ ಭೂಮಿಯನ್ನು ಜಯಿಸಬೇಕು. ಧರ್ಮದಿಂದ ಭೂಮಿಯನ್ನು ಪಡೆದು ಆ ಭೂಮಿಯನ್ನು ಆಲಸ್ಯವಿಲ್ಲದೆ ಪಾಲಿಸಬೇಕು.

ಚತುರ್ಥಂ ತು ವರಂ ಯಾಚೇ ತ್ವಾಮಹಂ ದ್ವಿಜಸತ್ತಮ ।
ತಂ ಮಮಾನುಗ್ರಹಕೃತೇ ದಾತುಮರ್ಹಸ್ಯನಿಂದಿತ ।
ಅನುಶಾಸಂತು ಮಾಂ ಸಂತೋ ಮಿಥ್ಯಾವೃತ್ತಂ ತದಾಶ್ರಯಮ್ ॥೯॥

ಎಲೈ ದ್ವಿಜಶ್ರೇಷ್ಠನೇ, ನಾನು ನಿನ್ನನ್ನು ನಾಲ್ಕನೆಯ ವರವನ್ನು ಕೇಳುತ್ತೇನೆ. ಎಲೈ ಅನಿಂದಿತನೇ, ನನ್ನ ಮೇಲೆ ಅನುಗ್ರಹವನ್ನು ಮಾಡಿ ನೀನು ಆ ವರವನ್ನೂ ಕೊಡಬೇಕು.

ನಾನು ತಪ್ಪಾಗಿ ನಡೆದಾಗ ಅಂತಹ ಮಿಥ್ಯಾಚಾರಕ್ಕೆ ಆಶ್ರಯನಾದ ನನ್ನನ್ನು ಸಜ್ಜನರು ಶಿಕ್ಷಿಸಬೇಕು (ಎಂದು ಕೇಳಿದನು).

ಇತ್ಯುಕ್ತಃ ಸ ದ್ವಿಜಃ ಪ್ರಾಹ ತಥಾಸ್ತ್ವಿತಿ ನರಾಧಿಪಮ್ ।
ಏವಂ ಸಮಭವಂಸ್ತಸ್ಯ ವರಾಸ್ತೇ ದೀಪ್ತತೇಜಸಃ ॥೧೦॥

ಹೀಗೆ ಕೇಳಲ್ಪಟ್ಟ ದತ್ತಾತ್ರೇಯರು ರಾಜನನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದರು. ಉಜ್ವಲವಾದ ಪರಾಕ್ರಮವುಳ್ಳ ಅರ್ಜುನನಿಗೆ ಹೀಗೆ ವರಗಳು ಲಭಿಸಿದವು.

ತತಃ ಸ ರಥಮಾಸ್ಥಾಯ ಜ್ವಲನಾರ್ಕಸಮದ್ಯುತಿಃ ।
ಅಬ್ರವೀದ್ ವೀರ್ಯಸಮ್ಮೋಹಾತ್ ಕೋ ನ್ವಸ್ತಿ ಸದೃಶೋ ಮಯಾ ।
ವೀರ್ಯಧೈರ್ಯಯಶಃಶೌಚೈರ್ವಿಕ್ರಮೇಣೌಜಸಾಪಿ ವಾ ॥೧೧॥

ಅನಂತರ ಸೂರ್ಯಾಗ್ನಿ ಸದೃಶವಾದ ತೇಜಸ್ಸನ್ನು ಹೊಂದಿದ ಅವನು ರಥವನ್ನೇರಿ, ತನ್ನ ಪರಾಕ್ರಮದಿಂದ ಮೋಹಿತನಾಗಿ ವೀರ್ಯ, ಧೈರ್ಯ, ಕೀರ್ತಿ, ಶೌಚ, ವಿಕ್ರಮ, ಸಾಮರ್ಥ್ಯಗಳಲ್ಲಿ ನನಗೆ ಸಮಾನರಾದವರು ಯಾರಿದ್ದಾರೆ ಎಂದು ಕೇಳಿದನು.

ತದಾಖ್ಯಾಂತೇ ಚಾಂತರಿಕ್ಷೇ ವಾಗುವಾಚಾಶರೀರಿಣೀ ।
ನ ತ್ವಂ ಮೂಢ ವಿಜಾನೀಷೇ ಬ್ರಾಹ್ಮಣಂ ಕ್ಷತ್ರಿಯಾದ್ ವರಮ್ ।
ಸಹಿತೋ ಬ್ರಾಹ್ಮಣೇನೇಹ ಕ್ಷತ್ರಿಯೋ ರಕ್ಷತಿ ಪ್ರಜಾಃ ॥೧೨॥

ಆ ವಾಕ್ಯವನ್ನು ಮುಗಿಸಿದ ಮೇಲೆ ಅಂತರಿಕ್ಷದಲ್ಲಿ ಅಶರೀರವಾಣಿಯಾಯಿತು. ಮೂಢನೇ, ಬ್ರಾಹ್ಮಣನು ಕ್ಷತ್ರಿಯನಿಗಿಂತ ಶ್ರೇಷ್ಠನೆಂದು ನೀನು ತಿಳಿಯುತ್ತಿಲ್ಲ. ಕ್ಷತ್ರಿಯನು ಬ್ರಾಹ್ಮಣನಿಂದ ಸಹಿತನಾಗಿ ಪ್ರಜೆಗಳನ್ನು ರಕ್ಷಿಸುತ್ತಾನೆ ಎಂದು ಹೇಳಿತು. .

ಅರ್ಜುನಃ

ಕುರ್ಯಾಂ ಭೂತಾನಿ ತುಷ್ಟೋಽಹಂ ಕ್ರುದ್ಧೋ ನಾಶಂ ತಥಾ ನಯೇ ।
ಕರ್ಮಣಾ ಮನಸಾ ವಾಚಾ ನ ಮತ್ತೋಽಸ್ತಿ ವರೋ ದ್ವಿಜಃ ॥೧೩॥

ಅರ್ಜುನ– ಕುಪಿತನಾದರೆ ನಾನು ಭೂತಗಳನ್ನು ಸೃಷ್ಟಿಸಿಯೇನು. ಅವುಗಳನ್ನು ನಾಶ ಪಡಿಸುತ್ತೇನೆ. ಕರ್ಮದಿಂದಾಗಲೀ, ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ ಬ್ರಾಹ್ಮಣನು ನನಗಿಂತ ಶ್ರೇಷ್ಠನಾದವನಲ್ಲ.

ಅವಿದ್ವಾನ್ ಬ್ರಾಹ್ಮಣೋ ದೇವಃ ಪಾತ್ರಂ ವೈ ಪಾವನಂ ಮಹತ್ ।
ವಿದ್ವಾನ್ ಭೂಯಸ್ತರೋ ದೇವಃ ಪೂರ್ಣಸಾಗರಸನ್ನಿಭಃ ॥೨೦॥

ವಿದ್ವಾಂಸನಲ್ಲದ ಬ್ರಾಹ್ಮಣನೂ ದೇವತೆಯೇ. ಬಹಳ ಪವಿತ್ರನಾದ ಪಾತ್ರನೂ ಹೌದು. ವಿದ್ವಾಂಸನಾದವನಂತೂ ಪೂರ್ಣಸಾಗರದಂತಿರುವ ಇನ್ನೂ ಶ್ರೇಷ್ಠವಾದ ದೇವತೆ.

ಅವಿದ್ವಾಂಶ್ಚೈವ ವಿದ್ವಾಂಶ್ಚ ಬ್ರಾಹ್ಮಣೋ ದೈವತಂ ಮಹತ್ ।
ಪ್ರಣೀತಶ್ಚಾಪ್ರಣೀತಶ್ಚ ಯಥಾಗ್ನಿರ್ದೈವತಂ ಮಹತ್ ॥೨೧॥

ಬ್ರಾಹ್ಮಣನು ವಿದ್ವಾಂಸನಾಗಿರಲಿ, ಅವಿದ್ವಾಂಸನಾಗಿರಲಿ, ಅವನು ಪ್ರಣೀತವಾದ ಅಥವಾ ಪ್ರಣೀತವಲ್ಲದ ಅಗ್ನಿಯು ದೊಡ್ಡ ದೇವತೆಯಾಗುವಂತೆ ಬ್ರಾಹ್ಮಣನೂ ದೊಡ್ಡ ದೇವತೆಯೇ.

ಶ್ಮಶಾನೇ ಹ್ಯಪಿ ತೇಜಸ್ವೀ ಪಾವಕೋ ನೈವ ದುಷ್ಯತಿ ।
ಹವಿರ್ಯಜ್ಞೇಷು ಚ ವಹನ್ ಭೂಯ ಏವಾಭಿಶೋಭತೇ ॥೨೨॥

ತೇಜಸ್ವಿಯಾದ ಅಗ್ನಿಯು ಸ್ಮಶಾನದಲ್ಲಿಯೂ ದೋಷಭಾಗಿಯಾಗುವುದಿಲ್ಲ. ಯಜ್ಞಗಳಲ್ಲಿ ಹವಿಸ್ಸನ್ನು ಸ್ವೀಕರಿಸುತ್ತಾ ಇನ್ನೂ ಹೆಚ್ಚು ಶೋಭಿಸುತ್ತಾನೆ.

ಏವಂ ಯದ್ಯಪ್ಯನಿಷ್ಟೇಷು ವರ್ತತೇ ಸರ್ವಕರ್ಮಸು ।
ಸರ್ವಥಾ ಬ್ರಾಹ್ಮಣೋ ಮಾನ್ಯೋ ದೈವತಂ ವಿದ್ಧಿ ತತ್ಪರಮ್ ॥೨೩॥

ಹಾಗೆಯೇ ಬ್ರಾಹ್ಮಣನು ಅನಿಷ್ಟಕರ್ಮಗಳಲ್ಲಿ ಕಂಡುಬಂದರೂ ಅವನು ಸರ್ವಥಾ ಮಾನ್ಯನಾದವನು. ಅವನನ್ನು ಶ್ರೇಷ್ಠವಾದ ದೇವತೆ ಎಂದು ತಿಳಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಬ್ರಾಹ್ಮಣಮಾಹಾತ್ಮ್ಯಕಥನಂ ನಾಮ
ಚತ್ವಾರಿಂಶೋತ್ತರದ್ವಿಶತತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ನಲವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅವನು ಯಜ್ಞದ ಕಾರಣದಿಂದಾಗಿ ದತ್ತಾತ್ರೇಯರಿಗೆ ತನ್ನ ಕ್ಷತ್ರಿಯ ಧರ್ಮವನ್ನೂ, ವಿನಯವನ್ನೂ ಮತ್ತು ವಿದ್ಯೆಯನ್ನೂ ಪುರಸ್ಕರಿಸಿ ತನ್ನ ಧನವನ್ನು ಕೊಟ್ಟನು.

ಆರಾಧಯಾಮಾಸ ಚ ತಂ ಕೃತವೀರ್ಯಾತ್ಮಜೋ ಮುನಿಮ್ ।
ನ್ಯಮಂತ್ರಯತ ಸಂಹೃಷ್ಟಃ ಸ ದ್ವಿಜಶ್ಚ ವರೈಸ್ತ್ರಿಭಿಃ ॥೬॥

ಕೃತವೀರ್ಯನ ಪುತ್ರನಾದ ಕಾರ್ತವೀರ್ಯಾರ್ಜುನನು ದತ್ತಾತ್ರೇಯರನ್ನು ಆರಾಧಿಸಿದನು. ಸಂತುಷ್ಟರಾದ, ಬ್ರಾಹ್ಮಣರಾದ ದತ್ತಾತ್ರೇಯರು ಮೂರು ವರಗಳನ್ನು ಕೇಳುವಂತೆ ಅವನನ್ನು ನಿಮಂತ್ರಿಸಿದರು.

ಸ ವರೈಶ್ಛಂದಿತಸ್ತೇನ ನೃಪೋ ವಚನಮಬ್ರವೀತ್ ।
ಸಹಸ್ರಬಾಹುರ್ಭೂಯಾಂ ವೈ ಚಮೂಮಧ್ಯೇ ಗೃಹೇಽನ್ಯಥಾ ॥೭॥

ಮಮ ಬಾಹುಸಹಸ್ರಂ ತು ಪಶ್ಯಂತಾಂ ಸೈನಿಕಾ ರಣೇ ।
ವಿಕ್ರಮೇಣ ಮಹೀಂ ಕೃತ್ಸ್ನಾಂ ಜಯೇಯಂ ವಿಪುಲವ್ರತ ।
ತಾಂ ಚ ಧರ್ಮೇಣ ಸಂಪ್ರಾಪ್ಯ ಪಾಲಯೇಯಮತಂದ್ರಿತಃ ॥೮॥

ವರವನ್ನು ಬೇಡು ಎಂದು ಹೇಳಿದಾಗ ರಾಜನು ಅವರನ್ನು ಕುರಿತು, ನಾನು ಸೈನ್ಯದ ಮಧ್ಯದಲ್ಲಿ ಸಹಸ್ರಬಾಹುಗಳನ್ನು ಹೊಂದಿರಬೇಕು. ಗೃಹದಲ್ಲಿ ಬೇರೆ ರೀತಿಯಲ್ಲಿಯೇ (ಎರಡು ಬಾಹುಗಳನ್ನು ಹೊಂದಿ) ಇರಬೇಕು. ಯುದ್ಧದಲ್ಲಿ ಸೈನಿಕರು ನನ್ನ ಸಹಸ್ರ ಬಾಹುಗಳನ್ನು ನೋಡಬೇಕು. ಎಲೈ ವಿಪುಲವ್ರತನೇ, ನಾನು ನನ್ನ ಪರಾಕ್ರಮದಿಂದ ಸಮಗ್ರವಾದ ಭೂಮಿಯನ್ನು ಜಯಿಸಬೇಕು. ಧರ್ಮದಿಂದ ಭೂಮಿಯನ್ನು ಪಡೆದು ಆ ಭೂಮಿಯನ್ನು ಆಲಸ್ಯವಿಲ್ಲದೆ ಪಾಲಿಸಬೇಕು.

ಚತುರ್ಥಂ ತು ವರಂ ಯಾಚೇ ತ್ವಾಮಹಂ ದ್ವಿಜಸತ್ತಮ ।
ತಂ ಮಮಾನುಗ್ರಹಕೃತೇ ದಾತುಮರ್ಹಸ್ಯನಿಂದಿತ ।
ಅನುಶಾಸಂತು ಮಾಂ ಸಂತೋ ಮಿಥ್ಯಾವೃತ್ತಂ ತದಾಶ್ರಯಮ್ ॥೯॥

ಎಲೈ ದ್ವಿಜಶ್ರೇಷ್ಠನೇ, ನಾನು ನಿನ್ನನ್ನು ನಾಲ್ಕನೆಯ ವರವನ್ನು ಕೇಳುತ್ತೇನೆ. ಎಲೈ ಅನಿಂದಿತನೇ, ನನ್ನ ಮೇಲೆ ಅನುಗ್ರಹವನ್ನು ಮಾಡಿ ನೀನು ಆ ವರವನ್ನೂ ಕೊಡಬೇಕು.

ನಾನು ತಪ್ಪಾಗಿ ನಡೆದಾಗ ಅಂತಹ ಮಿಥ್ಯಾಚಾರಕ್ಕೆ ಆಶ್ರಯನಾದ ನನ್ನನ್ನು ಸಜ್ಜನರು ಶಿಕ್ಷಿಸಬೇಕು (ಎಂದು ಕೇಳಿದನು).

ಇತ್ಯುಕ್ತಃ ಸ ದ್ವಿಜಃ ಪ್ರಾಹ ತಥಾಸ್ತ್ವಿತಿ ನರಾಧಿಪಮ್ ।
ಏವಂ ಸಮಭವಂಸ್ತಸ್ಯ ವರಾಸ್ತೇ ದೀಪ್ತತೇಜಸಃ ॥೧೦॥

ಹೀಗೆ ಕೇಳಲ್ಪಟ್ಟ ದತ್ತಾತ್ರೇಯರು ರಾಜನನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದರು. ಉಜ್ವಲವಾದ ಪರಾಕ್ರಮವುಳ್ಳ ಅರ್ಜುನನಿಗೆ ಹೀಗೆ ವರಗಳು ಲಭಿಸಿದವು.

ತತಃ ಸ ರಥಮಾಸ್ಥಾಯ ಜ್ವಲನಾರ್ಕಸಮದ್ಯುತಿಃ ।
ಅಬ್ರವೀದ್ ವೀರ್ಯಸಮ್ಮೋಹಾತ್ ಕೋ ನ್ವಸ್ತಿ ಸದೃಶೋ ಮಯಾ ।
ವೀರ್ಯಧೈರ್ಯಯಶಃಶೌಚೈರ್ವಿಕ್ರಮೇಣೌಜಸಾಪಿ ವಾ ॥೧೧॥

ಅನಂತರ ಸೂರ್ಯಾಗ್ನಿಸದೃಶವಾದ ತೇಜಸ್ಸನ್ನು ಹೊಂದಿದ ಅವನು ರಥವನ್ನೇರಿ, ತನ್ನ ಪರಾಕ್ರಮದಿಂದ ಮೋಹಿತನಾಗಿ ವೀರ್ಯ, ಧೈರ್ಯ, ಕೀರ್ತಿ, ಶೌಚ, ವಿಕ್ರಮ, ಸಾಮರ್ಥ್ಯಗಳಲ್ಲಿ ನನಗೆ ಸಮಾನರಾದವರು ಯಾರಿದ್ದಾರೆ ಎಂದು ಕೇಳಿದನು.

ತದಾವ್ಯಾಂತೇ ಚಾಂತರಿಕ್ಷೇ ವಾಗುವಾಚಾಶರೀರಿಣೀ ।
ನ ತ್ವಂ ಮೂಢ ವಿಜಾನೀಷೇ ಬ್ರಾಹ್ಮಣಂ ಕ್ಷತ್ರಿಯಾದ್ ವರಮ್ ।
ಸಹಿತೋ ಬ್ರಾಹ್ಮಣೇನೇಹ ಕ್ಷತ್ರಿಯೋ ರಕ್ಷತಿ ಪ್ರಜಾಃ ॥೧೨॥

ಆ ವಾಕ್ಯವನ್ನು ಮುಗಿಸಿದ ಮೇಲೆ ಅಂತರಿಕ್ಷದಲ್ಲಿ ಅಶರೀರವಾಣಿಯಾಯಿತು. ಮೂಢನೇ, ಬ್ರಾಹ್ಮಣನು ಕ್ಷತ್ರಿಯನಿಗಿಂತ ಶ್ರೇಷ್ಠನೆಂದು ನೀನು ತಿಳಿಯುತ್ತಿಲ್ಲ. ಕ್ಷತ್ರಿಯನು ಬ್ರಾಹ್ಮಣನಿಂದ ಸಹಿತನಾಗಿ ಪ್ರಜೆಗಳನ್ನು ರಕ್ಷಿಸುತ್ತಾನೆ ಎಂದು ಹೇಳಿತು. .

ಅರ್ಜುನಃ

ಕುರ್ಯಾಂ ಭೂತಾನಿ ತುಷ್ಟೋಽಹಂ ಕ್ರುದ್ಧೋ ನಾಶಂ ತಥಾ ನಯೇ ।
ಕರ್ಮಣಾ ಮನಸಾ ವಾಚಾ ನ ಮತ್ತೋಽಸ್ತಿ ವರೋ ದ್ವಿಜಃ ॥೧೩॥

ಅರ್ಜುನ– ಕುಪಿತನಾದರೆ ನಾನು ಭೂತಗಳನ್ನು ಸೃಷ್ಟಿಸಿಯೇನು. ಅವುಗಳನ್ನು ನಾಶ ಪಡಿಸುತ್ತೇನೆ. ಕರ್ಮದಿಂದಾಗಲೀ, ಮನಸ್ಸಿನಿಂದಾಗಲೀ ಮಾತಿನಿಂದಾಗಲೀ ಬ್ರಾಹ್ಮಣನು ನನಗಿಂತ ಶ್ರೇಷ್ಠನಾದವನಲ್ಲ.

ಇನ್ನೂರ ನಲವತ್ತೊಂದನೆಯ ಅಧ್ಯಾಯ

ಕಾರ್ತವೀರ್ಯಾರ್ಜುನ ಮತ್ತು ವಾಯುವಿನ ಸಂವಾದ

ಯುಧಿಷ್ಠಿರಃ

ಕಾಂ ತು ಬ್ರಾಹ್ಮಣಪೂಜಾಯಾಂ ವೃಷ್ಟಿಂ ದೃಷ್ಟ್ವಾ ಜನಾಧಿಪ ।
ಕಂ ವಾ ಕರ್ಮೋದಯಂ ಮತ್ವಾ ತಾನರ್ಚಸಿ ಮಹಾಮತೇ ॥೧॥

ಯುಧಿಷ್ಠಿರ– ಎಲೈ ಜನಾಧಿಪನೇ, ಮಹಾಮತಿಯೇ ಬ್ರಾಹ್ಮಣರ ಪೂಜೆಯನ್ನು ಮಾಡುವುದರಲ್ಲಿ ಯಾವ ಸಮೃದ್ಧಿಯನ್ನು ನೋಡಿ ಅಥವಾ ಯಾವ ಕರ್ಮದ ಸಾಫಲ್ಯವನ್ನು ನೋಡಿ ನೀನು ಬ್ರಾಹ್ಮಣರನ್ನು ಅರ್ಚಿಸುತ್ತೀಯೆ?

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಪವನಸ್ಯ ಚ ಸಂವಾದಮರ್ಜುನಸ್ಯ ಚ ಭಾರತ ॥೨॥

ಭೀಷ್ಮ– ಎಲೈ ಭಾರತನೇ, ಈ ವಿಷಯದಲ್ಲಿಯೂ ಕಾರ್ತವೀರ್ಯಾರ್ಜುನನಿಗೂ ಮತ್ತು ವಾಯುವಿಗೂ ನಡೆದ ಈ ಪುರಾತನ ಇತಿಹಾಸವನ್ನು ಹೇಳುತ್ತಾರೆ.

ಸಹಸ್ರಭುಜಭೃಚ್ಛ್ರೀಮಾನ್ ಕಾರ್ತವೀರ್ಯೋಽಭವತ್ ಪ್ರಭುಃ ।
ಅಸ್ಯ ಲೋಕಸ್ಯ ಸರ್ವಸ್ಯ ಮಾಹಿಷ್ಮತ್ಯಾಂ ಮಹಾಬಲಃ ॥೩॥

ಸಹಸ್ರ ಭುಜಗಳುಳ್ಳ, ಕಾಂತಿಯುಕ್ತನಾದ, ಮಹಾಬಲನಾದ ಕಾರ್ತವೀರ್ಯನು ಈ ಎಲ್ಲಾ ಲೋಕಕ್ಕೆ ಪ್ರಭುವಾಗಿ ಮಾಹಿಷ್ಮತಿಯಲ್ಲಿ ಆಳುತ್ತಿದ್ದನು.

ಸ ತು ರತ್ನಾಕರವತೀಂ ಸದ್ವೀಪಾಂ ಸಾಗರಾಂಬರಾಮ್ ।
ಶಶಾಸ ಸರ್ವಾಂ ಪೃಥಿವೀಂ ಹೈಹಯಃ ಸತ್ಯವಿಕ್ರಮಃ ॥೪॥

ಹೇಹಯ ಕುಲದಲ್ಲಿ ಜನಿಸಿದ, ಸತ್ಯವಿಕ್ರಮನಾದ ಅವನು ಸಾಗರಾಂಬರವಾದ, ದ್ವೀಪಸಹಿತವಾದ, ರತ್ನಗಳಿಗೆ ಆಶ್ರಯವಾದ ಭೂಮಿ ಎಲ್ಲವನ್ನೂ ಆಳಿದನು.

ಸ್ವವಿತ್ತಂ ತೇನ ದತ್ತಂ ತು ದತ್ತಾತ್ರೇಯಾಯ ಕಾರಣೇ ।
ಕ್ಷತ್ರಧರ್ಮಂ ಪುರಸ್ಕೃತ್ಯ ವಿನಯಂ ಶ್ರುತಮೇವ ಚ ॥೫॥

ಪೂರ್ವೋ ಬ್ರಹ್ಮೋತ್ತರೋ ವಾದೋ ದ್ವಿತೀಯಃ ಕ್ಷತ್ರಿಯೋತ್ತರಃ ।
ತ್ವಯೋಕ್ತೌ ಯೌ ತು ತೌ ಹೇತೂ ವಿಶೇಷಸ್ತ್ವತ್ರ ದೃಶ್ಯತೇ ॥೧೪॥

ಹಿಂದೆ ಸಮಾಜದಲ್ಲಿ ಬ್ರಾಹ್ಮಣನು ಶ್ರೇಷ್ಠನಾದವನು ಎಂಬ ವಾದವಿದ್ದಿತು. ಆದರೆ ಈಗ ಕ್ಷತ್ರಿಯನು ಶ್ರೇಷ್ಠನಾದವನು. ನೀನು ಹೇಳಿದ ಎರಡು ಕಾರಣಗಳು ಸರಿಯಲ್ಲ. ಈ ವಿಷಯದಲ್ಲಿ ವಿಶೇಷವು ಹೀಗೆ ಕಂಡುಬರುತ್ತದೆ.

ಬ್ರಾಹ್ಮಣಾಃ ಸಂಶ್ರಿತಾಃ ಕ್ಷತ್ರಂ ನ ಕ್ಷತ್ರಂ ಬ್ರಾಹ್ಮಣಾಶ್ರಿತಮ್ ।
ಕ್ಷಿತೌ ಬ್ರಹ್ಮಪರಾ ವಿಪ್ರಾ ಖಾದಂತಿ ಕ್ಷತ್ರಿಯಾನ್ ಭುವಿ ॥೧೫॥

ಬ್ರಾಹ್ಮಣರು ಕ್ಷತ್ರಿಯರನ್ನು ಆಶ್ರಯಿಸಿರುತ್ತಾರೆ. ಕ್ಷತ್ರಿಯರು ಬ್ರಾಹ್ಮಣರನ್ನು ಆಶ್ರಯಿಸಿರುವುದಿಲ್ಲ. ವೇದನಿಷ್ಠರಾದ ಬ್ರಾಹ್ಮಣರು ಕ್ಷತ್ರಿಯರನ್ನು ಆಶ್ರಯಿಸಿರುತ್ತಾರೆ ಮತ್ತು ಭೂಮಿಯಲ್ಲಿ ಕ್ಷತ್ರಿಯರನ್ನೇ ಉಪಜೀವಿಸಿ ಬದುಕುತ್ತಾರೆ.

ಕ್ಷತ್ರಿಯೇಷ್ವಾಶ್ರಿತೋ ಧರ್ಮಃ ಪ್ರಜಾನಾಂ ಪರಿಪಾಲನಮ್ ।
ಕ್ಷತ್ರಾದ್ ವೃತ್ತಿರ್ಬ್ರಾಹ್ಮಣಾನಾಂ ತೈಃ ಕಥಂ ಬ್ರಾಹ್ಮಣೋ ವರಃ ॥೧೬॥

ಪ್ರಜೆಗಳ ಪಾಲನಾರೂಪವಾದ ಧರ್ಮವು ಕ್ಷತ್ರಿಯರನ್ನು ಆಶ್ರಯಿಸಿದೆ. ಬ್ರಾಹ್ಮಣರ ಜೀವನೋಪಾಯವು ಕ್ಷತ್ರಿಯರಿಂದ ಉಂಟಾಗುತ್ತದೆ. ಕ್ಷತ್ರಿಯರಿಗಿಂತಲೂ ಬ್ರಾಹ್ಮಣನು ಹೇಗೆ ಶ್ರೇಷ್ಠನಾಗುತ್ತಾನೆ?

ಸರ್ವಭೂತಪ್ರಧಾನಾಂಸ್ತಾನ್ ಭೈಕ್ಷವೃತ್ತೀನಹಂ ಸದಾ ।
ಆತ್ಮಸಂಭಾವಿತಾನ್ ವಿಪ್ರಾನ್ ಸ್ಥಾಪಯಾಮ್ಯಾತ್ಮನೋ ವಶೇ ॥೧೭॥

ಸರ್ವಭೂತಗಳಲ್ಲಿ ಶ್ರೇಷ್ಠರಾದ, ಭೈಕ್ಷ್ಯವೃತ್ತಿಯಲ್ಲೇ ನಿರತರಾದ, ಆತ್ಮಸಂಭಾವಿತರಾದ ಬ್ರಾಹ್ಮಣರನ್ನು ನಾನು ನನ್ನ ವಶದಲ್ಲಿಟ್ಟುಕೊಳ್ಳುತ್ತೇನೆ.

ಕಥಿತಂ ಹಿ ಮಯಾ ಸತ್ಯಂ ಗಾಯತ್ರ್ಯಾ ಕನ್ಯಯಾ ಭುವಿ ।
ವಿಜೇಷ್ಯಾಮ್ಯವಶಾನ್ ಸರ್ವಾನ್ ಬ್ರಾಹ್ಮಣಾಂಶ್ಚರ್ಮವಾಸಸಃ ॥೧೮॥

ಸಾಕ್ಷಿಯಾದ ಗಾಯತ್ರಿಯ ಎದುರಿನಲ್ಲಿ ಭೂಮಿಯಲ್ಲಿ ನಾನು ಹೇಳಿದ ಈ ಮಾತು ಸತ್ಯವಾದುದು. ಕೃಷ್ಣಾಜಿನವನ್ನು ಧರಿಸಿದ ತಮ್ಮ ವಶರಲ್ಲದ ಬ್ರಾಹ್ಮಣರೆಲ್ಲರನ್ನೂ ನಾನು ಜಯಿಸುವೆನು (ಲಕಾಲಂಕಾರ).

ನ ಚ ಮಾಂ ಚ್ಯಾವಯೇದ್ ರಾಷ್ಟ್ರಾತ್ ತ್ರಿಷು ಲೋಕೇಷು ಕಶ್ಚನ ।
ದೇವೋ ವಾ ಮಾನುಷೋ ವಾಪಿ ತಸ್ಮಾಜ್ಜ್ಯೇಷ್ಠೋ ದ್ವಿಜಾದಹಮ್ ॥

ಮೂರುಲೋಕಗಳಲ್ಲಿರುವ ದೇವನಾಗಲೀ ಅಥವಾ ಮನುಷ್ಯನಾಗಲೀ ಯಾವನೂ ನನ್ನನ್ನು ನನ್ನ ರಾಜ್ಯದಿಂದ ಚ್ಯುತಿಗೊಳಿಸಲಾರ. ಆದ್ದರಿಂದ ನಾನು ಬ್ರಾಹ್ಮಣರಿಗಿಂತ ಶ್ರೇಷ್ಠನಾದವನು.

ಅದ್ಯ ಬ್ರಹ್ಮೋತ್ತರಂ ಲೋಕಂ ಕರಿಷ್ಯೇ ಕ್ಷತ್ರಿಯೋತ್ತರಮ್ ।
ನ ಹಿ ಮೇ ಸಂಯುಗೇ ಕಶ್ಚಿತ್ ಸೋಢುಮುತ್ಸಹತೇ ಬಲಮ್ ॥೨೦॥

ಇದುವರೆಗೆ ಬ್ರಾಹ್ಮಣಪ್ರಧಾನವಾಗಿದ್ದ ಲೋಕವನ್ನು ನಾನು ಈಗ ಕ್ಷತ್ರಿಯ ಪ್ರಧಾನವನ್ನಾಗಿ ಮಾಡುವೆನು. ಯುದ್ಧದಲ್ಲಿ ನನ್ನ ಬಲವನ್ನು ಯಾವನೂ ಸಹಿಸಲಾರ (ಎಂದು ಹೇಳಿದನು).

ಅರ್ಜುನಸ್ಯ ವಚಃ ಶ್ರುತ್ವಾ ವಿತ್ರಸ್ತಾಭೂನ್ನಿಶಾಚರೀ ।
ಅಥೈನಮಂತರಿಕ್ಷಸ್ಥಸ್ತತೋ ವಾಯುರಭಾಷತ ॥೨೧॥

ಅರ್ಜುನನ ಮಾತನ್ನು ಕೇಳಿ ನಿಶಾಚರಿಯಾದ ಭೂತವು ಹೆದರಿತು. ಆಗ ವಾಯುವು ಅಂತರಿಕ್ಷದಲ್ಲಿ ನಿಂತು ಮಾತನಾಡಿದನು.

ತ್ಯಜೈನಂ ಕಲುಷಂ ಭಾವಂ ಬ್ರಾಹ್ಮಣೇಭ್ಯೋ ನಮಸ್ಕುರು ।
ಏತೇಷಾಂ ಕುರ್ವತಃ ಪಾಪಂ ರಾಷ್ಟ್ರಕ್ಷೋಭೋ ಹಿ ತೇ ಭವೇತ್ ॥೨೨॥

ಈ ದುಷ್ಟಭಾವವನ್ನು ಬಿಡು. ಬ್ರಾಹ್ಮಣರಿಗೆ ನಮಸ್ಕಾರವನ್ನು ಮಾಡು. ಬ್ರಾಹ್ಮಣರಿಗೆ ಅಪರಾಧವನ್ನು ಮಾಡಿದರೆ ನಿನಗೆ ರಾಷ್ಟ್ರಕ್ಷೋಭೆ ಉಂಟಾದೀತು!

ಅಥ ವಾ ತ್ವಾಂ ಮಹೀಪಾಲ ಶಮಯಿಷ್ಯಂತಿ ವೈ ದ್ವಿಜಾಃ ।
ನಿರಸಿಷ್ಯಂತಿ ವಾ ರಾಷ್ಟ್ರಾದ್ ಹತೋತ್ಸಾಹಂ ಮಹಾಬಲಾಃ ॥೨೩॥

ಅಥವಾ ಎಲೈ ಮಹಾರಾಜನೇ, ಮಹಾಬಲರಾದ ಬ್ರಾಹ್ಮಣರೇ ನಿನ್ನನ್ನು ಶಮನಗೊಳಿಸಿ ಉತ್ಸಾಹವನ್ನು ಕಳೆದುಕೊಂಡ ರಾಷ್ಟ್ರದಿಂದ ನಿನ್ನನ್ನು ಹೊರಗೆ ಹಾಕುವರು (ಎಂದು ಹೇಳಿದನು).

ತಂ ರಾಜಾ ಕಸ್ತ್ವಮಿತ್ಯಾಹ ತತಸ್ತಂ ಪ್ರಾಹ ಮಾರುತಃ ।
ವಾಯುರ್ವೈ ದೇವದೂತೋಽಸ್ಮಿ ಹಿತಂ ತ್ವಾಂ ಪ್ರಬ್ರವೀಮ್ಯಹಮ್ ॥

ಆಗ ರಾಜನು ನೀನು ಯಾರು ಎಂದು ಕೇಳಿದನು. ಅದಕ್ಕೆ ಉತ್ತರವಾಗಿ ವಾಯುವು ಅವನನ್ನು ಕುರಿತು- 'ನಾನು ದೇವದೂತನಾದ ವಾಯು. ನಿನಗೆ ಹಿತವನ್ನು ಹೇಳುತ್ತಿದ್ದೇನೆ' (ಎಂದು ಹೇಳಿದನು).

ಅರ್ಜುನಃ

ಅಹೋ ತ್ವಯಾಽದ್ಯ ವಿಪ್ರೇಷು ಭಕ್ತಿರಾಗಃ ಪ್ರದರ್ಶಿತಃ ।
ಯಾದೃಶಂ ಪೃಥಿವೀಭೂತಸ್ತಾದೃಶಂ ಬ್ರೂಹಿ ವೈ ದ್ವಿಜಮ್ ॥೨೫॥

ಅರ್ಜುನ– ಆಶ್ಚರ್ಯ! ನೀನು ಬ್ರಾಹ್ಮಣರಲ್ಲಿ ಬಹಳ ಭಕ್ತಿ-ಸ್ನೇಹಗಳನ್ನು ಪ್ರದರ್ಶಿಸುತ್ತಿದ್ದೀಯೆ. ಪೃಥಿವಿಗೆ ಸಮಾನನಾದ ಒಬ್ಬ ಬ್ರಾಹ್ಮಣನಿದ್ದಾನೆಯೇ ಹೇಳು.

ವಾಯೋರ್ವಾ ಸದೃಶಂ ಕಂಚಿದ್ ಬ್ರೂಹಿ ತ್ವಂ ಬ್ರಾಹ್ಮಣೋತ್ತಮಮ್ ।
ಅಪಾಂ ವೈ ಸದೃಶಂ ಬ್ರೂಹಿ ಸೂರ್ಯಸ್ಯ ನಭಸೋಽಪಿ ವಾ ॥೨೬॥

ವಾಯುವಿಗೆ ಸಮಾನವಾದ ಒಬ್ಬ ಬ್ರಾಹ್ಮಣಶ್ರೇಷ್ಠನನ್ನಾದರೂ ಹೇಳು ಅಥವಾ ಜಲಕ್ಕೆ, ಸೂರ್ಯನಿಗೆ, ಆಕಾಶಕ್ಕೆ ಸದೃಶನಾದ ಒಬ್ಬ ಬ್ರಾಹ್ಮಣಶ್ರೇಷ್ಠನನ್ನಾದರೂ ಹೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಬ್ರಾಹ್ಮಣಪ್ರಶಂಸನಂ ನಾಮ
ಏಕಚತ್ವಾರಿಂಶೋತ್ತರದ್ವಿಶತತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ನಲವತ್ತೆರಡನೆಯ ಅಧ್ಯಾಯ

ವಾಯುದೇವನ ಉಪದೇಶ

ವಾಯುಃ

ಶೃಣು ಮೂಢ ಗುಣಾನ್ ಕಾಂಶ್ಚಿದ್ ಬ್ರಾಹ್ಮಣಾನಾಂ ಮಹಾತ್ಮನಾಮ್ ।
ಯೇ ತ್ವಯಾ ಕೀರ್ತಿತಾ ರಾಜನ್ ತೇಭ್ಯೋಽಥ ಬ್ರಾಹ್ಮಣೋ ವರಃ ॥೧॥

ವಾಯು– ಎಲೈ ಮೂಢನೇ, ಮಹಾತ್ಮರಾದ ಬ್ರಾಹ್ಮಣರ ಕೆಲವು ಗುಣಗಳನ್ನು ಕೇಳು. ಎಲೈ ರಾಜನೇ, ನೀನು ಯಾರನ್ನು ಹೇಳಿದ್ದೀಯೋ ಅವರಿಗಿಂತಲೂ ಬ್ರಾಹ್ಮಣನು ಉತ್ತಮನಾದವನು.

ತ್ಯಕ್ತ್ವಾ ಮಹೀತ್ವಂ ಭೂಮಿಸ್ತು ಸ್ಪರ್ಧಯಾಽಂಗನೃಪಸ್ಯ ಹ ।
ನಾಶಂ ಜಗಾಮ ತಾಂ ವಿಪ್ರೋ ವ್ಯಷ್ಟಂಭಯತ ಕಶ್ಯಪಃ ॥೨॥

ಭೂಮಿಯು ತನ್ನ ಧನ-ಧಾನ್ಯ ಸಮೃದ್ಧಿಯನ್ನು ಮಾಡುವ ಸ್ವಭಾವವನ್ನು ಬಿಟ್ಟು ಅಂಗರಾಜನ ಜೊತೆಯಲ್ಲಿ ಸ್ಪರ್ಧೆಯನ್ನು ಮಾಡಿ ನಾಶವನ್ನು ಹೊಂದಿತು. ಬ್ರಾಹ್ಮಣರಾದ ಕಾಶ್ಯಪರು ಭೂಮಿಯನ್ನು ಪುನಃ ಸ್ಥಾಪಿಸಿದರು.

ಅಕ್ಷಯಾ ಬ್ರಾಹ್ಮಣಾ ರಾಜನ್ ದಿವಿ ಚೇಹ ಚ ಸರ್ವದಾ ।
ಅಪಿಬತ್ ತೇಜಸಾ ಹ್ಯಾಪಃ ಸ್ವಯಮೇವಾಂಗಿರಾಃ ಪುರಾ ॥೩॥

ರಾಜನೇ, ಬ್ರಾಹ್ಮಣರು ಸ್ವರ್ಗಲೋಕದಲ್ಲೂ ಮತ್ತು ಭೂಲೋಕದಲ್ಲೂ ಸರ್ವದಾ ನಾಶವಿಲ್ಲದವರು. ಹಿಂದೆ ಅಂಗಿರಸರು ತಮ್ಮ ಸಾಮರ್ಥ್ಯದಿಂದ ಜಲವನ್ನೆಲ್ಲಾ ಕುಡಿದರು.

ಸ ತಾಃ ಪಿಬನ್ ಕ್ಷೀರಮಿವ ನಾತೃಪ್ಯತ ಮಹಾತಪಾಃ ।
ಅಪೂರಯನ್ಮಹೌಘೇನ ಮಹೀಂ ಸರ್ವಾಂ ಚ ಪಾರ್ಥಿವ ॥೪॥

ಮಹಾತಪಸ್ವಿಗಳಾದ ಅವರು ಹಾಲಿನಂತೆ ನೀರನ್ನು ಕುಡಿದರೂ ತೃಪ್ತಿಯನ್ನು ಹೊಂದಲಿಲ್ಲ. ಎಲೈ ರಾಜನೇ, ಅನಂತರ ಅವರು ಜಲಪ್ರವಾಹದಿಂದ ಭೂಮಿ ಎಲ್ಲವನ್ನೂ ತುಂಬಿದರು.

ತಸ್ಮಿನ್ನಹಂ ಚ ಕ್ರುದ್ಧೇ ವೈ ಜಗತ್ಯಕ್ತ್ವಾ ತತೋ ಗತಃ ।
ವ್ಯತಿಷ್ಠಮಗ್ನಿಹೋತ್ರೇ ಚ ಚಿರಮಂಗಿರಸೋ ಭಯಾತ್ ॥೫॥

ಅವರು ಕೋಪಗೊಂಡಿರಲು ನಾನು ಅಂಗಿರಸರ ಭಯದಿಂದ ಜಗತ್ತನ್ನು ಬಿಟ್ಟು ಅಗ್ನಿಹೋತ್ರದಲ್ಲಿ ಬಹುಕಾಲ ವಾಸಿಸಿದೆನು.

ಅಭಿಶಪ್ತಶ್ಚ ಭಗವಾನ್ ಗೌತಮೇನ ಪುರಂದರಃ ।
ಅಹಲ್ಯಾಂ ಕಾಮಯಾನೋ ವೈ ಧರ್ಮಾರ್ಥಂ ಚ ನ ಹಿಂಸಿತಃ ॥೬॥

ಪೂಜ್ಯನಾದ ಪುರಂದರನು ಗೌತಮರಿಂದ ಶಾಪವನ್ನು ಹೊಂದಿದನು. ಅಹಲ್ಯೆಯನ್ನು ಕಾಮಿಸಿದ ಅವನು ಧರ್ಮದ ದೃಷ್ಟಿಯಿಂದ ಗೌತಮರಿಂದ ಕೊಲ್ಲಲ್ಪಡಲಿಲ್ಲ.

ತಥಾ ಸಮುದ್ರೋ ನೃಪತೇ ಪೂರ್ಣೋ ಮೃಷ್ಟೇನ ವಾರಿಣಾ ।
ಬ್ರಾಹ್ಮಣೈರಭಿಶಪ್ತಃ ಸನ್ ಲವಣೋದಃ ಕೃತೋ ವಿಭೋ ॥೭॥

ಎಲೈ ರಾಜನೇ, ಹಾಗೆಯೇ ಶುದ್ಧವಾದ ಮತ್ತು ಸ್ವಚ್ಛವಾದ ಜಲದಿಂದ ತುಂಬಿದ ಸಮುದ್ರವು ಬ್ರಾಹ್ಮಣರ ಶಾಪದಿಂದ ಉಪ್ಪು ನೀರನ್ನು ಹೊಂದಿತು.

ಸುವರ್ಣವರ್ಣೋ ನಿರ್ಧೂಮಃ ಸಂಹತೋರ್ಧ್ವಶಿಖಃ ಕಪಿಃ ।
ಕ್ರುದ್ಧೇನಾಂಗಿರಸಾ ಶಪ್ತೋ ಗುಣೈರೇತೈರ್ವಿವರ್ಜಿತಃ ॥೮॥

ಸುವರ್ಣವರ್ಣವನ್ನು ಹೊಂದಿ, ನಿರ್ಧೂಮನಾಗಿ, ಊರ್ಧ್ವಶಿಖೆಗಳ ಸಮುದಾಯವನ್ನು ಹೊಂದಿದ ಅಗ್ನಿಯು ಕೋಪಗೊಂಡ ಅಂಗಿರಸರ ಶಾಪದಿಂದ ತನ್ನ ಗುಣಗಳನ್ನು ಕಳೆದುಕೊಂಡನು (ಲಕ್ಷಾಲಂಕಾರ).

ಮರುತಶ್ಚೂರ್ಣಿತಾನ್ ಪಶ್ಯ ಯೇऽಹಸಂತ ಮಹೋದಧಿಮ್ ।
ಸುವರ್ಣಧಾರಿಣಾ ನಿತ್ಯಮ್ ಅವಶಪ್ತಾ ದ್ವಿಜನ್ಮನಾ ॥೯॥

ಮಹಾಸಮುದ್ರವನ್ನು ಹಾಸ್ಯ ಮಾಡಿದ ಮರುತ್ತುಗಳು ಸುವರ್ಣಧಾರಿಣಿಯೆಂಬ ಬ್ರಾಹ್ಮಣಿಯಿಂದ ಶಾಪವನ್ನು ಹೊಂದಿ ಚೂರ್ಣಿತರಾದುದನ್ನು ನೋಡು.

ಸಮೋ ನ ತ್ವಂ ದ್ವಿಜಾತಿಭ್ಯಃ ಶ್ರೇಷ್ಠಂ ವಿದ್ಧಿ ನರಾಧಿಪ ।
ಗರ್ಭಸ್ಥಾನ್ ಬ್ರಾಹ್ಮಣಾನ್ ಸಮ್ಯಙ್ ನಮಸ್ಯತಿ ಕಿಲ ಪ್ರಭುಃ ॥೧೦॥

ಎಲೈ ನರಾಧಿಪನೇ, ನೀನು ಬ್ರಾಹ್ಮಣರಿಗೆ ಸಮನೂ ಅಲ್ಲ ಅವರಿಗಿಂತ ಶ್ರೇಷ್ಠನೂ ಅಲ್ಲ ಎಂಬುದನ್ನು ತಿಳಿ. ಪ್ರಭುವಾದವನು ಗರ್ಭದಲ್ಲಿದ್ದ ಬ್ರಾಹ್ಮಣರಿಗೂ ಚೆನ್ನಾಗಿ ನಮಸ್ಕಾರವನ್ನು ಮಾಡುವನಷ್ಟೆ?

ದಂಡಕಾನಾಂ ಮಹದ್ರಾಜ್ಯಂ ಬ್ರಾಹ್ಮಣೇನ ವಿನಾಶಿತಮ್ ।
ತಾಳಜಂಘಂ ಮಹತ್ಕ್ಷತ್ರಮೌರ್ವೇಣೈಕೇನ ನಾಶಿತಮ್ ॥೧೧॥

ದಂಡಕ ದೇಶದ ದೊಡ್ಡ ರಾಜ್ಯವು ಬ್ರಾಹ್ಮಣನಿಂದ ವಿನಾಶ ಮಾಡಲ್ಪಟ್ಟಿತು. ತಾಳಜಂಘವೆಂಬ ದೊಡ್ಡ ಕ್ಷತ್ರಿಯ ಸಮೂಹವು ಒಬ್ಬ ಔರ್ವನಿಂದ ನಾಶ ಮಾಡಲ್ಪಟ್ಟಿತು.

ತ್ವಯಾ ಚ ವಿಪುಲಂ ರಾಜ್ಯಂ ಬಲಂ ಧರ್ಮಃ ಶ್ರುತಂ ತಥಾ ।
ದತ್ತಾತ್ರೇಯಪ್ರಸಾದೇನ ಪ್ರಾಪ್ತಂ ಪರಮದುರ್ಲಭಮ್ ॥೧೨॥

ನೀನು ಪರಮದುರ್ಲಭವಾದ, ವಿಸ್ತಾರವಾದ ರಾಜ್ಯವನ್ನೂ, ಬಲವನ್ನೂ, ಧರ್ಮವನ್ನೂ ಮತ್ತು ವಿದ್ಯೆಯನ್ನೂ ದತ್ತಾತ್ರೇಯರ ಅನುಗ್ರಹದಿಂದ ಪಡೆದಿದ್ದೀಯೆ.

ಅಗ್ನಿಂ ತ್ವಂ ಯಜಸೇ ನಿತ್ಯಂ ಕಸ್ಮಾದರ್ಜುನ ಬ್ರಾಹ್ಮಣಮ್ ।
ಸ ಹಿ ಸರ್ವಸ್ಯ ಲೋಕಸ್ಯ ಹವ್ಯವಾಟ್ ಕಿಂ ನ ವೇತ್ಸಿ ತಮ್ ॥೧೩॥

ಎಲೈ ಅರ್ಜುನನೇ, ನೀನು ಬ್ರಾಹ್ಮಣನಾದ ಅಗ್ನಿಯನ್ನು ಏಕೆ ನಿತ್ಯವೂ ಪೂಜಿಸುತ್ತೀಯೆ? ಅವನು ಎಲ್ಲ ಲೋಕಗಳಿಗೂ ಹವ್ಯವನ್ನು ತೆಗೆದುಕೊಂಡು ಹೋಗುವವನು ಎಂದು ನೀನು ತಿಳಿದಿಲ್ಲವೆ?

ಅಥ ವಾ ಬ್ರಾಹ್ಮಣಶ್ರೇಷ್ಠಮನು ಭೂತಾನುಪಾಲಕಮ್ ।
ಕರ್ತಾರಂ ಜೀವಲೋಕಸ್ಯ ಕಸ್ಮಾಜ್ಜಾನನ್ ವಿಮುಹ್ಯಸೇ ॥೧೪॥

ಅಥವಾ ಬ್ರಾಹ್ಮಣಶ್ರೇಷ್ಠರ ಅನಂತರ ಜೀವಲೋಕದ ಸೃಷ್ಟಿಕರ್ತರಾದ, ಭೂತಪಾಲಕರಾದ ದೇವತೆಗಳು ಇರುತ್ತಾರೆ ಎಂದು ತಿಳಿದು ಏಕೆ ಮೋಹಕ್ಕೆ ಒಳಗಾಗಿದ್ದೀಯೆ?

ತಥಾ ಪ್ರಜಾಪತಿರ್ಬ್ರಹ್ಮಾ ಅವ್ಯಕ್ತಃ ಪ್ರಭವಾಪ್ಯಯಃ ।
ಯೇನೇದಂ ನಿಖಿಲಂ ವಿಶ್ವಂ ಜನಿತಂ ಸ್ಥಾವರಂ ಚರಮ್ ॥೧೫॥

ಹಾಗೆಯೇ ಅವ್ಯಕ್ತರೂ, ಸೃಷ್ಟಿ-ಸಂಹಾರಗಳಿಗೆ ಕಾರಣರೂ, ಈ ಸ್ಥಾವರ-ಜಂಗಮಾತ್ಮಕವಾದ ಜಗತ್ತೆಲ್ಲವನ್ನೂ ಸೃಷ್ಟಿಸಿದವರೂ, ಪ್ರಜಾಪತಿಗಳೂ ಆದ ಬ್ರಹ್ಮದೇವರು ಬ್ರಾಹ್ಮಣರಷ್ಟೆ?

ಅಂಡಜಾತಂ ತು ಬ್ರಹ್ಮಾಣಂ ಕೇಚಿದಿಚ್ಛಂತ್ಯಪಂಡಿತಾಃ ।
ಅಂಡಾದ್ ಭಿನ್ನಾದ್ ಬಭುಃ ಶೈಲಾ ದಿಶೋಽಂಭಃ ಪೃಥಿವೀ ದಿವಮ್ ॥

ಪಂಡಿತರಲ್ಲದ ಕೆಲವರು ಬ್ರಹ್ಮದೇವರು ಅಂಡದಿಂದ ಹುಟ್ಟಿದರೆಂದು ಭಾವಿಸುತ್ತಾರೆ. ಅಂಡವು ಭಿನ್ನವಾದಾಗ ಪರ್ವತಗಳೂ, ದಿಕ್ಕುಗಳೂ, ಜಲವೂ, ಪೃಥಿವಿಯೂ, ಸ್ವರ್ಗವೂ ಉಂಟಾದವು.

ದ್ರಷ್ಟವ್ಯಂ ನೈತದೇವಂ ಹಿ ಕಥಂ ಜ್ಯಾಯಸ್ತಮೋ ಹಿ ಸಃ ।
ಸ್ಮೃತಮಾಕಾಶಮಂಡಂ ತು ತಸ್ಮಾಜ್ಜಾತಃ ಪಿತಾಮಹಃ ॥೧೭॥

ಇದನ್ನು ಹೀಗೆ ತಿಳಿಯಬಾರದು. ಬ್ರಹ್ಮದೇವರು ಅಂಡದಿಂದ ಹುಟ್ಟಿದ್ದರೆ ಅವರು ಶ್ರೇಷ್ಠರಾಗುವುದು ಹೇಗೆ? ಆಕಾಶಕ್ಕೆ ಅಂಡವೆಂದು ಹೆಸರು. ಬ್ರಹ್ಮದೇವರು ಆಕಾಶದಿಂದ ಹುಟ್ಟಿದವರು.

ತಿಷ್ಠೇತ್ ಕಥಮಿತಿ ಬ್ರೂಹಿ ನ ಕಿಂಚಿದ್ಧಿ ತದಾ ಭವೇತ್ ।
ಅಹಂಕಾರ ಇತಿ ಪ್ರೋಕ್ತಃ ಸರ್ವತೇಜೋಗತಃ ಪ್ರಭುಃ ॥೧೮॥

ಯಾವುದಾದರೂ ವಸ್ತುವು ಆಗ ಹೇಗೆ ಇರಬಹುದೆಂದು ಹೇಳಲು ಆಗ ಯಾವುದೂ ಇರುವುದಕ್ಕೆ ಸಾಧ್ಯವಿಲ್ಲ. ಅಹಂಕಾರ ತತ್ತ್ವವನ್ನು ಸೃಷ್ಟಿಸಿದವರೇ ಸರ್ವತೇಜೋಗತರಾದ ಬ್ರಹ್ಮದೇವರು. (ಅಹಂಕಾರತತ್ತ್ವವು ಸೃಷ್ಟಿಯಾದ ಮೇಲೆ ಬ್ರಹ್ಮಾಂಡವು ಸೃಷ್ಟಿಯಾಗಬೇಕಷ್ಟೆ?)

ನಾಸ್ಯಂಡಮಸ್ತಿ ತು ಬ್ರಹ್ಮಾ ಸ ರಾಜಲ್ಲೋಕಭಾವನಃ ।
ಇತ್ಯುಕ್ತಃ ಸ ತದಾ ತೂಷ್ಣೀಮಭೂದ್ ವಾಯುಸ್ತಮಬ್ರವೀತ್ ॥೧೯॥

ಎಲೈ ರಾಜನೇ, ಬ್ರಹ್ಮಾಂಡವು ಇರುವುದಿಲ್ಲ, ಲೋಕಸೃಷ್ಟಿಕರ್ತರಾದ ಬ್ರಹ್ಮದೇವರು ಇರುತ್ತಾರೆ ಎಂದು ಆಗ ವಾಯುದೇವರು ಅವನನ್ನು ಕುರಿತು ಪುನಃ ಮಾತನಾಡಿದರು. ವಾಯುದೇವರು ಹೇಳಿದಾಗ ರಾಜರು ಬೇರೆ ಏನನ್ನೂ ಮಾತನಾಡದೆ ಸುಮ್ಮನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಬ್ರಾಹ್ಮಣಸಾಮರ್ಥ್ಯಕಥನಂ ನಾಮ ದ್ವಿಚತ್ವಾರಿಂಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ನಲವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ನಲವತ್ಮೂರನೆಯ ಅಧ್ಯಾಯ

ವಾಯುವಿನಿಂದ ಉಚಥ್ಯರ ಮಹಿಮೆಯ ಕಥನ.

ವಾಯುಃ

ಇಮಾಂ ಭೂಮಿಂ ಬ್ರಾಹ್ಮಣೇಭ್ಯೋ ದಿತ್ಸುರ್ವೈ ದಕ್ಷಿಣಾಂ ಪುರಾ ।
ಅಂಗೋ ನಾಮ ನೃಪೋ ರಾಜಂಸ್ತತಶ್ಚಿಂತಾಂ ಮಹೀ ಯಯೌ ॥೧॥

ವಾಯು– ಎಲೈ ರಾಜನೇ, ಹಿಂದೆ ಅಂಗ ಎಂಬ ರಾಜನು ಈ ಭೂಮಿಯನ್ನು ಬ್ರಾಹ್ಮಣರಿಗೆ ದಕ್ಷಿಣೆಯಾಗಿ ಕೊಡಲು ಬಯಸಿದನು. ಆಗ ಭೂಮಿಯು ಚಿಂತಾಕ್ರಾಂತಳಾದಳು.

ಧಾರಣೀಂ ಸರ್ವಭೂತಾನಾಮಯಂ ಪ್ರಾಪ್ಯ ವರೋ ನೃಪಃ ।
ಕಥಮಿಚ್ಛತಿ ಮಾಂ ದಾತುಂ ದ್ವಿಜೇಭ್ಯೋ ಬ್ರಹ್ಮಣಃ ಸುತಾಮ್ ॥೨॥

ಸರ್ವಪ್ರಾಣಿಗಳಿಗೆ ಆಧಾರಳಾದ, ಬ್ರಹ್ಮದೇವರ ಪುತ್ರಿಯಾದ ನನ್ನನ್ನು ಪಡೆದು ಈ ಶ್ರೇಷ್ಠನಾದ ರಾಜನು ನನ್ನನ್ನು ಹೇಗೆ ಬ್ರಾಹ್ಮಣರಿಗೆ ದಾನವಾಗಿ ಕೊಡಲು ಇಚ್ಛಿಸುತ್ತಿದ್ದಾನೆ?

ಸಾಹಂ ತ್ಯಕ್ತ್ವಾ ಗಮಿಷ್ಯಾಮಿ ಭೂಮಿತ್ವಂ ಬ್ರಹ್ಮಣಃ ಪದಮ್ ।
ಅಯಂ ಸರಾಷ್ಟ್ರೋ ನೃಪತಿರ್ಮಾ ಭೂದಿತಿ ತತೋऽಗಮತ್ ॥೩॥

ನಾನು ನನ್ನ ಭೂಮಿ ಗುಣವನ್ನು ಬಿಟ್ಟು ಬ್ರಹ್ಮದೇವರ ಸ್ಥಾನಕ್ಕೆ ಹೋಗುವೆನು. ಈ ರಾಜನು ಮತ್ತು ರಾಷ್ಟ್ರವು ಇಲ್ಲದೇ ಹೋಗಲಿ ಎಂದು ಚಿಂತಿಸಿ ಹೊರಟಳು.

ತತಸ್ತಾಂ ಕಶ್ಯಪೋ ದೃಷ್ಟ್ವಾ ವ್ರಜಂತೀಂ ಪೃಥಿವೀಂ ತದಾ ।
ಪ್ರವಿವೇಶ ಮಹೀಂ ಸದ್ಯೋ ಮುಕ್ತ್ವಾತ್ಮಾನಂ ಸಮಾಹಿತಃ ॥೪॥

ಆಗ ಕಶ್ಯಪರು ಹೊರಟು ಹೋಗುತ್ತಿದ್ದ ಭೂಮಿಯನ್ನು ನೋಡಿ ತಕ್ಷಣದಲ್ಲಿ ತಮ್ಮ ಸ್ವಭಾವವನ್ನು ತ್ಯಜಿಸಿ ಸಮಾಧಾನದಿಂದ ಭೂಮಿಯೊಳಗೆ ಪ್ರವೇಶಿಸಿದರು.

ರುದ್ಧಾ ಸಾ ಸರ್ವತೋ ಜಜ್ಞೇ ತೃಣೌಷಧಿಸಮನ್ವಿತಾ ।
ಧರ್ಮೋತ್ತರಾ ನಷ್ಟಭಯಾ ಭೂಮಿರಾಸೀತ್ ತತೋ ನೃಪ ॥೫॥

ಎಲೈ ರಾಜನೇ, ಹೀಗೆ ಕಶ್ಯಪರಿಂದ ತಡೆಯಲ್ಪಟ್ಟ ಭೂಮಿಯಲ್ಲಿ ಎಲ್ಲ ಕಡೆಯಲ್ಲಿಯೂ ತೃಣ, ವನಸ್ಪತಿಗಳು ಉಂಟಾದವು. ಭೂಮಿಯು ಧರ್ಮ ಪ್ರಧಾನವಾಗಿ ಭಯರಹಿತವಾಯಿತು.

ಏವಂ ವರ್ಷಸಹಸ್ರಾಣಿ ದಿವ್ಯಾನಿ ವಿಪುಲವ್ರತಃ ।
ತ್ರಿಂಶತಂ ಕಶ್ಯಪೋ ರಾಜನ್ ಭೂಮಿರಾಸೀದತಂದ್ರಿತಾ ॥೬॥

ಎಲೈ ರಾಜನೇ, ವಿಪುಲವ್ರತವನ್ನು ಧರಿಸಿದ ಕಶ್ಯಪರು ಹೀಗೆ ದಿವ್ಯಮಾನದ ಮೂವತ್ತು ಸಹಸ್ರ ವರ್ಷಗಳ ಕಾಲ ಆಲಸ್ಯವಿಲ್ಲದೆ ಭೂಮಿಯಾದರು (ಭೂಮಿಯ ಕಾರ್ಯವನ್ನು ಮಾಡಿದರು).

ಅಥಾಗಮ್ಯ ಮಹಾರಾಜ ನಮಸ್ಕೃತ್ಯ ಚ ಕಶ್ಯಪಮ್ ।
ಪೃಥಿವೀ ಕಾಶ್ಯಪೀ ಜಜ್ಞೇ ಸುತಾ ತಸ್ಯ ಮಹಾತ್ಮನಃ ॥೭॥

ಎಲೈ ರಾಜನೇ, ಅನಂತರ ಭೂಮಿಯು ಬಂದು ಕಾಶ್ಯಪರನ್ನು ನಮಸ್ಕರಿಸಿ ಮಹಾತ್ಮರಾದ ಅವರ ಮಗಳಾಗಿ ಕಾಶ್ಯಪೀ ಎನಿಸಿಕೊಂಡಳು.

ಏಷ ರಾಜನ್ನೀದೃಶೋ ವೈ ಬ್ರಾಹ್ಮಣಃ ಕಶ್ಯಪೋऽಭವತ್ ।
ಅನ್ಯಂ ಪ್ರಬ್ರೂಹಿ ವಾಪಿ ತ್ವಂ ಕಶ್ಯಪಾತ್ ಕ್ಷತ್ರಿಯಂ ವರಮ್ ॥೮॥

ಎಲೈ ರಾಜನೇ, ಕಶ್ಯಪರು ಇಂತಹ ಬ್ರಾಹ್ಮಣರಾಗಿದ್ದರು. ಕಶ್ಯಪರಿಗಿಂತ ಶ್ರೇಷ್ಠರಾದ ಒಬ್ಬ ಕ್ಷತ್ರಿಯನನ್ನು ಹೇಳು.

ತೂಷ್ಣೀಂ ಬಭೂವ ನೃಪತಿಃ ಪವನಸ್ತ ಬ್ರವೀತ್ ಪುನಃ ।
ಶೃಣು ರಾಜನ್ನುಚಥ್ಯಸ್ಯ ಜಾತಸ್ಯಾಂಗಿರಸೇ ಕುಲೇ ॥೯॥

ಆಗ ರಾಜನು ಸುಮ್ಮನಾಗಿ ವಾಯುವು ಪುನಃ ಮಾತನ್ನು ಮುಂದುವರಿಸಿದನು. ಎಲೈ ರಾಜನೇ, ಅಂಗಿರಸರ ಕುಲದಲ್ಲಿ ಜನಿಸಿದ ಉಚಥ್ಯರ ಚರಿತೆಯನ್ನು ಕೇಳು.

ಭದ್ರಾ ಸೋಮಸ್ಯ ದುಹಿತಾ ರೂಪೇಣ ಪರಮಾ ಮತಾ ।
ತಸ್ಯಾಸ್ತುಲ್ಯಂ ಪತಿಂ ಸೋಮ ಉಚಥ್ಯಂ ಸಮಪಶ್ಯತ ॥೧೦॥

ಚಂದ್ರನ ಮಗಳಾದ ಭದ್ರೆಯು ಪರಮ ಸುಂದರಿಯಾಗಿದ್ದಳು. ಚಂದ್ರನು ಉಚಥ್ಯರು ಅವಳಿಗೆ ಯೋಗ್ಯನಾದ ಪತಿ ಎಂದು ಭಾವಿಸಿದರು.

ಸಾ ಚ ತೀವ್ರಂ ತಪಸ್ತೇಪೇ ಮಹಾಭಾಗಾ ಯಶಸ್ವಿನೀ ।
ಉಚಥ್ಯಂ ತು ಮಹಾಭಾಗಂ ತತ್ಕೃತೇऽವರಯತ್ ತದಾ ॥೧೧॥

ಮಹಾಭಾಗ್ಯವಂತಳೂ, ಕೀರ್ತಿವಂತಳೂ ಆದ ಭದ್ರೆಯು ತೀವ್ರವಾದ ತಪಸ್ಸನ್ನು ಮಾಡಿ ಪತಿಯ ಸಲುವಾಗಿ ಉಚಥ್ಯರನ್ನು ಪತಿಯಾಗಿ ವರಿಸಿದಳು.

ತತ ಆಹೂಯ ಸೋಚಥ್ಯಂ ದದಾವತ್ರ ಯಶಸ್ವಿನೀಮ್ ।
ಭಾರ್ಯಾರ್ಥೇ ಸ ಚ ಜಗ್ರಾಹ ವಿಧಿವದ್ ಭೂರಿದಕ್ಷಿಣ ॥೧೨॥

ಎಲೈ ಭೂರಿದಕ್ಷಿಣನೇ, ಅನಂತರ ಚಂದ್ರನು ಉಚಥ್ಯರನ್ನು ಕರೆದು ಯಶಸ್ವಿನಿಯಾದ ಅವಳನ್ನು ವಿಧಿಪೂರ್ವಕವಾಗಿ ಭಾರ್ಯಾರ್ಥವಾಗಿ ದಾನ ಮಾಡಿದನು. ಉಚಥ್ಯರು ಸ್ವೀಕರಿಸಿದರು.

ತಾಂ ತತ್ಕಾಮಯತ ಶ್ರೀಮಾನ್ ವರುಣಃ ಪೂರ್ವಮೇವ ಹ ।
ಸ ಚಾಗಮ್ಯ ವನಪ್ರಸ್ಥಂ ಯಮುನಾಯಾಂ ಜಹಾರ ತಾಮ್ ॥೧೩॥

ಕಾಂತಿಯುಕ್ತನಾದ ವರುಣನು ಅವಳನ್ನು ಮೊದಲೇ ಬಯಸಿದ್ದನು. ಅವನು ಯಮುನಾ ನದಿಯ ತೀರಪ್ರದೇಶಕ್ಕೆ ಬಂದು ಅವಳನ್ನು ಅಪಹರಿಸಿದನು.

ಜಲೇಶ್ವರಸ್ತು ಹೃತ್ವಾ ತಾಮನಯತ್ ಸ್ವಪುರಂ ಪ್ರತಿ ।
ಪರಮಾದ್ಭುತಸಂಕಾಶಂ ಷಟ್‌ಸಹಸ್ರಶತಹ್ರದಮ್ ॥೧೪॥

ನ ಹಿ ರಮ್ಯತರಂ ಕಿಂಚಿತ್ ತಸ್ಮಾದನ್ಯತ್ ಪುರೋತ್ತಮಮ್ ।
ಪ್ರಾಸಾದೈರಪ್ಸರೋಭಿಶ್ಚ ದಿವ್ಯೈಃ ಕಾಮ್ಯೈಶ್ಚ ಶೋಭಿತಮ್ ।
ತತ್ರ ದೇವಸ್ತಯಾ ಸಾರ್ಧಂ ರೇಮೇ ರಾಜನ್ ಜಲೇಶ್ವರಃ ॥೧೫॥

ಅಥಾಖ್ಯಾತಮುಚಥ್ಯಾಯ ತತಃ ಪತ್ನ್ಯವಮರ್ದನಮ್ ॥೧೬॥

ಜಲೇಶ್ವರನಾದ ವರುಣನು ಅವಳನ್ನು ಅಪಹರಿಸಿ ಪರಮಾದ್ಭುತ ಕಾಂತಿಯುಳ್ಳ ಆರು ಲಕ್ಷ ಸರೋವರಗಳಿಂದ ಕೂಡಿದ ತನ್ನ ಪಟ್ಟಣಕ್ಕೆ ಕರೆದುಕೊಂಡು ಹೋದನು. ವರುಣನ ಪಟ್ಟಣಕ್ಕಿಂತ ಶ್ರೇಷ್ಠವಾದ ಪಟ್ಟಣವು ಇನ್ನೊಂದಿಲ್ಲ. ಅದು ಪ್ರಾಸಾದಗಳಿಂದಲೂ, ಅಪ್ಸರೆಯರಿಂದಲೂ, ದಿವ್ಯವಾದ ಭೋಗ್ಯವಸ್ತುಗಳಿಂದಲೂ ಶೋಭಿತವಾಗಿದ್ದಿತು. ಎಲೈ ರಾಜನೇ, ವರುಣದೇವನು ಅವಳ ಜೊತೆಯಲ್ಲಿ ವಿಹರಿಸಿದನು. ಅನಂತರ ಪತ್ನಿಯ ಈ ಅವಮಾನವು ಉಚಥ್ಯರಿಗೆ ತಿಳಿಯಬಂದಿತು.

ತಚ್ಛ್ರುತ್ವಾ ನಾರದಾತ್ ಸರ್ವಮುಚಥ್ಯೋ ನಾರದಂ ತದಾ ।
ಪ್ರೋವಾಚ ಗಚ್ಛ ಬ್ರೂಹಿ ತ್ವಂ ವರುಣಂ ಪರುಷಂ ವಚಃ ।
ಮದ್ವಾಕ್ಯಾನ್ಮುಂಚ ಮೇ ಭಾರ್ಯಾಂ ಕಥಮಾಹೃತವಾನಸಿ ॥೧೭॥

ಉಚಥ್ಯರು ನಾರದರಿಂದ ಎಲ್ಲವನ್ನೂ ಕೇಳಿ, ನೀವು ವರುಣನ ಬಳಿಗೆ ಹೋಗಿ. ನಾನು ಹೇಳಿದ್ದೇನೆಂದು ಉಗ್ರವಾಗಿ ಹೇಳಿ. ನನ್ನ ಭಾರ್ಯೆಯನ್ನು ಹೇಗೆ ಅಪಹರಿಸಿದ್ದೀಯೆ ಎಂದು ಕೇಳಿ.

ಲೋಕಪಾಲೋಽಸಿ ಲೋಕಾನಾಂ ನ ಲೋಕಸ್ಯ ವಿಲೋಪಕಃ ।
ಸೋಮೇನ ದತ್ತಾ ಭಾರ್ಯಾ ಮೇ ತ್ವಯಾ ಚಾಪಹೃತಾದ್ಯ ವೈ ॥೧೮॥

ನೀನು ಲೋಕಪಾಲಕನಾಗಿದ್ದೀಯೆ. ಲೋಕಕ್ಕೆ ವಿಲೋಪಕನಾಗಿಲ್ಲ. ಚಂದ್ರನು ನನಗೆ ಅವಳನ್ನು ನನ್ನ ಭಾರ್ಯೆಯಾಗಿ ಕೊಟ್ಟಿದ್ದಾನೆ. ನೀನು ಈ ದಿನ ಅವಳನ್ನು ಅಪಹರಿಸಿದ್ದೀಯೆ (ಎಂದು ಹೇಳಿ ಎಂದು ಹೇಳಿದನು).

ಇತ್ಯುಕ್ತೋ ವಚನಾತ್ ತಸ್ಯ ನಾರದೇನ ಜಲೇಶ್ವರಃ ।
ಮುಂಚ ಭಾರ್ಯಾಮುಚಥ್ಯಸ್ಯೇತ್ಯಥ ತಂ ವರುಣೋಽಬ್ರವೀತ್ ।
ಮಮೈಷಾ ಸುಪ್ರಿಯಾ ಭಾರ್ಯಾ ನೈನಾಮುತ್ಸ್ಷ್ಟುಮುತ್ಸಹೇ ॥೧೯॥

ನಾರದರಿಂದ ಎಲ್ಲವನ್ನೂ ಕೇಳಿ ಉಚಥ್ಯರ ಭಾರ್ಯೆಯನ್ನು ಬಿಡು ಎಂದು ಹೇಳಿದಾಗ ವರುಣನು ಅವರನ್ನು ಕುರಿತು, ಇವಳು ನನಗೆ ಪ್ರಿಯಳಾದ ಭಾರ್ಯೆ. ಇವಳನ್ನು ನಾನು ಬಿಡಲಾರೆ ಎಂದು ಹೇಳಿದನು.

ಇತ್ಯುಕ್ತೋ ವರುಣೇನಾಥ ನಾರದಃ ಪ್ರಾಪ್ಯ ತಂ ಮುನಿಮ್ ।
ಉಚಥ್ಯಮಬ್ರವೀದ್ ವಾಕ್ಯಂ ನಾತಿಹೃಷ್ಟಮನಾ ಇವ ॥೨೦॥

ವರುಣನಿಂದ ಹೀಗೆ ಹೇಳಲ್ಪಟ್ಟ ನಾರದರು ಉಚಥ್ಯರ ಬಳಿಗೆ ಬಂದು ಬಹಳ ಸಂತೋಷವಿಲ್ಲದೆ ವರುಣನ ಮಾತನ್ನು ಹೇಳಿದರು.

ಗಲೇ ಗೃಹೀತ್ವಾ ಕ್ಷಿಪ್ತೋಽಸ್ಮಿ ವರುಣೇನ ಮಹಾಮುನೇ ।
ನ ಪ್ರಯಚ್ಛತಿ ತೇ ಭಾರ್ಯಾಂ ಯತ್ ತೇ ಕಾರ್ಯಂ ಕುರುಷ್ವ ತತ್ ॥

ಎಲೈ ಮಹಾಮುನಿಯೇ, ವರುಣನು ನನ್ನನ್ನು ಕತ್ತಿನಲ್ಲಿ ಹಿಡಿದು ಎಸೆದನು. ನಿನ್ನ ಭಾರ್ಯೆಯನ್ನು ಕೊಡುತ್ತಿಲ್ಲ. ಮುಂದೇನು ಮಾಡಬೇಕೋ ಅದನ್ನು ಮಾಡು (ಎಂದು ಹೇಳಿದರು).

ನಾರದಸ್ಯ ವಚಃ ಶ್ರುತ್ವಾ ಕ್ರುದ್ಧಃ ಪ್ರಾಜ್ವಲದಂಗಿರಾಃ ।
ಅಪಿಬತ್ ತೇಜಸಾ ವಾರಿ ವಿಷ್ಟಭ್ಯ ಸುಮಹಾತಪಾಃ ॥೨೨॥

ನಾರದರ ಮಾತನ್ನು ಕೇಳಿ ಕೋಪಗೊಂಡು ಅಂಗಿರಸಕುಲೋತ್ಪನ್ನರಾದ ಉಚಥ್ಯರು ಪ್ರಜ್ವಲಿಸಿದರು. ಅತ್ಯಂತ ಮಹಾತಪಸ್ವಿಗಳಾದ ಅವರು ತಮ್ಮ ಸಾಮರ್ಥ್ಯದಿಂದ ಸಮುದ್ರವನ್ನು ನಿಲ್ಲಿಸಿ ಎಲ್ಲ ನೀರನ್ನೂ ಕುಡಿದುಬಿಟ್ಟರು.

ಪೀಯಮಾನೇ ಚ ಸರ್ವಸ್ಮಿಂಸ್ತೋಯೇ ವೈ ಸಲಿಲೇಶ್ವರಃ ।
ಸುಹೃದ್ಭಿಃ ಕಾಮ್ಯಮಾನೋಽಪಿ ನೈವಾಮುಂಚತ ತಾಂ ತದಾ ॥೨೩॥

ಎಲ್ಲ ನೀರು ಕುಡಿಯಲ್ಪಡುತ್ತಿರಲು, ಸುಹೃಜ್ಜನರು ಭದ್ರೆಯನ್ನು ಬಿಡು ಎಂದು ಹೇಳುತ್ತಿದ್ದರೂ ಜಲೇಶ್ವರನಾದ ವರುಣನು ಆಗ ಅವಳನ್ನು ಬಿಡಲಿಲ್ಲ.

ತತಃ ಕ್ರುದ್ಧೋಽಬ್ರವೀದ್ ಭೂಮಿಮುಚಥ್ಯೋ ಬ್ರಾಹ್ಮಣೋತ್ತಮಃ ।
ದರ್ಶಯಸ್ವ ಸ್ಥಲಂ ಭದ್ರೇ ಷಟ್‌ಸಹಸ್ರಶತಹ್ರದಮ್ ॥೨೪॥

ಆಗ ಬ್ರಾಹ್ಮಣ ಶ್ರೇಷ್ಠರಾದ ಉಚಥ್ಯರು ಕ್ರುದ್ಧರಾಗಿ ಭೂಮಿಯನ್ನು ಕುರಿತು ಆರು ಲಕ್ಷ ಮಡುಗಳಿರುವ ಸ್ಥಳವನ್ನು ತೋರಿಸು ಎಂದು ಹೇಳಿದರು.

ತತಸ್ತದೀರಿಣಂ ಜಾತಂ ಸಮುದ್ರಶ್ಚಾಪಸರ್ಪಿತಃ ।
ತಸ್ಮಾದ್ ದೇಶಾನ್ನದೀಂ ಚೈವ ಪ್ರೋವಾಚಾಸೌ ದ್ವಿಜೋತ್ತಮಃ ॥೨೫॥

ಆಗ ಆ ಪ್ರದೇಶವೆಲ್ಲವೂ ಮರುಭೂಮಿಯಾಯಿತು. ಸಮುದ್ರವು ಆ ಪ್ರದೇಶವನ್ನು ಬಿಟ್ಟು ಹಿಂದೆ ಹೊರಟು ಹೋಯಿತು. ಆಗ ಆ ದ್ವಿಜೋತ್ತಮರು ನದಿಯನ್ನು ಕುರಿತು ಹೀಗೆ ಹೇಳಿದರು.

ಅದೃಶ್ಯಾ ಗಚ್ಛ ಭೀರು ತ್ವಂ ಸರಸ್ವತಿ ಮರುಂ ಪ್ರತಿ ।
ಅಪುಣ್ಯ ಏಷ ಭವತು ದೇಶಸ್ತ್ಯಕ್ತಸ್ತ್ವಯಾ ಶುಭೇ ॥೨೬॥

ಎಲೌ ಭೀರುವೇ, ಸರಸ್ವತಿಯೇ, ನೀನು ಅದೃಶ್ಯಳಾಗಿ ಮರುಭೂಮಿಗೆ ಹೋಗು. ಎಲೌ ಶುಭಳೇ, ನಿನ್ನಿಂದ ಪರಿತ್ಯಜಿಸಲ್ಪಟ್ಟ ಈ ದೇಶವು ಅಪವಿತ್ರವಾಗಲಿ ಎಂದು ಹೇಳಿದರು.

ತಸ್ಮಿನ್ ಸಂಚೂರ್ಣಿತೇ ದೇಶೇ ಭದ್ರಾಮಾದಾಯ ವಾರಿಪಃ ।
ಅದದಾಚ್ಚರಣಂ ಗತ್ವಾ ಭಾರ್ಯಾಮಾಂಗಿರಸಾಯ ವೈ ॥೨೭॥

ಹೀಗೆ ಆ ದೇಶವೆಲ್ಲವೂ ಸಂಚೂರ್ಣಿತವಾಗುತ್ತಿರಲು (ಮರಳಿನ ರಾಶಿಯಾಗುತ್ತಿರಲು) ಜಲೇಶ್ವರನಾದ ವರುಣನು ಭದ್ರೆಯನ್ನು ಕರೆದುಕೊಂಡು ಬಂದು ಉಚಥ್ಯರಿಗೆ ಶರಣಾಗತನಾಗಿ ಅವರ ಪತ್ನಿಯನ್ನು ಕೊಟ್ಟನು.

ಪ್ರತಿಗೃಹ್ಯ ತು ತಾಂ ಭಾರ್ಯಾಮುಚಥ್ಯಃ ಸುಮನಾಭವತ್ ।
ಮುಮೋಚ ಚ ತತೋ ದುಃಖಾತ್ ವರುಣಂ ಚೈವ ಹೈಹಯ ॥೨೮॥

ತಮ್ಮ ಪತ್ನಿಯನ್ನು ಸ್ವೀಕರಿಸಿ ಉಚಥ್ಯರು ಪ್ರಸನ್ನರಾದರು. ಎಲೈ ಕಾರ್ತವೀರ್ಯಾರ್ಜುನನೇ ಉಚಥ್ಯರು ಅನಂತರ ವರುಣನನ್ನು ಶೋಕ-ದುಃಖದಿಂದ ಬಿಡುಗಡೆ ಮಾಡಿದರು.

ತತಃ ಸ ಲಬ್ಧ್ವಾ ತಾಂ ಭಾರ್ಯಾಂ ವರುಣಂ ಪ್ರಾಹ ಧರ್ಮವಿತ್ ।
ಉಚಥ್ಯಃ ಸುಮಹಾತೇಜಾ ಯತ್ ತಚ್ಛೃಣು ನರಾಧಿಪ ॥೨೯॥

ಎಲೈ ನರಾಧಿಪನೇ, ತಮ್ಮ ಪತ್ನಿಯನ್ನು ಪಡೆದು ಧರ್ಮಜ್ಞರಾದ, ಮಹಾತೇಜಸ್ವಿಗಳಾದ ಉಚಥ್ಯರು ವರುಣನನ್ನು ಕುರಿತು ಏನು ಹೇಳಿದರೆಂದು ಕೇಳು.

ಮಯೈಷಾ ತಪಸಾ ಪ್ರಾಪ್ತಾ ಕ್ರೋಶತಸ್ತೇ ಜಲಾಧಿಪ ।
ಇತ್ಯುಕ್ತ್ವಾ ತಾಮುಪಾದಾಯ ಸ್ವಮೇವ ಭವನಂ ಯಯೌ ॥೩೦॥

ಎಲೈ ಜಲಾಧಿಪತಿಯೇ, ನೀನು ಕಿರುಚಾಡುತ್ತಿದ್ದರೂ ನನ್ನ ತಪಸ್ಸಿನಿಂದ ನಾನು ಇವಳನ್ನು ಪಡೆದಿದ್ದೇನೆ ಎಂದು ಹೇಳಿ, ಅವಳನ್ನು ಕರೆದುಕೊಂಡು ತಮ್ಮ ಭವನಕ್ಕೆ ಹೋದರು.

ಏಷ ರಾಜನ್ನೀದೃಶೋ ವೈ ಉಚಥ್ಯೋ ಬ್ರಾಹ್ಮಣರ್ಷಭಃ ।
ಬ್ರವೀಮ್ಯಹಂ ಬ್ರೂಹಿ ವಾ ತ್ವಮುಚಥ್ಯಾತ್ ಕ್ಷತ್ರಿಯಂ ವರಮ್ ॥೩೧॥

ಎಲೈ ರಾಜನೇ, ಬ್ರಾಹ್ಮಣ ಶ್ರೇಷ್ಠರಾದ ಉಚಥ್ಯರು ಇಂತಹವರು ಎಂದು ನಾನು ಹೇಳುತ್ತಿದ್ದೇನೆ. ನೀನು ಉಚಥ್ಯರಿಗಿಂತ ಶ್ರೇಷ್ಠನಾದ ಒಬ್ಬ ಕ್ಷತ್ರಿಯನನ್ನು ಹೇಳು (ಎಂದು ವಾಯುವು ಕೇಳಿದನು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಕಾಶ್ಯಪ-ಉಚಥ್ಯಮಹಿಮಕಥನಂ ನಾಮ
ತ್ರಿಚತ್ವಾರಿಂಶೋತ್ತರದ್ವಿಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ನಲವತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ನಲವತ್ತಾಲ್ಕನೆಯ ಅಧ್ಯಾಯ

ಅಗಸ್ತ್ಯರ ಮತ್ತು ವಸಿಷ್ಠರ ಮಹಿಮೆ

ಭೀಷ್ಮಃ

ಇತ್ಯುಕ್ತಃ ಸ ತದಾ ತೂಷ್ಣೀಮಭೂದ್ ವಾಯುಸ್ತತೋಽಬ್ರವೀತ್ ।
ಶೃಣು ರಾಜನ್ನಗಸ್ತ್ಯಸ್ಯ ಮಾಹಾತ್ಮ್ಯಂ ಬ್ರಾಹ್ಮಣಸ್ಯ ಹ ॥೧॥

ಭೀಷ್ಮ– ಹೀಗೆ ಹೇಳಲ್ಪಟ್ಟ ರಾಜನು ಸುಮ್ಮನಾದನು. ವಾಯುದೇವನು ಪುನಃ ಮಾತನಾಡಿದನು. ರಾಜನೇ, ಬ್ರಾಹ್ಮಣರಾದ ಅಗಸ್ತ್ಯರ ಮಹಿಮೆಯನ್ನು ಕೇಳು.

ಅಸುರೈರ್ನಿರ್ಜಿತಾ ದೇವಾ ನಿರುತ್ಸಾಹಾಶ್ಚ ತೇ ಕೃತಾಃ ।
ಯಜ್ಞಾಶ್ಚೈಷಾಂ ಹೃತಾಃ ಸರ್ವೇ ಪಿತೃಭ್ಯಶ್ಚ ಸ್ವಧಾ ತಥಾ ॥೨॥

ದೇವತೆಗಳು ಅಸುರರಿಂದ ಪರಾಜಯವನ್ನು ಹೊಂದಿ ನಿರುತ್ಸಾಹರಾದರು. ಅಸುರರು ದೇವತೆಗಳ ಯಜ್ಞಗಳನ್ನೂ, ಪಿತೃಗಳ ಸ್ವಧೆಯನ್ನೂ ಅಪಹರಿಸಿದರು.

ಕರ್ಮೇಜ್ಯಾ ಮಾನವಾನಾಂ ಚ ದಾನವೈರ್ಹೈಹಯರ್ಷಭ ।
ಭ್ರಷ್ಟೈಶ್ವರ್ಯಾಸ್ತದಾ ದೇವಾಶ್ಚೇರುಃ ಪೃಥ್ವೀಮಿತಿ ಶ್ರುತಿಃ ॥೩॥

ಎಲೈ ಹೈಹಯಶ್ರೇಷ್ಠನೇ, ಮನುಷ್ಯರ ಸತ್ಕರ್ಮಗಳು ಮತ್ತು ಪೂಜೆಗಳು ದಾನವರಿಂದ ಅಪಹರಿಸಲ್ಪಟ್ಟವು. ಐಶ್ವರ್ಯಭ್ರಷ್ಟರಾದ ದೇವತೆಗಳು ಆಗ ಭೂಮಿಯಲ್ಲಿ ತಿರುಗುತ್ತಿದ್ದರು ಎಂದು ಕೇಳಿದ್ದೇವೆ.

ತತಃ ಕದಾಚಿತ್ ತೇ ರಾಜನ್ ದೀಪ್ತಮಾದಿತ್ಯವರ್ಚಸಮ್ ।
ದದೃಶುಸ್ತೇಜಸಾ ಯುಕ್ತಮಗಸ್ತ್ಯಂ ವಿಪುಲವ್ರತಮ್ ॥೪॥

ಎಲೈ ರಾಜನೇ, ಅನಂತರ ಅವರು ಒಮ್ಮೆ ಸೂರ್ಯತೇಜಸ್ಸನ್ನು ಹೊಂದಿದ, ವಿಪುಲವ್ರತರಾದ, ತೇಜೋಯುಕ್ತರಾದ ಅಗಸ್ತ್ಯರನ್ನು ನೋಡಿದರು.

ಅಭಿವಾದ್ಯ ಚ ತಂ ದೇವಾ ದೃಷ್ಟ್ವಾ ಚ ಯಶಸಾ ವೃತಮ್ ।
ಇದಮೂಚುರ್ಮಹಾತ್ಮಾನಂ ವಾಕ್ಯಂ ಕಾಲೇ ಜನಾಧಿಪ ॥೫॥

ಎಲೈ ಜನಾಧಿಪನೇ, ದೇವತೆಗಳು ಅವರನ್ನು ನಮಸ್ಕರಿಸಿ, ಕೀರ್ತಿಯುಕ್ತರಾದ ಆ ಮಹಾತ್ಮರನ್ನು ಕುರಿತು ಆ ಕಾಲದಲ್ಲಿ ಈ ಮಾತುಗಳನ್ನು ಆಡಿದರು.

ದಾನವೈರ್ಯುಧಿ ಭಗ್ನಾಃ ಸ್ಮ ತಥೈಶ್ವರ್ಯಾಚ್ಚ ಭ್ರಂಶಿತಾಃ ।
ತದಸ್ಮಾನ್ನೋ ಭಯಾತ್ ತೀವ್ರಾತ್ ತ್ರಾಹಿ ತ್ವಂ ಮುನಿಪುಂಗವ ॥೬॥

ನಾವು ಯುದ್ಧದಲ್ಲಿ ದಾನವರಿಂದ ಭಗ್ನರಾಗಿದ್ದೇವೆ. ಐಶ್ವರ್ಯದಿಂದ ಭ್ರಂಶಿತರಾಗಿದ್ದೇವೆ. ಎಲೈ ಮುನಿಪುಂಗವರೇ, ನಮ್ಮನ್ನು ಈ ತೀವ್ರವಾದ ಭಯದಿಂದ ನೀವು ರಕ್ಷಿಸಿ.

ಇತ್ಯುಕ್ತಃ ಸ ತದಾ ದೇವೈರಗಸ್ತ್ಯಃ ಕುಪಿತೋಽಭವತ್ ।
ಪ್ರಜಜ್ವಾಲ ಚ ತೇಜಸ್ವೀ ಕಾಲಾಗ್ನಿರಿವ ಸಂಕ್ಷಯೇ ॥೭॥

ದೇವತೆಗಳಿಂದ ಹೀಗೆ ಹೇಳಲ್ಪಟ್ಟ ಅಗಸ್ತ್ಯರು ಆಗ ಕೋಪಗೊಂಡರು. ತೇಜಸ್ವಿಗಳಾದ ಅವರು ಪ್ರಳಯಕಾಲದ ಕಾಲಾಗ್ನಿಯಂತೆ ಪ್ರಜ್ವಲಿಸಿದರು.

ತೇನ ದೀಪ್ತಾಂಶುಜಾಲೇನ ನಿರ್ದಗ್ಧಾ ದಾನವಾಸ್ತದಾ ।
ಅಂತರಿಕ್ಷಾನ್ಮಹಾರಾಜ ನ್ಯಪತಂತ ಸಹಸ್ರಶಃ ॥೮॥

ಎಲೈ ಮಹಾರಾಜನೇ, ಪ್ರಜ್ವಲಿಸುವ ಅವರ ಜ್ವಾಲೆಗಳಿಂದ ದಗ್ಧರಾಗಿ ದಾನವರು ಸಹಸ್ರ ಸಂಖ್ಯೆಯಲ್ಲಿ ಅಂತರಿಕ್ಷದಿಂದ ಕೆಳಗೆ ಬಿದ್ದರು.

ದಹ್ಯಮಾನಾಸ್ತು ತೇ ದೈತ್ಯಾಸ್ತಸ್ಯಾಗಸ್ತ್ಯಸ್ಯ ತೇಜಸಾ ।
ಉಭೌ ಲೋಕೌ ಪರಿತ್ಯಜ್ಯ ಯಯುಃ ಕಾಷ್ಠಾಂ ಸ್ಮ ದಕ್ಷಿಣಾಮ್ ॥೯॥

ಅಗಸ್ತ್ಯರ ತೇಜಸ್ಸಿನಿಂದ ದಹಿಸಲ್ಪಡುತ್ತಿದ್ದ ಅವರು ಸ್ವರ್ಗ ಮತ್ತು ಭೂಲೋಕವೆರಡನ್ನೂ ಪರಿತ್ಯಜಿಸಿ ದಕ್ಷಿಣ ದಿಕ್ಕಿಗೆ ಹೊರಟು ಹೋದರು.

ಬಲಿಸ್ತು ಯಜತೇ ಯಜ್ಞಮಶ್ವಮೇಧಂ ಮಹೀಂ ಗತಃ ।
ಯೇಽನ್ಯೇ ಖಸ್ಥಾ ಮಹೀಸ್ಥಾಶ್ಚ ತೇ ನ ದಗ್ಧಾ ಮಹಾಸುರಾಃ ॥೧೦॥

ಅಶ್ವಮೇಧ ಯಜ್ಞವನ್ನು ಮಾಡುತ್ತಿದ್ದ ಬಲಿಯು ಮಾತ್ರ ಭೂಮಿಗೆ ಬಂದನು. ಇನ್ನು ಉಳಿದ ಅಂತರಿಕ್ಷವಾಸಿಗಳೂ, ಭೂಲೋಕ ವಾಸಿಗಳೂ ಆದ ಮಹಾಸುರರು ದಗ್ಧರಾದರು.

ತತೋ ಲೋಕಾಃ ಪುನಃ ಪ್ರಾಪ್ತಾಃ ಸುರೈಃ ಶಾಂತಂ ಚ ತದ್ರಜಃ ।
ಅಥೈನಮಬ್ರುವನ್ ದೇವಾ ಭೂಮಿಷ್ಠಾನಸುರಾನ್ ಜಹಿ ॥೧೧॥

ಆಗ ದೇವತೆಗಳು ತಮ್ಮ ಲೋಕಗಳನ್ನು ಪುನಃ ಪಡೆದರು. ಆ ಘರ್ಷಣೆಯು ಶಾಂತವಾಯಿತು. ಅನಂತರ ದೇವತೆಗಳು ಅಗಸ್ತ್ಯರನ್ನು ಕುರಿತು ಭೂಮಿಯಲ್ಲಿರುವ ಅಸುರರನ್ನು ದಹಿಸಿ ಎಂದು ಹೇಳಿದರು.

ಇತ್ಯುಕ್ತ ಆಹ ದೇವಾನ್ ಸ ನ ಶಕ್ನೋಮಿ ಮಹೀಗತಾನ್ ।
ದಗ್ಧುಂ ತಪೋ ಹಿ ಕ್ಷೀಯೇನ್ಮೇ ನ ಧಕ್ಷ್ಯಾಮೀತಿ ಪಾರ್ಥಿವ ॥೧೨॥

ಏಲೈ ರಾಜನೇ, ಹೀಗೆ ಹೇಳಲ್ಪಟ್ಟ ಅಗಸ್ತ್ಯರು ದೇವತೆಗಳನ್ನು ಕುರಿತು ಭೂಮಿಯಲ್ಲಿರುವ ಅಸುರರನ್ನು ನಾನು ಕೊಲ್ಲಲಾರೆ. ನಾನು ದಹಿಸಿದರೆ ನನ್ನ ತಪಸ್ಸು ನಾಶವಾದೀತು ಎಂದು ಹೇಳಿದರು.

ಏವಂ ದಗ್ಧಾ ಭಗವತಾ ದಾನವಾಸ್ತೇನ ತೇ ತದಾ ।
ಅಗಸ್ತ್ಯೇನ ತದಾ ರಾಜಂಸ್ತಪಸಾ ಭಾವಿತಾತ್ಮನಾ ॥೧೩॥

ಎಲೈ ರಾಜನೇ, ಶುದ್ಧವಾದ ಮನಸ್ಸುಳ್ಳ ಪೂಜ್ಯರಾದ ಅಗಸ್ತ್ಯರಿಂದ ಆಗ ಆ ದಾನವರು ಈ ರೀತಿಯಲ್ಲಿ ದಹಿಸಲ್ಪಟ್ಟರು.

ಈದೃಶಶ್ಚಾಪ್ಯಗಸ್ತ್ಯೋ ಹಿ ಕಥಿತಸ್ತೇ ಮಯಾನಘ ।
ಬ್ರವೀಮ್ಯಹಂ ಬ್ರೂಹಿ ವಾ ತ್ವಮಗಸ್ತ್ಯಾತ್ ಕ್ಷತ್ರಿಯಂ ವರಮ್ ॥೧೪॥

ಎಲೈ ಅನಘನೇ, ಇಂತಹ ಅಗಸ್ತ್ಯರ ಮಹಿಮೆಯನ್ನು ನಿನಗೆ ಹೇಳಿದ್ದೇನೆ. ಬ್ರಾಹ್ಮಣರು ಶ್ರೇಷ್ಠರಾದವರೆಂದು ನಾನು ಹೇಳುತ್ತಿದ್ದೇನೆ. ಅಗಸ್ತ್ಯರಿಗಿಂತ ಶ್ರೇಷ್ಠನಾದ ಕ್ಷತ್ರಿಯನಿದ್ದರೆ ನೀನು ಹೇಳು.

ಇತ್ಯುಕ್ತಃ ಸ ತದಾ ತೂಷ್ಣೀಮಭೂದ್ ವಾಯುಸ್ತತೋಽಬ್ರವೀತ್ ।
ಶೃಣು ರಾಜನ್ ವಸಿಷ್ಠಸ್ಯ ಮುಖ್ಯಂ ಕರ್ಮ ಯಶಸ್ವಿನಃ ॥೧೫॥

ಹೀಗೆ ಹೇಳಲ್ಪಟ್ಟ ಕಾರ್ತವೀರ್ಯಾರ್ಜುನನು ಸುಮ್ಮನಾದನು. ವಾಯುದೇವನು ಸಹ ಮಾತನಾಡಿದನು. ಎಲೈ ರಾಜನೇ, ಯಶಸ್ವಿಗಳಾದ ವಸಿಷ್ಠರ ಮುಖ್ಯವಾದ ಕರ್ಮವನ್ನು ಕೇಳು.

ಆದಿತ್ಯಾಃ ಸತ್ರಮಾಸಂತ ಸರೋ ವೈ ಮಾನಸಂ ಪ್ರತಿ ।
ವಸಿಷ್ಠಂ ಮನಸಾ ಗತ್ವಾ ಜ್ಞಾತ್ವಾ ತಸ್ಯ ಚ ಗೌರವಮ್ ॥೧೬॥

ಅದಿತಿಪುತ್ರರಾದ ದೇವತೆಗಳು ಮನಸ್ಸಿನಲ್ಲಿಯೇ ವಸಿಷ್ಠರನ್ನು ಸಮೀಪಿಸಿ, ಅವರ ಮಹಿಮೆಯನ್ನು ತಿಳಿದು, ಮಾನಸ ಸರೋವರದ ಬಳಿಯಲ್ಲಿ ಸತ್ರಯಾಗವನ್ನು ಮಾಡುತ್ತಿದ್ದರು.

ಯಜಮಾನಾಂಸ್ತು ತಾನ್ ದೃಷ್ಟ್ವಾ ವ್ಯಗ್ರಾನ್ ದೀಕ್ಷಾನುಕರ್ಶಿತಾನ್ ।
ಹಂತುಮಿಚ್ಛಂತಿ ಶೈಲಾಭಾಃ ಖಲಿನೋ ನಾಮ ದಾನವಾಃ ॥೧೭॥

ಯಜ್ಞದೀಕ್ಷೆಯಿಂದ ಕರ್ಶಿತರಾಗಿ ವ್ಯಗ್ರರಾಗಿದ್ದ ಆ ಯಜಮಾನರನ್ನು ನೋಡಿ ಪರ್ವತಪ್ರಾಯರಾಗಿದ್ದ ಖಲಿಗಳೆಂಬ ದಾನವರು ಅವರನ್ನು ಕೊಲ್ಲಲು ಇಚ್ಛಿಸಿದರು.

ಅದೂರಾತ್ ತು ತತಸ್ತೇಷಾಂ ಬ್ರಹ್ಮದತ್ತವರಂ ಸರಃ ।
ಹತಾ ಹತಾ ವೈ ತೇ ತತ್ರ ಜೀವಂತ್ಯಾಪ್ಲುತ್ಯ ದಾನವಾಃ ॥೧೮॥

ಮಾನಸ ಸರೋವರದ ಸಮೀಪದಲ್ಲಿಯೇ ಅವರು ಬ್ರಹ್ಮದೇವರಿಂದ ವರವನ್ನು ಪಡೆದ ಒಂದು ಸರೋವರವಿದ್ದಿತು. ಹತರಾದ ದಾನವರನ್ನು ಅಲ್ಲಿ ಮುಳುಗಿಸಿದರೆ ಅವರು ಪುನಃ ಜೀವಂತರಾಗುತ್ತಿದ್ದರು.

ತೇ ಪ್ರಗೃಹ್ಯ ಮಹಾಘೋರಾನ್ ಪರ್ವತಾನ್ ಪರಿಘಾನ್ ದ್ರುಮಾನ್ ।
ವಿಕ್ಷೋಭಯಂತಃ ಸಲಿಲಮುತ್ಥಿತಾಃ ಶತಯೋಜನಮ್ ॥೧೯॥

ಅಭ್ಯದ್ರವಂತ ದೇವಾಂಸ್ತೇ ಸಹಸ್ರಾಣಿ ದಶೈವ ಹ ।
ತತಸ್ತೈರರ್ದಿತಾ ದೇವಾಃ ಶರಣಂ ವಾಸವಂ ಯಯುಃ ॥೨೦॥

ಅಂತಹ ದಾನವರು ಮಹಾಘೋರವಾದ ಪರ್ವತಗಳನ್ನೂ, ಪರಿಘಗಳನ್ನೂ, ವೃಕ್ಷಗಳನ್ನೂ ತೆಗೆದುಕೊಂಡು ಶತಯೋಜನ ವಿಸ್ತಾರವಾದ ಆ ಸರೋವರದ ಜಲವನ್ನು ಕಲಕುತ್ತಾ ಮೇಲೆದ್ದು, ಹತ್ತು ಸಹಸ್ರ ಮಂದಿ ದೇವತೆಗಳ ಕಡೆಗೆ ಓಡಿಬಂದರು. ಅವರಿಂದ ಹಿಂಸಿಸಲ್ಪಟ್ಟ ದೇವತೆಗಳು ಇಂದ್ರನಿಗೆ ಶರಣಾಗತರಾದರು.

ಸ ಚ ತೈರ್ವ್ಯಥಿತಃ ಶಕ್ರೋ ವಸಿಷ್ಠಂ ಶರಣಂ ಯಯೌ ।
ತತೋಽಭಯಂ ದದೌ ತೇಭ್ಯೋ ವಸಿಷ್ಠೋ ಭಗವಾನೃಷಿಃ ॥೨೧॥

ಇಂದ್ರನೂ ಸಹ ಅವರಿಂದ ಪೀಡಿಸಲ್ಪಟ್ಟು ಅವನು ವಸಿಷ್ಠರಿಗೆ ಶರಣಾಗತನಾದನು. ಪೂಜ್ಯರಾದ ವಸಿಷ್ಠಋಷಿಗಳು ಅವರಿಗೆ ಅಭಯವನ್ನು ನೀಡಿದರು.

ತಥಾ ತಾನ್ ದುಃಖಿತಾನ್ ಜ್ಞಾನನ್ನಾನೃಶಂಸ್ಯಪರೋ ಮುನಿಃ ।
ಅಯತ್ನೇನಾದಹತ್ ಸರ್ವಾನ್ ಜ್ವಲಿತೇನ ಸ್ವತೇಜಸಾ ॥೨೨॥

ದಯಾಶೀಲರಾದ ಆ ಋಷಿಗಳು ದುಃಖಿತರಾದ ದೇವತೆಗಳನ್ನು ನೋಡಿ ಜ್ವಲಿಸುವ ತಮ್ಮ ತೇಜಸ್ಸಿನಿಂದ ಅವರೆಲ್ಲರನ್ನೂ ಅನಾಯಾಸವಾಗಿ ದಹಿಸಿದರು.

ಕೈಲಾಸಂ ಪ್ರಸ್ಥಿತಾಂ ಚಾಪಿ ನದೀಂ ಗಂಗಾಂ ಮಹಾತಪಾಃ ।
ಆನಯತ್ ತತ್ಸರೋ ದಿವ್ಯಂ ತಯಾ ಭಿನ್ನಂ ಚ ತತ್ಸರಃ ॥೨೩॥

ಮಹಾತಪಸ್ವಿಗಳಾದ ಅವರು ಕೈಲಾಸಕ್ಕೆ ಹೊರಟಿದ್ದ ಗಂಗೆಯನ್ನೂ ಸಹ ಹಿಂದಕ್ಕೆ ಆ ದಿವ್ಯಸರೋವರಕ್ಕೆ ಕರೆಸಿದರು. ಗಂಗೆಯು ಪ್ರವೇಶ ಮಾಡಿದಾಗ ಆ ಸರೋವರವು ಒಡೆದು ಹೋಯಿತು.

ಸರೋ ಭಿನ್ನಂ ತಯಾ ನದ್ಯಾ ಸರಯೂಃ ಸಾ ತತೋಽಭವತ್ ।
ಹತಾಶ್ಚ ಖಲಿನೋ ಯತ್ರ ಸ ದೇಶಃ ಖಲಿನೋಽಭವತ್ ॥೨೪॥

ಭಿನ್ನವಾದ ಸರೋವರದಿಂದ ಹರಿದ ನೀರು ಸರಯೂ ನದಿಯಾಯಿತು. ಖಲಿಗಳು ಹತರಾದರು. ಖಲಿಗಳಿದ್ದ ದೇಶವು ಉಪದ್ರವರಹಿತವಾಯಿತು.

ಏವಂ ಸೇಂದ್ರಾ ವಸಿಷ್ಠೇನ ರಕ್ಷಿತಾಸ್ತ್ರಿದಿವೌಕಸಃ ।
ಬ್ರಹ್ಮದತ್ತವರಾಶ್ಚೈವ ಹತಾ ದೈತ್ಯಾ ಮಹಾತ್ಮನಾ ॥೨೫॥

ಹೀಗೆ ಇಂದ್ರ ಸಹಿತರಾದ ದೇವತೆಗಳು ವಸಿಷ್ಠರಿಂದ ರಕ್ಷಿಸಲ್ಪಟ್ಟರು. ಬ್ರಹ್ಮದೇವರಿಂದ ವರವನ್ನು ಪಡೆದಿದ್ದ ದೈತ್ಯರೂ ಸಹ ಮಹಾತ್ಮರಾದ ಅವರಿಂದ ಹತರಾದರು.

ಏತತ್ಕರ್ಮ ವಸಿಷ್ಠಸ್ಯ ಕಥಿತಂ ತೇ ಮಯಾನಘ ।
ಬ್ರವೀಮ್ಯಹಂ ಬ್ರೂಹಿ ವಾ ತ್ವಂ ವಸಿಷ್ಠಾತ್ ಕ್ಷತ್ರಿಯಂ ವರಮ್ ॥೨೬॥

ಎಲೈ ಅನಘನೇ, ವಸಿಷ್ಠರ ಈ ಕರ್ಮವನ್ನು ನಾನು ನಿನಗೆ ಹೇಳಿದ್ದೇನೆ. ಬ್ರಾಹ್ಮಣರು ಶ್ರೇಷ್ಠರೆಂದು ನಾನು ಹೇಳುತ್ತಿದ್ದೇನೆ. ವಸಿಷ್ಠರಿಗಿಂತ ಶ್ರೇಷ್ಠನಾದ ಕ್ಷತ್ರಿಯನಿದ್ದರೆ ನೀನು ಹೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಅಗಸ್ತ್ಯ-ವಸಿಷ್ಠಪ್ರಶಂಸಾ ನಾಮ
ಚತುಶ್ಚತ್ವಾರಿಂಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ನಲವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ನಲವತ್ತೈದನೆಯ ಅಧ್ಯಾಯ

ಚ್ಯವನರ ಮಹಿಮೆ

ಭೀಷ್ಮಃ

ತೂಷ್ಣೀಮಾಸೀದರ್ಜುನಸ್ತು ಪವನಸ್ತ್ವಬ್ರವೀತ್ಪುನಃ ।
ಶೃಣು ಮೇ ಬ್ರಾಹ್ಮಣೇಷ್ವೇವ ಮುಖ್ಯಂ ಕರ್ಮ ಜನಾಧಿಪ ॥೧॥

ಭೀಷ್ಮ– ಅರ್ಜುನನು ಸುಮ್ಮನಾದನು. ವಾಯುದೇವನು ಪುನಃ ಮಾತನಾಡಿದನು. ಎಲೈ ಜನಾಧಿಪನೇ, ಬ್ರಾಹ್ಮಣರಲ್ಲಿಯೇ ಮುಖ್ಯವಾದ ಕರ್ಮವನ್ನು ಕೇಳು.

ಮದಸ್ಯಾಸ್ಯಮನುಪ್ರಾಪ್ತಾ ಯದಾ ಸೇಂದ್ರಾ ದಿವೌಕಸಃ ।
ತದೇಯಂ ಚ್ಯವನೇನೇಹ ಹೃತಾ ತೇಷಾಂ ವಸುಂಧರಾ ॥೨॥

ಇಂದ್ರಾದಿ ದೇವತೆಗಳು ಮದಕ್ಕೆ ಸಿಲುಕಿದಾಗ ಅವರ ಈ ಭೂಮಿಯನ್ನು ಚ್ಯವನರು ಅಪಹರಿಸಿದರು.

ಉಭೌ ಲೋಕೌ ಹೃತೌ ಮತ್ವಾ ತೇ ದೇವಾ ದುಃಖಿತಾಭವನ್ ।
ಶೋಕಾರ್ತಾಶ್ಚ ಮಹಾತ್ಮಾನಂ ಬ್ರಹ್ಮಾಣಂ ಶರಣಂ ಯಯುಃ ॥೩॥

ಎರಡು ಲೋಕಗಳನ್ನೂ ಕಳೆದುಕೊಂಡುದುದನ್ನು ತಿಳಿದು ದೇವತೆಗಳು ದುಃಖಿತರಾದರು. ಶೋಕಾರ್ತರಾಗಿ ಮಹಾತ್ಮರಾದ ಬ್ರಹ್ಮದೇವರನ್ನು ಶರಣು ಹೊಂದಿದರು.

ದೇವಾಃ

ಮದಾಸ್ಯವ್ಯತಿಷಿಕ್ತಾನಾಮಸ್ಮಾಕಂ ಲೋಕಪೂಜಿತ ।
ಚ್ಯವನೇನ ಹೃತಾ ಭೂಮಿಃ ಕಪೈಶ್ಚಾಪಿ ದಿವಂ ಪ್ರಭೋ ॥೪॥

ದೇವತೆಗಳು– ಎಲೈ ಲೋಕಪೂಜಿತನೇ, ಮದದ ಬಾಯಿಗೆ ಸಿಲುಕಿದ ನಮ್ಮ ಭೂಮಿಯನ್ನು ಚ್ಯವನರು ಕಸಿದುಕೊಂಡರು. ಪ್ರಭುವೇ, ಕಪರು ಸ್ವರ್ಗವನ್ನೂ ಅಪಹರಿಸಿದರು.

ಬ್ರಹ್ಮಾ

ಗಚ್ಛಧ್ವಂ ಶರಣಂ ವಿಪ್ರಾನ್ ಯೂಯಂ ಸೇಂದ್ರಾ ದಿವೌಕಸಃ ।
ಪ್ರಸಾದ್ಯ ತಾನುಭೌ ಲೋಕಾವವಾಪ್ಸ್ಯಥ ಯಥಾ ಪುರಾ ॥೫॥

ಬ್ರಹ್ಮಾ– ಇಂದ್ರಸಹಿತರಾದ ದೇವತೆಗಳೇ, ನೀವು ಶೀಘ್ರವಾಗಿ ಬ್ರಾಹ್ಮಣರಿಗೆ ಶರಣಾಗತರಾಗಿ. ಅವರನ್ನು ಪ್ರಸನ್ನೀಕರಿಸಿದರೆ ನೀವು ಮೊದಲಿನಂತೆ ಎರಡು ಲೋಕಗಳನ್ನೂ ಹೊಂದುವಿರಿ.

ತೇ ಯಯುಃ ಶರಣಂ ವಿಪ್ರಾಂಸ್ತ ಊಚುಃ ಕಾನ್ ಜಯಾಮಹೇ ।
ಇತ್ಯುಕ್ತಾಸ್ತೇ ದ್ವಿಜಾನ್ ಪ್ರಾಹುರ್ಜಯತೇಹ ಕಪಾನಿತಿ ।
ಭೂಗತಾನ್ ಹಿ ವಿಜೇತಾರೋ ವಯಮಿತ್ಯೇವ ಪಾರ್ಥಿವ ॥೬॥

ಅವರು ಹೋಗಿ ವಿಪ್ರರಿಗೆ ಶರಣಾಗತರಾದರು. ಅವರು ಯಾರನ್ನು ಜಯಿಸಬೇಕು ಎಂದು ಕೇಳಿದಾಗ ದೇವತೆಗಳು ದ್ವಿಜರನ್ನು ಕುರಿತು ನೀವು ಕಪರನ್ನು ಜಯಿಸಿ, ಭೂಮಿಯಲ್ಲಿರುವವರನ್ನು ನಾವು ಜಯಿಸುವೆವು ಎಂದು ಹೇಳಿದರು.

ತತಃ ಕರ್ಮ ಸಮಾರಬ್ಧಂ ಬ್ರಾಹ್ಮಣೈಃ ಕಪನಾಶನಮ್ ।
ತಚ್ಛ್ರುತ್ವಾ ಪ್ರೇಷಿತೋ ದೂತೋ ಬ್ರಾಹ್ಮಣೇಭ್ಯೋ ಧನೀ ಕಪೈಃ ॥೭॥

ಅನಂತರ ಬ್ರಾಹ್ಮಣರು ಕಪನಾಶನ ಕರ್ಮವನ್ನು ಆರಂಭಿಸಿದರು. ಅದನ್ನು ಕೇಳಿದ ಕಪರು ಬ್ರಾಹ್ಮಣರ ಬಳಿಗೆ ಧನೀ ಎಂಬ ತಮ್ಮ ದೂತನನ್ನು ಕಳುಹಿಸಿದರು.

ಸ ಚ ತಾನ್ ಬ್ರಾಹ್ಮಣಾನಾಹ ಧನೀ ಕಪವಚೋ ಯಥಾ ।
ಭವದ್ಭಿಃ ಸದೃಶಾಃ ಸರ್ವೇ ಕಪಾಃ ಕಿಮಿಹ ವರ್ತತೇ ॥೮॥

ಧನಿಯು ಬಂದು ಬ್ರಾಹ್ಮಣರಿಗೆ ಕಪರ ಮಾತುಗಳನ್ನು ಹೇಳಿದನು. ಕಪರು ಎಲ್ಲರೂ ನಿಮಗೆ ಸದೃಶರಾದವರು. ನೀವು ಏನು ಮಾಡುತ್ತಿದ್ದೀರಿ?

ಸರ್ವೇ ವೇದವಿದಃ ಪ್ರಾಜ್ಞಾಃ ಸರ್ವೇ ಚ ಕ್ರತುಯಾಜಿನಃ ।
ಸರ್ವೇ ಸತ್ಯವ್ರತಾಶ್ಚೈವ ಸರ್ವೇ ತುಲ್ಯಾ ಮಹರ್ಷಿಭಿಃ ॥೯॥

ಕಪರೆಲ್ಲರೂ ವೇದಜ್ಞರು, ಪ್ರಾಜ್ಞರು, ಯಾಗವನ್ನು ಮಾಡುವವರು, ಸತ್ಯವ್ರತರು, ಮಹರ್ಷಿಗಳಿಗೆ ಸಮರಾದವರು.

ಶ್ರೀಶ್ಚೈವ ರಮತೇ ತೇಷು ಧಾರಯಂತಿ ಶ್ರಿಯಂ ಚ ತೇ ।
ವೃಥಾ ದಾರಾನ್ನ ಗಚ್ಛಂತಿ ನಿವೃತ್ತಾ ಮಾಂಸಭಕ್ಷಣೇ ॥೧೦॥

ಲಕ್ಷ್ಮಿಯು ಅವರಲ್ಲಿ ಸಂತೋಷದಿಂದ ನೆಲೆಸಿದ್ದಾಳೆ. ಅವರೂ ಲಕ್ಷ್ಮಿಯನ್ನು ಧರಿಸಿದ್ದಾರೆ. ವ್ಯರ್ಥವಾಗಿ ಪತ್ನೀ ಸಂಗವನ್ನು ಮಾಡುವುದಿಲ್ಲ. ಮಾಂಸಭಕ್ಷಣದಿಂದ ನಿವೃತ್ತರಾಗಿದ್ದಾರೆ.

ದೀಪ್ತಮಗ್ನಿಂ ಜುಹ್ವತಿ ಚ ಗುರೂಣಾಂ ವಚನೇ ಸ್ಥಿತಾಃ ।
ಸರ್ವೇ ಚ ನಿಯತಾತ್ಮಾನೋ ಬಾಲಾನಾಂ ಸಂವಿಭಾಗಿನಃ ॥೧೧॥

ಜ್ವಲಿಸುವ ಅಗ್ನಿಯಲ್ಲಿ ಹೋಮವನ್ನು ಮಾಡುತ್ತಾರೆ. ಹಿರಿಯರ ಮಾತನ್ನು ಅನುಸರಿಸುತ್ತಾರೆ. ಎಲ್ಲರೂ ಜಿತಮನಸ್ಕರು. ಮಕ್ಕಳಿಗೆ ಹಂಚಿ ಭೋಜನವನ್ನು ಮಾಡುವವರು.

ಉಪೇತ್ಯ ಶಕಟೈರ್ಯಾಂತಿ ನ ಸೇವಂತೇ ರಜಸ್ವಲಾಃ ।
ಅಭುಕ್ತವತ್ಸು ನಾಶ್ನಂತಿ ದಿವಾ ಚೈವ ನ ಶೇರತೇ ॥೧೨॥

ಗಾಡಿಗಳಲ್ಲಿ ಸಂಚಾರ ಮಾಡುತ್ತಾರೆ. ರಜಸ್ವಲೆಯರ ಸಮೀಪಕ್ಕೆ ಹೋಗುವುದಿಲ್ಲ. ಹಿರಿಯರಿಗಿಂತ ಮುಂಚೆ ಊಟ ಮಾಡುವುದಿಲ್ಲ. ಹಗಲಿನಲ್ಲಿ ನಿದ್ರೆಯನ್ನು ಮಾಡುವುದಿಲ್ಲ.

ಏತೈಶ್ಚಾನ್ಯೈಶ್ಚ ಬಹುಭಿರ್ಗುಣೈರ್ಯುಕ್ತಾನ್ ಕಥಂ ಕಪಾನ್ ।
ವಿಜೇಷ್ಯಥ ನಿವರ್ತಧ್ವಂ ನಿವೃತ್ತಾನಾಂ ಶುಭಂ ಹಿ ವಃ ॥೧೩॥

ಇಂತಹ ಮತ್ತು ಇನ್ನೂ ಅನೇಕ ಗುಣಗಳಿಂದ ಕೂಡಿದ ಕಪರನ್ನು ನೀವು ಹೇಗೆ ಜಯಿಸುವಿರಿ? ನಿವೃತ್ತರಾಗಿ. ನಿವೃತ್ತರಾದರೆ ನಿಮಗೆ ಶುಭವಿದೆ (ಎಂದು ಹೇಳಿದನು).

ಬ್ರಾಹ್ಮಣಾಃ

ಕಪಾನ್ ವಯಂ ವಿಜೇಷ್ಯಾಮೋ ಯೇ ದೇವಾಸ್ತೇ ವಯಂ ಸ್ಮೃತಾಃ ।
ತಸ್ಮಾದ್ ವಧ್ಯಾಃ ಕಪಾಸ್ಮಾಕಂ ಧನಿನ್ ಯಾಹಿ ಯಥಾಗತಮ್ ॥೧೪॥

ಬ್ರಾಹ್ಮಣರು– ನಾವು ಕಪರನ್ನು ಗೆಲ್ಲುವೆವು. ನಾವೇ ದೇವತೆಗಳು. ಆದ್ದರಿಂದ ಕಪರು ನಮ್ಮಿಂದ ವಧ್ಯರಾದವರು. ಧನಿಯೇ, ಬಂದಂತೆಯೇ ಹೊರಟು ಹೋಗು.

ಧನೀ ಗತ್ವಾ ಕಪಾನಾಹ ನ ವೋ ವಿಪ್ರಾಃ ಪ್ರಿಯಂಕರಾಃ ।
ಗೃಹೀತ್ವಾಸ್ತ್ರಾಣ್ಯಥೋ ವಿಪ್ರಾನ್ ಕಪಾಃ ಸರ್ವೇ ಸಮಾದ್ರವನ್ ॥೧೫॥

ಧನಿಯು ಹಿಂದಿರುಗಿ ಕಪರನ್ನು ಕುರಿತು, ಬ್ರಾಹ್ಮಣರು ನಿಮಗೆ ಹಿತವನ್ನು ಮಾಡುವುದಿಲ್ಲ ಎಂದು ಹೇಳಿದನು. ಆಗ ಕಪರೆಲ್ಲರೂ ಆಯುಧಗಳನ್ನು ಹಿಡಿದು ಬ್ರಾಹ್ಮಣರ ಮೇಲೆ ಎರಗಿದರು.

ಸಮುದಗ್ರಧ್ವಜಾನ್ ದೃಷ್ಟ್ವಾ ಕಪಾನ್ ಸರ್ವೇ ದ್ವಿಜಾತಯಃ ।
ವ್ಯಸೃಜನ್ ಜ್ವಲಿತಾನಗ್ನೀನ್ ಕಪಾನಾಂ ಪ್ರಾಣನಾಶನಾನ್ ॥೧೬॥

ಕಪರ ಉನ್ನತವಾದ ಧ್ವಜಗಳನ್ನು ನೋಡಿ ಎಲ್ಲ ಬ್ರಾಹ್ಮಣರೂ ಜ್ವಲಿತವಾದ ಅಗ್ನಿಯನ್ನು ಕಪರ ಪ್ರಾಣನಾಶಕ್ಕಾಗಿ ವಿಸರ್ಜಿಸಿದರು.

ಬ್ರಹ್ಮಸೃಷ್ಟಾ ಹವ್ಯಭುಜಃ ಕಪಾನ್ ಭುಕ್ತ್ವಾ ಸನಾತನಾಃ ।
ನಭಸೀವ ಯಥಾಭ್ರಾಣಿ ವ್ಯಭ್ರಾಜಂತ ನರಾಧಿಪ ।
ಪ್ರಶಶಂಸುರ್ದ್ವಿಜಾಂಶ್ಚೈವ ಬ್ರಹ್ಮಾಣಂ ಚ ಯಶಸ್ವಿನಮ್ ॥೧೭॥

ಬ್ರಾಹ್ಮಣರು ಉತ್ಸರ್ಜನೆಯನ್ನು ಮಾಡಿದ ಸನಾತನವಾದ ಅಗ್ನಿಗಳು ಕಪರನ್ನು ಸಂಹರಿಸಿ ಆಕಾಶದಲ್ಲಿರುವ ಮೋಡಗಳಂತೆ ವಿರಾಜಿಸಿದವು. ಎಲೈ ನರಾಧಿಪನೇ, ಆಗ ಎಲ್ಲರೂ ಬ್ರಾಹ್ಮಣರನ್ನೂ ಮತ್ತು ಕೀರ್ತಿವಂತರಾದ ಬ್ರಹ್ಮದೇವರನ್ನೂ ಕೊಂಡಾಡಿದರು.

ತೇಷಾಂ ತೇಜಸ್ತಥಾ ವೀರ್ಯಂ ದೇವಾನಾಂ ವವೃಧೇ ತತಃ ।
ಅವಾಪ್ನುವಂಶ್ಚ ದೇವತ್ವಂ ತ್ರಿಷು ಲೋಕೇಷು ಪೂಜಿತಮ್ ॥೧೮॥

ಅನಂತರ ದೇವತೆಗಳ ತೇಜಸ್ಸು ಮತ್ತು ಪರಾಕ್ರಮಗಳು ಹೆಚ್ಚಿದವು ಮತ್ತು ಮೂರು ಲೋಕಗಳಲ್ಲಿ ಪೂಜಿತವಾದ ದೇವತ್ವವನ್ನು ಅವರು ಪಡೆದರು.

ಇತ್ಯುಕ್ತವಚನಂ ವಾಯುಮರ್ಜುನಃ ಪ್ರತ್ಯಭಾಷತ ।
ಪ್ರತಿಪೂಜ್ಯ ಮಹಾಬಾಹೋ ಯತ್ತಚ್ಛೃಣು ನರಾಧಿಪ ॥೧೯॥

ವಾಯುವು ಹೀಗೆ ಹೇಳುತ್ತಿರಲು ಅರ್ಜುನನು ಅವರನ್ನು ಪೂಜಿಸಿ ಅವರನ್ನು ಕುರಿತು ಏನು ಹೇಳಿದನೆಂದು ಎಲೈ ನರಾಧಿಪನೇ, ಮಹಾಬಾಹುವೇ ಕೇಳು.

ಜೀವಾಮ್ಯಹಂ ಬ್ರಾಹ್ಮಣಾರ್ಥೇ ಸರ್ವಥಾ ಸತತಂ ಪ್ರಭೋ ।
ಬ್ರಹ್ಮಣೇ ಬ್ರಾಹ್ಮಣೇಭ್ಯಶ್ಚ ಪ್ರಣಮಾಮಿ ಚ ನಿತ್ಯಶಃ ॥೨೦॥

ಎಲೈ ಪ್ರಭುವೇ, ನಾನು ಬ್ರಾಹ್ಮಣರ ಸಲುವಾಗಿ ಯಾವಾಗಲೂ ಜೀವಿಸುತ್ತೇನೆ. ಬ್ರಹ್ಮದೇವರಿಗೂ ಮತ್ತು ಬ್ರಾಹ್ಮಣರಿಗೂ ನಿತ್ಯವೂ ನಮಸ್ಕರಿಸುತ್ತೇನೆ.

ದತ್ತಾತ್ರೇಯಪ್ರಸಾದಾಚ್ಚ ಮಯಾ ಪ್ರಾಪ್ತಮಿದಂ ಯಶಃ ।
ಲೋಕೇ ಚ ಪರಮಾ ಕೀರ್ತಿರ್ಧರ್ಮಶ್ಚ ಪರಮೋ ಮಹಾನ್ ॥೨೧॥

ದತ್ತಾತ್ರೇಯರ ಅನುಗ್ರಹದಿಂದ ನನಗೆ ಈ ಯಶಸ್ಸೂ, ಲೋಕದಲ್ಲಿ ಶ್ರೇಷ್ಠವಾದ ಕೀರ್ತಿಯೂ, ಬಹಳ ಶ್ರೇಷ್ಠವಾದ ಧರ್ಮವೂ ಲಭಿಸಿದೆ.

ಅಹೋ ಬ್ರಾಹ್ಮಣಕರ್ಮಾಣಿ ಯಥಾ ಮಾರುತ ತತ್ತ್ವತಃ ।
ತ್ವಯಾ ಪ್ರೋಕ್ತಾನಿ ಕಾರ್ತ್ಸ್ನ್ಯೇನ ಶ್ರುತಾನಿ ಪ್ರಯತೇನ ಹ ॥೨೨॥

ಎಲೈ ಮಾರುತನೇ, ನೀನು ಹೇಳಿದಂತೆ ನಾನು ನಿಯತನಾಗಿ ಕೇಳಿದ ಬ್ರಾಹ್ಮಣರ ಮಹಿಮೆಗಳು ಎಷ್ಟು ಅದ್ಭುತವಾದವುಗಳು!

ವಾಯುಃ

ಬ್ರಾಹ್ಮಣಾನ್ ಕ್ಷತ್ರಧರ್ಮೇಣ ಪಾಲಯಸ್ವೇಂದ್ರಿಯಾಣಿ ಚ ।
ಭೃಗುಭ್ಯಸ್ತೇ ಭಯಂ ಘೋರಂ ತತ್ ತು ಕಾಲಾದ್ ಭವಿಷ್ಯತಿ ॥೨೩॥

ವಾಯು– ಕ್ಷತ್ರಧರ್ಮಕ್ಕೆ ಅನುಸಾರವಾಗಿ ಬ್ರಾಹ್ಮಣರನ್ನು ಪಾಲಿಸು. ನಿನ್ನ ಇಂದ್ರಿಯಗಳನ್ನು ರಕ್ಷಿಸು. ಕಾಲಕ್ರಮದಲ್ಲಿ ನಿನಗೆ ಭಾರ್ಗವರಿಂದ ಘೋರ ಭಯವು ಉಂಟಾಗುವುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಪವನಾರ್ಜುನಸಂವಾದೇ ಚ್ಯವನಪ್ರಶಂಸಾ ನಾಮ ಪಂಚಚತ್ವಾರಿಂಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ನಲವತ್ತೈದನೆಯ ಅಧ್ಯಾಯ ಮುಗಿಯಿತು.

॥ ಪವನಾರ್ಜುನಸಂವಾದಃ ಸಮಾಪ್ತಃ ॥

★ ★ ★ ★ ★

ಇನ್ನೂರ ನಲವತ್ತಾರನೆಯ ಅಧ್ಯಾಯ

ಭೀಷ್ಮರಿಂದ ಕೃಷ್ಣನ ಮಹಿಮೆಯ ವರ್ಣನೆ

ಯುಧಿಷ್ಠಿರಃ

ಬ್ರಾಹ್ಮಣಾನರ್ಚಸೇ ರಾಜನ್ ಸತತಂ ಸಂಶಿತವ್ರತಾನ್ ।
ಕಂ ತು ಕರ್ಮೋದಯಂ ದೃಷ್ಟ್ವಾ ತಾನರ್ಚಸಿ ನರಾಧಿಪ ॥೧॥

ಕಾಂ ವಾ ಬ್ರಾಹ್ಮಣಪೂಜಾಯಾಂ ವೃಷ್ಟಿಂ ದೃಷ್ಟ್ವಾ ಮಹಾವ್ರತ ।
ತಾನರ್ಚಸಿ ಮಹಾಬಾಹೋ ಸರ್ವಮೇತದ್ ವದಸ್ವ ಮೇ ॥೨॥

ಯುಧಿಷ್ಠಿರ– ಎಲೈ ನರಾಧಿಪನೇ, ನೀನು ಯಾವ ಕರ್ಮಫಲವನ್ನು ನೋಡಿ ತೀವ್ರವ್ರತವನ್ನು ಧರಿಸಿದ ಬ್ರಾಹ್ಮಣರನ್ನು ಪೂಜಿಸುತ್ತೀಯೆ? ಎಲೈ ಮಹಾವ್ರತನೇ,

ಮಹಾಬಾಹುವೇ, ಬ್ರಾಹ್ಮಣಪೂಜೆಯಲ್ಲಿ ಯಾವ ಸಮೃದ್ಧಿಯನ್ನು ನೋಡಿ ನೀನು ಅವರನ್ನು ಪೂಜಿಸುತ್ತಿದ್ದೀಯೆ ಎಂಬುದನ್ನು ನನಗೆ ಹೇಳು.

ಭೀಷ್ಮಃ

ಏಷ ತೇ ಕೇಶವಃ ಸರ್ವಮಾಖ್ಯಾಸ್ಯತಿ ಮಹಾಮತಿಃ ।
ವೃಷ್ಟಿಂ ಬ್ರಾಹ್ಮಣಪೂಜಾಯಾಂ ದೃಷ್ಟ್ವಾ ಪುಷ್ಟಿಂ ಮಹಾವ್ರತಃ ॥೩॥

ಭೀಷ್ಮ– ಈ ಮಹಾಮತಿಯಾದ ಮಹಾವ್ರತನಾದ ಕೇಶವನು ಬ್ರಾಹ್ಮಣಪೂಜೆಯ ಫಲವನ್ನು ಮತ್ತು ಸಮೃದ್ಧಿಯನ್ನು ನೋಡಿ ಎಲ್ಲವನ್ನೂ ನಿನಗೆ ಹೇಳುವನು.

ಬಲಂ ಶ್ರೋತ್ರೇ ವಾಙ್ಮನಶ್ಚಕ್ಷುಷೀ ಚ
ಜ್ಞಾನಂ ತಥಾ ನ ವಿಶುದ್ಧಂ ಮಮಾದ್ಯ ।
ದೇಹನ್ಯಾಸೋ ನಾತಿಚಿರಾನ್ಮತೋ ಮೇ
ನ ಚಾತಿತೂರ್ಣಂ ಸವಿತಾऽದ್ಯ ಯಾತಿ ॥೪॥

ಈ ದಿನ ನನಗೆ ನನ್ನ ಬಲ, ಶ್ರೋತ್ರಗಳು, ವಾಙ್ಮನಶ್ಚಕ್ಷುಸ್ಸುಗಳು, ಹಾಗೆ ಜ್ಞಾನ ಯಾವುದೂ ಶುದ್ಧವಾಗಿಲ್ಲ. ನನ್ನ ದೇಹತ್ಯಾಗವು ಸಮೀಪದಲ್ಲಿಯೇ ನನಗೆ ಅಭಿಪ್ರೇತವಾಗಿದೆ. ಈ ದಿನ ಸೂರ್ಯನು ಬಹಳ ಶೀಘ್ರವಾಗಿ ಹೋಗುತ್ತಿಲ್ಲ.

ಉಕ್ತಾ ಧರ್ಮಾ ಯೇ ಪುರಾಣೇ ಮಹಾಂತೋ
ಬ್ರಾಹ್ಮಣಾನಾಂ ಕ್ಷತ್ರಿಯಾಣಾಂ ವಿಶಾಂ ಚ ।
ಪೌರಾಣಂ ಯೇ ದಂಡಮುಪಾಸತೇ ಚ
ಶೇಷಂ ಕೃಷ್ಣಾದುಪಶಿಕ್ಷಸ್ವ ಪಾರ್ಥ ॥೫॥

ನಾನು ನಿನಗೆ ಪುರಾಣದಲ್ಲಿ ಹೇಳಿದ ಬ್ರಾಹ್ಮಣರ, ಕ್ಷತ್ರಿಯರ ಮತ್ತು ವೈಶ್ಯರ ಮಹಾಧರ್ಮಗಳನ್ನು ಹೇಳಿದ್ದೇನೆ. ಯಾರು ದಂಡವನ್ನು ಉಪಜೀವಿಸಿ ಬದುಕುತ್ತಾರೋ ಅಂತಹ ಪ್ರಾಚೀನ ಕ್ಷತ್ರಿಯರ ಧರ್ಮವನ್ನೂ ಹೇಳಿದ್ದೇನೆ. ಎಲೈ ಪಾರ್ಥನೇ, ಉಳಿದುದನ್ನು ನೀನು ಕೃಷ್ಣನಿಂದ ತಿಳಿ.

ಅಹಂ ಹ್ಯೇನಂ ವೇದ್ಮಿ ತತ್ತ್ವೇನ ಕೃಷ್ಣಂ
ಯೋऽಯಂ ಹಿ ಯಚ್ಚಾಸ್ಯ ಬಲಂ ಪುರಾಣಮ್ ।

ಅಮೇಯಾತ್ಮಾ ಕೇಶವಃ ಕೌರವೇಂದ್ರ
ಸೋಽಯಂ ಧರ್ಮಂ ವಕ್ಷ್ಯತಿ ಸಂಶಯೇಷು ॥೬॥

ಈ ಕೃಷ್ಣನು ಯಾರು? ಅವನ ಅನಾದಿಯಾದ ಬಲವು ಎಂತಹದು ಎಂದು ನಾನು ಕೃಷ್ಣನನ್ನು ಸರಿಯಾಗಿ ತಿಳಿದಿದ್ದೇನೆ. ಎಲೈ ಕೌರವೇಂದ್ರನೇ, ಕೇಶವನು ಅಚಿಂತ್ಯ ಮಹಿಮೆಯುಳ್ಳವನು. ಅಂತಹ ಇವನು ನಿನ್ನ ಸಂಶಯಗಳಿಗೆ ಪರಿಹಾರವನ್ನು ಹೇಳುವನು.

ಕೃಷ್ಣಃ ಪೃಥ್ವೀಮಸೃಜತ್ ಖಂ ದಿವಂ ಚ
ವರಾಹೋಽಯಂ ಭೀಮಬಲಃ ಪುರಾಣಃ ।
ಅಸ್ಯ ಚಾಧೋಽಥಾಂತರಿಕ್ಷಂ ದಿವಂ ಚ
ದಿಶಶ್ಚತಸ್ರಃ ಪ್ರದಿಶಶ್ಚತಸ್ರಃ ।
ಸೃಷ್ಟಿಸ್ತಥೈವೇಯಮನುಪ್ರಸೂತಾ
ಸ ನಿರ್ಮಮೇ ವಿಶ್ವಮಿದಂ ಪುರಾಣಮ್ ॥೭॥

ಕೃಷ್ಣನು ಭೂಮಿಯನ್ನು, ಅಂತರಿಕ್ಷವನ್ನು, ಸ್ವರ್ಗವನ್ನು ಸೃಷ್ಟಿಸಿದನು. ಭಯಂಕರ ಬಲವುಳ್ಳ ಪ್ರಾಚೀನನಾದ ವರಾಹನೂ ಇವನೇ. ಈ ಭೂಮಿಯ ಕೆಳಭಾಗ, ಮೇಲೆ ಅಂತರಿಕ್ಷ, ಸ್ವರ್ಗ, ನಾಲ್ಕು ದಿಕ್ಕುಗಳು, ನಾಲ್ಕು ವಿದಿಕ್ಕುಗಳು, ಅನಂತರ ಉಂಟಾದ ಸೃಷ್ಟಿ, ಈ ಪುರಾತನವಾದ ವಿಶ್ವ- ಎಲ್ಲವೂ ಇವನಿಂದಲೇ ನಿರ್ಮಿತವಾದುದು.

ಅಸ್ಯ ನಾಭ್ಯಾಂ ಪುಷ್ಕರಂ ಸಂಪ್ರಸೂತಂ
ಯತ್ರೋತ್ಪನ್ನಃ ಸ್ವಯಮೇವಾಮಿತೌಜಾಃ ।
ಯೇನಾಚ್ಛಿನ್ನಂ ತತ್ ತಮಃ ಪಾರ್ಥ ಘೋರಂ
ಯತ್ ತತ್ ತಿಷ್ಠತ್ಯರ್ಣವಂ ತರ್ದಯಾನಮ್ ॥೮॥

ಇವನ ನಾಭಿಯಲ್ಲಿ ಕಮಲವು ಹುಟ್ಟಿತು. ಅಲ್ಲಿ ಸ್ವತಂತ್ರನಾದ ನಾರಾಯಣನಿಂದ ಅಮಿತ ತೇಜಸ್ವಿಯಾದ ಬ್ರಹ್ಮನು ಜನಿಸಿದನು. ಎಲೈ ಪಾರ್ಥನೇ, ಆ ಕಮಲವು ಪ್ರಳಯ ಸಮುದ್ರವನ್ನೇ ಹೆದರಿಸುತ್ತಿದ್ದ ಘೋರವಾದ ಕತ್ತಲೆಯನ್ನು ನಾಶಪಡಿಸಿತು.

ಕೃತೇ ಯುಗೇ ಧರ್ಮ ಆಸೀತ್ ಸಮಗ್ರಃ
ತ್ರೇತಾಕಾಲೇ ಯಜ್ಞಮನುಪ್ರಪನ್ನಃ ।

ಫಲಂ ತ್ವಾಸೀದ್ ದ್ವಾಪರೇ ಪಾರ್ಥ ಕೃಷ್ಣಃ
ಕಲಾವಧರ್ಮಃ ಕ್ಷಿತಿಮಾಜಗಾಮ ॥೯॥

ಕೃತಯುಗದಲ್ಲಿ ಧರ್ಮವು ಸಮಗ್ರವಾಗಿದ್ದಿತು. ಕೃತಯುಗದಲ್ಲಿ ಮಾಡಿದ ಸಕಲ ಧರ್ಮಗಳಿಗೂ, ತ್ರೇತಾಯುಗದಲ್ಲಿ ಮಾಡಿದ ಸಕಲ ಜ್ಞಾನ ಯಜ್ಞಗಳಿಗೂ ಕೃಷ್ಣನು ಫಲರೂಪನಾಗಿದ್ದನು. ಅಂತಹ ಅವನು ದ್ವಾಪರದಲ್ಲಿ ಕೃಷ್ಣನಾಗಿ ಅವತರಿಸಿದನು. ಕಲಿಯುಗದಲ್ಲಿ ಭೂಮಿಯನ್ನು ಅಧರ್ಮವು ಆವರಿಸಿತು.

ಸ ಪೂರ್ವದೇವೋ ನಿಜಘಾನ ದೈತ್ಯಾನ್
ಸ ಪೂರ್ವದೇವಶ್ಚ ಬಭೂವ ಸಮ್ರಾಟ್ ।
ಸ ಭೂತಾನಾಂ ಭಾವನಾದ್ ಭೂತಭವ್ಯಃ
ವಿಶ್ವಸ್ಯಾಸ್ಯ ಜಗತಶ್ಚಾಪಿ ಗೋಪ್ತಾ ॥೧೦॥

ಅನಾದಿದೇವನಾದ ಅವನು ದೈತ್ಯರನ್ನು ಸಂಹರಿಸಿದನು. ಅನಾದಿದೇವನಾದ ಅವನೇ ಚಕ್ರವರ್ತಿಯಾದನು. ಅವನು ಭೂತಗಳ ಉತ್ಪತ್ತಿಯನ್ನು ಮಾಡುವುದರಿಂದ ಭೂತಭವ್ಯನೆನಿಸುತ್ತಾನೆ. ಈ ಸಮಸ್ತವಾದ ಜನರಿಗೂ ರಕ್ಷಕನೂ ಆಗಿದ್ದಾನೆ.

ಯದಾ ಧರ್ಮೋ ಗ್ಲಾಯತಿ ವೈ ಸುರಾಣಾಂ
ತದಾ ಕೃಷ್ಣೋ ಜಾಯತೇ ಮಾನುಷೇಷು ।
ಧರ್ಮೇ ಸ್ಥಿತ್ವಾ ಸ ತು ವೈ ಭಾವಿತಾತ್ಮಾ
ಪರಾಂಶ್ಚ ಲೋಕಾನಪರಾಂಶ್ಚ ಯಾತಿ ॥೧೧॥

ದೇವತೆಗಳ ಧರ್ಮವು ಮ್ಲಾನತೆಯನ್ನು ಹೊಂದಿದಾಗ ಕೃಷ್ಣನು ಮನುಷ್ಯರಲ್ಲಿ ಅವತರಿಸುತ್ತಾನೆ. ಪರಿಶುದ್ಧನಾದ ಅವನು ಲೋಕವನ್ನು ಧರ್ಮದಲ್ಲಿ ಸ್ಥಾಪಿಸಿ ಸ್ವರ್ಗಲೋಕಗಳಿಗೂ ಮತ್ತು ವೈಕುಂಠಾದಿ ಲೋಕಗಳಿಗೂ ಹೋಗುತ್ತಾನೆ.

ತ್ಯಾಜ್ಯಾಂಸ್ಯಕ್ತ್ವಾ ಚಾಸುರಾಣಾಂ ವಧಾಯ
ಕಾರ್ಯಾಕಾರ್ಯೇ ಕಾರಣಂ ಚೈವ ಪಾರ್ಥ ।
ಕೃತಂ ಕರಿಷ್ಯತ್ ಕ್ರಿಯತೇ ಚ ದೇವೋ
ಮುಹುಃ ಸೋಮಂ ವಿದ್ಧಿ ಚ ಶಕ್ರಮೇತಮ್ ॥೧೨॥

ಕಲಿಯುಗದ ಪ್ರವರ್ತನೆಗಾಗಿ ಉಳಿಸಬೇಕಾದ ಅಸುರರನ್ನು ಬಿಟ್ಟು ಉಳಿದವರನ್ನು ವಧೆ ಮಾಡಿ ಅವನು ಕಾರ್ಯಕಾರಣಗಳನ್ನು ನಿಯಂತ್ರಿಸುತ್ತಾನೆ. ಈ ದೇವನು ಭೂತ-ಭವಿಷ್ಯತ್-ವರ್ತಮಾನ ಕಾರ್ಯಗಳನ್ನು ಮಾಡುತ್ತಾನೆ. ಅವನನ್ನೇ ಸೋಮನೆಂದೂ, ಶಕ್ರನೆಂದೂ ತಿಳಿ (ಅವನೇ ಸೋಮ-ಶಕ್ರಾದಿ ಪದಗಳಿಂದ ಮುಖ್ಯವಾಗಿ ವಾಚ್ಯನೆಂದು ತಿಳಿ).

ಸ ವಿಶ್ವಕರ್ಮಾ ಸ ಚ ವಿಶ್ವರೂಪಃ
ಸ ವಿಶ್ವಭೃದ್ ವಿಶ್ವಸೃಗ್ ವಿಶ್ವಜಿಚ್ಚ।
ಸ ಶೂಲಭೃಚ್ಛೋಣಿತಭೃತ್ ಕರಾಳಃ
ತಂ ಕರ್ಮಭಿರ್ವಿದಿತಂ ವೈ ಸ್ತುವಂತಿ ॥೧೩॥

ಅವನೇ ಸಮಸ್ತ ಕಾರ್ಯಗಳನ್ನು ಮಾಡುವುದರಿಂದ ವಿಶ್ವಕರ್ಮನೆನಿಸುತ್ತಾನೆ. ಸಮಸ್ತ ರೂಪಗಳನ್ನು ಧರಿಸಿರುವುದರಿಂದ ವಿಶ್ವರೂಪನೆನಿಸುತ್ತಾನೆ. ಅವನು ವಿಶ್ವವನ್ನು ಸೃಷ್ಟಿಮಾಡುತ್ತಾನೆ, ಧರಿಸುತ್ತಾನೆ ಮತ್ತು ಜಯಿಸುತ್ತಾನೆ. ಅವನು ಶೂಲವನ್ನು ಧರಿಸಿ ರಕ್ತಲಿಪ್ತನಾಗಿ ಕರಾಳನಾಗುತ್ತಾನೆ. ತನ್ನ ಕರ್ಮಗಳಿಂದ ತಿಳಿಯಲ್ಪಡುವ ಅವನನ್ನು ಭಕ್ತರು ಸ್ತೋತ್ರ ಮಾಡುತ್ತಾರೆ.

ತಂ ಗಂಧರ್ವಾ ಅಪ್ಸರಸಶ್ಚ ನಿತ್ಯಮ್
ಉಪತಿಷ್ಠಂತೇ ವಿಧಿನಾ ಪಾಪಶಾಂತ್ಯೈ।
ರಾಕ್ಷಸಾಶ್ಚಾಪಿ ನಮಂತಿ ಸರ್ವೇ
ರಾಯಸ್ಪೋಷಃ ಸ ವಿಜಿಗೀಷುರೇಕಃ ॥೧೪॥

ಅವನನ್ನು ತಮ್ಮ ಪಾಪಶಾಂತಿಗಾಗಿ ಗಂಧರ್ವರು ಮತ್ತು ಅಪ್ಸರೆಯರು ವಿಧಿಗೆ ಅನುಸಾರವಾಗಿ ಯಾವಾಗಲೂ ಸ್ತೋತ್ರ ಮಾಡುತ್ತಾರೆ. ಪ್ರಹ್ಲಾದ ಮೊದಲಾದ ರಾಕ್ಷಸರೂ ಅವನನ್ನು ನಮಸ್ಕರಿಸುತ್ತಾರೆ. ಸಂಪತ್ತನ್ನು ಪೋಷಿಸುವವನೂ, ಜಯಶೀಲನಾದವನೂ ಅವನೊಬ್ಬನೇ.

ತಮಧ್ವರೇ ಶಂಸಿತಾರಃ ಸ್ತುವಂತಿ
ರಥಂತರೇ ಸಾಮಗಾಶ್ಚ ಸ್ತುವಂತಿ।

ತಂ ಬ್ರಾಹ್ಮಣಾ ಬ್ರಹ್ಮಮಂತ್ರೈಃ ಸ್ತುವಂತಿ
ತಸ್ಮೈ ಹವಿರಧ್ವರ್ಯವಃ ಕಲ್ಪಯಂತಿ ॥೧೫॥

ಯಜ್ಞಗಳಲ್ಲಿ ಶಸ್ತ್ರಮಂತ್ರಗಳನ್ನು ಹೇಳುವವರು ಅವನನ್ನೇ ಸ್ತೋತ್ರ ಮಾಡುತ್ತಾರೆ. ಸಾಮಗಾನವನ್ನು ಮಾಡುವವರು ರಥಂತರ ಸಾಮದಿಂದ ಅವನನ್ನೇ ಸ್ತೋತ್ರ ಮಾಡುತ್ತಾರೆ. ಬ್ರಾಹ್ಮಣರು ವೇದಮಂತ್ರಗಳಿಂದ ಅವನನ್ನು ಸ್ತೋತ್ರ ಮಾಡುತ್ತಾರೆ. ಅಧ್ವರ್ಯುಗಳು ಅವನಿಗೆ ಹವಿಸ್ಸನ್ನು ಅರ್ಪಿಸುತ್ತಾರೆ.

ಸ ಪೌರಾಣೀಂ ಬ್ರಹ್ಮಗುಹಾಂ ಪ್ರವಿಶ್ಯೋ
ಮಹೀ ಸತ್ರಂ ಭಾರತಾಗ್ರೇ ದದರ್ಶ ।
ಸ ಚೈವ ಗಾಮುದ್ಧಾರಾಗ್ರ್ಯಕರ್ಮಾ
ವಿಕ್ಷೋಭ್ಯ ದೈತ್ಯಾನುರಗಾನ್ ದಾನವಾಂಶ್ಚ ॥೧೬॥

ಅವನು ಅನಾದಿಯಾದ ವೇದದ ಗುಹೆಯನ್ನು ಪ್ರವೇಶಿಸಿದ್ದಾನೆ (ಕೃಷ್ಣನೇ ವೇದದಿಂದ ಪ್ರತಿಪಾದ್ಯನಾಗಿದ್ದಾನೆ). ಎಲೈ ಭಾರತನೇ, ಮಹಿಮೋಪೇತನಾದ ಅವನು ಮೊದಲು ಸತ್ರವನ್ನು ನೋಡಿದನು. ಉಗ್ರಕರ್ಮವನ್ನು ಹೊಂದಿದ ಅವನೇ ದೈತ್ಯ-ದಾನವರನ್ನೂ, ಉರಗಗಳನ್ನೂ ಕ್ಷೋಭೆಗೊಳಿಸಿ ಭೂಮಿಯನ್ನು ಮೇಲೆತ್ತಿದನು.

ತಂ ಘೋಷಾರ್ಥೇ ಗೀರ್ಭಿರಿಂದ್ರಾಃ ಸ್ತುವಂತಿ
ಸ ಚಾಪೀಶೋ ಭಾರತೈಕಃ ಪಶೂನಾಮ್ ।
ತಸ್ಯ ಭಕ್ಷಾನ್ ವಿವಿಧಾನ್ ವೇದಯಂತಿ
ತಮೇವಾಜೌ ವಾಹನಂ ವೇದಯಂತಿ ।
ತಸ್ಯಾಂತರಿಕ್ಷಂ ಪೃಥಿವೀ ದಿವಂ ಚ
ಸರ್ವಂ ವಶೇ ತಿಷ್ಠತಿ ಶಾಶ್ವತಸ್ಯ ॥೧೭॥

ಗೋಕುಲದ ರಕ್ಷಣೆಗಾಗಿ ಅವನನ್ನು ಪ್ರಭುಗಳಾದ ದೇವತೆಗಳು ಸ್ತೋತ್ರ ಮಾಡುತ್ತಾರೆ. ಎಲೈ ಭಾರತನೇ, ಅವನೇ ಪಶುಗಳಿಗೆ ಮುಖ್ಯನಾದ ಪತಿಯಾದವನು. ಅವನಿಗೆ ವಿವಿಧವಾದ ಭಕ್ಷಗಳನ್ನು ನಿವೇದಿಸುತ್ತಾರೆ (ವಿವಿಧವಾದ ಬ್ರಾಹ್ಮಣ-ಕ್ಷತ್ರಿಯಾದಿಗಳು ಅವನ ಭಕ್ಷ್ಯವೆಂದು ವೇದಗಳು ಹೇಳುತ್ತವೆ). ಯುದ್ಧದಲ್ಲಿ ಅವನನ್ನೇ

ಯುದ್ಧನಿವಾಹನನೆಂದು ಹೇಳುತ್ತಾರೆ (ವಾಹನಗಳಲ್ಲಿದ್ದು ಆ ಕಾರ್ಯವನ್ನು ಮಾಡುವವನು). ಶಾಶ್ವತನಾದ ಅವನ ವಶದಲ್ಲಿ ಭೂಮಿ-ಅಂತರಿಕ್ಷ-ಸ್ವರ್ಗ ಎಲ್ಲವೂ ಇವೆ -ಲಕ್ಷಾಲಂಕಾರ.

ಸ ಕುಂಭರೇತಃ ಸಸೃಜೇ ಪುರಾಣಂ
ಯತ್ರೋತ್ಪನ್ನಮೃಷಿಮಾಹುರ್ವಸಿಷ್ಠಮ್ ।
ಸ ಮಾತರಿಶ್ವಾ ವಿಭುರಶ್ವವಾಜೀ
ಸ ರಶ್ಮಿಮಾನ್ ಸವಿತಾ ಚಾದಿದೇವಃ ॥೧೮॥

ಅವನು ಪೃಥಿವಿಯನ್ನು ಕ್ಷೋಭೆಗೊಳಿಸುವಂತಹ ವೀರ್ಯವುಳ್ಳವನಾಗಿ ಪ್ರಾಚೀನವಾದ ಈ ಬ್ರಹ್ಮಾಂಡವನ್ನು ಸೃಷ್ಟಿಸಿದನು. ಬ್ರಹ್ಮಾಂಡದಲ್ಲಿ ಚಿರಕಾಲ ವಾಸಿಸುವ ಕಾರಣದಿಂದ ವಾಸಿಸುವರಲ್ಲಿ ಶ್ರೇಷ್ಠನಾದ ಜ್ಞಾನಿಯಾದ ಬ್ರಹ್ಮನು ಅಲ್ಲಿ ಉದಿಸಿದನು. ಅವನೇ ಮಾತರಿಶ್ವಾ, ಅವನೇ ವಿಭು, ಅವನೇ ಅಶ್ವವಾಜಗಳನ್ನು ಹೊಂದಿದವನು. ಅವನೇ ಕಿರಣಗಳಿಂದ ಕೂಡಿದ ಸವಿತೃ. ಅವನೇ ಆದಿದೇವ.

ತೇನಾಸುರಾ ವಿಜಿತಾಃ ಸರ್ವ ಏವ
ತಸ್ಯ ವಿಕ್ರಾಂತೈರ್ವಿಜಿತಾನೀಹ ತ್ರೀಣಿ ।
ಸ ದೇವಾನಾಂ ಮಾನುಷಾಣಾಂ ಪಿತೄಣಾಂ
ತಮೇವಾಹುರ್ಯಜ್ಞವಿದಃ ಪುರಾಣಮ್ ॥೧೯॥

ಅವನೇ ಎಲ್ಲ ಅಸುರರನ್ನೂ ಜಯಿಸಿದನು. ಅವನ ಪಾದವಿನ್ಯಾಸಗಳಿಂದ ದೇವತೆಗಳ, ಮನುಷ್ಯರ ಮತ್ತು ಪಿತೃಗಳ ಮೂರುಲೋಕಗಳೂ ಜಯಿಸಲ್ಪಟ್ಟವು. ಯಜ್ಞವನ್ನು ತಿಳಿದವರು ಅವನನ್ನೇ ಪ್ರಾಚೀನನಾದವನೆಂದು ಹೇಳುತ್ತಾರೆ.

ಸ ಏವ ಕಾಲಂ ವಿಭಜನ್ನುದೇತಿ
ತಸ್ಯೋತ್ತರಂ ದಕ್ಷಿಣಂ ಚಾಯನೇ ದ್ವೇ ।
ತಸ್ಯೈವೋರ್ಧ್ವಂ ತಿರ್ಯಗಧಶ್ಚರಂತಿ
ಗಭಸ್ತಯೋ ಮೇದಿನೀಂ ತಾಪಯಂತಃ ॥೨೦॥

ಅವನೇ ಕಾಲವನ್ನು (ಹಗಲು-ರಾತ್ರಿ ಎಂದು) ವಿಭಾಗ ಮಾಡಿ ಉದಿಸುತ್ತಾನೆ. ಅವನಿಗೆ ಉತ್ತರ ಮತ್ತು ದಕ್ಷಿಣ ಎರಡು ಆಯನಗಳು. ಅವನ ಕಿರಣಗಳೇ ಭೂಮಿಗೆ

ಶಾಖವನ್ನು ಮತ್ತು ಬೆಳಕನ್ನು ಕೊಡುತ್ತಾ ಮೇಲ್ಮುಖವಾಗಿ, ಕೆಳಮುಖವಾಗಿ ಮತ್ತು ಅಕ್ಕ-ಪಕ್ಕಗಳಲ್ಲಿ ಸಂಚರಿಸುತ್ತವೆ.

ತಂ ಬ್ರಾಹ್ಮಣಾ ವೇದವಿದೋ ಜುಷಂತಿ
ತಸ್ಯಾದಿತ್ಯೋ ಭಾಮುಪಯುಜ್ಯ ಭಾತಿ ।
ಸ ಮಾಸಿ ಮಾಸ್ಯಧ್ವರಕೃದ್ ವಿಧತ್ತೇ
ತಮಧ್ವರೇ ವೇದವಿದಃ ಪಠಂತಿ ॥೨೧॥

ವೇದವನ್ನು ತಿಳಿದ ಬ್ರಾಹ್ಮಣರು ಅವನ ಸೇವೆಯನ್ನು ಮಾಡುತ್ತಾರೆ. ಸೂರ್ಯನು ಅವನ ತೇಜಸ್ಸನ್ನು ಉಪಜೀವಿಸಿಕೊಂಡು ಪ್ರಕಾಶಿಸುತ್ತಾನೆ. ಅವನು ಮಾಸ ಮಾಸಗಳಲ್ಲಿ ಯಜ್ಞಗಳನ್ನು ಮಾಡುವವನಾಗಿ ದರ್ಶಪೌರ್ಣಮಾಸಾದಿ ಯಜ್ಞಗಳನ್ನು ಮಾಡುತ್ತಾನೆ. ವೇದವನ್ನು ತಿಳಿದವರು ಯಜ್ಞಗಳಲ್ಲಿ ಅವನನ್ನು ಸ್ತೋತ್ರ ಮಾಡುತ್ತಾರೆ.

ಸ ಏಕಯುಕ್ ಚಕ್ರಮಿದಂ ತ್ರಿನಾಭಿ-
ಸಪ್ತಾಶ್ವಯುಕ್ತಂ ವಹತೇ ವೈ ತ್ರಿಧಾಮಾ ।
ಮಹಾತೇಜಾಃ ಸರ್ವಗಃ ಸರ್ವಸಿಂಹಃ
ಕೃಷ್ಣೋ ಲೋಕಾನ್ ಧಾರಯತೇ ತಥೈಕಃ ।
ಅಶ್ನನ್ನನಶ್ನಂಶ್ಚ ತಥೈವ ಧೀರಃ
ಕೃಷ್ಣಂ ಸದಾ ಪಾರ್ಥ ಕರ್ತಾರಮೇಹಿ ॥೨೨॥

ತ್ರಿಧಾಮನಾದ ಅವನು ಒಬ್ಬ ಸಾರಥಿಯನ್ನು, ಒಂದು ಚಕ್ರವನ್ನು, ಮೂರು ಧಾಮಗಳನ್ನು, ಸಪ್ತಾಶ್ವಗಳನ್ನು ಹೊಂದಿದ ಈ ಸೂರ್ಯರಥವನ್ನು (ಕಾಲಚಕ್ರವನ್ನು) ನಿರ್ವಾಹ ಮಾಡುತ್ತಾನೆ. ಮಹಾತೇಜಸ್ವಿಯೂ, ಸರ್ವವ್ಯಾಪ್ತನೂ, ಸರ್ವ ಸಮರ್ಥನೂ ಆದ ಕೃಷ್ಣನು ಒಬ್ಬನೇ ಲೋಕಗಳನ್ನು ಧರಿಸುತ್ತಾನೆ. ಧೀರನಾದ ಅವನು ಭೋಗಿಸಿದರೂ, ಭೋಗಿಸದಿದ್ದರೂ ಒಂದೇ ರೀತಿ ಇರುತ್ತಾನೆ. ಎಲೈ ಪಾರ್ಥನೇ, ಯಾವಾಗಲೂ ಕೃಷ್ಣನನ್ನೇ ಸರ್ವಕರ್ತೃವೆಂದು ತಿಳಿ.

ಸ ಏಕದಾ ಕಕ್ಷಗತೋ ಮಹಾತ್ಮಾ
ತೃಪ್ತೋ ವಿಭುಃ ಖಾಂಡವೇ ಧೂಮಕೇತುಃ ।

ಸ ರಾಕ್ಷಸಾನುರಗಾಂಶ್ಚಾವಜಿತ್ಯ
ಸರ್ವತ್ರಗಃ ಸರ್ವಮಗ್ನೌ ಜುಹೋತಿ ॥೨೩॥

ಮಹಾತ್ಮನಾದ ಅವನು ಒಮ್ಮೆ ಖಾಂಡವವನದಲ್ಲಿ ಇದ್ದವನಾಗಿ ಧೂಮಕೇತುವಾಗಿ, ವಿಭುವಾಗಿ ತೃಪ್ತನಾದನು. ಸರ್ವತ್ರವ್ಯಾಪ್ತನಾದ ಅವನೇ ರಾಕ್ಷಸರನ್ನು, ಸರ್ಪಗಳನ್ನು ಜಯಿಸಿ ಎಲ್ಲರನ್ನೂ ಅಗ್ನಿಯಲ್ಲಿ ಹೋಮ ಮಾಡಿದನು.

ಸ ಏವಾಶ್ವಃ ಶ್ವೇತಮಶ್ವಂ ಪ್ರಯಚ್ಛತ್
ಸ ಏವಾಶ್ವಾನಥ ಸರ್ವಾಂಶ್ಚಕಾರ ।
ತ್ರಿಬಂಧುರಸ್ತಸ್ಯ ರಥಸ್ತ್ರಿಚಕ್ರಃ
ತ್ರಿವೃಚ್ಛಿರಾಶ್ಚತುರಸ್ರಶ್ಚ ತಸ್ಯ ॥೨೪॥

ಅವನೇ ಅಶ್ವನಾಮಕನಾಗಿ ಶ್ವೇತಾಶ್ವವಾದ ಉಚ್ಚೈಃಶ್ರವಸ್ಸನ್ನು ನೀಡಿದನು. ಅನಂತರ ಬೇರೆ ಅಶ್ವಗಳನ್ನು ಸೃಷ್ಟಿಸಿದನು. ಅವನ ರಥವು ಮೂರು ನೊಗಗಳಿಂದ (ಎದುರಿಗೆ ಒಂದು, ಎರಡು ಪಾರ್ಶ್ವಗಳಲ್ಲೂ ಒಂದೊಂದು) ಕೂಡಿದೆ. ಅವನ ರಥವು ಮೂರು ಚಕ್ರಗಳನ್ನು ಹೊಂದಿದೆ (ಮೂರು ಚಕ್ರವೆಂದರೆ ಮೂರು ವೇದಗಳು. ಅಥರ್ವಣ ವೇದವು ಮೂರು ವೇದಗಳಲ್ಲೇ ಸೇರಿರುವುದರಿಂದ ತ್ರಿಚಕ್ರವೆಂದರೆ ನಾಲ್ಕು ವೇದಗಳು ಎಂದು ಅರ್ಥ). ಅವನ ಶಿರಸ್ಸು ಮೂರು ದಿಕ್ಕುಗಳನ್ನೂ ವ್ಯಾಪಿಸಿದೆ. ಪರಿಪೂರ್ಣವಾದ ಅರ್ಜುನನ ರಥವು ಅವನ ವಶದಲ್ಲೇ ಇರುತ್ತದೆ.

ಸ ವಿಹಾಯೋ ವ್ಯದಧಾತ್ ಪಂಚನಾಭಿಃ
ಸ ನಿರ್ಮಮೇ ಗಾಂ ದಿವಮಂತರಿಕ್ಷಮ್ ।
ಏವಂ ರಮ್ಯಾನಸೃಜತ್ ಪರ್ವತಾಂಶ್ಚ
ಹೃಷೀಕೇಶೋಽಮಿತದೀಪ್ತಾಗ್ನಿತೇಜಾಃ ॥೨೫॥

ಮುಕ್ತಾಮುಕ್ತ ದೇವತೆಗಳು, ಮುಕ್ತಾಮುಕ್ತ ಅಸುರರು ಮತ್ತು ಸಂಸಾರಿಗಳು ಎಂಬ ಈ ಐದು ವಿಧರಾದ ಜೀವರನ್ನು ಉದರದಲ್ಲಿ ಹೊಂದಿದ ಅವನು ಆಕಾಶವನ್ನು ಸೃಷ್ಟಿಸಿದನು. ಅವನು ಭೂಮಿಯನ್ನು, ಸ್ವರ್ಗವನ್ನು, ಅಂತರಿಕ್ಷವನ್ನೂ ಸೃಷ್ಟಿಸಿದನು. ಅಮಿತ ದೀಪ್ತವಾದ ಅಗ್ನಿತೇಜಸ್ಸನ್ನು ಹೊಂದಿದ ಹೃಷೀಕೇಶನಾದ ಅವನು ರಮ್ಯವಾದ ಪರ್ವತಗಳನ್ನೂ ಸೃಷ್ಟಿಮಾಡಿದನು.

ಅಲಂಘಯದ್ ಸರತೋ ವೈ ಜಿಘಾಂಸುಃ
ಚಕ್ರಂ ವಜ್ರಂ ಪ್ರಹರಂತಂ ನಿರಸ್ಯ ।
ಸ ಮಹೇಂದ್ರಃ ಸ್ತೂಯತೇ ವೈ ಮಹಾಧ್ವರೇ
ವಿಪ್ರೈರೇಕೋ ಋಕ್ಸಹಸ್ರೈಃ ಪುರಾಣೈಃ ॥೨೬॥

ಅವನು ವಜ್ರಾಯುಧವನ್ನು ಪ್ರಯೋಗಿಸುತ್ತಿದ್ದ ಇಂದ್ರನನ್ನು ನಿರಾಸ ಮಾಡಿ ಚಕ್ರವನ್ನು ಪ್ರಯೋಗಿಸಿ ಸಜ್ಜನರ ಮೇಲೆ ಬೀಳುತ್ತಿದ್ದ ಪರ್ವತಗಳನ್ನು ಕೊಲ್ಲಲು ಉದ್ಯುಕ್ತನಾಗಿ ಭೂಮಿಯನ್ನು ಇಲ್ಲಿಂದಲ್ಲಿಗೆ ದಾಟಿದನು. ಮಹಾಧ್ವರಗಳಲ್ಲಿ ಮಹೇಂದ್ರನೆಂದು ಅವನೇ ಸ್ತೋತ್ರ ಮಾಡಲ್ಪಡುತ್ತಾನೆ. ಪ್ರಾಚೀನವಾದ ಸಹಸ್ರ ರೂಪಗಳಿಂದ (ಬೃಹತೀಸಹಸ್ರದಿಂದ) ಬ್ರಾಹ್ಮಣರಿಂದ ಅವನೇ ಸ್ತೋತ್ರ ಮಾಡಲ್ಪಡುತ್ತಾನೆ.

ದುರ್ವಾಸಾ ವೈ ತೇನ ನಾನ್ಯೇನ ಶಕ್ಯೋ
ಗೃಹೇ ರಾಜನ್ ವಾಸಯಿತುಂ ಮಹೌಜಾಃ ।
ತಮೇವಾಹುರ್ಋಷಿಮೇಕಂ ಪುರಾಣಂ
ಸ ವಿಶ್ವಕೃದ್ ವಿದಧಾತ್ಯಾತ್ಮಭಾವಾನ್ ॥೨೭॥

ಎಲೈ ರಾಜನೇ, ಮಹಾಸಾಮರ್ಥ್ಯೋಪೇತರಾದ ದುರ್ವಾಸರನ್ನು ಅವನನ್ನು ಬಿಟ್ಟು ಬೇರೆ ಯಾವನೂ ಮನೆಯಲ್ಲಿ ಇಟ್ಟುಕೊಳ್ಳಲು ಶಕ್ತನಾಗಿರಲಿಲ್ಲ. ಅವನನ್ನೇ ಜ್ಞಾನಿಗಳು ಪ್ರಾಚೀನನಾದ, ಮುಖ್ಯವಾದ, ಶತರ್ಚ್ಯಾದಿ ಋಷಿಗಳೆಂದು ಹೇಳುತ್ತಾರೆ (ಶತರ್ಚ್ಯಾದಿ ಶಬ್ದದಿಂದ ಅವನೇ ಮುಖ್ಯವಾಚ್ಯನೆಂದು ಹೇಳುತ್ತಾರೆ). ವಿಶ್ವಕರ್ತೃವಾದ ಅವನೇ ತನ್ನ ಅಭಿಪ್ರಾಯಗಳನ್ನು ಪ್ರಕಟಿಸುತ್ತಾನೆ.

ವೇದಾಂಶ್ಚ ಯೋ ವೇದಯತೇऽಧಿದೇವೋ
ವಿಧೀಂಶ್ಚ ಯಶ್ಚಾಶ್ರಯತೇ ಪುರಾಣಾನ್ ।
ಕಾಮೇ ವೇದೇ ಲೌಕಿಕೇ ಯತ್ಫಲಂ ಚ
ವಿಷ್ವಕ್ಸೇನೇ ಸರ್ವಮೇತತ್ ಪ್ರತೀಹಿ ॥೨೮॥

ಸರ್ವೋತ್ತಮ ದೇವನಾದ ಅವನು ವೇದಗಳನ್ನು ತಿಳಿಸುತ್ತಾನೆ. ಪ್ರಾಚೀನವಾದ ವಿಧಿಗಳನ್ನು ಅನುಸರಿಸುತ್ತಾನೆ. ವೇದಗಳಲ್ಲಿ ಲೋಕದಲ್ಲಿ, ಕಾಮ್ಯಕರ್ಮಗಳಲ್ಲಿ ಯಾವ

ಫಲವು ವಿಹಿತವಾಗಿದೆಯೋ ಅದೆಲ್ಲವೂ ವಿಷ್ವಕ್ಸೇನನಾದ ಕೃಷ್ಣನ ಅಧೀನವಾಗಿದೆ ಎಂದು ತಿಳಿ.

ಜ್ಯೋತೀಂಷಿ ಶುಕ್ಲಾನಿ ಚ ಸರ್ವಲೋಕೇ
ತ್ರಯೋ ಲೋಕಾ ಲೋಕಪಾಲಾಸ್ತ್ರಯಶ್ಚ ।
ತ್ರಯೋಽಗ್ನಯೋ ವ್ಯಾಹೃತಯಶ್ಚ ತಿಸ್ರಃ
ಸರ್ವೇ ದೇವಾ ದೇವಕೀಪುತ್ರ ಏವ ॥೨೯॥

ಸರ್ವಲೋಕದಲ್ಲಿರುವ ಪರಿಶುದ್ಧವಾದ ಜ್ಯೋತಿಸ್ಸುಗಳು, ಮೂರು ಲೋಕಗಳು, ಮೂರು ಲೋಕಪಾಲರು, ಮೂರು ಅಗ್ನಿಗಳು, ಮೂರು ವ್ಯಾಹೃತಿಗಳು, ಎಲ್ಲ ದೇವತೆಗಳು- ಎಲ್ಲರೂ ದೇವಕೀಪುತ್ರನಲ್ಲಿಯೇ ಇದ್ದಾರೆ.

ಸಂವತ್ಸರಃ ಸ ಋತುಃ ಸೋಽರ್ಧಮಾಸಃ
ಸೋಽಹೋರಾತ್ರಃ ಸ ಕಲಾ ವೈ ಸ ಕಾಷ್ಠಾಃ ।
ಮಾತ್ರಾ ಮುಹೂರ್ತಾಶ್ಚ ಲವಾಃ ಕ್ಷಣಾಶ್ಚ
ವಿಷ್ವಕ್ಸೇನೇ ಸರ್ವಮೇತತ್ ಪ್ರತೀಹಿ ॥೩೦॥

ಅವನೇ ಸಂವತ್ಸರ, ಋತು, ಅರ್ಧಮಾಸ, ಅಹೋರಾತ್ರ, ಕಲಾ, ಕಾಷ್ಠ, ಮಾತ್ರಾ, ಮುಹೂರ್ತ, ಲವ, ಕ್ಷಣ ಎಲ್ಲವೂ. ಈ ಎಲ್ಲವೂ ಅವನಲ್ಲಿಯೇ ಇವೆ ಎಂದು ತಿಳಿ.

ಚಂದ್ರಾದಿತ್ಯೌ ಗ್ರಹನಕ್ಷತ್ರತಾರಾಃ
ಸರ್ವಾಣಿ ದರ್ಶಾನ್ಯಥ ಪೌರ್ಣಮಾಸ್ಯಃ ।
ನಕ್ಷತ್ರಯೋಗಾ ಋತವಶ್ಚ ಪಾರ್ಥ
ವಿಷ್ವಕ್ಸೇನಾತ್ ಸರ್ವಮೇತತ್ ಪ್ರಸೂತಮ್ ॥೩೧॥

ಎಲೈ ಪಾರ್ಥನೇ, ಚಂದ್ರ-ಸೂರ್ಯರು, ಗ್ರಹ-ನಕ್ಷತ್ರ-ತಾರೆಗಳು ಎಲ್ಲ ದರ್ಶ ಪೌರ್ಣಮಾಸ್ಯಗಳು, ನಕ್ಷತ್ರಯೋಗಗಳು, ಋತುಗಳು ವಿಷ್ವಕ್ಸೇನನಾದ ಕೃಷ್ಣನಿಂದಲೇ ಜನಿಸಿವೆ ಎಂದು ತಿಳಿ.

ರುದ್ರಾದಿತ್ಯಾ ವಸವೋಽಥಾಶ್ವಿನೌ ಚ
ಸಾಧ್ಯಾ ವಿಶ್ವೇ ಮರುತಾಂ ಷಡ್ಗಣಾಶ್ಚ ।

ಪ್ರಜಾಪತಿರ್ದೇವಮಾತಾऽದಿತಿಶ್ಚ
ಸರ್ವೇ ಕೃಷ್ಣಾದ್ಋಷಯಶ್ಚೈವ ಸಪ್ತ ॥೩೨॥

ರುದ್ರರು, ಆದಿತ್ಯರು, ವಸುಗಳು, ಅಶ್ವಿನಿಗಳು, ಸಾಧ್ಯರು, ವಿಶ್ವೇದೇವತೆಗಳು, ಮರುತ್ತುಗಳ ಆರು ಗಣಗಳು, ಪ್ರಜಾಪತಿ, ದೇವಮಾತೆಯಾದ ಅದಿತಿ, ಸಪ್ತರ್ಷಿಗಳು ಎಲ್ಲರೂ ಕೃಷ್ಣನಿಂದಲೇ ಜನಿಸಿದವರು.

ವಾಯುರ್ಭೂತ್ವಾ ವಿಕ್ಷಿಪತೇ ಚ ವಿಶ್ವಮ್
ಅಗ್ನಿರ್ಭೂತ್ವಾ ದಹತೇ ವಿಶ್ವರೂಪಃ ।
ಆಪೋ ಭೂತ್ವಾ ಮಜ್ಜಯತೇ ಚ ಸರ್ವಂ
ಬ್ರಹ್ಮಾ ಭೂತ್ವಾ ಸೃಜತೇ ವಿಶ್ವಸಂಘಾನ್ ॥೩೩॥

ಅವನು ವಾಯುವಾಗಿ ಜಗತ್ತನ್ನು ಹಾರಿಸುತ್ತಾನೆ. ವಿಶ್ವರೂಪನಾದ ಅವನು ಅಗ್ನಿಯಾಗಿ ದಹಿಸುತ್ತಾನೆ. ಜಲವಾಗಿ ಎಲ್ಲವನ್ನೂ ಮುಳುಗಿಸುತ್ತಾನೆ. ಬ್ರಹ್ಮನಾಗಿ ಎಲ್ಲವನ್ನೂ ಸೃಷ್ಟಿಸುತ್ತಾನೆ.

ವೇದ್ಯಂ ಚ ಯದ್ ವೇದಯತೇ ಚ ವೇದಾನ್
ವಿಧಿಶ್ಚ ಯಶ್ಚಾಶ್ರಯತೇ ವಿಧೇಯಾನ್ ।
ಧರ್ಮೇ ಚ ವೇದೇ ಚ ಬಲೇ ಚ ಸರ್ವಂ
ಚರಾಚರಂ ಕೇಶವಂ ತ್ವಂ ಪ್ರತೀಹಿ ॥೩೪॥

ಅವನು ವೇದ್ಯರನ್ನು ಮತ್ತು ವೇದವನ್ನು ತಿಳಿಸುತ್ತಾನೆ. ಅನುಷ್ಠಾನ ಮಾಡಬೇಕಾದ ವಿಧಿಗಳನ್ನು ಅನುಸರಿಸುತ್ತಾನೆ. ಧರ್ಮದಲ್ಲಿ, ವೇದದಲ್ಲಿ, ಬಲದಲ್ಲಿ ಇರುವ ಎಲ್ಲಾ ಚರಾಚಾರವು ಕೇಶವನೆಂದು (ಕೇಶವನ ಅಧೀನವೆಂದು) ತಿಳಿ.

ಜ್ಯೋತಿರ್ಭೂತಃ ಪರಮೋऽಸೌ ಪುರಸ್ತಾತ್
ಪ್ರಭಾಸಯನ್ ಪ್ರಭಯಾ ವಿಶ್ವರೂಪಮ್ ।
ಅಪಃ ಸೃಷ್ಟ್ವಾ ಹ್ಯಾತ್ಮಭೂರಾತ್ಮಯೋನಿಃ
ಪುರಾಕರೋತ್ ಸರ್ವಮೇವಾಥ ವಿಶ್ವಮ್ ॥೩೫॥

ಮೊದಲು ಜ್ಯೋತೀರೂಪನಾಗಿ ಸರ್ವೋತ್ತಮನಾಗಿದ್ದ ಅವನು ತನ್ನ ವಿಶ್ವರೂಪವನ್ನು ಕಾಂತಿಯಿಂದ ಪ್ರಕಾಶಿಸುತ್ತಾ ಜಲವನ್ನು ಸೃಷ್ಟಿಸಿದನು. ತನ್ನಷ್ಟಕ್ಕೆ ತಾನೇ ಸ್ವತಂತ್ರನಾಗಿರುವ, ತನ್ನಿಂದಲೇ ತಾನು ಜ್ವಲಿಸುವ ಅವನು ಅನಂತರ ವಿಶ್ವವನ್ನು ಸೃಷ್ಟಿಸಿದನು.

ಋತೂನುತ್ಪಾತಾನ್ ವಿವಿಧಾನ್ಯದ್ಭುತಾನಿ
ಮೇಘಾನ್ ವಿದ್ಯುತ್ ಸರ್ವಮೈರಾವತಂ ಚ ।
ಸರ್ವಂ ಕೃಷ್ಣಾತ್ ಸ್ಥಾವರಂ ಜಂಗಮಂ ಚ
ವಿಶ್ವಾಖ್ಯಾತಾದ್ ವಿಷ್ಣುಮೇನಂ ಪ್ರತೀಹಿ ॥೩೬॥

ಋತುಗಳು, ಉತ್ಪಾತಗಳು, ವಿವಿಧವಾದ ಅದ್ಭುತಗಳು, ಮೇಘಗಳು, ಮಿಂಚುಗಳು, ಐರಾವತ ಮೊದಲಾದ ಗಜಗಳು, ಸ್ಥಾವರ-ಜಂಗಮವೆಲ್ಲವೂ ವಿಶ್ವ ಶಬ್ದವಾಚ್ಯನಾದ ಕೃಷ್ಣನಿಂದಲೇ ಎಂದು ಈ ವಿಷ್ಣುವನ್ನು ತಿಳಿ.

ವಿಶ್ವಾವಾಸಂ ನಿರ್ಗುಣಂ ವಾಸುದೇವಂ
ಸಂಕರ್ಷಣಂ ಜೀವಭೂತಂ ವದಂತಿ ।
ತತಃ ಪ್ರದ್ಯುಮ್ನಮನಿರುದ್ಧಂ ಚತುರ್ಥಮ್
ಆಜ್ಞಾಪಯತ್ಯಾತ್ಮಯೋನಿರ್ಮಹಾತ್ಮಾ ॥೩೭॥

ವಿಶ್ವದಲ್ಲಿ ವಾಸನಾದ ನಿರ್ಗುಣನಾದ ಇವನನ್ನು ವಾಸುದೇವನೆಂದು ಕರೆಯುತ್ತಾರೆ. ಜೀವನಲ್ಲಿರುವ ಇವನನ್ನು ಸಂಕರ್ಷಣನೆಂದು ಕರೆಯುತ್ತಾರೆ. ಆತ್ಮಯೋನಿಯಾದ, ಮಹಾತ್ಮನಾದ ಇವನು ಅನಂತರ ಪ್ರದ್ಯುಮ್ನನನ್ನೂ ಮತ್ತು ನಾಲ್ಕನೆಯದಾದ ಅನಿರುದ್ಧ ರೂಪವನ್ನೂ ತಿಳಿಸಿಕೊಡುತ್ತಾನೆ.

ಸ ಪಂಚಧಾ ಪಂಚಜನೋಪಪನ್ನಂ
ಸಂಚೋದಯನ್ ವಿಶ್ವಮಿದಂ ಸಿಸೃಕ್ಷುಃ ।
ತತಶ್ಚಕಾರಾವನಿಮಾರುತೌ ಚ
ಖಂ ಜ್ಯೋತಿರಾಪಶ್ಚ ತಥೈವ ಪಾರ್ಥ ॥೩೮॥

ಅವನು ದೇವಪ್ಯಾದಿ ಪಂಚವಿಧವಾದ ಜೀವರಿಂದ ಕೂಡಿದ ಈ ವಿಶ್ವವನ್ನು ಐದು ರೀತಿಯಲ್ಲಿ ಪ್ರಚೋದಿಸುವವನಾಗಿ ಜಗತ್ತನ್ನು ಸೃಷ್ಟಿಮಾಡಲು ಬಯಸಿ ಅನಂತರ ಎಲೈ ಪಾರ್ಥನೇ, ಅಗ್ನಿ, ಜಲ, ವಾಯು, ಆಕಾಶ ಮತ್ತು ಭೂಮಿಯನ್ನು ಸೃಷ್ಟಿಸಿದನು.

ಸ ಸ್ಥಾವರಂ ಜಂಗಮಂ ಚೈವಮೇತತ್
ಚತುರ್ವಿಧಂ ಲೋಕಮಿಮಂ ಚ ಕೃತ್ವಾ ।
ತತೋ ಭೂಮಿಂ ವ್ಯದಧಾತ್ ಪಂಚಬೀಜಾಂ
ದ್ಯೌಃ ಪೃಥಿವ್ಯಾಂ ಧಾಸ್ಯತಿ ಭೂರಿವಾರಿ ।
ತೇನ ವಿಶ್ವಂ ಕೃತಮೇತದ್ಧಿ ರಾಜನ್
ಸ ಜೀವಯತ್ಯಾತ್ಮನೈವಾತ್ಮಯೋನಿಃ ॥೩೯॥

ಅವನು ಸ್ಥಾವರ-ಜಂಗಮಾತ್ಮಕವಾದ ಉದ್ಭಿಜಾದಿ ನಾಲ್ಕು ವಿಧಗಳನ್ನು ಹೊಂದಿದ ಈ ಲೋಕವನ್ನು ಸೃಷ್ಟಿಸಿ, ಪಂಚಬೀಜಗಳುಳ್ಳ ಭೂಮಿಯನ್ನು ಸೃಷ್ಟಿಸಿದನು. ಅನಂತರ ದ್ಯುಲೋಕವನ್ನು ಬಹಳ ಜಲವಿರುವ ಭೂಮಿಯ ಮೇಲೆ ಇಟ್ಟನು. ಎಲೈ ರಾಜನೇ, ಈ ವಿಶ್ವವು ಅವನಿಂದಲೇ ಸೃಷ್ಟಿಸಲ್ಪಟ್ಟುದು. ಆತ್ಮಯೋನಿಯಾದ ಅವನೇ ತನ್ನ ಸಾಮರ್ಥ್ಯದಿಂದ ಎಲ್ಲ ಜೀವರಿಗೂ ಜೀವಪ್ರದನಾಗಿದ್ದಾನೆ.

ತತೋ ದೇವಾನಸುರಾನ್ ಮಾನುಷಾಂಶ್ಚ
ಲೋಕಾನೃಷೀಂಶ್ಚಾಥ ಪಿತೄನ್ ಪ್ರಜಾಶ್ಚ ।
ಸಮಾಸೇನ ವಿವಿಧಾನ್ ಪ್ರಾಣಿಲೋಕಾನ್
ಸರ್ವಾನ್ ಸದಾ ಭೂತಪತಿಃ ಸಿಸೃಕ್ಷುಃ ॥೪೦॥

ಅನಂತರ ದೇವತೆಗಳನ್ನೂ ಅಸುರರನ್ನೂ, ಮನುಷ್ಯರನ್ನೂ, ಲೋಕಗಳನ್ನೂ, ಋಷಿಗಳನ್ನೂ, ಪಿತೃಗಳನ್ನೂ, ಉಳಿದ ಪ್ರಜೆಗಳನ್ನೂ, ಸಂಕ್ಷೇಪವಾಗಿ ವಿವಿಧ ಪ್ರಾಣಿಲೋಕಗಳನ್ನು ಭೂತಪತಿಯಾದ ಅವನು ಸದಾ ಸೃಷ್ಟಿಸುವ ಇಚ್ಛೆಯುಳ್ಳವನಾದನು.

ಶುಭಾಶುಭಂ ಸ್ಥಾವರಂ ಜಂಗಮಂ ಚ
ವಿಷ್ವಕ್ಸೇನಾತ್ ಸರ್ವಮೇತತ್ ಪ್ರತೀಹಿ ।
ಯದ್ವರ್ತತೇ ಯಚ್ಚ ಭವಿಷ್ಯತೀಹ
ಸರ್ವಮೇತತ್ ಕೇಶವಂ ತ್ವಂ ಪ್ರತೀಹಿ ॥೪೧॥

ಶುಭಾಶುಭವಾದ, ಸ್ಥಾವರ-ಜಂಗಮವಾದ ಎಲ್ಲವೂ ವಿಷ್ವಕ್ಸೇನನಾದ ಅವನಿಂದಲೇ ಎಂದು ತಿಳಿ. ಈಗ ಏನು ಇದೆಯೋ, ಮುಂದೆ ಏನು ಉಂಟಾಗುವುದೋ ಎಲ್ಲವೂ ಕೇಶವನ ಅಧೀನವೆಂದು ತಿಳಿ.

ಮೃತ್ಯುಶ್ಚೈವ ಪ್ರಾಣಿನಾಮಂತಕಾಲೇ
ಸಾಕ್ಷಾತ್ ಕೃಷ್ಣಃ ಶಾಶ್ವತೋ ಧರ್ಮ ಏವ ।
ಭೂತಂ ಚ ಯಚ್ಚೇಹ ನ ವಿದ್ಮ ಕಿಂಚಿದ್
ವಿಷ್ವಕ್ಸೇನಾತ್ ಸರ್ವಮೇತತ್ ಪ್ರತೀಹಿ ॥೪೨॥

ಪ್ರಾಣಿಗಳಲ್ಲಿ ಅಂತಕಾಲದಲ್ಲಿ ಒದಗುವ ಮೃತ್ಯುವು ಸಾಕ್ಷಾತ್ ಕೃಷ್ಣನೇ. ಅವನೇ ಧಾರಕನಾದುದರಿಂದ ಶಾಶ್ವತನಾದ ಧರ್ಮ. ನಾವು ತಿಳಿದಿರುವ ವಸ್ತುಗಳೆಷ್ಟಿವೆಯೋ ಅವೆಲ್ಲವೂ ಸಹ ವಿಷ್ವಕ್ಸೇನನಾದ ಕೃಷ್ಣನಿಂದಲೇ ಜನಿಸಿವೆ ಎಂದು ತಿಳಿ.

ಯತ್ ಪ್ರಶಸ್ತಂ ಚ ಲೋಕೇಷು ಪುಣ್ಯಂ ಯಚ್ಚ ಶುಭಾಶುಭಮ್ ।
ತತ್ಸರ್ವಂ ಕೇಶವೋಽಚಿಂತ್ಯೋ ವಿಪರೀತಮತೋ ಭವೇತ್ ॥೪೩॥

ಲೋಕದಲ್ಲಿ ಯಾವುದು ಪ್ರಶಸ್ತವೋ, ಯಾವುದು ಪವಿತ್ರವೋ, ಯಾವುದು ಶುಭವೋ, ಯಾವುದು ಅಶುಭವೋ ಅವೆಲ್ಲವೂ ಅಚಿಂತ್ಯನಾದ ಕೇಶವನಿಂದ ಅಧಿಷ್ಠಿತವಾದುವು. ಕೇಶವನ ವಿಶೇಷವಾದ ಸನ್ನಿಧಾನವಿಲ್ಲದಿದ್ದರೆ ಎಲ್ಲವೂ ವಿರುದ್ಧವಾಗುತ್ತವೆ.

ಏತಾದೃಶಃ ಕೇಶವೋಽಯಂ ಸ್ವಯಂಭೂಃ
ನಾರಾಯಣಃ ಪರಮಶ್ಚಾವ್ಯಯಶ್ಚ ।
ಮಧ್ಯಂ ಚಾಸ್ಯ ಜಗತಸ್ತುಷ್ಠಶ್ಚ
ಸರ್ವೇಷಾಂ ಭೂತಾನಾಂ ಪ್ರಭವಶ್ಚಾಪ್ಯಯಶ್ಚ ॥೪೪॥

ಅಂತಹ ಈ ಕೇಶವನು ಸ್ವತಂತ್ರನಾದವನು. ನಾರಾಯಣ, ಸರ್ವೋತ್ತಮ, ನಾಶ ರಹಿತ. ಸ್ಥಾವರ-ಜಂಗಮಾತ್ಮಕವಾದ ಎಲ್ಲ ಜೀವರಿಗೆ ಸೃಷ್ಟಿ-ಸ್ಥಿತಿ-ಸಂಹಾರಗಳನ್ನು ಮಾಡುವವನು.

॥ ಇತಿ ದಾನಧರ್ಮೇ ವಿಷ್ಣುಮಾಹಾತ್ಮ್ಯಕೀರ್ತನಂ ನಾಮ
ಷಟ್‌ಚತ್ವಾರಿಂಶೋತ್ತರದ್ವಿಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ನಲವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ನಲವತ್ತೇಳನೆಯ ಅಧ್ಯಾಯ

ಕೃಷ್ಣನಿಂದ ದುರ್ವಾಸಮಾಹಾತ್ಮ್ಯಕಥನ.

ವೈಶಂಪಾಯನಃ

ಪಿತಾಮಹವಚಃ ಶ್ರುತ್ವಾ ರಾಜಂಸ್ತೇ ಪ್ರಪಿತಾಮಹಃ ।
ಪ್ರಣಮ್ಯ ಪುಂಡರೀಕಾಕ್ಷಮಿದಂ ವಚನಮಬ್ರವೀತ್ ॥೧॥

ವೈಶಂಪಾಯನ– ಪಿತಾಮಹರಾದ ಭೀಷ್ಮರ ಮಾತನ್ನು ಕೇಳಿ ನಿನ್ನ ಪ್ರಪಿತಾಮಹನಾದ ಯುಧಿಷ್ಠಿರನು ಪುಂಡರೀಕಾಕ್ಷನಾದ ಕೃಷ್ಣನಿಗೆ ನಮಸ್ಕಾರವನ್ನು ಮಾಡಿ ಈ ಮಾತನ್ನು ಆಡಿದನು.

ಯುಧಿಷ್ಠಿರಃ

ಬ್ರೂಹಿ ಬ್ರಾಹ್ಮಣಪೂಜಾಯಾಂ ವ್ಯುಷ್ಟಿಂ ತ್ವಂ ಮಧುಸೂದನ ।
ವೇತ್ಥಾ ತ್ವಮಸ್ಯ ಚಾರ್ಥಸ್ಯ ವೇದ ತ್ವಾಂ ಹಿ ಪಿತಾಮಹಃ ॥೨॥

ಯುಧಿಷ್ಠಿರ– ಎಲೈ ಮಧುಸೂದನನೇ, ಬ್ರಾಹ್ಮಣ ಪೂಜೆಯಿಂದ ಉಂಟಾಗುವ ಫಲವನ್ನು ಹೇಳು. ನೀನು ಇದನ್ನು ತಿಳಿದಿದ್ದೀಯೆ. ಪಿತಾಮಹರಾದ ಭೀಷ್ಮರೂ ನಿನ್ನನ್ನು ತಿಳಿದಿದ್ದಾರಷ್ಟೆ?

ವಾಸುದೇವಃ

ಶೃಣುಷ್ವಾವಹಿತೋ ರಾಜನ್ ದ್ವಿಜಾನಾಂ ಭರತರ್ಷಭ ।
ಯಥಾತತ್ತ್ವೇನ ವದತೋ ಗುಣಾನ್ ಮೇ ಕುರುಸತ್ತಮ ॥೩॥

ವಾಸುದೇವ– ಎಲೈ ರಾಜನೇ, ಭರತಶ್ರೇಷ್ಠನೇ, ಕುರುಸತ್ತಮನೇ, ಬ್ರಾಹ್ಮಣರ ಗುಣವನ್ನು ಯಥಾರ್ಥವಾಗಿ ಹೇಳುವ ನನ್ನ ಮಾತುಗಳನ್ನು ಅವಧಾನದಿಂದ ಕೇಳು.

ಪ್ರದ್ಯುಮ್ನಃ ಪರಿಪಪ್ರಚ್ಛ ಬ್ರಾಹ್ಮಣೈಃ ಪರಿಕೋಪಿತಃ ।
ಕಿಂ ಫಲಂ ಬ್ರಾಹ್ಮಣೇಷ್ವಸ್ತಿ ಪೂಜಾಯಾಂ ಮಧುಸೂದನ ।
ಈಶ್ವರಸ್ಯ ಸತಸ್ತಸ್ಯ ಇಹ ಚೈವ ಪರತ್ರ ಚ ॥೪॥

ಸದಾ ದ್ವಿಜಾತೀನ್ ಸಂಪೂಜ್ಯ ಕಿಂ ಫಲಂ ತತ್ರ ಮಾನದ ।
ಏತನ್ಮೇ ಬ್ರೂಹಿ ತತ್ತ್ವಂ ಸುಮಹಾನ್ ಸಂಶಯೋಽತ್ರ ಮೇ ॥೫॥

ಬ್ರಾಹ್ಮಣರಿಂದ ಕೋಪಿಸಲ್ಪಟ್ಟ ಪ್ರದ್ಯುಮ್ನನು ನನ್ನನ್ನು ಕುರಿತು ಮಧುಸೂದನನೇ, ಈಶ್ವರನಾದ ನಿನಗೆ ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಬ್ರಾಹ್ಮಣರ ಪೂಜೆಯಿಂದ ಏನು ಫಲವಿದೆ? ಎಲೈ ಮಾನದನೇ, ಯಾವಾಗಲೂ ಬ್ರಾಹ್ಮಣರನ್ನು ಪೂಜಿಸುವುದರಿಂದ ಅದರಲ್ಲಿ ಏನು ಫಲ? ಇದನ್ನು ನನಗೆ ಸತ್ಯವಾಗಿ ಹೇಳು. ನನಗೆ ಈ ವಿಷಯದಲ್ಲಿ ಬಹಳ ಸಂಶಯವಿದೆ ಎಂದು ಹೇಳಿದನು.

ಇತ್ಯುಕ್ತವಚನಸ್ತೇನ ಪ್ರದ್ಯುಮ್ನೇನ ತದಾ ತ್ವಹಮ್ ।
ಪ್ರತ್ಯಬ್ರುವಂ ಮಹಾರಾಜ ಯತ್ತಚ್ಛೃಣು ಸಮಾಹಿತಃ ॥೬॥

ಎಲೈ ಮಹಾರಾಜನೇ, ಪ್ರದ್ಯುಮ್ನನು ಹೀಗೆ ಹೇಳಿದಾಗ ನಾನು ಅವನಿಗೆ ಏನು ಹೇಳಿದೆನೆಂದು ಸಮಾಧಾನದಿಂದ ಕೇಳು.

ವೃಷ್ಣಿ ಬ್ರಾಹ್ಮಣಪೂಜಾಯಾಂ ರೌಗ್ಮಿಣೇಯ ನಿಬೋಧ ಮೇ ।
ಏತೇ ಹಿ ಸೋಮರಾಜಾನ ಈಶ್ವರಾಃ ಸುಖದುಃಖಿಯೋಃ ॥೭॥

ಎಲೈ ರುಗ್ಮಿಣೀ ಪುತ್ರನೇ, ಬ್ರಾಹ್ಮಣ ಪೂಜೆಯ ಫಲವನ್ನು ನೀನು ತಿಳಿದುಕೊ. ಇವರು (ಬ್ರಾಹ್ಮಣರು) ಚಂದ್ರನನ್ನೇ ಪ್ರಭುವಾಗಿ ಹೊಂದಿದವರು ಮತ್ತು ಸುಖ-ದುಃಖಗಳಿಗೆ ಒಡೆಯರಾದವರು.

ಅಸ್ಮಿಲ್ಲೋಕೇ ರೌಗ್ಮಿಣೇಯ ತಥಾऽಮುಷ್ಮಿಂಶ್ಚ ಪುತ್ರಕ ।
ಬ್ರಾಹ್ಮಣಪ್ರಮುಖಂ ಸೌಖ್ಯಂ ನ ಮೇऽತ್ರಾಸ್ತಿ ವಿಚಾರಣಾ ॥೮॥

ಎಲೈ ರುಗ್ಮಿಣಿಯ ಪುತ್ರನೇ, ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಎಲ್ಲ ಸೌಖ್ಯವೂ ಬ್ರಾಹ್ಮಣರನ್ನು ಮುಂದೆ ಮಾಡಿಕೊಂಡಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಬ್ರಾಹ್ಮಣಪ್ರಮುಖಂ ವೀರ್ಯಮಾಯುಃ ಕೀರ್ತಿರ್ಯಶೋ ಬಲಮ್ ।
ಲೋಕಾ ಲೋಕೇಶ್ವರಾಶ್ಚೈವ ಸರ್ವೇ ಬ್ರಾಹ್ಮಣಪೂರ್ವಕಾಃ ॥೯॥

ವೀರ್ಯ, ಆಯುಸ್ಸು, ಕೀರ್ತಿ, ಬಲ ಎಲ್ಲವೂ ಬ್ರಾಹ್ಮಣ ಪ್ರಮುಖವಾದವುಗಳು. ಲೋಕಗಳು ಮತ್ತು ಲೋಕೇಶ್ವರರೆಲ್ಲರೂ ಬ್ರಾಹ್ಮಣರನ್ನೇ ಮುಂದೆ ಮಾಡಿಕೊಂಡಿರುತ್ತಾರೆ.

ತತ್ಕಥಂ ನಾದ್ರಿಯೇಯಂ ವೈ ಈಶ್ವರೋಽಸ್ಮೀತಿ ಪುತ್ರಕ ।
ಮಾ ತೇ ಮನ್ಯುರ್ಮಹಾಬಾಹೋ ಭವತ್ವತ್ರ ದ್ವಿಜಾನ್ ಪ್ರತಿ ॥೧೦॥

ಎಲೈ ಪುತ್ರಕನೇ, ನಾನು ಈಶ್ವರನೆಂದು ಬ್ರಾಹ್ಮಣರನ್ನು ಹೇಗೆ ಆದರಿಸದೇ ಇರಲಿ? ಎಲೈ ಮಹಾಬಾಹುವೇ, ಬ್ರಾಹ್ಮಣರ ಮೇಲೆ ಕೋಪಗೊಳ್ಳಬೇಡ.

ಬ್ರಾಹ್ಮಣೋ ಹಿ ಮಹದ್ಭೂತಮಸ್ಮಿಲ್ಲೋಕೇ ಪರತ್ರ ಚ ।
ಭಸ್ಮ ಕುರ್ಯುರ್ಜಗದಿದಂ ಕ್ರುದ್ಧಾಃ ಪ್ರತ್ಯಕ್ಷಮೇವ ನಃ ॥೧೧॥

ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಬ್ರಾಹ್ಮಣನು ಮಹದ್ಭೂತ. ಕೋಪಗೊಂಡ ಅವರು ನಮ್ಮ ಕಣ್ಣೆದುರಿಗೇ ಈ ಜಗತ್ತನ್ನು ಭಸ್ಮ ಮಾಡಿಯಾರು.

ಅನ್ಯಾನಪಿ ಸೃಜೇಯುಶ್ಚ ಲೋಕಾಲ್ಲೋಕೇಶ್ವರಾಂಸ್ತಥಾ ।
ಕಥಂ ತೇಷು ನ ವರ್ತೇಯ ಸಮ್ಯಗ್ಜ್ಞಾನಾತ್ ಸುತೇಜಸಃ ॥೧೨॥

ಬ್ರಾಹ್ಮಣರು ತಮ್ಮ ಸಾಮರ್ಥ್ಯದಿಂದ ಬೇರೆ ಲೋಕಗಳನ್ನು ಮತ್ತು ಲೋಕ ಪಾಲಕರನ್ನು ಸೃಷ್ಟಿಸಿಯಾರು! ದಿವ್ಯವಾದ ಜ್ಞಾನವನ್ನು ಹೊಂದಿರುವುದರಿಂದ ಬಹಳ ತೇಜಸ್ಸನ್ನು ಹೊಂದಿದ ಅವರನ್ನು ನಾನು ಹೇಗೆ ಅನುಸರಿಸದೇ ಇರಲು ಸಾಧ್ಯ ?

ಅವಸನ್ ಮದ್ಗೃಹೇ ತಾತ ಬ್ರಾಹ್ಮಣೋ ಹರಿಪಿಂಗಲಃ ।
ಚೀರವಾಸಾ ಬಿಲ್ವದಂಡೀ ದೀರ್ಘಶ್ಮಶ್ರುನಖಾದಿಮಾನ್ ।
ದೀರ್ಘೇಭ್ಯಶ್ಚ ಮನುಷ್ಯೇಭ್ಯಃ ಪ್ರಮಾಣಾದಧಿಕೋ ಭುವಿ ॥೧೩॥

ಎಲೈ ಪ್ರೀತಿಪಾತ್ರನೇ, ನನ್ನ ಮನೆಯಲ್ಲಿ ಕೃಷ್ಣಪಿಂಗಲನೂ, ನಾರುಮಡಿ ಉಟ್ಟವನೂ, ಬಿಲ್ವದಂಡವನ್ನು ಧರಿಸಿದವನೂ, ದೀರ್ಘವಾದ ಉಗುರು ಮತ್ತು ಮೀಸೆಗಳನ್ನು ಧರಿಸಿದವನೂ ಆದ ಒಬ್ಬ ಬ್ರಾಹ್ಮಣನು ವಾಸ ಮಾಡಿದನು. ಅವನು ಭೂಮಿಯಲ್ಲಿ ಎತ್ತರವಾದ ಮನುಷ್ಯರಿಗಿಂತಲೂ ಎತ್ತರವಾಗಿದ್ದನು.

ಸ ಸ್ಮ ಸಂಚರತೇ ಲೋಕಾನ್ ಯೇ ದಿವ್ಯಾ ಯೇ ಚ ಮಾನುಷಾಃ ।
ಇಮಾ ಗಾಥಾ ಗಾಯಮಾನಶ್ಚತ್ವರೇಷು ಸಭಾಸು ಚ ॥೧೪॥

ಅವನು ಈ ಗೀತೆಯನ್ನು ಹಾಡುತ್ತಾ ದಿವ್ಯಲೋಕಗಳಲ್ಲಿಯೂ, ಮನುಷ್ಯ ಲೋಕಗಳಲ್ಲಿ ಚತ್ವರಗಳಲ್ಲಿಯೂ (ನಾಲ್ಕು ರಸ್ತೆಗಳು ಕೂಡುವ ಸ್ಥಳ) ಮತ್ತು ಸಭೆಗಳಲ್ಲಿಯೂ ಸಂಚರಿಸುತ್ತಿದ್ದನು.

ದುರ್ವಾಸಸಂ ವಾಸಯೇತ್ ಕೋ ಬ್ರಾಹ್ಮಣಂ ಸತ್ಕೃತಂ ಗೃಹೇ ।
ಪರಿಭಾಷಾಂ ಚ ಮೇ ಶ್ರುತ್ವಾ ಕೋ ನು ದದ್ಯಾತ್ ಪ್ರತಿಶ್ರಯಮ್ ।
ಯೋ ಮಾಂ ಕಶ್ಚಿದ್ ವಾಸಯೇತ ನ ಸ ಮಾಂ ಕೋಪಯೇದಿಹ॥೧೫॥

ಪೂಜ್ಯನಾದ, ಬ್ರಾಹ್ಮಣನಾದ ದುರ್ವಾಸರನ್ನು ಯಾವನು ತನ್ನ ಮನೆಯಲ್ಲಿ ಇಟ್ಟುಕೊಳ್ಳುತ್ತಾನೆ? ನನ್ನ ನಿಬಂಧನೆಯನ್ನು ಕೇಳಿ ಯಾವನು ನನಗೆ ಆಶ್ರಯವನ್ನು ಕೊಡುತ್ತಾನೆ? ನನಗೆ ಆಶ್ರಯವನ್ನು ಕೊಡುವವನು ನನ್ನನ್ನು ಕೋಪಗೊಳಿಸಬಾರದು (ಎಂದು ಹಾಡುತ್ತಿದ್ದನು).

ತಂ ಸ್ಮ ನಾದ್ರಿಯತೇ ಕಶ್ಚಿತ್ ತತೋಽಹಂ ತಮವಾಸಯಮ್ ।
ಸ ಸ್ಮ ಭುಂಕ್ತೇ ಸಹಸ್ರಾಣಾಂ ಬಹೂನಾಮನ್ನಮೇಕದಾ ।
ಏಕದಾ ಸ್ಮಾಲ್ಪಕಂ ಭುಂಕ್ತೇ ನ ವೈತಿ ಚ ಪುನರ್ಗೃಹಾನ್ ॥೧೬॥

ಅವನನ್ನು ಯಾರೂ ಆದರಿಸಲಿಲ್ಲ. ಆಗ ನಾನು ನನ್ನ ಮನೆಯಲ್ಲಿ ಅವನಿಗೆ ವಾಸವನ್ನು ನೀಡಿದೆನು. ಅವನೊಬ್ಬನೇ ಅನೇಕ ಸಹಸ್ರ ಜನರು ಊಟ ಮಾಡುವ ಅನ್ನವನ್ನು ಒಂದೇ ಬಾರಿ ಉಣ್ಣುತ್ತಿದ್ದನು. ಇನ್ನೊಮ್ಮೆ ಅಲ್ಪಭೋಜನವನ್ನು ಮಾಡಿ ಪುನಃ ಮನೆಗೆ ಹಿಂದಿರುಗುತ್ತಿರಲೇ ಇಲ್ಲ.

ಅಕಸ್ಮಾಚ್ಚ ಪ್ರಹಸತಿ ತಥಾಽಕಸ್ಮಾತ್ ಪ್ರರೋದಿತಿ ।
ನ ಚಾಸ್ಯ ವಯಸಾ ತುಲ್ಯಃ ಪೃಥಿವ್ಯಾಮಭವತ್ ತದಾ ॥೧೭॥

ಇದ್ದಕ್ಕಿದ್ದಂತೆಯೇ ನಗುತ್ತಾನೆ, ಹಾಗೆಯೇ ಇದ್ದಕ್ಕಿದ್ದಂತೆಯೇ ಅಳುತ್ತಾನೆ. ವಯಸ್ಸಿನಲ್ಲಿ ಅವನಿಗೆ ಸಮರಾದವರು ಆಗ ಭೂಮಿಯಲ್ಲಿ ಯಾರೂ ಇರಲಿಲ್ಲ.

ಸೋಽಸ್ಮದಾವಸಥಂ ಗತ್ವಾ ಶಯ್ಯಾಶ್ಚಾಸ್ತರಣಾನಿ ಚ ।
ಕನ್ಯಾಶ್ಚಾಲಂಕೃತಾ ದಗ್ಧ್ವಾ ತತೋ ವ್ಯಪಗತಃ ಸ್ವಯಮ್ ॥೧೮॥

ಅವನು ನನ್ನ ಗೃಹಕ್ಕೆ ಹೋಗಿ ಶಯನಗಳು, ಆಸನಗಳು, ಹಾಸುಗಳು, ಅಲಂಕೃತ ಕನ್ಯೆಯರು ಎಲ್ಲರನ್ನೂ ಸುಟ್ಟು ಹೊರಟು ಹೋದನು.

ಅಥ ಮಾಮಬ್ರವೀದ್ ಭೂಯಃ ಸ ಮುನಿಃ ಸಂಶಿತವ್ರತಃ ।
ಕೃಷ್ಣ ಪಾಯಸಮಿಚ್ಛಾಮಿ ಭೋಕ್ತುಮಿತ್ಯೇವ ಸತ್ವರಃ ॥೧೯॥

ಶ್ರೇಷ್ಠ ವ್ರತವನ್ನು ಧರಿಸಿದ ಆ ಮುನಿಯು ಅನಂತರ ಪುನಃ ನನ್ನನ್ನು ಕುರಿತು ತ್ವರೆಯಿಂದ ಕೂಡಿ, ಕೃಷ್ಣ ನಾನು ಪಾಯಸವನ್ನು ಭಕ್ಷಿಸಲು ಇಚ್ಛಿಸುತ್ತೇನೆ ಎಂದು ಹೇಳಿದನು.

ಸದೈವ ತು ಮಯಾ ತಸ್ಯ ಚಿತ್ತಜ್ಞೇನ ಗೃಹೇ ಜನಃ ।
ಸರ್ವಾಣ್ಯೇವಾನ್ನಪಾನಾನಿ ಭಕ್ಷ್ಯಾಶ್ಚೋಚ್ಚಾವಚಾಸ್ತಥಾ ।
ಭವಂತು ಸತ್ಕೃತಾನೀತಿ ಪೂರ್ವಮೇವ ಪ್ರಚೋದಿತಃ ॥೨೦॥

ಅವನ ಚಿತ್ತವನ್ನು ತಿಳಿದ ನಾನು ಯಾವಾಗಲೂ ಮನೆಯಲ್ಲಿರುವ ಪರಿಚಾರಕರಿಗೆ ಎಲ್ಲ ಅನ್ನ-ಪಾನಗಳು, ಶ್ರೇಷ್ಠ ಕನಿಷ್ಠವಾದ ಎಲ್ಲಾ ಭಕ್ಷ್ಯಗಳು ಯಾವಾಗಲೂ ಸಿದ್ಧವಾಗಿರಬೇಕೆಂದು ಮೊದಲೇ ಆದೇಶವನ್ನು ನೀಡಿದ್ದೆನು.

ತತೋಽಹಂ ಜ್ವಲಮಾನಂ ವೈ ಪಾಯಸಂ ಪ್ರತ್ಯವೇದಯಮ್ ।
ತದ್‌ಭುಕ್ತೆ್ವವ ತು ಸ ಕ್ಷಿಪ್ರಂ ತತೋ ವಚನಮಬ್ರವೀತ್ ।
ಕ್ಷಿಪ್ರಮಂಗಾನಿ ಲಿಂಪಸ್ವ ಪಾಯಸೇನೇತಿ ಸ ಸ್ಮ ಹ ॥೨೧॥

ಅನಂತರ ಬಿಸಿಯಾಗಿದ್ದ ಪಾಯಸವನ್ನು ಅವನಿಗೆ ನಿವೇದಿಸಿದೆನು. ಅದನ್ನು ಭುಂಜಿಸಿ, ಅವನು ಪುನಃ ನನ್ನನ್ನು ಕುರಿತು ಉಳಿದ ಪಾಯಸದಿಂದ ನಿನ್ನ ಶರೀರವನ್ನು ಲೇಪಿಸಿಕೊ ಎಂದು ಹೇಳಿದನು.

ಅವಿಮೃಶ್ಯೈವ ಚ ತತಃ ಕೃತವಾನಸ್ಮಿ ತತ್ ತಥಾ ।
ತೇನೋಚ್ಛಿಷ್ಟೇನ ಗಾತ್ರಾಣಿ ಶಿರಶ್ಚೈವಾಭ್ಯಮೃಕ್ಷಯಮ್ ॥೨೨॥

ನಾನು ಯಾವ ಯೋಚನೆಯನ್ನೂ ಮಾಡದೆ ಅವನ ಉಚ್ಛಿಷ್ಟವಾದ ಪಾಯಸದಿಂದ ಅವನು ಹೇಳಿದಂತೆಯೇ ನನ್ನ ಶರೀರವನ್ನು ಮತ್ತು ಶಿರಸ್ಸನ್ನು ಲೇಪಿಸಿಕೊಂಡೆನು.

ಸ ದದರ್ಶ ತದಾಭ್ಯಾಶೇ ಮಾತರಂ ತೇ ಶುಭಾನನಾಮ್ ।
ತಾಮಪಿ ಸ್ಮಯಮಾನಃ ಸ ಪಾಯಸೇನಾಭ್ಯಲೇಪಯತ್ ॥೨೩॥

ಆಗ ಅವನು ಸಮೀಪದಲ್ಲಿದ್ದ ಶುಭಾನನಳಾದ ನಿನ್ನ ತಾಯಿಯನ್ನು ನೋಡಿ ನಗುತ್ತಾ ಅವಳಿಗೂ ಪಾಯಸದಿಂದ ಲೇಪನವನ್ನು ಮಾಡಿದನು.

ಮುನಿಃ ಪಾಯಸದಿಗ್ಧಾಂಗೀಂ ರಥೇ ತೂರ್ಣಮಯೋಜಯತ್ ।
ತಮಾರುಹ್ಯ ರಥಂ ಚೈವ ನಿರ್ಯಯೌ ಸ ಗೃಹಾನ್ಮಮ ॥೨೪॥

ಋಷಿಯು ಪಾಯಸದಿಂದ ಲಿಪ್ತಳಾದ ಅವಳನ್ನು ರಥದಲ್ಲಿ ಹೂಡಿ ಅಶ್ವದಂತೆ ಆ ರಥವನ್ನು ಏರಿ ನನ್ನ ಮನೆಯಿಂದ ಹೊರಟನು.

ಅಗ್ನಿವರ್ಣೋ ಜ್ವಲನ್ ಧೀಮಾನ್ ಸ ದ್ವಿಜೋ ರಥಧುರ್ಯವತ್ ।
ಪ್ರತೋದೇನಾತುದದ್ ಬಾಲಾಂ ರುಗ್ಮಿಣೀಂ ಮಮ ಪಶ್ಯತಃ ॥೨೫॥

ಅಗ್ನಿವರ್ಣದಿಂದ ಜ್ವಲಿಸುತ್ತಿದ್ದ, ಮೇಧಾವಿಯಾದ ಆ ಬ್ರಾಹ್ಮಣನು ಅಶ್ವವನ್ನು ಪ್ರಚೋದಿಸಿದಂತೆ ಚಾವಟಿಯಿಂದ ನಾನು ನೋಡುತ್ತಿರುವಂತೆಯೇ ಬಾಲೆಯಾದ ರುಗ್ಮಿಣಿಯನ್ನು ಪ್ರಚೋದಿಸುತ್ತಿದ್ದನು (ಹೊಡೆಯುತ್ತಿದ್ದನು).

ನ ಚ ಮೇ ಸ್ತೋಕಮಪ್ಯಾಸೀದ್ ದುಃಖಮೀರ್ಷ್ಯಾಕೃತಂ ತದಾ ।
ತತಃ ಸ ರಾಜಮಾರ್ಗೇಣ ನಿರ್ಯಯೌ ನಗರಾದ್ ಬಹಿಃ ॥೨೬॥

ನನಗೆ ಅಲ್ಪವು ಸಹ ಅಸೂಯೆಯಾಗಲೀ, ದುಃಖವಾಗಲೀ ಆಗ ಉಂಟಾಗಲಿಲ್ಲ. ಅನಂತರ ರಾಜಮಾರ್ಗದಿಂದ ನಗರದ ಹೊರಗೆ ಹೊರಟನು.

ತದ್ ದೃಷ್ಟ್ವಾ ಮಹದಾಶ್ಚರ್ಯಂ ದಾಶಾರ್ಹಾ ಜಾತಮನ್ಯವಃ ।
ತತ್ರಾಜಲ್ಪನ್ ಮಿಥಃ ಕೇಚಿತ್ ಸಮಾಭಾಷ್ಯ ಪರಸ್ಪರಮ್ ॥೨೭॥

ಆ ಮಹದಾಶ್ಚರ್ಯವನ್ನು ನೋಡಿ ಕೆಲವರು ದಾಶಾರ್ಹರು ಕೋಪಗೊಂಡು, ಪರಸ್ಪರವಾಗಿ ಸಂಭಾಷಣೆಯನ್ನು ಮಾಡುತ್ತಾ ಮಾತನಾಡಿದರು.

ಬ್ರಾಹ್ಮಣಾ ಏವ ಜಾಯೇರನ್ ನಾನ್ಯೋ ವರ್ಣಃ ಕಥಂಚನ ।
ಕೋ ಹ್ಯೇನಂ ರಥಮಾಸ್ಥಾಯ ಜೀವೇದನ್ಯಃ ಪುಮಾನಿಹ ॥೨೮॥

ಬ್ರಾಹ್ಮಣವರ್ಣದವರು ಮಾತ್ರ ಯಾವಾಗಲೂ ಹುಟ್ಟಬೇಕು. ಬೇರೆ ವರ್ಣದವರು ಜನಿಸಬಾರದು. ಈ ರಥವನ್ನು ಏರಿ ಬೇರೆ ಯಾವ ಪುರುಷನು ಜೀವಿಸಿಯಾನು?

ಆಶೀವಿಷವಿಷಂ ತೀಕ್ಷ್ಣಂ ತತಸ್ತೀಕ್ಷ್ಣತರಂ ವಿಷಮ್ ।
ಬ್ರಹ್ಮಾಶೀವಿಷದಗ್ಧಸ್ಯ ನಾಸ್ತಿ ಕಶ್ಚಿತ್ ಚಿಕಿತ್ಸಕಃ ॥೨೯॥

ದೃಷ್ಟಿವಿಷವುಳ್ಳ ಸರ್ಪದ ವಿಷವು ತೀಕ್ಷ್ಣವಾದುದು. ಅದಕ್ಕಿಂತ ತೀಕ್ಷ್ಣವಾದುದು ಬ್ರಾಹ್ಮಣರ ಕೋಪವಿಷ. ಬ್ರಾಹ್ಮಣರೆಂಬ ಸರ್ಪದಿಂದ ದಗ್ಧನಾದವನಿಗೆ ಯಾವ ಚಿಕಿತ್ಸಕನೂ ಇಲ್ಲ(ಎಂದು ಮಾತನಾಡಿಕೊಂಡರು).

ತಸ್ಮಿನ್ ವ್ರಜತಿ ದುರ್ಧರ್ಷೇ ಪ್ರಾಸ್ಖಲದ್ ರುಗ್ಮಿಣೀ ಪಥಿ ।
ತಾಂ ನಾಮರ್ಷಯತ ಶ್ರೀಮಾಂಸ್ತತಸ್ತೂರ್ಣಮಚೋದಯತ್ ॥೩೦॥

ದುರ್ಧರ್ಷರಾದ ಅವರು ರಥದಲ್ಲಿ ಹಾಗೆ ಹೋಗುತ್ತಿರಲು ರುಗ್ಮಿಣಿಯು ದಾರಿಯಲ್ಲಿ ಎಡವಿದಳು. ಆ ಕಾಂತಿಯುಕ್ತನಾದ ಬ್ರಾಹ್ಮಣನು ಅದನ್ನು ಸಹಿಸದೆ ಶೀಘ್ರವಾಗಿ ಅವಳನ್ನು ಪ್ರಚೋದಿಸಿದನು.

ತತಃ ಪರಮಸಂಕ್ರುದ್ಧೋ ರಥಾತ್ ಪ್ರಸ್ಕಂದ್ಯ ಸ ದ್ವಿಜಃ ।
ಪದಾತಿರುತ್ಪಥೇನೈವ ಪ್ರಾಧಾವದ್ ದಕ್ಷಿಣಾಮುಖಃ ॥೩೧॥

ಅನಂತರ ಪರಮಕೋಪಗೊಂಡ ಆ ಬ್ರಾಹ್ಮಣನು ರಥದಿಂದ ಕೆಳಗೆ ಇಳಿದು ಪದಾತಿಯಾಗಿಯೇ, ಮಾರ್ಗವಿಲ್ಲದ ದಾರಿಯಲ್ಲಿಯೇ ದಕ್ಷಿಣಾಭಿಮುಖವಾಗಿ ಓಡಿ ಹೋದನು.

ತಮುತ್ಪಥೇನ ಧಾವಂತಮನ್ವಧಾವಂ ದ್ವಿಜೋತ್ತಮಮ್ ।
ತಥೈವ ಪಾಯಸಾದಿಗ್ಧಃ ಪ್ರಸೀದ ಭಗವನ್ನಿತಿ ॥೩೨॥

ದಾರಿಯಿಲ್ಲದ ಕಡೆ ಓಡಿಹೋಗುತ್ತಿದ್ದ ಆ ಬ್ರಾಹ್ಮಣಶ್ರೇಷ್ಠನನ್ನು ನಾನು ಹಾಗೆಯೇ ಪಾಯಸದಿಗ್ಧವಾದ ಶರೀರವುಳ್ಳವನಾಗಿ ಪೂಜ್ಯನೇ ಪ್ರಸನ್ನನಾಗು ಎಂದು ಹೇಳುತ್ತಾ ಓಡುತ್ತಾ ಹಿಂಬಾಲಿಸಿದೆನು.

ತತೋ ವಿಲೋಕ್ಯ ತೇಜಸ್ವೀ ಬ್ರಾಹ್ಮಣೋ ಮಾಮುವಾಚ ಹ ।
ಜಿತಃ ಕ್ರೋಧಸ್ತ್ವಯಾ ಕೃಷ್ಣ ಪ್ರಕೃತ್ಯೈವ ಮಹಾಭುಜ ॥೩೩॥

ಆಗ ತೇಜಸ್ವಿಯಾದ ಆ ಬ್ರಾಹ್ಮಣನು ನನ್ನನ್ನು ನೋಡಿ, ನನ್ನನ್ನು ಕುರಿತು ಹೇಳಿದನು: ಕೃಷ್ಣನೇ, ಮಹಾಭುಜನೇ, ನೀನು ಸ್ವಭಾವದಿಂದಲೇ ಕ್ರೋಧವನ್ನು ಜಯಿಸಿದ್ದೀಯೆ.

ನ ತೇಽಪರಾಧಮಿಹ ವೈ ದೃಷ್ಟವಾನಸ್ಮಿ ಸುವ್ರತ ।
ಪ್ರೀತೋಽಸ್ಮಿ ತವ ಗೋವಿಂದ ವೃಣು ಕಾಮಾನ್ ಯಥೇಪ್ಸಿತಾನ್ ।
ಪ್ರಸನ್ನಸ್ಯ ಚ ಮೇ ತಾತ ಪಶ್ಯ ವ್ಯುಷ್ಟಿರ್ಯಥಾವಿಧಾ ॥೩೪॥

ಎಲೈ ಸುವ್ರತನೇ, ನಿನ್ನಲ್ಲಿ ನಾನು ಯಾವ ಅಪರಾಧವನ್ನೂ ಕಾಣಲಿಲ್ಲ. ಗೋವಿಂದನೇ, ನಾನು ನಿನಗೆ ಪ್ರಸನ್ನನಾಗಿದ್ದೇನೆ. ನಿನಗೆ ಅಭೀಷ್ಟವಾದ ವರವನ್ನು ಕೇಳು. ಪ್ರೀತಿಪಾತ್ರನೇ, ಪ್ರಸನ್ನನಾದ ನನ್ನಿಂದ ಉಂಟಾಗುವ ಫಲವು ಹೇಗಿರುತ್ತದೆ ಎಂಬುದನ್ನು ನೋಡು.

ಯಾವದೇವ ಮನುಷ್ಯಾಣಾಮನ್ನೇ ಭಾವೋ ಭವಿಷ್ಯತಿ ।
ಯಥೈವಾನ್ನೇ ತಥಾ ತೇಷಾಂ ತ್ವಯಿ ಭಾವೋ ಭವಿಷ್ಯತಿ ॥೩೫॥

ಎಲ್ಲಿಯವರೆಗೆ ಮನುಷ್ಯರಿಗೆ ಅನ್ನದಲ್ಲಿ ಅಭಿರುಚಿ ಇರುತ್ತದೆಯೋ ಅಲ್ಲಿಯವರೆಗೆ ನಿನ್ನಲ್ಲಿ ಭಕ್ತಿ ಇರುತ್ತದೆ.

ಯಾವಚ್ಚ ಪುಣ್ಯಾ ಲೋಕೇಷು ತ್ವಯಿ ಕೀರ್ತಿರ್ಭವಿಷ್ಯತಿ ।
ತ್ರಿಷು ಲೋಕೇಷು ತಾವಚ್ಚ ವೈಶಿಷ್ಟ್ಯಂ ಪ್ರತಿಪತ್ಸ್ಯಸೇ ।
ಸುಪ್ರಿಯಃ ಸರ್ವಲೋಕಸ್ಯ ಭವಿಷ್ಯಸಿ ಜನಾರ್ದನ ॥೩೬॥

ಎಲ್ಲಿಯವರೆಗೆ ಲೋಕಗಳಲ್ಲಿ ನಿನ್ನ ಪುಣ್ಯಕೀರ್ತಿ ಇರುತ್ತದೆಯೋ ಅಲ್ಲಿಯವರೆಗೆ ನೀನು ಲೋಕದಲ್ಲಿ ಬಹಳ ಶ್ರೇಷ್ಠತ್ವವನ್ನು ಹೊಂದುವಿ. ಎಲೈ ಜನಾರ್ದನನೇ, ಎಲ್ಲ ಪ್ರಜೆಗಳಿಗೂ ನೀನು ಅತ್ಯಂತ ಪ್ರಿಯನಾಗುವಿ.

ಯತ್ತೇ ಭಿನ್ನಂ ಚ ದಗ್ಧಂ ಚ ಯದ್ವಾ ಕಿಂಚನ ನಾಶಿತಮ್ ।
ಸರ್ವಂ ತಥೈವ ದ್ರಷ್ಟಾಸಿ ವಿಶಿಷ್ಟಂ ವಾ ಜನಾರ್ದನ ॥೩೭॥

ನೀನು ಮನೆಯಲ್ಲಿ ನಾನು ಯಾವುದನ್ನು ಒಡೆದೆನೋ, ಸುಟ್ಟೆನೋ ಅಥವಾ ನಾಶ ಮಾಡಿದೆನೋ ಎಲ್ಲವೂ ಹಾಗೆಯೇ ಅಥವಾ ಮೊದಲಿಗಿಂತ ಚೆನ್ನಾಗಿ ಇರುವುದನ್ನು ನೀನು ನೋಡುವಿ.

ಯಾವದೇತತ್ ಪ್ರಲಿಪ್ತಂ ತೇ ಗಾತ್ರೇಷು ಮಧುಸೂದನ ।
ಅತೋ ಮೃತ್ಯುಭಯಂ ನಾಸ್ತಿ ಯಾವದಿಚ್ಛಾ ತವಾಚ್ಯುತ ॥೩೮॥

ಎಲೈ ಮಧುಸೂದನನೇ, ನೀನು ಶರೀರದಲ್ಲಿ ಪಾಯಸವನ್ನು ಲೇಪ ಮಾಡಿಕೊಂಡುದುದರಿಂದ, ಎಲೈ ಅಚ್ಯುತನೇ, ಇಚ್ಛಿಸುವವರೆಗೆ ನಿನಗೆ ಮೃತ್ಯುಭಯವಿಲ್ಲ.

ನ ತು ಪಾದತಳೇ ಲಿಪ್ತೇ ಕಸ್ಮಾತ್ ತೇ ಪುತ್ರಕಾದ್ಯ ವೈ ।
ನೈತನ್ಮೇ ಪ್ರಿಯಮಿತ್ಯೇವ ಸ ಮಾಂ ಪ್ರೀತೋಽಬ್ರವೀತ್ ತದಾ ।
ಇತ್ಯುಕ್ತೋಽಹಂ ಶರೀರಂ ಸ್ವಮಪಶ್ಯಂ ಶ್ರೀಸಮಾಯುತಮ್ ॥೩೯॥

ಪುತ್ರಕನೇ, ಏಕೆ ಪಾದತಳಗಳಿಗೆ ಈ ದಿನ ಪಾಯಸವನ್ನು ಲೇಪಿಸಿಕೊಳ್ಳಲಿಲ್ಲ? ಅದು ನನಗೆ ಸಂತೋಷವನ್ನುಂಟು ಮಾಡಲಿಲ್ಲ ಎಂದು ಪ್ರಸನ್ನನಾಗಿ ನನಗೆ ಹೇಳಿದನು. ಹೀಗೆ ಹೇಳಲ್ಪಟ್ಟ ನಾನು ನನ್ನ ಶರೀರವು ಮೊದಲಿಗಿಂತಲೂ ಹೆಚ್ಚು ಕಾಂತಿಯುಕ್ತವಾಗಿರುವುದನ್ನು ನೋಡಿದೆನು.

ರುಗ್ಮಿಣೀಂ ಚಾಬ್ರವೀತ್ ಪ್ರೀತಃ ಸರ್ವಸ್ತ್ರೀಣಾಂ ವರಂ ಯಶಃ ।
ಕೀರ್ತಿಂ ಚಾನುತ್ತಮಾಂ ಲೋಕೇ ಸಮವಾಪ್ಸ್ಯಸಿ ಶೋಭನೇ ॥೪೦॥

ಸಂತುಷ್ಟನಾದ ಅವನು ರುಗ್ಮಿಣಿಯನ್ನು ಕುರಿತು- 'ಎಲೌ ಶೋಭನೆಯೇ, ನೀನು ಎಲ್ಲ ಸ್ತ್ರೀಯರಿಗಿಂತಲೂ ಶ್ರೇಷ್ಠವಾದ ಯಶಸ್ಸನ್ನೂ, ಶ್ರೇಷ್ಠವಾದ ಕೀರ್ತಿಯನ್ನೂ ಹೊಂದುವಿ'.

ನ ತ್ವಾಂ ಜರಾ ವಾ ರೋಗೋ ವಾ ವೈವರ್ಣ್ಯಂ ಚಾಪಿ ಭಾಮಿನಿ ।
ಸ್ಪೃಕ್ಷ್ಯಂತಿ ಪುಣ್ಯಗಂಧಾ ಚ ಕೃಷ್ಣಮಾರಾಧಯಿಷ್ಯಸಿ ॥೪೧॥

ನಿನಗೆ ಜರೆಯಾಗಲೀ, ರೋಗವಾಗಲೀ, ವರ್ಣಹೀನತೆಯಾಗಲೀ ಉಂಟಾಗುವುದಿಲ್ಲ. ಎಲೌ ಭಾಮಿನಿಯೇ, ಪುಣ್ಯಗಂಧಗಳು ಯಾವಾಗಲೂ ನಿನ್ನ ಸ್ಪರ್ಶವನ್ನು ಹೊಂದುತ್ತವೆ. ನೀನು ಕೃಷ್ಣನನ್ನು ಸಂತೋಷಪಡಿಸುವಿ.

ಷೋಡಶಾನಾಂ ಸಹಸ್ರಾಣಾಂ ವಧೂನಾಂ ಕೇಶವಸ್ಯ ಹ ।
ವರಿಷ್ಠಾ ಸರ್ವಲೋಕಸ್ಯ ಕೇಶವಸ್ಯ ಭವಿಷ್ಯಸಿ ॥೪೨॥

ಕೇಶವನ ಹದಿನಾರು ಸಾವಿರ ಪತ್ನಿಯರಲ್ಲಿ ಮತ್ತು ಲೋಕದಲ್ಲಿ ನೀನು ಶ್ರೇಷ್ಠಳಾಗುವಿ.

ತವ ಮಾತರಮಿತ್ಯುಕ್ತ್ವಾ ತತೋ ಮಾಂ ಪುನರಬ್ರವೀತ್ ।
ಪ್ರಸ್ಥಿತಃ ಸುಮಹಾತೇಜಾ ದುರ್ವಾಸಾ ವಹ್ನಿವಜ್ಜ್ವಲನ್ ॥೪೩॥

ನಿನ್ನ ತಾಯಿಯನ್ನು ಕುರಿತು ಹೀಗೆ ಮಾತನಾಡಿ ಪುನಃ ನನ್ನನ್ನು ಕುರಿತು ಮಹಾತೇಜಸ್ವಿಗಳಾದ ದುರ್ವಾಸರು ಅಗ್ನಿಯಂತೆ ಜ್ವಲಿಸುತ್ತಾ ಹೊರಟು ಹೀಗೆ ಹೇಳಿದರು.

ಏಷೈವ ತೇ ಬುದ್ಧಿರಸ್ತು ಬ್ರಾಹ್ಮಣಾನ್ ಪ್ರತಿ ಕೇಶವ ।
ಇತ್ಯುಕ್ತ್ವಾ ಸ ತದಾ ಪುತ್ರ ತತ್ರೈವಾಂತರಧೀಯತ ॥೪೪॥

ಎಲೈ ಕೇಶವನೇ, ಬ್ರಾಹ್ಮಣರ ವಿಷಯದಲ್ಲಿ ನಿನ್ನ ಬುದ್ಧಿಯು ಯಾವಾಗಲೂ ಹೀಗೆಯೇ ಇರಲಿ. ಎಲೈ ಪುತ್ರನೇ, ಹೀಗೆ ಹೇಳಿ ಅವರು ಅಲ್ಲಿಯೇ ಅಂತರ್ಧಾನವನ್ನು ಹೊಂದಿದರು.

ತಸ್ಮಿನ್ನಂತರ್ಹಿತೇ ಚಾಹಮುಪಾಂಶುವ್ರತಮಾದಿಶಮ್ ।
ಯತ್ ಕಿಂಚಿದ್ ಬ್ರಾಹ್ಮಣೋ ಬ್ರೂಯಾತ್ ಸರ್ವಂ ಕುರ್ಯಾಮಿತಿ ಪ್ರಭೋ॥

ಅವನು ಅಂತರ್ಧಾನವನ್ನು ಹೊಂದಿದ ಮೇಲೆ ನಾನು, ಬ್ರಾಹ್ಮಣನು ಏನು ಹೇಳಿದರೂ ಅದನ್ನು ನಾನು ಮಾಡುವೆನು ಎಂದು ಒಂದು ರಹಸ್ಯವ್ರತವನ್ನು ಧರಿಸಿದೆನು.

ಏತದ್ ವ್ರತಮಹಂ ಕೃತ್ವಾ ಮಾತ್ರಾ ತೇ ಸಹ ಪುತ್ರಕ ।
ತತಃ ಪರಮಹೃಷ್ಟಾತ್ಮಾ ಪ್ರಾವಿಶಂ ಗೃಹಮೇವ ಚ ॥೪೬॥

ಎಲೈ ಪ್ರೀತಿಯ ಪುತ್ರನೇ, ನಿನ್ನ ತಾಯಿಯ ಜೊತೆಯಲ್ಲಿ ಈ ವ್ರತದ ಸಂಕಲ್ಪವನ್ನು ಮಾಡಿ ಪರಮ ಸಂತೋಷದಿಂದ ಕೂಡಿ ಗೃಹಕ್ಕೆ ಹಿಂದಿರುಗಿದೆನು.

ಪ್ರವಿಷ್ಟಮಾತ್ರಶ್ಚ ಗೃಹೇ ಸರ್ವಂ ಪಶ್ಯಾಮಿ ತನ್ನವಮ್ ।
ಯದ್‌ಭಿನ್ನಂ ಯಚ್ಚ ವೈ ದಗ್ಧಂ ತೇನ ವಿಪ್ರೇಣ ಪುತ್ರಕ ॥೪೭॥

ಎಲೈ ಪುತ್ರಕನೇ, ಮನೆಯನ್ನು ಪ್ರವೇಶಿಸಿದ ತಕ್ಷಣವೇ ಆ ಬ್ರಾಹ್ಮಣರಿಂದ ಒಡೆಯಲ್ಪಟ್ಟ, ದಹಿಸಲ್ಪಟ್ಟ ಎಲ್ಲವೂ ಹೊಸದಾಗಿರುವುದನ್ನು ನೋಡಿದೆನು.

ತತೋಽಹಂ ವಿಸ್ಮಯಂ ಪ್ರಾಪ್ತಃ ಸರ್ವಂ ದೃಷ್ಟ್ವಾ ನವಂ ದೃಢಮ್ ।
ಅಪೂಜಯಂ ಚ ಮನಸಾ ರೌಗ್ಮಿಣೇಯ ದ್ವಿಜಂ ತದಾ ॥೪೮॥

ಆಗ ನಾನು ಎಲ್ಲವೂ ಹೊಸದೂ ಮತ್ತು ಮೊದಲಿಗಿಂತ ದೃಢವೂ ಆಗಿರುವುದನ್ನು ನೋಡಿ ಎಲೈ ರುಗ್ಮಿಣೀ ಪುತ್ರನೇ, ಆ ಬ್ರಾಹ್ಮಣನನ್ನು ಮನಸ್ಸಿನಲ್ಲಿಯೇ ಪೂಜಿಸಿದೆನು.

ಇತ್ಯಹಂ ರೌಗ್ಮಿಣೇಯಸ್ಯ ಪೃಚ್ಛತೋ ಭರತರ್ಷಭ ।
ದ್ವಿಜಮುಖ್ಯಸ್ಯ ಮಾಹಾತ್ಮ್ಯಂ ಸರ್ವಮಾಖ್ಯಾತವಾಂಸ್ತದಾ ॥೪೯॥

ಎಲೈ ಭರತರ್ಷಭನೇ, ಈ ರೀತಿ ನಾನು ನನ್ನನ್ನು ಪ್ರಶ್ನಿಸಿದ, ರುಗ್ಮಿಣೀ ಪುತ್ರನಾದ ಪ್ರದ್ಯುಮ್ನನಿಗೆ ಮುನಿಶ್ರೇಷ್ಠರಾದ ದುರ್ವಾಸರ ಮಹಿಮೆಯನ್ನು ಆಗ ಹೇಳಿದೆನು.

ತಥಾ ತ್ವಮಪಿ ಕೌಂತೇಯ ಬ್ರಾಹ್ಮಣಾನ್ ಸತತಂ ಪ್ರಭೋ ।
ಪೂಜಯಸ್ವ ಮಹಾಭಾಗಾನ್ ವಾಗ್ಭಿರ್ದಾನೈಶ್ಚ ನಿತ್ಯದಾ ॥೫೦॥

ಎಲೈ ಕೌಂತೆಯನೇ, ಪ್ರಭುವೇ, ಹಾಗೆಯೇ ನೀನೂ ಸಹ ಮಹಾನುಭಾವರಾದ ಬ್ರಾಹ್ಮಣರನ್ನು ವಚನದಿಂದಲೂ, ದಾನಗಳಿಂದಲೂ ಯಾವಾಗಲೂ ಪೂಜಿಸು.

ಏವಂ ವೃಷ್ಟಿಮಹಂ ಪ್ರಾಪ್ತೋ ಬ್ರಾಹ್ಮಣಾನಾಂ ಪ್ರಸಾದಜಾಮ್ ।
ಯಚ್ಚ ಮಾಮಾಹ ಭೀಷ್ಮೋಽಯಂ ತತ್ ಸತ್ಯಂ ಭರತರ್ಷಭ ॥೫೧॥

ಎಲೈ ಭರತರ್ಷಭನೇ, ಬ್ರಾಹ್ಮಣರ ಪೂಜೆಯನ್ನು ಮಾಡಿ, ಅವರ ಅನುಗ್ರಹದಿಂದ ನಾನು ಇಂತಹ ಸಮೃದ್ಧಿಯನ್ನು ಪಡೆದೆ. ಭೀಷ್ಮರು ನನ್ನ ವಿಷಯದಲ್ಲಿ ಏನು ಹೇಳಿದರೋ ಅದೆಲ್ಲವೂ ಸತ್ಯವಾದುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಬ್ರಾಹ್ಮಣಪ್ರಶಂಸಾಯಾಂ ದುರ್ವಾಸಚರಿತ್ರಕಥನಂ ನಾಮ ಸಪ್ತಚತ್ವಾರಿಂಶೋತ್ತರದ್ವಿಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ನಲವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ನಲವತ್ತೆಂಟನೆಯ ಅಧ್ಯಾಯ

ಕೃಷ್ಣನಿಂದ ಈಶ್ವರಪ್ರಶಂಸೆ

ಯುಧಿಷ್ಠಿರಃ

ದುರ್ವಾಸಸಃ ಪ್ರಸಾದಾತ್ ತೇ ಯತ್ ತದಾ ಮಧುಸೂದನ ।
ಅವಾಪ್ತಮಿಹ ವಿಜ್ಞಾನಂ ತನ್ಮೇ ವ್ಯಾಖ್ಯಾತುಮರ್ಹಸಿ ॥೧॥

ಮಹಾಭಾಗ್ಯಂ ಚ ಯತ್ ತಸ್ಯ ನಾಮಾನಿ ಚ ಮಹಾತ್ಮನಃ ।
ತತ್ತ್ವತೋ ಜ್ಞಾತುಮಿಚ್ಛಾಮಿ ಸರ್ವಂ ಮತಿಮತಾಂ ವರ ॥೨॥

ಯುಧಿಷ್ಠಿರ– ಎಲೈ ಮಧುಸೂದನನೇ, ದುರ್ವಾಸರ ಅನುಗ್ರಹದಿಂದ ನೀನು ಆಗ ಪಡೆದ ವಿಜ್ಞಾನವನ್ನು ನನಗೆ ಹೇಳಬೇಕು. ಎಲೈ ಮೇಧಾವಿಗಳಲ್ಲಿ ಶ್ರೇಷ್ಠನೇ, ಅವನ ಮಹಾಭಾಗ್ಯವನ್ನೂ, ಮಹಾತ್ಮನಾದ ಅವನ ನಾಮಗಳೆಲ್ಲವನ್ನೂ ನಾನು ಸರಿಯಾಗಿ ತಿಳಿಯಲು ಬಯಸುತ್ತೇನೆ.

ವಾಸುದೇವಃ

ಹಂತ ತೇ ಕಥಯಿಷ್ಯಾಮಿ ನಮಸ್ಕೃತ್ವಾ ಕಪರ್ದಿನೇ ।
ಯದವಾಪ್ತಂ ಮಹಾರಾಜ ಶ್ರೇಯೋ ಯಚ್ಚಾರ್ಜಿತಂ ಯಶಃ ॥೩॥

ವಾಸುದೇವ– ಎಲೈ ಮಹಾರಾಜನೇ, ಕಪರ್ದಿಗೆ ನಮಸ್ಕಾರವನ್ನು ಮಾಡಿ ನಾನು ಯಾವ ಶ್ರೇಯಸ್ಸನ್ನು ಪಡದೆನೋ, ಯಾವ ಕೀರ್ತಿಯನ್ನು ಸಂಪಾದಿಸಿದೆನೋ ಅವೆಲ್ಲವನ್ನೂ ನಿನಗೆ ಹೇಳುವೆನು.

ಪ್ರಯತಃ ಪ್ರಾತರುತ್ಥಾಯ ಯದಧೀಯೇ ವಿಶಾಂಪತೇ ।
ಪ್ರಾಂಜಲಿಃ ಶತರುದ್ರೀಯಂ ತನ್ಮೇ ನಿಗದತಃ ಶೃಣು ॥೪॥

ಎಲೈ ರಾಜನೇ, ಪ್ರಾತಃಕಾಲದಲ್ಲಿ ಎದ್ದು, ಶ್ರದ್ಧೆಯಿಂದ ಕೈಗಳನ್ನು ಮುಗಿದು ಶತರುದ್ರೀಯವನ್ನು ಅಧ್ಯಯನ ಮಾಡುತ್ತೇನೆ. ನಾನು ಹೇಳುವಂತೆ ಅದನ್ನು ಕೇಳು.

ಪ್ರಜಾಪತಿಸ್ತತ್ಸಸೃಜೇ ತಪಸೋಽಂತೇ ಮಹಾತಪಾಃ ।
ಶಂಕರಸ್ತ್ವಸೃಜತ್ ತಾತ ಪ್ರಜಾಃ ಸ್ಥಾವರಜಂಗಮಾಃ ॥೫॥

ಮಹಾತಪಸ್ವಿಗಳಾದ ಬ್ರಹ್ಮದೇವರು ತಪಸ್ಸಿನ ಕೊನೆಯಲ್ಲಿ ಜಗತ್ತನ್ನು ಸೃಷ್ಟಿಸಿದರು. ಪ್ರೀತಿಪಾತ್ರನೇ, ಶಂಕರನು ಸ್ಥಾವರ-ಜಂಗಮಾತ್ಮಕವಾದ ಪ್ರಜೆಗಳನ್ನು ಸೃಷ್ಟಿಸಿದನು.

ನಾಸ್ತಿ ಕಿಂಚಿತ್ ಪರಂ ಭೂತಂ ಮಹಾದೇವಾದ್ ವಿಶಾಂಪತೇ ।
ಇಹ ತ್ರಿಷ್ವಪಿ ಲೋಕೇಷು ಭೂತಾನಾಂ ಪ್ರಭವೋ ಹಿ ಸಃ ॥೬॥

ಎಲೈ ರಾಜನೇ, ಮೂರುಲೋಕಗಳಲ್ಲಿಯೂ ಮಹಾದೇವನಿಗಿಂತ ದೊಡ್ಡದಾದ ಇನ್ನೊಂದು ಭೂತವಿಲ್ಲ. ಎಲ್ಲ ಭೂತಗಳಿಗೆ ಅವನೇ ಉತ್ಪತ್ತಿ ಸ್ಥಾನನಾದವನು.

ನ ಚೈವೋತ್ಸಹತೇ ಸ್ಥಾತುಂ ಕಶ್ಚಿದಗ್ರೇ ಮಹಾತ್ಮನಃ ।
ನ ಹಿ ಭೂತಂ ಸಮಂ ತೇನ ತ್ರಿಷು ಲೋಕೇಷು ವಿದ್ಯತೇ ॥೭॥

ಯಾವನೂ ಮಹಾತ್ಮನಾದ ಅವನ ಶರೀರದ ಎದುರಿಗೆ ನಿಲ್ಲಲು ಸಾಧ್ಯವಿಲ್ಲ. ಮೂರು ಲೋಕಗಳಲ್ಲಿರುವ ಯಾವ ಭೂತವೂ ಅವನಿಗೆ ಸಮವಲ್ಲ.

ಗಂಧೇನಾಪಿ ಹಿ ಸಂಗ್ರಾಮೇ ತಸ್ಯ ಕ್ರುದ್ಧಸ್ಯ ಶತ್ರವಃ ।
ವಿಸಂಜ್ಞಾ ಹತಭೂಯಿಷ್ಠಾ ವೇಪಂತಿ ಚ ಪತಂತಿ ಚ ॥೮॥

ಯುದ್ಧದಲ್ಲಿ ಕೋಪಗೊಂಡ ಅವನ ಗಂಧದಿಂದಲೂ ಶತ್ರುಗಳು ಮೂರ್ಛಿತರಾಗಿ ಮೃತರಾದಂತೆಯೇ ಆಗಿ ನಡುಗಿ ಕೆಳಗೆ ಬೀಳುತ್ತಾರೆ.

ಘೋರಂ ಚ ನಿನದಂ ತಸ್ಯ ಪರ್ಜನ್ಯನಿನದೋಪಮಮ್ ।
ಶ್ರುತ್ವಾ ವಿದೀರ್ಯೇದ್ ಹೃದಯಂ ದೇವಾನಾಮಪಿ ಸಂಯುಗೇ ॥೯॥

ಯುದ್ಧದಲ್ಲಿ ಪರ್ಜನ್ಯ ಘೋಷದಂತಿರುವ ಅವನ ಘೋರ ನಿನಾದವನ್ನು ಕೇಳಿ ದೇವತೆಗಳ ಹೃದಯವೂ ಬಿರಿದು ಹೋದೀತು!

ಯಾಂಶ್ಚ ಘೋರೇಣ ರೂಪೇಣ ಪಶ್ಯೇದ್ ದಗ್ಧಃ ಪತೇದಧಃ ।
ನ ಸುರಾ ನಾಸುರಾ ಲೋಕೇ ನ ಗಂಧರ್ವಾ ನ ಚ ಪನ್ನಗಾಃ ।
ಕುಪಿತೇ ಸುಖಮೇಧಂತೇ ತಸ್ಮಿನ್ನಪಿ ಗುಹಾಗತಾಃ ॥೧೦॥

ಅವನು ಯಾರನ್ನು ಘೋರರೂಪದಿಂದ ನೋಡುತ್ತಾನೆಯೋ ಅಂತಹವನು ದಗ್ಧನಾಗಿ ಕೆಳಗೆ ಬಿದ್ದಾನು. ಅವನು ಕೋಪಗೊಂಡರೆ ಲೋಕದಲ್ಲಿ ಸುರರಾಗಲೀ,

ಇನ್ನೂರ ನಲವತ್ತೆಂಟನೆಯ ಅಧ್ಯಾಯ

ಕೃಷ್ಣನಿಂದ ಈಶ್ವರಪ್ರಶಂಸೆ

ಯುಧಿಷ್ಠಿರಃ

ದುರ್ವಾಸಸಃ ಪ್ರಸಾದಾತ್ ತೇ ಯತ್ ತದಾ ಮಧುಸೂದನ ।
ಅವಾಪ್ತಮಿಹ ವಿಜ್ಞಾನಂ ತನ್ಮೇ ವ್ಯಾಖ್ಯಾತುಮರ್ಹಸಿ ॥೧॥

ಮಹಾಭಾಗ್ಯಂ ಚ ಯತ್ ತಸ್ಯ ನಾಮಾನಿ ಚ ಮಹಾತ್ಮನಃ ।
ತತ್ತ್ವತೋ ಜ್ಞಾತುಮಿಚ್ಛಾಮಿ ಸರ್ವಂ ಮತಿಮತಾಂ ವರ ॥೨॥

ಯುಧಿಷ್ಠಿರ– ಎಲೈ ಮಧುಸೂದನನೇ, ದುರ್ವಾಸರ ಅನುಗ್ರಹದಿಂದ ನೀನು ಆಗ ಪಡೆದ ವಿಜ್ಞಾನವನ್ನು ನನಗೆ ಹೇಳಬೇಕು. ಎಲೈ ಮೇಧಾವಿಗಳಲ್ಲಿ ಶ್ರೇಷ್ಠನೇ, ಅವನ ಮಹಾಭಾಗ್ಯವನ್ನೂ, ಮಹಾತ್ಮನಾದ ಅವನ ನಾಮಗಳೆಲ್ಲವನ್ನೂ ನಾನು ಸರಿಯಾಗಿ ತಿಳಿಯಲು ಬಯಸುತ್ತೇನೆ.

ವಾಸುದೇವಃ

ಹಂತ ತೇ ಕಥಯಿಷ್ಯಾಮಿ ನಮಸ್ಕೃತ್ವಾ ಕಪರ್ದಿನೇ ।
ಯದವಾಪ್ತಂ ಮಹಾರಾಜ ಶ್ರೇಯೋ ಯಚ್ಚಾರ್ಜಿತಂ ಯಶಃ ॥೩॥

ವಾಸುದೇವ– ಎಲೈ ಮಹಾರಾಜನೇ, ಕಪರ್ದಿಗೆ ನಮಸ್ಕಾರವನ್ನು ಮಾಡಿ ನಾನು ಯಾವ ಶ್ರೇಯಸ್ಸನ್ನು ಪಡದೆನೋ, ಯಾವ ಕೀರ್ತಿಯನ್ನು ಸಂಪಾದಿಸಿದೆನೋ ಅವೆಲ್ಲವನ್ನೂ ನಿನಗೆ ಹೇಳುವೆನು.

ಪ್ರಯತಃ ಪ್ರಾತರುತ್ಥಾಯ ಯದಧೀಯೇ ವಿಶಾಂಪತೇ ।
ಪ್ರಾಂಜಲಿಃ ಶತರುದ್ರೀಯಂ ತನ್ಮೇ ನಿಗದತಃ ಶೃಣು ॥೪॥

ಎಲೈ ರಾಜನೇ, ಪ್ರಾತಃಕಾಲದಲ್ಲಿ ಎದ್ದು, ಶ್ರದ್ಧೆಯಿಂದ ಕೈಗಳನ್ನು ಮುಗಿದು ಶತರುದ್ರೀಯವನ್ನು ಅಧ್ಯಯನ ಮಾಡುತ್ತೇನೆ. ನಾನು ಹೇಳುವಂತೆ ಅದನ್ನು ಕೇಳು.

ಪ್ರಜಾಪತಿಸ್ತತ್ಸಸೃಜೇ ತಪಸೋಽಂತೇ ಮಹಾತಪಾಃ ।
ಶಂಕರಸ್ತ್ವಸೃಜತ್ ತಾತ ಪ್ರಜಾಃ ಸ್ಥಾವರಜಂಗಮಾಃ ॥೫॥

ಮಹಾತಪಸ್ವಿಗಳಾದ ಬ್ರಹ್ಮದೇವರು ತಪಸ್ಸಿನ ಕೊನೆಯಲ್ಲಿ ಜಗತ್ತನ್ನು ಸೃಷ್ಟಿಸಿದರು. ಪ್ರೀತಿಪಾತ್ರನೇ, ಶಂಕರನು ಸ್ಥಾವರ-ಜಂಗಮಾತ್ಮಕವಾದ ಪ್ರಜೆಗಳನ್ನು ಸೃಷ್ಟಿಸಿದನು.

ನಾಸ್ತಿ ಕಿಂಚಿತ್ ಪರಂ ಭೂತಂ ಮಹಾದೇವಾದ್ ವಿಶಾಂಪತೇ ।
ಇಹ ತ್ರಿಷ್ವಪಿ ಲೋಕೇಷು ಭೂತಾನಾಂ ಪ್ರಭವೋ ಹಿ ಸಃ ॥೬॥

ಎಲೈ ರಾಜನೇ, ಮೂರುಲೋಕಗಳಲ್ಲಿಯೂ ಮಹಾದೇವನಿಗಿಂತ ದೊಡ್ಡದಾದ ಇನ್ನೊಂದು ಭೂತವಿಲ್ಲ. ಎಲ್ಲ ಭೂತಗಳಿಗೆ ಅವನೇ ಉತ್ಪತ್ತಿ ಸ್ಥಾನನಾದವನು.

ನ ಚೈವೋತ್ಸಹತೇ ಸ್ಥಾತುಂ ಕಶ್ಚಿದಗ್ರೇ ಮಹಾತ್ಮನಃ ।
ನ ಹಿ ಭೂತಂ ಸಮಂ ತೇನ ತ್ರಿಷು ಲೋಕೇಷು ವಿದ್ಯತೇ ॥೭॥

ಯಾವನೂ ಮಹಾತ್ಮನಾದ ಅವನ ಶರೀರದ ಎದುರಿಗೆ ನಿಲ್ಲಲು ಸಾಧ್ಯವಿಲ್ಲ. ಮೂರು ಲೋಕಗಳಲ್ಲಿರುವ ಯಾವ ಭೂತವೂ ಅವನಿಗೆ ಸಮವಲ್ಲ.

ಗಂಧೇನಾಪಿ ಹಿ ಸಂಗ್ರಾಮೇ ತಸ್ಯ ಕ್ರುದ್ಧಸ್ಯ ಶತ್ರವಃ ।
ವಿಸಂಜ್ಞಾ ಹತಭೂಯಿಷ್ಠಾ ವೇಪಂತಿ ಚ ಪತಂತಿ ಚ ॥೮॥

ಯುದ್ಧದಲ್ಲಿ ಕೋಪಗೊಂಡ ಅವನ ಗಂಧದಿಂದಲೂ ಶತ್ರುಗಳು ಮೂರ್ಛಿತರಾಗಿ ಮೃತರಾದಂತೆಯೇ ಆಗಿ ನಡುಗಿ ಕೆಳಗೆ ಬೀಳುತ್ತಾರೆ.

ಘೋರಂ ಚ ನಿನದಂ ತಸ್ಯ ಪರ್ಜನ್ಯನಿನದೋಪಮಮ್ ।
ಶ್ರುತ್ವಾ ವಿದೀರ್ಯೇದ್ ಹೃದಯಂ ದೇವಾನಾಮಪಿ ಸಂಯುಗೇ ॥೯॥

ಯುದ್ಧದಲ್ಲಿ ಪರ್ಜನ್ಯ ಘೋಷದಂತಿರುವ ಅವನ ಘೋರ ನಿನಾದವನ್ನು ಕೇಳಿ ದೇವತೆಗಳ ಹೃದಯವೂ ಬಿರಿದು ಹೋದೀತು!

ಯಾಂಶ್ಚ ಘೋರೇಣ ರೂಪೇಣ ಪಶ್ಯೇದ್ ದಗ್ಧಃ ಪತೇದಧಃ ।
ನ ಸುರಾ ನಾಸುರಾ ಲೋಕೇ ನ ಗಂಧರ್ವಾ ನ ಚ ಪನ್ನಗಾಃ ।
ಕುಪಿತೇ ಸುಖಮೇಧಂತೇ ತಸ್ಮಿನ್ನಪಿ ಗುಹಾಗತಾಃ ॥೧೦॥

ಅವನು ಯಾರನ್ನು ಘೋರರೂಪದಿಂದ ನೋಡುತ್ತಾನೆಯೋ ಅಂತಹವನು ದಗ್ಧನಾಗಿ ಕೆಳಗೆ ಬಿದ್ದಾನು. ಅವನು ಕೋಪಗೊಂಡರೆ ಲೋಕದಲ್ಲಿ ಸುರರಾಗಲೀ,

ಅಸುರರಾಗಲೀ, ಗಂಧರ್ವರಾಗಲೀ, ಸರ್ಪಗಳಾಗಲೀ ಗುಹೆಯಲ್ಲಿದ್ದರೂ ಸುಖವನ್ನು ಹೊಂದುವುದಿಲ್ಲ.

ಪ್ರಜಾಪತೇಶ್ಚ ದಕ್ಷಸ್ಯ ಯಜತೋ ವಿತತೇ ಕ್ರತೌ ।
ವಿವ್ಯಾಧ ಕುಪಿತೋ ಯಜ್ಞಂ ನಿರ್ಭಯಸ್ತು ಭವಸ್ತದಾ ।
ಧನುಷಾ ಬಾಣಮುತ್ಸೃಜ್ಯ ಸಘೋಷಂ ವಿನನಾದ ಚ ॥೧೧॥

ದಕ್ಷ ಪ್ರಜಾಪತಿಯ ವಿಸ್ತಾರವಾದ ಯಜ್ಞದಲ್ಲಿ ಭವನು ಆಗ ಕುಪಿತನಾಗಿ, ನಿರ್ಭಯನಾಗಿ ಯಜ್ಞವನ್ನು ಧ್ವಂಸ ಮಾಡಿದನು. ಧನುಸ್ಸಿನಿಂದ ಬಾಣವನ್ನು ಪ್ರಯೋಗಿಸಿ ಮಹಾಘೋಷದೊಡನೆ ಗರ್ಜಿಸಿದನು.

ತೇ ನ ಶರ್ಮ ಕುತಃ ಶಾಂತಿಂ ಲೇಭಿರೇ ಸ್ಮ ಸುರಾಸ್ತದಾ ।
ವಿದ್ರುತೇ ಸಹಸಾ ಯಜ್ಞೇ ಕುಪಿತೇ ಚ ಮಹೇಶ್ವರೇ ॥೧೨॥

ಮಹೇಶ್ವರನು ಕುಪಿತನಾಗಿ ಯಜ್ಞವು ಧ್ವಂಸ ಮಾಡಲ್ಪಡುತ್ತಿರಲು ದೇವತೆಗಳು ಸುಖವನ್ನು ಹೊಂದಲಿಲ್ಲ. ಇನ್ನು ಶಾಂತಿಯು ಎಲ್ಲಿಂದ ಬರಬೇಕು?

ತೇನ ಜ್ಯಾತಳಘೋಷೇಣ ಸರ್ವೇ ಲೋಕಾಃ ಸಮಾಕುಲಾಃ ।
ಬಭೂವುರವಶಾಃ ಪಾರ್ಥ ವಿಷೇದುಶ್ಚ ಸುರಾಸುರಾಃ ॥೧೩॥

ಅವನ ಧನುಸ್ಸಿನ ಹೆದೆಯ ಘೋಷದಿಂದ ಎಲ್ಲ ಲೋಕಗಳೂ ಗಾಬರಿಗೊಂಡವು. ಎಲೈ ಪಾರ್ಥನೇ, ಸುರಾಸುರರು ಅವಶರಾಗಿ ವಿಷಾದವನ್ನು ಹೊಂದಿದರು.

ಆಪಶ್ಚುಕ್ಷುಭಿರೇ ಚೈವ ಚಕಂಪೇ ಚ ವಸುಂಧರಾ ।
ವ್ಯದ್ರವನ್ ಗಿರಯಶ್ಚಾಪಿ ದ್ಯೌಃ ಪಫಾಲ ಚ ಸರ್ವಶಃ ॥೧೪॥

ಸಮುದ್ರಗಳ ಜಲವು ಕ್ಷೋಭೆಯನ್ನು ಹೊಂದಿತು. ಭೂಮಿಯು ನಡುಗಿತು. ಪರ್ವತಗಳು ಓಡಿದವು. ಆಕಾಶವು ಬಿರಿಯಿತು.

ಅಂಧೇನ ತಮಸಾ ಲೋಕಾಃ ಪ್ರಾವೃತಾ ನ ಚಕಾಶಿರೇ ।
ಪ್ರನಷ್ಟಾ ಜ್ಯೋತಿಷಾಂ ಭಾಶ್ಚ ಸಹ ಸೂರ್ಯೇಣ ಭಾರತ ॥೧೫॥

ಕಗ್ಗತ್ತಲೆಯಿಂದ ಆವೃತವಾದ ಲೋಕಗಳು ಪ್ರಕಾಶಿಸಲಿಲ್ಲ. ಎಲೈ ಭಾರತನೇ, ಸೂರ್ಯನೇ ಮೊದಲಾದ ಜ್ಯೋತಿಸ್ಸುಗಳ ಪ್ರಕಾಶವು ನಷ್ಟವಾಯಿತು.

ಭೃಶಂ ಭೀತಾಸ್ತತಃ ಶಾಂತಿಂ ಚಕ್ರುಃ ಸ್ವಸ್ತ್ಯಯನಾನಿ ಚ ।
ಋಷಯಃ ಸರ್ವಭೂತಾನಾಮಾತ್ಮನಶ್ಚ ಹಿತೈಷಿಣಃ ॥೧೬॥

ಸರ್ವಭೂತಗಳ, ತಮ್ಮ ಹಿತೈಷಿಗಳಾದ ಋಷಿಗಳು ಬಹಳ ಹೆದರಿ ಆಗ ಶಾಂತಿಯನ್ನೂ, ಮಂಗಳವಾಚನಗಳನ್ನೂ ಮಾಡಿದರು.

ತತಃ ಸೋಽಭ್ಯದ್ರವದ್ ದೇವಾನ್ ಕ್ರುದ್ಧೋ ರೌದ್ರಪರಾಕ್ರಮಃ ।
ಭಗಸ್ಯ ನಯನೇ ಕ್ರುದ್ಧಃ ಪ್ರಹಾರೇಣ ವ್ಯಶಾತಯತ್ ॥೧೭॥

ಅನಂತರ ಭಯಂಕರ ಪರಾಕ್ರಮವುಳ್ಳ ಅವನು ಕೋಪಗೊಂಡು ದೇವತೆಗಳ ಕಡೆಗೆ ನುಗ್ಗಿದನು. ಒಂದು ಪ್ರಹಾರದಿಂದ ಭಗನ ನೇತ್ರಗಳನ್ನು ಪುಡಿ ಮಾಡಿದನು.

ಪೂಷಾಣಂ ಚಾಭಿದುದ್ರಾವ ಪರೇಣ· ವಪುಷಾನ್ವಿತಃ ।
ಪುರೋಡಾಶಂ ಭಕ್ಷಯತೋ ದಶನಾನ್ ವೈ ವ್ಯಶಾತಯತ್ ॥೧೮॥

ಶ್ರೇಷ್ಠವಾದ ಶರೀರವನ್ನು ಧರಿಸಿದ ಅವನು ಪೂಷನ ಕಡೆಗೆ ಓಡಿದನು. ಪುರೋಡಾಶವನ್ನು ತಿನ್ನುತ್ತಿದ್ದ ಅವನ ದಂತಗಳನ್ನು ಮುರಿದನು.

ತತಃ ಪ್ರಣೇಮುರ್ದೇವಾಸ್ತೇ ವೇಪಮಾನಾಃ ಸ್ಮ ಶಂಕರಮ್ ।
ಪುನಶ್ಚ ಸಂದಧೇ ರುದ್ರೋ ದೀಪ್ತಂ ಸುನಿಶಿತಂ ಶರಮ್ ॥೧೯॥

ಆಗ ಆ ದೇವತೆಗಳೆಲ್ಲರೂ ನಡುಗುತ್ತಾ ಶಂಕರನಿಗೆ ನಮಸ್ಕಾರವನ್ನು ಮಾಡಿದರು. ರುದ್ರನು ಪುನಃ ಅತ್ಯಂತ ತೀಕ್ಷ್ಣವಾದ ಬಾಣವನ್ನು ಧನುಸ್ಸಿನಲ್ಲಿ ಹೂಡಿದನು.

ರುದ್ರಸ್ಯ ವಿಕ್ರಮಂ ದೃಷ್ಟ್ವಾ ಭೀತಾ ದೇವಾಃ ಸಹರ್ಷಿಭಿಃ ।
ತತಃ ಪ್ರಸಾದಯಾಮಾಸುಃ ಸರ್ವೇ ವಿಬುಧಸತ್ತಮಾಃ ॥೨೦॥

ರುದ್ರನ ಪರಾಕ್ರಮವನ್ನು ನೋಡಿ ದೇವತೆಗಳು, ಋಷಿಗಳು ಭೀತರಾದರು. ಆಗ ವಿಬುಧಶ್ರೇಷ್ಠರೆಲ್ಲರೂ ಅವನನ್ನು ಪ್ರಸನ್ನಗೊಳಿಸಿದರು.

ಜೇಪುಶ್ಚ ಶತರುದ್ರೀಯಂ ದೇವಾಃ ಕೃತ್ವಾಽಂಜಲಿಂ ತತಃ ।
ಸಂಸ್ತೂಯಮಾನಸಿದ್ಧಶ್ಚೈಃ ಪ್ರಸಸಾದ ಮಹೇಶ್ವರಃ ॥೨೧॥

ದೇವತೆಗಳು ಕೈಗಳನ್ನು ಮುಗಿದು ಶತರುದ್ರೀಯ ಜಪವನ್ನು ಮಾಡಿದರು. ದೇವತೆಗಳಿಂದ ಸ್ತೋತ್ರ ಮಾಡಲ್ಪಟ್ಟ ಮಹೇಶ್ವರನು ಪ್ರಸನ್ನನಾದನು.

ರುದ್ರಸ್ಯ ಭಾಗಂ ಯಜ್ಞೇ ಚ ವಿಶಿಷ್ಟಂ ತೇ ತ್ವಕಲ್ಪಯನ್ ।
ಭಯೇನ ತ್ರಿದಶಾ ರಾಜನ್ ಶರಣಂ ಚ ಪ್ರಪೇದಿರೇ ॥೨೨॥

ಅವರು ಯಜ್ಞದಲ್ಲಿ (ಪ್ರಧಾನ ದೇವತೆಗೆ ಕೊಟ್ಟು) ಉಳಿದ ಭಾಗವನ್ನು ರುದ್ರನ ಭಾಗವೆಂದು ಕಲ್ಪಿಸಿದರು. ರಾಜನೇ, ದೇವತೆಗಳು ಭಯದಿಂದ ಈಶ್ವರನಿಗೆ ಶರಣಾಗತರಾದರು.

ತೇನ ಚೈವಾತಿಕೋಪೇನ ಸ ಯಜ್ಞಃ ಸಂಧಿತೋಽಭವತ್ ।
ಯದ್ಯಚ್ಚಾಪಿ ಹತಂ ತತ್ರ ತತ್ತಥಾ ಪ್ರತಿಪೇದಿರೇ ॥೨೩॥

ಅತಿ ಕೋಪವನ್ನು ಹೊಂದಿದ್ದ ರುದ್ರನೇ ಆ ಯಜ್ಞವನ್ನು ಪುನಃ ಸರಿಯಾಗಿ ಪೂರ್ಣಗೊಳಿಸಿದನು (ಸಂಧಾನವನ್ನು ಮಾಡಿದನು). ಅವನು ಮೊದಲು ನಾಶಗೊಳಿಸಿದುದೆಲ್ಲವೂ ಮೊದಲಿನಂತೆಯೇ ಆಯಿತು.

ಅಸುರಾಣಾಂ ಪುರಾಣ್ಯಾಸನ್ ತ್ರೀಣಿ ವೀರ್ಯವತಾಂ ದಿವಿ ।
ಆಯಸಂ ರಾಜತಂ ಚೈವ ಸೌವರ್ಣಮಪರಂ ತಥಾ ॥೨೪॥

ನಾಶಕತ್ ತಾನಿ ಮಘವಾ ಭೇತ್ತುಂ ಸರ್ವಾಯುಧೈರಪಿ ।
ಅಥ ಸರ್ವೇಽಮರಾ ರುದ್ರಂ ಜಗ್ಮುಃ ಶರಣಮರ್ದಿತಾಃ ॥೨೫॥

ಪರಾಕ್ರಮಶಾಲಿಗಳಾದ ಅಸುರರಿಗೆ ದೇವಲೋಕದಲ್ಲಿ ಕಬ್ಬಿಣದ, ಬೆಳ್ಳಿಯ ಮತ್ತು ಚಿನ್ನದ ಮೂರು ಪಟ್ಟಣಗಳಿದ್ದವು. ಇಂದ್ರನು ತನ್ನ ಎಲ್ಲಾ ಆಯುಧಗಳಿಂದಲೂ ಅವುಗಳನ್ನು ಭೇದಿಸಲು ಶಕ್ತನಾಗಲಿಲ್ಲ. ಆಗ ಆ ಅಸುರರಿಂದ ಪೀಡಿಸಲ್ಪಟ್ಟು ಎಲ್ಲಾ ದೇವತೆಗಳೂ ರುದ್ರದೇವರಿಗೆ ಶರಣಾಗತರಾದರು.

ತತ ಊಚುರ್ಮಹಾತ್ಮಾನೋ ದೇವಾಃ ಸರ್ವೇ ಸಮಾಗತಾಃ ।
ರುದ್ರ ರೌದ್ರಾ ಭವಿಷ್ಯಂತಿ ಪಶವಃ ಸರ್ವಕರ್ಮಸು ।
ಜಹಿ ದೈತ್ಯಾನ್ ಸಹ ಪುರೈರ್ಲೋಕಾನ್ ತ್ರಾಯಸ್ವ ಮಾನದ ॥೨೬॥

ಮಹಾತ್ಮರಾದ ದೇವತೆಗಳೆಲ್ಲರೂ ರುದ್ರದೇವರ ಬಳಿಗೆ ಬಂದು ಎಲೈ ರುದ್ರನೇ, ಈ ಅಸುರರು ಎಲ್ಲಾ ಕರ್ಮಗಳಲ್ಲಿಯೂ ಪಶುಗಳಂತೆ ಘೋರರಾಗುತ್ತಾರೆ. ಎಲೈ ಮಾನದನೇ, ತಮ್ಮ ಪಟ್ಟಣಗಳಿಂದ ಸಹಿತರಾದ ಈ ದೈತ್ಯರನ್ನು ಕೊಂದು ಲೋಕಗಳನ್ನು ರಕ್ಷಿಸು (ಎಂದು ಹೇಳಿದರು).

ಸ ತಥೋಕ್ತಸ್ತಥೇತ್ಯುಕ್ತ್ವಾ ವಿಷ್ಣುಂ ಕೃತ್ವಾ ಶರೋತ್ತಮಮ್ ।
ಶಲ್ಯಮಗ್ನಿಂ ತಥಾ ಕೃತ್ವಾ ಪುಂಖಂ ವೈವಸ್ವತಂ ಯಮಮ್ ।
ವೇದಾನ್ ಕೃತ್ವಾ ಧನುಃ ಸರ್ವಾನ್ ಸಾವಿತ್ರೀಂ ಜ್ಯಾಂ ಮಹೇಶ್ವರಃ ॥

ದೇವಾನ್ ರಥವರಂ ಕೃತ್ವಾ ವಿನಿಯುಜ್ಯ ಚ ಸರ್ವಶಃ ।
ತ್ರಿಪರ್ವಣಾ ತ್ರಿಶಲ್ಯೇನ ತೇನ ತಾನಿ ಬಿಭೇದ ಸಃ ॥೨೮॥

ರುದ್ರನು ಹಾಗೆಯೇ ಆಗಲಿ ಎಂದು ಹೇಳಿ ವಿಷ್ಣುವನ್ನು ಶ್ರೇಷ್ಠವಾದ ಬಾಣವನ್ನಾಗಿ ಮಾಡಿಕೊಂಡು, ಅಗ್ನಿಯನ್ನು ಅದರ ಅಗ್ರವನ್ನಾಗಿಯೂ, ಯಮನನ್ನು ಗರಿಯನ್ನಾಗಿಯೂ, ಎಲ್ಲಾ ವೇದಗಳನ್ನೂ ಧನುಸ್ಸನ್ನಾಗಿ ಮಾಡಿಕೊಂಡು, ಗಾಯತ್ರಿಯನ್ನು ಹೆದೆಯನ್ನಾಗಿ ಮಾಡಿಕೊಂಡು, ದೇವತೆಗಳನ್ನು ಶ್ರೇಷ್ಠ ರಥವನ್ನಾಗಿ ಮಾಡಿಕೊಂಡು, ಎಲ್ಲರನ್ನೂ ಆಯಾ ಕರ್ಮಗಳಲ್ಲಿ ವಿನಿಯೋಗಿಸಿ ಮೂರು ಪರ್ವಗಳನ್ನೂ, ಮೂರು ತುದಿಗಳನ್ನೂ ಹೊಂದಿದ್ದ ಆ ಶಲ್ಯದಿಂದ ಆ ಪಟ್ಟಣಗಳನ್ನು ಭೇದಿಸಿದನು.

ಶರೇಣಾದಿತ್ಯವರ್ಣೇನ ಕಾಲಾಗ್ನಿಸಮತೇಜಸಾ ।
ತೇಽಸುರಾಃ ಸಪುರಾಸ್ತತ್ರ ದಗ್ಧಾ ರುದ್ರೇಣ ಭಾರತ ॥೨೯॥

ಎಲೈ ಭಾರತನೇ, ಕಾಲಾಗ್ನಿ ತೇಜಸ್ಸನ್ನು ಹೊಂದಿದ ರುದ್ರನಿಂದ, ಸೂರ್ಯನ ಪ್ರಭೆಯನ್ನು ಹೊಂದಿದ ಬಾಣದಿಂದ ತಮ್ಮ ಪಟ್ಟಣಗಳ ಜೊತೆಯಲ್ಲಿ ಆ ಅಸುರರು ದಗ್ಧರಾದರು.

ತಂ ಚೈವಾಂಕಗತಂ ದೃಷ್ಟ್ವಾ ಬಾಲಂ ಪಂಚಶಿಖಂ ಪುನಃ ।
ಉಮಾ ಜಿಜ್ಞಾಸಮಾನಾ ವೈ ಕೋಽಯಮಿತ್ಯಬ್ರವೀತ್ ತದಾ ॥೩೦॥

ಈಶ್ವರನು ಈ ಕಾರ್ಯವನ್ನು ಮಾಡಿ, ಪಾರ್ವತಿಯ ತೊಡೆಯ ಮೇಲೆ ಪಂಚಶಿಖೆಯುಳ್ಳ ಬಾಲನಾಗಿ ಮಲಗಿಕೊಂಡಿರಲು ಅವನನ್ನು ತಿಳಿಯಲು ಬಯಸಿ ಉಮೆಯು ಇವನು ಯಾರು ಎಂದು ಕೇಳಿದಳು.

ಅಸೂಯತಶ್ಚ ಶಕ್ರಸ್ಯ ವಜ್ರೇಣ ಪ್ರಹರಿಷ್ಯತಃ ।
ಸವಜ್ರಂ ಸ್ತಂಭಯಾಮಾಸ ತಂ ಬಾಹುಂ ಪರಿಘೋಪಮಮ್ ॥೩೧॥

ಅಸೂಯೆಯಿಂದ ಇಂದ್ರನು ವಜ್ರಾಯುಧದಿಂದ ಅವನಿಗೆ ಪ್ರಹಾರವನ್ನು ಮಾಡಲು ಹವಣಿಸುತ್ತಿರಲು ವಜ್ರ ಸಹಿತವಾದ ಒನಕೆಯಂತಿದ್ದ ಅವನ ಬಾಹುವನ್ನು ಸ್ತಂಭಿಸಿದನು.

ನ ಸಂಬುಬುಧಿರೇ ಚೈನಂ ದೇವಾಸ್ತಂ ಭುವನೇಶ್ವರಮ್ ।
ಸಪ್ರಜಾಪತಯಃ ಸರ್ವೇ ತಸ್ಮಿನ್ ಮುಮುಹುರೀಶ್ವರೇ ॥೩೨॥

ದೇವತೆಗಳು ಅವನನ್ನು ಭುವನೇಶ್ವರನೆಂದು ತಿಳಿಯಲಿಲ್ಲ. ಪ್ರಜಾಪತಿಗಳ ಸ್ವರೂಪರಾದ ಅವರೆಲ್ಲರೂ ಈಶ್ವರನ ಸ್ವರೂಪವನ್ನು ತಿಳಿಯುವುದರಲ್ಲಿ ಮೋಹವನ್ನು ಹೊಂದಿದರು.

ತತೋ ಧ್ಯಾತ್ವಾಽಥ ಭಗವಾನ್ ಬ್ರಹ್ಮಾ ತಮಮಿತೌಜಸಮ್ ।
ಅಯಂ ಶ್ರೇಷ್ಠ ಇತಿ ಜ್ಞಾತ್ವಾ ವವಂದೇ ತಮುಮಾಪತಿಮ್ ॥೩೩॥

ಅನಂತರ ಪೂಜ್ಯನಾದ ಬ್ರಹ್ಮನು ಧ್ಯಾನ ಮಾಡಿ, ಅಮಿತ ಪರಾಕ್ರಮಿಯಾದ ಇವನು ಶ್ರೇಷ್ಠನಾದವನೆಂದು ತಿಳಿದು ಉಮಾಪತಿಗೆ ನಮಸ್ಕಾರವನ್ನು ಮಾಡಿದನು.

ತತಃ ಪ್ರಸಾದಯಾಮಾಸುರುಮಾಂ ರುದ್ರಂ ಚ ತೇ ಸುರಾಃ ।
ಬಭೂವ ಸ ತದಾ ಬಾಹುರ್ಬಲಹಂತುರ್ಯಥಾ ಪುರಾ ॥೩೪॥

ಆಗ ದೇವತೆಗಳು ರುದ್ರನನ್ನೂ ಮತ್ತು ಉಮೆಯನ್ನೂ ಪ್ರಸನ್ನೀಕರಿಸಿದರು. ಆಗ ಇಂದ್ರನ ಬಾಹುವು ಮೊದಲಿನಂತೆಯೇ ಆಯಿತು.

ಸ ಚಾಪಿ ಬ್ರಾಹ್ಮಣೋ ಭೂತ್ವಾ ದುರ್ವಾಸಾ ನಾಮ ವೀರ್ಯವಾನ್ ।
ದ್ವಾರವತ್ಯಾಂ ಮಮ ಗೃಹೇ ಚಿರಂ ಕಾಲಮುಪಾವಸತ್ ॥೩೫॥

ಆ ರುದ್ರನೇ ಬ್ರಾಹ್ಮಣನಾಗಿ, ಪರಾಕ್ರಮಶಾಲಿಯಾದ ದುರ್ವಾಸರಾಗಿ ದ್ವಾರಾವತಿಯಲ್ಲಿ ನನ್ನ ಮನೆಯಲ್ಲಿ ಬಹುಕಾಲ ವಾಸವಾಗಿದ್ದನು.

ವಿಪ್ರಕಾರಾನ್ ಪ್ರಯುಂಕ್ತೇ ಸ್ಮ ಸುಬಹೂನ್ ಮಮ ವೇಶ್ಮನಿ ।
ತಾನುದಾರತಯಾ ಚಾಹಮಕ್ಷಮಂ ತಸ್ಯ ದುಃಸಹಮ್ ॥೩೬॥

ನನ್ನ ಗೃಹದಲ್ಲಿ ಅವನು ಅನೇಕ ಅಪಚಾರಗಳನ್ನು ಮಾಡಿದನು. ತಡೆಯಲು ಅಸಾಧ್ಯವಾದ ಆ ಅಪಚಾರಗಳನ್ನು ನಾನು ಔದಾರ್ಯದಿಂದ ಸಹಿಸಿದೆ.

ಸ ದೇವೇಂದ್ರಶ್ಚ ವಾಯುಶ್ಚ ಸೋಽಶ್ವಿನೌ ಸ ಚ ವಿದ್ಯುತಃ ।
ಸ ಚಂದ್ರಮಾಃ ಸ ಚೇಶಾನಃ ಸ ಸೂರ್ಯೋ ವರುಣಶ್ಚ ಸಃ ॥೩೭॥

ಸ ಕಾಲಃ ಸೋಽಂತಕೋ ಮೃತ್ಯುಃ ಸ ತಮೋ ರಾತ್ರ್ಯಹಾನಿ ಚ ।
ಮಾಸಾರ್ಧಮಾಸಾ ಋತವಃ ಸಂಧ್ಯೇ ಸಂವತ್ಸರಶ್ಚ ಸಃ ॥೩೮॥

ಅವನೇ ದೇವೇಂದ್ರ, ವಾಯು. ಅವನೇ ಅಶ್ವಿನೀ ದೇವತೆಗಳು. ಮಿಂಚುಗಳು. ಅವನೇ ಚಂದ್ರ. ಅವನೇ ಈಶ್ವರ, ಸೂರ್ಯ, ವರುಣ. ಅವನೇ ಕಾಲ, ಅಂತಕ, ಮೃತ್ಯು, ತಮಸ್ಸು, ರಾತ್ರಿ, ಹಗಲು, ಮಾಸಗಳು, ಅರ್ಧಮಾಸಗಳು (ಪಕ್ಷಗಳು), ಋತುಗಳು, ಸಂಧ್ಯೆಗಳು ಮತ್ತು ಸಂವತ್ಸರವೂ ಅವನೇ.

ಸ ಧಾತಾ ಸ ವಿಧಾತಾ ಚ ವಿಶ್ವಕರ್ಮಾ ಸ ಸರ್ವವಿತ್ ।
ನಕ್ಷತ್ರಾಣಿ ದಿಶಶ್ಚೈವ ಪ್ರದಿಶೋಽಥ ಗ್ರಹಾಸ್ತಥಾ ।
ವಿಶ್ವಮೂರ್ತಿರಮೇಯಾತ್ಮಾ ಭಗವಾನ್ ಪರಮೇಶ್ವರಃ ॥೩೯॥

ಅವನೇ ಧಾತಾ, ವಿಧಾತಾ, ವಿಶ್ವಕರ್ಮ, ಸರ್ವಜ್ಞ. ಅವನೇ ನಕ್ಷತ್ರಗಳು, ದಿಕ್ಕುಗಳು, ಪ್ರದಿಕ್ಕುಗಳು, ಗ್ರಹಗಳು. ಭಗವಂತನಾದ ಪರಮೇಶ್ವರನು ವಿಶ್ವಮೂರ್ತಿಯಾದವನು ಮತ್ತು ಅಚಿಂತ್ಯ ಮಹಿಮೆಯುಳ್ಳವನು (ಹಿಂದೆ ಎಷ್ಟೋ ಬಾರಿ ಅರ್ಥ ಮಾಡಿದಂತೆ ಜಡ-ಚೇತನಗಳ ಅಭೇದವು ಯಾವ ಶಾಸ್ತ್ರಕ್ಕೂ

ಸಮ್ಮತವಾದುದಲ್ಲವಾದ್ದರಿಂದ ಒಂದೇ ರೀತಿಯಲ್ಲಿ ಎಲ್ಲವೂ ಅವನ ಅಧೀನ ಎಂದು ಅರ್ಥವನ್ನು ಮಾಡಬೇಕು).

ಏಕಧಾ ಚ ದ್ವಿಧಾ ಚೈವ ಬಹುಧಾ ಚ ಸ ಏವ ಚ ।
ಶತಧಾ ಸಹಸ್ರಧಾ ಚೈವ ತಥಾ ಶತಸಹಸ್ರಧಾ ॥೪೦॥

ಅವನು ಒಂದು ರೂಪವನ್ನೂ, ಎರಡು ರೂಪಗಳನ್ನೂ, ಅನೇಕ ರೂಪಗಳನ್ನೂ, ನೂರು ರೂಪಗಳನ್ನೂ, ಸಹಸ್ರ ರೂಪಗಳನ್ನೂ, ಹಾಗೆಯೇ ಲಕ್ಷ ರೂಪಗಳನ್ನೂ ಧರಿಸಿ ಅಷ್ಟುಪ್ರಕಾರಗಳಲ್ಲಿ ಇದ್ದಾನೆ.

ಈದೃಶಃ ಸ ಮಹಾದೇವೋ ಭೂಯಶ್ಚ ಭಗವಾನತಃ ।
ನ ಹಿ ಶಕ್ಯಾ ಗುಣಾ ವಕ್ತುಮಪಿ ವರ್ಷಶತೈರಪಿ ॥೪೧॥

ಭಗವಂತನಾದ ಮಹಾದೇವನು ಇಂತಹವನು ಮತ್ತು ಇದಕ್ಕಿಂತಲೂ ಹೆಚ್ಚಿನ ಮಹಿಮೆಯುಳ್ಳವನು. ನೂರು ವರ್ಷಗಳಾದರೂ ಅವನ ಗುಣಗಳನ್ನು ಹೇಳಿ ಮುಗಿಸಲು ಸಾಧ್ಯವಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಈಶ್ವರಮಾಹಾತ್ಮ್ಯಕಥನಂ ನಾಮ
ಅಷ್ಟಚತ್ವಾರಿಂಶೋತ್ತರದ್ವಿಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ನಲವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ನಲವತ್ತೊಂಬತ್ತನೆಯ ಅಧ್ಯಾಯ

ಶಂಕರನ ಮಹಿಮೆ

ವಾಸುದೇವಃ

ಯುಧಿಷ್ಠಿರ ಮಹಾಬಾಹೋ ಮಹಾಭಾಗ್ಯಂ ಮಹಾತ್ಮನಃ ।
ರುದ್ರಾಯ ಬಹುರೂಪಾಯ ಬಹುನಾಮ್ನೇ ನಿಬೋಧ ಮೇ ॥೧॥

ವಾಸುದೇವ– ಮಹಾಬಾಹುವಾದ ಯುಧಿಷ್ಠಿರನೇ, ಮಹಾತ್ಮನಾದವನೂ ಮಹಾಭಾಗ್ಯವಂತನೂ, ಬಹುರೂಪನೂ ಆದ ರುದ್ರನ ಅನೇಕ ನಾಮಗಳನ್ನೂ ನನ್ನಿಂದ ಕೇಳುವವನಾಗು.

ವದಂತ್ಯಗ್ನಿಂ ಮಹಾದೇವಂ ತಥಾ ಸ್ಥಾಣುಂ ಮಹೇಶ್ವರಮ್ ।
ಏಕಾಕ್ಷಂ ತ್ರ್ಯಂಬಕಂ ಚೈವ ವಿಶ್ವರೂಪಂ ಶಿವಂ ತಥಾ ॥೨॥

ಮಹಾದೇವನನ್ನು ಅಗ್ನಿ ಎಂದೂ, ಸ್ಥಾಣುವೆಂದೂ, ಮಹೇಶ್ವರನೆಂದೂ, ಏಕಾಕ್ಷನೆಂದೂ, ತ್ರ್ಯಂಬಕನೆಂದೂ, ವಿಶ್ವರೂಪನೆಂದೂ, ಶಿವನೆಂದೂ ಕರೆಯುತ್ತಾರೆ.

ದ್ವೇ ತನೂ ತಸ್ಯ ದೇವಸ್ಯ ವೇದಜ್ಞಾ ಬ್ರಾಹ್ಮಣಾ ವಿದುಃ ।
ಘೋರಾಮನ್ಯಾಂ ಶಿವಾಮನ್ಯಾಂ ತೇ ತನೂ ಬಹುಧಾ ಪುನಃ ॥೩॥

ವೇದವನ್ನು ತಿಳಿದ ಬ್ರಾಹ್ಮಣರು ಆ ದೇವನಿಗೆ ಎರಡು ಶರೀರಗಳಿವೆ ಎಂದು ಹೇಳುತ್ತಾರೆ. ಒಂದು ಘೋರವಾದುದು, ಇನ್ನೊಂದು ಶಾಂತವಾದುದು. ಆ ಎರಡು ಶರೀರಗಳು ಪುನಃ ಅನೇಕ ವಿಧವಾಗಿವೆ.

ಉಗ್ರಾ ಘೋರಾ ತನೂರ್ಯಾऽಸ್ಯ ಸೋऽಗ್ನಿರ್ವಿದ್ಯುತ್ ಸ ಭಾಸ್ಕರಃ ।
ಶಿವಾ ಸೌಮ್ಯಾ ಚ ಯಾ ತಸ್ಯ ಧರ್ಮಸ್ತ್ವಪೋऽಥ ಚಂದ್ರಮಾಃ ॥೪॥

ಅವನ ಉಗ್ರವೂ, ಘೋರವೂ ಆದ ತನುವು ಯಾವುದಿದೆಯೋ ಅದೇ ಅಗ್ನಿ, ವಿದ್ಯುತ್ ಮತ್ತು ಸೂರ್ಯ. ಶಾಂತವಾದ ಮತ್ತು ಸೌಮ್ಯವಾದ ತನುವು ಧರ್ಮ, ಜಲ ಮತ್ತು ಚಂದ್ರ.

ಆತ್ಮನೋऽರ್ಧಂ ತು ತಸ್ಯಾಗ್ನಿರುಚ್ಯತೇ ಭರತರ್ಷಭ ।
ಬ್ರಹ್ಮಚರ್ಯಂ ಚರತ್ಯೇಷ ಶಿವಾ ಯಾऽಸ್ಯ ತನುಸ್ತಥಾ ॥೫॥

ಎಲೈ ಭರತರ್ಷಭನೇ, ಅವನ ಶರೀರದ ಅರ್ಧಭಾಗವನ್ನು ಅಗ್ನಿ ಎಂದು ಹೇಳುತ್ತಾರೆ. ಅವನ ಶಾಂತವಾದ ಶರೀರವು ಬ್ರಹ್ಮಚರ್ಯವನ್ನು ಆಚರಿಸುತ್ತದೆ.

ಯಾऽಸ್ಯ ಘೋರತಮಾ ಮೂರ್ತಿರ್ಜಗತ್‌ಸಂಹರತೇ ತಯಾ ।
ಈಶ್ವರತ್ವಾನ್ಮಹತ್ತ್ವಾಚ್ಚ ಮಹೇಶ್ವರ ಇತಿ ಸ್ಮೃತಃ ॥೬॥

ಅವನ ಘೋರತರವಾದ ಶರೀರವು ಜಗತ್ತನ್ನು ಸಂಹರಿಸುತ್ತದೆ. ಅವನು ಈಶ್ವರನಾದುದರಿಂದಲೂ ಮತ್ತು ಮಹಾತ್ಮನಾದುದರಿಂದಲೂ ಮಹೇಶ್ವರನೆಂದು ಹೇಳಲ್ಪಡುತ್ತಾನೆ.

ಯನ್ನಿರ್ದಹತಿ ಯತ್ ತೀಕ್ಷ್ಣೋ ಯದುಗ್ರೋ ಯತ್ತತಾಪವಾನ್ ।
ಮಾಂಸಶೋಣಿತಮಜ್ಜಾದೋ ಯತ್ ತತೋ ರುದ್ರ ಉಚ್ಯತೇ ॥೭॥

ಜಗತ್ತನ್ನು ಸುಡುವುದರಿಂದ, ತೀಕ್ಷ್ಣವಾಗಿರುವುದರಿಂದ, ಪ್ರತಾಪಶಾಲಿ ಆಗಿರುವುದರಿಂದ, ಮಾಂಸ-ಶೋಣಿತ-ಮಜ್ಜೆಗಳನ್ನು ತಿನ್ನುವುದರಿಂದ ಅವನ ಉಗ್ರವಾದ ಶರೀರವು ರುದ್ರ ಎಂದು ಕರೆಯಲ್ಪಡುತ್ತದೆ.

ದೇವಾನಾಂ ಸುಮಹಾನ್ ಯಚ್ಚ ಯಚ್ಚಾಸ್ಯ ವಿಷಯೋ ಮಹಾನ್ ।
ಯಚ್ಚ ವಿಶ್ವಂ ಮಹತ್ಯಾತಿ ಮಹಾದೇವಸ್ತತಃ ಸ್ಮೃತಃ ॥೮॥

ಅವನು ದೇವತೆಗಳಿಗಿಂತ ದೊಡ್ಡವನಾದ ಕಾರಣದಿಂದ, ಅವನು ಭೋಗಿಸುವ ವಿಷಯವೂ ದೊಡ್ಡದಾದ ಕಾರಣದಿಂದ, ಅವನು ವಿಶ್ವವನ್ನು ರಕ್ಷಿಸುವುದರಿಂದ ಮಹಾದೇವನೆಂದು ಕರೆಯಲ್ಪಡುತ್ತಾನೆ.

ಸಮೇಧಯತಿ ಯನ್ನಿತ್ಯಂ ಸರ್ವಾರ್ಥಾನ್ ಸರ್ವಕರ್ಮಭಿಃ ।
ಶಿವಮಿಚ್ಛನ್ ಮನುಷ್ಯಾಣಾಂ ತಸ್ಮಾದೇಷ ಶಿವಃ ಸ್ಮೃತಃ ॥೯॥

ಮನುಷ್ಯರ ಕ್ಷೇಮವನ್ನು ಬಯಸುತ್ತಾ ನಿತ್ಯವೂ ಎಲ್ಲ ಕರ್ಮಗಳಿಂದ ಎಲ್ಲ ವಸ್ತುಗಳನ್ನೂ ಸಮೃದ್ಧಿಗೊಳಿಸುವುದರಿಂದ ಅವನನ್ನು ಶಿವನೆಂದು ಕರೆಯುತ್ತಾರೆ.

ದಹತ್ಯೂರ್ಧ್ವಂ ಸ್ಥಿತೋ ಯಚ್ಚ ಪ್ರಾಣೋತ್ಪತ್ತಿಃ ಸ್ಥಿತಿಶ್ಚ ಯತ್ ।
ಸ್ಥಿರಲಿಂಗಶ್ಚ ಯನ್ನಿತ್ಯಂ ತಸ್ಮಾತ್‌ಸ್ಥಾಣುರಿತಿ ಸ್ಮೃತಃ ॥೧೦॥

ಊರ್ಧ್ವಮುಖವಾಗಿ ಜ್ವಲಿಸುವುದರಿಂದ, ಇಂದ್ರಿಯೋತ್ಪತ್ತಿಗೆ ಮತ್ತು ಸ್ಥಿತಿಗೆ ಕಾರಣನಾಗಿರುವುದರಿಂದ, ಯಾವಾಗಲೂ ಸ್ಥಿರವಾದ ಲಿಂಗವನ್ನು ಹೊಂದಿರುವುದರಿಂದ ಸ್ಥಾಣುವೆಂದು ಕರೆಯುತ್ತಾರೆ.

ಯದಸ್ಯ ಬಹುಧಾ ರೂಪಂ ಭೂತಂ ಭವ್ಯಂ ಭವತ್ತಥಾ ।
ಸ್ಥಾವರಂ ಜಂಗಮಂ ಚೈವ ಬಹುರೂಪಸ್ತತಃ ಸ್ಮೃತಃ ॥೧೧॥

ಭೂತ-ವರ್ತಮಾನ-ಭವಿಷ್ಯತ್ಕಾಲದ ಸ್ಥಾವರ-ಜಂಗಮಗಳೆಲ್ಲವೂ ಅವನ ಅನೇಕ ರೂಪಗಳಾದುದರಿಂದ ಅವನನ್ನು ಬಹುರೂಪನೆಂದು ಕರೆಯುತ್ತಾರೆ.

ಧೂಮ್ರಂ ರೂಪಂ ಚ ಯತ್ತಸ್ಯ ಧೂರ್ಜಟೀತ್ಯತ ಉಚ್ಯತೇ ।
ವಿಶ್ವೇ ದೇವಾಶ್ಚ ಯತ್ತಸ್ಮಿನ್ ವಿಶ್ವರೂಪಸ್ತತಃ ಸ್ಮೃತಃ ॥೧೨॥

ಧೂಮ್ರವರ್ಣದ ಅವನ ರೂಪವನ್ನು ಧೂರ್ಜಟಿ ಎಂದು ಕರೆಯುತ್ತಾರೆ. ಅವನಲ್ಲಿ ಎಲ್ಲ ದೇವತೆಗಳೂ ಆಶ್ರಯಿಸಿಕೊಂಡಿರುವುದರಿಂದ ಅವನನ್ನು ವಿಶ್ವರೂಪನೆಂದು ಕರೆಯುತ್ತಾರೆ.

ಸಹಸ್ರಾಕ್ಷೋಽಯುತಾಕ್ಷೋ ವಾ ಸರ್ವತೋಕ್ಷಿಮಯೋಽಪಿ ವಾ ।
ಚಕ್ಷುಷಃ ಪ್ರಭವಸ್ತೇಜೋ ನಾಸ್ಯಂತೋಽಥಾಸ್ಯ ಚಕ್ಷುಷಾಮ್ ॥೧೩॥

ಅವನು ಸಹಸ್ರಾಕ್ಷನಾದವನು ಅಥವಾ ಹತ್ತುಸಾವಿರ ಕಣ್ಣುಳ್ಳವನು ಅಥವಾ ಎಲ್ಲ ಕಡೆಗಳಲ್ಲಿಯೂ ಕಣ್ಣುಳ್ಳವನು. ಚಕ್ಷುಸ್ಸಿನ ಉತ್ಪತ್ತಿಗೆ ಕಾರಣನಾದವನು. ತೇಜೋಮಯನಾದವನು. ಅವನ ಚಕ್ಷುಸ್ಸಿನ ಗಣನೆಗೆ ಅಂತವೇ (ಕೊನೆ) ಇಲ್ಲ.

ಸರ್ವಥಾ ಯತ್ ಪಶೂನ್ ಪಾತಿ ತೈಶ್ಚ ಯದ್ರಮತೇ ಪುನಃ ।
ತೇಷಾಮಧಿಪತಿರ್ಯಚ್ಚ ತಸ್ಮಾತ್ ಪಶುಪತಿಃ ಸ್ಮೃತಃ ॥೧೪॥

ಸರ್ವಥಾ ಪಶುಗಳನ್ನು ರಕ್ಷಣೆ ಮಾಡುವುದರಿಂದ ಮತ್ತು ಅವುಗಳ ಜೊತೆಯಲ್ಲಿ ಸಂತೋಷದಿಂದಿರುವುದರಿಂದ ಮತ್ತು ಅವುಗಳಿಗೆ ಅಧಿಪತಿಯಾಗಿರುವುದರಿಂದ ಅವನು ಪಶುಪತಿ ಎನಿಸುತ್ತಾನೆ.

ನಿತ್ಯೇನ ಬ್ರಹ್ಮಚರ್ಯೇಣ ಲಿಂಗಮಸ್ಯ ಯದಾ ಸ್ಥಿತಮ್ ।
ಮಹಯಂತ್ಯಸ್ಯ ಲೋಕಾಶ್ಚ ಮಹೇಶ್ವರ ಇತಿ ಸ್ಮೃತಃ ॥೧೫॥

ನಿತ್ಯವೂ ಬ್ರಹ್ಮಚರ್ಯವನ್ನು ಧರಿಸಿರುವುದರಿಂದ ಅವನ ಲಿಂಗವು ಯಾವಾಗಲೂ ಸ್ಥಿತವಾಗಿದೆ. ಅದನ್ನು ಎಲ್ಲ ಲೋಕಗಳೂ ಪೂಜಿಸುತ್ತವೆ. ಆದ್ದರಿಂದ ಮಹೇಶ್ವರನೆನಿಸುತ್ತಾನೆ.

ವಿಗ್ರಹಂ ಪೂಜಯೇದ್ಯೋ ವೈ ಲಿಂಗಂ ವಾಪಿ ಮಹಾತ್ಮನಃ ।
ಲಿಂಗಂ ಪೂಜಯಿತಾ ನಿತ್ಯಂ ಮಹತೀಂ ಶ್ರಿಯಮಶ್ನುತೇ ॥೧೬॥

ಯಾವನು ಅವನ ಲಿಂಗವನ್ನಾಗಲೀ ಅಥವಾ ಮಹಾತ್ಮನ ವಿಗ್ರಹವನ್ನಾಗಲೀ ಪೂಜಿಸುತ್ತಾನೋ ಅವನು ಅದರಲ್ಲೂ ಲಿಂಗವನ್ನು ಪೂಜಿಸುವವನು ದೊಡ್ಡ ಸಂಪತ್ತನ್ನು ಪಡೆಯುತ್ತಾನೆ.

ಋಷಯಶ್ಚಾಪಿ ದೇವಾಶ್ಚ ಗಂಧರ್ವಾಪ್ಸರಸಸ್ತಥಾ ।
ಲಿಂಗಮೇವಾರ್ಚಯಂತಿ ಸ್ಮ ಯದಾರಾಧ್ಯತಮಂ ಸ್ಥಿತಮ್ ॥೧೭॥

ಋಷಿಗಳು, ದೇವತೆಗಳು, ಗಂಧರ್ವರು, ಅಪ್ಸರೆಯರು, ಅತ್ಯಂತ ಪೂಜ್ಯವಾದ, ಉತ್ಥಿತವಾದ ಅವನ ಲಿಂಗವನ್ನೇ ಪೂಜಿಸುತ್ತಾರೆ.

ಪೂಜ್ಯಮಾನೇ ತತಸ್ತಸ್ಮಿನ್ ಮೋದತೇ ಸ ಮಹೇಶ್ವರಃ ।
ಸುಖಂ ದದಾತಿ ಪ್ರೀತಾತ್ಮಾ ಭಕ್ತಾನಾಂ ಭಕ್ತವತ್ಸಲಃ ॥೧೮॥

ತನ್ನ ಲಿಂಗವು ಪೂಜಿಸಲ್ಪಟ್ಟರೆ ಮಹೇಶ್ವರನು ಸಂತೋಷಪಡುತ್ತಾನೆ. ಭಕ್ತವತ್ಸಲನಾದ ಅವನು ಪ್ರಸನ್ನನಾಗಿ ಭಕ್ತರಿಗೆ ಸುಖವನ್ನು ಕೊಡುತ್ತಾನೆ.

ಏಷ ಏವ ಶ್ಮಶಾನೇಷು ದೇವೋ ವಸತಿ ನಿತ್ಯಶಃ ।
ಯಜಂತೇ ತಂ ಜನಾಸ್ತತ್ರ ವೀರಸ್ಥಾನನಿಷೇವಿಣಮ್ ॥೧೯॥

ಈ ದೇವನೇ ನಿತ್ಯವೂ ಸ್ಮಶಾನಗಳಲ್ಲಿ ವಾಸಿಸುತ್ತಾನೆ. ಆ ವೀರಸ್ಥಾನದಲ್ಲಿರುವ ಅವನನ್ನು ಜನರು ಪೂಜಿಸುತ್ತಾರೆ.

ವಿಷಮಸ್ಥಃ ಶರೀರೇಷು ಸ ಮೃತ್ಯುಃ ಪ್ರಾಣಿನಾಮಿಹ ।
ಸ ಚ ವಾಯುಃ ಶರೀರೇಷು ಪ್ರಾಣೋಽಪಾನಃ ಶರೀರಿಣಾಮ್ ॥೨೦॥

ವಿಷಮವಾದ ಶರೀರಗಳಲ್ಲಿದ್ದು ಅವನೇ ಪ್ರಾಣಿಗಳಿಗೆ ಮೃತ್ಯುವೆನಿಸುತ್ತಾನೆ. ಅವನೇ ವಾಯುವಾಗಿದ್ದು ಶರೀರಗಳಲ್ಲಿ ಪ್ರಾಣಾಪಾನ ರೂಪದಿಂದಿರುತ್ತಾನೆ.

ತಸ್ಯ ಘೋರಾಣಿ ರೂಪಾಣಿ ದೀಪ್ತಾನಿ ಚ ಬಹೂನಿ ಚ ।
ಲೋಕೇ ಯಾನ್ಯಸ್ಯ ಪೂಜ್ಯಂತೇ ವಿಪ್ರಾಸ್ತಾನಿ ವಿದುರ್ಬುಧಾಃ ॥೨೧॥

ಅವನ ರೂಪಗಳು ಘೋರವೂ, ಉಜ್ವಲವೂ, ಅನೇಕವೂ ಇವೆ. ಲೋಕದಲ್ಲಿ ಪೂಜಿಸಲ್ಪಡುವ ಅವನ ರೂಪಗಳನ್ನು ಜ್ಞಾನಿಗಳಾದ ಬ್ರಾಹ್ಮಣರು ತಿಳಿದಿದ್ದಾರೆ.

ನಾಮಧೇಯಾನಿ ವೇದೇಷು ಬಹೂನ್ಯಸ್ಯ ಯಥಾರ್ಥತಃ ।
ನಿರುಚ್ಯಂತೇ ಮಹತ್ತ್ವಾಚ್ಚ ವಿಭುತ್ವಾತ್ ಕರ್ಮಭಿಸ್ತಥಾ ॥೨೨॥

ವೇದದಲ್ಲಿ ಅವನ ಅನೇಕ ನಾಮಗಳು ಅರ್ಥಕ್ಕೆ ಅನುಗುಣವಾಗಿ, ಅವನ ಮಹತ್ತ್ವಕ್ಕೆ ಅನುಗುಣವಾಗಿ, ವಿಭುತ್ವಕ್ಕೆ ಅನುಗುಣವಾಗಿ, ಕರ್ಮಗಳಿಗೆ ಅನುಗುಣವಾಗಿ ನಿರ್ವಚನ ಮಾಡಲ್ಪಡುತ್ತವೆ.

ವೇದೇ ಚಾಸ್ಯ ವಿದುರ್ವಿಪ್ರಾಃ ಶತರುದ್ರೀಯಮುತ್ತಮಮ್ ।
ವ್ಯಾಸಾದನಂತರಂ ಯಚ್ಚಾಪ್ಯುಪಸ್ಥಾನಂ ಮಹಾತ್ಮನಃ ॥೨೩॥

ವೇದಗಳಲ್ಲಿರುವ ಶ್ರೇಷ್ಠವಾದ, ಅವನ ಸ್ಥಿತಿರೂಪವಾದ ಶತರುದ್ರೀಯವನ್ನು ಬ್ರಾಹ್ಮಣರು ತಿಳಿದಿದ್ದಾರೆ. ವ್ಯಾಸರ ಅನಂತರ ಆ ಮಹಾತ್ಮನ ಸ್ತೋತ್ರವು ಮಾಡಲ್ಪಡುತ್ತದೆ.

ಪ್ರದಾತಾ ಸರ್ವಲೋಕಾನಾಂ ವಿಶ್ವಂ ಚಾಪ್ಯುಚ್ಯತೇ ಮಹತ್ ।
ಜ್ಯೇಷ್ಠಭೂತಂ ವದಂತ್ಯೇನಂ ಬ್ರಾಹ್ಮಣಾ ಮುನಯಸ್ತಥಾ ॥೨೪॥

ಸರ್ವಲೋಕಗಳನ್ನು ಪ್ರಧಾನ ಮಾಡುವುದರಿಂದ ಅವನು ವಿಶ್ವನೆಂದೂ ಕರೆಯಲ್ಪಡುತ್ತಾನೆ. ಬ್ರಾಹ್ಮಣರು ಮತ್ತು ಋಷಿಗಳು ಅವನನ್ನು ಜ್ಯೇಷ್ಠನಾದವನೆಂದು ಹೇಳುತ್ತಾರೆ.

ಪ್ರಥಮೋ ಹ್ಯೇಷ ದೇವಾನಾಂ ಮುಖಾದಗ್ನಿರಜಾಯತ ।
ಗ್ರಹೈರ್ಬಹುವಿಧೈಃ ಪ್ರಾಣಾನ್ ಸಂರುದ್ಧಾನುತ್ಸೃಜತ್ಯಪಿ ॥೨೫॥

ಅವನು ದೇವತೆಗಳಲ್ಲಿ ಪ್ರಧಾನನಾದವನು. ಅವನ ಮುಖದಿಂದ ಅಗ್ನಿ ಜನಿಸಿದನು. ಬಹುವಿಧವಾದ ಗ್ರಹಗಳು ತಡೆದಿಟ್ಟ ಜೀವರ ಪ್ರಾಣಗಳನ್ನು ಅವನು ಪುನಃ ಕೊಡುತ್ತಾನೆ.

ಸ ಮೋಚಯತಿ ಪುಣ್ಯಾತ್ಮಾ ಶರಣ್ಯಃ ಶರಣಾಗತಾನ್ ।
ಆಯುರಾರೋಗ್ಯಮೈಶ್ವರ್ಯಂ ವಿತ್ತಂ ಕಾಮಾಂಶ್ಚ ಪುಷ್ಕಳಾನ್ ॥೨೬॥

ಶರಣ್ಯನೂ, ಪುಣ್ಯಾತ್ಮನೂ ಆದ ಅವನು ಶರಣಾಗತರನ್ನು ಸಂಕಟದಿಂದ ಮೋಚನೆಗೊಳಿಸುತ್ತಾನೆ. ಆಯುರಾರೋಗ್ಯ-ಐಶ್ವರ್ಯಗಳನ್ನೂ, ಧನವನ್ನೂ, ಪುಷ್ಕಳವಾದ ಕಾಮಗಳನ್ನೂ ಕೊಡುತ್ತಾನೆ.

ಸ ದದಾತಿ ಮನುಷ್ಯೇಭ್ಯಃ ಸ ಏವಾಕ್ಷಿಪತೇ ಪುನಃ ।
ಶಕ್ರಾದಿಷು ಚ ದೇವೇಷು ತಸ್ಯ ಚೈಶ್ವರ್ಯಮುಚ್ಯತೇ ॥೨೭॥

ಮನುಷ್ಯರಿಗೆ ಅವನೇ ಕೊಡುತ್ತಾನೆ, ಪುನಃ ಅವನೇ ನಾಶ ಮಾಡುತ್ತಾನೆ. ಇಂದ್ರಾದಿ ದೇವತೆಗಳಲ್ಲಿರುವ ಐಶ್ವರ್ಯವು ಅವನದೇ ಎಂದು ಹೇಳಲ್ಪಡುತ್ತದೆ.

ಸ ಏವಾಭ್ಯಧಿಕೋ ನಿತ್ಯಂ ತ್ರೈಲೋಕ್ಯಸ್ಯ ಶುಭಾಶುಭೇ ।
ಐಶ್ವರ್ಯಾಚ್ಚೈವ ಕಾಮಾನಾಮೀಶ್ವರಃ ಪುನರುಚ್ಯತೇ ॥೨೮॥

ಅವನೇ ಬಹಳ ಶ್ರೇಷ್ಠನಾದವನು. ಮೂರುಲೋಕಗಳ ಪ್ರಜೆಗಳಿಗೂ ಯಾವಾಗಲೂ ಶುಭಾಶುಭಗಳನ್ನು ಉಂಟುಮಾಡುವವನು. ಎಲ್ಲ ಕಾಮಗಳಿಗೆ ಪ್ರಭುವಾದ್ದರಿಂದ ಅವನನ್ನು ಈಶ್ವರನೆಂದು ಕರೆಯುತ್ತಾರೆ.

ಮಹೇಶ್ವರಶ್ಚ ಲೋಕಾನಾಂ ಮಹತಾಮೀಶ್ವರಶ್ಚ ಸಃ ।
ಬಹುಭಿರ್ವಿವಿಧೈ ರೂಪೈರ್ವಿಶ್ವಂ ವ್ಯಾಪ್ತಮಿದಂ ಜಗತ್ ।
ತಸ್ಯ ದೇವಸ್ಯ ಯದ್ ವಕ್ತ್ರಂ ಸಮುದ್ರೇ ವಡವಾಮುಖಿಮ್ ॥೨೯॥

ಲೋಕಗಳಿಗೂ, ಮಹಾತ್ಮರಿಗೂ ಒಡೆಯನಾದ್ದರಿಂದ ಅವನು ಮಹೇಶ್ವರ. ಅವನ ಅನೇಕ ರೂಪಗಳಿಂದ ಈ ಜಗತ್ತು ವ್ಯಾಪ್ತವಾಗಿದೆ. ಆ ದೇವನ ಮುಖವು ಸಮುದ್ರದಲ್ಲಿ ವಡವಾಮುಖವಾಗಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಈಶ್ವರಪ್ರಶಂಸಾನಾಮ
ಏಕೋನಪಂಚಾಶದುತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ನಲವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಐವತ್ತನೆಯ ಅಧ್ಯಾಯ

ಧರ್ಮನಿರ್ಣಯ

ವೈಶಂಪಾಯನಃ

ಇತ್ಯುಕ್ತವತಿ ವಾಕ್ಯಂ ತು ಕೃಷ್ಣೇ ದೇವಕಿನಂದನೇ ।
ಭೀಷ್ಮಂ ಶಾಂತನವಂ ಭೂಯಃ ಪರ್ಯಪೃಚ್ಛದ್ ಯುಧಿಷ್ಠಿರಃ ॥೧॥

ವೈಶಂಪಾಯನ– ದೇವಕೀನಂದನನಾದ ಕೃಷ್ಣನು ಹೀಗೆ ಮಾತನಾಡಿದ ಮೇಲೆ ಯುಧಿಷ್ಠಿರನು ಶಂತನು ಪುತ್ರರಾದ ಭೀಷ್ಮರನ್ನು ಪುನಃ ಪ್ರಶ್ನಿಸಿದನು.

ನಿರ್ಣಯೇ ವಾ ಮಹಾಬುದ್ಧೇ ಸರ್ವಧರ್ಮಭೃತಾಂವರ ।
ಪ್ರತ್ಯಕ್ಷಂ ಚಾಗಮೋ ವಾಪಿ ಕಿಂ ತಯೋಃ ಕಾರಣಂ ಭವೇತ್ ॥೨॥

ಮಹಾಬುದ್ಧಿಯೇ, ಸರ್ವಧರ್ಮಿಷ್ಠರಲ್ಲಿ ಶ್ರೇಷ್ಠನೇ, ಧರ್ಮವನ್ನು ನಿರ್ಣಯಿಸುವಲ್ಲಿ (ಅಥವಾ ತತ್ತ್ವವನ್ನು ನಿರ್ಣಯಿಸುವಲ್ಲಿ) ಪ್ರತ್ಯಕ್ಷ-ಆಗಮಗಳಲ್ಲಿ ಯಾವುದು ಕಾರಣವಾಗುತ್ತದೆ?

ಭೀಷ್ಮಃ

ನಾಸ್ಯತ್ರ ಸಂಶಯಃ ಕಶ್ಚಿದಿತಿ ಮೇ ವರ್ತತೇ ಮತಿಃ ।
ಶೃಣು ವಕ್ಷ್ಯಾಮಿ ತೇ ಪ್ರಾಜ್ಞ ಸಮ್ಯಕ್ ತ್ವಮನುಪೃಚ್ಛಸಿ ॥೩॥

ಭೀಷ್ಮ– ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲವೆಂದು ನನ್ನ ಅಭಿಪ್ರಾಯ. ಪ್ರಾಜ್ಞನೇ, ಹೇಳುವೆನು, ಕೇಳು. ನಿನ್ನ ಪ್ರಶ್ನೆಯು ಬಹಳ ಸರಿಯಾಗಿದೆ.

ಸಂಶಯಃ ಸುಗಮೋ ರಾಜನ್ ನಿರ್ಣಯಸ್ತತ್ರ ದುರ್ಗಮಃ ।
ದೃಷ್ಟಂ ಶ್ರುತಮನಂತಂ ಹಿ ಯತ್ರ ಸಂಶಯದರ್ಶನಮ್ ॥೪॥

ದೃಷ್ಟವಾದ ಮತ್ತು ಶ್ರುತವಾದ, ಸಂಶಯಕ್ಕೆ ಎಡೆಮಾಡಿಕೊಡುವಂತಹ ವಿಷಯಗಳು ಅನಂತವಾಗಿವೆ. ರಾಜನೇ, ಅವುಗಳಲ್ಲಿ ಸಂಶಯವು ಸುಲಭವಾದುದು. ನಿರ್ಣಯವನ್ನು ಪಡೆಯುವುದು ಕಷ್ಟ.

ಪ್ರತ್ಯಕ್ಷಂ ಕಾರಣಂ ದೃಷ್ಟಂ ಹೇತುಕಾಃ ಪ್ರಾಜ್ಞಮಾನಿನಃ ।
ನಾಸ್ತೀತ್ಯೇವಂ ವ್ಯವಸ್ಯಂತಿ ಸತ್ಯಂ ಸಂಶಯಮೇವ ಚ ।
ತದಯುಕ್ತಂ ವ್ಯವಸ್ಯಂತಿ ಬಾಲಾಃ ಪಂಡಿತಮಾನಿನಃ ॥೫॥

ಪ್ರತ್ಯಕ್ಷವು ಕಾರಣವೆಂದು ದೃಷ್ಟವಾಗಿದೆ. ತಮ್ಮನ್ನು ಪ್ರಾಜ್ಞರೆಂದು ತಿಳಿದುಕೊಂಡವರು ಮಾತ್ರ ಎಲ್ಲದಕ್ಕೂ ಹೇತುಗಳನ್ನು ಹುಡುಕಿ ಸತ್ಯವನ್ನೂ ಮತ್ತು ಆಗಮವನ್ನೂ ಅಲ್ಲಗಳೆಯುತ್ತಾರೆ. ಅದು ಸರಿಯಲ್ಲ. ತಮ್ಮನ್ನು ಪಂಡಿತರೆಂದು ತಿಳಿದುಕೊಳ್ಳುವ ಬಾಲಕರು ಹಾಗೆ ನಿರ್ಣಯಿಸುತ್ತಾರೆ.

ಅಥ ಚೇನ್ಮನ್ಯಸೇ ಚೈಕಂ ಕಾರಣಂ ಕಿಂ ಭವೇದಿತಿ ।
ಶಕ್ಯಂ ದೀರ್ಘೇಣ ಕಾಲೇನ ಯುಕ್ತೇನಾತಂದ್ರಿತೇನ ಚ ।
ಪ್ರಾಣಯಾತ್ರಾಮನೇಕಾಂ ಚ ಕಲ್ಪಯಾನೇನ ಭಾರತ ॥೬॥

ಎಲೈ ಭಾರತನೇ, ಈ ಜಗತ್ತಿಗೆ ಕಾರಣವು ಯಾವುದು ಆದೀತು ಎಂದು ಚಿಂತಿಸುವುದಾದರೆ ದೀರ್ಘಕಾಲದಲ್ಲಿ ಆಲಸ್ಯವಿಲ್ಲದೆ ಅನೇಕ ರೀತಿಯಲ್ಲಿ ದೇಹಯಾತ್ರೆಯನ್ನು ನಿರ್ವಾಹ ಮಾಡುತ್ತಾ ಚಿಂತಿಸಬೇಕು.

ತತ್ಪರೇಣೈವ ನಾನ್ಯೇನ ಶಕ್ಯಂ ಹ್ಯೇತತ್ ತು ಕಾರಣಮ್ ।
ಹೇತೂನಾಮಂತಮಾಸಾದ್ಯ ವಿಪುಲಂ ಜ್ಞಾನಮುತ್ತಮಮ್ ।
ಜ್ಯೋತಿಃ ಸರ್ವಸ್ಯ ಲೋಕಸ್ಯ ವಿಪುಲಂ ಪ್ರತಿಪದ್ಯತೇ ॥೭॥

ಅದರಲ್ಲಿಯೇ ನಿರತನಾದ ಪುರುಷನಿಂದ ಆ ಕಾರಣವನ್ನು ತಿಳಿಯಲು ಸಾಧ್ಯ. ಹೇತುಗಳ ಪರ್ಯವಸಾನವನ್ನು ಹೊಂದಿ ಆಗಮದಿಂದ ವಿಪುಲವಾದ, ಸರ್ವ ಲೋಕಪ್ರಕಾಶಕವಾದ ಜ್ಞಾನವನ್ನು ಹೊಂದುತ್ತಾನೆ.

ತತ್ತ್ವೇನಾಗಮನಂ ರಾಜನ್ ಹೇತ್ವಾಗಮನಂ ತಥಾ ।
ಅಗ್ರಾಹ್ಯಮನಿಬದ್ಧಂ ಚ ವಾಚಾ ಸಂಪರಿವರ್ಜಯೇತ್ ॥೮॥

ಎಲೈ ರಾಜನೇ, ತತ್ತ್ವನಿರ್ಣಯವು ಆಗಮದಿಂದ ಮತ್ತು ಅದಕ್ಕೆ ಅನುಕೂಲವಾದ ಹೇತುಗಳಿಂದ ಆಗುತ್ತದೆ. ಕೇವಲ ಹೇತುವು ಅಗ್ರಾಹ್ಯವಾದುದು. ಆಗಮ ಸಹಾಯವಿಲ್ಲದ ವಚನಗಳೂ ಸಹ ವರ್ಜನೀಯವಾದವುಗಳು.

ಯುಧಿಷ್ಠಿರಃ

ಪ್ರತ್ಯಕ್ಷಂ ಲೋಕತಃ ಸಿದ್ಧಂ ಲೋಕಾಶ್ಚಾಗಮಪೂರ್ವಕಾಃ ।
ಶಿಷ್ಟಾಚಾರೋ ಬಹುವಿಧೋ ಬ್ರೂಹಿ ತನ್ಮೇ ಪಿತಾಮಹ ॥೯॥

ಯುಧಿಷ್ಠಿರ– ಲೋಕಸಿದ್ಧವಾದ ಪ್ರತ್ಯಕ್ಷ, ಆಗಮಪೂರ್ವಕವಾದ ಲೋಕಾಚಾರಗಳು ಮತ್ತು ಶಿಷ್ಟಾಚಾರ- ಇವು ಬಹುವಿಧವಾಗಿವೆ. ಪಿತಾಮಹನೇ, ಇವುಗಳಲ್ಲಿ ಯಾವುದರಿಂದ ಧರ್ಮನಿರ್ಣಯವೆಂದು ಹೇಳು.

ಭೀಷ್ಮಃ

ಧರ್ಮಸ್ಯ ಹ್ರಿಯಮಾಣಸ್ಯ ಬಲವದ್ಭಿರ್ದುರಾತ್ಮಭಿಃ ।
ಸಂಸ್ಥಾ ಯತ್ನೈರಪಿ ಕೃತಾ ಕಾಲೇನ ಪರಿಭಿದ್ಯತೇ ॥೧೦॥

ಭೀಷ್ಮ– ಬಲಿಷ್ಠರಾದ ದುರಾತ್ಮರು ನಾಶಪಡಿಸುವ ಧರ್ಮವನ್ನು ಮಹಾತ್ಮರು ಪ್ರಯತ್ನಪೂರ್ವಕವಾಗಿ ಸ್ಥಾಪಿಸಿದರೂ ಅದು ಕಾಲಕ್ರಮದಲ್ಲಿ ಭಿನ್ನವಾಗುತ್ತದೆ.

ಅಧರ್ಮಾ ಧರ್ಮರೂಪೇಣ ತೃಣೈಃ ಕೂಪಾ ಇವಾವೃತಾಃ ।
ತತಸ್ತೈರ್ಭಿದ್ಯತೇ ವೃತ್ತಂ ಶೃಣು ಚೈವ ಯುಧಿಷ್ಠಿರ ॥೧೧॥

ಯುಧಿಷ್ಠಿರನೇ, ತೃಣಗಳಿಂದ ಮುಚ್ಚಿದ ಕೂಪದಂತೆ ಅಧರ್ಮಗಳು ಧರ್ಮ ರೂಪವನ್ನು ಧರಿಸಿ ತೋರುತ್ತವೆ. ಆಗ ನಡತೆಯು ಭಿನ್ನವಾಗುತ್ತದೆ. ಅದನ್ನು ಕೇಳು.

ಅವೃತ್ತ್ಯಾ ಯೇ ಚ ಭಿಂದಂತಿ ಶ್ರುತತ್ಯಾಗಪರಾಯಣಾಃ ।
ಧರ್ಮವಿದ್ವೇಷಿಣೋ ಮಂದಾ ಇತ್ಯುಕ್ತಾಸ್ತೇ ನ ಸಂಶಯಃ ॥೧೨॥

ಯಾರು ಜೀವನೋಪಾಯವನ್ನು ಕಾಣದೆ ಶ್ರುತಿಗಳನ್ನು ನಿಂದಿಸಿ, ಶ್ರುತಿಗಳು ಹೇಳಿದುದನ್ನು ತ್ಯಜಿಸುವುದರಲ್ಲೇ ಆಸಕ್ತರಾಗಿರುತ್ತಾರೆಯೋ ಅವರನ್ನು ಧರ್ಮವಿದ್ವೇಷಿಗಳಾದ ಮಂದರು ಎಂದು ಕರೆಯುತ್ತಾರೆ. ಇದರಲ್ಲಿ ಸಂಶಯವಿಲ್ಲ.

ಅತೃಪ್ಯಂತಸ್ತು ಸಾಧೂನಾಂ ಯ ಏವಾಗಮಬುದ್ಧಯಃ ।
ಪರಮಿತ್ಯೇವ ಸಂತುಷ್ಟಾಸ್ತಾನುಪಾಸ್ವ ಚ ಪೃಚ್ಛ ಚ ॥೧೩॥

ಆಗಮವಿಮರ್ಶೆಯಲ್ಲೇ ಬುದ್ಧಿಯನ್ನು ಹೊಂದಿದ ಯಾರು ಸಜ್ಜನರ ಉಪದೇಶಗಳಲ್ಲಿ ತೃಪ್ತಿಯನ್ನು ಹೊಂದದೆ, ಪುನಃ ಪುನಃ ಅದೇ ಶ್ರೇಷ್ಠವೆಂದು ಸಂತುಷ್ಟರಾಗಿರುತ್ತಾರೆಯೋ ಅವರನ್ನು ಸೇವಿಸು ಮತ್ತು ಪ್ರಶ್ನೆಯನ್ನು ಮಾಡು.

ಕಾಮಾರ್ಥೌ ಪೃಷ್ಠತಃ ಕೃತ್ವಾ ಲೋಭಮೋಹಾನುಸಾರಿಣೌ ।
ಧರ್ಮ ಇತ್ಯೇವ ಸಂಬುದ್ಧಾಸ್ತಾನುಪಾಸ್ವ ಚ ಪೃಚ್ಛ ಚ ॥೧೪॥

ಲೋಭ-ಮೋಹಗಳಿಂದ ಅನುಸರಿಸಲ್ಪಡುವ ಕಾಮ ಮತ್ತು ಅರ್ಥರೂಪವಾದ ಪುರುಷಾರ್ಥಗಳನ್ನು ಹಿಂದೆ ತಳ್ಳಿ ಧರ್ಮವೇ ಶ್ರೇಷ್ಠವೆಂದು ಭಾವಿಸುವವರನ್ನು ಸೇವಿಸು ಮತ್ತು ಪ್ರಶ್ನೆ ಮಾಡು.

ನ ತೇಷಾಂ ಭಿದ್ಯತೇ ವೃತ್ತಂ ಯಜ್ಞಸ್ವಾಧ್ಯಾಯಕರ್ಮಭಿಃ ।
ಆಚಾರಃ ಕಾರಣಂ ಚೈವ ಧರ್ಮಶ್ಚೈವ ತ್ರಯಂ ಪುನಃ ॥೧೫॥

ಅಂತಹವರಿಗೆ, ಯಜ್ಞ-ಸ್ವಾಧ್ಯಾಯ ಮತ್ತು ಸತ್ಕರ್ಮಗಳಲ್ಲಿ ನಿರತರಾದ ಅವರ ನಡತೆಯು ಭಿನ್ನವಾಗಿರುವುದಿಲ್ಲ. ಅವರಿಗೆ ಶಿಷ್ಟಾಚಾರ, ಆಗಮ ಮತ್ತು ಪ್ರತ್ಯಕ್ಷ ಸಿದ್ಧವಾದ ಧರ್ಮ - ಈ ಮೂರೂ ಒಂದೇ ರೀತಿ ಇರುತ್ತವೆ.

ಯುಧಿಷ್ಠಿರಃ

ಪುನರೇವೇಹ ಮೇ ಬುದ್ಧಿಃ ಸಂಶಯೇ ಪರಿಮುಹ್ಯತೇ ।
ಅಪಾರೇ ಮಾರ್ಗಮಾಣಸ್ಯ ಪರಂ ತೀರಮಪಶ್ಯತಃ ॥೧೬॥

ವೇದಾಃ ಪ್ರತ್ಯಕ್ಷಮಾಚಾರಃ ಪ್ರಮಾಣಂ ತತ್ತ್ರಯಂ ಯದಿ ।
ಪೃಥಕ್ತ್ವಂ ಲಭ್ಯತೇ ಚೈಷಾಂ ಧರ್ಮಶ್ಚೈಕಸ್ತ್ರಯಂ ಕಥಮ್ ॥೧೭॥

ಯುಧಿಷ್ಠಿರ– ದಡವಿಲ್ಲದ ಸಂಶಯಸಾಗರದಲ್ಲಿ ಆಚೆಯ ದಡವನ್ನು ಹುಡುಕುತ್ತಿರುವ ನನ್ನ ಬುದ್ಧಿಯು ಪುನಃ ಸಂಶಯವನ್ನು ಹೊಂದಿ ಮೋಹಕ್ಕೆ ಒಳಗಾಗುತ್ತದೆ. ವೇದಗಳು, ಪ್ರತ್ಯಕ್ಷ ಮತ್ತು ಶಿಷ್ಟಾಚಾರ-ಮೂರು ಪ್ರಮಾಣವಾಗುವುದಾದರೆ ಭಿನ್ನಭಿನ್ನವಾದ ಆ ಮೂರರಿಂದಲೂ ಪ್ರಾಪ್ತವಾದ ಧರ್ಮವು ಒಂದೇ ಆಗುವುದು ಹೇಗೆ?

ಭೀಷ್ಮಃ

ಧರ್ಮಸ್ಯ ಹ್ರಿಯಮಾಣಸ್ಯ ಬಲವದ್ಭಿರ್ದುರಾತ್ಮಭಿಃ ।
ಯದ್ಯೇವಂ ಮನ್ಯಸೇ ರಾಜನ್ ತ್ರಿಧಾ ಧರ್ಮವಿಚಾರಣಾ ॥೧೮॥

ಏಕ ಏವೇತಿ ಜಾನೀಹಿ ತ್ರಿಧಾ ತಸ್ಯ ಪ್ರದರ್ಶನಮ್ ।
ಪೃಥಕ್ತ್ವೇ ಚೈವ ಮೇ ಬುದ್ಧಿಸ್ತ್ರಯಾಣಾಮಪಿ ವೈ ತಥಾ ॥೧೯॥

ಭೀಷ್ಮ– ಎಲೈ ರಾಜನೇ, ದುಷ್ಟರು ನಾಶಪಡಿಸುವ ಧರ್ಮವನ್ನು ನೋಡಿ ಧರ್ಮವು ಮೂರು ವಿಧವಾಗಿದೆ ಎಂದು ನೀನು ಚಿಂತಿಸುವುದಾದರೆ ಧರ್ಮವು ಒಂದೇ ಎಂದು ತಿಳಿ. ಅದು ಮೂರು ರೂಪಗಳಿಂದ ಕಾಣುತ್ತದೆ. ನೀನು ಭಿನ್ನ ಎಂದು ಹೇಳಿದ ವಿಷಯದಲ್ಲಿ ನನ್ನ ಬುದ್ಧಿಗೆ ಹೀಗೆ ತೋರುತ್ತದೆ.

ಉಕ್ತೋ ಮಾರ್ಗಸ್ತ್ರಯಾಣಾಂ ಚ ತತ್ತಥೈವ ಸಮಾಚರ ।
ಜಿಜ್ಞಾಸಾ ತು ನ ಕರ್ತವ್ಯಾ ಧರ್ಮೇಣ ಪರತರ್ಕಿಣಾ ॥೨೦॥

ಮೂರಾಗಿ ಕಾಣುವ ಬಗೆಯನ್ನು ನಿನಗೆ ಹೇಳಿದ್ದೇನೆ. ಅದನ್ನು ಹಾಗೆಯೇ ಆಚರಿಸು. ಧರ್ಮಾಚರಣೆಯ ವಿಷಯದಲ್ಲಿ ತರ್ಕವನ್ನು ಮಾಡಿ ವಿಚಾರವನ್ನು ಮಾಡಬಾರದು.

ಸದೈವ ಭರತಶ್ರೇಷ್ಠ ಮಾ ತೇ ಭೂದತ್ರ ಸಂಶಯಃ ।
ಅಂಧೋ ಜಡ ಇವಾಶಂಕೋ ಯದ್ ಬ್ರವೀಮಿ ತದಾಚರ ॥೨೧॥

ಎಲೈ ಭರತಶ್ರೇಷ್ಠನೇ, ಧರ್ಮದ ವಿಷಯದಲ್ಲಿ ನಿನಗೆ ಯಾವಾಗಲೂ ಸಂಶಯವಿರುವುದು ಬೇಡ. ಶಂಕೆಯನ್ನು ಬಿಟ್ಟು ನಾನು ಹೇಳುವುದನ್ನು ಅಂಧರಂತೆ, ಜಡರಂತೆ ಆಚರಿಸು.

ಅಹಿಂಸಾ ಸತ್ಯಮಕ್ರೋಧೋ ದಾನಮೇತಚ್ಚತುಷ್ಟಯಮ್ ।
ಅಜಾತಶತ್ರೋ ಸೇವಸ್ವ ಧರ್ಮ ಏಷ ಸನಾತನಃ ॥೨೨॥

ಎಲೈ ಅಜಾತಶತ್ರುವೇ, ಅಹಿಂಸೆ, ಸತ್ಯ, ಅಕ್ರೋಧ, ದಾನ - ಈ ನಾಲ್ಕನ್ನು ಸೇವಿಸು. ಇದು ಸನಾತನವಾದ ಧರ್ಮ.

ಬ್ರಾಹ್ಮಣೇಷು ಚ ವೃತ್ತಿರ್ಯಾ ಪಿತೃಪೈತಾಮಹೋಚಿತಾ ।
ತಾಮನ್ವೇಹಿ ಮಹಾಬಾಹೋ ಸ್ವರ್ಗಸ್ಯೈತೇ ಹಿ ದೇಶಿಕಾಃ ॥೨೩॥

ಎಲೈ ಮಹಾಬಾಹುವೇ, ಬ್ರಾಹ್ಮಣರ ವಿಷಯದಲ್ಲಿ ಪಿತೃ-ಪಿತಾಮಹರು ಹೇಗೆ ನಡೆದುಕೊಂಡರೋ ಆ ನಡತೆಯನ್ನು ನೀನು ಅನುಸರಿಸು. ಮಹಾಬಾಹುವೇ, ಅವರೇ ಸ್ವರ್ಗವನ್ನು ನೀಡುವವರು.

ಪ್ರಮಾಣಮಪ್ರಮಾಣಂ ವೈ ಯಃ ಕುರ್ಯಾದಬುಧೋ ನರಃ ।
ನ ಸ ಪ್ರಮಾಣತಾಮಹೋ ವಿವಾದಜನನೋ ಹಿ ಸಃ ॥೨೪॥

ಯಾವ ಅವಿವೇಕಿಯಾದ ಮನುಷ್ಯನು ಪ್ರಮಾಣವನ್ನು ಅಪ್ರಮಾಣವೆಂದು ಹೇಳುತ್ತಾನೆಯೋ ಅವನು ಪ್ರಾಮಾಣಿಕನಲ್ಲ. ಅವನು ವಿವಾದವನ್ನು ಸೃಷ್ಟಿ ಮಾಡುವವನು.

ಬ್ರಾಹ್ಮಣಾನೇವ ಸೇವಸ್ವ ಸತ್ಕೃತ್ಯ ಬಹುಮನ್ಯ ಚ ।
ಏತೇಷ್ವೇವ ತ್ವಿಮೇ ಲೋಕಾಃ ಕೃತಾ ಇತಿ ನಿಬೋಧ ತಾನ್ ॥೨೫॥

ಬ್ರಾಹ್ಮಣರನ್ನೇ ಸತ್ಕರಿಸಿ ಬಹುಮಾನವನ್ನು ಮಾಡಿ ಸೇವಿಸು. ಈ ಎಲ್ಲ ಲೋಕಗಳು ಅವರನ್ನೇ ಅವಲಂಬಿಸಿವೆ ಎಂದು ಅವರನ್ನು ತಿಳಿಯುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಧರ್ಮಾಧರ್ಮವಿಚಾರೋ ನಾಮ
ಪಂಚಾಶದುತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಐವತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಐವತ್ತೊಂದನೆಯ ಅಧ್ಯಾಯ

ಧರ್ಮಿಷ್ಠರಿಗೆ ಮತ್ತು ಅಧರ್ಮಿಷ್ಠರಿಗೆ ಆಗುವ ಗತಿಯ ಕಥನ.

ಯುಧಿಷ್ಠಿರಃ

ಯೇ ಚ ಧರ್ಮಮಸೂಯಂತಿ ಯೇ ಚೈನಂ ಪರ್ಯುಪಾಸತೇ ।
ಬ್ರವೀತು ಭಗವಾನೇತತ್ ಕ್ವ ತೇ ಗಚ್ಛಂತಿ ತಾದೃಶಾಃ ॥೧॥

ಯುಧಿಷ್ಠಿರ– ಯಾರು ಧರ್ಮವನ್ನು ದ್ವೇಷಿಸುತ್ತಾರೆಯೋ ಮತ್ತು ಯಾರು ಧರ್ಮವನ್ನು ಪೂಜಿಸುತ್ತಾರೆಯೋ ಅಂತಹವರು ಎಲ್ಲಿಗೆ ಹೋಗುತ್ತಾರೆ ಎಂದು ಪೂಜ್ಯನಾದ ನೀನು ಹೇಳಬೇಕು.

ಭೀಷ್ಮಃ

ರಜಸಾ ತಮಸಾ ಚೈವ ಸಮವಸ್ತೀರ್ಣಚೇತಸಃ ।
ನರಕಂ ಪ್ರತಿಪದ್ಯಂತೇ ಧರ್ಮವಿದ್ವೇಷಿಣೋ ನರಾಃ ॥೨॥

ಭೀಷ್ಮ– ಧರ್ಮದ್ವೇಷಿಗಳಾದ ಜನರು ರಜೋಗುಣ ಮತ್ತು ತಮೋಗುಣದಿಂದ ತುಂಬಿದ ಮನಸ್ಸುಳ್ಳವರಾಗಿ ನರಕಕ್ಕೆ ಹೋಗುತ್ತಾರೆ.

ಯೇ ತು ಧರ್ಮಂ ಮಹಾರಾಜ ಸತತಂ ಪರ್ಯುಪಾಸತೇ ।
ಸತ್ಯಾರ್ಜವಪರಾಃ ಸಂತಸ್ತೇ ವೈ ಸ್ವರ್ಗಭುಜೋ ನರಾಃ ॥೩॥

ಎಲೈ ಮಹಾರಾಜನೇ, ಯಾರು ಸತ್ಯ ಮತ್ತು ಆರ್ಜವಗಳಲ್ಲಿ ನಿರತರಾಗಿ ಸತತವಾಗಿ ಧರ್ಮವನ್ನು ಉಪಾಸನೆ ಮಾಡುತ್ತಾರೆಯೋ ಅಂತಹ ಸಜ್ಜನರು ಸ್ವರ್ಗ ಭೋಗವನ್ನು ಅನುಭವಿಸುತ್ತಾರೆ.

ಧರ್ಮ ಏವ ರತಿಸ್ತೇಷಾಮಾಚಾರ್ಯೋಪಾಸನಾದ್ ಭವೇತ್ ।
ದೇವಲೋಕಂ ಪ್ರಪದ್ಯಂತೇ ಯೇ ಧರ್ಮಂ ಪರ್ಯುಪಾಸತೇ ॥೪॥

ಗುರುಗಳ ಉಪಾಸನೆಯಿಂದ ಅವರಿಗೆ ಧರ್ಮದಲ್ಲೇ ರತಿಯುಂಟಾಗುತ್ತದೆ. ಧರ್ಮವನ್ನು ಚೆನ್ನಾಗಿ ಸೇವಿಸುವವರು ದೇವಲೋಕವನ್ನು ಹೊಂದುತ್ತಾರೆ.

ಮನುಷ್ಯಾ ಯದಿ ವಾ ದೇವಾಃ ಶರೀರಮುಪತಾಪ್ಯ ವೈ ।
ಧರ್ಮಿಣಃ ಸುಖಮೇಧಂತೇ ಲೋಭದ್ವೇಷವಿವರ್ಜಿತಾಃ ॥೫॥

ದೇವತೆಗಳಾಗಲೀ, ಮನುಷ್ಯರಾಗಲೀ ಲೋಭ-ದ್ವೇಷಗಳನ್ನು ಬಿಟ್ಟು ಶರೀರವನ್ನು ದಂಡಿಸಿ ಧರ್ಮಾಚರಣೆಯನ್ನು ಮಾಡಿದರೆ ಸುಖವನ್ನು ಹೊಂದುತ್ತಾರೆ.

ಪ್ರಥಮಂ ಬ್ರಹ್ಮಣಃ ಪುತ್ರಂ ಧರ್ಮಮಾಹುರ್ಮನೀಷಿಣಃ ।
ಧರ್ಮಿಣಃ ಪರ್ಯುಪಾಸಂತೇ ಫಲಂ ಪಕ್ವಮಿವಾಶಿನಃ ॥೬॥

ಜ್ಞಾನಿಗಳು ಧರ್ಮವನ್ನು ಬ್ರಹ್ಮನ ಪ್ರಥಮ ಪುತ್ರನೆಂದು ಹೇಳುತ್ತಾರೆ. ಹಸಿದವರು ಪಕ್ವಫಲವನ್ನು ಅಪೇಕ್ಷಿಸುವಂತೆ ಧರ್ಮಿಷ್ಠರು ಧರ್ಮವನ್ನು ಸೇವಿಸುತ್ತಾರೆ.

ಯುಧಿಷ್ಠಿರಃ

ಅಸತಾಂ ಕೀದೃಶಂ ರೂಪಂ ಸಾಧವಃ ಕಿಂ ಚ ಕುರ್ವತೇ ।
ಬ್ರವೀತು ಮೇ ಭವಾನೇತತ್ ಸಂತೋಽಸಂತಶ್ಚ ಕೀದೃಶಾಃ ॥೭॥

ಯುಧಿಷ್ಠಿರ– ದುಷ್ಟರ ರೂಪವು ಹೇಗಿರುತ್ತದೆ? ಸಜ್ಜನರು ಏನು ಮಾಡುತ್ತಾರೆ? ಸಜ್ಜನರು, ಅಸಜ್ಜನರು ಹೇಗಿರುತ್ತಾರೆ ಎಂದು ನೀವು ನನಗೆ ಹೇಳಬೇಕು.

ಭೀಷ್ಮಃ

ದುರಾಚಾರಾಃ ದುರಾಧರ್ಷಾ ದುರ್ಮುಖಾಶ್ಚಾಪ್ಯಸಾಧವಃ ।
ಸಾಧವಃ ಶೀಲಸಂಪನ್ನಾಃ ಶಿಷ್ಟಾಚಾರಸ್ಯ ಲಕ್ಷಣಮ್ ॥೮॥

ಭೀಷ್ಮ– ಅಸಜ್ಜನರು ದುರಾಚಾರಿಗಳೂ, ಮಾತಿಗೆ ಬಗ್ಗದವರೂ, ದುರ್ಮುಖರೂ ಆಗಿರುತ್ತಾರೆ. ಸಾಧುಗಳು ಶೀಲಸಂಪನ್ನರಾಗಿರುತ್ತಾರೆ. ಶಿಷ್ಟಾಚಾರವು ಅವರ ಲಕ್ಷಣ.

ರಾಜಮಾರ್ಗೇ ಗವಾಂ ಮಧ್ಯೇ ಗೋಷ್ಠಮಧ್ಯೇ ಚ ಧರ್ಮಿಣಃ ।
ನೋಪಸೇವಂತಿ ರಾಜೇಂದ್ರ ಸರ್ಗಂ ಮೂತ್ರಪುರೀಷಯೋಃ ॥೯॥

ಎಲೈ ರಾಜೇಂದ್ರನೇ, ರಾಜಮಾರ್ಗದಲ್ಲಿ, ಗೋವುಗಳ ಮಧ್ಯದಲ್ಲಿ ಅಥವಾ ಕೊಟ್ಟಿಗೆಯಲ್ಲಿ ಧರ್ಮಿಷ್ಠರಾದವರು ಮಲ-ಮೂತ್ರ ವಿಸರ್ಜನೆಯನ್ನು ಮಾಡುವುದಿಲ್ಲ.

ಪಂಚಾನಾಮಶನಂ ದತ್ತ್ವಾ ಶೇಷಮಶ್ನಂತಿ ಸಾಧವಃ ।
ನ ಜಲ್ಪಂತಿ ಚ ಭುಂಜಾನಾ ನ ನಿದ್ರಾಂತ್ಯಾರ್ದ್ರಪಾಣಯಃ ॥೧೦॥

ಸಜ್ಜನರು ದೇವ, ಪಿತೃ, ಭೂತ, ಅತಿಥಿ, ಪರಿವಾರಕ್ಕೆ ಅನ್ನವನ್ನು ನೀಡಿ ಉಳಿದುದನ್ನು ಸೇವಿಸುತ್ತಾರೆ. ಭೋಜನವನ್ನು ಮಾಡುವಾಗ ಮಾತನಾಡುವುದಿಲ್ಲ. ಒದ್ದೆಯಾದ ಪಾಣಿ-ಪಾದಗಳಿಂದ ನಿದ್ರೆಯನ್ನು ಮಾಡುವುದಿಲ್ಲ.

ಚಿತ್ರಭಾನುಮನಡ್ವಾಹಂ ದೇವಂ ಗೋಷ್ಠಂ ಚತುಷ್ಪಥಮ್ ।
ಬ್ರಾಹ್ಮಣಂ ಧಾರ್ಮಿಕಂ ಚೈತ್ಯಂ ತೇ ಕುರ್ವಂತಿ ಪ್ರದಕ್ಷಿಣಮ್ ॥೧೧॥

ಅಗ್ನಿ, ಎತ್ತು, ದೇವಪ್ರತಿಮೆ, ಕೊಟ್ಟಿಗೆ, ಚತುಷ್ಪಥ, ಧಾರ್ಮಿಕನಾದ ಬ್ರಾಹ್ಮಣ, ಪೂಜ್ಯವಾದ ಅಶ್ವತ್ಥಾದಿ ವೃಕ್ಷ - ಇವುಗಳ ಪ್ರದಕ್ಷಿಣೆಯನ್ನು ಮಾಡುತ್ತಾರೆ.

ವೃದ್ಧಾನಾಂ ಭಾರತಪ್ತಾನಾಂ ಸ್ತ್ರೀಣಾಂ ಬಾಲಾತುರಸ್ಯ ಚ ।
ಬ್ರಾಹ್ಮಣಾನಾಂ ಗವಾಂ ರಾಜ್ಞಾಂ ಪಂಥಾನಂ ದದತೇ ಚ ತೇ ॥೧೨॥

ವೃದ್ಧರಿಗೆ, ಭಾರವನ್ನು ಹೊತ್ತವರಿಗೆ, ಸ್ತ್ರೀಯರಿಗೆ, ಬಾಲಕರಿಗೆ, ರೋಗಿಗಳಿಗೆ, ಬ್ರಾಹ್ಮಣರಿಗೆ, ಗೋವುಗಳಿಗೆ ಮತ್ತು ರಾಜರಿಗೆ ಮಾರ್ಗವನ್ನು ಬಿಟ್ಟುಕೊಡುತ್ತಾರೆ.

ಅತಿಥೀನಾಂ ಚ ಸರ್ವೇಷಾಂ ಪ್ರೇಷ್ಯಾಣಾಂ ಸ್ವಜನಸ್ಯ ಚ ।
ತಥಾ ಶರಣಕಾಮಾನಾಂ ಗೋಪ್ತಾ ಸ್ಯಾತ್ ಸ್ವಾಗತಪ್ರದಃ ॥೧೩॥

ಎಲ್ಲ ಸೇವಕರನ್ನೂ, ಸ್ವಜನರನ್ನೂ, ಶರಣಾಗತರಾದವರನ್ನೂ ರಕ್ಷಿಸುತ್ತಾರೆ. ಅತಿಥಿಗಳನ್ನು ಸ್ವಾಗತಿಸುತ್ತಾರೆ.

ಸಾಯಂ ಪ್ರಾತರ್ಮನುಷ್ಯಾಣಾಮಶನಂ ದೇವನಿರ್ಮಿತಮ್ ।
ನಾಂತರಾ ಭೋಜನಂ ದೃಷ್ಟಮುಪವಾಸವಿಧಿರ್ಹಿ ಸಃ ॥೧೪॥

ಸಾಯಂಕಾಲ ಮತ್ತು ಪ್ರಾತಃಕಾಲದಲ್ಲಿ ಮನುಷ್ಯರಿಗೆ ಭೋಜನವು ದೇವತೆಗಳಿಂದ ನಿರ್ಮಿತವಾಗಿದೆ. ಮಧ್ಯದಲ್ಲಿ ಏನನ್ನೂ ತಿನ್ನಬಾರದು. ಅದು ಉಪವಾಸವಿಧಿಯಾಗುತ್ತದೆ.

ಹೋಮಕಾಲೇ ಯಥಾ ವಹ್ನಿಃ ಕಾಲಮೇವ ಪ್ರತೀಕ್ಷತೇ ।
ಋತುಕಾಲೇ ತಥಾ ನಾರೀ ಋತುಮೇವ ಪ್ರತೀಕ್ಷತೇ ।
ನ ಚಾನ್ಯಾಂ ಗಚ್ಛತೇ ಯಸ್ತು ಬ್ರಹ್ಮಚರ್ಯಂ ಹಿ ತತ್ಸ್ಮೃತಮ್ ॥೧೫॥

ಹೋಮಕಾಲದಲ್ಲಿ ವಹ್ನಿಯು ಹೋಮಕಾಲವನ್ನೇ ನಿರೀಕ್ಷಿಸುವಂತೆ ಋತುಕಾಲದಲ್ಲಿ ನಾರಿಯು ಋತುವನ್ನೇ ನಿರೀಕ್ಷಿಸುತ್ತಾಳೆ. ಆ ಕಾಲದಲ್ಲಿ ಬೇರೆಯವರ ಬಳಿಗೆ ಹೋಗದಿದ್ದರೆ ಅದಕ್ಕೆ ಬ್ರಹ್ಮಚರ್ಯವೆಂದು ಹೇಳುತ್ತಾರೆ.

ಅಮೃತಂ ಬ್ರಾಹ್ಮಣಾ ಗಾವ ಇತ್ಯೇತತ್ ತ್ರಯಮೇಕತಃ ।
ತಸ್ಮಾದ್ ಗೋಬ್ರಾಹ್ಮಣಂ ನಿತ್ಯಮರ್ಚಯೇತ ಯಥಾವಿಧಿ ॥೧೬॥

ಅಮೃತ, ಬ್ರಾಹ್ಮಣರು ಮತ್ತು ಗೋವುಗಳು- ಇವೆಲ್ಲವೂ ಒಂದೇ ಗುಂಪಿಗೆ ಸೇರಿದವುಗಳು. ಆದ್ದರಿಂದ ಗೋವುಗಳನ್ನು ಮತ್ತು ಬ್ರಾಹ್ಮಣರನ್ನು ನಿತ್ಯವೂ ವಿಧಿಗೆ ಅನುಗುಣವಾಗಿ ರಕ್ಷಿಸಬೇಕು.

ಯಜುಷಾ ಸಂಸ್ಕೃತಂ ಮಾಂಸಮುಪಭುಂಜನ್ ನ ದುಷ್ಯತಿ ।
ಪೃಷ್ಠಮಾಂಸಂ ವೃಥಾಮಾಂಸಂ ಪುತ್ರಮಾಂಸಂ ಚ ತತ್ಸಮಮ್ ॥೧೭॥

ಮಂತ್ರಗಳಿಂದ ಯಜುರ್ವೇದದ ಸಂಸ್ಕೃತವಾದ (ಯಜ್ಞಶೇಷವಾದ) ಮಾಂಸಗಳನ್ನು ಭುಂಜಿಸುವವನು ದೋಷಿಯಾಗುವುದಿಲ್ಲ. ಪೃಷ್ಠಮಾಂಸ, ವ್ಯರ್ಥವಾದ ಮಾಂಸಗಳು ಪುತ್ರಮಾಂಸಕ್ಕೆ ಸಮಾನವಾದುದು.

ಸ್ವದೇಶೇ ಪರದೇಶೇ ವಾಪ್ಯತಿಥಿಂ ನೋಪವಾಸಯೇತ್ ।
ಕರ್ಮ ವೈ ಸಫಲಂ ಕೃತ್ವಾ ಗುರೂಣಾಮಭಿವಾದಯೇತ್ ॥೧೮॥

ಸ್ವದೇಶದಲ್ಲಾಗಲೀ, ಪರದೇಶದಲ್ಲಾಗಲೀ ಅತಿಥಿಯು ಉಪವಾಸವನ್ನು ಮಾಡುವಂತೆ ಮಾಡಬಾರದು. ಕರ್ಮವನ್ನು ಪೂರ್ಣವಾಗಿ ಮುಗಿಸಿ ಗುರುಗಳಿಗೆ ನಮಸ್ಕಾರವನ್ನು ಮಾಡಿ ಅದನ್ನು ನಿವೇದಿಸಬೇಕು.

ಗುರುಭ್ಯ ಆಸನಂ ದೇಯಮಭಿವಾದ್ಯಾಭಿಪೂಜ್ಯ ಚ ।
ಗುರೂನಭ್ಯರ್ಚ್ಯ ವರ್ಧಂತೇ ಆಯುಷಾ ಯಶಸಾ ಶ್ರಿಯಾ ॥೧೯॥

ಗುರುಗಳಿಗೆ ನಮಸ್ಕಾರವನ್ನು ಮಾಡಿ ಸತ್ಕರಿಸಿ ಆಸನವನ್ನು ಕೊಡಬೇಕು. ಗುರುಗಳ ಪೂಜೆಯಿಂದ ಆಯುಸ್ಸು, ಕೀರ್ತಿ ಮತ್ತು ಸಂಪತ್ತು ಹೆಚ್ಚಾಗುತ್ತವೆ.

ವೃದ್ಧಾನ್ ನಾತಿವದೇಜ್ಜಾತು ನ ಚ ಸಂಪ್ರೇಷಯೇದಪಿ ।
ನಾಸೀನಃ ಸ್ಯಾತ್ ಸ್ಥಿತೇಷ್ವೇವಮಾಯುರಸ್ಯ ನ ರಿಷ್ಯತೇ ॥೨೦॥

ವೃದ್ಧರನ್ನು ಮೀರಿ ಮಾತನಾಡಬಾರದು. ಅವರನ್ನು ತನ್ನ ಯಾವ ಕಾರ್ಯದಲ್ಲಿಯೂ ತೊಡಗಿಸಬಾರದು. ಅವರು ನಿಂತಿರುವಾಗ ತಾನು ಕುಳಿತುಕೊಳ್ಳಬಾರದು. ಹಾಗೆ ಮಾಡಿದರೆ ಅವನ ಆಯುಸ್ಸು ಕ್ಷೀಣವಾಗುತ್ತದೆ.

ನ ನಗ್ನಾಮೀಕ್ಷತೇ ನಾರೀಂ ನ ವಿದ್ವಾನ್ ಪುರುಷಾನಪಿ ।
ಮೈಥುನಂ ಸತತಂ ಗುಪ್ತಮಾಹಾರಂ ಚ ಸಮಾಚರೇತ್ ॥೨೧॥

ವಿದ್ವಾಂಸನಾದವನು ನಗ್ನಳಾದ ಸ್ತ್ರೀಯನ್ನಾಗಲೀ, ನಗ್ನನಾದ ಪುರುಷನನ್ನಾಗಲೀ ನೋಡು (ನೋಡಬಾರದು)ವುದಿಲ್ಲ. ಮೈಥುನ ಮತ್ತು ಭೋಜನಗಳನ್ನು ರಹಸ್ಯವಾಗಿಯೇ ಮಾಡಬೇಕು.

ತೀರ್ಥಾನಾಂ ಗುರವಸ್ತೀರ್ಥಂ ಶುಚೀನಾಂ ಹೃದಯಂ ಶುಚಿ ।
ದರ್ಶನಾನಾಂ ಪರಂ ಜ್ಞಾನಂ ಸಂತೋಷಃ ಪರಮಂ ಸುಖಮ್ ॥೨೨॥

ಗುರುಗಳು ತೀರ್ಥಗಳಿಗೆ ತೀರ್ಥರಾದವರು. ಸಜ್ಜನರ ಹೃದಯವು ಶುಚಿಯಾದುದು. ಇಂದ್ರಿಯಜನ್ಯವಾದುದರಲ್ಲಿ ಜ್ಞಾನವು ಶ್ರೇಷ್ಠವಾದುದು. ಸಂತೋಷವು ಪರಮ ಸುಖ.

ಸಾಯಂ ಪ್ರಾತಶ್ಚ ವೃದ್ಧಾನಾಂ ಶೃಣುಯಾತ್ ಪುಷ್ಕಳಾ ಗಿರಃ ।
ಶ್ರುತಮಾಪ್ನೋತಿ ಹಿ ನರಃ ಸತತಂ ವೃದ್ಧಸೇವಯಾ ॥೨೩॥

ಸಾಯಂಕಾಲದಲ್ಲಿ ಮತ್ತು ಪ್ರಾತಃಕಾಲದಲ್ಲಿ ಹಿರಿಯರ ಮಾತುಗಳನ್ನು ಬಹಳವಾಗಿ ಕೇಳಬೇಕು. ಹೀಗೆ ವೃದ್ಧರನ್ನು ಸೇವಿಸುವುದರಿಂದ ಮನುಷ್ಯನು ಜ್ಞಾನವನ್ನು ಪಡೆಯುತ್ತಾನೆ.

ಸ್ವಾಧ್ಯಾಯೇ ಭೋಜನೇ ಚೈವ ದಕ್ಷಿಣಂ ಪಾಣಿಮುದ್ಧರೇತ್ ।
ಯಚ್ಛೇದ್ವಾಙ್ಮನಸೀ ನಿತ್ಯಮಿಂದ್ರಿಯಾಣಿ ತಥೈವ ಚ ॥೨೪॥

ಸ್ವಾಧ್ಯಾಯದಲ್ಲಿ ಮತ್ತು ಭೋಜನದಲ್ಲಿ ಬಲಗೈಯನ್ನು ಎತ್ತಬೇಕು. ನಿತ್ಯವೂ ಮಾತನ್ನು, ಮನಸ್ಸನ್ನು, ಇಂದ್ರಿಯಗಳನ್ನು ನಿಯಂತ್ರಿಸಬೇಕು.

ಸಂಸ್ಕೃತಂ ಪಾಯಸಂ ನಿತ್ಯಂ ಯವಾಗೂಂ ಕೃಸರಂ ಹವಿಃ ।
ಅಷ್ಟಕಾಃ ಪಿತೃದೈವತ್ಯಾ ವೃದ್ಧಾನಾಮಭಿಪೂಜನಮ್ ॥೨೫॥

ಶ್ಮಶ್ರುಕರ್ಮಣಿ ಮಂಗಲ್ಯಂ ಕ್ಷುತಾನಾಮಭಿನಂದನಮ್ ।
ವ್ಯಾಧಿತಾನಾಂ ಚ ಸರ್ವೇಷಾಮಾಯುಷಃ ಪ್ರತಿನಂದನಮ್ ॥೨೬॥

ಸಂಸ್ಕೃತವಾದ ಪಾಯಸ, ಗಂಜಿ, ಯವಾನ್ನ, ಹವಿಸ್ಸು, ಪಿತೃದೈವತವಾದ ಅಷ್ಟಕ ಶ್ರಾದ್ಧಗಳು, ವೃದ್ಧರ ಪೂಜೆ, ಶ್ಮಶ್ರುಕರ್ಮದಲ್ಲಿ ಮಾಂಗಲ್ಯ, ಸೀನಿದವರಿಗೆ ಆಶೀರ್ವಾದವನ್ನು ಮಾಡುವುದು, ರೋಗಗ್ರಸ್ತರಿಗೆ ಹಿತವನ್ನು ಬಯಸುವುದು, ಎಲ್ಲರಿಗೂ ಆಯುರ್ವೃದ್ಧಿಯನ್ನು ಬಯಸುವುದು - ಇವು ಎಲ್ಲರಿಗೂ ಆಯುಸ್ಸನ್ನು ಹೆಚ್ಚಿಸುತ್ತವೆ.

ನ ಜಾತು ತ್ವಮಿತಿ ಬ್ರೂಯಾದಾಪನ್ನೋಽಪಿ ಮಹತ್ತರಮ್ ।
ಅಹಂಕಾರೋ ವಧೋ ವಾಪಿ ವಿದ್ವತ್ಸು ನ ವಿಶಿಷ್ಯತೇ ।
ಅವರಾಣಾಂ ಸಮಾನಾನಾಂ ಶಿಷ್ಯಾಣಾಂ ಚ ಸಮಾಚರೇತ್ ॥೨೭॥

ದೊಡ್ಡ ಆಪತ್ತಿಗೆ ಸಿಕ್ಕಿದರೂ ಹಿರಿಯರನ್ನು ನೀನು ಎಂದು ಸಂಬೋಧಿಸಬಾರದು. ಜ್ಞಾನಿಗಳ ಎದುರಿಗೆ ತೋರಿಸುವ ಅಹಂಕಾರವು ಅವರ ವಧೆಗಿಂತ ಭಿನ್ನವಲ್ಲ. ತನಗಿಂತ ಅಧಮರನ್ನು, ತನ್ನ ಸಮಾನರನ್ನು ಮತ್ತು ಶಿಷ್ಯರನ್ನು ಚೆನ್ನಾಗಿ ನೋಡಿಕೊಳ್ಳಬೇಕು.

ಪಾಪಮಾಚಕ್ಷತೇ ನಿತ್ಯಂ ಹೃದಯಂ ಪಾಪಕರ್ಮಿಣಾಮ್ ।
ಜ್ಞಾನಪೂರ್ವಂ ವಿನಶ್ಯಂತಿ ಗೂಹಮಾನಾ ಮಹಾಜನೇ ॥೨೮॥

ಪಾಪಕರ್ಮವನ್ನು ಮಾಡುವವರ ಹೃದಯವು ಯಾವಾಗಲೂ ಪಾಪವನ್ನೇ ಹೇಳುತ್ತದೆ. ಮಹಾಜನರ ಎದುರಿನಲ್ಲಿ ಅದನ್ನು ಮುಚ್ಚಿಡುವವರು ಅವರ ಜ್ಞಾನದ ಜೊತೆಯಲ್ಲೇ ನಾಶವನ್ನು ಹೊಂದುತ್ತಾರೆ.

ಜ್ಞಾನಪೂರ್ವಂ ಕೃತಂ ಕರ್ಮ ಚ್ಛಾದಯಂತೇ ಹ್ಯಸಾಧವಃ ।
ನ ಮಾಂ ಮನುಷ್ಯಾಃ ಪಶ್ಯಂತಿ ನ ಮಾಂ ಪಶ್ಯಂತಿ ದೇವತಾಃ ।
ಪಾಪೇನಾಭಿಹತಃ ಪಾಪಃ ತಥಾ ಸದ್ಯಃ ಪ್ರಣಶ್ಯತಿ ॥೨೯॥

ಅಸಜ್ಜನರು ನನ್ನನ್ನು ಮನುಷ್ಯರು ನೋಡುತ್ತಿಲ್ಲ, ದೇವತೆಗಳೂ ನೋಡುತ್ತಿಲ್ಲ ಎಂದು ತಿಳಿದು ಬುದ್ಧಿಪೂರ್ವಕವಾಗಿ ದುಷ್ಕರ್ಮವನ್ನು ಮಾಡಿ, ಅದನ್ನು

ಮುಚ್ಚಿಡುತ್ತಾರೆ. ಅಂತಹವರು ಪಾಪದ ಪ್ರಹಾರಕ್ಕೆ ಸಿಲುಕಿ ತಕ್ಷಣದಲ್ಲೇ ನಾಶವನ್ನು ಹೊಂದುತ್ತಾರೆ.

ಯಥಾ ವಾರ್ಧುಷಿಕೋ ವೃದ್ಧಿಂ ದೇಹಭೇದೇ ಪ್ರತೀಕ್ಷತೇ ।
ಧರ್ಮೇಣಾಪಿಹಿತಂ ಪಾಪಂ ಧರ್ಮಮೇವಾಭಿವರ್ಧಯೇತ್ ॥೩೦॥

ಬಡ್ಡಿಯಿಂದ ಜೀವಿಸುವ ಮನುಷ್ಯನು ದೇಹಾಂತರದಲ್ಲಿಯೂ ಬಡ್ಡಿಯನ್ನೇ ನಿರೀಕ್ಷಿಸುವಂತೆ ಪಾಪವು ಧರ್ಮಾಚರಣೆಯಿಂದ ನಾಶಮಾಡಲ್ಪಟ್ಟರೆ ಆ ಧರ್ಮಾಚರಣೆಯು ಧರ್ಮಾಚರಣೆಯನ್ನೇ ಹೆಚ್ಚಿಸುತ್ತದೆ.

ಯಥಾ ಲವಣಮಂಭೋಭಿರಾಪ್ಲುತಂ ಪ್ರವಿಲೀಯತೇ ।
ಪ್ರಾಯಶ್ಚಿತ್ತಹತಂ ಪಾಪಂ ತಥಾ ಸದ್ಯಃ ಪ್ರಣಶ್ಯತಿ ॥೩೧॥

ನೀರಿನಲ್ಲಿ ಹಾಕಿದ ಉಪ್ಪು ಕರಗಿ ಹೋಗುವಂತೆ ಪ್ರಾಯಶ್ಚಿತ್ತದಿಂದ ಹತವಾದ ಪಾಪವು ತಕ್ಷಣದಲ್ಲಿಯೇ ನಾಶವನ್ನು ಹೊಂದುತ್ತದೆ.

ತಸ್ಮಾತ್ ಪಾಪಂ ನ ಗೂಹೇತ ಗೂಹಮಾನಂ ವಿವರ್ಧತೇ ।
ಕೃತ್ವಾ ತು ಸಾಧುಷ್ವಾಖ್ಯೇಯಂ ತೇ ತತ್‌ಪ್ರಶಮಯಂತ್ಯುತ ॥೩೨॥

ಆದ್ದರಿಂದ ಪಾಪವನ್ನು ಮುಚ್ಚಿಡಬಾರದು. ಮುಚ್ಚಿದಷ್ಟೂ ಅದು ಹೆಚ್ಚಾಗುತ್ತದೆ. ಪಾಪವನ್ನು ಮಾಡಿದರೆ ಸಜ್ಜನರಿಗೆ ಹೇಳಬೇಕು. ಸಜ್ಜನರು ಆ ಪಾಪವನ್ನು ಪರಿಹರಿಸುತ್ತಾರೆ.

ಆಶಯಾ ಸಂಚಿತಂ ದ್ರವ್ಯಂ ಯತ್ ಕಾಲೇ ನೋಪಭುಜ್ಯತೇ ।
ಅನ್ಯೇ ಚೈತತ್ ಪ್ರಪದ್ಯಂತೇ ವಿಯೋಗೇ ತಸ್ಯ ದೇಹಿನಃ ॥೩೩॥

ಆಸೆಯಿಂದ ಕೂಡಿಟ್ಟ ಹಣವನ್ನು ಯೋಗ್ಯವಾದ ಕಾಲದಲ್ಲಿ ಭೋಗಿಸದಿದ್ದರೆ ಅವನು ಮರಣವನ್ನು ಹೊಂದಿದ ಮೇಲೆ ಉಳಿದವರು ಅದನ್ನು ಭೋಗಿಸುತ್ತಾರೆ.

ಮಾನಸಂ ಸರ್ವಭೂತಾನಾಂ ಧರ್ಮಮಾಹುರ್ಮನೀಷಿಣಃ ।
ತಸ್ಮಾತ್ ಸರ್ವಾಣಿ ಭೂತಾನಿ ಧರ್ಮಮೇವ ಸಮಾಸತೇ ॥೩೪॥

ಎಲ್ಲ ಪ್ರಾಣಿಗಳ ಮನಸ್ಸೂ ಧರ್ಮರೂಪವಾದುದೆಂದು ಜ್ಞಾನಿಗಳು ಹೇಳುತ್ತಾರೆ. ಆದ್ದರಿಂದ ಎಲ್ಲ ಪ್ರಾಣಿಗಳೂ ಧರ್ಮವನ್ನೇ ಆಶ್ರಯಿಸುತ್ತವೆ.

ಏಕ ಏವ ಚರೇದ್ ಧರ್ಮಂ ನ ಧರ್ಮಧ್ವಜಿಕೋ ಭವೇತ್ ।
ಧರ್ಮವಾಣಿಜಕಾ ಹ್ಯೇತೇ ಯೇ ಧರ್ಮಮುಪಭುಂಜತೇ ॥೩೫॥

ಧರ್ಮವನ್ನು ಒಬ್ಬನೇ ಆಚರಿಸಬೇಕು. ತೋರಿಕೆಗಾಗಿ ಧರ್ಮವನ್ನು ಆಚರಿಸಬಾರದು. ಧರ್ಮದಿಂದ ಜೀವಿಸುವವರು ಧರ್ಮವನ್ನು ವ್ಯಾಪಾರ ಮಾಡುವವರು ಎಂದು ಹೇಳಲ್ಪಡುತ್ತಾರೆ.

ಸರ್ವಥೈವ ನಡಂಭೇನ ಸೇವೇತಾಮಾಯಯಾ ಗುರೂನ್ ।
ನಿಧಿಂ ನಿದಧ್ಯಾತ್ ಪಾರತ್ರ್ಯಂ ಯಾತ್ಯಾರ್ಥಂ ದಾನಶೇಷಿತಮ್ ॥೩೬॥

ಕಪಟವಿಲ್ಲದೆ, ಡಂಭವಿಲ್ಲದೆ ಸರ್ವರೀತಿಯಿಂದಲೂ ಗುರುಗಳನ್ನು ಸೇವಿಸಬೇಕು. ದಾನವನ್ನು ಮಾಡಿ ಉಳಿದ ಹಣದಿಂದ ಜೀವನವನ್ನು ಮಾಡುವವನು ಪರಲೋಕಕ್ಕಾಗಿ ನಿಧಿಯನ್ನು ಸ್ಥಾಪಿಸಿಕೊಳ್ಳುತ್ತಾನೆ (ಲಕ್ಷಾಲಂಕಾರ).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಧರ್ಮಸ್ವರೂಪವಿಚಾರಕಥನಂ ನಾಮ ಏಕಪಂಚಾಶದುತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಐವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಐವತ್ತೆರಡನೆಯ ಅಧ್ಯಾಯ

ಅದೃಷ್ಟದ ಪ್ರಾಬಲ್ಯಕಥನ.

ಯುಧಿಷ್ಠಿರಃ

ನಾಭಾಗಧೇಯಃ ಪ್ರಾಪ್ನೋತಿ ಧನಂ ಸುಬಲವಾನಪಿ ।
ಭಾಗಧೇಯಾನ್ವಿತಸ್ತ್ವರ್ಥಾನ್ ಕೃಶೋ ಬಾಲಶ್ಚ ವಿಂದತಿ ॥೧॥

ಯುಧಿಷ್ಠಿರ– ಅದೃಷ್ಟವಿಲ್ಲದವನು ಎಷ್ಟು ಬಲಿಷ್ಠನಾದರೂ ಧನವನ್ನು ಪಡೆಯುವುದಿಲ್ಲ. ಭಾಗಧೇಯಾನ್ವಿತನಾದವನು (ಅದೃಷ್ಟವನ್ನು ಹೊಂದಿದವನು) ಕೃಶನಾಗಿದ್ದರೂ, ಬಾಲನಾಗಿದ್ದರೂ ಎಲ್ಲವನ್ನೂ ಪಡೆಯುತ್ತಾನೆ.

ನಾಲಾಭಕಾಲೇ ಲಭತೇ ಪ್ರಯತ್ನೇಽಪಿ ಕೃತೇ ಸತಿ ।
ಲಾಭಕಾಲೇಽಪ್ರಯತ್ನೇನ ಲಭತೇ ವಿಪುಲಂ ಧನಮ್ ।
ಕೃತಯತ್ನಾಫಲಾಶ್ಚೈವ ದೃಶ್ಯಂತೇ ಶತಶೋ ನರಾಃ ॥೨॥

ಪ್ರಯತ್ನವನ್ನು ಮಾಡಿದರೂ ಅಲಾಭಕಾಲದಲ್ಲಿ ಮನುಷ್ಯನು ಏನನ್ನೂ ಪಡೆಯುವುದಿಲ್ಲ. ಲಾಭಕಾಲದಲ್ಲಿ ಪ್ರಯತ್ನವನ್ನು ಮಾಡದಿದ್ದರೂ ವಿಪುಲವಾದ ಧನವನ್ನು ಪಡೆಯುತ್ತಾನೆ. ಪ್ರಯತ್ನವನ್ನು ಮಾಡಿ ಫಲವನ್ನು ಪಡೆಯದ ಮನುಷ್ಯರು ನೂರಾರು ಸಂಖ್ಯೆಯಲ್ಲಿ ಕಂಡುಬರುತ್ತಾರೆ.

ಯದಿ ಯತ್ನೋ ಭವೇನ್ಮರ್ತ್ಯಃ ಸ ಸರ್ವಂ ಫಲಮಾಪ್ನುಯಾತ್ ।
ನಾಲಭ್ಯಂ ಚೋಪಲಭ್ಯೇತ ನೃಣಾಂ ಭರತಸತ್ತಮ ॥೩॥

ಮನುಷ್ಯನು ತನ್ನ ಪ್ರಯತ್ನದಿಂದಲೇ ಎಲ್ಲವನ್ನು ಪಡೆಯುವುದಾಗಿದ್ದರೆ ಅವನು ಎಲ್ಲ ಫಲವನ್ನೂ ಪಡೆಯಬೇಕಾಗಿದ್ದಿತು. ಎಲೈ ಭರತಸತ್ತಮನೇ, ಮನುಷ್ಯರಿಗೆ ಅಲಭ್ಯವಾದುದು ಯಾವುದೂ ಇರಬಾರದಾಗಿದ್ದಿತು.

ಯದಾ ಪ್ರಯತ್ನಂ ಕೃತವಾನ್ ದೃಶ್ಯತೇ ಹ್ಯಫಲೋ ನರಃ ।
ಮಾರ್ಗನ್ ನಯಶತೈರರ್ಥಾನಮಾರ್ಗಂಶ್ಚಾಪರಃ ಸುಖೀ ॥೪॥

ಒಬ್ಬ ಮನುಷ್ಯನು ಪ್ರಯತ್ನವನ್ನು ಮಾಡಿ ನೂರು ರೀತಿಗಳಿಂದ ಅನ್ವೇಷಣೆ ಮಾಡಿದರೂ ಫಲರಹಿತನಾಗಿರುವುದು ಕಂಡುಬರುತ್ತದೆ. ಇನ್ನೊಬ್ಬನು ಯಾವ ಮಾರ್ಗವನ್ನೂ ಹುಡುಕದೆ ಸುಖವನ್ನು ಹೊಂದುತ್ತಾನೆ.

ಅಕಾರ್ಯಮಸಕೃತ್‌ಕೃತ್ವಾ ದೃಶ್ಯಂತೇ ಹ್ಯಧನಾ ನರಾಃ ।
ಧನಯುಕ್ತಾಸ್ತ್ವಧರ್ಮಸ್ಥಾ ದೃಶ್ಯಂತೇ ಚಾಪರೇ ಜನಾಃ ॥೫॥

ಅನೇಕ ಅಕಾರ್ಯಗಳನ್ನು ಮಾಡಿದರೂ ನಿರ್ಧನರಾದ ಮನುಷ್ಯರು ಕಂಡುಬರುತ್ತಾರೆ. ಇನ್ನು ಕೆಲವರು ಅಧರ್ಮಿಷ್ಠರಾಗಿ ಧನಯುಕ್ತರಾಗಿರುವುದು ಕಂಡುಬರುತ್ತದೆ.

ಅಧೀತ್ಯ ನೀತಿಂ ಯಸ್ಮಾಚ್ಚ ನೀತಿಯುಕ್ತೋ ನ ದೃಶ್ಯತೇ ।
ಅನಭಿಜ್ಞಶ್ಚ ಸಾಚಿವ್ಯಂ ಗಮಿತಃ ಕೇನ ಹೇತುನಾ ।
ವಿದ್ಯಾಯುಕ್ತೋ ಹ್ಯವಿದ್ಯಶ್ಚ ಧನವಾನ್ ದುರ್ಗತಸ್ತಥಾ ॥೬॥

ನೀತಿಶಾಸ್ತ್ರವನ್ನು ಅಧ್ಯಯನ ಮಾಡಿದರೂ ನೀತಿಯುಕ್ತನಾಗಿರುವುದು ಕಂಡುಬರುವುದಿಲ್ಲ. ಯಾವ ವಿದ್ಯೆಯೂ ಇಲ್ಲದವನು ಯಾವ ಕಾರಣದಿಂದ ಸಚಿವ ಸ್ಥಾನವನ್ನು ಅಲಂಕರಿಸುತ್ತಾನೆ! ವಿದ್ಯಾಯುಕ್ತನಾದವನು ದರಿದ್ರನಾಗುತ್ತಾನೆ. ವಿದ್ಯಾಹೀನನಾದವನು ಧನವಂತನಾಗುತ್ತಾನೆ.

ಯದಿ ವಿದ್ಯಾಮುಪಾಶ್ರಿತ್ಯ ನರಃ ಸುಖಮವಾಪ್ನುಯಾತ್ ।
ನ ವಿದ್ವಾನ್ ವಿದ್ಯಯಾ ಹೀನಂ ವೃತ್ತ್ಯರ್ಥಮುಪಸಂಶ್ರಯೇತ್ ॥೭॥

ವಿದ್ಯೆಯನ್ನು ಸಂಪಾದಿಸಿದ ಮನುಷ್ಯನು ಸುಖವನ್ನು ಹೊಂದುವುದಾಗಿದ್ದರೆ ವಿದ್ಯಾವಂತನು ಜೀವನೋಪಾಯಕ್ಕಾಗಿ ಅವಿದ್ಯಾವಂತನನ್ನು ಆಶ್ರಯಿಸುತ್ತಿರಲಿಲ್ಲ.

ಯಥಾ ಪಿಪಾಸಾಂ ಜಯತಿ ಪುರುಷಃ ಪ್ರಾಪ್ಯ ವೈ ಜಲಮ್ ।
ದೃಷ್ಟಾರ್ಥೋ ವಿದ್ಯಯಾऽಪ್ಯೇವಮವಿದ್ಯಾಂ ಪ್ರಜಹೇನ್ನರಃ ॥೮॥

ಜಲವನ್ನು ಪಡೆದ ಪುರುಷನು ಬಾಯಾರಿಕೆಯನ್ನು ಜಯಿಸಿದಂತೆ ವಿದ್ಯೆಯಿಂದ ತತ್ತ್ವಜ್ಞಾನವನ್ನು ಪಡೆದವನು ಅವಿದ್ಯೆಯನ್ನು ತ್ಯಜಿಸುತ್ತಾನೆ.

ನಾಪ್ರಾಪ್ತಕಾಲೋ ಮ್ರಿಯತೇ ವಿದ್ಧಃ ಶರಶತೈರಪಿ ।
ತೃಣಾಗ್ರೇಣಾಪಿ ಸಂಸ್ಪೃಷ್ಟಃ ಪ್ರಾಪ್ತಕಾಲೋ ನ ಜೀವತಿ ॥೯॥

ನೂರು ಬಾಣಗಳಿಂದ ಹೊಡೆದರೂ ಮರಣಕಾಲವು ಬರದಿದ್ದರೆ ಮರಣವನ್ನು ಹೊಂದುವುದಿಲ್ಲ. ಮರಣಕಾಲವು ಪ್ರಾಪ್ತವಾದಾಗ ಒಂದು ಹುಲ್ಲು ಕಡ್ಡಿಯಿಂದ ಮುಟ್ಟಿದರೂ ಬದುಕುವುದಿಲ್ಲ.

ಭೀಷ್ಮಃ

ಈಹಮಾನಃ ಸಮಾರಂಭಾನ್ ಯದಿ ನಾಸಾದಯೇದ್ ಧನಮ್ ।
ಉಗ್ರಂ ತಪಃ ಸಮಾರೋಹೇನ್ನ ಹ್ಯನುಪ್ತಂ ಪ್ರರೋಹತಿ ॥೧೦॥

ಭೀಷ್ಮ- ಎಷ್ಟೇ ಪ್ರಯತ್ನವನ್ನು ಮಾಡುತ್ತಿದ್ದರೂ ಧನವು ದೊರೆಯದಿದ್ದರೆ ಉಗ್ರವಾದ ತಪಸ್ಸನ್ನು ಆಚರಿಸಬೇಕು. ಬಿತ್ತದ ಬೀಜವು ಅಂಕುರಿಸುವುದಿಲ್ಲವಷ್ಟೆ?

ದಾನೇನ ಭೋಗೀ ಭವತಿ ಮೇಧಾವೀ ವೃದ್ಧಸೇವಯಾ ।
ಅಹಿಂಸಯಾ ಚ ದೀರ್ಘಾಯುರಿತಿ ಪ್ರಾಹುರ್ಮನೀಷಿಣಃ ॥೧೧॥

ದಾನದಿಂದ ಭೋಗಿಯಾಗುತ್ತಾನೆ. ವೃದ್ಧರ ಸೇವೆಯಿಂದ ಮೇಧಾವಿಯಾಗುತ್ತಾನೆ. ಅಹಿಂಸೆಯಿಂದ ದೀರ್ಘಾಯುವಾಗುತ್ತಾನೆ ಎಂದು ಜ್ಞಾನಿಗಳು ಹೇಳುತ್ತಾರೆ.

ತಸ್ಮಾದ್ ದದ್ಯಾನ್ನ ಯಾಚೇತ ಪೂಜಯೇದ್ ಧಾರ್ಮಿಕಾನಪಿ ।
ಸುಭಾಷೀ ಪ್ರಿಯಕೃಚ್ಛುದ್ಧಃ ಸರ್ವಸತ್ತ್ವಾವಿಹಿಂಸಕಃ ॥೧೨॥

ದಾನವನ್ನು ಮಾಡಬೇಕು. ಯಾಚಿಸಬಾರದು. ಧಾರ್ಮಿಕರನ್ನು ಪೂಜಿಸಬೇಕು. ಒಳ್ಳೆಯ ಮಾತನ್ನಾಡಬೇಕು. ಇನ್ನೊಬ್ಬರಿಗೆ ಪ್ರಿಯವನ್ನು ಮಾಡಬೇಕು. ಶುದ್ಧನಾಗಿರಬೇಕು. ಯಾವ ಪ್ರಾಣಿಯನ್ನೂ ಹಿಂಸಿಸಬಾರದು.

ಯದಾ ಪ್ರಮಾಣಪ್ರಭವಃ ಸ್ವಭಾವಶ್ಚ ಸುಖಾಸುಖೇ ।
ಮಶಕೀಟಪಿಪೀಲಾನಾಂ ಸ್ಥಿರೋ ಭವ ಯುಧಿಷ್ಠಿರ ॥೧೩॥

ಎಲೈ ಯುಧಿಷ್ಠಿರನೇ, ಸುಖ-ದುಃಖಗಳು ಅದೃಷ್ಟರೂಪವಾದ ಪ್ರಮಾಣದಿಂದ ಉಂಟಾಗುತ್ತವೆ ಎಂದು ತಿಳಿದ ಮೇಲೆ ನೊಣ, ಕೀಟ, ಇರುವೆಗಳಿದ್ದರೂ ಸ್ಥಿರವಾಗಿರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಧರ್ಮಾಧರ್ಮಸ್ವರೂಪಕಥನಂ ನಾಮ
ದ್ವಿಪಂಚಾಶದುತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಐವತ್ಮೂರನೆಯ ಅಧ್ಯಾಯ

ಶುಭಕಾಲದ ಪ್ರಾಬಲ್ಯಕಥನ

ಭೀಷ್ಮಃ

ಕಾರ್ಯತೇ ಯಚ್ಚ ಕ್ರಿಯತೇ ಸಚ್ಚಾಸಚ್ಚ ಕೃತಂ ತತಃ ।
ತತ್ರಾಶ್ವಸೀತ ಸತ್‌ಕೃತ್ವಾ ಅಸತ್‌ಕೃತ್ವಾ ನ ವಿಶ್ವಸೇತ್ ॥೧॥

ಭೀಷ್ಮ– ಕಾಲವು ಸತ್ಕಾರ್ಯವನ್ನೂ, ಅಸತ್ಕಾರ್ಯವನ್ನೂ ಮಾಡಿಸುತ್ತದೆ. ವಿವೇಕಿಯಾದವನು ಸತ್ಕಾರ್ಯವನ್ನು ಮಾಡಿ ಸಮಾಧಾನವನ್ನು ಹೊಂದಬೇಕು. ಅಸತ್ಕಾರ್ಯವನ್ನು ಮಾಡಿ ಸಮಾಧಾನವನ್ನು ಹೊಂದಬಾರದು.

ಕಾಲ ಏವಾತ್ರ ಕಾಲೇನ ನಿಗ್ರಹಾನುಗ್ರಹೌ ದದತ್ ।
ಬುದ್ಧಿಮಾವಿಶ್ಯ ಭೂತಾನಾಂ ಧರ್ಮಾರ್ಥೇಷು ಪ್ರವರ್ತತೇ ॥೨॥

ಕಾಲವೇ ಆಯಾ ಕಾಲಗಳಲ್ಲಿ ನಿಗ್ರಹ, ಅನುಗ್ರಹವನ್ನು ಉಂಟುಮಾಡುವುದಾಗಿ ಜೀವರ ಬುದ್ಧಿಯನ್ನು ಪ್ರವೇಶಿಸಿ, ಧರ್ಮದಲ್ಲಿಯೂ ಮತ್ತು ಅರ್ಥದಲ್ಲಿಯೂ ಪ್ರವೃತ್ತಿಯನ್ನು ಉಂಟುಮಾಡುತ್ತದೆ.

ಯದಾ ತಸ್ಯ ಭವೇದ್ ಬುದ್ಧಿಃ ಧರ್ಮ್ಯಾ ಚಾರ್ಥಪ್ರದರ್ಶಿನೀ ।
ತದಾಶ್ವಸೀತ ಧರ್ಮಾತ್ಮಾऽದೃಢಬುದ್ಧಿರ್ನ ವಿಶ್ವಸೇತ್ ॥೩॥

ಜೀವರಿಗೆ ಧರ್ಮಾನುಸಾರಿಯಾದ ಅರ್ಥಪ್ರದರ್ಶಕವಾದ ಬುದ್ಧಿಯುಂಟಾದಾಗ ಧರ್ಮಾತ್ಮನಾದವನು ಧರ್ಮಬುದ್ಧಿಯನ್ನು ನಂಬಬೇಕು. ಅದೃಢ ಬುದ್ಧಿಯುಳ್ಳವನು ನಂಬಲಾರ.

ಏತಾವನ್ಮಾತ್ರಮೇತದ್ಧಿ ಭೂತಾನಾಂ ಪ್ರಾಜ್ಞಲಕ್ಷಣಮ್ ।
ಕಾಲಯುಕ್ತೋऽಪ್ಯುಭಯವಿಚ್ಛೇಷಮರ್ಥಂ ಸಮಾಚರೇತ್ ॥೪॥

ಧರ್ಮದಲ್ಲಿ ವಿಶ್ವಾಸ ಮಾಡುವುದೇ ಜೀವರಲ್ಲಿ ಪ್ರಾಜ್ಞರ ಲಕ್ಷಣ. ಧರ್ಮಾಧರ್ಮಗಳನ್ನು ತಿಳಿದು, ಆಯಾ ಕಾಲಗಳಲ್ಲಿ ಉಳಿದ ಧರ್ಮಗಳನ್ನು ಆಚರಿಸಬೇಕು (ಅರ್ಥಾರ್ಜನೆಯನ್ನು ಮಾಡಬೇಕು).

ಯಥಾ ಹ್ಯುಪಸ್ಥಿತೈಶ್ವರ್ಯಾಃ ಪೂಜಯಂತೇ ನರಾ ನರಾನ್ ।
ಏವಮೇವಾತ್ಮನಾತ್ಮಾನಂ ಪೂಜಯಂತೀಹ ಧಾರ್ಮಿಕಾಃ ॥೫॥

ಐಶ್ವರ್ಯವಂತರಾದವರು ಮನುಷ್ಯರನ್ನು ಪೂಜಿಸುತ್ತಾರೆ. ಅದರಂತೆ ಧಾರ್ಮಿಕರಾದವರೂ ಸಹ ಧರ್ಮಾತ್ಮರನ್ನು ಪೂಜಿಸುತ್ತಾರೆ.

ನ ಹ್ಯಧರ್ಮತಯಾ ಧರ್ಮಂ ದದ್ಯಾತ್ ಕಾಲಃ ಕಥಂಚನ ।
ತಸ್ಮಾದ್ ವಿಶುದ್ಧಮಾತ್ಮಾನಂ ಜಾನೀಯಾದ್ ಧರ್ಮಚಾರಿಣಮ್ ॥೬॥

ಕಾಲವು ಎಂದೂ ಧರ್ಮವನ್ನು ಅಧರ್ಮವನ್ನಾಗಿ ಮಾಡಿ ದುಃಖವನ್ನು ಕೊಡುವುದಿಲ್ಲ. ಆದ್ದರಿಂದ ಶುದ್ಧಮನಸ್ಸುಳ್ಳವನನ್ನು ಧರ್ಮಾಚರಣೆ ಮಾಡಿದವನೆಂದು ತಿಳಿಯಬೇಕು.

ಸ್ಪಷ್ಟುಮಪ್ಯಸಮರ್ಥೋ ಹಿ ಜ್ವಲಂತಮಿವ ಪಾವಕಮ್ ।
ಅಧರ್ಮಃ ಸತತೋ ಧರ್ಮಂ ಕಾಲೇನ ಪರಿರಕ್ಷಿತಮ್ ॥೭॥

ಜ್ವಲಿಸುವ ಅಗ್ನಿಯಂತೆ ಪ್ರಜ್ವಲಿಸುವ, ಕಾಲದಿಂದ ರಕ್ಷಿತವಾದ, ಧರ್ಮವನ್ನು ಅಧರ್ಮವು ಎಂದೂ ಮುಟ್ಟಲು ಸಾಧ್ಯವಿಲ್ಲ.

ಕಾರ್ಯಾವೇತೌ ಹಿ ಕಾಲೇನ ಧರ್ಮೋ ಹಿ ವಿಜಯಾವಹಃ ।
ತ್ರಯಾಣಾಮಪಿ ಲೋಕಾನಾಮ್ ಧರ್ಮೋ ಹಿ ಶರಣಂ ಭವೇತ್ ॥೮॥

ಧರ್ಮಾಧರ್ಮಗಳು ಪ್ರಯತ್ನದಿಂದ (ನಿಧಾನವಾಗಿ) ಸಾಧಿಸಲು ಶಕ್ಯವಾದವುಗಳು. ಅವುಗಳಲ್ಲಿ ಧರ್ಮವು ಮಾತ್ರ ವಿಜಯವನ್ನು ತಂದುಕೊಡುತ್ತದೆ. ಮೂರು ಲೋಕಗಳಿಗೂ ಧರ್ಮವೇ ಆಶ್ರಯವಾದುದು.

ನ ಹಿ ಕಶ್ಚಿನ್ನಯೇತ್ ಪ್ರಾಜ್ಞೋ ಗೃಹೀತ್ವೈವ ಕರೇ ನರಮ್ ।
ಉಹ್ಯಮಾನಃ ಸ ಧರ್ಮೇಣ ಧರ್ಮೇ ಬಹುಭಯಚ್ಛಲೇ ॥೯॥

ಯಾವ ಪ್ರಾಜ್ಞನೂ ಇನ್ನೊಬ್ಬ ಮನುಷ್ಯನನ್ನು ಕೈಹಿಡಿದು ನಡೆಸುವುದಿಲ್ಲ. ಬಹು ವಿಘ್ನಗಳೂ, ಭಯಗಳೂ ಇರುವ ಧರ್ಮದ ದಾರಿಯಲ್ಲಿ ಧರ್ಮವು ಕೈಹಿಡಿದು ನಡೆಸುತ್ತದೆ.

ಶೂದ್ರೋಽಹಂ ನಾಧಿಕಾರೋ ಮೇ ಚಾತುರಾಶ್ರಮ್ಯಸೇವನೇ ।
ಇತಿ ವಿಜ್ಞಾನಮಪರೇ ನಾತ್ಮನ್ಯುಪದಧತ್ಯುತ ॥೧೦॥

ನಾನು ಶೂದ್ರ. ನನಗೆ ಚತುರಾಶ್ರಮ ಸೇವೆಯಲ್ಲಿ ಅಧಿಕಾರವಿಲ್ಲ ಎಂಬ ಜ್ಞಾನವನ್ನು ಶುದ್ಧಾತ್ಮರಾದವರು ಹೊಂದುವುದಿಲ್ಲ.

ವಿಶೇಷೇಣ ಚ ವಕ್ಷ್ಯಾಮಿ ಚಾತುರ್ವರ್ಣ್ಯಸ್ಯ ಲಿಂಗತಃ ।
ಪಂಚಭೂತಶರೀರಾಣಾಂ ಸರ್ವೇಷಾಂ ಸದೃಶಾತ್ಮನಾಮ್ ॥೧೧॥

ಲೋಕಧರ್ಮೇ ಚ ಧರ್ಮೇ ಚ ವಿಶೇಷಕರಣಂ ಕೃತಮ್ ।
ಯತ್ಕೈಕತ್ವಂ ಪುನರ್ಯಾಂತಿ ಪ್ರಾಣಿನಸ್ತತ್ರ ವಿಸ್ತರಃ ॥೧೨॥

ಚಾತುರ್ವರ್ಣ್ಯವನ್ನು ಆಶ್ರಯಿಸಿದವರೆಲ್ಲರೂ ಪಾಂಚಭೌತಿಕ ಶರೀರವನ್ನು ಹೊಂದಿದವರಾಗಿ ಸದೃಶರಾಗಿದ್ದರೂ ಲೋಕಧರ್ಮದಲ್ಲಿಯೂ, ಸ್ವಧರ್ಮದಲ್ಲಿಯೂ ಇದು ಪವಿತ್ರ, ಇದು ಅಪವಿತ್ರ, ಇದು ಗ್ರಾಹ್ಯ, ಇದು ಅಗ್ರಾಹ್ಯ ಎಂಬ ವಿಭಾಗವನ್ನು ನಾನು ವಿಶೇಷವಾಗಿ ಹೇಳುತ್ತೇನೆ. ವ್ಯತ್ಯಾಸವಿಲ್ಲದೆ ಯಾವ ಧರ್ಮವು ಸಮಾನವಾಗುತ್ತದೆಯೋ ಅದನ್ನು ಎಲ್ಲರೂ ಬಹಳವಾಗಿ ಆಚರಿಸುತ್ತಾರೆ.

ಅಧ್ರುವೋ ಹಿ ಕಥಂ ಲೋಕಃ ಸ್ಮೃತೋ ಧರ್ಮಃ ಕಥಂ ಧ್ರುವಃ ।
ಯತ್ರ ಕಾಲೋ ಧ್ರುವಸ್ತಾತ ತತ್ರ ಧರ್ಮಃ ಸನಾತನಃ ॥೧೩॥

ಧರ್ಮವು ಧ್ರುವವಾದುದು. ಧರ್ಮದಿಂದ ಜಯಿಸುವ ಲೋಕವು ಅಧ್ರುವವಾದುದು ಎಂಬ ಶಂಕೆ ಇರಬಹುದು. ಪ್ರೀತಿಪಾತ್ರನೇ, ಎಲ್ಲಿ ಕಾಲವು ಧ್ರುವವೋ ಅಲ್ಲಿ ಸನಾತನ ಧರ್ಮವಿದೆ. (ನಿಷ್ಕಾಮ ಧರ್ಮಾಚರಣೆಯು ಧ್ರುವವಾದ ಫಲವನ್ನು ಕೊಡುತ್ತದೆ. ಅದು ಸನಾತನ ಧರ್ಮದ ಮುಖ್ಯವಾದ ಫಲ. ಸಕಾಮ ಕರ್ಮಗಳು ಅಧ್ರುವವಾದ ಫಲವನ್ನು ಲೋಕವನ್ನು ಕೊಡುತ್ತವೆ).

ಸರ್ವೇಷಾಂ ತುಲ್ಯದೇಹಾನಾಂ ಸರ್ವೇಷಾಂ ಸದೃಶಾತ್ಮನಾಮ್ ।
ಕಾಲೋ ಧರ್ಮೇಣ ಸಂಯುಕ್ತಃ ಶೇಷ ಏವ ಸುಸಂಗ್ರಹಃ ॥೧೪॥

ಸದೃಶವಾದ ದೇಹವುಳ್ಳ, ಸದೃಶವಾದ ಮನಸ್ಸುಳ್ಳ ಎಲ್ಲರಿಗೂ ಧರ್ಮಯುಕ್ತವಾದ ಕಾಲವೇ (ಸುಖ-ದುಃಖವನ್ನು ಭೋಗಿಸುವಂತೆ ಮಾಡಿ) ಸ್ವಯಂ ಗುರುವಾಗುತ್ತದೆ.

ಏವಂ ಸತಿ ನ ದೋಷೋಽಸ್ತಿ ಭೂತಾನಾಂ ಧರ್ಮಸೇವನೇ ।
ತಿರ್ಯಗ್ಯೋನಾವಪಿ ಸತಾಂ ಲೋಕ ಏವ ಮತೋ ಗುರುಃ ॥೧೫॥

ಜೀವರು ಧರ್ಮವನ್ನು ಆಶ್ರಯಿಸುವುದರಲ್ಲಿ ಯಾವ ಅನಿತ್ಯತ್ವರೂಪವಾದ ದೋಷವೂ ಇಲ್ಲ. ತಿರ್ಯಗ್ಯೋನಿಯಲ್ಲಿ ಇರುವ ಸಜ್ಜೀವರಿಗೂ ಸುಖ-ದುಃಖಗಳನ್ನು ಕೊಡುವ ಲೋಕವೇ (ಕಾಲವೇ) ಗುರುವಾಗುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ತ್ರಿಪಂಚಾಶೋತ್ತರದ್ವಿಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಐವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಐವತ್ನಾಲ್ಕನೆಯ ಅಧ್ಯಾಯ

ಸರ್ವಮಂಗಳವಾದ ದೇವರ್ಷಿನೃಪವಂಶಕಥನ.

ವೈಶಂಪಾಯನಃ

ಶರತಲ್ಪಗತಂ ಭೀಷ್ಮಂ ಪಾಂಡವೋಽಥ ಕುರೂದ್ವಹಃ ।
ಯುಧಿಷ್ಠಿರೋ ಹಿತಪ್ರೇಪ್ಸುರಪೃಚ್ಛತ್ ಕಲ್ಮಷಾಪಹಮ್ ॥೧॥

ವೈಶಂಪಾಯನ– ಅನಂತರ ಕುರೂದ್ವಹನಾದ ಪಾಂಡವನಾದ ಯುಧಿಷ್ಠಿರನು (ಎಲ್ಲರ) ಹಿತವನ್ನು ಬಯಸಿ ಶರತಲ್ಪಗತರಾದ ಭೀಷ್ಮರನ್ನು ಪಾಪಪರಿಹಾರ ವಿಷಯದಲ್ಲಿ ಪ್ರಶ್ನೆಯನ್ನು ಮಾಡಿದನು.

ಯುಧಿಷ್ಠಿರಃ

ಕಿಂ ಶ್ರೇಯಃ ಪುರುಷಸ್ಯೇಹ ಕಿಂ ಕುರ್ವನ್ ಸುಖಮೇಧತೇ ।
ವಿಪಾಪ್ಮಾ ಚ ಭವೇತ್ ಕೇನ ಕಿಂ ವಾ ಕಲ್ಮಷನಾಶನಮ್ ॥೨॥

ಯುಧಿಷ್ಠಿರ– ಪುರುಷನಿಗೆ ಶ್ರೇಯಸ್ಸು ಯಾವುದು? ಏನು ಮಾಡಿದರೆ ಶುಭವನ್ನು ಹೊಂದುತ್ತಾನೆ? ಯಾವುದರಿಂದ ಪಾಪವು ಪರಿಹಾರವಾದೀತು? ದೋಷ ಪರಿಹಾರಕವಾದುದು ಯಾವುದು?

ಭೀಷ್ಮಃ

ಅಯಂ ದೈವತವಂಶೋ ವೈ ಋಷಿವಂಶಸಮನ್ವಿತಃ ।
ದ್ವಿಸಂಧ್ಯಂ ಪಠಿತಃ ಪುತ್ರ ಕಲ್ಮಷಾಪಹರಃ ಪರಃ ॥೩॥

ಭೀಷ್ಮ– ಪುತ್ರನೇ, ಈ ದೇವತಾವಂಶ ಮತ್ತು ಋಷಿವಂಶವನ್ನು ಎರಡು ಸಂಧ್ಯೆಗಳಲ್ಲಿಯೂ ಪಠಿಸಿದರೆ ಅದು ಶ್ರೇಷ್ಠವಾದ ದೋಷಪರಿಹಾರಕವಾಗುತ್ತದೆ.

ದೇವಾಸುರಗುರುರ್ದೇವಃ ಸರ್ವಭೂತನಮಸ್ಕೃತಃ ।
ಅಚಿಂತ್ಯೋಽಥಾಪ್ಯನಿರ್ದೇಶ್ಯಃ ಸರ್ವಪ್ರಾಣೋ ಹ್ಯಯೋನಿಜಃ ॥೪॥

ಪಿತಾಮಹೋ ಜಗನ್ನಾಥಃ ಸಾವಿತ್ರೀ ಬ್ರಹ್ಮಣಸ್ತಥಾ ।
ವೇದಭೂರಥ ಮಾತಾ ಚ ವಿಷ್ಣುರ್ನಾರಾಯಣಃ ಪ್ರಭುಃ ॥೫॥

ದೇವಾಸುರರ ಗುರುವಾದ, ಸರ್ವದೇವನಮಸ್ಕೃತರಾದ ಅಚಿಂತ್ಯರೂ, ಅನಿರ್ದೇಶ್ಯರೂ, ಸರ್ವಪ್ರಾಣರೂ, ಅಯೋನಿಜರೂ ಆದವರು ಬ್ರಹ್ಮದೇವರು. ಜಗನ್ನಾಥನಾದವನು ನಾಭಿಕಮಲದಿಂದ ಬ್ರಹ್ಮನನ್ನು ಪ್ರಸವಿಸುವ ಮಾತೆಯಾದ, ವೇದಕ್ಕೆ ಆಶ್ರಯನಾದವನು ಪ್ರಭುವಾದ ವಿಷ್ಣು ನಾರಾಯಣ (ಲಕ್ಷಾಲಂಕಾರ).

ಉಮಾಪತಿರ್ವಿರೂಪಾಕ್ಷಃ ಸ್ಕಂದಃ ಸೇನಾಪತಿಸ್ತಥಾ ।
ವಿಶಾಖೋ ಹುತಭುಗ್ವಾಯುಶ್ಚಂದ್ರಾದಿತ್ಯೌ ಪ್ರಭಾಕರೌ ॥೬॥

ಶಕ್ರಃ ಶಚೀಪತಿರ್ದೇವೋ ಯಮೋ ಧೂಮೋರ್ಣಯಾ ಸಹ ।
ವರುಣಃ ಸಹ ಗೌರ್ಯಾ ಚ ಸಹ ಋದ್ಧ್ಯಾ ಧನೇಶ್ವರಃ ॥೭॥

ಉಮಾಪತಿಯಾದ ವಿರೂಪಾಕ್ಷ, ಸೇನಾಪತಿಯಾದ ಸ್ಕಂದ, ವಿಶಾಖ, ಅಗ್ನಿ, ವಾಯು, ಬೆಳಕನ್ನು ಕೊಡುವ ಸೂರ್ಯ-ಚಂದ್ರರು, ಶಚೀಪತಿಯಾದ ಇಂದ್ರ, ಧೂಮೋರ್ಣಳಿಂದ ಸಹಿತನಾದ ಯಮ, ಗೌರಿಯಿಂದ ಸಹಿತನಾದ ವರುಣ, ಋದ್ಧಿಯಿಂದ ಸಹಿತನಾದ ಕುಬೇರ.

ಸೌಮ್ಯಾ ಗೌಃ ಸುರಭಿರ್ದೇವೀ ವಿಶ್ರವಾಶ್ಚ ಮಹಾನೃಷಿಃ ।
ಷಟ್‌ಕಾಲಃ ಸಾಗರೋ ಗಂಗಾ ಸ್ರವಂತ್ಯೋಽಥ ಮರುದ್ಗಣಾಃ ॥೮॥

ವಾಲಖಿಲ್ಯಾಸ್ತಪಃಸಿದ್ಧಾಃ ಕೃಷ್ಣದ್ವೈಪಾಯನಸ್ತಥಾ ।
ನಾರದಃ ಪರ್ವತಶ್ಚೈವ ವಿಶ್ವಾವಸುರ್ಹಹಾಹುಹೂ ॥೯॥

ಶಾಂತ ಗೋವಾದ ಸುರಭಿ, ಮಹರ್ಷಿಗಳಾದ ವಿಶ್ರವ, ಆರು ಕಾಲಗಳು, ಸಾಗರ, ಗಂಗೆ, ಉಳಿದ ನದಿಗಳು, ಮರುದ್ಗಣಗಳು, ತಪಸ್ಸಿದ್ಧರಾದ ವಾಲಖಿಲ್ಯರು, ಕೃಷ್ಣ ದ್ವೈಪಾಯನರು, ನಾರದ, ಪರ್ವತ, ವಿಶ್ವಾವಸು, ಹಹಾಹುಹೂ,

ತುಂಬುರುಶ್ಚಿತ್ರಸೇನಶ್ಚ ದೇವದೂತಶ್ಚ ವಿಶ್ರುತಃ ।
ದೇವಕನ್ಯಾ ಮಹಾಭಾಗಾ ದಿವ್ಯಾಶ್ಚಾಪ್ಸರಸಾಂ ಗಣಾಃ ॥೧೦॥

ಊರ್ವಶೀ ಮೇನಕಾ ರಂಭಾ ಮಿಶ್ರಕೇಶೀ ಅಲಂಬುಷಾ ।
ವಿಶ್ವಾಚೀ ಚ ಘೃತಾಚೀ ಚ ಪಂಚಚೂಡಾ ತಿಲೋತ್ತಮಾ ॥೧೧॥

ಆದಿತ್ಯಾ ವಸವೋ ರುದ್ರಾಃ ಸಾಶ್ವಿನಃ ಪಿತರೋಽಪಿ ಚ ।
ಧರ್ಮಃ ಸತ್ಯಂ ತಪೋ ದೀಕ್ಷಾ ವ್ಯವಸಾಯಃ ಪಿತಾಮಹಃ ॥೧೨॥

ತುಂಬುರು, ಚಿತ್ರಸೇನ, ಪ್ರಖ್ಯಾತನಾದ ದೇವದೂತ, ಮಹಾನುಭಾವರಾದ ದೇವಕನ್ಯೆಯರು, ದಿವ್ಯವಾದ ಅಪ್ಸರೆಯರ ಸಮೂಹಗಳು - ಊರ್ವಶೀ, ಮೇನಕಾ, ರಂಭಾ, ಮಿಶ್ರಕೇಶೀ, ಅಲಂಬುಷಾ, ವಿಶ್ವಾಚೀ, ಘೃತಾಚೀ, ಪಂಚಚೂಡಾ, ತಿಲೋತ್ತಮಾ, ಆದಿತ್ಯರು, ವಸುಗಳು, ರುದ್ರರು, ಅಶ್ವಿನಿಗಳು, ಪಿತೃಗಳು, ಧರ್ಮ, ಸತ್ಯ , ತಪಸ್ಸು, ದೀಕ್ಷಾ, ವ್ಯವಸಾಯ, ಪಿತಾಮಹರು,

ಶರ್ವಯೋರ್ ದಿವಸಾಶ್ಚೈವ ಮಾರೀಚಃ ಕಶ್ಯಪಸ್ತಥಾ ।
ಶುಕ್ರೋ ಬೃಹಸ್ಪತಿರ್ಭೌಮೋ ಬುಧೋ ರಾಹುಃ ಶನೈಶ್ಚರಃ ॥೧೩॥

ನಕ್ಷತ್ರಾಣ್ಯೃತವಶ್ಚೈವ ಮಾಸಾಃ ಸಂಧ್ಯಾಃ ಸಂವತ್ಸರಾಃ ।
ವೈನತೇಯಾಃ ಸಮುದ್ರಾಶ್ಚ ಕದ್ರುಜಾಃ ಪನ್ನಗಾಸ್ತಥಾ ॥೧೪॥

ರಾತ್ರಿಗಳು, ಹಗಲುಗಳು, ಮರೀಚಿಯ ಪುತ್ರರಾದ ಕಶ್ಯಪರು, ಶುಕ್ರ , ಬೃಹಸ್ಪತಿ, ಕುಜ, ಬುಧ, ರಾಹು, ಶನಿ, ನಕ್ಷತ್ರಗಳು, ಋತುಗಳು, ಮಾಸಗಳು, ಸಂಧ್ಯೆಗಳು, ಸಂವತ್ಸರಗಳು, ಪಕ್ಷಿಗಳು, ಸಮುದ್ರಗಳು, ಕದ್ರುವಿನ ಮಕ್ಕಳಾದ ಸರ್ಪಗಳು,

ಶತದ್ರೂಶ್ಚ ವಿಪಾಶಾ ಚ ಚಂದ್ರಭಾಗಾ ಸರಸ್ವತೀ ।
ಸಿಂಧುಶ್ಚ ದೇವಿಕಾ ಚೈವ ಪುಷ್ಕರಂ ತೀರ್ಥಮೇವ ಚ ॥೧೫॥

ಗಂಗಾ ಮಹಾನದೀ ಚೈವ ಕಪಿಲಾ ನರ್ಮದಾ ತಥಾ ।
ಕಂಪುನಾ ಚ ವಿಶಲ್ಯಾ ಚ ಕರತೋಯಾಂಬುವಾಹಿನೀ ॥೧೬॥

ಶತದ್ರೂ, ವಿಪಾಶಾ, ಚಂದ್ರಭಾಗಾ, ಸರಸ್ವತೀ, ಸಿಂಧು, ದೇವಿಕಾ, ಪುಷ್ಕರ ತೀರ್ಥ, ಮಹಾನದಿಯಾದ ಗಂಗಾ, ಕಪಿಲಾ, ನರ್ಮದಾ, ಕಂಪುನಾ, ವಿಶಲ್ಯಾ, ಕರತೋಯಾ, ಅಂಬುವಾಹಿನೀ,

ಸರಯೂರ್ಗಂಡಕೀ ಚೈವ ಲೋಹಿತ್ಯಶ್ಚ ಮಹಾನದಃ ।
ತಾಮ್ರಾರುಣಾ ವೇತ್ರವತೀ ಪರ್ಣಾಶಾ ಗೌತಮೀ ತಥಾ ॥೧೭॥

ಗೋದಾವರೀ ಚ ವೇಣ್ಣಾ ಚ ಕೃಷ್ಣವೇಣಾ ತಥಾದ್ರಿಜಾ ।
ದೃಷದ್ವತೀ ಚ ಕಾವೇರೀ ವಂಕ್ಷುಮಂದಾಕಿನೀ ತಥಾ ॥೧೮॥

ಸರಯೂ, ಗಂಡಕೀ, ಮಹಾನದವಾದ ಲೋಹಿತ್ಯ, ತಾಮ್ರಾರುಣಾ, ವೇತ್ರವತೀ, ಪರ್ಣಾಶಾ, ಗೌತಮೀ, ಗೋದಾವರೀ, ವೇಣ್ಣಾ, ಕೃಷ್ಣವೇಣೀ, ತುಂಗಭದ್ರೆ, ದೃಷದ್ವತೀ, ಕಾವೇರೀ, ವಂಕ್ಷು, ಮಂದಾಕಿನೀ,

ಪ್ರಯಾಗಂ ಚ ಪ್ರಭಾಸಂ ಚ ಪುಣ್ಯಂ ನೈಮಿಶಮೇವ ಚ ।
ತಚ್ಚ ವಿಶ್ವೇಶ್ವರಸ್ಥಾನಂ ಯತ್ರ ತದ್ ವಿಮಲಂ ಸರಃ ॥೧೯॥

ಪುಣ್ಯತೀರ್ಥೈಶ್ಚ ಕಲಿಲಂ ಕುರುಕ್ಷೇತ್ರಂ ಪ್ರಕೀರ್ತಿತಮ್ ।
ಸಿಂಧೂತ್ತಮಾ ತಪೋದಾನೀ ಜಂಬೂಮಾರ್ಗಮಥಾಪಿ ಚ ॥೨೦॥

ಪ್ರಯಾಗ, ಪ್ರಭಾಸ, ಪುಣ್ಯಕ್ಷೇತ್ರವಾದ ನೈಮಿಶಾರಣ್ಯ, ಮಾನಸ ಸರೋವರ ವಿಶ್ವೇಶ್ವರ ಸ್ಥಾನವಾದ ಕೈಲಾಸ, ಪುಣ್ಯತೀರ್ಥಗಳಿಂದ ಕೂಡಿದ ಕುರುಕ್ಷೇತ್ರ, ಸಿಂಧೂತ್ತಮ, ತಪೋದಾನ, ಜಂಬೂಮಾರ್ಗ(ಮೊದಲಾದ ಕ್ಷೇತ್ರಗಳು)

ಹಿರಣ್ವತೀ ವಿತಸ್ತಾ ಚ ತಥೈವೇಕ್ಷುಮತೀ ನದೀ ।
ವೇದಸ್ಮೃತಿರ್ವೇದಸಿನೀ ಮಲವಾಸಾಶ್ಚ ನದ್ಯಪಿ ॥೨೧॥

ಭೂಮಿಭಾಗಾಸ್ತಥಾ ಪುಣ್ಯಾ ಗಂಗಾದ್ವಾರಮಥಾಪಿ ಚ ।
ಋಷಿಕುಲ್ಯಾಸ್ತಥಾ ಮೇಧ್ಯಾ ನದೀ ಚಿತ್ರಪಥಾ ತಥಾ ॥೨೨॥

ಕೌಶಿಕೀ ಯಮುನಾ ಸೀತಾ ತಥಾ ಚರ್ಮಣ್ವತೀ ನದೀ ।
ಪುಣ್ಯಾ ಭೀಮರಥೀ ಚೈವ ಬಾಹುದಾ ಚ ಮಹಾನದೀ ।
ಮಹೇಂದ್ರವಾಣೀ ತ್ರಿದಿವಾ ನೀಲಿಕಾ ಚ ಸರಸ್ವತೀ ॥೨೩॥

ನದಿಗಳಾದ ಹಿರಣ್ವತೀ, ವಿತಸ್ತಾ, ಇಕ್ಷುಮತೀ, ವೇದಸ್ಮೃತಿ, ವೈದಸಿನೀ, ಮಲವಾಸಾ, ಭೂಮಿಭಾಗಾ, ಪುಣ್ಯಾ, ಗಂಗಾದ್ವಾರ, ಋಷಿಕುಲ್ಯಾ, ಮೇಧ್ಯಾ, ಚಿತ್ರಪಥಾ, ಕೌಶಿಕೀ, ಯಮುನಾ, ಸೀತಾ, ಚರ್ಮಣ್ವತೀ, ಪವಿತ್ರವಾದ ಭೀಮನದೀ, ಮಹಾನದಿಯಾದ ಬಾಹುದಾ, ಮಹೇಂದ್ರವಾಣಿ, ತ್ರಿದಿವಾ, ನೀಲಿಕಾ, ಸರಸ್ವತೀ

ನಂದಾ ಚಾಪರನಂದಾ ಚ ತಥಾ ತೀರ್ಥಂ ಮಹಾಹ್ರದಮ್ ।
ಗಯಾಥ ಫಲ್ಗುತೀರ್ಥಂ ಚ ಧರ್ಮಾರಣ್ಯಂ ಸುರೈರ್ವೃತಮ್ ॥೨೪॥

ತಥಾ ದೇವನದೀ ಪುಣ್ಯಾ ಸರಶ್ಚ ಬ್ರಹ್ಮನಿರ್ಮಿತಮ್ ।
ಪುಣ್ಯಂ ತ್ರಿಲೋಕವಿಖ್ಯಾತಂ ಸರ್ವಪಾಪಹರಂ ಶಿವಮ್ ॥೨೫॥

ನಂದಾ, ಅಪರನಂದಾ, ಮಹಾಹ್ರದತೀರ್ಥ, ಗಯಾ, ಫಲ್ಗುತೀರ್ಥ, ದೇವತೆಗಳಿಂದ ನಿಬಿಡವಾದ ಧರ್ಮಾರಣ್ಯ, ಪವಿತ್ರವಾದ ದೇವನದಿ, ಬ್ರಹ್ಮ ಸರೋವರ ಇವುಗಳೆಲ್ಲವೂ ಸರ್ವಪಾಪಹರವೆಂದೂ, ಪುಣ್ಯಪ್ರದವೆಂದೂ, ಮಂಗಳಕರಗಳೆಂದೂ ಮೂರು ಲೋಕಗಳಲ್ಲಿಯೂ ವಿಖ್ಯಾತವಾಗಿವೆ.

ಹಿಮವಾನ್ ಪರ್ವತಶ್ಚೈವ ದಿವ್ಯೌಷಧಿಸಮನ್ವಿತಃ ।
ವಿಂಧ್ಯೋ ಧಾತುವಿಚಿತ್ರಾಂಗಸ್ತೀರ್ಥವಾನೌಷಧಾನ್ವಿತಃ ॥೨೬॥

ಮೇರುರ್ಮಹೇಂದ್ರೋ ಮಲಯಃ ಶ್ವೇತಾಶ್ವ ರಜತಾಚಿತಃ ।
ಶೃಂಗವಾನ್ ಮಂದರೋ ನೀಲೋ ನಿಷಧೋ ದರ್ದುರಸ್ತಥಾ ॥೨೭॥

ಪರ್ವತಗಳಾದ, ದಿವ್ಯೌಷಧಿ ಸಮನ್ವಿತವಾದ ಹಿಮಾಲಯ, ಧಾತುವಿನಿಂದಲೂ ವಿಚಿತ್ರವಾದ ತೀರ್ಥಗಳಿಂದಲೂ ಔಷಧಿಗಳಿಂದಲೂ ಕೂಡಿದ ವಿಂಧ್ಯ, ಮೇರು, ಮಹೇಂದ್ರ, ಮಲಯ, ರಜತದಿಂದ ಕೂಡಿದ ಶ್ವೇತಾಶ್ವ, ಶೃಂಗವಾನ್, ಮಂದರ, ನೀಲ, ನಿಷಧ, ದರ್ದುರ,

ಚಿತ್ರಕೂಟೋಽಂಜನಾಭಶ್ಚ ಪರ್ವತೋ ಗಂಧಮಾದನಃ ।
ಪುಣ್ಯಃ ಸೋಮಗಿರಿಶ್ಚೈವ ತಥೈವಾನ್ಯೇ ಮಹೀಧರಾಃ ।
ದಿಶಶ್ಚ ವಿದಿಶಶ್ಚೈವ ಕ್ಷಿತಿಃ ಸರ್ವೇ ಮಹೀರುಹಾಃ ॥೨೮॥

ವಿಶ್ವೇದೇವಾ ನಭಶ್ಚೈವ ನಕ್ಷತ್ರಾಣಿ ಗ್ರಹಾಸ್ತಥಾ ।
ಪಾಂತು ವಃ ಸತತಂ ದೇವಾಃ ಕೀರ್ತಿತಾಽಕೀರ್ತಿತಾ ಮಯಾ ॥೨೯॥

ಚಿತ್ರಕೂಟ, ಅಂಜನಾಭ, ಗಂಧಮಾದನ, ಸೋಮಗಿರಿ, ಹಾಗೆ ಉಳಿದ ಪರ್ವತಗಳು, ದಿಕ್ಕುಗಳು, ವಿದಿಕ್ಕುಗಳು, ಭೂಮಿ, ಎಲ್ಲಾ ವೃಕ್ಷಗಳು, ವಿಶ್ವೇದೇವತೆಗಳು, ಆಕಾಶ, ನಕ್ಷತ್ರಗಳು, ಗ್ರಹಗಳು, ನನ್ನಿಂದ ಕೀರ್ತಿತರಾದ, ಕೀರ್ತಿತರಲ್ಲದ ಎಲ್ಲಾ ದೇವತೆಗಳು ನಿಮ್ಮನ್ನು ಸತತವಾಗಿ ರಕ್ಷಿಸಲಿ.

ಕೀರ್ತಯಾನೋ ನರೋ ಹ್ಯೇತಾನ್ಮುಚ್ಯತೇ ಸರ್ವಕಿಲ್ಬಿಷೈಃ ।
ಸ್ತುವಂಶ್ಚ ಪ್ರತಿನಂದಂಶ್ಚ ಮುಚ್ಯತೇ ಸರ್ವತೋ ಭಯಾತ್ ।
ಸರ್ವಸಂಕರಪಾಪೇಭ್ಯೋ ದೇವತಾಸ್ತವನಂದಕಃ ॥೩೦॥

ಇವುಗಳನ್ನು ಕೀರ್ತಿಸುವ ನರನು ಸರ್ವದೋಷಗಳಿಂದಲೂ ಮುಕ್ತನಾಗುತ್ತಾನೆ. ಅವರನ್ನು ಸ್ತೋತ್ರ ಮಾಡಿ ಸಂತೋಷ ಪಡುವವನು ಸರ್ವಭಯಗಳಿಂದ ಬಿಡುಗಡೆಯನ್ನು ಹೊಂದುತ್ತಾನೆ. ದೇವತಾಸ್ತುತಿಯನ್ನು ಮಾಡಿ ಸಂತೋಷ ಪಡುವವನು ಸಂಕರದಿಂದ ಉಂಟಾದ ಎಲ್ಲ ಪಾಪಗಳಿಂದಲೂ ಮುಕ್ತನಾಗುತ್ತಾನೆ.

ದೇವತಾನಂತರಂ ವಿಪ್ರಾಂಸ್ತಪಃಸಿದ್ಧಾಂಸ್ತಪೋಧಿಕಾನ್ ।
ಕೀರ್ತಿತಾನ್ ಕೀರ್ತಯಿಷ್ಯಾಮಿ ಸರ್ವಪಾಪಪ್ರಮೋಚನಾನ್ ॥೩೧॥

ದೇವತೆಗಳ ಅನಂತರ ತಪಸ್ಸಿದ್ಧರೂ, ಅಧಿಕ ತಪಸ್ವಿಗಳೂ, ಸರ್ವಪಾಪ ಪರಿಹಾರಕರೂ, ಪ್ರಸಿದ್ಧರೂ ಆದ ಋಷಿಗಳನ್ನು ಹೇಳುವೆನು.

ಯವಕ್ರೀತೋಽಥ ರೈಭ್ಯಶ್ಚ ಕಕ್ಷೀವಾನೌಶಿಜಸ್ತಥಾ ।
ಭೃಗ್ವಂಗಿರಾಸ್ತಥಾ ಕಣ್ವೋ ಮೇಧಾತಿಥಿರಥ ಪ್ರಭುಃ ।
ಬರ್ಹಿ ಚ ಗುಣಸಂಪನ್ನಃ ಪ್ರಾಚೀಂ ದಿಶಮುಪಾಶ್ರಿತಾಃ ॥೩೨॥

ಯವಕ್ರೀತ, ರೈಭ್ಯ, ಔಶಿಜನಾದ ಕಕ್ಷೀವಾನ್, ಭೃಗು, ಅಂಗಿರಸ್, ಕಣ್ವ, ಮೇಧಾತಿಥಿ, ಗುಣಸಂಪನ್ನರಾದ ಬರ್ಹಿ ಇವರು ಪೂರ್ವದಿಕ್ಕನ್ನು ಆಶ್ರಯಿಸಿದ್ದಾರೆ.

ಭದ್ರಾಂ ದಿಶಂ ಮಹಾಭಾಗಾ ಉಲ್ಮುಚುಃ ಪ್ರಮುಚುಸ್ತಥಾ ।
ಮುಮ್ಲುಚುಶ್ಚ ಮಹಾಭಾಗಾ ಸ್ವಸ್ಯಾತ್ರೇಯಶ್ಚ ವೀರ್ಯವಾನ್ ॥೩೩॥

ಮಿತ್ರಾವರುಣಯೋಃ ಪುತ್ರಸ್ತಥಾಗಸ್ತ್ಯಃ ಪ್ರತಾಪವಾನ್ ।
ದೃಢಾಯುಶ್ಚೋರ್ಧ್ವಬಾಹುಶ್ಚ ವಿಶ್ರುತಾವೃಷಿಸತ್ತಮೌ ॥೩೪॥

ದಕ್ಷಿಣದಿಕ್ಕಿನಲ್ಲಿ ಮಹಾನುಭಾವರಾದ ಉಲ್ಮುಚು, ಪ್ರಮುಚು, ಮುಮ್ಲುಚು ಈ ಮಹಾನುಭಾವರಾದ, ಸ್ವಸ್ಯಾತ್ರೇಯ, ಮಿತ್ರಾವರುಣರ ಪುತ್ರರು (ಭೃಗು), ಪ್ರತಾಪಶಾಲಿಗಳಾದ ಅಗಸ್ತ್ಯ, ಪ್ರಖ್ಯಾತರಾದ ಮುನಿಶ್ರೇಷ್ಠರಾದ ದೃಢಾಯು ಊರ್ಧ್ವಬಾಹು - ಇವರು ಆಶ್ರಯಿಸಿದ್ದಾರೆ.

ಪಶ್ಚಿಮಾಂ ದಿಶಮಾಶ್ರಿತ್ಯ ಯ ಏಧಂತೇ ನಿಬೋಧ ತಾನ್ ।
ತ್ರಿಶಂಕುಃ ಸ ಹಿ ಸೋದರ್ಯಃ ಪರಿವ್ಯಾಧಶ್ಚ ವೀರ್ಯವಾನ್ ॥೩೫॥

ಋಷಿರ್ದೀರ್ಘತಮಾಶ್ಚೈವ ಗೌತಮಃ ಕಶ್ಯಪಸ್ತಥಾ ।
ಏಕತಶ್ಚ ದ್ವಿತಶ್ಚೈವ ತ್ರಿತಶ್ಚೈವ ಮಹರ್ಷಯಃ ।
ಅತ್ರೇಃ ಪುತ್ರಶ್ಚ ಧರ್ಮಾತ್ಮಾ ತಥಾ ಸಾರಸ್ವತಃ ಪ್ರಭುಃ ॥೩೬॥

ಪಶ್ಚಿಮ ದಿಕ್ಕನ್ನು ಆಶ್ರಯಿಸಿ ಅಭಿವೃದ್ಧಿಯನ್ನು ಹೊಂದುವ ಋಷಿಗಳನ್ನು ಕೇಳು. ಸೋದರರಿಂದ ಕೂಡಿದ ತ್ರಿಶಂಕು, ಪರಾಕ್ರಮಶಾಲಿಯಾದ ಪರಿವ್ಯಾಧ, ದೀರ್ಘತಮ, ಗೌತಮ, ಕಶ್ಯಪ, ಏಕತ, ದ್ವಿತ, ತ್ರಿತ, ಧರ್ಮಾತ್ಮನಾದ ಅತ್ರಿಯ ಪುತ್ರ, ಪ್ರಭುವಾದ ಸಾರಸ್ವತ (ಇವರು ಪಶ್ಚಿಮ ದಿಕ್ಕನ್ನು ಆಶ್ರಯಿಸಿದವರು).

ಉತ್ತರಾಂ ದಿಶಮಾಶ್ರಿತ್ಯ ಯ ಏಧಂತೇ ನಿಬೋಧ ತಾನ್ ।
ಅತ್ರಿರ್ವಸಿಷ್ಠಃ ಶಕ್ತಿಶ್ಚ ಪಾರಾಶರ್ಯಶ್ಚ ವೀರ್ಯವಾನ್ ॥೩೭॥

ವಿಶ್ವಾಮಿತ್ರೋ ಭರದ್ವಾಜೋ ಜಮದಗ್ನಿಸ್ತಥೈವ ಚ ।
ಋಚೀಕಪೌತ್ರೋ ರಾಮಶ್ಚ ಋಷಿರೌದ್ದಾಲಕಿಸ್ತಥಾ ॥೩೮॥

ಶ್ವೇತಕೇತುಃ ಕೋಹಲಶ್ಚ ವಿಪುಲೋ ದೇವಲಸ್ತಥಾ ।
ದೇವಶರ್ಮಾ ಚ ಧೌಮ್ಯಶ್ಚ ಹಸ್ತಿಕಾಶ್ಯಪ ಏವ ಚ ॥೩೯॥

ಲೋಮಶೋ ನಾಚಿಕೇತಶ್ಚ ಲೋಮಹರ್ಷಣ ಏವ ಚ ।
ಋಷಿರುಗ್ರಶ್ರವಾಶ್ಚೈವ ಭಾರ್ಗವಶ್ಚ್ಯವನಸ್ತಥಾ ॥೪೦॥

ಉತ್ತರ ದಿಕ್ಕನ್ನು ಆಶ್ರಯಿಸಿ ಶ್ರೇಯಸ್ಸನ್ನು ಹೊಂದುವ ಋಷಿಗಳನ್ನು ಕೇಳು. ಅತ್ರಿ, ವಸಿಷ್ಠ, ಶಕ್ತಿ, ಸಾಮರ್ಥ್ಯೋಪೇತರಾದ ವ್ಯಾಸ, ವಿಶ್ವಾಮಿತ್ರ, ಭರದ್ವಾಜ, ಜಮದಗ್ನಿ, ಋಚೀಕಪೌತ್ರನಾದ ಪರಶುರಾಮ, ಔದ್ದಾಲಕಿ, ಶ್ವೇತಕೇತು, ಕೋಹಲ (ಕಹೋಲ), ವಿಪುಲ, ದೇವಲ, ದೇವಶರ್ಮ, ಧೌಮ್ಯ, ಹಸ್ತಿಕಾಶ್ಯಪ, ಲೋಮಶ, ನಚಿಕೇತ, ಲೋಮಹರ್ಷಣ, ಉಗ್ರಶ್ರವ, ಭಾರ್ಗವರಾದ ಚ್ಯವನ.

ಏಷ ವೈ ಸಮವಾಯಸ್ತೇ ಋಷಿದೇವಸಮನ್ವಿತಃ ।
ಆದ್ಯಃ ಪ್ರಕೀರ್ತಿತೋ ರಾಜನ್ ಸರ್ವಪಾಪಪ್ರಣಾಶನಃ ॥೪೧॥

ಇದು ಋಷಿಗಳ ಮತ್ತು ದೇವತೆಗಳ ವಂಶದ ಸಮೂಹ. ಎಲೈ ರಾಜನೇ, ಶ್ರೇಷ್ಠವಾದ ಈ ವಂಶಗಳನ್ನು ಕೀರ್ತಿಸಿದರೆ ಸರ್ವಪಾಪಗಳೂ ನಾಶವನ್ನು ಹೊಂದುತ್ತವೆ.

ನೃಗೋ ಯಯಾತಿರ್ನಹುಷೋ ಯದುಃ ಪೂರುಶ್ಚ ವೀರ್ಯವಾನ್ ।
ಧುಂಧುಮಾರೋ ದಿಲೀಪಶ್ಚ ಸಗರಶ್ಚ ಪ್ರತಾಪವಾನ್ ॥೪೨॥

ಕೃಶಾಶ್ವೋ ಯೌವನಾಶ್ವಶ್ಚ ಚಿತ್ರಾಶ್ವಃ ಸತ್ಯವಾಂಸ್ತಥಾ ।
ದುಷ್ಯಂತೋ ಭರತಶ್ಚೈವ ಚಕ್ರವರ್ತೀ ಮಹಾಯಶಾಃ ॥೪೩॥

(ಚಕ್ರವರ್ತಿಗಳಾದ) ನೃಗ, ಯಯಾತಿ, ನಹುಷ, ಯದು, ಪರಾಕ್ರಮಶಾಲಿ ಆದ ಪೂರು, ಧುಂಧುಮಾರ, ದಿಲೀಪ, ಪ್ರತಾಪಶಾಲಿಯಾದ ಸಗರ, ಕೃಶಾಶ್ವ, ಯೌವನಾಶ್ವನಾದ ಮಾಂಧಾತೃ, ಚಿತ್ರಾಶ್ವ, ಸತ್ಯವಾನ್, ದುಷ್ಯಂತ, ಮಹಾಕೀರ್ತಿವಂತನಾದ ಭರತಚಕ್ರವರ್ತಿ,

ಯವನೋ ಜನಕಶ್ಚೈವ ತಥಾ ದೃಢರಥೋ ನೃಪಃ ।
ರಘುರ್ನರವರಶ್ಚೈವ ತಥಾ ದಶರಥೋ ನೃಪಃ ॥೪೪॥

ರಾಮೋ ರಾಕ್ಷಸಹಾ ವೀರಃ ಶಶಬಿಂದುರ್ಭಗೀರಥಃ ।
ಹರಿಶ್ಚಂದ್ರೋ ಮರುತ್ತಶ್ಚ ಜಹ್ನುರ್ಜಾಹ್ನವಿಸೇವಿತಾ ॥೪೫॥

ಯವನ, ಜನಕ, ದೃಢರಥ, ರಘು, ದಶರಥ, ರಾಕ್ಷಸಸಂಹೃತವಾದ ವೀರನಾದ ರಾಮ, ಶಶಬಿಂದು, ಭಗೀರಥ, ಹರಿಶ್ಚಂದ್ರ, ಮರುತ್ತ, ಜಾನ್ಹವಿಯನ್ನು ಸೇವಿಸಿದ ಜಹ್ನು.

ಮಹೋದಯೋ ಹ್ಯಲರ್ಕಶ್ಚ ಐಲಶ್ಚೈವ ನರಾಧಿಪಃ ।
ಕರಂಧಮೋ ನರಶ್ರೇಷ್ಠಃ ಕಧ್ಮೋರಶ್ಚ ನರಾಧಿಪಃ ॥೪೬॥

ದಕ್ಷೋಽಂಬರೀಷಃ ಕುಕುರೋ ರೈವತಶ್ಚ ಮಹಾಯಶಾಃ ।
ಮುಚುಕುಂದಶ್ಚ ರಾಜರ್ಷಿರ್ಮಿತ್ರಭಾನುಃ ಪ್ರಿಯಂಕರಃ ॥೪೭॥

ಮಹೋದಯ, ಅಲರ್ಕ, ಐಲ, ಕರಂಧಮ, ನರಶ್ರೇಷ್ಠನಾದ ಕಧ್ಮೋರ, ದಕ್ಷ, ಅಂಬರೀಷ, ಕುಕುರ, ಮಹಾಯಶಸ್ವಿಯಾದ ರೈವತ, ರಾಜರ್ಷಿಯಾದ ಮುಚುಕುಂದ, ಮಿತ್ರಭಾನು, ಪ್ರಿಯಂಕರ.

ತ್ರಸದಸ್ಯುಸ್ತಥಾ ರಾಜಾ ಶ್ವೇತೋ ರಾಜರ್ಷಿಸತ್ತಮಃ ।
ಮಹಾಭಿಷಶ್ಚ ವಿಖ್ಯಾತೋ ನಿಮಿರಾಜಸ್ತಥಾಽಷ್ಟಕಃ ॥೪೮॥

ಆಯುಃ ಕ್ಷುಪಶ್ಚ ರಾಜರ್ಷಿಃ ಕಕ್ಷೇಯುಶ್ಚ ನರಾಧಿಪಃ ।
ಶಿಬಿರೌಶೀನರಶ್ಚೈವ ಗಯಶ್ಚೈವ ನರಾಧಿಪಃ ॥೪೯॥

ತ್ರಸದಸ್ಯು, ರಾಜರ್ಷಿಶ್ರೇಷ್ಠನಾದ ಶ್ವೇತ, ಪ್ರಖ್ಯಾತನಾದ ಮಹಾಭಿಷಕ್, ನಿಮಿರಾಜ, ಅಷ್ಟಕ, ಆಯು, ರಾಜರ್ಷಿಯಾದ ಕ್ಷುಪ, ಕಕ್ಷೇಯು, ಔಶೀನರನಾದ ಶಿಬಿ, ಗಯ,

ಪ್ರತರ್ದನೋ ದಿವೋದಾಸಃ ಸೌದಾಸಃ ಕೋಸಲೇಶ್ವರಃ ।
ಐಲೋ ನಳಶ್ಚ ರಾಜರ್ಷಿಃ ಭೀಮಶ್ಚೈವ ನರಾಧಿಪಃ ॥೫೦॥

ಹವಿರ್ಧ್ರಶ್ಚ ಪೃಷಧ್ರಶ್ಚ ಪ್ರತೀಪಃ ಶಂತನುಸ್ತಥಾ ।
ಕಕ್ಷಸೇನಶ್ಚ ರಾಜರ್ಷಿರ್ಯೇ ಚಾನ್ಯೇ ನಾನುಕೀರ್ತಿತಾಃ ॥೫೧॥

ಪ್ರತರ್ದನ, ದಿವೋದಾಸ, ಕೋಸಲೇಶ್ವರನಾದ ಸೌದಾಸ, ಐಲ, ರಾಜರ್ಷಿಯಾದ ನಳ, ಭೀಮ, ಹವಿರ್ಧ್ರ, ಪೃಷಧ್ರ, ಪ್ರತೀಪ, ಶಂತನು, ರಾಜರ್ಷಿಯಾದ ಕಕ್ಷಸೇನ - ಇನ್ನೂ ನಾನು ಕೀರ್ತಿಸದ ಅನೇಕ ಚಕ್ರವರ್ತಿಗಳು.

ಮಾ ವಿಘ್ನಂ ಮಾ ಚ ಮೇ ಪಾಪಂ ಮಾ ಚ ಮೇ ಪರಿಪಂಥಿನಃ ।
ಧ್ರುವೋ ಜಯೋ ಮೇ ನಿತ್ಯಂ ಸ್ಯಾತ್ ಪರತ್ರ ಚ ಪರಾ ಗತಿಃ ॥೫೨॥

ಇವರೆಲ್ಲರೂ ನನಗೆ ಯಾವ ವಿಘ್ನವನ್ನೂ ಮಾಡದಿರಲಿ. ನನಗೆ ಯಾವ ಪಾಪವನ್ನೂ ಉಂಟುಮಾಡದಿರಲಿ. ನನಗೆ ಯಾವ ಪ್ರತಿಬಂಧಕವನ್ನೂ ಮಾಡದಿರಲಿ. ನನಗೆ ನಿಶ್ಚಿತವಾಗಿ ಜಯವುಂಟಾಗಲಿ. ಪರಲೋಕದಲ್ಲಿ ಶ್ರೇಷ್ಠಗತಿ ಉಂಟಾಗಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ದೇವರಾಜರ್ಷಿವಂಶಕಥನಂ ನಾಮ
ಚತುಃಪಂಚಾಶೋತ್ತರದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಐವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಐವತ್ತೈದನೆಯ ಅಧ್ಯಾಯ

ಯುಧಿಷ್ಠಿರನ ಹಸ್ತಿನಪುರಪ್ರಯಾಣ

ಜನಮೇಜಯಃ

ಶರತಲ್ಪಗತೇ ಭೀಷ್ಮೇ ಕೌರವಾಣಾಂ ಧುರಂಧರೇ ।
ಶಯಾನೇ ವೀರಶಯನೇ ಪಾಂಡವೈಃ ಸಮುಪಸ್ಥಿತೇ ॥೧॥

ಯುಧಿಷ್ಠಿರೋ ಮಹಾಪ್ರಾಜ್ಞೋ ಮಮ ಪೂರ್ವಪಿತಾಮಹಃ ।
ಧರ್ಮಾಣಾಮಾಗಮಂ ಶ್ರುತ್ವಾ ವಿದಿತ್ವಾ ಧರ್ಮಸಂಶಯಾನ್ ॥೨॥

ದಾನಾನಾಂ ಚ ವಿಧಿಂ ಶ್ರುತ್ವಾ ಛಿನ್ನಧರ್ಮಾರ್ಥಸಂಶಯಃ ।
ಯದನ್ಯದಕರೋದ್ ವಿಪ್ರ ತನ್ಮೇ ಶಂಸಿತುಮರ್ಹಸಿ ॥೩॥

ಜನಮೇಜಯ– ಎಲೈ ವಿಪ್ರರೇ, ಕೌರವರ ಧುರಂಧರರಾದ ಭೀಷ್ಮರು ಶರತಲ್ಪದಲ್ಲಿ ವೀರಶಯನದಲ್ಲಿ ಮಲಗಿರಲು ಪಾಂಡವರು ಎಲ್ಲರೂ ಸಮೀಪದಲ್ಲಿರಲು ಮಹಾಪ್ರಾಜ್ಞನೂ, ನನ್ನ ಪೂರ್ವಪಿತಾಮಹನೂ ಆದ ಯುಧಿಷ್ಠಿರನು ಧರ್ಮಗಳ ಉಪದೇಶವನ್ನು ಕೇಳಿ, ದಾನಗಳ ವಿಧಿಗಳನ್ನೂ ಕೇಳಿ, ಧರ್ಮಾರ್ಥ ಸಂಶಯಗಳನ್ನು ಪರಿಹರಿಸಿಕೊಂಡು ಇನ್ನೇನನ್ನು ಮಾಡಿದನೆಂದು ನನಗೆ ಹೇಳಬೇಕು.

ವೈಶಂಪಾಯನಃ

ಅಭೂನ್ಮುಹೂರ್ತಂ ಸ್ತಿಮಿತಂ ಸರ್ವಂ ತದ್ ರಾಜಮಂಡಲಮ್ ।
ತೂಷ್ಣೀಂಭೂತೇ ತದಾ ಭೀಷ್ಮೇ ಪಟೇ ಚಿತ್ರಮಿವಾರ್ಪಿತಮ್ ॥೪॥

ವೈಶಂಪಾಯನ– ಭೀಷ್ಮರು ಮೌನವನ್ನು ವಹಿಸುತ್ತಿರಲು ನೆರೆದಿದ್ದ ರಾಜಮಂಡಲವೆಲ್ಲವೂ ಬಟ್ಟೆಯಲ್ಲಿ ಬರೆದ ಚಿತ್ರದಂತೆ ನಿಶ್ಶಬ್ದವಾಯಿತು.

ಮುಹೂರ್ತಮಿವ ಚ ಧ್ಯಾತ್ವಾ ವ್ಯಾಸಃ ಸತ್ಯವತೀಸುತಃ ।
ನೃಪಂ ಶಯಾನಂ ಗಾಂಗೇಯಮಿದಮಾಹ ವಚಸ್ತದಾ ॥೫॥

ಸತ್ಯವತೀಸುತರಾದ ವ್ಯಾಸರು ಒಂದು ಮುಹೂರ್ತದಷ್ಟು ಕಾಲ ಚಿಂತಿಸಿ, ಮಲಗಿದ್ದ ಗಂಗಾಪುತ್ರರಾದ ಭೀಷ್ಮರನ್ನು ಕುರಿತು ಈ ಮಾತುಗಳನ್ನು ಆಡಿದರು.

ರಾಜನ್ ಪ್ರಕೃತಿಮಾಪನ್ನಃ ಕುರುರಾಜೋ ಯುಧಿಷ್ಠಿರಃ ।
ಸಹಿತೋ ಭ್ರಾತೃಭಿಃ ಸರ್ವೈಃ ಪಾರ್ಥಿವೈಶ್ಚಾನುಯಾಯಿಭಿಃ ॥೬॥

ಎಲೈ ರಾಜನೇ, ತಮ್ಮಂದಿರಿಂದಲೂ ಮತ್ತು ಅನುಯಾಯಿಗಳಾದ ಎಲ್ಲ ರಾಜರಿಂದಲೂ ಸಹಿತನಾದ, ಕುರುರಾಜನಾದ ಯುಧಿಷ್ಠಿರನು ಸಂಶಯಗಳನ್ನು ಕಳೆದುಕೊಂಡು ನಿಶ್ಚಿಂತನಾಗಿದ್ದಾನೆ.

ಉಪಾಸ್ತೇ ತ್ವಾಂ ನರವ್ಯಾಘ್ರ ಸಹ ಕೃಷ್ಣೇನ ಧೀಮತಾ ।
ತಮಿಮಂ ಪುರಯಾನಾಯ ತ್ವಮನುಜ್ಞಾತುಮರ್ಹಸಿ ॥೭॥

ಎಲೈ ನರವ್ಯಾಘ್ರನೇ, ಮೇಧಾವಿಯಾದ ಕೃಷ್ಣನ ಜೊತೆಯಲ್ಲಿ ಅವನು ನಿನ್ನ ಸಮೀಪದಲ್ಲಿದ್ದಾನೆ. ಅಂತಹ ಇವನಿಗೆ ತನ್ನ ಪಟ್ಟಣಕ್ಕೆ ಹೋಗುವಂತೆ ನೀನು ಅನುಮತಿಯನ್ನು ಕೊಡಬೇಕು (ಎಂದು ಹೇಳಿದರು).

ಏವಮುಕ್ತೋ ಭಗವತಾ ವ್ಯಾಸೇನ ಪೃಥಿವೀಪತಿಃ ।
ಯುಧಿಷ್ಠಿರಂ ಸಹಾಮಾತ್ಯಮನುಜಜ್ಞೇ ನದೀಸುತಃ ॥೮॥

ಭಗವಂತನಾದ ವ್ಯಾಸರಿಂದ ಹೀಗೆ ಹೇಳಲ್ಪಟ್ಟ ಪೃಥಿವೀಪತಿಯಾದ, ಗಂಗಾ ಪುತ್ರರಾದ ಭೀಷ್ಮರು ಅಮಾತ್ಯಸಹಿತನಾದ ಯುಧಿಷ್ಠಿರನಿಗೆ ನಗರಕ್ಕೆ ಹಿಂದಿರುಗುವುದಕ್ಕೆ ಅನುಮತಿಯನ್ನು ನೀಡಿದರು.

ಉವಾಚ ಚೈನಂ ಮಧುರಂ ತತಃ ಶಾಂತನವೋ ನೃಪಃ ।
ಪ್ರವಿಶಸ್ವ ಪುರಂ ರಾಜನ್ ವ್ಯೇತು ತೇ ಮಾನಸೋ ಜ್ವರಃ ॥೯॥

ಶಂತನು ಪುತ್ರರಾದ ಭೀಷ್ಮರು ಮಧುರವಾದ ಮಾತುಗಳಿಂದ ಅವನನ್ನು ಕುರಿತು ರಾಜನೇ, ಪಟ್ಟಣಕ್ಕೆ ಹಿಂದಿರುಗು. ನಿನ್ನ ಮನಸ್ಸಿನ ಆತಂಕವೆಲ್ಲವೂ ದೂರವಾಗಲಿ.

ಯಜಸ್ವ ವಿವಿಧೈರ್ಯಜ್ಞೈರ್ಬಹ್ವನ್ನೈಃ ಸಾಪ್ತದಕ್ಷಿಣೈಃ ।
ಯಯಾತಿರಿವ ರಾಜೇಂದ್ರ ಶ್ರದ್ಧಾದಮಪುರಃಸರಃ ॥೧೦॥

ಎಲೈ ರಾಜೇಂದ್ರನೇ, ಬಹಳ ಅನ್ನದಾನವನ್ನೂ, ದಕ್ಷಿಣೆಯನ್ನು ಕೊಟ್ಟು ಯಯಾತಿಯಂತೆ ಶ್ರದ್ಧಾ ಮತ್ತು ದಮದಿಂದ ಕೂಡಿದವನಾಗಿ ಯಜ್ಞಗಳನ್ನು ಆಚರಿಸು.

ಕ್ಷತ್ರಧರ್ಮರತಃ ಪಾರ್ಥ ಪಿತೄನ್ ದೇವಾಂಶ್ಚ ತರ್ಪಯ ।
ಶ್ರೇಯಸಾ ಯೋಕ್ಷ್ಯಸೇ ಚೈವ ವ್ಯೇತು ತೇ ಮಾನಸೋ ಜ್ವರಃ ॥೧೧॥

ಎಲೈ ಪಾರ್ಥನೇ, ಕ್ಷತ್ರಿಯಧರ್ಮದಲ್ಲಿ ರತನಾಗಿ ಪಿತೃಗಳನ್ನೂ ಮತ್ತು ದೇವತೆಗಳನ್ನೂ ತೃಪ್ತಿಪಡಿಸು. ನಿನಗೆ ಶ್ರೇಯಸ್ಸು ಉಂಟಾಗುವುದು. ನಿನ್ನ ಮನಸ್ಸಿನ ಆತಂಕವನ್ನು ಬಿಡು.

ರಂಜಯಸ್ವ ಪ್ರಜಾಃ ಸರ್ವಾಃ ಪ್ರಕೃತೀಃ ಪರಿಸಾಂತ್ವಯ ।
ಸುಹೃದಃ ಫಲಸತ್ಕಾರೈರಭ್ಯರ್ಚಯ ಯಥಾರ್ಹತಃ ॥೧೨॥

ಎಲ್ಲ ಪ್ರಜೆಗಳನ್ನೂ ಸಂತೋಷಪಡಿಸು. ಪ್ರಜೆಗಳನ್ನು ಸಮಾಧಾನಪಡಿಸು. ಸುಹೃದರೆಲ್ಲರನ್ನೂ ಯಥಾಯೋಗ್ಯವಾಗಿ ಫಲ, ಸತ್ಕಾರಗಳಿಂದ ಸಮ್ಮಾನಿಸು.

ಅನು ತ್ವಾಂ ತಾತ ಜೀವಂತು ಮಿತ್ರಾಣಿ ಸುಹೃದಸ್ತಥಾ ।
ಚೈತ್ಯಸ್ಥಾನೇ ಸ್ಥಿತಂ ವೃಕ್ಷಂ ಫಲವಂತಮಿವ ದ್ವಿಜಾಃ ॥೧೩॥

ಎಲೈ ಪ್ರೀತಿಪಾತ್ರನೇ, ನಿನ್ನ ಸ್ನೇಹಿತರೂ ಮತ್ತು ಸುಹೃದರು ನಿನ್ನನ್ನು, ದೇವಾಲಯದಲ್ಲಿರುವ ಫಲಭರಿತ ವೃಕ್ಷವನ್ನು ಪಕ್ಷಿಗಳು ಉಪಜೀವಿಸುವಂತೆ ಉಪಜೀವಿಸಲಿ.

ಆಗಂತವ್ಯಂ ಚ ಭವತಾ ಸಮಯೇ ಮಮ ಪಾರ್ಥಿವ ।
ವಿನಿವೃತ್ತೇ ದಿನಕರೇ ಪ್ರವೃತ್ತೇ ಚೋತ್ತರಾಯಣೇ ॥೧೪॥

ಎಲೈ ಪಾರ್ಥಿವನೇ, ಸೂರ್ಯನು ದಿಕ್ಕನ್ನು ಬದಲಾಯಿಸಿ ಉತ್ತರಾಯಣದಲ್ಲಿ ಪ್ರವೃತ್ತನಾದಾಗ ನನ್ನ ಸಮಯಕ್ಕೆ (ಸನಿಹಕ್ಕೆ) ನೀನು ಬರಬೇಕು.

ತಥೇತ್ಯುಕ್ತ್ವಾ ತು ಕೌಂತೇಯಃ ಸೋಽಭಿವಾದ್ಯ ಪಿತಾಮಹಮ್ ।
ಪ್ರಯಯೌ ಸಪರೀವಾರೋ ನಗರಂ ನಾಗಸಾಹ್ವಯಮ್ ॥೧೫॥

ಕೌಂತೇಯನಾದ ಯುಧಿಷ್ಠಿರನು ಹಾಗೆಯೇ ಆಗಲಿ ಎಂದು ಹೇಳಿ ಪಿತಾಮಹನನ್ನು ನಮಸ್ಕರಿಸಿ ಪರಿವಾರ ಸಹಿತನಾಗಿ ಹಸ್ತಿನಾವತಿಗೆ ಹೊರಟನು.

ಧೃತರಾಷ್ಟ್ರಂ ಪುರಸ್ಕೃತ್ಯ ಗಾಂಧಾರೀಂ ಚ ಪತಿವ್ರತಾಮ್ ।
ಸಹ ತೈರ್ಋಷಿಭಿಃ ಸರ್ವೈರ್ಭ್ರಾತೃಭಿಃ ಕೇಶವೇನ ಚ ॥೧೬॥

ಪೌರಜಾನಪದೈಶ್ಚೈವ ಮಂತ್ರಿವೃದ್ಧೈಶ್ಚ ಪಾರ್ಥಿವಃ ।
ಪ್ರವಿವೇಶ ಕುರುಶ್ರೇಷ್ಠ ಪುರಂ ವಾರಣಸಾಹ್ವಯಮ್ ॥೧೭॥

ಎಲೈ ಕುರುಶ್ರೇಷ್ಠನೇ, ಅವನು ಧೃತರಾಷ್ಟ್ರನನ್ನೂ, ಪತಿವ್ರತೆಯಾದ ಗಾಂಧಾರಿಯನ್ನೂ ಮುಂದೆ ಮಾಡಿಕೊಂಡು ಎಲ್ಲಾ ಸಹೋದರರ, ಋಷಿಗಳ ಮತ್ತು ಕೃಷ್ಣನ ಜೊತೆಯಲ್ಲಿ, ಹಾಗೆಯೇ ಪೌರ-ಜಾನಪದರ ಮತ್ತು ಮಂತ್ರಿವೃದ್ಧರ ಜೊತೆಯಲ್ಲಿ ಹಸ್ತಿನಾವತಿ ಪಟ್ಟಣವನ್ನು ಪ್ರವೇಶಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಯುಧಿಷ್ಠಿರಪುರಪ್ರವೇಶೋ ನಾಮ
ಪಂಚಪಂಚಾಶೋತ್ತರದ್ವಿಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಐವತ್ತೈದನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ದಾನಧರ್ಮಪರ್ವ ॥

★ ★ ★ ★ ★

೨. ಭೀಷ್ಮಸ್ವರ್ಗಾರೋಹಣಪರ್ವ

ಇನ್ನೂರ ಐವತ್ತಾರನೆಯ ಅಧ್ಯಾಯ

ಭೀಷ್ಮರಿಂದ ದೇಹತ್ಯಾಗಕ್ಕೆ ಅನುಮತಿಯ ಪ್ರಾರ್ಥನೆ

ವೈಶಂಪಾಯನಃ

ತತಃ ಕುಂತೀಸುತೋ ರಾಜಾ ಪೌರಜಾನಪದಂ ಜನಮ್ ।
ಪೂಜಯಿತ್ವಾ ಯಥಾನ್ಯಾಯಂ ಅನುಜಜ್ಞೇ ಗೃಹಾನ್ ಪ್ರತಿ ॥೧॥

ಸಾಂತ್ವಯಾಮಾಸ ನಾರೀಶ್ಚ ಹತವೀರಾ ಹತೇಶ್ವರಾಃ ।
ವಿಪುಲೈರರ್ಥದಾನೈಶ್ಚ ತದಾ ಪಾಂಡುಸುತೋ ನೃಪಃ ॥೨॥

ವೈಶಂಪಾಯನ– ಅನಂತರ ಕುಂತೀಪುತ್ರನಾದ ಯುಧಿಷ್ಠಿರನು ಪೌರಜಾನಪದರನ್ನು ಯಥಾಯೋಗ್ಯವಾಗಿ ಪೂಜಿಸಿ, ಅವರ ಮನೆಗೆ ಹಿಂದಿರುಗಲು ಅನುಮತಿಯನ್ನು ನೀಡಿದನು. ಪತಿಗಳನ್ನೂ, ಮನೆಯ ಒಡೆಯರನ್ನೂ ಕಳೆದುಕೊಂಡ ನಾರಿಯರನ್ನು ಪಾಂಡುಸುತನಾದ ಯುಧಿಷ್ಠಿರನು ವಿಪುಲವಾದ ಧನ-ದಾನಗಳಿಂದ ಸಮಾಧಾನಪಡಿಸಿದನು.

ಸೋಽಭಿಷಿಕ್ತೋ ಮಹಾಪ್ರಾಜ್ಞಃ ಪ್ರಾಪ್ಯ ರಾಜ್ಯಂ ಯುಧಿಷ್ಠಿರಃ ।
ಅವಸ್ಥಾಪ್ಯ ನರಶ್ರೇಷ್ಠಃ ಸರ್ವಾಃ ಸ್ವಪ್ರಕೃತೀಸ್ತದಾ ॥೩॥

ದ್ವಿಜೇಭ್ಯೋ ಬಲಮುಖ್ಯೇಭ್ಯೋ ನೈಗಮೇಭ್ಯಶ್ಚ ಸರ್ವಶಃ ।
ಪ್ರತಿಗೃಹ್ಯಾಶಿಷೋ ಮುಖ್ಯಾಸ್ತದಾ ಧರ್ಮಭೃತಾಂ ವರಃ ॥೪॥

ಉಷಿತ್ವಾ ಶರ್ವರೀಃ ಶ್ರೀಮಾನ್ ಪಂಚಾಶನ್ನಗರೋತ್ತಮೇ ।
ಸಮಯಂ ಕೌರವಾಗ್ರ್ಯಸ್ಯ ಸಸ್ಮಾರ ಪುರುಷರ್ಷಭಃ ॥೫॥

ಮಹಾಪ್ರಾಜ್ಞನಾದ ಯುಧಿಷ್ಠಿರನು ಪಟ್ಟಾಭಿಷಿಕ್ತನಾಗಿ ರಾಜ್ಯವನ್ನು ಪಡೆದು ಎಲ್ಲ ಪ್ರಜೆಗಳನ್ನು ಅವರವರ ಸ್ಥಾನಗಳಲ್ಲಿ ಇರಿಸಿ, ಬ್ರಾಹ್ಮಣರಿಂದಲೂ, ಸೇನಾ ನಾಯಕರಿಂದಲೂ, ವೇದಜ್ಞರಿಂದಲೂ ಶ್ರೇಷ್ಠವಾದ ಆಶೀರ್ವಾದವನ್ನು ಪಡೆದು ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಅವನು ಶ್ರೇಷ್ಠ ಪಟ್ಟಣವಾದ ಹಸ್ತಿನಾವತಿಯಲ್ಲಿ ಐವತ್ತು ರಾತ್ರಿಗಳನ್ನು ಕಳೆದು ಕೌರವಶ್ರೇಷ್ಠನಾದ ಭೀಷ್ಮರ ಪ್ರಯಾಣ ಸಮಯವನ್ನು ಸ್ಮರಿಸಿದನು.

ಸ ನಿರ್ಯಯೌ ಗಜಪುರಾದ್ ಯಾಜಕೈಃ ಪರಿವಾರಿತಃ ।
ದೃಷ್ಟ್ವಾ ನಿವೃತ್ತಮಾದಿತ್ಯಂ ಪ್ರವೃತ್ತಂ ಚೋತ್ತರಾಯಣಮ್ ॥೬॥

ಸೂರ್ಯನು ತನ್ನ ದಿಕ್ಕನ್ನು ಬದಲಿಸಿ ಉತ್ತರಾಯಣದಲ್ಲಿ ಪ್ರವೃತ್ತನಾಗಿರುವುದನ್ನು ನೋಡಿ ಪುರೋಹಿತರಿಂದ ಪರಿವಾರಿತನಾಗಿ ಹಸ್ತಿನಪುರದಿಂದ ಹೊರಟನು.

ಘೃತಂ ಮಾಲ್ಯಂ ಚ ಗಂಧಾಂಶ್ಚ ಕ್ಷೌಮಾಣಿ ಚ ಯುಧಿಷ್ಠಿರಃ ।
ಚಂದನಾಗರುಮುಖ್ಯಾನಿ ತಥಾ ಕಾಲಾಗರೂಣಿ ಚ ॥೭॥

ಪ್ರಸ್ಥಾಪ್ಯ ಪೂರ್ವಂ ಕೌಂತೇಯೋ ಭೀಷ್ಮಸಂಸ್ಕರಣಾಯ ಚ ।
ಮಾಲ್ಯಾನಿ ಚ ಮಹಾರ್ಹಾಣಿ ರತ್ನಾನಿ ವಿವಿಧಾನಿ ಚ ॥೮॥

ಧೃತರಾಷ್ಟ್ರಂ ಪುರಸ್ಕೃತ್ಯ ಗಾಂಧಾರೀಂ ಚ ಯಶಸ್ವಿನೀಮ್ ।
ಮಾತರಂ ಚ ಪೃಥಾಂ ಧೀಮಾನ್ ಭ್ರಾತೄಂಶ್ಚ ಪುರುಷರ್ಷಭಃ ॥೯॥

ಜನಾರ್ದನೇನಾನುಗತೋ ವಿದುರೇಣ ಚ ಧೀಮತಾ ।
ಯುಯುತ್ಸುನಾ ಚ ಕೌರವ್ಯೋ ಯುಯುಧಾನೇನ ಚಾಭಿಭೋ ॥೧೦॥

ಮಹತಾ ರಾಜಭೋಗ್ಯೇನ ಪರಿಬರ್ಹೇಣ ಸಂವೃತಃ ।
ಸ್ತೂಯಮಾನೋ ಮಹಾರಾಜ ಭೀಷ್ಮಸ್ಯಾಗ್ನೀನನುವ್ರಜನ್ ॥೧೧॥

ನಿಶ್ಚಕ್ರಾಮ ಪುರಾತ್ ತಸ್ಮಾದ್ ಯಥಾ ದೇವಪತಿಸ್ತಥಾ ।
ಆಸಸಾದ ಕುರುಕ್ಷೇತ್ರೇ ತತಃ ಶಾಂತನವಂ ನೃಪಮ್ ॥೧೨॥

ಕೌಂತೇಯನಾದ ಯುಧಿಷ್ಠಿರನು ಘೃತ, ಮಾಲ್ಯ, ಗಂಧಗಳು, ರೇಷ್ಮೆ ವಸ್ತ್ರಗಳು, ಚಂದನ, ಅಗರು, ಕಾಲಾಗರು ಮುಂತಾದವುಗಳನ್ನು ಮೊದಲೇ ಕಳುಹಿಸಿ, ಬೆಲೆ ಬಾಳುವ ಮಾಲೆಗಳನ್ನು, ವಿವಿಧವಾದ ರತ್ನಗಳನ್ನು ತೆಗೆದುಕೊಂಡು ಧೃತರಾಷ್ಟ್ರನನ್ನು, ಯಶಸ್ವಿನಿಯಾದ ಗಾಂಧಾರಿಯನ್ನು, ತಾಯಿಯಾದ ಕುಂತಿಯನ್ನು, ಸಹೋದರರನ್ನು ಮುಂದೆ ಮಾಡಿಕೊಂಡು, ಪುರುಷಶ್ರೇಷ್ಠನಾದ ಅವನು ಜನಾರ್ದನನಿಂದಲೂ, ಮೇಧಾವಿಯಾದ ವಿದುರನಿಂದಲೂ, ಯುಯುತ್ಸುವಿನಿಂದಲೂ, ಯುಯುಧಾನನಿಂದಲೂ ಹಿಂಬಾಲಿಸಲ್ಪಟ್ಟು, ರಾಜಭೋಗ್ಯವಾದ ದೊಡ್ಡ ಉಡುಗೊರೆಗಳನ್ನು ತೆಗೆದುಕೊಂಡು ಭೀಷ್ಮರ ಅಗ್ನಿಯ ಹಿಂದೆ ಹೋಗುತ್ತಾ ಸ್ತೋತ್ರ ಮಾಡಲ್ಪಟ್ಟವನಾಗಿ ದೇವಪತಿಯಾದ ಇಂದ್ರನಂತೆ ಆ ಪಟ್ಟಣದಿಂದ ಹೊರಟನು. ಅನಂತರ ಕುರುಕ್ಷೇತ್ರದಲ್ಲಿ ಶಂತನು ಪುತ್ರರಾದ ಭೀಷ್ಮರನ್ನು ಸಮೀಪಿಸಿದನು.

ಉಪಾಸ್ಯಮಾನಂ ವ್ಯಾಸೇನ ಪಾರಾಶರ್ಯೇಣ ಧೀಮತಾ ।
ನಾರದೇನ ಚ ರಾಜರ್ಷೇ ದೇವಲೇನಾಸಿತೇನ ಚ ॥೧೩॥

ಹತಶಿಷ್ಟೈರ್ನರೈಶ್ಚಾನ್ಯೈ ರ್ನಾನಾದೇಶಸಮಾಗತೈಃ ।
ರಕ್ಷಿಭಿಶ್ಚ ಮಹಾತ್ಮಾನಂ ರಕ್ಷ್ಯಮಾಣಂ ಸಮಂತತಃ ॥೧೪॥

ಶಯಾನಂ ವೀರಶಯನೇ ದದರ್ಶ ನೃಪತಿಸ್ತತಃ ।
ತತೋ ರಥಾದವಾರೋಹದ್ ಭ್ರಾತೃಭಿಃ ಸಹ ಧರ್ಮರಾಟ್ ॥೧೫॥

ಎಲೈ ರಾಜರ್ಷಿಯೇ, ಮೇಧಾವಿಗಳಾದ, ಪರಾಶರ ಪುತ್ರರಾದ ವ್ಯಾಸರಿಂದಲೂ, ನಾರದರಿಂದಲೂ, ದೇವಲರಿಂದಲೂ, ಅಸಿತರಿಂದಲೂ ಉಪಾಸ್ಯಮಾನರಾದ ಅಳಿದುಳಿದ ನಾನಾ ದೇಶದ ರಾಜರಿಂದಲೂ, ಕಾವಲುಗಾರರಿಂದಲೂ ಎಲ್ಲ ಕಡೆಗಳಿಂದಲೂ ರಕ್ಷಿಸಲ್ಪಡುತ್ತಿದ್ದ, ವೀರಶಯನದಲ್ಲಿ ಮಲಗಿದ್ದ ಮಹಾತ್ಮರಾದ ಭೀಷ್ಮರನ್ನು ನೋಡಿದನು. ಆಗ ಧರ್ಮರಾಜನು ಸಹೋದರರ ಜೊತೆಯಲ್ಲಿ ರಥದಿಂದ ಕೆಳಗೆ ಇಳಿದನು.

ಅಭಿವಾದ್ಯಾಥ ಕೌಂತೇಯಃ ಪಿತಾಮಹಮರಿಂದಮಮ್ ।
ದ್ವೈಪಾಯನಾದೀನ್ ವಿಪ್ರಾಂಶ್ಚ ತೈಶ್ಚ ಪ್ರತ್ಯಭಿನಂದಿತಃ ॥೧೬॥

ಕೌಂತೇಯನು ಅರಿಂದಮರಾದ, ಪಿತಾಮಹರಾದ ಭೀಷ್ಮರಿಗೆ ನಮಸ್ಕರಿಸಿ, ದ್ವೈಪಾಯನಾದಿ ಬ್ರಾಹ್ಮಣರಿಗೂ ನಮಸ್ಕರಿಸಿ, ಅವರಿಂದ ಪ್ರತಿಯಾಗಿ ಅಭಿನಂದಿಸಲ್ಪಟ್ಟನು.

ಋತ್ವಿಗ್ಭಿರ್ಬ್ರಹ್ಮಕಲ್ಪೈಶ್ಚ ಭ್ರಾತೃಭಿಶ್ಚ ಸಹಾಚ್ಯುತಃ ।
ಆಸಾದ್ಯ ಶರತಲ್ಪಸ್ಥಮೃಷಿಭಿಃ ಪರಿವಾರಿತಮ್ ॥೧೭॥

ಅಬ್ರವೀದ್ ಭರತಶ್ರೇಷ್ಠಂ ಧರ್ಮರಾಜೋ ಯುಧಿಷ್ಠಿರಃ ।
ಭ್ರಾತೃಭಿಃ ಸಹ ಕೌರವ್ಯ ಶಯಾನಂ ನಿಮ್ನಗಾಸುತಮ್ ॥೧೮॥

ಬ್ರಹ್ಮಸದೃಶರಾದ ಋತ್ವಿಜರಿಂದಲೂ, ಸಹೋದರರಿಂದಲೂ ಕೂಡಿದ, ತನ್ನ ಗುಣಗಳಿಂದ ಚ್ಯುತನಾಗದ ಅವನು ಋಷಿಗಳಿಂದ ಸುತ್ತುವರಿಯಲ್ಪಟ್ಟ ಶರತಲ್ಪಗತರಾದ ಭೀಷ್ಮರನ್ನು ಸಮೀಪಿಸಿ, ಎಲೈ ಕೌರವ್ಯನೇ, ಮಲಗಿದ್ದ ಗಂಗಾಸುತರಾದ ಭೀಷ್ಮರನ್ನು ಕುರಿತು ಸಹೋದರರ ಜೊತೆಯಲ್ಲಿ ಮಾತನಾಡಿದನು.

ಯುಧಿಷ್ಠಿರೋಽಹಂ ನೃಪತೇ ನಮಸ್ತೇ ಜಾಹ್ನವೀಸುತ ।
ಶೃಣೋಷಿ ಚೇನ್ಮಹಾಬಾಹೋ ಬ್ರೂಹಿ ಕಿಂ ಕರವಾಣಿ ತೇ ॥೧೯॥

ಗಂಗಾಸುತನೇ, ರಾಜನೇ, ಮಹಾಬಾಹುವೇ, ಯುಧಿಷ್ಠಿರನಾದ ನಾನು ಬಂದಿದ್ದೇನೆ. ನಿಮಗಾಗಿ ನಾನು ಏನು ಮಾಡಬೇಕೆಂದು ತಿಳಿಸಿರಿ.

ಪ್ರಾಪ್ತೋಽಸ್ಮಿ ಸಮಯೇ ರಾಜನ್ನಗ್ನೀನಾದಾಯ ತೇ ವಿಭೋ ।
ಆಚಾರ್ಯಾ ಬ್ರಾಹ್ಮಣಾಶ್ಚೈವ ಋತ್ವಿಜೋ ಭ್ರಾತರಶ್ಚ ಮೇ ॥೨೦॥

ಪುತ್ರಶ್ಚ ತೇ ಮಹಾತೇಜಾ ಧೃತರಾಷ್ಟ್ರೋ ಜನೇಶ್ವರಃ ।
ಉಪಸ್ಥಿತಃ ಸಹಾಮಾತ್ಯೋ ವಾಸುದೇವಶ್ಚ ವೀರ್ಯವಾನ್ ॥೨೧॥

ಹತಶಿಷ್ಟಾಶ್ಚ ರಾಜಾನಃ ಸರ್ವೇ ಚ ಕುರುಜಾಂಗಲಾಃ ।
ತಾನ್ ಪಶ್ಯ ಕುರುಶಾರ್ದೂಲ ಸಮುನ್ಮೀಲ್ಯ ಚ ಲೋಚನೇ ॥೨೨॥

ನೀನು ಹೇಳಿದ ಸಮಯದಲ್ಲಿ ನಿನ್ನ ಅಗ್ನಿಯನ್ನು ತೆಗೆದುಕೊಂಡು ಬಂದಿದ್ದೇನೆ. ಆಚಾರ್ಯರು, ಬ್ರಾಹ್ಮಣರು, ಋತ್ವಿಜರು, ನನ್ನ ತಮ್ಮಂದಿರು, ನಿನ್ನ ಪುತ್ರನಾದ ಮಹಾತೇಜಸ್ವಿಯಾದ, ಅಮಾತ್ಯರಿಂದ ಕೂಡಿದ ಧೃತರಾಷ್ಟ್ರ ರಾಜ, ಪರಾಕ್ರಮಶಾಲಿಯಾದ ಕೃಷ್ಣ ಅಳಿದುಳಿದ ರಾಜರು, ಕುರುಜಾಂಗಲದ ಎಲ್ಲಾ ಪ್ರಜೆಗಳೂ ಬಂದಿದ್ದಾರೆ. ಎಲೈ ಕುರುಶಾರ್ದೂಲನೇ ಕಣ್ಣುಗಳನ್ನು ತೆರೆದು ಅವರನ್ನು ನೋಡು.

ಯಚ್ಚೇಹ ಕಿಂಚಿತ್ ಕರ್ತವ್ಯಂ ತತ್ಸರ್ವಂ ಪ್ರಾಪಿತಂ ಮಯಾ ।
ಯಥೋಕ್ತಂ ಭವತಾ ಕಾಲೇ ಸರ್ವಮೇವ ಚ ತತ್ ಕೃತಮ್ ॥೨೩॥

ನೀನು ಹೇಳಿದಂತೆ ನಾನು ಎಲ್ಲವನ್ನೂ ಅಣಿಗೊಳಿಸಿದ್ದೇನೆ. ನೀನು ಹೇಳಿದ ಕಾಲದಲ್ಲಿ ಸಿದ್ಧಪಡಿಸಬೇಕಾದ ಎಲ್ಲವನ್ನೂ ಸಿದ್ಧಪಡಿಸಿದ್ದೆನೆ (ಎಂದು ಹೇಳಿದನು).

ಏವಮುಕ್ತಸ್ತು ಗಾಂಗೇಯಃ ಕುಂತೀಪುತ್ರೇಣ ಧೀಮತಾ ।
ದದರ್ಶ ಭಾರತಾನ್ ಸರ್ವಾನ್ ಸ್ಥಿತಾನ್ ಸಂಪರಿವಾರ್ಯ ತಮ್ ॥

ಮೇಧಾವಿಯಾದ ಕುಂತೀಪುತ್ರನಾದ ಯುಧಿಷ್ಠಿರನಿಂದ ಹೀಗೆ ಹೇಳಲ್ಪಟ್ಟ ಭೀಷ್ಮರು ತಮ್ಮನ್ನು ಸುತ್ತುವರಿದು ನಿಂತಿದ್ದ ಎಲ್ಲಾ ಭಾರತರನ್ನೂ ನೋಡಿದರು.

ತತಶ್ಚಲವಲಿರ್ಭೀಷ್ಮಃ ಪ್ರಗೃಹ್ಯ ವಿಪುಲಂ ಭುಜಮ್ ।
ಓಘಮೇಘಸ್ವನೋ ವಾಗ್ಮೀ ಕಾಲೇ ವಚನಮಬ್ರವೀತ್ ॥೨೫॥

ಆಗ ಕೈಗಳು ನಡುಗುತ್ತಿದ್ದ ಭೀಷ್ಮರು ತಮ್ಮ ವಿಸ್ತಾರವಾದ ಭುಜವನ್ನು ಹಿಡಿದುಕೊಂಡು, ವಾಗ್ಮಿಗಳಾದ ಅವರು ಆ ಕಾಲದಲ್ಲಿ ಮೇಘಗಂಭೀರವಾದ ಮಾತನ್ನಾಡಿದರು.

ದಿಷ್ಟ್ಯಾ ಪ್ರಾಪ್ತೋಽಸಿ ಕೌಂತೇಯ ಸಹಾಮಾತ್ಯೋ ಯುಧಿಷ್ಠಿರ ।
ಪರಿವೃತ್ತೋ ಹಿ ಭಗವಾನ್ ಸಹಸ್ರಾಂಶುರ್ದಿವಾಕರಃ ॥೨೬॥

ಕೌಂತೇಯನೇ, ಯುಧಿಷ್ಠಿರನೇ, ದೇವರ ದಯೆಯಿಂದ ನೀನು ಅಮಾತ್ಯ ಸಹಿತನಾಗಿ ಬಂದಿದ್ದೀಯೆ. ಸಹಸ್ರಾಂಶುವಾದ ಪೂಜ್ಯನಾದ ಸೂರ್ಯನು ದಿಕ್ಕನ್ನು ಬದಲಿಸಿದ್ದಾನೆ.

ಅಷ್ಟಪಂಚಶತಂ ರಾತ್ರ್ಯಃ ಶಯಾನಸ್ಯಾದ್ಯ ಮೇ ಗತಾಃ ।
ಶರೇಷು ನಿಶಿತಾಗ್ರೇಷು ಯಥಾ ವರ್ಷಶತಂ ತಥಾ ॥೨೭॥

ತೀಕ್ಷ್ಣವಾದ ಬಾಣಗಳ ತುದಿಗಳ ಮೇಲೆ ಮಲಗಿರುವ ನನಗೆ ಈ ದಿನದವರೆಗೆ ಐವತ್ತೆಂಟು ರಾತ್ರಿಗಳು ನೂರು ವರ್ಷಗಳಂತೆ ಕಳೆದಿದೆ.

ಮಾಘೋಽಯಂ ಸಮನುಪ್ರಾಪ್ತೋ ಮಾಸಃ ಪುಣ್ಯೋ ಯುಧಿಷ್ಠಿರ ।
ತ್ರಿಭಾಗಶೇಷಃ ಪಕ್ಷೋಽಯಂ ಶುಕ್ಲೋ ಭವಿತುಮರ್ಹತಿ ॥೨೮॥

ಯುಧಿಷ್ಠಿರನೇ, ಪುಣ್ಯಪ್ರದವಾದ ಈ ಮಾಘಮಾಸವು ಪ್ರಾಪ್ತವಾಗಿದೆ. ಪಕ್ಷದ ಮೂರನೆಯ ಒಂದು ಭಾಗ ಉಳಿದಿರುವ ಈ ದಿನವು ಶುಕ್ಲಪಕ್ಷದ ಅಷ್ಟಮಿಯಾಗಬೇಕು (ಪೌರ್ಣಮಾಸಿಯಿಂದ ಮಾಸ ಗಣನೆಯ ದೃಷ್ಟಿಯಿಂದ ಶುಕ್ಲ ಪಕ್ಷದ ಅಷ್ಟಮಿಯಾಗುತ್ತದೆ).

ಏವಮುಕ್ತ್ವಾ ತು ಗಾಂಗೇಯೋ ಧರ್ಮಪುತ್ರಂ ಯುಧಿಷ್ಠಿರಮ್ ।
ಧೃತರಾಷ್ಟ್ರಮಥಾಮಂತ್ರ್ಯ ಕಾಲೇ ವಚನಮಬ್ರವೀತ್ ॥೨೯॥

ಭೀಷ್ಮರು ಧರ್ಮಪುತ್ರನಾದ ಯುಧಿಷ್ಠಿರನನ್ನುಕುರಿತು ಹೀಗೆ ಹೇಳಿ, ಧೃತರಾಷ್ಟ್ರನನ್ನು ಹತ್ತಿರಕ್ಕೆ ಕರೆದು ಆ ಕಾಲದಲ್ಲಿ ಮಾತನಾಡಿದರು.

ರಾಜನ್ ವಿದಿತಧರ್ಮೋಽಸಿ ಸುನಿರ್ಣೀತಾರ್ಥಸಂಶಯಃ ।
ಬಹುಶ್ರುತಾ ಹಿ ತೇ ವಿಪ್ರಾ ಬಹವಃ ಪರ್ಯುಪಾಸಿತಾಃ ॥೩೦॥

ರಾಜನೇ, ನೀನು ಧರ್ಮಗಳನ್ನು ತಿಳಿದಿದ್ದೀಯೆ. ಅರ್ಥ-ಸಂಶಯಗಳ ಒಳ್ಳೆಯ ನಿರ್ಣಯಗಳನ್ನು ಬಲ್ಲೆ. ನೀನು ಬಹುಶ್ರುತರಾದ ಅನೇಕ ವಿಪ್ರರನ್ನು ಉಪಾಸನೆ ಮಾಡಿದ್ದೀಯೆ.

ವೇದಶಾಸ್ತ್ರಾಣಿ ಸರ್ವಾಣಿ ಧರ್ಮಾಂಶ್ಚ ಮನುಜೇಶ್ವರ ।
ವೇದಾಂಶ್ಚ ಚತುರಃ ಸಾಂಗಾನ್ ಅಖಿಲೇನೈವಬುದ್ಧ್ಯಥಾಃ ॥೩೧॥

ಎಲೈ ಮನುಜೇಶ್ವರನೇ, ನೀನು ಎಲ್ಲ ವೇದಶಾಸ್ತ್ರಗಳನ್ನೂ, ಧರ್ಮಶಾಸ್ತ್ರಗಳನ್ನೂ, ಸಾಂಗವಾದ ನಾಲ್ಕು ವೇದಗಳನ್ನೂ ಸಂಪೂರ್ಣವಾಗಿ ತಿಳಿದಿದ್ದೀಯೆ.

ನ ಶೋಚಿತವ್ಯಂ ಕೌರವ್ಯ ಭವಿತವ್ಯಂ ಹಿ ತತ್ ತಥಾ ।
ಶ್ರುತಂ ದೇವರಹಸ್ಯಂ ತೇ ಕೃಷ್ಣದ್ವೈಪಾಯನಾದಪಿ ॥೩೨॥

ಕೌರವ್ಯನೇ, ಶೋಕಪಡಬಾರದು. ಆಗಬೇಕಾದುದು ಹಾಗೆಯೇ ಆಗುತ್ತದೆ. ಕೃಷ್ಣದ್ವೈಪಾಯನರಿಂದ ನೀನು ದೇವರಹಸ್ಯವನ್ನು ಕೇಳಿದ್ದೀಯೆ.

ಯಥಾ ಪಾಂಡೋಃ ಸುತಾ ರಾಜಂಸ್ತಥೈವ ತವ ಧರ್ಮತಃ ।
ತಾನ್ ಪಾಲಯ ಸ್ಥಿತೋ ಧರ್ಮೇ ಗುರುಶುಶ್ರೂಷಣೇ ರತಾನ್ ॥೩೩॥

ಎಲ್ಲೆ ರಾಜನೇ, ಪಾಂಡವರು ಹೇಗೆ ಪಾಂಡುವಿನ ಮಕ್ಕಳೋ ಹಾಗೆಯೇ ಧರ್ಮದ ದೃಷ್ಟಿಯಿಂದ ನಿನ್ನ ಮಕ್ಕಳೂ ಆಗಿದ್ದಾರೆ. ಗುರುಸೇವೆಯಲ್ಲಿ ನಿರತರಾದ ಅವರನ್ನು ಧರ್ಮದಿಂದ ಪಾಲಿಸು.

ಧರ್ಮರಾಜೋ ಹಿ ಶುದ್ಧಾತ್ಮಾ ನಿದೇಶೇ ಸ್ಥಾಸ್ಯತೇ ತವ ।
ಆನೃಶಂಸ್ಯಪರಂ ಹ್ಯೇನಂ ಜಾನಾಮಿ ಗುರುವತ್ಸಲಮ್ ॥೩೪॥

ಶುದ್ಧಾತ್ಮನಾದ ಧರ್ಮರಾಜನು ನಿನ್ನ ಆಜ್ಞೆಯನ್ನು ಪಾಲಿಸುವನು. ದಯಾಪರನೂ, ಗುರುವತ್ಸಲನೂ ಆದ ಅವನನ್ನು ನಾನು ತಿಳಿದಿದ್ದೇನೆ.

ತವ ಪುತ್ರಾ ದುರಾತ್ಮಾನಃ ಕ್ರೋಧಲೋಭಪರಾಯಣಾಃ ।
ಈರ್ಷ್ಯಾಭಿಭೂತಾ ದುರ್ವೃತ್ತಾಸ್ತಾನ್ನ ಶೋಚಿತುಮರ್ಹಸಿ ॥೩೫॥

ನಿನ್ನ ಮಕ್ಕಳು ದುಷ್ಟರು. ಕ್ರೋಧ-ಲೋಭ ಪರಾಯಣರು. ಅಸೂಯೆಯಿಂದ ಕೂಡಿ ದುರ್ನಡತೆಯುಳ್ಳವರು. ಅವರನ್ನು ಕುರಿತು ಶೋಕಿಸಬೇಡ (ಎಂದು ಹೇಳಿದರು).

ವೈಶಂಪಾಯನಃ

ಏತಾವದುಕ್ತ್ವಾ ವಚನಂ ಧೃತರಾಷ್ಟ್ರಂ ಮನೀಷಿಣಮ್ ।
ವಾಸುದೇವಂ ಮಹಾಬಾಹುಮಭ್ಯಭಾಷತ ಕೌರವಃ ॥೩೬॥

ವೈಶಂಪಾಯನ– ಮೇಧಾವಿಯಾದ ಧೃತರಾಷ್ಟ್ರನನ್ನು ಕುರಿತು ಈ ಮಾತುಗಳನ್ನು ಆಡಿ ಭೀಷ್ಮರು ಮಹಾಬಾಹುವಾದ ವಾಸುದೇವನನ್ನು ಕುರಿತು ಮಾತನಾಡಿದರು.

ಭಗವನ್ ದೇವದೇವೇಶ ಸುರಾಸುರನಮಸ್ಕೃತ ।
ತ್ರಿವಿಕ್ರಮ ನಮಸ್ತೇಽಸ್ತು ಶಂಖಚಕ್ರಗದಾಧರ ॥೩೭॥

ಭಗವಂತನೇ, ದೇವದೇವೇಶನೇ, ಸುರಾಸುರ ನಮಸ್ಕೃತನೇ, ತ್ರಿವಿಕ್ರಮನೇ, ಶಂಖಚಕ್ರಗದಾಧರನೇ, ನಿನಗೆ ನಮಸ್ಕಾರ.

ಅನುಜಾನೀಹಿ ಮಾಂ ಕೃಷ್ಣ ವೈಕುಂಠ ಪುರುಷೋತ್ತಮ ।
ರಕ್ಷ್ಯಾಶ್ಚ ತೇ ಪಾಂಡವೇಯಾ ಭವಾನ್ ಹ್ಯೇಷಾಂ ಪರಾಯಣಮ್ ॥

ವೈಕುಂಠನೇ, ಪುರುಷೋತ್ತಮನೇ, ಕೃಷ್ಣನೇ, ನನಗೆ ಅನುಮತಿಯನ್ನು ಕೊಡು. ನೀನು ಪಾಂಡವರನ್ನು ರಕ್ಷಿಸಬೇಕು. ನೀನೇ ಅವರಿಗೆ ಮುಖ್ಯಾಶ್ರಯನಷ್ಟೆ?

ಉಕ್ತವಾನಸ್ಮಿ ದುರ್ಬುದ್ಧಿಂ ಮಂದಂ ದುರ್ಯೋಧನಂ ಪುರಾ ।
ಯತಃ ಕೃಷ್ಣಸ್ತತೋ ಧರ್ಮೋ ಯತೋ ಧರ್ಮಸ್ತತೋ ಜಯಃ ॥೩೯॥

ವಾಸುದೇವೇನ ತೀರ್ಥೇನ ಪುತ್ರ ಸಂಶಾಮ್ಯ ಪಾಂಡವೈಃ ।
ಸಂಧಾನಸ್ಯ ಪರಃ ಕಾಲಸ್ತವೇತಿ ಚ ಪುನಃ ಪುನಃ ॥೪೦॥

ನಾನು ಮಂದಬುದ್ಧಿಯಾದ ದುರ್ಯೋಧನನನ್ನು ಕುರಿತು ಹಿಂದೆಯೇ ಎಲ್ಲಿ ಕೃಷ್ಣನಿದ್ದಾನೋ ಅಲ್ಲಿ ಧರ್ಮವಿದೆ. ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವಿದೆ. ಪುತ್ರನೇ, ಪೂಜ್ಯರಲ್ಲಿ ಶ್ರೇಷ್ಠನಾದ ಕೃಷ್ಣನ ಜೊತೆಯಲ್ಲಿ ಮತ್ತು ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊ. ಸಂಧಿಯನ್ನು ಮಾಡಿಕೊಳ್ಳಲು ಇದು ನಿನಗೆ ಶ್ರೇಷ್ಠವಾದ ಕಾಲ ಎಂದು ಪುನಃ ಪುನಃ ಹೇಳಿದೆ.

ನ ಚ ಮೇ ತದ್ವಚೋ ಮೂಢಃ ಕೃತವಾನ್ ಸ ಸುಮಂದಧೀಃ ।
ಘಾತಯಿತ್ವೇಹ ಪೃಥಿವೀಂ ತತಃ ಸ ನಿಧನಂ ಗತಃ ॥೪೧॥

ಮೂಢನೂ, ಅತ್ಯಂತ ಮಂದಬುದ್ಧಿಯುಳ್ಳವನೂ ಆದ ಅವನು ನನ್ನ ಮಾತನ್ನು ಕೇಳಲಿಲ್ಲ. ಪೃಥಿವಿಯನ್ನೆಲ್ಲಾ ಕೊಲ್ಲಿಸಿ ಅವನು ನಿಧನವನ್ನು ಹೊಂದಿದನು.

ತ್ವಾಂ ಚ ಜಾನಾಮ್ಯಹಂ ವೀರ ಪುರಾಣಮೃಷಿಸತ್ತಮಮ್ ।
ನರೇಣ ಸಹಿತಂ ದೇವಂ ಬದರ್ಯಾಂ ಸುಚಿರೋಷಿತಮ್ ॥೪೨॥

ತಥಾ ಮೇ ನಾರದಃ ಪ್ರಾಹ ವ್ಯಾಸಶ್ಚ ಸುಮಹಾತಪಾಃ ।
ನರನಾರಾಯಣಾವೇತೌ ಸಂಭೂತೌ ಮನುಜೇಷ್ವಿತಿ ॥೪೩॥

ಎಲೈ ದೇವನೇ, ನಿನ್ನನ್ನು ನಾನು ಬದರಿಯಲ್ಲಿ ನರನ ಜೊತೆಯಲ್ಲಿ ಬಹುಕಾಲ ವಾಸ ಮಾಡಿದ, ಋಷಿಶ್ರೇಷ್ಠನಾದ, ಪ್ರಾಚೀನನಾದ ದೇವನೆಂದು ತಿಳಿದಿದ್ದೇನೆ. ನನಗೆ ನಾರದರು, ಮಹಾತಪಸ್ವಿಗಳಾದ ವ್ಯಾಸರು ಇವರಿಬ್ಬರೂ ನರ-ನಾರಾಯಣರು ಮನುಷ್ಯಯೋನಿಯಲ್ಲಿ ಅವತಾರ ಮಾಡಿದ್ದಾರೆ ಎಂದು ಹೇಳಿದ್ದಾರೆ (ಎಂದು ಹೇಳಿದರು).

ವಾಸುದೇವಃ

ಅನುಜಾನಾಮಿ ಭೀಷ್ಮ ತ್ವಾಂ ವಸೂನಾಪ್ನುಹಿ ಪಾರ್ಥಿವ ।
ನ ತೇಽಸ್ತಿ ವೃಜಿನಂ ಕಿಂಚಿನ್ಮಯಾ ದೃಷ್ಟಂ ಮಹಾದ್ಯುತೇ ॥೪೪॥

ವಾಸುದೇವ– ಭೀಷ್ಮನೇ, ನಿನಗೆ ಅನುಜ್ಞೆಯನ್ನು ಕೊಡುತ್ತಿದ್ದೇನೆ. ಪಾರ್ಥಿವನೇ, ವಸುಗಳ ಜೊತೆಯಲ್ಲಿ ಸೇರುವವನಾಗು. ಮಹಾದ್ಯುತಿಯೇ, ನಿನ್ನಲ್ಲಿ ನನ್ನ ಕಣ್ಣಿಗೆ ಕಾಣುವಂತಹ ಯಾವ ದೋಷವೂ ಇಲ್ಲ.

ಪಿತೃಭಕ್ತೋಽಸಿ ರಾಜರ್ಷೇ ಮಾರ್ಕಂಡೇಯ ಇವಾಪರಃ ।
ತೇನ ಮೃತ್ಯುಸ್ತವ ವಶೇ ಸ್ಥಿತೋ ಭೃತ್ಯ ಇವಾನತಃ ॥೪೫॥

ಎಲೈ ರಾಜರ್ಷಿಯೇ, ನೀನು ಇನ್ನೊಬ್ಬ ಮಾರ್ಕಂಡೇಯನಂತೆ ಪಿತೃಭಕ್ತನಾಗಿದ್ದೀಯೆ. ಆದ್ದರಿಂದ ವಿನೀತನಾದ ಕಿಂಕರನಂತೆ ಮೃತ್ಯುವು ನಿನ್ನ ಬಳಿ ನಿಂತಿದೆ.

ವೈಶಂಪಾಯನಃ

ಏವಮುಕ್ತಸ್ತು ಗಾಂಗೇಯಃ ಪಾಂಡವಾನಿದಮಬ್ರವೀತ್ ।
ಧೃತರಾಷ್ಟ್ರಮುಖಾಂಶ್ಚಾಪಿ ಸರ್ವಾನ್‌ಸಸುಹೃದಸ್ತಥಾ ॥೪೬॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ಭೀಷ್ಮರು ಧೃತರಾಷ್ಟ್ರಸಹಿತರಾದ ಪಾಂಡವರನ್ನು ಮತ್ತು ಎಲ್ಲಾ ಸುಹೃದರನ್ನೂ ಕುರಿತು ಹೀಗೆ ಹೇಳಿದರು.

ಪ್ರಾಣಾನುತ್ಸೃಷ್ಟುಮಿಚ್ಛಾಮಿ ತನ್ಮಾಽನುಜ್ಞಾತುಮರ್ಹಥ ।
ಸತ್ಯೇ ತು ಯತಿತವ್ಯಂ ವಃ ಸತ್ಯಂ ಹಿ ಪರಮಂ ಬಲಮ್ ॥೪೭॥

ನಾನು ಪ್ರಾಣಗಳನ್ನು ಬಿಡಲು ಬಯಸಿದ್ದೇನೆ. ನನಗೆ ಅನುಮತಿಯನ್ನು ನೀಡಿ. ನೀವು ಸತ್ಯದಲ್ಲಿಯೇ ಪ್ರಯತ್ನ ಪಡಬೇಕು. ಸತ್ಯವೇ ಪರಮ ಬಲ.

ಆನೃಶಂಸ್ಯಪರೈರ್ಭಾವ್ಯಂ ಸದೈವ ನಿಯತಾತ್ಮಭಿಃ ।
ಬ್ರಹ್ಮಣ್ಯೈರ್ಧರ್ಮಶೀಲೈಶ್ಚ ತಪೋನಿತ್ಯೈಶ್ಚ ಭಾರತ ॥೪೮॥

ಎಲೈ ಭಾರತನೇ, ಆತ್ಮಜಯದಿಂದ ಕೂಡಿ ಯಾವಾಗಲೂ ದಯಾಪರ ಆಗಿರಬೇಕು. ಯಾವಾಗಲೂ ಬ್ರಾಹ್ಮಣ ವತ್ಸಲರೂ, ಧರ್ಮಶೀಲರೂ ಮತ್ತು ನೀಶ್ಯ ತಪಸ್ವಿಗಳೂ ಆಗಿರಬೇಕು.

ಇತ್ಯುಕ್ತ್ವಾ ಸುಹೃದಃ ಸರ್ವಾನ್ ಸಂಪರಿಷ್ವಜ್ಯ ಚೈವ ಹ ।
ಪುನರೇವಾಬ್ರವೀದ್ ಧೀಮಾನ್ ಯುಧಿಷ್ಠಿರಮಿದಂ ವಚಃ ॥೪೯॥

ಸುಹೃದರನ್ನು ಕುರಿತು ಹೀಗೆ ಹೇಳಿ, ಎಲ್ಲರನ್ನೂ ಆಲಿಂಗಿಸಿ, ಪುನಃ ಯುಧಿಷ್ಠಿರನನ್ನು ಕುರಿತು ಮೇಧಾವಿಗಳಾದ ಭೀಷ್ಮರು ಹೀಗೆ ಹೇಳಿದರು.

ಬ್ರಾಹ್ಮಣಾಶ್ಚೈವ ತೇ ನಿತ್ಯಂ ಪ್ರಾಜ್ಞಾಶ್ಚೈವ ವಿಶೇಷತಃ ।
ಆಚಾರ್ಯಾ ಋತ್ವಿಜಶ್ಚೈವ ಪೂಜನೀಯಾ ನರಾಧಿಪ ॥೫೦॥

ಎಲೈ ನರಾಧಿಪನೇ, ನಿನ್ನಿಂದ ನಿತ್ಯವೂ ಬ್ರಾಹ್ಮಣರು, ಅದರಲ್ಲೂ ವಿಶೇಷವಾಗಿ ಪ್ರಾಜ್ಞರೂ, ಆಚಾರ್ಯರೂ, ಋತ್ವಿಜರೂ ಪೂಜಿಸಲ್ಪಡಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ಷಟ್‌ಪಂಚಾಶೋತ್ತರದ್ವಿಶತತಮೋಽಧ್ಯಾಯಃ ॥

॥ ಭೀಷ್ಮಸ್ವರ್ಗಾರೋಹಣಪರ್ವಣಿ ಭೀಷ್ಮವಚನಂ ನಾಮ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಐವತ್ತಾರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಇನ್ನೂರ ಐವತ್ತೇಳನೆಯ ಅಧ್ಯಾಯ

ಭೀಷ್ಮರ ಸ್ವರ್ಗಾರೋಹಣ

ವೈಶಂಪಾಯನಃ

ಏವಮುಕ್ತ್ವಾ ಕುರೂನ್ ಸರ್ವಾನ್ ಭೀಷ್ಮಃ ಶಾಂತನವಸ್ತದಾ ।
ತೂಷ್ಣೀಂಬಭೂವ ಕೌರವ್ಯಃ ಸ ಮುಹೂರ್ತಮರಿಂದಮ ॥೧॥

ವೈಶಂಪಾಯನ– ಎಲೈ ಅರಿಂದಮನೇ, ಎಲ್ಲ ಗುರುಗಳನ್ನು ಕುರಿತು ಹೀಗೆ ಹೇಳಿ ಆಗ ಶಂತನು ಪುತ್ರರಾದ ಭೀಷ್ಮರು ಒಂದು ಮುಹೂರ್ತ ಮೌನವನ್ನು ತಾಳಿದರು.

ಧಾರಯಾಮಾಸ ಚಾತ್ಮಾನಂ ಧಾರಣಾಸು ಯಥಾಕ್ರಮಮ್ ।
ತಸ್ಯೋರ್ಧ್ವಮಗಮನ್ ಪ್ರಾಣಾಃ ಸನ್ನಿರುದ್ಧಾ ಮಹಾತ್ಮನಃ ॥೨॥

ಅವರು ಶಾಸ್ತ್ರೋಕ್ತ ಕ್ರಮದಲ್ಲಿ ಧಾರಣೆಯನ್ನು ಮಾಡಿದರು. ಮಹಾತ್ಮರಾದ ಅವರು ತಡೆ ಹಿಡಿದ್ದ ಪ್ರಾಣಗಳು ಊರ್ಧ್ವಮುಖವಾಗಿ ಹೊರಟವು.

ಇದಮಾಶ್ಚರ್ಯಮಾಸೀಚ್ಚ ಮಧ್ಯೇ ತೇಷಾಂ ಮಹಾತ್ಮನಾಮ್ ।
ಯದ್ಯನ್ಮುಂಚತಿ ಗಾತ್ರಾಣಾಂ ಸ ಶಂತನುಸುತಸ್ತದಾ ।
ತತ್ತದ್ ವಿಶಲ್ಯಂ ಭವತಿ ಯೋಗಯುಕ್ತಸ್ಯ ತಸ್ಯ ವೈ ॥೩॥

ಆ ಮಹಾತ್ಮರ ಮಧ್ಯದಲ್ಲಿ ಈ ಒಂದು ಆಶ್ಚರ್ಯಯುತವಾದ ಘಟನೆಯು ನಡೆಯಿತು. ಯೋಗಯುಕ್ತರಾದ ಭೀಷ್ಮರು ತಮ್ಮ ದೇಹದ ಯಾವ ಯಾವ ಅವಯವಗಳಿಂದ ಅಭಿಮಾನವನ್ನು ಹಿಂದೆ ತೆಗೆದುಕೊಂಡು ಹೊರಟರೋ ಆ ಅಂಗಗಳ ವ್ರಣಗಳೆಲ್ಲವೂ ತಕ್ಷಣವೇ ಮಾಯವಾದವು.

ಕ್ಷಣೇನ ಪ್ರೇಕ್ಷತಾಂ ತೇಷಾಂ ವಿಶಲ್ಯಃ ಸೋಽಭವತ್ ತದಾ ।
ತಂ ದೃಷ್ಟ್ವಾ ವಿಸ್ಮಿತಾಃ ಸರ್ವೇ ವಾಸುದೇವಪುರೋಗಮಾಃ ।
ಸಹ ತೈರ್ಮುನಿಭಿಃ ಸರ್ವೈಸ್ತದಾ ವ್ಯಾಸಾದಿಭಿರ್ನೃಪ ॥೪॥

ಎಲ್ಲರೂ ನೋಡುತ್ತಿರುವಂತೆಯೇ ಒಂದು ಕ್ಷಣದಲ್ಲಿ ಅವರ ದೇಹದ ವ್ರಣಗಳೆಲ್ಲವೂ ಪೂರ್ಣವಾಗಿ ನಾಶವನ್ನು ಹೊಂದಿದವು. ಎಲೈ ರಾಜನೇ, ಅದನ್ನು

ನೋಡಿ ವ್ಯಾಸಾದಿ ಮುನಿಗಳ ಜೊತೆಯಲ್ಲಿ ವಾಸುದೇವನೇ ಮೊದಲಾದವರೆಲ್ಲರೂ ವಿಸ್ಮಿತರಾದರು.

ಸನ್ನಿರುದ್ಧಸ್ತು ತೇನಾತ್ಮಾ ಸರ್ವೇಷ್ವಾಯತನೇಷು ವೈ ।
ಜಗಾಮ ಭಿತ್ತ್ವಾ ಮೂರ್ಧಾನಂ ದಿವಮಭ್ಯುತ್ಪಪಾತ ಚ ॥೫॥

ತಮ್ಮನ್ನು ಎಲ್ಲ ಇಂದ್ರಿಯಾಶ್ರಯಗಳಲ್ಲಿ ತಡೆದುಕೊಂಡಿದ್ದ ಭೀಷ್ಮರು ತಮ್ಮ ಶಿರಸ್ಸನ್ನು ಭೇದಿಸಿ ಸ್ವರ್ಗದ ಕಡೆಗೆ ಹಾರಿದರು.

ಮಹೋಲ್ಕೇವ ಚ ಭೀಷ್ಮಸ್ಯ ಮೂರ್ಧದೇಶೇ ನರಾಧಿಪ ।
ನಿಃಸೃತ್ಯಾಕಾಶಮಾವಿಶ್ಯ ಕ್ಷಣೇನಾಂತರಧೀಯತ ॥೬॥

ಎಲೈ ನರಾಧಿಪನೇ, ಭೀಷ್ಮರ ಶಿರಃಪ್ರದೇಶದಲ್ಲಿ ಒಂದು ಜ್ಯೋತಿಸ್ಸು ದೊಡ್ಡ ಉಲ್ಕೆಯಂತೆ ಹೊರಗೆ ಬಂದು ಆಕಾಶವನ್ನು ಪ್ರವೇಶಿಸಿ, ಒಂದು ಕ್ಷಣದಲ್ಲಿ ಅಂತರ್ಧಾನವನ್ನು ಹೊಂದಿತು.

ಏವಂ ಸ ನೃಪಶಾರ್ದೂಲ ನೃಪಃ ಶಾಂತನವಸ್ತದಾ ।
ಸಮಯುಜ್ಯತ ಲೋಕೈಃ ಸ್ವೈರ್ಭರತಾನಾಂ ಕುಲೋದ್ವಹಃ ॥೭॥

ಎಲೈ ನೃಪಶಾರ್ದೂಲನೇ, ಈ ರೀತಿಯಲ್ಲಿ ಭರತಕುಲೋದ್ವಹರಾದ, ಶಂತನು ಪುತ್ರರಾದ ಭೀಷ್ಮರು ತಮ್ಮ ಲೋಕವನ್ನು ಹೊಂದಿದರು.

ತತಸ್ತಾ ದಾಯ ದಾರೂಣಿ ಗಂಧಾಂಶ್ಚ ವಿವಿಧಾನ್ ಬಹೂನ್ ।
ಚಿತಾಂ ಚಕ್ರುರ್ಮಹಾತ್ಮಾನಃ ಪಾಂಡವಾ ವಿದುರಸ್ತಥಾ ।
ಯುಯುತ್ಸುಶ್ಚಾಪಿ ಕೌರವ್ಯಃ ಪ್ರೇಕ್ಷಕಾಸ್ತ್ವತರೇऽಭವನ್ ॥೮॥

ಅನಂತರ ಮಹಾತ್ಮರಾದ ಪಾಂಡವರೂ ಮತ್ತು ವಿದುರನೂ ಅನೇಕ ವಿಧವಾದ ಕಾಷ್ಠಗಳನ್ನೂ, ಗಂಧಗಳನ್ನೂ ತೆಗೆದುಕೊಂಡು ಬಂದು ಚಿತೆಯನ್ನು ನಿರ್ಮಿಸಿದರು. ಕೌರವ್ಯನಾದ ಯುಯುತ್ಸುವೂ ಚಿತೆಯನ್ನು ನಿರ್ಮಿಸಿದನು. ಇತರರು ಪ್ರೇಕ್ಷಕರಾದರು.

ಯುಧಿಷ್ಠಿರಸ್ತು ಗಾಂಗೇಯಂ ವಿದುರಶ್ಚ ಮಹಾಮತಿಃ ।
ಛಾದಯಾಮಾಸತುರುಭೌ ಕ್ಷೌಮೈರ್ಮಾಲ್ಯೈಶ್ಚ ಕೌರವಮ್ ॥೯॥

ಯುಧಿಷ್ಠಿರ ಮತ್ತು ಮಹಾಮತಿಯಾದ ವಿದುರ ಇಬ್ಬರೂ ಭೀಷ್ಮರ ದೇಹವನ್ನು ರೇಷ್ಮೆಯ ವಸ್ತ್ರಗಳಿಂದಲೂ ಮತ್ತು ಮಾಲೆಯಿಂದಲೂ ಆಚ್ಛಾದಿಸಿದರು.

ಧಾರಯಾಮಾಸ ತಸ್ಯಾಥ ಯುಯುತ್ಸುಶ್ಛತ್ರಮುತ್ತಮಮ್ ।
ಚಾಮರವ್ಯಜನೇ ಶುಭ್ರೇ ಭೀಮಸೇನಾರ್ಜುನಾವುಭೌ ।
ಉಷ್ಣೀಷೇ ಪರ್ಯಗೃಹ್ಣೀತಾಂ ಮಾದ್ರೀಪುತ್ರಾವುಭೌ ತದಾ ॥೧೦॥

ಯುಯುತ್ಸುವು ಶ್ರೇಷ್ಠವಾದ ಛತ್ರವನ್ನು ಹಿಡಿದನು. ಭೀಮಾರ್ಜುನರಿಬ್ಬರೂ ಶುಭ್ರವಾದ ಚಾಮರ-ವ್ಯಜನಗಳನ್ನು ಹಿಡಿದರು. ಮಾದ್ರೀಪುತ್ರರಾದ ನಕುಲ-ಸಹದೇವರು ರುಮಾಲುಗಳನ್ನು ಹಿಡಿದರು.

ಸ್ತ್ರಿಯಃ ಕೌರವನಾಥಸ್ಯ ಭೀಷ್ಮಂ ಕುರುಕುಲೋದ್ಭವಮ್ ।
ತಾಳವೃಂತಾನ್ಯುಪಾದಾಯ ಪರ್ಯವೀಜನ್ ಸಮಂತತಃ ॥೧೧॥

ಕೌರವನಾಥನಾದ ಧೃತರಾಷ್ಟ್ರನ ಸ್ತ್ರೀಯರು ಕುರುಕುಲೋದ್ಭವನಾದ ಭೀಷ್ಮನಿಗೆ ತಾಳವೃಕ್ಷದ ವ್ಯಜನಗಳನ್ನು ಹಿಡಿದು ಬೀಸಿದರು.

ತತೋಽಸ್ಯ ವಿಧಿವಚ್ಚಕ್ರುಃ ಪಿತೃಮೇಧಂ ಮಹಾತ್ಮನಃ ।
ಯಾಜಕಾ ಜುಹುವುಶ್ಚಾಗ್ನಿಂ ಜಗುಃ ಸಾಮಾನಿ ಸಾಮಗಾಃ ॥೧೨॥

ಅನಂತರ ಪುರೋಹಿತರು ವಿಧಿವತ್ತಾಗಿ ಮಹಾತ್ಮರಾದ ಭೀಷ್ಮರಿಗೆ ಪಿತೃಯಜ್ಞವನ್ನು ಮಾಡಿದರು. ಪುರೋಹಿತರು ಅಗ್ನಿಯಲ್ಲಿ ಹೋಮವನ್ನು ಮಾಡಿದರು. ಸಾಮಗರು ಸಾಮಗಾನವನ್ನು ಮಾಡಿದರು.

ತತಶ್ಚಂದನಕಾಷ್ಠೈಶ್ಚ ತಥಾ ಕಾಲೇಯಕೈರಪಿ ।
ಕಾಲಾಗರುಪ್ರಭೃತಿಭಿರ್ಗಂಧೈಶ್ಚೋಚ್ಚಾವಚೈಸ್ತಥಾ ॥೧೩॥

ಸಮವಚ್ಚಾದ್ಯ ಗಾಂಗೇಯಂ ಪ್ರಜ್ವಾಲ್ಯ ಚ ಹುತಾಶನಮ್ ।
ಅಪಸವ್ಯಮಕುರ್ವಂತ ಧೃತರಾಷ್ಟ್ರಮುಖಾ ನೃಪಾಃ ॥೧೪॥

ಅನಂತರ ಚಂದನ ಕಾಷ್ಠಗಳಿಂದಲೂ, ಕಾಲೇಯ ಕಾಷ್ಠಗಳಿಂದಲೂ, ಕಾಲಾಗರು ಮೊದಲಾದ ಉಚ್ಚಾವಚವಾದ ಗಂಧಗಳಿಂದಲೂ ಭೀಷ್ಮರನ್ನು ಆಚ್ಛಾದಿಸಿ ಅಗ್ನಿಯನ್ನು

ಉದ್ದೀಪನಗೊಳಿಸಿ ಧೃತರಾಷ್ಟ್ರ ಮೊದಲಾದ ರಾಜರೆಲ್ಲರೂ ಅಪಸವ್ಯವನ್ನು (ಅಪ್ರದಕ್ಷಿಣೆಯನ್ನು) ಮಾಡಿದರು.

ಸಂಸೃತ್ಯ ಚ ಕುರುಶ್ರೇಷ್ಠಂ ಗಾಂಗೇಯಂ ಕುರುಸತ್ತಮಾಃ ।
ಜಗ್ಮುರ್ಭಾಗೀರಥೀತೀರಮೃಷಿಜುಷ್ಟಂ ಕುರೂದ್ವಹಾಃ ॥೧೫॥

ಕುರುಶ್ರೇಷ್ಠರಾದ ಭೀಷ್ಮರಿಗೆ ಶವಸಂಸ್ಕಾರವನ್ನು ಮಾಡಿ, ಕುರೂದ್ವಹರಾದ, ಕುರುಶ್ರೇಷ್ಠರಾದ ಎಲ್ಲರೂ ಋಷಿಗಂಧ ಸೇವಿತವಾದ ಭಾಗೀರಥೀ ತೀರಕ್ಕೆ ಹೋದರು.

ಅನುಗಮ್ಯಮಾನಾ ವ್ಯಾಸೇನ ನಾರದೇನಾಸಿತೇನ ಚ ।
ಕೃಷ್ಣೇನ ಭರತಸ್ತ್ರೀಭಿರ್ಯೇ ಚ ಪೌರಾಃ ಸಮಾಗತಾಃ ॥೧೬॥

ಉದಕಂ ಚಕ್ರಿರೇ ಚೈವ ಗಾಂಗೇಯಸ್ಯ ಮಹಾತ್ಮನಃ ।
ವಿಧಿವತ್ ಕ್ಷತ್ರಿಯಶ್ರೇಷ್ಠಾಃ ಸ ಚ ಪೌರಜನಸ್ತದಾ ॥೧೭॥

ವ್ಯಾಸರಿಂದಲೂ, ನಾರದರಿಂದಲೂ, ಅಸಿತರಿಂದಲೂ, ಭರತಸ್ತ್ರೀಯರಿಂದಲೂ, ಕೃಷ್ಣನಿಂದಲೂ ಪೌರರಿಂದಲೂ ಹಿಂಬಾಲಿಸಲ್ಪಟ್ಟವರಾಗಿ ಮಹಾತ್ಮರಾದ ಭೀಷ್ಮರಿಗೆ ಉದಕ ಕ್ರಿಯೆಯನ್ನು ಮಾಡಿದರು. ಕ್ಷತ್ರಿಯ ಶ್ರೇಷ್ಠರೂ ಮತ್ತು ಪೌರಜನರೂ ಆಗ ಉದಕ ಕ್ರಿಯೆಯನ್ನು ಮಾಡಿದರು.

ತತೋ ಭಾಗೀರಥೀ ದೇವೀ ತನಯಸ್ಯೋದಕೇ ಕೃತೇ ।
ಉತ್ಥಾಯ ಸಲಿಲಾತ್ ತಸ್ಮಾದ್ ರುದತೀ ಶೋಕಲಾಲಸಾ ॥೧೮॥

ಪರಿದೇವಯತೀ ತತ್ರ ಕೌರವಾನಭ್ಯಭಾಷತ ।
ನಿಬೋಧತ ಯಥಾವೃತ್ತಮುಚ್ಯಮಾನಂ ಮಯಾನಘಾಃ ॥೧೯॥

ತನ್ನ ಪುತ್ರನಿಗೆ ಉದಕಕ್ರಿಯೆಯನ್ನು ಮಾಡುತ್ತಿರಲು ಭಾಗೀರಥಿಯು ಆ ಉದಕದಿಂದ ಮೇಲೆದ್ದು ಅಳುತ್ತಾ, ಶೋಕಲಾಲಸಳಾಗಿ ಗೋಳಾಡುತ್ತಾ, ಕೌರವರನ್ನು ಕುರಿತು ಮಾತನಾಡಿದಳು. ಎಲೈ ಅನಘರೇ, ನಾನು ಹೇಳುವ ನಿಜವಾದ ವೃತ್ತಾಂತವನ್ನು ಕೇಳಿ (ಎಂದು ಹೇಳಿದಳು).

ರಾಜವೃತ್ತೇನ ಸಂಪನ್ನಃ ಪ್ರಜ್ಞಯಾऽಭಿಜನೇನ ಚ ।
ಸತ್ಕರ್ತಾ ಕುರುವೃದ್ಧಾನಾಂ ಪಿತೃಭಕ್ತೋ ದೃಢವ್ರತಃ ॥೨೦॥

ಜಾಮದಗ್ನ್ಯೇನ ರಾಮೇಣ ಪುರಾ ಯೋ ನ ಪರಾಜಿತಃ ।
ದಿವ್ಯೈರಸ್ತ್ರೈರ್ಮಹಾವೀರ್ಯಃ ಸ ಹತೋಽದ್ಯ ಶಿಖಂಡಿನಾ ॥೨೧॥

ರಾಜನ ನಡತೆಯಿಂದ ಸಂಪನ್ನನಾಗಿ, ಪ್ರಜ್ಞೆಯಿಂದಲೂ, ಸತ್ಕುಲದಲ್ಲಿ ಜನ್ಮದಿಂದಲೂ ಯುಕ್ತನಾಗಿ, ಕುರುವೃದ್ಧರಿಗೆ ಸತ್ಕಾರ ಮಾಡುವವನಾಗಿ, ಪಿತೃಭಕ್ತನಾಗಿ, ದೃಢವ್ರತನಾಗಿ, ಜಾಮದಗ್ನ್ಯ ಪರಶುರಾಮರಿಂದಲೂ ದಿವ್ಯಾಸ್ತ್ರಗಳಿಂದ ಪರಾಜಿತನಾಗದ ಮಹಾಪರಾಕ್ರಮಿಯಾದ ಈ ನನ್ನ ಪುತ್ರನು ಈ ದಿನ ಶಿಖಂಡಿಯಿಂದ ಹತನಾದನು.

ಅಶ್ಮಸಾರಮಯಂ ನೂನಂ ಹೃದಯಂ ಮಮ ಪಾರ್ಥಿವಾಃ ।
ಅಪಶ್ಯಂತ್ಯಾಃ ಪ್ರಿಯಂ ಪುತ್ರಂ ಯನ್ನ ದೀರ್ಯತ್ಯನೇಕಧಾ ॥೨೨॥

ಎಲೈ ರಾಜರೇ, ನನ್ನ ಪ್ರಿಯಪುತ್ರನನ್ನು ನೋಡದೆ ಬಿರಿದು ಹೋಗದಿರುವ ಈ ನನ್ನ ಹೃದಯವು ಕಲ್ಲಿನ ಸಾರದಿಂದ ಮಾಡಿದುದು.

ಸಮೇತಂ ಪಾರ್ಥಿವಂ ಕ್ಷತ್ರಂ ಕಾಶಿಪುರ್ಯಾಂ ಸ್ವಯಂವರೇ ।
ವಿಜಿತ್ಯೈಕರಥೇನಾಜೌ ಕನ್ಯಾಸ್ತಾ ಯೋ ಜಹಾರ ಹ ॥೨೩॥

ಯಸ್ಯ ನಾಸ್ತಿ ಬಲೇ ತುಲ್ಯಃ ಪೃಥಿವ್ಯಾಮಪಿ ಕಶ್ಚನ ।
ಹತಂ ಶಿಖಂಡಿನಾ ಶ್ರುತ್ವಾ ಯನ್ನ ದೀರ್ಯತಿ ಮೇ ಮನಃ ॥೨೪॥

ಯಾವನು ಕಾಶಿಪಟ್ಟಣದಲ್ಲಿ ಸ್ವಯಂವರದಲ್ಲಿ ಎಲ್ಲ ರಾಜರೂ ಸನ್ನಿಹಿತರಾಗಿದ್ದಾಗ ಯುದ್ಧದಲ್ಲಿ ಏಕರಥನಾಗಿ ಎಲ್ಲರನ್ನೂ ಗೆದ್ದು ಆ ಕನ್ಯೆಯರನ್ನು ಕರೆತಂದನೋ, ಯಾವನ ಬಲಕ್ಕೆ ಸಮನಾದವನು ಭೂಮಿಯಲ್ಲಿ ಯಾವನೂ ಇಲ್ಲವೋ ಅಂತಹವನು ಶಿಖಂಡಿಯಿಂದ ಹತನಾದನೆಂದು ಕೇಳಿ ನನ್ನ ಹೃದಯವು ಬಿರಿಯದೇ ಇರುವುದರಿಂದ ಅದು ಅಶ್ಮಸಾರಮಯವಾದುದು.

ಜಾಮದಗ್ನ್ಯಃ ಕುರುಕ್ಷೇತ್ರೇ ಯುಧಿ ಯೇನ ಮಹಾತ್ಮನಾ ।
ಪೀಡಿತೋ ನಾತಿಯತ್ನೇನ ನಿಹತಃ ಸ ಶಿಖಂಡಿನಾ ॥೨೫॥

ಕುರುಕ್ಷೇತ್ರದಲ್ಲಿ ಯುದ್ಧದಲ್ಲಿ ಯಾವ ಮಹಾತ್ಮನಿಂದ ಪರಶುರಾಮನು ಬಹಳ ಯತ್ನವಿಲ್ಲದೆಯೇ ಪೀಡಿಸಲ್ಪಟ್ಟನೋ ಅವನು ಶಿಖಂಡಿಯಿಂದ ಹತನಾಗಿದ್ದಾನೆ.

ಏವಂವಿಧಂ ಬಹು ತದಾ ವಿಲಪಂತೀಂ ಮಹಾನದೀಮ್ ।
ಆಶ್ವಾಸಯಾಮಾಸ ತದಾ ಸಾಮ್ನಾ ದಾಮೋದರೋ ವಿಭುಃ ॥೨೬॥

ಈ ರೀತಿಯಲ್ಲಿ ಬಹುಪ್ರಕಾರವಾಗಿ ಗೋಳಾಡುತ್ತಿದ್ದ ಮಹಾನದಿಯನ್ನು ಪ್ರಭುವಾದ ದಾಮೋದರನು ಮಧುರವಾದ ಮಾತುಗಳಿಂದ ಸಮಾಧಾನ ಪಡಿಸಿದನು.

ಸಮಾಶ್ವಸಿಹಿ ಭದ್ರೇ ತ್ವಂ ಮಾ ಶುಚಃ ಶುಭದರ್ಶನೇ ।
ಗತಃ ಸ ಪರಮಾಂ ಸಿದ್ಧಿಂ ತವ ಪುತ್ರೋ ನ ಸಂಶಯಃ ॥೨೭॥

ಮಂಗಳಸ್ವರೂಪಳೇ, ಶುಭದರ್ಶನಳೇ, ಸಮಾಧಾನವನ್ನು ತಂದುಕೊ. ನಿನ್ನ ಪುತ್ರನು ಪರಮಸಿದ್ಧಿಯನ್ನು ಪಡೆದಿದ್ದಾನೆ ಎಂಬುದರಲ್ಲಿ ಸಂಶಯವಿಲ್ಲ.

ವಸುರೇಷ ಮಹಾತೇಜಾಃ ಶಾಪದೋಷೇಣ ಶೋಭನೇ ।
ಮನುಷ್ಯತಾಮನುಪ್ರಾಪ್ತೋ ನೈನಂ ಶೋಚಿತುಮರ್ಹಸಿ ॥೨೮॥

ಎಲೌ ಶೋಭನೆಯೇ, ಮಹಾತೇಜಸ್ವಿಯಾದ ಇವನು ವಸು. ಶಾಪದೋಷದಿಂದ ಮನುಷ್ಯನಾಗಿ ಜನಿಸಿದನು. ಅವನನ್ನು ಕುರಿತು ಶೋಕವನ್ನು ಪಡಬೇಡ.

ಸ ಏಷ ಕ್ಷತ್ರಧರ್ಮೇಣ ಯುಧ್ಯಮಾನೋ ರಣಾಂಗಣೇ ।
ಧನಂಜಯೇನ ನಿಹತೋ ನೈಷ ನುನ್ನಃ ಶಿಖಂಡಿನಾ ॥೨೯॥

ಅಂತಹ ಇವನು ರಣಾಂಗಣದಲ್ಲಿ ಕ್ಷತ್ರಿಯ ಧರ್ಮಕ್ಕೆ ಅನುಸಾರವಾಗಿ ಯುದ್ಧವನ್ನು ಮಾಡುತ್ತಾ ಅರ್ಜುನನಿಂದ ಹೊಡೆಯಲ್ಪಟ್ಟನು. ಶಿಖಂಡಿಯಿಂದ ಅವನು ನಿಹತನಾಗಲಿಲ್ಲ.

ಭೀಷ್ಮಂ ಹಿ ಕುರುಶಾರ್ದೂಲಮುದ್ಯತೇಷುಂ ಮಹಾರಣೇ ।
ನ ಶಕ್ತಃ ಸಂಯುಗೇ ಹಂತುಂ ಸಾಕ್ಷಾದಪಿ ಶತಕ್ರತುಃ ॥೩೦॥

ಮಹಾರಣಾಂಗಣದಲ್ಲಿ ಕೈಯಲ್ಲಿ ಬಾಣವನ್ನು ಹಿಡಿದ, ಕುರುಶಾರ್ದೂಲನಾದ ಭೀಷ್ಮನನ್ನು ಸಾಕ್ಷಾತ್ ಶತಕ್ರತುವಾದ ಇಂದ್ರನೂ ಕೊಲ್ಲಲಾರ.

ಸ್ವಚ್ಛಂದೇನ ಸುತಸ್ತುಭ್ಯಂ ಗತಃ ಸ್ವರ್ಗಂ ಶುಭಾನನೇ ।
ನ ಶಕ್ತಾಃ ಸ್ಯುರ್ನಿಹಂತುಂ ಹಿ ರಣೇ ತಂ ಸರ್ವದೇವತಾಃ ॥೩೧॥

ಎಲೌ ಶುಭಾನನೆಯೇ, ನಿನ್ನ ಪುತ್ರನು ತನ್ನ ಇಚ್ಛೆಯಿಂದಲೇ ಸ್ವರ್ಗಕ್ಕೆ ಹೋಗಿದ್ದಾನೆ. ಎಲ್ಲ ದೇವತೆಗಳು ಸೇರಿದರೂ ಅವನನ್ನು ಯುದ್ಧದಲ್ಲಿ ಕೊಲ್ಲಲು ಶಕ್ಯವಾಗುತ್ತಿರಲಿಲ್ಲ.

ತಸ್ಮಾತ್ ತ್ವಂ ಸರಿತಾಂ ಶ್ರೇಷ್ಠೇ ಮಾ ಶೋಚಸ್ವ ಕುರುನಂದನಮ್ ।
ವಸೂನೇಷ ಗತೋ ದೇವಿ ಪುತ್ರಸ್ತೇ ವಿಜ್ವರಾ ಭವ ॥೩೨॥

ಎಲೈ ಶ್ರೇಷ್ಠ ನದಿಯೇ, ಆದ್ದರಿಂದ ಕುರುನಂದನರಾದ ಭೀಷ್ಮರನ್ನು ಕುರಿತು ಶೋಕಪಡಬೇಡ. ದೇವಿಯೇ, ಅವನು ಹೋಗಿ ವಸುಗಳ ಜೊತೆಯಲ್ಲಿ ಸೇರಿದ್ದಾನೆ. ನೀನು ನಿರಾತಂಕವಾಗಿರು.

ಇತ್ಯುಕ್ತಾ ಸಾ ತು ಕೃಷ್ಣೇನ ವ್ಯಾಸೇನ ಚ ಸರಿದ್ವರಾ ।
ತ್ಯಕ್ತ್ವಾ ಶೋಕಂ ಮಹಾರಾಜ ಸ್ವಂ ವಾರ್ಯವತತಾರ ಹ ॥೩೩॥

ಕೃಷ್ಣನಿಂದಲೂ ಮತ್ತು ವ್ಯಾಸರಿಂದಲೂ ಹೀಗೆ ಹೇಳಲ್ಪಟ್ಟ ಆ ಶ್ರೇಷ್ಠ ನದಿಯು ಎಲೈ ಮಹಾರಾಜನೇ, ಶೋಕವನ್ನು ತ್ಯಜಿಸಿ ತನ್ನ ಜಲವನ್ನು ಪ್ರವೇಶಿಸಿದಳು.

ಸತ್ಕೃತ್ಯ ತೇ ತಾಂ ಸರಿತಂ ತತಃ ಕೃಷ್ಣಮುಖಾ ನೃಪಾಃ ।
ಅನುಜ್ಞಾತಾಸ್ತಯಾ ಸರ್ವೇ ನ್ಯವರ್ತಂತ ಜನಾಧಿಪಾಃ ॥೩೪॥

ಎಲೈ ಜನಾಧಿಪನೇ, ಕೃಷ್ಣ ಮೊದಲಾದ ರಾಜರು ಗಂಗೆಯನ್ನು ಆ ರೀತಿಯಲ್ಲಿ ಸತ್ಕರಿಸಿ, ಅವಳ ಅನುಮತಿಯನ್ನು ಪಡೆದು ಎಲ್ಲರೂ ಹಿಂದಿರುಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ಸಪ್ತಪಂಚಾಶೋತ್ತರದ್ವಿಶತತಮೋऽಧ್ಯಾಯಃ ॥

॥ ಭೀಷ್ಮಸ್ವರ್ಗಾರೋಹಣಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಇನ್ನೂರ ಐವತ್ತೇಳನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಭೀಷ್ಮಸ್ವರ್ಗಾರೋಹಣಪರ್ವ ॥

॥ ಸಮಾಪ್ತಮಾನುಶಾಸನಿಕ(ಶಾಸನ)ಪರ್ವ ॥

॥ ಪ್ರೀತೋऽಸ್ತು ಕೃಷ್ಣಃ ಪ್ರಭುಃ ॥

★ ★ ★ ★ ★

ವಿನಾಶಿನೋ ಹ್ಯಧ್ರುವಜೀವಿತಸ್ಯ
ಕಿಂ ಬಂಧುಭಿರ್ಮಿತ್ರಪರಿಗ್ರಹೈಶ್ಚ ।
ವಿಹಾಯಯದ್ಗಚ್ಛತಿ ಸರ್ವಮೇವಂ
ಕ್ಷಣೇನಗತ್ವಾ ನ ನಿವರ್ತತೇ ಚ ॥

ವಿನಾಶವನ್ನು ಹೊಂದಲಿರುವ ಅನಿತ್ಯವಾದ
ಜೀವಿತವುಳ್ಳ ಮನುಷ್ಯನಿಗೆ ಬಂಧುಗಳಿಂದಾಗಲೀ ,
ಮಿತ್ರನಿಂದಾಗಲೀ, ಭೋಗ ಸಾಧನಗಳಿಂದಾಗಲೀ
ಆಗಬೇಕಾದುದೇನು? ಹೀಗೆ ಎಲ್ಲವನ್ನೂ ಬಿಟ್ಟು
ಒಂದು ಕ್ಷಣದಲ್ಲಿ ಅವನು ಹೊರಟು
ಹೋಗುತ್ತಾನೆ. ಮತ್ತೆ ಹಿಂದೆ
ಬರುವುದಿಲ್ಲ.

ISBN: 978-93-88813-38-9